ಮೂಲ ಅರ್ಥಶಾಸ್ತ್ರ

ಡಿ ವೆಂಕಟರಾವ್

1977

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-24

ಪ್ರಕಟಣೆ-60

ಮೂಲ ಅರ್ಥಶಾಸ್ತ್ರ

ಡಿ. ವೆಂಕಟರಾವ್

1977

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024

ಮೂಲ ಅರ್ಥಶಾಸ್ತ್ರ—(ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು ಸಂವಹನ ಸಮಿತಿ ಪ್ರಕಾಶಿತ) ಪ್ರಥಮ ಮುದ್ರಣ 1977, 1000 ಪ್ರತಿಗಳು ಪುಟಗಳು viii+260 ಬೆಲೆ : ಸಾದಾ ಪ್ರತಿ ರೂ. 15-00
ಕ್ಯಾಲಿಕೊ ಪ್ರತಿ ರೂ. 19-00

ಪರಿಷ್ಕೃತ ಬೆಲೆ

ಸಾದಾಪ್ರತಿ ರೂ. 19-00

ಕ್ಯಾಲಿಕೊಪ್ರತಿ ರೂ. 24-00

ಪ್ರಧಾನ ಸಂಪಾದನೆ
ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು

ಸಹಸಂಪಾದನೆ
ಡಿ. ಮುನಿಸ್ವಾಮಿ
ಕನ್ನಡ ಸಹಾಯಕ ಪ್ರಾಧ್ಯಾಪಕರು

ತಾಂತ್ರಿಕ ಪರಿಶೀಲನೆ
ಕೆ. ಜಿ. ಮಲ್ಲಿಕಾರ್ಜುನಯ್ಯ
ಕೃಷಿ ಅರ್ಥಶಾಸ್ತ್ರ ಸಹಾಯಕ ಪ್ರಾಧ್ಯಾಪಕರು

ಕಲೆ
ಬಿ. ಜಿ. ರಮೇಶ್
ಬಿ. ಪಿ. ಅಮರೇಂದ್ರಕುಮಾರ್

ಮುದ್ರಣ
ಕೃಷಿ ವಿಶ್ವವಿದ್ಯಾನಿಲಯದ ಅಚ್ಚುಕೂಟ
ಬೆಂಗಳೂರು–560024

ಕುಲಪತಿಗಳ ಹಾರೈಕೆ

ಇಂದಿನ ವಿಶ್ವದಲ್ಲಿನ ಹಲವಾರು ಸಮಸ್ಯೆಗಳಿಗೆ ಕೃಷಿ ಉತ್ಪಾದನೆಯ ಹೆಚ್ಚಳವೇ ಬಹುಮಟ್ಟಿಗೆ ಪರಿಹಾರ ಒದಗಿಸಲು ಸಾಧ್ಯ. ಕೃಷಿ ಉತ್ಪಾದನೆಯ ಹೆಚ್ಚಳವು ಕೃಷಿ ಸಂಶೋಧನೆಗಳ ಫಲಿತಾಂಶಗಳನ್ನಳವಡಿಸುವಿಕೆಯನ್ನು ಅವಲಂಬಿಸಿದೆ. ಕಳೆದ ಒಂದು ದಶಕದಲ್ಲಿ ಕೃಷಿ ಸಂಶೋಧನೆಯು ನಾನಾಮುಖವಾಗಿ ಬೆಳೆದಿದೆ. ಅದರ ಪ್ರಯೋಜನವನ್ನು ಕೆಲವು ರೈತರು ಪಡೆದಿದ್ದಾರೆ. ಅದರಲ್ಲಿ ಕೆಲವರು ಹೆಚ್ಚಿನ ಪ್ರಗತಿಯನ್ನು ಸಾಧಿಸಿ, ಜಾಗತಿಕ ಗರಿಷ್ಠ ಸಾಧನೆಯನ್ನು ನಾವೂ ಸಾಧಿಸಲು ಸಾಧ್ಯವೆಂಬ ಭರವಸೆಯ ದೃಷ್ಟಾಂತವೆನಿಸಿದ್ದಾರೆ. ಈ ಅಳವಡಿಕೆ ಹಾಗೂ ಸಾಧನಗಳು ಕೆಲವರ ಸ್ವತ್ತಾಗಿ ಉಳಿಯದೆ ಸಾರ್ವತ್ರಿಕವಾಗಬೇಕು. ಆಗ ರಾಷ್ಟ್ರದಲ್ಲಿ ನಿಜವಾದ ಕೃಷಿಪ್ರಗತಿ ಹಾಗೂ ಸಾಮಾಜಿಕ ಕಲ್ಯಾಣ ಮೂಡಿಬರುತ್ತದೆ. ಈ ಕಾರ್ಯಸಾಧನೆಯಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆಯು ಮಹತ್ವದ ಅಂಶವಾಗಿದೆ. ಈ ದೃಷ್ಟಿಯಲ್ಲಿ ಕೃಷಿ ವಿಜ್ಞಾನ ಪುಸ್ತಕಗಳು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಸ್ವಾತಂತ್ರ್ಯಾನಂತರದ ಅಭ್ಯುದಯದ ಹಲವಾರು ಯತ್ನಗಳಲ್ಲಿ ರಾಷ್ಟ್ರೀಯ ಭಾಷೆಗಳ ಅಭಿವೃದ್ಧಿಯೂ ಒಂದು. ಹಿಂದಿ ಭಾಷೆಯೊಂದಿಗೇನೇ ಇತರ ಎಲ್ಲ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ನಡೆಯಬೇಕೆಂದು ಸಂಸತ್ತು ನಿರ್ಧರಿಸಿದೆ. ಹಲವಾರು ಭಾಷೆಗಳು ಬಳಕೆಯಲ್ಲಿರುವ ನಮ್ಮ ರಾಷ್ಟ್ರದಲ್ಲಿ ಎಲ್ಲ ಭಾಷೆಗಳೂ ಸಮತೂಕವಾಗಿ ಬೆಳೆದು ಬಂದಾಗಲೇ ರಾಷ್ಟ್ರದ ಸಮಗ್ರತೆ ಬೆಳೆದುಬರುತ್ತದೆ. ಈ ಭಾಷೆಗಳು ಸಾಕಷ್ಟು ಅಭಿವೃದ್ಧಿ ಹೊಂದಿದಾಗ ಶಿಕ್ಷಣಮಾಧ್ಯಮಗಳಾಗಲು ಸಮರ್ಥವಾಗುತ್ತವೆ. ನಾಡಿನ ಭಾಷೆಗಳೆಲ್ಲವನ್ನೂ ಶಿಕ್ಷಣಮಾಧ್ಯಮಗಳಾಗುವಂತೆ ಬಲಗೊಳಿಸುವ ಹೊಣೆ ವಿವಿಧ ವಿಶ್ವವಿದ್ಯಾನಿಲಯಗಳದ್ದು. ಅದಕ್ಕನುಗುಣವಾಗಿ ಪ್ರಾದೇಶಿಕ ಭಾಷೆಗಳು, ಕೃಷಿ ಶಿಕ್ಷಣಮಾಧ್ಯಮಗಳಾಗುವಂತೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದ್ದು ಕೃಷಿ ವಿಶ್ವವಿದ್ಯಾನಿಲಯಗಳ ಕೆಲಸವಾಗಿದೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯವು ಈ ಕಾರ್ಯಸಾಧನೆಗೋಸುಗ ಕನ್ನಡದಲ್ಲಿ ಕೃಷಿಸಾಹಿತ್ಯ ನಿರ್ಮಾಣ ಕೈಗೆತ್ತಿಕೊಂಡಿದೆ. ಇಷ್ಟು ದಿನ ಇಂಗ್ಲಿಷ್ ಭಾಷೆಯಲ್ಲಿಯೇ ಶಿಕ್ಷಣ ಪಡೆದು, ಬಳಿಕೆ ನಡೆಯಿಸಿದ ಶಿಕ್ಷಕ ಹಾಗೂ ವಿಜ್ಞಾನಿಗಳಿಗೆ ಒಮ್ಮೆಲೇ ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥರಚನೆ ಮಾಡುವುದು ಸುಲಭ ಕಾರ್ಯವೇನಲ್ಲ. ಇಂಥದರಲ್ಲಿ ಈ ಕೆಲಸ ಪ್ರಾರಂಭವಾದ ಅಲ್ಪಾವಧಿಯಲ್ಲಿ ಅರ್ಧಶತ ಗ್ರಂಥಗಳು ಪ್ರಕಟಗೊಂಡು ಜನಪ್ರಿಯವಾದುದು ಅತ್ಯಂತ ಹೆಮ್ಮೆಯ ಸಾಧನೆ.

ಉಪಯುಕ್ತ ಸಂಶೋಧನಾಧಾರಿತ ಆಳ ಅಭ್ಯಾಸದ ಫಲವಾಗಿ ಸೃಷ್ಟಿಗೊಂಡ ಕೃಷಿ ವಿಜ್ಞಾನ ಗ್ರಂಥಗಳು ನಮ್ಮ ರಾಜ್ಯದ ಕೃಷಿ ವಿದ್ಯಾರ್ಥಿ ಹಾಗೂ ಕೃಷಿಕರಿಗೆ ಅಮೂಲ್ಯ ಕೊಡುಗೆಗಳಾಗುವುದರಲ್ಲಿ ಸಂದೇಹವಿಲ್ಲ. ಈ ಕಾರ್ಯ ಮಿಂಚಿನ ವೇಗದಿಂದ ನಡೆಯಲೆಂದು ನಾನು ಹಾರೈಸುತ್ತೇನೆ.

ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು
ತಾ॥ 27-5-1977

ಹ. ರಾ. ಆರಕೇರಿ
ಕುಲಪತಿಗಳು

ಸಂಪಾದಕರ ಮಾತು

ಇದು ಲೆಕ್ಕಾಚಾರದ ಯುಗ. ಮನುಷ್ಯ ಯಾವುದೇ ಕೆಲಸ ಮಾಡಲು ಯೋಚಿಸಿದರೂ ಈ ಕೆಲಸದಿಂದ ಏನು ಲಾಭ ಎಂದು ಯೋಚಿಸುತ್ತಾನೆ. ಯಾವುದೊಂದು ವ್ಯವಹಾರದಲ್ಲಿ ಲಾಭ ಬರಬೇಕಾದರೆ ಎಷ್ಟು ಹಣ ಅದರಲ್ಲಿ ತೊಡಗಿಸಬೇಕಾಗುತ್ತದೆ; ಹೂಡಿದ ಹಣಕ್ಕೆ ಬರುವ ಲಾಭದ ಪ್ರಮಾಣ ಎಷ್ಟು ಎಂದು ಲೆಕ್ಕ ಹಾಕುವುದು ಸಹಜ. ಇದು ಕೃಷಿಗೂ ಅನ್ವಯಿಸುತ್ತದೆ. ಕೃಷಿ ಅರ್ಥಶಾಸ್ತ್ರದ ಅಭ್ಯಾಸ ಕೃಷಿವಿಜ್ಞಾನ ತಿಳಿವಳಿಕೆಯಲ್ಲಿ ಮಹತ್ತರ ಸ್ಥಾನ ಪಡೆದಿದೆ. ಕೃಷಿ ಅರ್ಥಶಾಸ್ತ್ರ ಅಭ್ಯಾಸಕ್ಕೆ ಮೂಲ ಅರ್ಥಶಾಸ್ತ್ರ ತಳಹದಿ.

ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳ ಅಭ್ಯಾಸಕ್ರಮಕ್ಕನುಗುಣವಾಗಿ ಈ 'ಮೂಲ ಅರ್ಥಶಾಸ್ತ್ರ' ಪುಸ್ತಕ ರಚಿಸಲಾಗಿದೆ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕೆಲಕಾಲ ಮೂಲ ಅರ್ಥಶಾಸ್ತ್ರ ಬೋಧನೆ ಮಾಡುತ್ತಿದ್ದ ಮತ್ತು ಈಗ ಕೋಲಾರ ಸರ್ಕಾರಿ ಕಾಲೇಜಿನಲ್ಲಿ ಲೆಕ್ಚರರ್ ಆಗಿರುವ ಶ್ರೀ ಡಿ. ವೆಂಕಟರಾವ್ ಇದರ ಲೇಖಕರು. ಇದರಲ್ಲಿ ಅರ್ಥಶಾಸ್ತ್ರದ ಸ್ವರೂಪ, ವ್ಯಾಪ್ತಿ ಹಾಗೂ ಮಹತ್ವ, ಬಳಕೆ, ಉತ್ಪಾದನೆ, ವಿನಿಮಯ, ವಿತರಣೆ, ಉದ್ದಿಮೆಗಳ ಸಂಘಟನೆ ಹಾಗೂ ಸಾರ್ವಜನಿಕ ಹಣಕಾಸು ಈ ವಿಷಯಗಳ ವಿವೇಚನೆ ಇದೆ. ಉದಾಹರಣೆ, ರೇಖಾಚಿತ್ರ ಮತ್ತು ಕೋಷ್ಟಕಗಳಿಂದ ಕೂಡಿ ವಿಷಯ ನಿರೂಪಣೆ ಪರಿಣಾಮಕಾರಿಯಾಗಿದೆ.

ಕೃಷಿ ವಿಶ್ವವಿದ್ಯಾನಿಲಯವನ್ನೊಳಗೊಂಡ, ರಾಜ್ಯದಲ್ಲಿಯ ಎಲ್ಲ ವಿದ್ಯಾಲಯಗಳಲ್ಲಿ ಅಭ್ಯಾಸಮಾಡುವ ಅರ್ಥಶಾಸ್ತ್ರದ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಅರ್ಥಶಾಸ್ತ್ರ ಪ್ರೇಮಿಗಳಿಗೂ ಈ ಪುಸ್ತಕವು ಉಪಯೋಗವಾಗುವುದೆಂದು ಆಶಿಸುವೆ.

ಜ್ಯೇಷ್ಠಮಾಸ, ಪಿಂಗಳನಾಮ ಸಂವತ್ಸರ
ಶಾಲಿವಾಹನ ಶಕ 1899
ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024

ಪೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು
ಹಾಗೂ
ಕ. ಅ. ಸ. ಕಾರ್ಯದರ್ಶಿಗಳು

ಪರಿವಿಡಿ

ಆಲೇಖನಗಳ ಪಟ್ಟಿ

ಕೋಷ್ಟಕಗಳ ಪಟ್ಟಿ

ಮೂಲ ಅರ್ಥಶಾಸ್ತ್ರ

ಅಧ್ಯಾಯ I

ಅರ್ಥಶಾಸ್ತ್ರದ ಸ್ವರೂಪ, ಅರ್ಥ ವಿವರಣೆ, ವ್ಯಾಪ್ತಿ ಹಾಗೂ ಮಹತ್ವ

ಸಮಾಜಜೀವಿಯಾದ ಮಾನವನ ಆರ್ಥಿಕ ಸಮಸ್ಯೆಗಳನ್ನು ಅಭ್ಯಸಿಸುವ ಶಾಸ್ತ್ರವೇ ಅರ್ಥಶಾಸ್ತ್ರ. ಮಾನವನು ಅನೇಕ ಆರ್ಥಿಕ ಚಟುವಟಿಕೆಗಳಲ್ಲಿ ನಿರತನಾಗಿರುತ್ತಾನೆ. ಅವನು ಗಳಿಸಿದ ಹಣದ ಬಳಕೆ ಹಾಗೂ ಸಮಾಜದಲ್ಲಿನ ಅವನ ನಡವಳಿಕೆ ಅರ್ಥಶಾಸ್ತ್ರದಲ್ಲಿ ಸೇರಿದೆ. ಸಮಾಜದ ರಚನೆ, ಬೆಳವಣಿಗೆ, ಅದರ ಸಮಸ್ಯೆಗಳು ಹಾಗೂ ಪರಿಹಾರಗಳನ್ನೂ ಕೂಲಂಕುಶವಾಗಿ ಮತ್ತು ಸಮಗ್ರವಾಗಿ ಚರ್ಚಿಸುವ ಶಾಸ್ತ್ರ ಸಮಾಜ ಶಾಸ್ತ್ರ. ಅರ್ಥಶಾಸ್ತ್ರಕ್ಕೆ ಮತ್ತು ಸಮಾಜಶಾಸ್ತ್ರಕ್ಕೆ ಬಹಳ ನಿಕಟವಾದ ಸಂಬಂಧವಿದೆ. ಪ್ರತಿಯೊಂದು ಸಮಾಜದಲ್ಲಿ ಜನರ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಆರ್ಥಿಕ ವ್ಯವಸ್ಥೆಯು ರೂಪುಗೊಂಡಿರುತ್ತದೆ. ಆ ವ್ಯವಸ್ಥೆಯ ಮೂಲಕ ಅವರು ಬೇಡಿಕೆಗಳನ್ನು ಯಾವ ರೀತಿ ಪೂರೈಸಿಕೊಳ್ಳುತ್ತಾರೆಂಬುದನ್ನು ಅರ್ಥಶಾಸ್ತ್ರ ವಿವರಿಸುತ್ತದೆ.

ಪ್ರಾರಂಭದಿಂದಲೂ ಅರ್ಥಶಾಸ್ತ್ರಕ್ಕೂ ರಾಜಕೀಯಕ್ಕೂ ಬಹಳ ನಿಕಟವಾದ ಸಂಬಂಧವಿದೆ. ಒಂದು ಶತಮಾನದ ಹಿಂದೆ ಅರ್ಥಶಾಸ್ತ್ರವನ್ನು 'ರಾಜಕೀಯ ಅರ್ಥಶಾಸ್ತ್ರ'ವೆಂದು ಕರೆಯುತ್ತಿದ್ದರು. ರಾಷ್ಟ್ರದ ಸಂಘಟನೆಗೆ ಬೇಕಾಗುವ ಅನೇಕ ಸಿದ್ಧಾಂತಗಳನ್ನು ರಾಜಕೀಯ ಅರ್ಥಶಾಸ್ತ್ರ ಒಳಗೊಂಡಿತ್ತು. ಕಾಲಾಂತರದಲ್ಲಿ ರಾಜಕೀಯ ಅರ್ಥಶಾಸ್ತ್ರದಿಂದ 'ರಾಜಕೀಯ' ಎಂಬ ಪದ ಬಿಟ್ಟು ಹೋಗಿ ಬರಿಯ ಅರ್ಥಶಾಸ್ತ್ರವಷ್ಟೇ ಉಳಿಯಿತು.

ಅರ್ಥಶಾಸ್ತ್ರವು ಮಾನವನ ನಡೆನುಡಿಗಳಿಗೂ ಸಂಬಂಧಿಸಿದೆ. ಆದ್ದರಿಂದ ಅರ್ಥಶಾಸ್ತ್ರ ಮತ್ತು ಮನಶ್ಶಾಸ್ತ್ರಗಳಿಗೆ ಪರಸ್ಪರ ಸಂಬಂಧವಿದೆ. ಹಾಗೇಯೇ ಆರ್ಥಿಕ ವ್ಯವಹಾರಗಳು ಜನರ ನೈತಿಕಮಟ್ಟವನ್ನು ಅವಲಂಬಿಸಿರುವುದರಿಂದ ಅರ್ಥಶಾಸ್ತ್ರಕ್ಕೆ ಮತ್ತು ನೀತಿಶಾಸ್ತ್ರಕ್ಕೆ ಸಂಬಂಧವಿದೆ. ಅರ್ಥಶಾಸ್ತ್ರದ ಬೆಳವಣಿಗೆ ವಾಸ್ತವವಾಗಿ ಪ್ರಾರಂಭಗೊಂಡಿದ್ದು ಹದಿನೇಳನೆಯ ಶತಮಾನದಿಂದೀಚೆಗೆ. ಇಂದು ಅರ್ಥಶಾಸ್ತ್ರ ಜಗತ್ತಿನ ಮುಖ್ಯ ಶಾಸ್ತ್ರಗಳಲ್ಲಿ ಒಂದಾಗಿದ್ದು ಅತ್ಯಂತ ಉಪಯುಕ್ತವಾದ ಅಧ್ಯಯನ ಎಂಬ ಮನ್ನಣೆ ಪಡೆದಿದೆ.

ಸ್ವರೂಪ

ಅರ್ಥವೆಂದರೆ ಹಣ. ಮನೆಯ ನಿರ್ವಹಣೆಯಲ್ಲಿ ಹಣಕ್ಕೆ ಪ್ರಾಮುಖ್ಯಸ್ಥಾನ. ಮನೆಯ ಆಡಳಿತ ನಿರ್ವಹಣೆ ಒಂದು ಕಲೆ. ಗ್ರೀಕರು ರಾಜಕೀಯ ಅರ್ಥಶಾಸ್ತ್ರದಲ್ಲಿ ಜನರ ಜೀವನ ಮತ್ತು ಆಡಳಿತಗಳ ವಿವರಣೆಯಿದೆ. ಈ ರೀತಿ ಮೊಟ್ಟಮೊದಲಿಗೆ ಅರ್ಥಶಾಸ್ತ್ರ ಕುಟುಂಬದ ಹೊಣೆಗಾರಿಕೆಗೆ ಸಂಬಂಧಿಸಿದ ಶಾಸ್ತ್ರವಾಗಿ ಆರಂಭಗೊಂಡು ಕ್ರಮೇಣ ಇಡೀ ರಾಷ್ಟ್ರವನ್ನೇ ವ್ಯಾಪಿಸಿತು. ಮಾನವನ ಜೀವನ ಕ್ಷೇತ್ರವೇ ಅರ್ಥ ಶಾಸ್ತ್ರದ ಮುಖ್ಯ ವಿಷಯ. ಮಾನವನ ಆರ್ಥಿಕ ಸಮಸ್ಯೆಗಳನ್ನು ವಿವರವಾಗಿ ಅಭ್ಯಸಿಸುವುದು ಮತ್ತು ಆ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವುದು ಅರ್ಥ ಶಾಸ್ತ್ರದ ಮುಖ್ಯ ಧ್ಯೇಯ. ಮಾನವ ತನ್ನ ಜೀವನ ನಿರ್ವಹಣೆಗೆ ಧನವನ್ನು ಸಂಪಾದಿ ಸುವ ಆರ್ಥಿಕ ಕ್ರಿಯೆಗಳಲ್ಲಿ ತಲ್ಲೀನನಾಗುತ್ತಾನೆ. ಆರ್ಥಿಕ ಕ್ರಿಯೆ ಎಂದರೆ ನಾನಾವಿಧ ವಾದ ಉದ್ಯೋಗಗಳಲ್ಲಿ ದುಡಿದು ಹಣವನ್ನು ಗಳಿಸುವ ಒಂದು ಕೆಲಸ. ಆರ್ಥಿಕ ಕ್ರಿಯೆಯ ಮೂಲ ಮಾನವನ ಇಚ್ಛೆಗಳಲ್ಲಿ ಅಡಗಿದೆ. ಮಾನವನ ಇಷ್ಟಗಳನ್ನು ಪೂರೈಸಲು ಆರ್ಥಿಕ ಕ್ರಿಯೆಯು ಸ್ವರೂಪ ತಾಳಿದೆ. ಅಂದರೆ ಎಲ್ಲ ಆರ್ಥಿಕ ಚಟು ವಟಿಕೆಗಳಿಗೆ ಮನುಷ್ಯನ ಇಷ್ಟಗಳೇ ಮೂಲ. ಆಹಾರ, ಬಟ್ಟೆ, ವಸತಿ, ಮನರಂಜನೆ, ವೈದ್ಯಕೀಯ ಸೌಲಭ್ಯ, ಸಾರಿಗೆ ಸಂಪರ್ಕಗಳು, ವಿದ್ಯಾಭ್ಯಾಸ ಇವುಗಳೆಲ್ಲ ಮಾನವನ ಇಷ್ಟಗಳು. ಇವುಗಳನ್ನು ತೃಪ್ತಿಪಡಿಸಲು ಅವನು ಹಣವನ್ನು ಗಳಿಸಬೇಕಾಗುತ್ತದೆ. ಹಣವನ್ನು ಗಳಿಸಲು ಆರ್ಥಿಕ ಕ್ರಿಯೆಗಳಲ್ಲಿ ತಲ್ಲೀನನಾಗಬೇಕಾಗುತ್ತದೆ. ಸಾರಾಂಶವಾಗಿ ಹೇಳಬೇಕಾದರೆ, ಎಲ್ಲ ವಿಧವಾದ ಆರ್ಥಿಕ ಚಟುವಟಿಕೆಗಳಿಗೆ ಮಾನವನ ಇಷ್ಟಗಳೇ ಮೂಲ. ಉದರ ಪೋಷಣೆಯಷ್ಟೇ ಮಾನವನ ಗುರಿಯಾಗಬಾರದು ಎಂಬುದು ವೇದಾಂತಿಗಳ ಸ್ಪಷ್ಟ ಅಭಿಪ್ರಾಯ. ಮನುಷ್ಯ ಜೀವಿಸುವುದು ಮುಖ್ಯವಾಗಿ ಗಾಳಿ, ನೀರು ಮತ್ತು ಆಹಾರಗಳಿಂದಾದರೂ, ಬಟ್ಟೆ ಮತ್ತು ವಸತಿ ಅತ್ಯಾವಶ್ಯಕ. ಆಹಾರ ಮಾತ್ರವಿದ್ದು ವಸತಿ ಇಲ್ಲದಿದ್ದರೆ ಮಾನವ ಜೀವಿಸಲು ಕಷ್ಟವಾಗುತ್ತದೆ. ಇಷ್ಟಲ್ಲದೆ ಈ ಅತ್ಯಾವಶ್ಯಕತೆಗಳನ್ನು ಪಡೆಯಲು ಮನುಷ್ಯ ಉತ್ಪಾದನೆಯ ಕೆಲಸದಲ್ಲಿ ನಿರತವಾಗಿ ಹಣವನ್ನು ಗಳಿಸುತ್ತಾನೆ. ಗಳಿಸಿದ ಹಣದಿಂದ ತನ್ನ ಇಷ್ಟ ಅಥವಾ ಬಯಕೆಗಳನ್ನು ಪೂರೈಸಿಕೊಳ್ಳಬಹುದು. ಮಾನವನ ಇಷ್ಟಗಳು ನಿರಂತರವಾಗಿ ಬೆಳೆಯುತ್ತಿರುತ್ತವೆ. ಅವುಗಳಿಗೆ ಮಿತಿ ಎಂಬುದೇ ಇಲ್ಲ. ಈ ಇಷ್ಟಗಳ ತೃಪ್ತಿಗಾಗಿ ಮಾನವನ ಪ್ರಯತ್ನದ ಜೊತೆಗೆ ಪ್ರಕೃತಿಯ ಕೊಡುಗೆಯೂ ಸೇರುತ್ತದೆ. ಮಾನವನ ತೃಪ್ತಿಗಳನ್ನು ಈಡೇರಿಸು ವಲ್ಲಿ ಇವೆರಡೂ ಒಂದಕ್ಕೊಂದು ಪೂರಕವಾಗಿ ಮುಂದುವರಿಯಬೇಕು. ಹೀಗೆ ಮಾನವನು ತನ್ನ ಇಷ್ಟಗಳನ್ನು ಪ್ರಯತ್ನದೊಂದಿಗೆ ತೃಪ್ತಿಪಡಿಸಿಕೊಳ್ಳುತ್ತಾನೆ. ಮಾನವನ ಇಷ್ಟಗಳು, ಪ್ರಯತ್ನಗಳು ಹಾಗೂ ತೃಪ್ತಿ, ಇವು ನಿರಂತರ ಚಕ್ರವಿದ್ದಂತೆ. ಇವುಗಳಿಂದಾಗಿ ಉತ್ಪಾದನೆ, ವಿನಿಮಯ, ಉಪಭೋಗ ಉಂಟಾಗಿವೆ. ಆದರೆ ಮಾನವನ ಇಷ್ಟಗಳು ಅಮಿತವಾಗಿದ್ದು, ಅವುಗಳನ್ನು ಪೂರೈಸಬಲ್ಲ ಸಾಧನಸಾಮಗ್ರಿಗಳು ವಿರಳ

ವಾಗಿರುವುದರಿಂದ ಮಾನವನ ಎಲ್ಲ ಇಷ್ಟಗಳನ್ನು ತೃಪ್ತಿಗೊಳಿಸುವುದು ಅಸಾಧ್ಯ. ಆದಾಯವು ಕಡಿಮೆ ಇದ್ದು, ಇಷ್ಟಗಳನ್ನು ತೃಪ್ತಿಪಡಿಸುವ ವಸ್ತುಗಳು ಮಿತವಾಗಿರುವುದರಿಂದ, ಮಾನವನ ಕೊರತೆಯಲ್ಲಿರುವ ವಸ್ತುಗಳನ್ನು ಮಿತವ್ಯಯದಿಂದ ಉಪಯೋಗಿಸಬೇಕಾಗುತ್ತದೆ. ಅಂದರೆ ವಿರಳವಾಗಿರುವ ಸಾಧನಸಾಮಗ್ರಿಗಳಿಂದ ಸಂತೃಪ್ತಿಯನ್ನು ಪಡೆಯಲು ಮಾನವನ ತನ್ನ ಅನಂತ ಬಯಕೆಗಳಲ್ಲಿ ಆಯ್ಕೆಮಾಡಬೇಕಾಗುತ್ತದೆ. ಈ ಪರಿಸ್ಥಿತಿಯಲ್ಲಿ ಮಾನವನು ನಡೆದುಕೊಳ್ಳುವ ರೀತಿಯನ್ನು ಎದುರಿಸುವುದೇ ಅರ್ಥಶಾಸ್ತ್ರದ ಹೆಗ್ಗುರಿ. ಕೆಲವರ ಅಭಿಪ್ರಾಯದಲ್ಲಿ ಅರ್ಥಶಾಸ್ತ್ರವು ಮಾನವನ ಇಷ್ಟಗಳು ಮತ್ತು ಸಂತೃಪ್ತಿಯ ವಿಜ್ಞಾನ. ಇನ್ನು ಕೆಲವರ ಪ್ರಕಾರ ಅರ್ಥಶಾಸ್ತ್ರವು ಸಂಪತ್ತು ಮತ್ತು ಕ್ಷೇಮಾಭ್ಯುದಯ ಶಾಸ್ತ್ರ. ಆರ್ಥಿಕ ಸಮಸ್ಯೆಗಳನ್ನು ವಿವೇಚಿಸುವ ಶಾಸ್ತ್ರವೇ ಅರ್ಥಶಾಸ್ತ್ರ ಎಂಬುದು ಮತ್ತೆ ಕೆಲವರ ಮತ.

ಅರ್ಥವಿವರಣೆ

ಅರ್ಥಶಾಸ್ತ್ರಜ್ಞರು ಅರ್ಥಶಾಸ್ತ್ರಕ್ಕೆ ಹಲವಾರು ಅರ್ಥವಿವರಣೆಗಳನ್ನು ಕೊಟ್ಟಿದ್ದಾರೆ. ಕಾಲಕಾಲಕ್ಕೆ ಈ ಅರ್ಥವಿವರಣೆಗಳಲ್ಲಿ ಬದಲಾವಣೆ ಕಂಡುಬಂದಿದೆ. ಅರ್ಥಶಾಸ್ತ್ರಕ್ಕೆ ಬಹು ಅರ್ಥ ಮತ್ತು ನಿರೂಪಣೆಗಳು ಇವೆ. ಈ ನಿರೂಪಣೆ ಮತ್ತು ಅರ್ಥದ ಬಗ್ಗೆ ಅರ್ಥಶಾಸ್ತ್ರಜ್ಞರಲ್ಲಿ ಭಿನ್ನಾಭಿಪ್ರಾಯಗಳಿವೆ: ಮುಖ್ಯವಾಗಿ ಆಡಂ ಸ್ಮಿತ್ ನಿರೂಪಣೆ–ಸಂಪತ್ತಿನ ನಿರೂಪಣೆ, ಹಿಂದಿನ ಕ್ಲಾಸಿಕಲ್ ನಿರೂಪಣೆ, ಆಲ್‌ಫ್ರೆಡ್ ಮಾರ್ಷಲ್ ನಿರೂಪಣೆ–ಕಲ್ಯಾಣ ನಿರೂಪಣೆ, ನವ ಕ್ಲಾಸಿಕಲ್ ನಿರೂಪಣೆ ಹಾಗೂ ಲಿಯೋನಲ್ ರಾಬಿನ್ಸ್ ನಿರೂಪಣೆ–ಅಭಾವದ ನಿರೂಪಣೆ, ಹೊಸ ನಿರೂಪಣೆ ಎಂದು ಮೂರು ತೆರನಾಗಿ ವಿಂಗಡಿಸಬಹುದು. ಇವುಗಳನ್ನು ಒಂದೊಂದಾಗಿ ಚರ್ಚಿಸೋಣ.

(1) ಆಡಂ ಸ್ಮಿತ್ ಸಂಪತ್ತಿನ ನಿರೂಪಣೆ : ಆಡಂ ಸ್ಮಿತ್ ಪ್ರಖ್ಯಾತ ಅರ್ಥಶಾಸ್ತ್ರಜ್ಞರು. ಅವರ ಪ್ರಕಾರ ಅರ್ಥಶಾಸ್ತ್ರ ಸಂಪತ್ತಿನ ಉತ್ಪಾದನೆ, ವಿನಿಮಯ ಮತ್ತು ವಿತರಣೆಗಳನ್ನು ಅಭ್ಯಸಿಸುವ ಶಾಸ್ತ್ರ. ಇವರ ಪ್ರಕಾರ ಸಂಪತ್ತಿನ ಬಗ್ಗೆ **ಮಾನವನ ಚಟುವಟಿಕೆಗಳನ್ನು ವಿವರಿಸುವ ಶಾಸ್ತ್ರವೇ ಅರ್ಥಶಾಸ್ತ್ರ.**

ಆಡಂ ಸ್ಮಿತ್ ಮೊಟ್ಟ ಮೊದಲಿಗೆ 1776 ರಲ್ಲಿ, ಆಂಗ್ಲ ಭಾಷೆಯಲ್ಲಿ 'ರಾಷ್ಟ್ರಗಳ ಸಂಪತ್ತು' (ವೆಲ್ತ್ ಆಫ್ ನೇಷನ್ಸ್) ಎಂಬ ಅರ್ಥಶಾಸ್ತ್ರದ ಪ್ರಥಮ ಪುಸ್ತಕವನ್ನು ಪ್ರಕಟಿಸಿದರು. ಆದುದರಿಂದ ಆಡಂ ಸ್ಮಿತ್‌ರನ್ನು ಅರ್ಥಶಾಸ್ತ್ರದ ಪಿತಾಮಹ ಅಥವಾ ಜನಕರೆಂದು ಕರೆಯುವುದು ರೂಢಿ. ಈ ಪುಸ್ತಕದಲ್ಲಿ ರಾಷ್ಟ್ರಗಳ ಸಂಪತ್ತಿನ ಬಗ್ಗೆ ವಿಚಾರ ಮಾಡಿದ್ದಾರೆ. ಈ ಪುಸ್ತಕದಲ್ಲಿ ಗ್ರಂಥಕರ್ತರು ಅರ್ಥಶಾಸ್ತ್ರವನ್ನು ರಾಷ್ಟ್ರದ ಸಂಪತ್ತಿನ ಸ್ವರೂಪ ಮತ್ತು ಅಭ್ಯುದಯ ಮಾರ್ಗಗಳನ್ನು ಅಭ್ಯಸಿಸುವ ಶಾಸ್ತ್ರವೆಂದು ವಿವರಿಸಿದ್ದಾರೆ. ಇವರ ಅನುಯಾಯಿಗಳಾದ ಡೇವಿಡ್ ರಿಕಾರ್ಡೋ ಹಾಗೂ ಇತರರು

ಅರ್ಥಶಾಸ್ತ್ರವನ್ನು ಸಂಪತ್ತಿನ ಶಾಸ್ತ್ರವೆಂದು ಕರೆದರು. ಆಡಂ ಸ್ಮಿತ್ ಹಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿ ಅರ್ಥಶಾಸ್ತ್ರದ ಸ್ವಭಾವವನ್ನು ಸರಳವಾಗಿ ನಿರೂಪಿಸಿದ್ದಾರೆ. ಇವರುಗಳ ದೃಷ್ಟಿಯಲ್ಲಿ ಅರ್ಥಶಾಸ್ತ್ರ 'ಧನದ ಶಾಸ್ತ್ರ' ಆಗಿದೆ. ಅರ್ಥಶಾಸ್ತ್ರ ಸಂಪತ್ತಿನ ಉತ್ಪಾದನೆ, ಸಂಪಾದನೆ, ವಿನಿಮಯ ಹಾಗೂ ಹಂಚಿಕೆಗಳನ್ನು ವಿವರಿಸುತ್ತದೆ. ಜೆ. ಬಿ. ಸೇ ಎಂಬ ಫ್ರೆಂಚ್ ಅರ್ಥಶಾಸ್ತ್ರಜ್ಞನೂ ಸಹ ಅರ್ಥಶಾಸ್ತ್ರ ಧನದ ಸಂಬಂಧ ವಾದ ಶಾಸ್ತ್ರ ಎಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಜಾನ್ ಸ್ಟೂವರ್ಟ್ ಮಿಲ್ ಎಂಬ ಮತ್ತೊಬ್ಬ ಅರ್ಥಶಾಸ್ತ್ರಜ್ಞ ಈ ಶಾಸ್ತ್ರದಲ್ಲಿ ಸಂಪತ್ತಿನ ಉತ್ಪಾದನೆ, ಅದರ ವಿನಿಮಯ ಹಾಗೂ ವಿತರಣೆಗಳ ಬಗ್ಗೆ ಅಭ್ಯಾಸ ಮಾಡುತ್ತೇವೆ ಎಂದು ಅಭಿಪ್ರಾಯ ಪಟ್ಟಿರುತ್ತಾನೆ.

ಅರ್ಥಶಾಸ್ತ್ರದಲ್ಲಿ ಸಂಪತ್ತಿನ ಉತ್ಪಾದನೆ ಮತ್ತು ಉತ್ಪಾದಿಸಿದ ಸಂಪತ್ತಿನ ವಿತರಣೆಯ ಬಗ್ಗೆ ಅಧ್ಯಯನ ಮಾಡುತ್ತೇವೆ. ಆಡಂ ಸ್ಮಿತ್ ತನ್ನ ವ್ಯಾಖ್ಯೆಯಲ್ಲಿ ಸಂಪತ್ತಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ. ಸಂಪತ್ತು ಭೌತಿಕ ವಸ್ತುಗಳ ರೂಪದಲ್ಲಿರುತ್ತದೆ. ಆಡಂಸ್ಮಿತ್ ಪ್ರಕಾರ ಮಾನವನು ಕೇವಲ ಸಂಪತ್ತಿಗಾಗಿ ಆಸೆ ಪಡುವ ಆರ್ಥಿಕ ವ್ಯಕ್ತಿ. ಅವನ ಜೀವನದ ಮುಖ್ಯಗುರಿ ಸಂಪತ್ತನ್ನು ಗಳಿಸುವುದು ಮತ್ತು ಗಳಿಸಿದ ಸಂಪತ್ತನ್ನು ವೆಚ್ಚಮಾಡುವುದು. ಆದ್ದರಿಂದ ಮಾನವನ ಆರ್ಥಿಕ ಚಟುವಟಿಕೆಗಳು ಇತರ ಎಲ್ಲ ಚಟುವಟಿಕೆಗಳಿಗಿಂತಲೂ ಮಿಗಿಲಾದವುಗಳು. ಈ ನಿರೂಪಣೆಯು ಎಷ್ಟೇ ಸುಲಭವಾಗಿದ್ದಾಗ್ಯೂ ಸಹ ನಂತರದ ಇತರ ಅರ್ಥಶಾಸ್ತ್ರಜ್ಞರು ಇದರ ಅರ್ಥವಿವರಣೆಯನ್ನು ಟೀಕೆಗೆ ಗುರಿಪಡಿಸಿ ಈ ಅರ್ಥವಿವರಣೆಯನ್ನು 'ಕಗ್ಗತ್ತಲೆಯ ಶಾಸ್ತ್ರ' ವೆಂದೂ 'ಧನಪಿಶಾಚಿಯ ಶಾಸ್ತ್ರ' ವೆಂದೂ ಕರೆದಿರುವರು.

ಟೀಕೆ : ಆಡಂ ಸ್ಮಿತ್ ಹಾಗೂ ಅವನ ಅನುಯಾಯಿಗಳಾದ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಅರ್ಥಶಾಸ್ತ್ರದ ವ್ಯಾಖ್ಯೆಗಳನ್ನು ಮಂಡಿಸುವಾಗ 'ಸಂಪತ್ತು' ಎಂಬ ಶಬ್ದವನ್ನು ಬಳಸಿದ್ದರಿಂದ ಕೆಲವು ಟೀಕೆಗಳಿಗೆ ಗುರಿಯಾಗಬೇಕಾಯಿತು. ಹದಿನೆಂಟ ನೆಯ ಶತಮಾನದ ಪ್ರಾರಂಭದಲ್ಲಿ ಹೆಚ್ಚು ಜನರು ಧಾರ್ಮಿಕ ಭಾವನೆಗಳನ್ನು ಹೊಂದಿದ್ದರಿಂದ ಸಂಪತ್ತಿನ ಕಡೆ ಅಷ್ಟು ಹೆಚ್ಚು ಗಮನ ನೀಡಿರಲಿಲ್ಲ. ಹಣವು ಪಾಪದ ಮೂಲವೆಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಇದಕ್ಕೆ ಕಾರಣ ಹಣವನ್ನು ಹೊಂದಿದ್ದ ಶ್ರೀಮಂತರು ಹಣವನ್ನು ದುಂದು ವೆಚ್ಚಮಾಡಿ, ದುರಭ್ಯಾಸ ಗಳಲ್ಲಿ ತೊಡಗುವುದಲ್ಲದೆ ಜನರನ್ನು ವಂಚಿಸಿ ಮೋಸ ಮಾಡುತ್ತಿದ್ದರು. ಆದ್ದರಿಂದ ಸಂಪತ್ತಿನ ಬಗ್ಗೆ ಅಧ್ಯಯನ ಮಾಡುವ ಅರ್ಥಶಾಸ್ತ್ರವು ಹೀನವಾದುದೆಂದು ಅವರು ಅಭಿಪ್ರಾಯಪಟ್ಟು ಅರ್ಥಶಾಸ್ತ್ರವನ್ನು ತೆಗಳುತ್ತಿದ್ದರು. ಈ ಅಂಶಗಳನ್ನು ಗಮನಿಸಿ ಅಂದಿನ ಕಾಲದ ಹಿರಿಯ ತತ್ವಜ್ಞಾನಿ ಮತ್ತು ಶ್ರೇಷ್ಠ ಬರಹಗಾರರೂ ಆಗಿದ್ದ ಜಾನ್ ರಸ್ಕಿನ್ ಮತ್ತು ಡಿಕನ್ಸ್ ಮುಂತಾದವರು ಅರ್ಥಶಾಸ್ತ್ರವನ್ನು ಅಘೋರ, ಕುತ್ಸಿಕ

ಎಂಬುದಾಗಿ ಕರೆದು ಹೀಯಾಳಿಸಿದರು. ಈ ರೀತಿ ಹೀಯಾಳಿಸಲು ಮುಖ್ಯ ಕಾರಣ ಆಡಂ ಸ್ಮಿತ್‌ರವರು ಹೆಚ್ಚಿನ ಪ್ರಾಮುಖ್ಯತೆಯನ್ನು ಸಂಪತ್ತಿಗೆ ಕೊಟ್ಟದ್ದೇ ಆಗಿತ್ತು. ಈ ವ್ಯಾಖ್ಯೆಯಿಂದ ಮಾನವನು ಸಂಪತ್ತನ್ನು ಸಂಪಾದಿಸುವುದರಲ್ಲೇ ತನ್ನ ಎಲ್ಲ ಕಾಲ ವನ್ನು ಕಳೆದರೆ ತಾನು ಗಳಿಸಿದ ಹಣವನ್ನು ಉಪಯೋಗಿಸುವುದು ಹೇಗೆ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಅಲ್ಲದೆ ಆಡಂ ಸ್ಮಿತ್ ನೀಡಿದ ಅರ್ಥಶಾಸ್ತ್ರದ ಈ ವ್ಯಾಖ್ಯೆಯಲ್ಲಿ ಮಾನವನ ವ್ಯಕ್ತಿತ್ವಕ್ಕೆ ಮತ್ತು ಅವನ ಹಿತಕ್ಕಾಗಲೀ ಪ್ರಾಮುಖ್ಯತೆ ಯನ್ನು ಕೊಟ್ಟಿಲ್ಲ. ಈ ಅರ್ಥಶಾಸ್ತ್ರಜ್ಞರ ಪ್ರಕಾರ ಸಂಪತ್ತಿಗಿಂತ ಸಂಪತ್ತನ್ನು ಉಪಯೋಗಿಸುವ ಮಾನವನಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಮಾನವನಿ ಗಿಂತ ಸಂಪತ್ತಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವುದು ಸರಿಯಲ್ಲ. ಕೇವಲ ಹಣ ಗಳಿಕೆಯೊಂದೇ ಮಾನವನ ಜೀವನದ ಮುಖ್ಯ ಗುರಿ ಅಲ್ಲ. ಮಾನವನಿಗಾಗಿ ಇನ್ನೂ ಹಲವಾರು ಗುರಿಗಳು ಇವೆ. ಅವು ಸಂಪತ್ತಿನ ಗಳಿಕೆಗಿಂತಲೂ ಮುಖ್ಯವಾಗಿರ ಬಹುದು.

ಆದರೆ ಈ ಟೀಕೆಗಳನ್ನು ತಪ್ಪು ತಿಳಿವಳಿಕೆಯಿಂದ ಮಾಡಿದರು. ಇದಕ್ಕೆ ಮುಖ್ಯ ಕಾರಣವೆಂದರೆ, ಆಗಿನ ಕಾಲದಲ್ಲಿ 'ಸಂಪತ್ತು' ಎಂದರೆ ಕೇವಲ ಹಣವೆಂದು ತಿಳಿದಿದ್ದರು. ಆದರೆ ಸಂಪತ್ತನ್ನು ಈ ರೀತಿಯ ಸಂಕುಚಿತ ದೃಷ್ಟಿಯಿಂದ ನೋಡುವುದು ಸರಿಯಲ್ಲ. ಅರ್ಥಶಾಸ್ತ್ರದಲ್ಲಿ 'ಸಂಪತ್ತು' ಎಂಬ ಪದವನ್ನು ವಿಶಾಲ ಅರ್ಥದಲ್ಲಿ ಬಳಸಲಾಗುತ್ತದೆ. ಸಂಪತ್ತು ನಾವು ಬೆಲೆ ಕೊಟ್ಟು ಪಡೆಯುವ, ನಮಗೆ ಅತ್ಯಾವಶ್ಯಕವಾಗಿ ಬೇಕಾದ ಆಹಾರ, ಬಟ್ಟೆ, ವಸತಿ ಮುಂತಾದ ಎಲ್ಲ ಆರ್ಥಿಕ ವಸ್ತುಗಳನ್ನು ಒಳಗೊಂಡಿದೆ ಎಂಬ ವಿಷಯವು ಟೀಕಿಸಿದ ಅರ್ಥಶಾಸ್ತ್ರಜ್ಞರ ಮತ್ತು ತತ್ವಜ್ಞಾನಿಗಳ ಗಮನಕ್ಕೆ ಬರಲಿಲ್ಲ. ಇದರಿಂದ ಅವರು ಅರ್ಥಶಾಸ್ತ್ರದ ಬಗ್ಗೆ ತಪ್ಪು ಅಭಿಪ್ರಾಯಗಳನ್ನು ಕಲ್ಪಿಸಿಕೊಂಡು ಕಟು ಟೀಕೆಗಳನ್ನು ಮಾಡಿ ಅರ್ಥಶಾಸ್ತ್ರದ ಬೆಳವಣಿಗೆಯು ಬಹುಮಟ್ಟಿಗೆ ಕುಂಠಿತ ಗೊಳ್ಳಲು ಕಾರಣರಾದರು. ಆಲ್‌ಫ್ರೆಡ್ ಮಾರ್ಷಲ್ ಮುಂದೆ ಬಂದು ಅರ್ಥಶಾಸ್ತ್ರ ವನ್ನು ಇಂತಹ ಅಸಮರ್ಪಕ ಟೀಕೆಗಳಿಂದ ಪಾರು ಮಾಡಿ ಅರ್ಥಶಾಸ್ತ್ರಕ್ಕೆ ಹೊಸ ವಿವರಣೆ, ಆದರ್ಶ, ಮೆರುಗನ್ನು ನೀಡಿ ಜೀವಕಳೆಯನ್ನು ತಂದುಕೊಟ್ಟನು.

(2) ಆಲ್‌ಫ್ರೆಡ್ ಮಾರ್ಷಲ್ ನಿರೂಪಣೆ : ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಆಲ್‌ಫ್ರೆಡ್ ಮಾರ್ಷಲ್ ಎಂಬ ಮತ್ತೊಬ್ಬ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಆಡಂ ಸ್ಮಿತ್‌ರ ವ್ಯಾಖ್ಯೆಯಲ್ಲಿನ ದೋಷಗಳನ್ನು ನಿರೂಪಿಸಿ, ಅವುಗಳ ನಿವಾರಣೆ ಯನ್ನೊಳಗೊಂಡ ಅರ್ಥಶಾಸ್ತ್ರದ ನಿರೂಪಣೆಯನ್ನು ಮಂಡಿಸಿದನು. ಇವನು ಬರೆದ 'ಪ್ರಿನ್ಸಿಪಲ್ಸ್ ಆಫ್ ಎಕನಾಮಿಕ್ಸ್' ಎಂಬ ಗ್ರಂಥ 1890 ರಲ್ಲಿ ಪ್ರಕಟವಾಯಿತು. ಈ ಪುಸ್ತಕವು ಅವನ 20 ವರ್ಷಗಳ ಸತತ ಚಿಂತನೆ ಹಾಗೂ ಬರಹಗಳಿಂದ ಪರಿಪಕ್ವ ಗೊಂಡ ಕೃತಿರತ್ನ. ಅವನು ಅರ್ಥಶಾಸ್ತ್ರಕ್ಕೆ ಹೊಸದೊಂದು ವ್ಯಾಖ್ಯೆಯನ್ನು ನೀಡಿ

ಆದರಲ್ಲಿ ಸಂಪತ್ತಿಗಿಂತ ಮಾನವನಿಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟರು. ಮಾರ್ಷಲ್ ಪ್ರಕಾರ **'ಅರ್ಥಶಾಸ್ತ್ರವು ಮನುಷ್ಯನ ದೈನಂದಿನ ವ್ಯಾವಹಾರಿಕ ಜೀವನವನ್ನು ಅಭ್ಯಸಿಸುವ ಶಾಸ್ತ್ರ'** ಮಾರ್ಷಲ್ ನೀಡಿರುವ ಈ ವ್ಯಾಖ್ಯೆಯಲ್ಲಿ ಹಣಕ್ಕಿಂತಲೂ ಮನುಷ್ಯನ ಹಿತವೇ ಮುಖ್ಯ. ಆಡಂ ಸ್ಮಿತ್ ಹಣದ ಕಡೆಗೆ ತಮ್ಮ ಗಮನ ಹರಿಸಿದರೆ, ಮಾನವನ ಹಿತದೃಷ್ಟಿಯ ಕಡೆ ಗಮನ ಹರಿಸಿದ್ದಾನೆ. ಆಡಂ ಸ್ಮಿತ್ ಪ್ರಕಾರ ಅರ್ಥಶಾಸ್ತ್ರ ಸಂಪತ್ತಿನ ಬಗ್ಗೆ ಅಧ್ಯಯನ ನಿಜ; ಆದರೆ ಸಂಪತ್ತನ್ನು ಪಡೆಯುವುದೇ ಮನುಷ್ಯನ ಗುರಿಯಲ್ಲ. ಹಣವೇ ಮಾನವನ ಸುಖಸೌಭಾಗ್ಯಗಳಿಗೆ ಮೂಲಾಧಾರವೆಂಬುದು ಆಡಂ ಸ್ಮಿತ್‌ರ ಅಭಿಪ್ರಾಯ. ಆದರೆ ಹಣವಿದ್ದರೆ ಸುಖ ಸಿಗುವುದಿಲ್ಲ; ಆ ಹಣವನ್ನು ಉಪಯೋಗಿಸಿ ಅದರಿಂದ ಸುಖ ಪಡೆಯಲು ಮಾನವನಿರಬೇಕು. ಮಾನವನ ಕ್ಷೇಮ, ಅಭ್ಯುದಯಗಳಿಗೆ ಹಣವು ಒಂದು ಸಾಧನ ಮಾತ್ರ. ಈ ಸಾಧನದ ಮೂಲಕ ಮಾನವನ ಕಲ್ಯಾಣವನ್ನು ಸಾಧಿಸಬಹುದು. ಮನುಷ್ಯ ತನ್ನ ದೈನಂದಿನ ಜೀವನದಲ್ಲಿ ಅನೇಕ ಆರ್ಥಿಕ ಚಟುವಟಿಕೆಗಳಲ್ಲಿ ನಿರತನಾಗಿರುವನು. ಉದಾಹರಣೆಗಾಗಿ, ರೈತ ಹೊಲವನ್ನು ಉಳುವುದರಲ್ಲಿ, ಕಾಲೇಜಿನಲ್ಲಿ ಅಧ್ಯಾಪಕ ಪಾಠ ಹೇಳಿ ಕೊಡುವುದರಲ್ಲಿ, ಕಾರಕೂನ ಆಫೀಸಿನಲ್ಲಿ ಫೈಲುಗಳನ್ನು ನೋಡುವುದರಲ್ಲಿ ನಿರತರಾಗಿರುವರು. ಇಲ್ಲಿ ಕೆಲಸಗಳು ಬೇರೆಬೇರೆ ಇರಬಹುದು. ಆದರೆ ಪ್ರತಿಯೊಬ್ಬರ ಉದ್ದೇಶವೂ ಹಣವನ್ನು ಗಳಿಸುವುದು ಆಗಿದೆ. ಈ ರೀತಿ ಗಳಿಸಿದ ಹಣದಿಂದ ತಮಗೆ ಬೇಕಾದ ವಸ್ತುಗಳನ್ನು ಪಡೆದು ತಮ್ಮ ಇಷ್ಟಗಳನ್ನು ಪೂರೈಸಿಕೊಂಡು ತೃಪ್ತಿಪಡೆಯುವುದೇ ಆಗಿದೆ. ಅಂದರೆ ವ್ಯಕ್ತಿಯು ಶ್ರಮ ವಹಿಸಿ ದುಡಿದು, ದುಡಿಮೆಯಿಂದ ಆದಾಯವನ್ನು ಪಡೆದು, ಆ ಆದಾಯವನ್ನು ವೆಚ್ಚ ಮಾಡಿ ತನ್ನ ಇಷ್ಟಗಳನ್ನು ತೃಪ್ತಿಪಡಿಸಿಕೊಳ್ಳುತ್ತಾನೆ. ಆದ್ದರಿಂದ ಹಣಕ್ಕಿಂತ ಮಾನವ ಮುಖ್ಯ. ಮಾರ್ಷಲ್‌ರವರು ಪ್ರಥಮ ಸ್ಥಾನವನ್ನು ಮಾನವನಿಗೆ ಕೊಟ್ಟು, ದ್ವಿತೀಯ ಸ್ಥಾನವನ್ನು ಹಣಕ್ಕೆ ಕೊಟ್ಟಿದ್ದಾರೆ. ಮಾರ್ಷಲ್ ಹಾಗೂ ಅವನ ಅನುಯಾಯಿಗಳು ಆದ್ಯ ಗಮನವನ್ನು ಮಾನವನಿಗೆ ಕೊಟ್ಟಿದ್ದರು. ಮಾರ್ಷಲ್ ಪ್ರಕಾರ ಮಾನವನಿಗೋಸ್ಕರ ಸಂಪತ್ತಿದೆಯೇ ಹೊರತು ಸಂಪತ್ತಿಗೋಸ್ಕರ ಮಾನವನಲ್ಲ. ಮಾನವ ಕಲ್ಯಾಣವನ್ನು ಸಾಧಿಸುವ ಸಲುವಾಗಿ ಸಂಪತ್ತನ್ನು ಯಾವ ಬಗೆಯಲ್ಲಿ ಉಪಯೋಗಿಸಬಹುದು ಎಂದು ತಿಳಿಸುವ ಶಾಸ್ತ್ರವೇ ಅರ್ಥಶಾಸ್ತ್ರ. ಅಂದರೆ ಅರ್ಥಶಾಸ್ತ್ರ ಕೇವಲ ಸಂಪತ್ತಿಗೆ ಸಂಬಂಧಪಟ್ಟಿಲ್ಲ. ಅದೊಂದು ಮಾನವೀಯ ವಿಜ್ಞಾನ. ಮಾನವ ಸುಖಪಡುವ ಉದ್ದೇಶದಿಂದ ಸಂಪತ್ತನ್ನು ಗಳಿಸುತ್ತಾನೆ. ಆದ್ದರಿಂದ ಒಂದು ದೃಷ್ಟಿಯಿಂದ ಅರ್ಥಶಾಸ್ತ್ರವು ಸಂಪತ್ತನ್ನು ಅಭ್ಯಾಸ ಮಾಡುವ ಶಾಸ್ತ್ರವಾಗಿದೆ. ಅರ್ಥಶಾಸ್ತ್ರ ಮನುಷ್ಯ ಸಂಪತ್ತಿನ ಉತ್ಪನ್ನವನ್ನು ಹೇಗೆ ಮಾಡುವನು, ಆ ಉತ್ಪನ್ನವನ್ನು ಹೇಗೆ ಖರ್ಚು ಮಾಡುವನು ಎಂಬುದನ್ನೂ ಸಹ ವಿವರಿಸುತ್ತದೆ. ಇದರ ಜೊತೆಗೆ ಅರ್ಥಶಾಸ್ತ್ರದ ಮುಖ್ಯ ಗುರಿ ಮಾನವರೆಲ್ಲರಿಗೂ ಆರ್ಥಿಕ ಸುಖೀಜೀವನವನ್ನು ಕಲ್ಪಿಸಿ ಕೊಡುವುದಾದ್ದರಿಂದ ಅರ್ಥಶಾಸ್ತ್ರವನ್ನು 'ಮಾನವ ಅಭ್ಯಾಸ ಶಾಸ್ತ್ರ'

ಎಂದು ಕರೆಯಬಹುದು. ಹೀಗೆ ಅರ್ಥಶಾಸ್ತ್ರ ಒಂದು ಕಡೆ ಸಂಪತ್ತಿನ ಬಗ್ಗೆ ಪರಿಶೀಲನೆ ಮಾಡಿದರೆ ಮತ್ತೊಂದೆಡೆ ಮಾನವನ ಅಂತರಂಗದ ಬಗ್ಗೆ ಪರಿಶೀಲನೆ ನಡೆಸುತ್ತದೆ. ಸಂಪತ್ತು ಮುಖ್ಯವಾದರೂ, ಅದು ಮಾನವನ ಕಲ್ಯಾಣ ಅಥವಾ ಸುಖಕ್ಕೆ ವಿನಿಯೋಗವಾಗುವುದರಿಂದ ಸಂಪತ್ತಿಗಿಂತಲೂ ಮಾನವನೇ ಮುಖ್ಯ. ಇದಿಷ್ಟು ಮಾರ್ಷಲ್‌ನ ಅರ್ಥಶಾಸ್ತ್ರದ ವ್ಯಾಖ್ಯೆಯ ಸಾರಾಂಶ.

ಈಗ ಮಾರ್ಷಲ್ ಹಾಗೂ ಆಡಂ ಸ್ಮಿತ್‌ರ ವಿವರಣೆಗಳಲ್ಲಿನ ಸಿದ್ಧಾಂತಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ್ದಾದರೆ ಮಾರ್ಷಲ್ ನೀಡಿರುವ ವಿವರಣೆಯೇ ಸೂಕ್ತವೆಂದು ಕಂಡುಬರುತ್ತದೆ. ಮನುಷ್ಯ, ಸಂಪತ್ತನ್ನು ಗಳಿಸುವುದು ತನ್ನ ಕಲ್ಯಾಣಕ್ಕಾಗಿ. ಸಂಪತ್ತು, ಕಲ್ಯಾಣವನ್ನು ಹೊಂದಲು ಒಂದು ಸಾಧನ. ಬಡತನ ಮಾನವರ ಮೊದಲನೆಯ ಶತ್ರು. ಅದನ್ನು ಹೋಗಲಾಡಿಸಿ ಕಲ್ಯಾಣವನ್ನು ಸಾಧಿಸುವುದೇ ಅರ್ಥಶಾಸ್ತ್ರದ ಅಭ್ಯಾಸದ ಪರಮಗುರಿ. ಆದರೆ ಮಾನವನ ಕಲ್ಯಾಣವನ್ನು ಹೊಂದುವಲ್ಲಿ ಸಂಪತ್ತಿಗೂ ಮಹತ್ವದ ಸ್ಥಾನವಿದೆ. ಆದ್ದರಿಂದ ಆಲ್‌ಫ್ರೆಡ್ ಮಾರ್ಷಲ್‌ನ ಈ ಅಭಿಪ್ರಾಯಗಳು ಅರ್ಥಶಾಸ್ತ್ರಕ್ಕೆ ಹೊಸ ಮೆರುಗು ಮತ್ತು ಮನ್ನಣೆಯನ್ನು ತಂದು ಕೊಟ್ಟವು. ಇವರ ವ್ಯಾಖ್ಯೆಯು ಅರ್ಥಶಾಸ್ತ್ರದ ಇತಿಹಾಸದಲ್ಲಿಯೇ ಅನೇಕ ಬಗೆಯ ಆಂದೋಲನಗಳನ್ನುಂಟುಮಾಡಿತಾದರೂ ಬಹಳ ಕಾಲದವರೆಗೆ ಮಾರ್ಷಲ್ ನೀಡಿದ ವ್ಯಾಖ್ಯೆಯನ್ನು ಅನೇಕ ಲೇಖಕರು ಸರಿಯಾದುದೆಂದು ಒಪ್ಪಿಕೊಂಡಿದ್ದರು. ಇವರ ಅನುಯಾಯಿಯಾದ, ಪ್ರಾ। ಎ. ಸಿ. ಪಿಗು ಮಾನವ ಕಲ್ಯಾಣಕ್ಕೆ ಸಂಬಂಧಿಸಿದಂತೆ ಅರ್ಥಶಾಸ್ತ್ರವನ್ನು ರೂಪಿಸಲು ಶ್ರಮಿಸಿದನು. ಈ ರೀತಿ ಮಾರ್ಷಲ್ ಮತ್ತು ಅವನ ಅನುಯಾಯಿಗಳು ಅರ್ಥಶಾಸ್ತ್ರಕ್ಕೆ ನೀಡಿದ ಕ್ಷೇಮಾಭ್ಯುದಯ ವ್ಯಾಖ್ಯೆಯು ಅನೇಕ ತಪ್ಪುಭಾವನೆಗಳನ್ನು ಹೋಗಲಾಡಿಸಿ ಅರ್ಥಶಾಸ್ತ್ರವೆಂದರೆ ಮಾನವನ ಸುಖ ಸಂಪತ್ತುಗಳನ್ನು ಸಾಧಿಸುವ ಒಂದು ಶಾಸ್ತ್ರವೆಂದು ತೋರಿಸಿಕೊಟ್ಟಿತು. ಆದರೆ ಈ ವಿವರಣೆಗಳೂ ಟೀಕೆಗಳಿಂದ ಹೊರತಾಗಲಾಗಲಿಲ್ಲ. ಮಾರ್ಷಲ್‌ರ ವ್ಯಾಖ್ಯೆಯನ್ನು ಟೀಕಿಸುವಲ್ಲಿ ಅವರ ಶಿಷ್ಯನಾಗಿದ್ದ ಲಿಯೋನಲ್ ರಾಬಿನ್ಸ್ ಮುಖ್ಯ ಪಾತ್ರವಹಿಸಿದನು.

ಟೀಕೆ : ಲಿಯೋನಲ್ ರಾಬಿನ್ಸ್ 1931 ರಲ್ಲಿ 'ನೇಚರ್ ಅಂಡ್ ಸಿಗ್ನಿಫಿಕೆನ್ಸ್ ಆಫ್ ಎಕನಾಮಿಕ್ಸ್' ಎಂಬ ಒಂದು ಪುಸ್ತಕವನ್ನು ಪ್ರಕಟಿಸಿ ತನ್ನದೇ ಆದ ವಿಚಾರ ಸರಣಿಯನ್ನು ಅರ್ಥಶಾಸ್ತ್ರದ ಬಗ್ಗೆ ನೀಡಿರುವನು. ಮಾರ್ಷಲ್ ಪ್ರಕಾರ ಅರ್ಥಶಾಸ್ತ್ರದ ಪ್ರಮುಖ ಗುರಿ ಮಾನವನ ಜೀವನದ ಮಹೋನ್ನತಿ ಅಂದರೆ ಕಲ್ಯಾಣ. ರಾಬಿನ್ಸ್, ಮಾನವಕಲ್ಯಾಣ ಬಹಳ ವಿಶಾಲವಾಗಿರುವುದರಿಂದ ಅರ್ಥಶಾಸ್ತ್ರದಲ್ಲಿ ಮಾನವನ ಕಲ್ಯಾಣದ ಬಗ್ಗೆ ಎಲ್ಲ ವಿಷಯಗಳನ್ನು ಅಭ್ಯಾಸ ಮಾಡುವುದು ಅಸಾಧ್ಯವೆಂದು ಅಭಿಪ್ರಾಯಪಟ್ಟನು. ಮಾನವ ಕಲ್ಯಾಣವನ್ನು ಅಳತೆ ಮಾಡಲಾಗುವುದಿಲ್ಲ ; ಏಕೆಂದರೆ ಒಬ್ಬರಿಗೆ ಕಲ್ಯಾಣವಾಗುವುದು ಮತ್ತೊಬ್ಬರಿಗೆ ಕಲ್ಯಾಣವಾಗದಿರಬಹುದು.

ಕಲ್ಯಾಣವೆಂಬುದು ಮನುಷ್ಯನಿಂದ ಮನುಷ್ಯನಿಗೆ, ದೇಶದಿಂದ ದೇಶಕ್ಕೆ, ಒಂದು ಸ್ಥಳ ದಿಂದ ಮತ್ತೊಂದು ಸ್ಥಳಕ್ಕೆ ಕಾಲದಿಂದ ಕಾಲಕ್ಕೆ ಬದಲಾಯಿಸುವುದು. ಆದಕಾರಣ ಕಲ್ಯಾಣದ ಬಗ್ಗೆ ಅಭ್ಯಾಸ ಮಾಡುವುದು ಅಷ್ಟು ಸುಲಭವಲ್ಲ ಎಂದು ವಿವರಿಸಿದರು. ಮುಂದೆ ಮಾನವನ ಕಲ್ಯಾಣಕ್ಕೆ ನೀರು. ಗಾಳಿ, ಬೆಳಕು, ತಾಯಿಯ ಪ್ರೀತಿ, ರಕ್ಷಣೆಗಳ ಅವಶ್ಯಕತೆಯಿರುತ್ತದೆ. ಆದರೆ ಅರ್ಥಶಾಸ್ತ್ರದಲ್ಲಿ ಇವು ಸಂಪತ್ತಲ್ಲ. ಏಕೆಂದರೆ ಇವು ಗಳನ್ನು ಪಡೆಯಲು ಹಣ ನೀಡಬೇಕಾಗಿಲ್ಲ. ಇವುಗಳ ಬಗ್ಗೆ ಅರ್ಥಶಾಸ್ತ್ರದಲ್ಲಿ ಅಭ್ಯಾಸ ಮಾಡುವುದಿಲ್ಲ. ಮಾರ್ಷಲ್ ಪ್ರಕಾರ ಕೇವಲ ಭೌತಿಕ ವಸ್ತುಗಳು ಮಾನವನ ಕಲ್ಯಾಣ ವನ್ನು ಸಾಧಿಸುತ್ತವೆ. ಆದರೆ ಇದು ಸರಿಯಲ್ಲ. ಅಭೌತಿಕ ವಸ್ತುಗಳೂ ಸಹ ಮಾನವನ ಕಲ್ಯಾಣವನ್ನು ಸಾಧಿಸುತ್ತವೆ. ಉದಾಹರಣೆಗೆ, ಉಪಾಧ್ಯಾಯರು, ಗಾಯಕರು, ವೈದ್ಯರು ಮುಂತಾದವರು. ಹಾಗೆಯೇ ಎಲ್ಲ ಭೌತಿಕ ವಸ್ತುಗಳು ಮಾನವನ ಕಲ್ಯಾಣವನ್ನು ಸಾಧಿಸುವುದಿಲ್ಲ. ಅರ್ಥಶಾಸ್ತ್ರದಲ್ಲಿ ಮಾನವ ಕಲ್ಯಾಣಕ್ಕೆ ಹಾನಿ ಉಂಟುಮಾಡುವ ಹೊಗೆಸೊಪ್ಪು, ಹೆಂಡ, ಸಾರಾಯಿ, ಅಫೀಮು ಇತ್ಯಾದಿಗಳು ಸಹ ಸಂಪತ್ತು ಆಗಿವೆ. ಏಕೆಂದರೆ ಇವುಗಳನ್ನು ಪುಕ್ಕಟೆಯಾಗಿ (ಉಚಿತವಾಗಿ) ಹೊಂದ ಲಾಗಂವುದಿಲ್ಲ. ಇವುಗಳನ್ನು ಹೊಂದಲು ಹಣವನ್ನು ಪಾವತಿ ಮಾಡಬೇಕು. ಈ ವಸ್ತುಗಳು ಭೌತಿಕ ವಸ್ತುಗಳಾದರೂ ಇವು ಮಾನವನ ಕಲ್ಯಾಣಕ್ಕೆ ತೊಡಕನ್ನುಂಟು ಮಾಡುತ್ತವೆ. ಈ ವಿಚಾರ ಸರಣಿಯ ಪ್ರಕಾರ ತಿಳಿದು ಬರುವ ವಾಸ್ತವಾಂಶ ಅರ್ಥ ಶಾಸ್ತ್ರದಲ್ಲಿ ಕಲ್ಯಾಣದ ಬಗ್ಗೆ ಅಧ್ಯಯನ ಮಾಡುತ್ತೇವೆಂಬುದು ಸೂಕ್ತವಲ್ಲ. ಆದ ಕಾರಣ, ಲಿಯೋನಲ್ ರಾಬಿನ್ಸ್ 'ಮಾನವ ಕಲ್ಯಾಣ' ವೆಂಬ ಮುಖವಾಡವನ್ನು ಅರ್ಥ ಶಾಸ್ತ್ರವನ್ನು ಕಿತ್ತೊಗೆಯಲು ವಾದಿಸಿದನು. ಇದರಿಂದ ಪುನಃ ಅರ್ಥಶಾಸ್ತ್ರದ ವ್ಯಾಖ್ಯೆಯ ಬಗ್ಗೆ ಜನರಲ್ಲಿ ಜಿಜ್ಞಾಸೆ ಉಂಟಾಯಿತು. ರಾಬಿನ್ಸ್ ತನ್ನ ವ್ಯಾಖ್ಯೆಯ ಮೂಲಕ ಜನರ ಮನಸ್ಸನ್ನು ಬದಲಾಯಿಸಿ, ಅರ್ಥಶಾಸ್ತ್ರಕ್ಕೆ ತನ್ನದೇ ಆದ ಹೊಸ ತಿರು ವನ್ನು ನೀಡಿದನು.

(3) ರಾಬಿನ್ಸ್ ಅಭಾವದ ನಿರೂಪಣೆ: ಪ್ರಾ। ಲಿಯೋನಲ್ ರಾಬಿನ್ಸ್ ಮಾರ್ಷಲ್‌ನ ವ್ಯಾಖ್ಯೆಯನ್ನು ತಿರಸ್ಕರಿಸಿ ತನ್ನದೇ ಆದ ವ್ಯಾಖ್ಯೆಯನ್ನು ಮುಂದೊ ಡ್ಡಿದನು. ಇವನ ವ್ಯಾಖ್ಯೆಯನ್ನು 'ನವೀನ ವ್ಯಾಖ್ಯೆ', 'ವಿರಳತೆಯ ವ್ಯಾಖ್ಯೆ' ಎಂದು ಹೇಳಲಾಗಿದೆ. ಅರ್ಥಶಾಸ್ತ್ರಕ್ಕೆ ಹೊಸ ವ್ಯಾಖ್ಯೆಯನ್ನು ದೊರಕಿಸಿಕೊಟ್ಟ ಶ್ರೇಯಸ್ಸು ಇವನಿಗೆ ಸಲ್ಲುತ್ತದೆ.

ಮಾನವನ ಬಯಕೆಗಳು ಅನಂತ. ಆ ಬಯಕೆಗಳನ್ನು ಪೂರೈಸಲು ಅವನ ಬಳಿ ಇರುವ ಸಾಧನ ಸಂಪತ್ತುಗಳ ಅಭಾವ, ಆ ಸ್ಥಿತಿಯಲ್ಲಿ ಅವನು ವರ್ತಿಸುವ ಬಗೆ, ಇವು ಗಳನ್ನು ಅಧ್ಯಯನ ಮಾಡುವುದೇ ಅರ್ಥಶಾಸ್ತ್ರ. ಅರ್ಥಶಾಸ್ತ್ರವೆಂಬ ವಿಜ್ಞಾನವು ಮಾನವನ ಬಯಕೆಗಳು ಹಾಗೂ ಅಭಾವ ವಸ್ತುಗಳ ಸಂಬಂಧವನ್ನೂ ತಿಳಿಸುತ್ತವೆ.

ಮಾನವನ ಸಮೃದ್ಧಿಯಾಗಿರುವ ಬಯಕೆಗಳನ್ನು (ಇಷ್ಟಗಳು) ತನ್ನ ಹತ್ತಿರವಿರುವ ಪರಿಮಿತ ಸಾಧನಗಳಿಂದ ಪೂರೈಸಿಕೊಳ್ಳುವ ಅಥವಾ ತೃಪ್ತಿ ಪಡೆಯಲು ಪ್ರಯತ್ನಿಸುವ ಅವನ ವರ್ತನೆಯ ಅಭ್ಯಾಸವೇ ಅರ್ಥಶಾಸ್ತ್ರದ ವಿಷಯ ಎಂಬುದಾಗಿ ರಾಬಿನ್ಸ್ ಅಭಿಪ್ರಾಯ ಪಟ್ಟಿದ್ದಾನೆ. ಮಾನವನ ಹೋರಾಟವು ಜೀವನದೊಂದಿಗೆ ಅವನು ಬದುಕಿರುವವರೆಗೆ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಈ ಹೋರಾಟದಲ್ಲಿ ಅವನ ಧ್ಯೇಯಗಳು ಅನಿಯಮಿತವಾಗಿರುತ್ತವೆ. ಆದರೆ ಈ ಧ್ಯೇಯಗಳನ್ನು ಸಾಧಿಸಲು ಅವನ ಬಳಿ ಸಾಧನ ಸಾಮಾಗ್ರಿಗಳು ನಿಯಮಿತವಾಗಿರುತ್ತವೆ. ಆದ್ದರಿಂದ ಎಣೆಯಿಲ್ಲದ ಅಪೇಕ್ಷೆಗಳನ್ನು ಕೆಲವೇ ಸಾಧನಗಳಿಂದ ಪೂರೈಸಿಕೊಂಡು ಅವನು ತೃಪ್ತಿಯನ್ನು ಹೊಂದಬೇಕಾಗುತ್ತದೆ. ಒಟ್ಟಿನಲ್ಲಿ ಮಾನವನು ಪರಿಮಿತವಾಗಿರುವ ಸಾಧನ ಸಂಪತ್ತುಗಳಿಂದ ತನ್ನ ಅಪರಿಮಿತವಾದ ಇಷ್ಟಗಳನ್ನು ಈಡೇರಿಸಿಕೊಳ್ಳಲು ನಿರಂತರವಾಗಿ ಪ್ರಯತ್ನಿಸಬೇಕಾಗುತ್ತದೆ. ಹೀಗೆ ಮಾನವನು ತನ್ನ ಅಪರಿಮಿತ ಬಯಕೆಗಳನ್ನು ಮಿತವಾಗಿರುವ ಸಾಧನ ಸಂಪತ್ತುಗಳಿಂದ ತೃಪ್ತಿಪಡಿಸಿಕೊಳ್ಳಬೇಕಾಗುವುದರಿಂದ ಮಿತವ್ಯಯವು ಅನಿವಾರ್ಯವಾಗುತ್ತದೆ. ಈ ಪರಿಮಿತಿ ಸಾಧನ ಸಂಪತ್ತುಗಳು ವಿವಿಧ ಉಪಯೋಗಗಳನ್ನು ಹೊಂದಿರುತ್ತವೆ. ಆದ್ದರಿಂದ ಮಿತವಾಗಿರುವ ಮತ್ತು ವಿವಿಧ ಉಪಯೋಗಗಳಿಗೆ ಆಗುವ ಸಾಧನ ಸಂಪತ್ತುಗಳಿಂದ ಹೆಚ್ಚಿನ ತೃಪ್ತಿಪಡೆಯಲು ಮಾನವನು ತನ್ನ ಅನಂತ ಇಷ್ಟಗಳಲ್ಲಿ ಆಯ್ಕೆ ಮಾಡಬೇಕಾಗುತ್ತದೆ. ಉದಾಹರಣೆಗೆ, ಒಬ್ಬ ವಿದ್ಯಾರ್ಥಿಯ ಬಳಿ 3 ರೂಪಾಯಿಗಳಿದ್ದರೆ ಆ ಹಣದಲ್ಲಿ ಅವನು ತನಗೆ ಬೇಕಾದ ಪುಸ್ತಕವನ್ನು ತೆಗೆದುಕೊಳ್ಳಬಹುದು ; ಊಟ ಮಾಡಬಹುದು ಅಥವಾ ಚಲನ ಚಿತ್ರ ನೋಡಬಹುದು. ಇವುಗಳಲ್ಲಿ ಒಂದು ಇಷ್ಟವನ್ನು ಮಾತ್ರ ಆ ವಿದ್ಯಾರ್ಥಿಯು ತೃಪ್ತಿಪಡಿಸಬಲ್ಲನೇ ಹೊರತು ಎಲ್ಲ ಇಷ್ಟಗಳನ್ನು ಅಲ್ಲ. ಅಂದರೆ ಮಾನವನ ಇಷ್ಟಗಳನ್ನೆಲ್ಲ ತೃಪ್ತಿಗೊಳಿಸುವುದು ಅಸಾಧ್ಯ. ಆದ್ದರಿಂದ ಅವಸರದ ಇಷ್ಟಗಳನ್ನು ಮೊದಲು ತೃಪ್ತಿಗೊಳಿಸಿ ಅನಂತರ ಕಡಮೆ ಅವಸರದ ಇಷ್ಟಗಳನ್ನು ತೃಪ್ತಿಗೊಳಿಸಬೇಕಾಗುತ್ತದೆ. ಆದರೆ ಯಾವ ಇಷ್ಟಗಳು ಹೆಚ್ಚು ಅವಸರವು, ಯಾವ ಇಷ್ಟಗಳು ಕಡಮೆ ಅವರಸದವು ಎಂಬುದನ್ನು ಸಂಬಂಧಪಟ್ಟ ವ್ಯಕ್ತಿಗಳೇ ನಿರ್ಧರಿಸಿಕೊಳ್ಳಬೇಕಾಗುತ್ತದೆ.

ನಮ್ಮಲ್ಲಿ ಸಾಧನಸಂಪತ್ತುಗಳ ಕೊರತೆ ಕಂಡುಬರುತ್ತದೆ. ಇಷ್ಟಗಳು ಅನೇಕ ಇದ್ದು ಅವುಗಳನ್ನು ತೃಪ್ತಿಪಡಿಸುವ ಸಾಧನಗಳು ಕಡಮೆ ಇರುತ್ತವೆ. ಆದರೆ ನಮ್ಮಲ್ಲಿರುವ ನಿಯಮಿತ ಸಂಪತ್ತಿನ ಅಂದರೆ ಸಾಧನಸಂಪತ್ತುಗಳ ಅತ್ಯುತ್ತಮ ಉಪಯೋಗ ಪಡೆಯುವುದೇ ಅರ್ಥಶಾಸ್ತ್ರದ ಮುಖ್ಯ ಗುರಿ ಎಂಬುದು ರಾಬಿನ್ಸ್ ಅಭಿಪ್ರಾಯ. ನೀರು, ಗಾಳಿ, ಸೂರ್ಯನ ಬೆಳಕುಗಳು ಪ್ರಕೃತಿಯು ಮಾನವನಿಗೆ ನೀಡಿದ ಕೊಡುಗೆಗಳಾದ್ದರಿಂದ ಪುಕ್ಕಟೆಯಾಗಿ ದೊರೆಯುತ್ತವೆ. ಅವು ಹೇರಳವಾಗಿರುವುದರಿಂದ ಅವುಗಳನ್ನು ಪಡೆಯಲು ಯಾವ ವಿಧವಾದ ಬೆಲೆಯನ್ನೂ ಕೊಡಬೇಕಾಗಿಲ್ಲ. ಆದರೆ ಉಳಿದ

ವಸ್ತುಗಳ ಪೂರೈಕೆ ಬೇಡಿಕೆಗಿಂತ ಕಡಮೆ ಇರುವುದರಿಂದ ಅವುಗಳನ್ನು ಪಡೆಯಲು ಹಣ ವನ್ನು ತೆರಬೇಕು. ಸಂಪನ್ಮೂಲಗಳ ಕೊರತೆ ಇರುವುದರಿಂದ ಅಂತಹ ವಸ್ತುಗಳನ್ನು ಅತ್ಯಂತ ಅವಶ್ಯಕ ಉಪಯೋಗಗಳಿಗೆ ಮಾತ್ರ ಬಳಸಬೇಕು. ಆಗ ಈಡೇರಿಸಿಕೊಳ್ಳ ಬೇಕಾದ ಇಷ್ಟಗಳ ಮಧ್ಯೆ ಆಯ್ಕೆ ಸಮಸ್ಯೆ ಪ್ರತಿಯೊಂದು ಘಟ್ಟದಲ್ಲೂ ಕಂಡುಬರು ತ್ತವೆ. ಇವೇ ಆರ್ಥಿಕ ಸಮಸ್ಯೆಗಳು. ಈ ಸಮಸ್ಯೆಗಳೇ ಅರ್ಥಶಾಸ್ತ್ರದ ಮೂಲ ಭೂತ ಸಮಸ್ಯೆಗಳು.

ಸಂಪನ್ಮೂಲಗಳ ಅಭಾವವಿರುವುದರಿಂದ ಮಾನವನ ವಿವಿಧ ಉಪಯೋಗಗಳಿಗೆ ಬಳಸುವಂತಿರುವ ಒಂದು ವಸ್ತುವಿನ ಉಪಯೋಗದಲ್ಲಿ ಆಯ್ಕೆ ಮಾಡಬೇಕಾಗುತ್ತದೆ. ಕೆಳಗಿನ ಉದಾಹರಣೆ ಈ ವಾದವನ್ನು ಪುಷ್ಟೀಕರಿಸುತ್ತವೆ. ವಿದ್ಯುಚ್ಛಕ್ತಿಯನ್ನು ಹಲವಾರು ಉಪಯೋಗಗಳಿಗೆ ಅಂದರೆ ದೀಪಕ್ಕೆ, ರೇಡಿಯೊಕ್ಕೆ, ಫ್ಯಾನ್‌ಗೆ, ಬಟ್ಟೆಗಳನ್ನು ಇಸ್ತ್ರಿಮಾಡಲು, ಚಲನ ಚಿತ್ರಗಳನ್ನು ಪ್ರದರ್ಶಿಸಲು, ಪಂಪ್‌ಸೆಟ್ ನಡೆಯಿಸಲು ಇತ್ಯಾದಿ ಕಾರ್ಯಗಳಿಗೆ ಬಳಸಬಹುದು. ಅಂದರೆ ವಿದ್ಯುಚ್ಛಕ್ತಿಯು ಪೂರೈಕೆ ಸಾಕಷ್ಟು ಪ್ರಮಾಣದಲ್ಲಿ ಇದ್ದರೆ ಎಲ್ಲ ಉಪಯೋಗಗಳಿಗೆ ಇದನ್ನು ಉಪಯೋಗಿಸಬಹುದು. ವಿದ್ಯುಚ್ಛಕ್ತಿ ಕೊರತೆಯು ಕಂಡುಬಂದು ಶೇ. 60ನ್ನು ಕಡಿತ ಮಾಡಿದರೆ, ಅತ್ಯಂತ ಅವಶ್ಯಕ ವಾದ ಉಪಯೋಗಗಳಿಗೆ ಮಾತ್ರ ವಿನಿಯೋಗಿಸಬೇಕಾಗುತ್ತದೆ. ಅಂದರೆ ಇಂತಹ ಪರಿಸ್ಥಿತಿಯಲ್ಲಿ ಬೇರೆ ಬೇರೆ ಉಪಯೋಗಗಳಿಗೆ ಬಳಸಬಹುದಾದ ಸಾಧನಗಳನ್ನು ಮುಖ್ಯವಾದ ಒಂದು ನಿರ್ದಿಷ್ಟ ಉಪಯೋಗಕ್ಕೆ ಬಳಸುವ ನಿರ್ಧಾರವನ್ನು ಕೈಗೊಳ್ಳ ಬೇಕಾಗುವುದು.

ಲಿಯೋನಲ್ ರಾಬಿನ್ಸ್ ಹೇಳಿಕೆಯಂತೆ ಮನುಷ್ಯನ ಅಪಾರವಾದ ಇಷ್ಟಗಳು ಹಲವಾರು ಇದ್ದು, ಅವುಗಳನ್ನು ತೃಪ್ತಿಪಡಿಸಲು ಬೇಕಾದ ಸಾಧನಸಂಪತ್ತುಗಳ ಕೊರತೆ ಇದ್ದು, ಆ ಸಾಧನ ಸಂಪತ್ತುಗಳನ್ನು ಹಲವು ಉಪಯೋಗಗಳಿಗೆ ಬಳಸಲು ಬರುವಂತಿದ್ದರೆ ಮಾನವನು ಈ ಸ್ಥಿತಿಯಲ್ಲಿ ಆಯ್ಕೆ ಮಾಡುವಾಗ ಯಾವ ರೀತಿ ವರ್ತಿಸುವನು ಎಂಬುದನ್ನು ಅರ್ಥಶಾಸ್ತ್ರದಲ್ಲಿ ಅಭ್ಯಾಸ ಮಾಡುತ್ತೇವೆ. ಆದ್ದರಿಂದ ಅರ್ಥಶಾಸ್ತ್ರ ಸಂಪತ್ತಿನ ಶಾಸ್ತ್ರವಲ್ಲ; ಮಾನವ ಕಲ್ಯಾಣ ಶಾಸ್ತ್ರವೂ ಅಲ್ಲ; ಅದು ಅಭಾವದ ಶಾಸ್ತ್ರ. ಇವನ ವ್ಯಾಖ್ಯೆಯು ಬಹುಮಟ್ಟಿಗೆ ಸಮರ್ಪಕವಾಗಿದೆ ಎಂದು ಹೇಳಬಹುದು. ಏಕೆಂದರೆ ಅರ್ಥಶಾಸ್ತ್ರದ ಅಭ್ಯಾಸವನ್ನು ಸಂಪತ್ತಿನ ಕಲ್ಪನೆಗೆ ಆಗಲಿ ಮಾನವನ ಕಲ್ಯಾಣಕ್ಕೆ ಆಗಲಿ ಪರಿಮಿತಗೊಳಿಸಿಲ್ಲ. ಅವರು ನೀಡಿರುವ ಅರ್ಥಶಾಸ್ತ್ರದ ವ್ಯಾಖ್ಯೆಯಲ್ಲಿ ಮನುಷ್ಯನ ಸಕಲ ಚಟುವಟಿಕೆಗಳು ಸೇರಿವೆ. ಕೊರತೆ ಮಾನವನ ಮಾನಸಿಕ ಕ್ರಿಯೆಗಳ ಮೇಲೆ ಆಳವಾದ ಪ್ರಭಾವ ಬೀರುವುದರಿಂದ ಅರ್ಥವಿಜ್ಞಾನಿಗಳು ಈ ಕ್ಷೇತ್ರವನ್ನು ಅಧ್ಯಯನ ಮಾಡಬೇಕೆಂದು ಅವನ ಅಭಿಪ್ರಾಯವಾಗಿತ್ತು. ರಾಬಿನ್ಸ್

ವ್ಯಾಖ್ಯೆಯು ಮುಖ್ಯವಾಗಿ ಮನುಷ್ಯನ ಅಪರಿಮಿತವಾದ ಇಷ್ಟಗಳು, ಪರಿಮಿತ ಸಾಧನ ಸಂಪತ್ತುಗಳು ಎಂಬೆರಡು ವಿಷಯಗಳನ್ನಾಧರಿಸಿದೆ.

ಟೀಕೆ : ಲಿಯೋನಲ್ ರಾಬಿನ್ಸ್ ವ್ಯಾಖ್ಯೆಯು ಇತರ ಅರ್ಥ ಶಾಸ್ತ್ರಜ್ಞರು ನೀಡಿರುವ ವ್ಯಾಖ್ಯೆಗಳಿಗಿಂತ ಸಮರ್ಪಕವಾಗಿದ್ದಾಗ್ಯೂ ಇದೂ ಸಹ ಟೀಕೆಗಳಿಂದ ಹೊರತಾಗಿಲ್ಲ. ಈ ವ್ಯಾಖ್ಯೆಯನ್ನು ಕಲ್ಯಾಣ ಅರ್ಥಶಾಸ್ತ್ರದ ಸೀಮಾಪುರುಷರಾದ ಎ. ಸಿ. ಪಿಗು, ಡರ್ಬಿನ್, ಫ್ರೇಸರ್ ಕಟುವಾಗಿ ಟೀಕಿಸಿರುವರು. ರಾಬಿನ್ಸ್‌ನ ಅರ್ಥ ವಿವರಣೆಯಲ್ಲಿ ವ್ಯಕ್ತಿಯ ಇಷ್ಟಗಳಿಗೆ ಮತ್ತು ಅವನ ಆರ್ಥಿಕ ಸಮಸ್ಯೆಗಳಿಗೆ ಮಹತ್ವ ಕೊಡಲಾಗಿದೆ. ಆದರೆ ಅವನು ವಾಸಿಸುವ ಸಮಾಜವನ್ನು ಕಡೆಗಣಿಸಿದ್ದಾನೆ. ಮಾನವನ ಇಷ್ಟಗಳಿಗೆ ಮಿತಿ ಇಲ್ಲ ಮತ್ತು ಅವುಗಳನ್ನು ತೃಪ್ತಿಗೊಳಿಸಲು ಅವಶ್ಯವಾದ ಸಂಪನ್ಮೂಲ ಗಳ ಕೊರತೆ ಇರುವುದರಿಂದ ಅವುಗಳನ್ನು ಜಾಗರೂಕತೆಯಿಂದ ಉಪಯೋಗಿಸಲು ರಾಬಿನ್ಸ್‌ಪಟ್ಟ ಅಭಿಪ್ರಾಯ ಹಳೆಯದು. ಇದರಲ್ಲಿ ಯಾವ ಹೊಸ ವಿಷಯ ಅಡಕ ವಾಗಿಲ್ಲ, ಹಳೆಯ ವಿಷಯಗಳಿಗೆ ಹೊಸ ಬಣ್ಣ ಕೊಟ್ಟಿದ್ದಾನೆ ಎಂಬುದು ಟೀಕಾಕಾರರ ಅಭಿಪ್ರಾಯ. ರಾಬಿನ್ಸ್ ಅರ್ಥಶಾಸ್ತ್ರದ ವ್ಯಾಖ್ಯೆ ಸಂಕುಚಿತವೆಂದೂ ಕೆಲವರ ಅಭಿಪ್ರಾಯ. ಏಕೆಂದರೆ ರಾಬಿನ್ಸ್ ವ್ಯಾಖ್ಯೆಯಲ್ಲಿ ವಿನಿಮಯ, ಆದಾಯದ ಹಂಚಿಕೆ, ನಿರುದ್ಯೋಗ, ಮಾನವನ ಸಾಮಾಜಿಕ ಸ್ವಭಾವ, ಕ್ಷೇಮಾಭ್ಯುದಯ ಮುಂತಾದ ಅನೇಕ ಸಮಸ್ಯೆಗಳ ಉಲ್ಲೇಖಗಳೇ ಇಲ್ಲ. ರಾಬಿನ್ಸ್ ವ್ಯಾಖ್ಯೆಯು ಸರಳವಾಗಿಲ್ಲ. ಹಲವರಿಗೆ ಈ ವ್ಯಾಖ್ಯೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತದೆ. ರಾಬಿನ್ಸ್ ವ್ಯಾಖ್ಯೆಯು ಇಂದಿನ ಮಹತ್ವದ ಆರ್ಥಿಕ ಸಮಸ್ಯೆಗಳಾದ ಆರ್ಥಿಕ ಅಭಿವೃದ್ಧಿ, ನಿರುದ್ಯೋಗ, ಜೀವನ ಮಟ್ಟದ ಸುಧಾರಣೆಗಳನ್ನು ವಿವೇಚಿಸಿಲ್ಲ. ಆದ್ದರಿಂದ ಈ ವ್ಯಾಖ್ಯೆ ನೈಜತೆಯನ್ನು ಕಳೆದುಕೊಂಡು ಕೇವಲ ತತ್ವವಾಗಿಯೇ ಉಳಿದಿದೆ.

ಆದರೆ ಅರ್ಥಶಾಸ್ತ್ರದ ನಿರೂಪಣೆಯಲ್ಲಿ ಇಂದು ಮಾರ್ಷಲ್ ದಾರಿಯನ್ನು ಕೆಲವರು ಅನುಸರಿಸಿದರೆ, ರಾಬಿನ್ಸ್ ದಾರಿಯನ್ನು ಕೆಲವರು ಅನುಸರಿಸುತ್ತಾರೆ. ಒಟ್ಟಿನಲ್ಲಿ ಅರ್ಥಶಾಸ್ತ್ರ ಮನುಷ್ಯ ಹಾಗೂ ಸಮಾಜದ ನಡುವಿನ ಅಧ್ಯಯನ. ಸಮಾಜದಿಂದ ಮನುಷ್ಯನನ್ನು ಬೇರ್ಪಡಿಸಲಾಗುವುದಿಲ್ಲ ; ಹಾಗೆಯೇ ಮನುಷ್ಯನಿಂದ ಸಮಾಜವನ್ನು ಬೇರ್ಪಡಿಸಲಾಗುವುದಿಲ್ಲ. ಸಮಾಜ ಹಾಗೂ ಮಾನವ ಒಂದು ನಾಣ್ಯದ ಎರಡು ಮುಖಗಳು. ಆದಕಾರಣ ಸರ್ವರೂ ಒಪ್ಪುವಂತಹ ಸಮರ್ಪಕವಾದ ಅರ್ಥಶಾಸ್ತ್ರದ ಸೂತ್ರವನ್ನು ಮಂಡಿಸುವುದು ಅಷ್ಟು ಸುಲಭದ ಕೆಲಸವಲ್ಲ.

ಅರ್ಥಶಾಸ್ತ್ರದ ವ್ಯಾಪ್ತಿ

ಅರ್ಥಶಾಸ್ತ್ರದ ವ್ಯಾಪ್ತಿಯು ದಿನೇ ದಿನೇ ಬೆಳೆಯುತ್ತಿದೆ. ಮಾನವನ ಇಡೀ ಜೀವನ ಕ್ಷೇತ್ರವೇ ಅರ್ಥಶಾಸ್ತ್ರದ ಮುಖ್ಯ ವಿಷಯವಾಗಿದೆ. ಅಂದಮೇಲೆ ಅದರ

ವ್ಯಾಪ್ತಿಯ ಹಿರಿಮೆ ಎಷ್ಟಿದೆ ಎನ್ನುವುದು ತಿಳಿಯುತ್ತದೆ. ಅರ್ಥಶಾಸ್ತ್ರವು ಭೌತಶಾಸ್ತ್ರ ಅಥವಾ ರಸಾಯನಶಾಸ್ತ್ರದಂತೆಯೇ, ಸುವ್ಯವಸ್ಥಿತವಾದ ಒಂದು ವಿಜ್ಞಾನ. ಇದು ಮಾನವನ ಆರ್ಥಿಕ ಚಟುವಟಿಕೆಗಳಿಗೆ ಕಾರಣಗಳನ್ನು ವಿವೇಚಿಸಿ, ಸಿದ್ಧಾಂತಗಳನ್ನು ಪ್ರತಿಪಾದಿಸುತ್ತದೆ. ವಿಜ್ಞಾನಕ್ಕೆ ಕೆಲವು ನಿಯಮಗಳಿವೆ. ಅದೇ ರೀತಿ ಅರ್ಥಶಾಸ್ತ್ರಕ್ಕೂ ನಿಯಮಗಳಿವೆ. ಈ ನಿಯಮಗಳನ್ನು ಕಾರ್ಯರೂಪಕ್ಕೆ ತರುವುದೇ ಕಲೆ. ಅರ್ಥಶಾಸ್ತ್ರವು ಆರ್ಥಿಕ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವುದರಿಂದ ಇದು ಒಂದು ಕಲೆಯೂ ಆಗಿದೆ.

ಅರ್ಥಶಾಸ್ತ್ರ ಪ್ರಮುಖವಾಗಿ ಮಾನವನ ಜೀವನಕ್ಕೆ ಸಂಬಂಧಪಟ್ಟ ಶಾಸ್ತ್ರ. ಅರ್ಥಶಾಸ್ತ್ರದ ಮುಖ್ಯ ಅಂಶಗಳಾದ ಇಷ್ಟ, ಪ್ರಯತ್ನ ಹಾಗೂ ತೃಪ್ತಿಗಳು ಹಿಂದೆ ನೇರವಾದ ಸಂಬಂಧವನ್ನು ಪಡೆದಿದ್ದವು. ಆಗ ಆರ್ಥಿಕ ಜೀವನ ಸರಳವಾಗಿತ್ತು. ಮನುಷ್ಯನ ಇಷ್ಟಗಳು ಬಹಳ ಮಿತವಾಗಿದ್ದವು. ಜನರು ತಮಗೆ ಅತ್ಯವಶ್ಯಕವಾಗಿ ಬೇಕಾದ ಆಹಾರ ಪದಾರ್ಥಗಳನ್ನು ತಾವೇ ಉತ್ಪಾದಿಸಿಕೊಳ್ಳುತ್ತಿದ್ದರು. ವಾಸಕ್ಕೆ ಮನೆಯನ್ನು ತಾವೇ ನಿರ್ಮಿಸಿಕೊಳ್ಳುತ್ತಿದ್ದರು. ಬಟ್ಟೆಯನ್ನು ತಾವೇ ತಯಾರಿಸಿ ಕೊಳ್ಳುತ್ತಿದ್ದರು. ಅವರ ಜೀವನ ಸ್ವಯಂಪೂರ್ಣತೆಯಿಂದ ಕೂಡಿತ್ತು. ಕಾಲಕ್ರಮೇಣ ನಾಗರೀಕತೆ ಬೆಳೆದಂತೆ ಅವರ ಇಷ್ಟಗಳು ಅಧಿಕಗೊಂಡವು. ಇದರಿಂದಾಗಿ ಅವರು ತಾವು ತಯಾರಿಸಿದ ವಸ್ತುಗಳನ್ನು ಮಾರಾಟಮಾಡಿ ಬಂದ ಹಣದಿಂದ ತಮಗೆ ಬೇಕಾದ ವಸ್ತು ಗಳನ್ನು ಕೊಳ್ಳಲು ಪ್ರಾರಂಭಿಸಿದರು. ಈ ರೀತಿ ವಸ್ತುಗಳನ್ನು ಕೊಳ್ಳುವುದು ಹಾಗೂ ಮಾರುವುದರಲ್ಲಿ ವಿನಿಮಯದ ಅವಶ್ಯಕತೆಯು ಕಂಡುಬಂದಿತು. ಇವುಗಳೆಲ್ಲವನ್ನು ಅರ್ಥಶಾಸ್ತ್ರದಲ್ಲಿ ಅಭ್ಯಾಸ ಮಾಡಬೇಕಾಗಿದೆ. ಅರ್ಥಶಾಸ್ತ್ರವನ್ನು ಮುಖ್ಯವಾಗಿ (i) ಉಪಭೋಗ (ii) ಉತ್ಪಾದನೆ (iii) ವಿನಿಮಯ ಮತ್ತು (iv) ವಿತರಣೆ (ಹಂಚಿಕೆ) ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು.

(i) **ಉಪಭೋಗ :** ಮಾನವನ ಅನೇಕ ವಿಧವಾದ ಇಷ್ಟಗಳ ತೃಪ್ತಿಯನ್ನೇ 'ಉಪಭೋಗ' ವೆಂದು ಕರೆಯಬಹುದು.

(ii) **ಉತ್ಪಾದನೆ :** ನಿಸರ್ಗದ ಮಡಿಲಿನಿಂದ ವಸ್ತುಗಳನ್ನು ಪಡೆಯುವಿಕೆ, ನಂತರ ಅವುಗಳನ್ನು ಸರಿಯಾದ ರೂಪಕ್ಕೆ ಬದಲಾಯಿಸಿ ಅವುಗಳಲ್ಲಿ ಉಪಯುಕ್ತತೆ (ತೃಪ್ತಿಗುಣ) ಯನ್ನು ತುಂಬುವಿಕೆ ಉತ್ಪಾದನೆಯೆನಿಸುತ್ತದೆ. ವಸ್ತುಗಳ ಉತ್ಪಾದನೆ ಯಾಗದೆ ಉಪಭೋಗ ಸಾಧ್ಯವಿಲ್ಲ. ಉಪಭೋಗದ ಉದ್ದೇಶದಿಂದಲೇ ವಸ್ತುಗಳ ಉತ್ಪಾದನೆಯಾಗುತ್ತದೆ. ವಸ್ತುಗಳನ್ನು ಉತ್ಪಾದಿಸಲು ಅತ್ಯಾವಶ್ಯಕವಾಗಿ ಬೇಕಾಗುವ ಮುಖ್ಯ ಸಾಧನಗಳಾದ ಭೂಮಿ, ಶ್ರಮ, ಬಂಡವಾಳ ಹಾಗೂ ಸಂಘಟನೆಗಳ ಸಹಾಯ ವಿಲ್ಲದಿದ್ದರೆ ವಸ್ತುಗಳ ಉತ್ಪಾದನೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಉತ್ಪಾದಕರು

ವಸ್ತುಗಳನ್ನು ಮುನ್ನ ನಾಲ್ಕು ಸಾಧನಗಳನ್ನು ಕೂಡಿಸಿ ಆ ಸಾಧನಗಳ ಸಹಾಯ ಹಾಗೂ ಸಹಕಾರದಿಂದ ವಸ್ತುಗಳನ್ನು ಉತ್ಪಾದಿಸುತ್ತಾರೆ. ಅಂದರೆ ಮಾನವ ತೃಪ್ತಿಯನ್ನು ಹೊಂದಲು ಪ್ರಕೃತಿ ದಾನವಾಗಿ ನೀಡಿರುವ ಸಾಧನಸಂಪತ್ತುಗಳನ್ನು ಬಳಸಿಕೊಂಡು ಶ್ರಮ, ಬಂಡವಾಳವನ್ನು ಕೂಡಿಸಿ ವಸ್ತುಗಳನ್ನು ಉತ್ಪಾದಿಸಬಹುದು.

(iii) **ವಿನಿಮಯ :** ವಸ್ತುಗಳ ವಿನಿಮಯವಾಗುವುದು ಉತ್ಪಾದನೆಯ ಮೊದಲನೆಯ ಅಂಗ. ಉತ್ಪಾದಕರು ವಸ್ತುಗಳನ್ನು ತಮ್ಮ ಅವಶ್ಯಕತೆಗಳಿಗಿಂತ ಹೆಚ್ಚಾಗಿ ಉತ್ಪಾದಿಸಿ ಆ ವಸ್ತುಗಳನ್ನು ಇತರ ವಸ್ತುಗಳಿಗೆ ವಿನಿಮಯ ಮಾಡಿಕೊಂಡರೆ ಆಗ ವಸ್ತು ವಿನಿಮಯವಾಗುತ್ತದೆ. ಅಂದರೆ ಉತ್ಪಾದನೆಯಾದ ವಸ್ತುಗಳು ಅವನ್ನು ಬಳಸುವವರ ಕೈಸೇರಬೇಕಾದರೆ ವಿನಿಮಯದ ವ್ಯವಸ್ಥೆಯು ಇರಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ವಸ್ತುಗಳನ್ನು ವಿನಿಮಯ ಮಾಡುತ್ತಿರಲಿಲ್ಲ. ಏಕೆಂದರೆ ಮಾನವ ತನ್ನ ಸಂಸಾರದ ನಿರ್ವಹಣೆಗೆ ಅಗತ್ಯವಾದ ವಸ್ತುಗಳನ್ನು ಉತ್ಪಾದಿಸಿಕೊಳ್ಳುತ್ತಿದ್ದನು. ಅವನ ಇಷ್ಟಗಳು ಮಿತವಾಗಿದ್ದವು. ಮೇಲಾಗಿ ಆಗ ಹಣವಿರಲಿಲ್ಲ. ಹಾಗೂ ವಸ್ತು ವಿನಿಮಯದ ಅವಶ್ಯಕತೆ ಅಷ್ಟಾಗಿ ಇರಲಿಲ್ಲ. ಆಧುನಿಕ ಅರ್ಥವ್ಯವಸ್ಥೆಯಲ್ಲಿ ಹಣವು ಪ್ರಮುಖ ಸ್ಥಾನವನ್ನು ಪಡೆದಿದೆ. ಹಣವು ಕಾರ್ಯರೂಪಕ್ಕೆ ಬರುವ ಮುನ್ನ ವಸ್ತುಗಳನ್ನು ಇತರ ವಸ್ತುಗಳಿಗೆ ಅದಲು ಬದಲು ಮಾಡಿಕೊಂಡು ವಸ್ತು ವಿನಿಮಯ ವಾಗುತ್ತಿತ್ತು. ಆಗ ವಸ್ತುವಿನ ಬೆಲೆ (ಕಿಮ್ಮತ್ತು) ಎಷ್ಟು ಎಂಬುದು ತಿಳಿಯುತ್ತಿರ ಲಿಲ್ಲ. ಆಧುನಿಕ ಅರ್ಥವ್ಯವಸ್ಥೆಯಲ್ಲಿ ವಸ್ತುಗಳನ್ನು ಮಾರಾಟ ಮಾಡುವುದರಿಂದ ಬೆಲೆಯ ನಿರ್ಧಾರವನ್ನು ಹಣದ ಮೂಲಕ ಮಾಡಬಹುದು. ಉದಾಹರಣೆಗೆ, ಒಂದು ರೂಪಾಯಿಗೆ $\frac{1}{2}$ ಕಿಲೊಗ್ರಾಂ ಅಕ್ಕಿ, ಒಂದು ರೂಪಾಯಿಗೆ $\frac{1}{2}$ ಲೀಟರ್ ಹಾಲು. ಅಂದರೆ ವಿನಿಮಯದಲ್ಲಿ ಮಾರುಕಟ್ಟೆಗಳು, ಹಣ, ಬ್ಯಾಂಕುಗಳು ಮುಂತಾದವುಗಳನ್ನು ಅಭ್ಯಾಸ ಮಾಡುತ್ತೇವೆ.

(iv) **ವಿತರಣೆ :** ವಸ್ತುಗಳನ್ನು ಉತ್ಪಾದಿಸಲು ನೆರವಾದ ಭೂಮಿ, ಶ್ರಮ, ಬಂಡವಾಳ ಹಾಗೂ ಸಂಘಟನೆಗಳಿಗೆ ಅವು ವಹಿಸಿದ ಪಾತ್ರಕ್ಕೆ ತಕ್ಕ ಫಲವನ್ನು ಹಂಚುವ ರೀತಿ ವಿತರಣೆ. ಉತ್ಪಾದಕನು ಉತ್ಪಾದನಾ ಸಾಧನಗಳಿಗೆ ಅಂದರೆ ಭೂಮಿಗೆ ಗೇಣಿಯನ್ನೂ, ಶ್ರಮಕ್ಕೆ ವೇತನವನ್ನೂ, ಬಂಡವಾಳಕ್ಕೆ ಬಡ್ಡಿಯನ್ನೂ ಬೆಲೆಗಳಲ್ಲಿ ನಿರ್ಧರಿಸಿ ಹಂಚುತ್ತಾನೆ. ಉಳಿದುದನ್ನು ತನ್ನ ಲಾಭವಾಗಿಟ್ಟುಕೊಳ್ಳುವನು.

ಇತ್ತೀಚೆಗೆ ಮತ್ತೊಂದು ವಿಭಾಗವನ್ನು ಅರ್ಥಶಾಸ್ತ್ರದ ವ್ಯಾಪ್ತಿಯ ಕಕ್ಷೆಯಲ್ಲಿ ಸೇರಿಸಲಾಗಿದೆ. ಅದೇ ಸಾರ್ವಜನಿಕ ಹಣಕಾಸು. ಆಧುನಿಕ ಯುಗದಲ್ಲಿ ಸಾರ್ವಜನಿಕ ಹಣಕಾಸು ಬಹುಮುಖ್ಯವಾದ ಪಾತ್ರವನ್ನು ಹೊಂದಿದೆ. ಇಪ್ಪತ್ತನೆಯ ಶತಮಾನ ದಲ್ಲಿ ಅರ್ಥಶಾಸ್ತ್ರದ ಅತಿ ಮುಖ್ಯವಾದ ವಿಭಾಗವೆಂದರೆ ಸಾರ್ವಜನಿಕ ಆದಾಯ ಮತ್ತು

ವೆಚ್ಚ. ಸರಕಾರ ಯಾವ ರೀತಿ ತೆರಿಗೆಗಳ ಮೂಲಕ ಹಣವನ್ನು ಸಂಪಾದಿಸುತ್ತದೆ; ಅದನ್ನು ಹೇಗೆ ವೆಚ್ಚ ಮಾಡುತ್ತದೆ ಎಂಬ ವಿಷಯಗಳನ್ನು ಸಾರ್ವಜನಿಕ ಹಣಕಾಸು ವಿಭಾಗದಲ್ಲಿ ಅಭ್ಯಾಸ ಮಾಡುತ್ತೇವೆ. ಇತ್ತೀಚೆಗೆ ಈ ವಿಭಾಗವು ಅರ್ಥಶಾಸ್ತ್ರದ ಮಹತ್ತರ ವಿಷಯವಾಗಿ ಪರಿಣಮಿಸಿದೆ. ಏಕೆಂದರೆ ರಾಷ್ಟ್ರದ ಆರ್ಥಿಕ ಪ್ರಗತಿಯನ್ನು ಹೊಂದಲು ಸಾರ್ವಜನಿಕ ಹಣಕಾಸು ಸಹಕರಿಸುತ್ತದೆ. ಅಧಿಕ ಆದಾಯ ಪಡೆಯಲು ಹೆಚ್ಚಿನ ತೆರಿಗೆಗಳನ್ನು ಜನರ ಮೇಲೆ ಹೇರಬೇಕು. ಅದನ್ನು ಸಾಮಾನ್ಯ ಪ್ರಜೆಗೆ ಕಲ್ಯಾಣವನ್ನುಂಟುಮಾಡುವ ಕಾರ್ಯಗಳಿಗೆ ವೆಚ್ಚ ಮಾಡಬೇಕು.

ಅರ್ಥಶಾಸ್ತ್ರದ ಮಹತ್ವ : ಅರ್ಥಶಾಸ್ತ್ರವು ಸಾಮಾಜಿಕ ಶಾಸ್ತ್ರಗಳಲ್ಲೆಲ್ಲ ಉನ್ನತವಾದ ಸ್ಥಾನವನ್ನು ಪಡೆದಿದೆ. ಇದಕ್ಕೆ ಕಾರಣವೆಂದರೆ ಮಾನವಕಲ್ಯಾಣ ಅರ್ಥಶಾಸ್ತ್ರದ ಮುಖ್ಯ ವಿಷಯವಾಗಿದೆ. ಅರ್ಥಶಾಸ್ತ್ರವಲ್ಲದೆ ಮತ್ತಾವ ಶಾಸ್ತ್ರವೂ ಮಾನವ ಕಲ್ಯಾಣವನ್ನು ತನ್ನ ಅಭ್ಯಾಸದ ವಿಷಯವನ್ನಾಗಿ ತೆಗೆದುಕೊಂಡಿಲ್ಲ. ಅರ್ಥಶಾಸ್ತ್ರವನ್ನು ಅಧ್ಯಯನ ಮಾಡುವುದರಿಂದ ಅನೇಕ ಪ್ರಯೋಜನಗಳನ್ನು ಪಡೆಯಬಹುದು.

ಅರ್ಥಶಾಸ್ತ್ರ ಮಾನವನ ಆರ್ಥಿಕ ಜೀವನದ ಬಗೆಗಿನ ಅಭ್ಯಾಸ. ಮಾನವನು ತನ್ನ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವೆಂಬುದು ಅರ್ಥಶಾಸ್ತ್ರದ ಅಧ್ಯಯನದಿಂದ ತಿಳಿಯುತ್ತದೆ. ಇಷ್ಟಲ್ಲದೆ ಅರ್ಥಶಾಸ್ತ್ರವು ನಮ್ಮ ಆರ್ಥಿಕ ಸಮಸ್ಯೆಗಳನ್ನು ನಿವಾರಿಸಲು ನೆರವಾಗುತ್ತದೆ. ವಾಣಿಜ್ಯ ವ್ಯವಸ್ಥೆ, ಕರಪದ್ಧತಿ, ಹಣ ಮತ್ತು ಬ್ಯಾಂಕಿಂಗ್, ಹಣದುಬ್ಬರ, ಆಹಾರದ ಕೊರತೆ, ಜನಸಂಖ್ಯೆಯ ಸ್ಫೋಟ, ಉದ್ಯೋಗ, ಬಡತನದ ನಿರ್ಮೂಲನ, ಮುಂತಾದ ಸಮಸ್ಯೆಗಳನ್ನು ಬಗೆಹರಿಸಲು ಸಹಾಯವಾಗುತ್ತದೆ. ಅರ್ಥಶಾಸ್ತ್ರದ ಅಭ್ಯಾಸವು ಸಮಾಜ ಸುಧಾರಕನಿಗೂ ಸಹ ಸಹಾಯವಾಗುತ್ತದೆ.

ಅರ್ಥಶಾಸ್ತ್ರದ ಅಭ್ಯಾಸ ಸಮಾಜದಲ್ಲಿ ಜೀವಿಸುವ ಎಲ್ಲ ವರ್ಗದ ಜನರಿಗೂ ಪ್ರಯೋಜನಕಾರಿ. ರಾಜಕಾರಣಿ, ವ್ಯಾಪಾರಸ್ಥರು, ಕೂಲಿಕಾರರು, ಅರ್ಥಶಾಸ್ತ್ರದ ಜ್ಞಾನವನ್ನು ಪಡೆದಿದ್ದರೆ ಒಳ್ಳೆಯದು. ಸಾಮಾನ್ಯ ಮನುಷ್ಯನಿಗೂ ಅರ್ಥಶಾಸ್ತ್ರದ ಜ್ಞಾನ ತಕ್ಕಮಟ್ಟಿಗೆ ಅಗತ್ಯವಾಗಿದೆ. ಇಂದು ಎಲ್ಲ ಸಮಾಜಶಾಸ್ತ್ರಗಳಿಗಿಂತಲೂ ಅರ್ಥಶಾಸ್ತ್ರಕ್ಕೆ ವಿಶಿಷ್ಟ ಸ್ಥಾನ ದೊರಕಿದೆ. ಕೈಗಾರಿಕಾ ಮುನ್ನಡೆ, ಅಂತರರಾಷ್ಟ್ರೀಯ ವ್ಯಾಪಾರ, ಸರ್ಕಾರದ ಆದಾಯ ವೆಚ್ಚ, ಆರ್ಥಿಕ ಯೋಜನೆ ಮುಂತಾದ ಅರ್ಥಶಾಸ್ತ್ರಕ್ಕೆ ಸಂಬಂಧ ಪಟ್ಟ ಸಮಸ್ಯೆಗಳು.

ಅರ್ಥಶಾಸ್ತ್ರದಲ್ಲಿನ ಕೆಲವು ಪದಗಳ ವಿವರಣೆ : ಅರ್ಥಶಾಸ್ತ್ರದಲ್ಲಿ ಕೆಲವು ಪದಗಳನ್ನು ಆಗಾಗ ಬಳಸಲಾಗುತ್ತದೆ. ಉದಾಹರಣೆಗೆ ಸಂಪತ್ತು, ತುಷ್ಟಿಗುಣ, ಮಾನವಕಲ್ಯಾಣ, ಜೀವನ ಮಟ್ಟ, ವರಮಾನ, ಉಪಯುಕ್ತತೆ, ಮೌಲ್ಯ, ವಸ್ತು,

ಸೇವೆಗಳು, ಬೇಡಿಕೆ, ಪೂರೈಕೆ, ಶ್ರಮ ಇತ್ಯಾದಿ. ಆದರೆ ಈ ಪದಗಳ ಸಾಮಾನ್ಯ ಅರ್ಥವೇ ಬೇರೆ. ಅರ್ಥಶಾಸ್ತ್ರದಲ್ಲಿ ಈ ಪದಗಳನ್ನು ಅವುಗಳ ಸಾಮಾನ್ಯ ಅರ್ಥದಲ್ಲಿ ಬಳಸದೆ, ಅವುಗಳಿಗೆ ವಿಶಿಷ್ಟವಾದ ಅರ್ಥವನ್ನು ಕಲ್ಪಿಸಲಾಗಿದೆ.

1 ಸಂಪತ್ತು

ಅರ್ಥಶಾಸ್ತ್ರದಲ್ಲಿ ಬೆಲೆಯುಳ್ಳ ಯಾವುದೇ ವಸ್ತು ಅಥವಾ ಸೇವೆಗೆ ಸಂಪತ್ತು ಎಂದು ಅರ್ಥ. ಅಂದರೆ ಪೇಟೆಯಲ್ಲಿ ಹಣ ಕೊಟ್ಟುಕೊಂಡು ಕೊಳ್ಳುವ ಯಾವುದೇ ಒಂದು ಪದಾರ್ಥ. ಉದಾಹರಣೆಗೆ, 3 ರೂಪಾಯಿ ಕೊಟ್ಟು ಪ್ಲಾಟೋ ಪೆನ್ನನ್ನು ಕೊಂಡರೆ, ಪೆನ್ನು ಅರ್ಥಶಾಸ್ತ್ರದಲ್ಲಿ ಸಂಪತ್ತು ಎಂದು ಕರೆಯಲ್ಪಡುವುದು. ಅಂದರೆ ಪುಕ್ಕಟೆಯಾಗಿ ದೊರೆಯದ ಹಾಗೂ ಬೆಲೆ ಕೊಟ್ಟು ಕೊಂಡು ಕೊಳ್ಳುವ ಎಲ್ಲ ವಸ್ತುಗಳು 'ಸಂಪತ್ತು'.

ಕೆಲವು ವಸ್ತುಗಳು ನಿಸರ್ಗದ ಕೊಡುಕೆಯಾಗಿ ಪುಕ್ಕಟೆಯಾಗಿ ದೊರೆಯುತ್ತವೆ. ಉದಾಹರಣೆಗೆ, ಸೂರ್ಯನ ಬೆಳಕು, ನದಿಯಲ್ಲಿ ಹರಿಯುವ ನೀರು, ಗಾಳಿ ಈ ವಸ್ತುಗಳು ಸಂಪತ್ತಲ್ಲ. ಏಕೆಂದರೆ ಈ ವಸ್ತುಗಳು ಉಚಿತವಾಗಿ ಹೇರಳವಾಗಿ ದೊರೆಯುತ್ತವೆ. ಕೆಲವು ವಸ್ತುಗಳು ಕೆಲವು ಪ್ರದೇಶಗಳಲ್ಲಿ ಸಂಪತ್ತಾಗಿಯೂ ಕೆಲವು ಪ್ರದೇಶಗಳಲ್ಲಿ ಸಂಪತ್ತಾಗದೆಯೂ ಪರಿಗಣಿಸಲ್ಪಡಬಹುದು. ನೀರು, ಪುಕ್ಕಟೆಯಾಗಿ ಸಿಗುತ್ತಿರುವಾಗ ಅದು ಸಂಪತ್ತಲ್ಲ. ಅದೇ ನೀರು ನಲ್ಲಿಗಳ (ಕೊಳಾಯಿ)ಮೂಲಕ ಪೂರೈಕೆಯಾದರೆ ಅದಕ್ಕೆ ಹಣ ಕೊಡಬೇಕಾಗುತ್ತದೆ. ಆಗ ಅದು ಸಂಪತ್ತಾಗುತ್ತದೆ.

ಸಂಪತ್ತಿನ ಲಕ್ಷಣಗಳು : ಯಾವುದೇ ಒಂದು ವಸ್ತುವನ್ನು 'ಸಂಪತ್ತು' ಎಂದು ಕರೆಯಬೇಕಾದರೆ, ಆ ವಸ್ತುವು ಮುಖ್ಯವಾಗಿ ಮೂರು ಲಕ್ಷಣಗಳನ್ನು ಹೊಂದಿರಬೇಕು. ಆ ಮೂರು ಲಕ್ಷಣಗಳು ಯಾವುವೆಂದರೆ :

(i) ಆ ವಸ್ತು ತುಷ್ಟಿಗುಣ (ಉಪಯುಕ್ತತೆ)ವನ್ನು ಪಡೆದಿರಬೇಕು.

(ii) ಆ ವಸ್ತು ಪೂರೈಕೆಯಲ್ಲಿ ವಿರಳವಾಗಿರಬೇಕು (ಕೊರತೆಯಿಂದ ಕೂಡಿರಬೇಕು).

(iii) ಆ ವಸ್ತು ಇತರರಿಗೆ ವರ್ಗಾವಣೆ ಮಾಡುವಂತಿರಬೇಕು.

ಈ ಮೂರು ಲಕ್ಷಣಗಳಲ್ಲಿ ಯಾವ ಒಂದು ಲಕ್ಷಣವು ಕಡಮೆಯಾದರೂ ಆ ವಸ್ತು ಸಂಪತ್ತು ಎನಿಸಿಕೊಳ್ಳುವುದಿಲ್ಲ. ಪ್ರತಿಯೊಂದು ಲಕ್ಷಣವನ್ನೂ ವಿವರವಾಗಿ ಪರಿಶೀಲಿಸೋಣ.

(i) **ತುಷ್ಟಿಗುಣ :** ಯಾವುದೇ ಒಂದು ವಸ್ತು 'ಸಂಪತ್ತು' ಎಂದು ಕರೆಸಿಕೊಳ್ಳ ಬೇಕಾದರೆ ಆ ವಸ್ತು ತುಷ್ಟಿ (ತೃಪ್ತಿ ನೀಡುವ) ಗುಣವನ್ನು ಪಡೆದಿರಬೇಕು. ಆದರೆ, ಆ ವಸ್ತುವು ಪುಕ್ಕಟೆಯಾಗಿ ಸಿಗಕೂಡದು. ಉದಾಹರಣೆಗೆ ನದಿ ನೀರು.

ನೀರಿಗೆ ನಮ್ಮ ಬಾಯಾರಿಕೆಯನ್ನು ಹೋಗಲಾಡಿಸುವ ಶಕ್ತಿ ಇದೆ. ಆದ್ದರಿಂದ ನೀರಿಗೆ ತುಷ್ಟಿಗುಣವಿದೆ. ಆದಾಗ್ಯೂ ಆ ನೀರು ಸಂಪತ್ತಲ್ಲ. ಏಕೆಂದರೆ ನದಿ ನೀರು ಪುಕ್ಕಟೆ ಸಿಗುವ ವಸ್ತು. ಅದೇ ಪುಸ್ತಕ ಸಂಪತ್ತು. ಏಕೆಂದರೆ ಪುಸ್ತಕವು ತುಷ್ಟಿ ಗುಣ ಹೊಂದಿರುವುದಲ್ಲದೆ ಪುಸ್ತಕವನ್ನು ಪೇಟೆಯಲ್ಲಿ ಬೆಲೆ ಕೊಟ್ಟು ಕೊಳ್ಳಬೇಕಾಗುತ್ತದೆ.

(ii) **ವಿರಳತೆ (ಕೊರತೆ) :** ಸಂಪತ್ತು ಎಂದು ಕರಿಸಿಕೊಳ್ಳುವ ವಸ್ತುಗಳು ಹೇರಳವಾಗಿ ದೊರೆಯುತ್ತಿರಬಾರದು. ಅವು ಕೊರತೆಯಿಂದ ಕೂಡಿದ್ದು, ಬೆಲೆ ತೆತ್ತು ಕೊಂಡುಕೊಳ್ಳುವಂತಿರಬೇಕು. ಮೇಲಾಗಿ ಆ ವಸ್ತುಗಳು ಪುಕ್ಕಟೆಯಾಗಿ ದೊರೆಯಬಾರದು. ಹಳ್ಳದಿಂದ ಒಂದು ಕೊಡ ನೀರನ್ನು ತಂದರೆ ಆ ನೀರು ಸಂಪತ್ತಲ್ಲ. ಅಂದರೆ ಆ ನೀರಿಗೆ ತುಷ್ಟಿ ಗುಣವಿಲ್ಲವೆಂದಲ್ಲ. ಆದರೆ ನೀರು ವಿರಳತೆಯಿಂದ ಕೂಡಿಲ್ಲ. ಕೊಳಾಯಿಗಳ ಮೂಲಕ ಪೂರೈಕೆಯಾಗುವ ಅದೇ ನೀರು ಕೊರತೆಯ ಪದಾರ್ಥ. ಅದನ್ನು ಹಣ ಕೊಟ್ಟು ಪಡೆಯಬೇಕಾಗುತ್ತದೆ. ಅದು ಸಂಪತ್ತು.

(iii) **ವರ್ಗಾವಣೆ :** ಸಂಪತ್ತೆಂದು ಕರೆಯಿಸಲ್ಪಡುವ ವಸ್ತು ಮತ್ತೊಬ್ಬರಿಗೆ ವರ್ಗಾಯಿಸುವಂತಿರಬೇಕು ಅಂದರೆ ವಸ್ತುವು ಒಬ್ಬರಿಂದ ಮತ್ತೊಬ್ಬರಿಗೆ ವರ್ಗಾಯಿಸಲ್ಪಡುವ ಸ್ಥಿತಿಯಲ್ಲಿರಬೇಕು. ತುಷ್ಟಿ ಹಾಗೂ ವಿರಳತೆ ಗುಣಗಳನ್ನು ಹೊಂದಿರುವ ಜೊತೆಗೆ ಯಾವುದೊಂದು ವಸ್ತು ವರ್ಗಾಯಿಸಲು ಬಾರದಿದ್ದರೆ ಅದು ಸಂಪತ್ತು ಆಗಲಾರದು. ಉದಾಹರಣೆಗೆ ವೈದ್ಯನ ಜಾಣ್ಮೆ, ಉಪಾಧ್ಯಾಯರ ಜ್ಞಾನ, ಗಾಯಕನ ಕಂಠ, ತಾಯಿಯ ವಾತ್ಸಲ್ಯ ಇತ್ಯಾದಿ ; ಇವು ತುಷ್ಟಿಗುಣ ಪಡೆದ ಹಾಗೂ ವಿರಳವಾದ ವಸ್ತುಗಳು. ಆದರೆ ಇವುಗಳನ್ನು ಇತರರಿಗೆ ವರ್ಗಾಯಿಸಲು ಬರುವುದಿಲ್ಲ. ಅವರ ಪಾಠ ಹೇಳುವ ಜಾಣ್ಮೆಯನ್ನು ಒಬ್ಬ ಅಧ್ಯಾಪಕನಿಂದ ಮತ್ತೊಬ್ಬ ಅಧ್ಯಾಪಕನಿಗೆ ವರ್ಗಾಯಿಸಲು ಬರುವುದಿಲ್ಲ. ಮೇಲಾಗಿ ಅದನ್ನು ಮಾರಾಟ ಮಾಡಲೂ ಸಾಧ್ಯವಿಲ್ಲ. ಅದು ಒಂದು ಕೊಡುಗೆ, ಆದ್ದರಿಂದ ಉಪಾಧ್ಯಾಯರ ಜಾಣ್ಮೆ ಸಂಪತ್ತಲ್ಲ. ಗಾಯಕನ ಮಧುರವಾದ ಕಂಠವು ಅತಿ ವಿರಳವಾಗಿದ್ದು, ಅವನು ಹಾಡುವ ಹಾಡಿಗೆ ತುಷ್ಟಿಗುಣವಿದೆ. ಆದರೆ ಅದನ್ನು ಇನ್ನೊಬ್ಬ ವ್ಯಕ್ತಿಗೆ ವರ್ಗಾವಣೆ ಮಾಡಲಾಗುವುದಿಲ್ಲ. ಆದಕಾರಣ ಗಾಯಕನ ಮಧುರಕಂಠವು ಸಂಪತ್ತಲ್ಲ. ಇವು ಅರ್ಥಶಾಸ್ತ್ರದಲ್ಲಿ ಸಂಪತ್ತೆನಿಸಿಕೊಳ್ಳಲಾರವು. ಆದರೆ ಇವು ಹಣವನ್ನು ಗಳಿಸಬಲ್ಲವು. ಆದ್ದರಿಂದ ಅವರ ಸೇವೆಗಳನ್ನು ಅರ್ಥಶಾಸ್ತ್ರದಲ್ಲಿ 'ಸಂಪತ್ತು' ಎನ್ನಬಹುದು. ಭೂಮಿಯು ಅರ್ಥಶಾಸ್ತ್ರದಲ್ಲಿ 'ಸಂಪತ್ತು' ಎಂದು ಕರೆಯಲ್ಪಡುವುದು. ಏಕೆಂದರೆ ಅದು ತುಷ್ಟಿಗುಣವನ್ನು ಪಡೆದಿದೆ. ವಿರಳತೆಯಿಂದ ಕೂಡಿದೆ ಹಾಗೂ ಅದರ ಸ್ವಾಮ್ಯವನ್ನು ಇತರರಿಗೆ ವರ್ಗಾಯಿಸುವ ಲಕ್ಷಣವನ್ನೂ ಸಹ ಪಡೆದಿದೆ.

ಒಟ್ಟಿನಲ್ಲಿ ಅರ್ಥಶಾಸ್ತ್ರದಲ್ಲಿ ಸಂಪತ್ತು ಎನಿಸಿಕೊಳ್ಳುವ ವಸ್ತುಗಳು ತುಷ್ಟಿ, ಕೊರತೆ ಹಾಗೂ ವರ್ಗಾವಣೆ ಎಂಬ ಮೂರು ಲಕ್ಷಣಗಳನ್ನು ಹೊಂದಿರಲೇಬೇಕು.

ಇವುಗಳಲ್ಲಿ ಯಾವ ಒಂದು ಲಕ್ಷಣ ಕಡಮೆಯಾದರೂ ಆ ವಸ್ತುವು ಅರ್ಥಶಾಸ್ತ್ರ ದೃಷ್ಟಿಯಲ್ಲಿ 'ಸಂಪತ್ತು' ಎನಿಸಿಕೊಳ್ಳಲಾರದು. ಅರ್ಥಶಾಸ್ತ್ರದಲ್ಲಿ ಸಂಪತ್ತು ಎಂದು ಕರೆಸಿಕೊಳ್ಳುವ ಮುಖ್ಯ ವಸ್ತುಗಳೆಂದರೆ ಪುಸ್ತಕ, ಪೆನ್ನು, ಕುರ್ಚಿ, ಮೇಜು, ಕಾರು, ರೇಡಿಯೋ, ಸೈಕಲ್, ಭೂಮಿ, ಮನೆ ಮುಂತಾದ ಭೌತಿಕವಸ್ತುಗಳು. ಆದರೆ ಮಾನವನ ವೈಯಕ್ತಿಕ ಗುಣಗಳಾದ ಜಾಣ್ಮೆ, ಮಮಕಾರ, ಪ್ರಾಮಾಣಿಕತನ, ಒಳ್ಳೆಯ ನಡೆತೆಗಳು ಸಂಪತ್ತು ಎನಿಸಿಕೊಳ್ಳಲಾರವು. ಹಾಗೆಯೇ ತಾಯಿಯ ಪ್ರೀತಿ, ಪ್ರಾಮಾಣಿಕ ತನ, ಜಾಣ್ಮೆ, ಒಳ್ಳೆಯ ನಡತೆಗಳು, ಸಂಪತ್ತಲ್ಲ. ಇವು ವಿರಳವಾಗಿದ್ದರೂ, ತುಷ್ಟಿಗುಣ ಹೊಂದಿದ್ದರೂ ಅವುಗಳನ್ನು ಮಾರುಕಟ್ಟೆಯಲ್ಲಿ ಹಣನೀಡಿ ಕೊಳ್ಳಲಾಗುವುದಿಲ್ಲ. ಅಲ್ಲದೆ ಇವುಗಳನ್ನು ಒಬ್ಬರಿಂದ ಮತ್ತೊಬ್ಬರಿಗೆ ವರ್ಗಾಯಿಸಲಾಗುವುದಿಲ್ಲ.

ಆದರೆ ಅರ್ಥಶಾಸ್ತ್ರದ ದೃಷ್ಟಿಯಲ್ಲಿ 'ಸಂಪತ್ತು' ಎಂದು ಕರೆಯಲ್ಪಡುವ ವಸ್ತು ಕೆಲವರಿಗೆ ಮಾತ್ರ ಸಂಪತ್ತಾಗಬಹುದು. ಸಿಗರೇಟ್ ಸೇದುವವರಿಗೆ ಅದು ಸಂಪತ್ತು. ಏಕೆಂದರೆ ಸಿಗರೇಟ್ ತುಷ್ಟಿಗುಣವನ್ನು ಪಡೆದಿದೆ. ಸಿಗರೇಟನ್ನು ಸೇದುವುದರಿಂದ ತೃಪ್ತಿಪಡೆಯಬಹುದು. ಅದು ಹೇರಳವಾಗಿ ದೊರೆಯುವುದಿಲ್ಲ, ಹಣವನ್ನು ಕೊಟ್ಟು ಕೊಳ್ಳಬೇಕು. ಅದನ್ನು ಒಬ್ಬರಿಂದೊಬ್ಬರಿಗೆ ವರ್ಗಾಯಿಸಬಹುದು. ಆದರೆ ಸಿಗ ರೇಟನ್ನು ಸೇದದ ವ್ಯಕ್ತಿಗಳಿಗೆ ಅದು ಸಂಪತ್ತಲ್ಲ. ಮಾಂಸವು ಮಾಂಸಾಹಾರಿಗಳಿಗೆ ಮಾತ್ರ ಸಂಪತ್ತೇ ಹೊರತು, ಮಾಂಸ ಸೇವಿಸದ ಸಸ್ಯಾಹಾರಿಗಳಿಗೆ ಸಂಪತ್ತು ಅಲ್ಲ. ಪುಸ್ತಕವು ಓದುಬಲ್ಲವರಿಗೆ ಮಾತ್ರ ಸಂಪತ್ತು; ಓದುಬರಹ ಬಾರದ ನಿರಕ್ಷರ ಕುಕ್ಷಿಗಳಿಗೆ ಸಂಪತ್ತಲ್ಲ.

ಸಂಪತ್ತಿನ ಬಗೆಗಳು : ಸಂಪತ್ತನ್ನು (i) ವೈಯಕ್ತಿಕ ಸಂಪತ್ತು (ii) ಸಾಮಾಜಿಕ ಸಂಪತ್ತು (iii) ರಾಷ್ಟ್ರೀಯ ಸಂಪತ್ತು (iv) ಅಂತರರಾಷ್ಟ್ರೀಯ ಸಂಪತ್ತು ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು.

(i) **ವೈಯಕ್ತಿಕ ಸಂಪತ್ತು :** ಒಬ್ಬ ವ್ಯಕ್ತಿಯ ಒಡತನಕ್ಕೆ ಸೇರಿದ ಸಂಪತ್ತು 'ವೈಯಕ್ತಿಕ ಸಂಪತ್ತು' ಮನೆ, ಭೂಮಿ, ಕಾರು, ಬ್ಯಾಂಕಿನಲ್ಲಿರುವ ಹಣ, ರೇಡಿಯೋ, ಸ್ಕೂಟರ್, ಶೇರುಗಳು ಇತ್ಯಾದಿ. ಇಂತಹ ವಸ್ತುಗಳಿಗೆ ವ್ಯಕ್ತಿಯು ಒಡೆಯನಾಗಿ ತನ್ನ ಇಷ್ಟಬಂದಂತೆ ಅವುಗಳನ್ನು ಬಳಸುವ ಹಕ್ಕನ್ನು ಪಡೆದಿರುತ್ತಾನೆ.

(ii) **ಸಾಮಾಜಿಕ ಸಂಪತ್ತು :** ಒಂದು ಸಮಾಜದಲ್ಲಿ ಜೀವಿಸುವ ಎಲ್ಲ ವ್ಯಕ್ತಿಗಳು ಸಾಂಘಿಕವಾಗಿ ಉಪಯೋಗಿಸಬಹುದಾದ ವಸ್ತುಗಳಿಗೆ 'ಸಾಮಾಜಿಕ ಸಂಪತ್ತು' ಎನ್ನ ಬಹುದು-ರಸ್ತೆ, ಸಾರ್ವಜನಿಕ ಆಸ್ಪತ್ರೆ, ಕಾಲೇಜು, ಸಾರ್ವಜನಿಕ ಉದ್ಯಾನ, ಪುರಭವನ, ಪುಸ್ತಕಭಂಡಾರ, ರೈಲು, ಸಾರ್ವಜನಿಕ ಬಸ್ಸು ಇತ್ಯಾದಿ. ಇವು ಯಾವನೊಬ್ಬ ವ್ಯಕ್ತಿಯ ಒಡೆತನಕ್ಕೆ ಒಳಪಟ್ಟಿರುವುದಿಲ್ಲ, ಇವುಗಳನ್ನು ಎಲ್ಲರೂ ಉಪಯೋಗಿಸುವ ಹಕ್ಕನ್ನು ಪಡೆದಿರುತ್ತಾರೆ.

(iii) **ರಾಷ್ಟ್ರೀಯ ಸಂಪತ್ತು :** ಸಾಮಾಜಿಕ ಹಾಗೂ ವೈಯಕ್ತಿಕ ಸಂಪತ್ತು ಒಟ್ಟುಗೂಡಿಸಿ ಇತರ ರಾಷ್ಟ್ರಗಳಿಗೆ ಕೊಡಬೇಕಾದ ಸಾಲದ ಹಣವನ್ನು ಕಳೆದು ಅದಕ್ಕೆ ಇತರ ರಾಷ್ಟ್ರಗಳಿಂದ ಸಂದಾಯವಾಗಬೇಕಾದ ಹಣವನ್ನು ಕೂಡಿಸಿ ಬರುವ ಮೊತ್ತವೇ 'ರಾಷ್ಟ್ರೀಯ ಸಂಪತ್ತು'. ರಾಷ್ಟ್ರೀಯ ಸಂಪತ್ತಿನ ಕಕ್ಷೆಯಲ್ಲಿ ರಾಷ್ಟ್ರದಲ್ಲಿರುವ ಎಲ್ಲ ಕಟ್ಟಡ, ರೈಲು, ಭೂಮಿ ಇತ್ಯಾದಿ ಬರುತ್ತವೆ. ರಾಷ್ಟ್ರೀಯ ಸಂಪತ್ತನ್ನು ಹಣದ ರೂಪದಲ್ಲಿ ಗಣನೆ ಮಾಡಲಾಗುವುದಿಲ್ಲ. ಒಳ್ಳೆಯ ಸರಕಾರ ರಾಷ್ಟ್ರೀಯ ಸಂಪತ್ತಿನಲ್ಲಿ ಸಮಾವೇಶಗೊಳ್ಳುತ್ತವೆ. ಆದರೆ ಇವುಗಳಿಗೆ ಬೆಲೆಕೊಟ್ಟುಕೊಳ್ಳಲೂ ಅವುಗಳನ್ನು ವರ್ಗಾಯಿಸಲೂ ಬರುವುದಿಲ್ಲವಾದ್ದರಿಂದ ಇವು ಸಂಪತ್ತು ಅಲ್ಲ.

(iv) **ಅಂತರರಾಷ್ಟ್ರೀಯ ಸಂಪತ್ತು :** ಪ್ರಪಂಚದಲ್ಲಿರುವ ಎಲ್ಲ ರಾಷ್ಟ್ರಗಳ ಸಂಪತ್ತನ್ನು ಒಟ್ಟುಗೂಡಿಸಿದಾಗ ಬರುವ ಸಂಪತ್ತಿಗೆ 'ಅಂತರರಾಷ್ಟ್ರೀಯ ಸಂಪತ್ತು' ಎನ್ನಬಹುದು. ಆದರೆ ಇದುವರೆಗೆ ಯಾರೂ ಅಂತರರಾಷ್ಟ್ರೀಯ ಸಂಪತ್ತನ್ನು ಲೆಕ್ಕಾಚಾರ ಮಾಡಲು ಮುಂದೆ ಬಂದಿಲ್ಲ. ಇದು ಬಹಳ ಪ್ರಯಾಸದ ಕೆಲಸ.

2. ತುಷ್ಟಿಗುಣ (ಉಪಯುಕ್ತತೆ)

ಇಷ್ಟವನ್ನು ತೃಪ್ತಿಪಡಿಸುವ ಗುಣ ತುಷ್ಟಿಗುಣ. ಯಾವುದೇ ವಸ್ತು ಮಾನವನ ಇಷ್ಟವನ್ನು ತೃಪ್ತಿಪಡಿಸುವ ಶಕ್ತಿಯನ್ನು ಹೊಂದಿದ್ದರೆ, ಆ ವಸ್ತುವಿಗೆ 'ತುಷ್ಟಿಗುಣ' ಇರುತ್ತದೆ. ತುಷ್ಟಿಗುಣವು ಅರ್ಥಶಾಸ್ತ್ರದ ಮುಖ್ಯ ಭಾವನೆಗಳಲ್ಲಿ ಒಂದಾಗಿದೆ. ಇದು ವ್ಯಕ್ತಿಗಳಿಗೆ ಮತ್ತು ವಸ್ತುಗಳಿಗೆ ಇರುವ ಸಂಬಂಧವನ್ನು ಸೂಚಿಸುತ್ತದೆ. ತುಷ್ಟಿಗುಣ ವನ್ನು ಇಂತಿಷ್ಟೇ ಎಂದು ಅಳೆಯುವುದು ಅಸಾಧ್ಯ. ಅದನ್ನು ಅಳೆಯುವ ಯಾವ ಒಂದು ಸಾಧನವೂ ಇಲ್ಲ. ಅದು ಸಂಪೂರ್ಣವಾಗಿ ಅನುಭವಿಸಿ ತಿಳಿಯಬೇಕಾದದ್ದು. ಒಟ್ಟಿನಲ್ಲಿ ವ್ಯಕ್ತಿಯ ಬಯಕೆಯೇ ತುಷ್ಟಿಗುಣಕ್ಕೆ ಆಧಾರ. ಮನುಷ್ಯ ಯಾವುದೇ ಒಂದು ವಸ್ತುವನ್ನು ಉಪಭೋಗಿಸಬೇಕಾದರೆ ಆ ವಸ್ತು ಅಗತ್ಯವೇ ಎಂಬುದನ್ನು ವಿಚಾರಿಸಿ ಅದನ್ನು ಕೊಳ್ಳುವನು. ಅನಂತರ ಆ ವಸ್ತುವಿಗೆ ಕೊಡುವ ಬೆಲೆಗೆ ಸರಿಯಾದ ಪ್ರತಿಫಲ ಸಿಗುವುದೇ ಎಂಬುದನ್ನು ಪರೀಕ್ಷಿಸುವನು. ಸಾಮಾನ್ಯವಾಗಿ ಎಲ್ಲ ವಸ್ತುಗಳು ತುಷ್ಟಿಗುಣ ವನ್ನು (ಉಪಯುಕ್ತತೆ) ಹೊಂದಿರುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ವಸ್ತು ಅಥವಾ ಸೇವೆಗಳಿಂದ ನಮ್ಮ ಇಷ್ಟಗಳನ್ನು ತೃಪ್ತಿಪಡಿಸುವ ಗುಣವೇ ತುಷ್ಟಿಗುಣ. ಕೆಲವು ಉದಾಹರಣೆಗಳಿಂದ ಇದನ್ನು ವಿಶದೀಕರಿಸಬಹುದು. ಆಹಾರದಲ್ಲಿ ತುಷ್ಟಿಗುಣವಿದೆ. ಆಹಾರವನ್ನು ಸೇವಿಸುವುದರಿಂದ ಹಸಿವು ಇಂಗಿ, ಸಂತೃಪ್ತಿ ದೊರೆಯುತ್ತದೆ. ಈ ತೃಪ್ತಿಯನ್ನು ನೀಡಬಲ್ಲ ಶಕ್ತಿಯೇ ತುಷ್ಟಿಗುಣ. ತುಷ್ಟಿಗುಣವು ಕಣ್ಣಿಗೆ ಕಾಣಿಸುವುದಿಲ್ಲ, ಅದು ಮಾನಸಿಕ. ವಸ್ತುಗಳು ಉಪಯುಕ್ತತೆಯನ್ನು ಹೊಂದಿದಲ್ಲಿ ಮಾತ್ರ ಅವನ್ನು ಬಳಸುತ್ತೇವೆಂದು ಹೇಳಲಾಗುವುದಿಲ್ಲ. ಉದಾ : ಸಿಗರೇಟು, ರೇಡಿಯೋ, ಸಿಗರೇಟನ್ನು

ಸೇದುವವರಿಗೆ ಸಿಗರೇಟು ತುಷ್ಟಿಗುಣ ಹೊಂದಿರುತ್ತದೆ. ಆದರೆ ಸಿಗರೇಟು ಸೇದದವರಿಗೆ ಅಲ್ಲ. ಅದೇ ರೀತಿ ಕಿವುಡನಿಗೆ ರೇಡಿಯೋ ತುಷ್ಟಿಗುಣ ಹೊಂದಿರದ ವಸ್ತು. ಅಂದರೆ ಒಬ್ಬ ವ್ಯಕ್ತಿಗೆ ತೃಪ್ತಿಯನ್ನು ಕೊಡಲು ಶಕ್ತಿ ಇರುವ ವಸ್ತುವು ಮತ್ತೊಬ್ಬನಿಗೆ ತೃಪ್ತಿಯನ್ನು ನೀಡದಿರಬಹುದು. ಆದ್ದರಿಂದ ತುಷ್ಟಿಗುಣವು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಾಗುತ್ತ ಹೋಗುತ್ತದೆ. ಒಂದು ವಸ್ತುವಿಗೆ ಒಂದುಕಾಲದಲ್ಲಿ ಉಪಯುಕ್ತತೆ ಇಲ್ಲದಿರಬಹುದು. ಆದರೆ ಅದೇ ವಸ್ತುವಿಗೆ ಇನ್ನೊಂದು ಕಾಲದಲ್ಲಿ ಹೆಚ್ಚಿನ ಉಪಯುಕ್ತತೆ ಬರಬಹುದು, ಚಳಿಗಾಲದಲ್ಲಿ ಉಣ್ಣೆಬಟ್ಟೆಗಳು, ಮಳೆಗಾಲದಲ್ಲಿ ಛತ್ರಿಗಳು, ಬೇಸಿಗೆ ಕಾಲದಲ್ಲಿ ತಂಪುಪಾನೀಯಗಳು ಹೆಚ್ಚು ಉಪಯುಕ್ತತೆ ಪಡೆದಿರುತ್ತವೆ. ಇದು 'ಕಾಲೋಪಯುಕ್ತತೆ'. ಇನ್ನು ಕೆಲವು ವಸ್ತುಗಳನ್ನು ಬೇರೊಂದು ಕಡೆಗೆ ವರ್ಗಾಯಿಸುವುದರಿಂದ ಅವುಗಳು ಉಪಯುಕ್ತತೆಯನ್ನು ಪಡೆಯಬಹುದು. ಬೆಟ್ಟದ ಬುಡದಲ್ಲಿ ಬಿದ್ದಿರುವ ಒಂದು ಕಲ್ಲನ್ನು ನಗರಕ್ಕೆ ತಂದಲ್ಲಿ ಅದು ಉಪಯುಕ್ತತೆಯನ್ನು ಪಡೆಯುತ್ತದೆ. ಇದು 'ಸ್ಥಳೋಪಯುಕ್ತತೆ'. ಆ ಕಲ್ಲನ್ನು ಕಡೆದು ಮೂರ್ತಿಯನ್ನಾಗಿ ಮಾಡಿದಾಗ ಅದಕ್ಕೆ ಒಂದು ಸ್ಪಷ್ಟ ಆಕಾರ ದೊರೆಯುತ್ತದೆ. 'ಇದು ಆಕಾರೋಪಯುಕ್ತತೆ'. ವಸ್ತುಗಳ ಈ ಮೂರು ಬಗೆಯ ಉಪಯುಕ್ತತೆಗಳ ನಿರ್ಮಾಣವೇ ಉತ್ಪಾದನೆಯಗುರಿ.

3. ಮೌಲ್ಯ

ಸಾಮಾನ್ಯ ಅರ್ಥದಲ್ಲಿ 'ಮೌಲ್ಯ' ಎಂದರೆ ಒಂದು ವಸ್ತುವಿನ ಬೆಲೆ ಎಂದರ್ಥ. ಇದು ವಸ್ತುವಿನ ಉಪಯುಕ್ತತೆಯನ್ನು ಸೂಚಿಸುತ್ತದೆ. ಆದರೆ ಅರ್ಥಶಾಸ್ತ್ರದಲ್ಲಿ 'ಮೌಲ್ಯ'ಕ್ಕೆ ವಿಶಿಷ್ಟವಾದ ಅರ್ಥವಿದೆ ; ಅದು ಬರಿಯ ಮೌಲ್ಯವಲ್ಲ : ವಿನಿಮಯದ ಮೌಲ್ಯ. ಅರ್ಥಶಾಸ್ತ್ರದಲ್ಲಿ ಮೌಲ್ಯದ ವಸ್ತುವಿನ ಉಪಯುಕ್ತತೆಯನ್ನು ಸೂಚಿಸುವುದಿಲ್ಲ. ಒಳ್ಳೆಯ ನಡತೆಗೆ ಬೆಲೆ ಇದೆ ಎಂದು ಹೇಳುವುದುಂಟು. ಇಲ್ಲಿ ಬೆಲೆ ಎಂದರೆ ಧಾರಣೆ ಎಂಬ ಅರ್ಥವಲ್ಲ. ಅರ್ಥಶಾಸ್ತ್ರದಲ್ಲಿ ಬೆಲೆಗೆ ಒಂದು ನಿರ್ದಿಷ್ಟ ಅರ್ಥವಿದೆ. ಆಧುನಿಕ ಅರ್ಥಶಾಸ್ತ್ರದ ಪಿತಾಮಹರೆಂದು ಪರಿಗಣಿಸಲ್ಪಟ್ಟ ಆಡಂ ಸ್ಮಿತ್‌ಅವರು 'ಮೌಲ್ಯ' ಎರಡು ಬಗೆಯದೆಂದು ಹೇಳುತ್ತಾರೆ. ಅವುಗಳೆಂದರೆ, (i) ಉಪಯುಕ್ತ ಮೌಲ್ಯ, (ii) ವಿನಿಮಯ ಮೌಲ್ಯ.

(i) **ಉಪಯುಕ್ತ ಮೌಲ್ಯ :** ವಸ್ತುವಿನ ಬಯಕೆಯನ್ನು ತೃಪ್ತಿಪಡಿಸುವ ಶಕ್ತಿಯನ್ನು ಉಪಯುಕ್ತತಾಮೌಲ್ಯವೆಂದೂ, ಆ ವಸ್ತುವಿಗೆ ಇತರ ಎಷ್ಟು ವಸ್ತುಗಳನ್ನು ಬದಲಾಗಿ ಪಡೆಯುವ ಶಕ್ತಿ ಇದೆ ಎಂಬುದನ್ನು ಆ ವಸ್ತುವಿನ ವಿನಿಮಯ ಮೌಲ್ಯವೆಂದೂ ಅವರು ಕರೆದಿರುವರು. ಉಪಯುಕ್ತ ಮೌಲ್ಯವೆಂದರೆ ನಿತ್ಯದ ಜೀವನದಲ್ಲಿ ಹೆಚ್ಚು ಬೆಲೆಯುಳ್ಳದ್ದು ಎಂದರ್ಥ. ಗಾಳಿ, ನೀರು, ಸೂರ್ಯನ ಬೆಳಕುಗಳ ಉಪಯುಕ್ತತೆಯ ಮೌಲ್ಯ ಹೆಚ್ಚು. ಏಕೆಂದರೆ ಇವಿಲ್ಲದೆ ಮಾನವ ಈ ಪ್ರಪಂಚದಲ್ಲಿ

ಜೀವಿಸಲಾರ. ಆದರೆ ಇವುಗಳಿಗೆ ವಿನಿಮಯಮೌಲ್ಯ ಇಲ್ಲ. ಕಾರಣ ಇವು ಹೇರಳವಾಗಿ ಮತ್ತು ಉಚಿತವಾಗಿ ಸಿಗುತ್ತವೆ. ಇವುಗಳನ್ನು ಪಡೆಯಲು ಹಣವನ್ನು ಕೊಡಬೇಕಾಗಿಲ್ಲ.

(ii) ವಿನಿಮಯ ಮೌಲ್ಯ : ಅರ್ಥಶಾಸ್ತ್ರದಲ್ಲಿ ವಿನಿಮಯ ಮೌಲ್ಯ ಇರುವ ವಸ್ತುಗಳಿಗೆ ಮಹತ್ವವಿದೆ. ವಿನಿಮಯದ ಮೌಲ್ಯ ಎಂದರೆ ಒಂದು ಪದಾರ್ಥಕ್ಕೆ ವಿನಿಮಯವಾಗಿ ದೊರೆಯುವ ಇತರ ವಸ್ತುಗಳ ಮೊತ್ತ. ಉದಾಹರಣೆಗೆ ಒಂದು ಪೆನ್ನನ್ನು ಹತ್ತು ಪೆನ್ಸಿಲ್‌ಗಳಿಗೆ ವಿನಿಮಯ ಮಾಡಿದಾಗ ಪೆನ್ನಿನ ವಿನಿಮಯದ ಮೌಲ್ಯವು ಹತ್ತು ಪೆನ್ಸಿಲ್‌ಗಳಿಗೆ ಸಮ ಎಂದು ಅರ್ಥ. ವಸ್ತುವಿನ ವಿನಿಮಯ ಮೌಲ್ಯ ಇರಬೇಕಾದರೆ, ಅದು ತುಷ್ಟಿಗುಣವನ್ನು ಪಡೆದಿರಬೇಕು, ವಿರಳವಾಗಿರಬೇಕು ಮತ್ತು ವರ್ಗಾಯಿಸಲು ಬರುವಂತಿರಬೇಕು. ಎಲ್ಲ ಆರ್ಥಿಕ ವಸ್ತುಗಳು ವಿನಿಮಯದ ಮೌಲ್ಯವನ್ನು ಪಡೆದಿರುತ್ತವೆ. ಆದರೆ ಆ ವಸ್ತುಗಳು ಉಪಯುಕ್ತತೆಯ ಮೌಲ್ಯ ಪಡೆದಿರುವುದಿಲ್ಲ. ಇನ್ನೊಂದು ಉದಾಹರಣೆ ವಜ್ರ ; ವಜ್ರಕ್ಕೆ ಉಪಯುಕ್ತತೆಯ ಮೌಲ್ಯ ಹೆಚ್ಚಾಗಿಲ್ಲ. ಅದನ್ನು ಕೇವಲ ಆಭರಣವನ್ನಾಗಿ ಮಾಡಿ ಉಪಯೋಗಿಸಬಹುದು. ಆದರೆ ವಜ್ರಕ್ಕೆ ವಿನಿಮಯದ ಮೌಲ್ಯ ಹೆಚ್ಚಾಗಿದೆ. ಒಂದು ಸಣ್ಣ ವಜ್ರದ ತುಂಡು ಸಾವಿರಾರು ರೂಪಾಯಿಗಳ ಬೆಲೆಬಾಳುವುದು. ಕೆಲವು ಆರ್ಥಿಕ ವಸ್ತುಗಳಾದ ಸಿಗರೇಟು, ಅಫೀಮುಗಳು ದೇಹಕ್ಕೆ ಕೆಟ್ಟದ್ದು ಹಾಗೂ ಅಪಾಯಕಾರಿ. ಆದರೆ ಅವುಗಳಿಗೆ ಹೆಚ್ಚಿನ ವಿನಿಮಯದ ಮೌಲ್ಯವಿದೆ. ಹೀಗೆ ವಸ್ತುಗಳಿಗೆ ವಿನಿಮಯದ ಮೌಲ್ಯವಿದ್ದಲ್ಲಿ ಅರ್ಥಶಾಸ್ತ್ರದಲ್ಲಿ ಅವುಗಳಿಗೆ ಬಹಳ ಮಹತ್ವವಿದೆ.

4. ಬೆಲೆ

ವಸ್ತುಗಳ ವಿನಿಮಯದ ಮೌಲ್ಯವನ್ನು ಹಣದ ರೂಪದಲ್ಲಿ ವ್ಯಕ್ತಪಡಿಸಿದಾಗ ಅದು ಆ ವಸ್ತುವಿನ 'ಬೆಲೆ'ಯಾಗುತ್ತದೆ. ಅರ್ಥಶಾಸ್ತ್ರದಲ್ಲಿ ಬೆಲೆಯು ಸಾಪೇಕ್ಷವಾಗಿದೆ. ಇಂದು ವಸ್ತುಗಳನ್ನು ಹಣದ ಮೂಲಕ ವಿನಿಮಯ ಮಾಡಲಾಗುತ್ತದೆ. ಬೆಲೆ ಎಂದರೆ ಒಂದು ವಸ್ತು ಎಷ್ಟು ಹಣಕ್ಕೆ ಮಾರಾಟವಾಗುತ್ತದೆ ಎಂದರ್ಥ. ಹಣದ ರೂಪದಲ್ಲಿ ವ್ಯಕ್ತಪಡಿಸುವ ಮೌಲ್ಯವನ್ನು 'ಬೆಲೆ' ಎಂದು ಕರೆಯಬಹುದು. ಮೌಲ್ಯವು ಎಷ್ಟು ವಸ್ತುಗಳನ್ನು ಪಡೆಯುತ್ತದೆ ಎಂಬುದನ್ನು ತಿಳಿಸುತ್ತದೆ. ಉಪಯುಕ್ತ ಬೆಲೆಯು ವಿನಿಮಯದ ಬೆಲೆಗಿಂತಲೂ ಹೆಚ್ಚುಕಡಮೆ ಇರಬಹುದು. ಒಂದು ಗಜ ಬಟ್ಟೆಯ ಬೆಲೆ ಐದು ರೂಪಾಯಿಗಳಿದ್ದರೆ ಅದರ ವಿನಿಮಯದ ಬೆಲೆಯೂ ಐದು ರೂಪಾಯಿಗಳು. ಆದರೆ ಬಟ್ಟೆಯ ಉಪಯುಕ್ತತೆಯ ಬೆಲೆ ಐದು ರೂಪಾಯಿಗಳಿಗಿಂತಲೂ ಹೆಚ್ಚಿರಬಹುದು ಅಥವಾ ಕಡಮೆ ಇರಬಹುದು. ಆದರೆ ಬೆಲೆಗಳ ಮೂಲಕ ಇತರ ವಸ್ತುಗಳ ವಿನಿಮಯದ ಬೆಲೆಯಲ್ಲಿರುವ ವ್ಯತ್ಯಾಸಗಳನ್ನು ತಿಳಿಯಬಹುದು. ಒಂದು ರಬ್ಬರಿನ

ಬೆಲೆ 10 ಪೈಸೆಗಳಿದ್ದು, ಒಂದು ಪೆನ್ಸಿಲ್‌ನ ಬೆಲೆ 20 ಪೈಸೆಗಳಾದರೆ, ಎರಡು ರಬ್ಬರ್‌ಗಳು ಒಂದು ಪೆನ್ಸಿಲ್‌ಗೆ ಸಮವಾಗುತ್ತದೆ. ಅಂದರೆ ಬೆಲೆಯು ಒಂದು ವಸ್ತುವನ್ನು ಮತ್ತೊಂದು ವಸ್ತುವಿನೊಡನೆ ತುಲನೆ ಮಾಡಲು ನೆರವಾಗುತ್ತದೆ.

5. ವಸ್ತು

ಎಲ್ಲ ಆರ್ಥಿಕ ಚಟುವಟಿಕೆಗಳಿಗೆ ಮಾನವನ ಇಷ್ಟಗಳು ಮೂಲ. ಮಾನವನ ಇಷ್ಟಗಳನ್ನು ತೃಪ್ತಿಪಡಿಸಲು ವಸ್ತುಗಳು ಅತ್ಯಾವಶ್ಯಕ. ಮಾನವನು ತನ್ನ ಇಷ್ಟಗಳನ್ನು ವಸ್ತುಗಳಿಂದ ತೃಪ್ತಿಪಡಿಸಿಕೊಳ್ಳಬಹುದು. 'ವಸ್ತು'ಗಳೆಂದರೆ ಮಾನವನ ಇಷ್ಟಗಳನ್ನು ತೃಪ್ತಿಪಡಿಸುವ ಪದಾರ್ಥ. ಇಲ್ಲವೆ ಸರಕುಗಳು, ಇವು ಕಣ್ಣಿಗೆ ಕಾಣುತ್ತವೆ. ಉದಾಹರಣೆಗೆ, ಭೂಮಿ, ಮನೆ, ಪುಸ್ತಕ, ಪೆನ್ನು, ರೇಡಿಯೋ, ಕಾರು ಮೊದಲಾದ ಹಣವನ್ನು ಕೊಟ್ಟು ಕೊಳ್ಳುವ ವಸ್ತುಗಳು. ಅವುಗಳು ಉಚಿತ ವಸ್ತು ಮತ್ತು ಆರ್ಥಿಕ ವಸ್ತುಗಳು, ಗ್ರಾಹಕರ ವಸ್ತು ಮತ್ತು ಉತ್ಪಾದಕರ ವಸ್ತುಗಳು, ಏಕೋಪ ಯೋಗ ವಸ್ತು ಮತ್ತು ಬಾಳಿಕೆಯ ವಸ್ತುಗಳು, ವರ್ಗೀಯ ವಸ್ತು ಮತ್ತು ಅವರ್ಗೀಯ ವಸ್ತುಗಳು ಹಾಗೂ ದೃಶ್ಯ ವಸ್ತು ಮತ್ತು ಅದೃಶ್ಯ ವಸ್ತುಗಳೆಂದು ನಾನಾ ಬಗೆಯಾಗಿವೆ.

(i) **ಉಚಿತ ವಸ್ತು ಮತ್ತು ಆರ್ಥಿಕ ವಸ್ತುಗಳು :** ಸಾಧಾರಣವಾಗಿ ವಸ್ತುಗಳನ್ನು ಉಚಿತ ವಸ್ತುಗಳು ಹಾಗೂ ಆರ್ಥಿಕ ವಸ್ತುಗಳೆಂದು ಎರಡು ಬಗೆಗಳಾಗಿ ವಿಂಗಡಿಸಬಹುದು. ಉಚಿತ ವಸ್ತುಗಳು ಮಾನವನಿಗೆ ನೈಸರ್ಗಿಕ ಸಂಪತ್ತು ನೀಡಿರುವ ಕೊಡುಗೆಗಳು. ಇವು ಪ್ರಕೃತಿಯಲ್ಲಿ ಹೇರಳವಾಗಿ ದೊರೆಯುತ್ತವೆ. ಗಾಳಿ, ಬಿಸಿಲು, ನೀರು ಇವು ಉಚಿತವಾಗಿ ದೊರೆಯುವ ವಸ್ತುಗಳು. ಈ ವಸ್ತುಗಳಿಗೆ ನಾವು ಬೆಲೆಯನ್ನು ಕೊಟ್ಟುಕೊಳ್ಳುವುದಿಲ್ಲ. ಏಕೆಂದರೆ ಇವುಗಳ ಪೂರೈಕೆಯು ಬೇಡಿಕೆಗಿಂತ ಹೆಚ್ಚಾಗಿರುತ್ತದೆ. ಆದರೆ ಆರ್ಥಿಕವಾಗಿ ದೊರೆಯುವ ವಸ್ತುಗಳ ಪೂರೈಕೆಯು ಬೇಡಿಕೆಗಿಂತ ಕಡಮೆ ಇರುತ್ತವೆ. ಅವುಗಳನ್ನು ಉತ್ಪಾದಿಸಬೇಕು. ಅವುಗಳನ್ನು ಪಡೆಯಲು ಬೆಲೆ ಕೊಡಬೇಕು. ಅಂದರೆ ಆರ್ಥಿಕ ವಸ್ತುಗಳು ಹಣವನ್ನು ಕೊಟ್ಟು ಪಡೆಯುವ ವಸ್ತುಗಳು – ಪುಸ್ತಕಗಳು, ಪೆನ್ನು, ಸಿಗರೇಟ್ ಇತ್ಯಾದಿ. ಇವುಗಳನ್ನು ಮನುಷ್ಯ ಉತ್ಪಾದಿಸಿ ಅವುಗಳಿಗೆ ಬೆಲೆಕೊಟ್ಟುಕೊಂಡುಕೊಳ್ಳಬೇಕಾಗುತ್ತದೆ. ಏಕೆಂದರೆ ಇವು ವಿರಳತೆಯಿಂದ ಕೂಡಿರುತ್ತವೆ. ಆದರೆ ಕೆಲವು ಸಂದರ್ಭಗಳಲ್ಲಿ ಉಚಿತವಾಗಿ ದೊರೆಯುವ ವಸ್ತುಗಳು ಆರ್ಥಿಕ ವಸ್ತುಗಳಾಗಬಹುದು. ಕೆರೆಯಲ್ಲಿ ದೊರೆಯುವ ನೀರು ಉಚಿತವಾದ ವಸ್ತು. ಆದರೆ, ನೀರು ಉಚಿತವಾಗಿ ದೊರೆಯುವ ವಸ್ತುವೂ ಹೌದು ಹಾಗೂ ವಿರಳತೆಯಿಂದ ಕೂಡಿದ ವಸ್ತುವೂ ಹೌದು. ಹೇಗೆಂದರೆ, ಕೆರೆಗೆ ಹೋಗಿ ಡ್ರಮ್‌ಗಳಲ್ಲಿ ನೀರನ್ನು ತುಂಬಿಕೊಂಡು ಬಂದರೆ ನೀರು ಉಚಿತವಾದ ವಸ್ತು. ಆದರೆ,

ಅದೇ ನೀರನ್ನು ಪುರಸಭೆಯವರು ನಲ್ಲಿ (ಕೊಳಾಯಿಗಳ) ಮೂಲಕ ಮನೆಗಳಿಗೆ ಒದಗಿಸಿದರೆ ಅದಕ್ಕೆ ಹಣ ಪಾವತಿ ಮಾಡಬೇಕು. ಈ ಸಂದರ್ಭದಲ್ಲಿ ನಲ್ಲಿಯ ನೀರು ಆರ್ಥಿಕ ವಸ್ತುವಾಗುವುದು. ಆದ್ದರಿಂದ ಸಂದರ್ಭಕ್ಕನುಗುಣವಾಗಿ ಉಚಿತ ವಸ್ತುಗಳು ಆರ್ಥಿಕ ವಸ್ತುಗಳಾಗಿ ಮಾರ್ಪಡುತ್ತವೆ.

(ii) **ಗ್ರಾಹಕರ ವಸ್ತು ಮತ್ತು ಉತ್ಪಾದಕರ ವಸ್ತುಗಳು :** ಆರ್ಥಿಕ ವಸ್ತುಗಳನ್ನು 'ಗ್ರಾಹಕರ ವಸ್ತು'ಗಳೆಂದೂ, ಉತ್ಪಾದಕರ ವಸ್ತುಗಳೆಂದೂ ವಿಂಗಡನೆ ಮಾಡಬಹುದು. ಗ್ರಾಹಕರ ವಸ್ತುಗಳು ನೇರವಾಗಿ ಗ್ರಾಹಕರನ್ನು ಸಂತೃಪ್ತಿ ಪಡಿಸುತ್ತವೆ. ಉದಾಹರಣೆಗೆ ಆಹಾರ, ಬ್ರೆಡ್ಡು ಇತ್ಯಾದಿ ಉತ್ಪಾದಕರ ವಸ್ತುಗಳು ನೇರವಾಗಿ ಗ್ರಾಹಕರ ಇಷ್ಟಗಳನ್ನು ತೃಪ್ತಿಪಡಿಸುವುದಿಲ್ಲ. ಉದಾಹರಣೆಗೆ ಬಟ್ಟೆಯನ್ನು ತಯಾರಿಸುವ ಯಂತ್ರ. ಇದು ಉತ್ಪಾದಕರ ವಸ್ತು. ಈ ವಸ್ತುವು ಗ್ರಾಹಕರ ಇಷ್ಟವನ್ನು ತೃಪ್ತಿಪಡಿಸುವುದಿಲ್ಲ. ಆದರೆ ಯಂತ್ರದಿಂದ ಬಟ್ಟೆಗಳನ್ನು ತಯಾರಿಸ ಬಹುದು. ಈ ಬಟ್ಟೆಗಳು ಗ್ರಾಹಕರನ್ನು ಸಂತೃಪ್ತಿ ಪಡಿಸುತ್ತವೆ. ಅಂದರೆ ಯಂತ್ರ ದಿಂದ ಉತ್ಪಾದಿಸಲ್ಪಟ್ಟ ಬಟ್ಟೆ ಗ್ರಾಹಕರನ್ನು ತೃಪ್ತಿ ಪಡಿಸಿದರೂ ಇಲ್ಲಿ ನೇರವಾದ ತೃಪ್ತಿ ಇರುವುದಿಲ್ಲ. ಕೆಲವು ವೇಳೆ ಗ್ರಾಹಕರ ವಸ್ತು ಉತ್ಪಾದಕರ ವಸ್ತುವಾಗಬಹುದು. ಒಂದು ಕಿಲೋಗ್ರಾಂ ಆಲೂಗಡ್ಡೆಯನ್ನು ಉತ್ಪಾದಕರ ವಸ್ತುವಾಗಿಯೂ ಅಥವಾ ಗ್ರಾಹಕರ ವಸ್ತುವಾಗಿಯೂ ಪರಿಗಣಿಸಬಹುದು. ಆಲೂಗಡ್ಡೆಯನ್ನು ಮನೆಗೆ ತಂದು ಬೇಯಿಸಿ ಪಲ್ಯ ಮಾಡಿ ತಿಂದರೆ ತೃಪ್ತಿ ಸಿಗುತ್ತದೆ. ಈ ಸಂದರ್ಭದಲ್ಲಿ ಆಲೂಗಡ್ಡೆ ಗ್ರಾಹಕರ ವಸ್ತು. ಆದರೆ ಅದೇ ಆಲೂಗಡ್ಡೆಯನ್ನು ರೈತ ಬೀಜವಾಗಿ ಉಳಿಸಿ ಅದರಿಂದ ಹಲವು ಆಲೂಗಡ್ಡೆಗಳನ್ನು ಉತ್ಪಾದಿಸಿ ಮಾರುಕಟ್ಟೆಯಲ್ಲಿ ಅವುಗಳನ್ನು ಮಾರಾಟ ಮಾಡಿ ಹಣವನ್ನು ಗಳಿಸಿದಾಗ ಅದು 'ಉತ್ಪಾದಕರ ವಸ್ತು'.

(iii) **ಏಕೋಪಯೋಗ ವಸ್ತುಗಳು ಹಾಗೂ ಬಾಳಿಕೆಯ ವಸ್ತುಗಳು :** ವಸ್ತುಗಳನ್ನು ಏಕೋಪಯೋಗ ವಸ್ತು ಹಾಗೂ ಬಾಳಿಕೆಯ ವಸ್ತುಗಳೆಂದು ವಿಂಗಡಣೆ ಮಾಡಬಹುದು. 'ಏಕೋಪಯೋಗ ವಸ್ತು'ಗಳೆಂದರೆ ಒಂದೇ ಬಾರಿ ಬಳಸಲ್ಪಡುವಂತಹ ವಸ್ತುಗಳು. ಉದಾಹರಣೆಗೆ ಬೆಂಕಿಕಡ್ಡಿ. ಒಂದು ಸಲ ಬೆಂಕಿಕಡ್ಡಿಯನ್ನು ಗೀರಿದರೆ ಅದರ ಉಪಯೋಗ ಹಾಗೂ ಉಪಭೋಗ ಪೂರ್ತಿಯಾದಂತೆ. ಇದೇ ರೀತಿ ಪತ್ರಿ, ಪೇಪರ್ ಮುಂತಾದ ವಸ್ತುಗಳನ್ನು ಏಕೋಪಯೋಗ ವಸ್ತುಗಳೆಂದು ಕರೆಯಬಹುದು. 'ಬಾಳಿಕೆಯ ವಸ್ತು'ಗಳೆಂದರೆ ಪುನಃ ಪುನಃ ಬಳಸುವ ವಸ್ತುಗಳು ಅಥವಾ ದೀರ್ಘಕಾಲ ಬಾಳಿಕೆ ಬರುವ ವಸ್ತುಗಳು. ಉದಾಹರಣೆಗೆ ಸ್ಕೂಟರ್, ಅಂಗಿ ಇತ್ಯಾದಿ. ಇವು ಗಳನ್ನು ಪದೇ ಪದೇ ಹಾಗೂ ದೀರ್ಘಕಾಲ ಬಳಸಬಹುದು.

(iv) **ವರ್ಗೀಯ ವಸ್ತು ಹಾಗೂ ಅವರ್ಗೀಯ ವಸ್ತುಗಳು :** ವಸ್ತು ಗಳನ್ನು ವರ್ಗೀಯ ವಸ್ತುಗಳು ಮತ್ತು ಅವರ್ಗೀಯ ವಸ್ತುಗಳು ಎಂಬುದಾಗಿ

ವಿಂಗಡಿಸಬಹುದು. 'ವರ್ಗೀಯ ವಸ್ತು'ಗಳೆಂದರೆ ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ವರ್ಗಾಯಿಸಲು ಸಾಧ್ಯವಾಗುವ ವಸ್ತುಗಳು. ಪುಸ್ತಕಗಳು, ಸ್ಕೂಟರ್‌ಗಳು ಭೌತಿಕ ವಸ್ತುಗಳು ಹಾಗೂ ಅವು ವರ್ಗಾವಣೆಯ ಗುಣವನ್ನು ಪಡೆದಿರುತ್ತವೆ. ಆದರೆ ಕೆಲವು ವಸ್ತುಗಳು ವರ್ಗಾವಣೆಯ ಶಕ್ತಿಯನ್ನು ಪಡೆದಿರುವುದಿಲ್ಲ. ಅಂತಹ ವಸ್ತುಗಳನ್ನು 'ಅವರ್ಗೀಯ ವಸ್ತು'ಗಳು ಎನ್ನುತ್ತೇವೆ. ಉದಾ : ಡಾಕ್ಟರರ ನಿಪುಣತೆ, ಉಪಾಧ್ಯಾಯರ ಪಾಠ ಮಾಡುವ ಶೈಲಿ, ಇವುಗಳನ್ನು ಬೇರೆ ವ್ಯಕ್ತಿಗಳಿಗೆ ವರ್ಗಾವಣೆ ಮಾಡಲು ಬರುವುದಿಲ್ಲ.

(v) **ದೃಶ್ಯವಸ್ತು ಹಾಗೂ ಅದೃಶ್ಯವಸ್ತುಗಳು :** ವಸ್ತುಗಳನ್ನು ದೃಶ್ಯ ವಸ್ತು ಹಾಗೂ ಅದೃಶ್ಯ ವಸ್ತುಗಳೆಂದು ವಿಂಗಡನೆ ಮಾಡಬಹುದು. 'ದೃಶ್ಯವಸ್ತು' ಗಳೆಂದರೆ ಕಣ್ಣಿಗೆ ಕಾಣುವ ಪದಾರ್ಥಗಳು. ಉದಾಹರಣೆಗೆ ಮೇಜು, ಕುರ್ಚಿ, ಮನೆ ಇತ್ಯಾದಿ. 'ಅದೃಶ್ಯ ವಸ್ತು'ಗಳೆಂದರೆ ಕಣ್ಣಿಗೆ ಕಾಣಿಸದಂತಹ ಪದಾರ್ಥಗಳು. ಉದಾಹರಣೆಗೆ ಸ್ನೇಹ, ಒಳ್ಳೆಯನಡತೆ, ಪ್ರಾಮಾಣಿಕತನ. ಇವುಗಳನ್ನು ಕಣ್ಣಿನಿಂದ ನೋಡಲಾಗುವುದಿಲ್ಲ. ಆದರೆ ಇವುಗಳಿಗೆ ಬೆಲೆ ಇದೆ.

6. ಸೇವೆ

ಮನುಷ್ಯ ಮಾಡುವ ಕೆಲಸ 'ಸೇವೆ'. ಸೇವೆಯನ್ನು ಕಣ್ಣಿನಿಂದ ನೋಡಲಾಗು ವುದಿಲ್ಲ. ರೋಗಿಯು ವೈದ್ಯರಿಂದ ಸೇವೆಯನ್ನು ಪಡೆಯುತ್ತಾನೆ. ಆದರೆ ರೋಗಿಯು ತನ್ನ ರೋಗದಿಂದ ಗುಣವನ್ನು ಹೊಂದಿ, ಸೇವೆಯ ಲಾಭವನ್ನು ಅನುಭವಿಸು ತ್ತಾನೆ. ಹಾಗೆಯೇ ಶಿಕ್ಷಕನ ಹಾಗೂ ವಕೀಲನ ಸೇವೆಗಳು, ಕಣ್ಣಿಗೆ ಗೋಚರಿಸುವುದಿಲ್ಲ. ಆದರೆ ಆ ಸೇವೆಗಳ ಲಾಭಗಳನ್ನು ಹೊಂದಬಹುದು. ಈ ಸೇವೆಗಳು ನಮ್ಮ ಇಷ್ಟ ಗಳನ್ನು ತೃಪ್ತಿ ಪಡಿಸುತ್ತವೆ. ಮಾನವನು ತನ್ನ ಇಷ್ಟಗಳನ್ನು ಈಡೇರಿಸಿಕೊಳ್ಳಲು ಸೇವೆಗಳನ್ನು ಉಪಭೋಗಿಸುತ್ತಾನೆ.

7. ಬಯಕೆಗಳು

ಮಾನವನು ಬಯಕೆಗಳ ಆಗರ. ಅವನ ಇಚ್ಛೆಗಳು ಅಪಾರ ಮತ್ತು ಅನಂತ. ಈ ಇಚ್ಛೆಗಳಿಗೆ ಮಿತಿ ಎಂಬುದೇ ಇಲ್ಲ. ಒಂದು ಇಚ್ಛೆಯು ಇನ್ನೊಂದು ಇಚ್ಛೆಗೆ ಎಡೆ ಮಾಡಿ ಕೊಡುತ್ತದೆ. ಅವನ ಇಚ್ಛೆಗಳು ಅವನು ಹುಟ್ಟಿದಂದಿನಿಂದಲೇ ಪ್ರಾರಂಭವಾಗಿ ಅವನು ಮರಳಿ ಮಣ್ಣಿಗೆ ಸೇರುವವರೆಗೆ ಒಂದಲ್ಲ ಒಂದು ರೀತಿಯಲ್ಲಿ ಕಾಣಿಸಿಕೊಳ್ಳು ತ್ತವೆ. ಅಂದರೆ ಈ ಪ್ರಪಂಚದಲ್ಲಿ ಮಾನವ ಜೀವಿಸಿರುವವರೆಗೆ ಅವನ ಇಚ್ಛೆಗಳೂ ಜೀವಿಸಿರುತ್ತವೆ. ಅವನ ಕೆಲವು ಇಷ್ಟಗಳು ಜೀವನಕ್ಕೆ ಅವಶ್ಯಕವಾಗಿರುತ್ತವೆ. ಸುಖ ದಾಯಕವಾಗಿರುತ್ತವೆ ; ಹಿತಕರವಾಗಿರುತ್ತವೆ, ಕೆಲವು ಇಷ್ಟಗಳು ವಿಲಾಸಮಯ

ಆಗಿರುತ್ತವೆ. ಮನುಷ್ಯನ ಜೀವನವು ಸುಗಮವಾಗಿ ಸಾಗಬೇಕಾದರೆ ಅವನಿಗೆ ಕೆಲವು ಅವಶ್ಯಕ ವಸ್ತುಗಳು ಬೇಕು – ಹಸಿವನ್ನು ನೀಗಿಸಿಕೊಳ್ಳಲು ಆಹಾರ, ಮರ್ಯಾದೆಯಿಂದ ಬಾಳಲು ಬಟ್ಟೆ ಮತ್ತು ರಕ್ಷಣೆಗಾಗಿ ವಸತಿ. ಇವುಗಳಲ್ಲದೆ ಮನುಷ್ಯನು ಸೈಕಲ್, ರೇಡಿಯೊ, ಟೇಬಲ್, ಮನರಂಜನೆ ಮುಂತಾದ ಅನೇಕ ಇಷ್ಟಗಳನ್ನು ಹೊಂದಿರುವನು. ಈ ವಸ್ತುಗಳು ಅವನಿಗೆ ಸುಖದಾಯಕ ಜೀವನವನ್ನು ಒದಗಿಸುತ್ತವೆ. ಈ ವಸ್ತುಗಳನ್ನು ಉತ್ಪಾದಿಸದೆ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಆಹಾರದ ಇಚ್ಛೆಯನ್ನು ತೃಪ್ತಿಪಡಿಸಲು ಆಹಾರವನ್ನು ಉತ್ಪಾದಿಸಬೇಕು. ಶರೀರವನ್ನು ಮುಚ್ಚಿಕೊಳ್ಳಲು ಬಟ್ಟೆಯನ್ನು ತೊಡಬೇಕು. ಅಂದರೆ ಬಟ್ಟೆಯನ್ನು ತಯಾರಿಸಬೇಕು. ಹೀಗೆ ಮನುಷ್ಯನ ನಾನಾ ವಿಧವಾದ ಬೇಡಿಕೆಗಳನ್ನು ತೃಪ್ತಿಪಡಿಸಿಕೊಳ್ಳಲು ವಸ್ತುಗಳನ್ನು ಉತ್ಪಾದಿಸುವುದು ಅಗತ್ಯ. ಇವುಗಳಿಲ್ಲದೆ ಮಾನವ ಜೀವಿಸಲಾರ. ಮಾನವನ ಬಯಕೆಗಳು ಎಲ್ಲ ಆರ್ಥಿಕ ಚಟುವಟಿಕೆಗಳಿಗೆ ಎಡೆಮಾಡಿ ಕೊಡುತ್ತವೆ. ತನ್ನ ಬಯಕೆಗಳನ್ನು ಪೂರೈಸಿಕೊಂಡು ತೃಪ್ತಿಯನ್ನು ಪಡೆಯಲು, ಆರ್ಥಿಕ ಚಟುವಟಿಕೆಗಳಲ್ಲಿ ನಿರತವಾಗಿ ಹಣವನ್ನು ಗಳಿಸಿ, ಆ ಹಣವನ್ನು ವಸ್ತುಗಳಿಗೆ ವಿನಿಯೋಗಿಸಿ ಸುಖವನ್ನು ಹೊಂದುವನು. ಅಂದರೆ ಮನುಷ್ಯನ ಬಯಕೆಗಳು ಮತ್ತು ಬೇಡಿಕೆಯು ಉತ್ಪಾದನೆಗೆ ಚಾಲನೆ ಕೊಡುತ್ತವೆ.

ಹಿಂದಿನ ಕಾಲದಲ್ಲಿ ಮನುಷ್ಯನ ಬಯಕೆಗಳು ಹೆಚ್ಚಾಗಿರಲಿಲ್ಲ. ಅವನು ಬೇಟೆಯಾಡುವ ಘಟ್ಟದಲ್ಲಿ ಅವನ ಬಯಕೆಗಳು ಬಿಲ್ಲು, ಬಾಣಗಳು, ಪ್ರಾಣಿಗಳ ಮಾಂಸ, ವಾಸಿಸಲು ಗುಹೆಗಳು, ಮರದ ಪೊಟರೆಗಳು, ಮೈಯನ್ನು ಮುಚ್ಚಿಕೊಳ್ಳಲು ಪ್ರಾಣಿಗಳ ಚರ್ಮ ಇತ್ಯಾದಿಗಳಿಗೆ ಮಾತ್ರ ಸೀಮಿತವಾಗಿದ್ದಿತು. ಆದರೆ ಕಾಲಕ್ರಮೇಣ ಕೃಷಿಯನ್ನು ಕಾರ್ಯರೂಪಕ್ಕೆ ತಂದಮೇಲೆ ಅವನ ಬಯಕೆಗಳು ನೇಗಿಲು, ಎತ್ತುಗಳು, ಉಡಲು ಬಟ್ಟೆ, ವಾಸಿಸಲು ಸಣ್ಣ ಗುಡಿಸಲು ಇತ್ಯಾದಿಗಳಿಗೆ ವ್ಯಾಪಿಸಿತು. ಅಂದರೆ ಮನುಷ್ಯನು ಮೊದಲು ಆಹಾರ, ಬಟ್ಟೆ ವಸತಿಗಳಿಂದಲೇ ಪೂರ್ಣ ತೃಪ್ತಿ ಹೊಂದುತ್ತಿದ್ದನು. ಕಾಲಕ್ರಮೇಣ ನಾಗರೀಕತೆ ಬೆಳೆದು ಅವನ ಬಯಕೆಗಳು ಹೆಚ್ಚಾದವು. ಆಧುನಿಕ ಮಾನವನ ಬಯಕೆಗಳು ಅನಿಯಮಿತ ಹಾಗೂ ವೈವಿಧ್ಯಮಯವಾಗಿವೆ. ಇಂದಿನ ಯಾಂತ್ರಿಕ ಯುಗದಲ್ಲಿ ಮನುಷ್ಯ ಸಾವಿರಾರು ಇಷ್ಟಗಳನ್ನು ಹೊಂದಿದ್ದಾನೆ. ಇಪ್ಪತ್ತನೆಯ ಶತಮಾನದಲ್ಲಿ ಮನುಷ್ಯ, ವಿಮಾನದಲ್ಲಿ ಹಕ್ಕಿಯಂತೆ ಹಾರುತ್ತಾನೆ; ಮನರಂಜನೆಗಾಗಿ ಸಿನಿಮಾಗಳನ್ನು ನೋಡುತ್ತಾನೆ. ಸುಖವಾದ ಜೀವನ ನಡೆಸುವ ಆಸೆಯೂ ಅವನಲ್ಲಿ ಮೂಡುತ್ತದೆ.

ಇಂದು ಮನುಷ್ಯನ ಬಯಕೆಗಳ ಸಂಖ್ಯೆ ಅಗಾಧವಾಗಿ ಬೆಳೆದಿದೆ. ಅವನು ತನ್ನ ಕೆಲವು ಬಯಕೆಗಳನ್ನು ತೃಪ್ತಿಪಡಿಸಿದಂತೆ ಹೊಸ ಹೊಸ ಬಯಕೆಗಳು ತೃಪ್ತಿಗಾಗಿ ಕಾದು ನಿಂತಿರುತ್ತವೆ. ಮಾನವನ ಬಯಕೆಗಳು ಕೆಲವು ಮುಖ್ಯ ಲಕ್ಷಣಗಳನ್ನು ಹೊಂದಿವೆ.

ಬಯಕೆಗಳ ಮುಖ್ಯ ಲಕ್ಷಣಗಳು : ಬಯಕೆಗಳನ್ನು ಉತ್ಕಟವಾದ ಅಪೇಕ್ಷೆಗಳೆಂದು ಕರೆಯಬಹುದು. ಇದು ಒಂದು ವಸ್ತುವಿನ ಬಗೆಗಿರುವ ತೀವ್ರವಾದ ಅಪೇಕ್ಷೆಯನ್ನು ತೋರಿಸುತ್ತದೆ. ವ್ಯಕ್ತಿಗಳು ಪಡೆದಿರುವ ಈ ಬಯಕೆಗಳು ಎಲ್ಲ ಬಗೆ ಆರ್ಥಿಕ ಚಟುವಟಿಕೆಗಳಿಗೆ ಮೂಲ ಕಾರಣವೆನ್ನಬಹುದು. ಬಯಕೆಗಳ ತೃಪ್ತಿಯಿಂದ ಮಾನವನಿಗೆ ಸುಖವು ಲಭಿಸುವುದು. ಇದಕ್ಕೆ ಆರ್ಥಿಕ ಒಲವು ಬಹಳ ಮುಖ್ಯ. ಆರ್ಥಿಕ ಒಲವೇ ಸುಖದ ಸೋಪಾನ. ಈಗ ಬಯಕೆಗಳು ಮುಖ್ಯವಾಗಿ ಆರು ಬಗೆಯಾಗಿದೆ.

(i) **ಬಯಕೆಗಳು ಅಸಂಖ್ಯ :** ಮನುಷ್ಯನ ಬಯಕೆಗಳು ಅಸಂಖ್ಯ. ಅವುಗಳಿಗೆ ಮಿತಿ ಇಲ್ಲ. ಒಂದು ಬಯಕೆಯನ್ನು ತೃಪ್ತಿಪಡಿಸಿದ ಕೂಡಲೇ ಮತ್ತೊಂದು ಉದ್ಭವವಾಗುತ್ತದೆ. ಬೇಡಿಕೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು – ಅತ್ಯವಸರದ ಬಯಕೆಗಳು, ಅವಸರವಿಲ್ಲದ ಬಯಕೆಗಳು. ಆಹಾರ, ಬಟ್ಟೆ ಮತ್ತು ವಸತಿಗಳು ಮನುಷ್ಯನ ಅತಿ ಅವಸರದ ಬಯಕೆಗಳು. ಇವುಗಳನ್ನು ಆದಷ್ಟು ತ್ವರಿತವೇಗದಲ್ಲಿ ತೃಪ್ತಿ ಪಡಿಸಬೇಕು. ಇಲ್ಲದಿದ್ದರೆ ಅವನ ಇರುವಿಕೆಗೆ ಚ್ಯುತಿ ಬರುತ್ತದೆ. ಇವು ಅತ್ಯಾವಶ್ಯಕಗಳೂ ಅಹುದು. ಇವುಗಳನ್ನು ಅತ್ಯವಸರದ ಬಯಕೆಗಳು ಎನ್ನಬಹುದು. ಕುರ್ಚಿ, ರೇಡಿಯೋ, ಪುಸ್ತಕಗಳ ಬೇಡಿಕೆಗಳು ಅವಸರವಿಲ್ಲದ ಬಯಕೆಗಳು. ಇವುಗಳನ್ನು ಕೊಳ್ಳದಿದ್ದರೂ ಪರವಾಗಿಲ್ಲ. ವ್ಯಕ್ತಿಯು ತನ್ನ ಜೀವನ ಸಾಗಿಸಬಲ್ಲ. ಆದ್ದರಿಂದ ಮೊದಲು ಮನುಷ್ಯ ತನ್ನಲ್ಲಿರುವ ಹಣದಲ್ಲಿ ಜರೂರು ಅಥವಾ ಅತ್ಯವಸರದ ವಸ್ತುಗಳನ್ನು ತೃಪ್ತಿಪಡಿಸಿಕೊಳ್ಳುವನು. ಹಣ ಉಳಿದರೆ ಅವಸರವಿಲ್ಲದ ಬಯಕೆಗಳನ್ನು ತೃಪ್ತಿಪಡಿಸಲು ಯತ್ನಿಸುವನು. ಮಾನವ ಸಂಪೂರ್ಣವಾಗಿ ಎಂದಿಗೂ ತೃಪ್ತಿ ಹೊಂದಲಾರ. ಅವನು ಜೀವಿಸಿರುವವರೆಗೆ ಅವನ ಬಯಕೆಗಳಿಗೆ ಮಿತಿಯೇ ಇಲ್ಲವೆನ್ನಬಹುದು. ಅಂದರೆ ಅವನ ಬಯಕೆಗಳು ಅನಿಯಮಿತ ಹಾಗೂ ಅಪಾರವಾದವು.

(ii) **ಕೆಲವು ಬಯಕೆಗಳು ಪರಸ್ಪರ ಪೂರಕ :** ಕೆಲವು ಬಯಕೆಗಳು ಪರಸ್ಪರ ಪೂರಕ ಗುಣವನ್ನು ಪಡೆದಿರುತ್ತವೆ. ಮಾನವನ ಅನೇಕ ಬಯಕೆಗಳಲ್ಲಿ ಕೆಲವು ಒಂದಕ್ಕೊಂದು ಪೂರಕಗಳಾಗಿರುತ್ತವೆ. ಮೋಟಾರು ಕಾರು ಕೊಂಡರೆ ಸಾಲದು. ಅದಕ್ಕೆ ಚಾಲನ ಶಕ್ತಿಯನ್ನು ಕೊಡಲು ಪೆಟ್ರೋಲ್ ಬೇಕು. ಆದ್ದರಿಂದ ಕಾರು, ಪೆಟ್ರೋಲ್‌ಗಳು ಒಂದಕ್ಕೊಂದು ಪೂರಕ.

(iii) **ಕೆಲವು ಬಯಕೆಗಳು ಸ್ಪರ್ಧಾತ್ಮಕ :** ಮನುಷ್ಯನ ಅನೇಕ ಬಯಕೆಗಳು ಒಂದಕ್ಕೊಂದು ಪೈಪೋಟಿಯುಂತವಾಗಿರುತ್ತವೆ. ಅಂದರೆ ಒಂದು ಇಷ್ಟ ಮತ್ತೊಂದು ಇಷ್ಟದೊಂದಿಗೆ ಸ್ಪರ್ಧಿಸುತ್ತದೆ. ಈ ಸಮಸ್ಯೆ ಉದ್ಭವಿಸುವುದು ಸಾಧನ ಸಂಪತ್ತುಗಳು ಮಿತವಾಗಿದ್ದು, ಬಯಕೆಗಳು ಅನಿಯುತವಾಗಿದ್ದಾಗ ಮಾತ್ರ. ಸಾಮಾನ್ಯವಾಗಿ ಸಂಪತ್ಸಾಧನಗಳು ಮಿತವಾಗಿರುವುದರಿಂದ ಎಲ್ಲ ಬಯಕೆಗಳನ್ನು ತೃಪ್ತಿಪಡಿಸಲಾಗುವುದಿಲ್ಲ. ಉದಾಹರಣೆಗೆ ಒಬ್ಬನಲ್ಲಿ ಎರಡು ರೂಪಾಯಿಗಳಿವೆ. ಆತನಿಗೆ ಎರಡು

ಬಯಕೆಗಳು. ಹಸಿವನ್ನು ಇಂಗಿಸಿಕೊಳ್ಳಲು ಊಟ ಮಾಡಬೇಕು ಮತ್ತು ಮನರಂಜನೆಗಾಗಿ ಸಿನಿಮಾ ನೋಡಬೇಕು. ಆದರೆ ಎರಡು ರೂಪಾಯಿಗಳಿಂದ ಒಂದು ಆಶೆ ಮಾತ್ರ ನೆರವೇರುತ್ತದೆ – ಊಟವನ್ನಾದರೂ ಮಾಡಬೇಕು : ಇಲ್ಲವೇ ಸಿನಿಮಾವನ್ನಾದರೂ ನೋಡಬಹುದು. ಎರಡನ್ನೂ ಪೂರೈಸಿಕೊಳ್ಳಲು ಸಾಧ್ಯವಿಲ್ಲ. ಈ ಬಯಕೆಗಳು ಒಂದಕ್ಕೊಂದು ಸ್ಪರ್ಧಿಸಿ ಅವನ ಮನಸ್ಸಿನಲ್ಲಿ ಗೊಂದಲವನ್ನು ತಂದೊಡ್ಡುತ್ತವೆ. ಈ ಬಯಕೆಗಳು ಒಂದಕ್ಕೊಂದು ಸ್ಪರ್ಧಿಸುವ ಬಯಕೆಗಳು.

(iii) **ಸಂಪೂರ್ಣ ತೃಪ್ತಿಕೊಡುವ ಗುಣಹೊಂದಿದ ಬಯಕೆಗಳು :** ಕೆಲವು ಬಯಕೆಗಳು ಸಂಪೂರ್ಣ ತೃಪ್ತಿಹೊಂದುವ ಗುಣ ಪಡೆದಿವೆ. ಮನುಷ್ಯನ ಬಯಕೆಗಳು ಅನಂತವಾದರೂ, ಅವುಗಳಲ್ಲಿ ಒಂದು ನಿರ್ದಿಷ್ಟ ಕಾಲದಲ್ಲಿ ಸಂಪೂರ್ಣವಾಗಿ ತೃಪ್ತಿಯನ್ನು ಉಂಟುಮಾಡುವದಾಗಿರಬಹುದು. ಉದಾಹರಣೆಗೆ, ಹಸಿವಾದಾಗ ಊಟ ಮಾಡುತ್ತೇವೆ. ಇದರಿಂದಹಸಿವು ಇಂಗುತ್ತದೆ. ಅನಂತರ ರುಚಿಯಾದಸಿಹಿ ತಿಂಡಿಗಳಿದ್ದರೂ ಬೇಡವೆನ್ನುತ್ತೇವೆ. ಏಕೆಂದರೆ ಊಟದ ಬಯಕೆ ಸಂಪೂರ್ಣವಾಗಿ ತೃಪ್ತಿಪಡಿಸಲ್ಪಟ್ಟಿದೆ. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಕೆಲವು ಬಯಕೆ ಸಂಪೂರ್ಣ ತೃಪ್ತಿ ಸಾಧ್ಯ.

(v) **ನಾನಾವಿಧಗಳಿಂದ ತೃಪ್ತಿಗೊಳಿಸುವ ಬಯಕೆಗಳು :** ಕೆಲವು ಬಯಕೆಗಳನ್ನು ನಾನಾ ಬಗೆಯ ವಿಧಾನಗಳಿಂದ ತೃಪ್ತಿಪಡಿಸಬಹುದು. ಉದಾಹರಣೆಗೆ, ನೀರಿನಿಂದ, ಶರಬತ್ತಿನಿಂದ ಹಾಗೂ ಮಜ್ಜಿಗೆಯಿಂದ ಬಾಯಾರಿಕೆಯನ್ನು ತಣಿಸಬಹುದು. ಪಾನೀಯ ಕುಡಿಯಬೇಕೆನ್ನುವ ಮನುಷ್ಯನ ಬಯಕೆಯನ್ನು ಹಾಲು, ಟೀ, ಕಾಫಿಗಳ ಮೂಲಕವಾಗಿಯೂ ತೃಪ್ತಿಪಡಿಸಬಹುದು. ಈ ರೀತಿ ಅನೇಕ ವಿಧವಾದ ವಸ್ತುಗಳಿಂದ ಒಂದು ಬಯಕೆಯನ್ನು ತೃಪ್ತಿಪಡಿಸಬಹುದು.

(vi) **ಪುನರಾವರ್ತಿತ ಬಯಕೆಗಳು :** ಕೆಲವು ಬಯಕೆಗಳು ಒಂದು ಸಲ ತೃಪ್ತಿಯನ್ನು ಪಡೆದಾಗ್ಯೂ ಪುನಃ ಪುನಃ ಕಾಣಿಸಿಕೊಳ್ಳುತ್ತವೆ, ಉದಾಹರಣೆಗೆ ಹಸಿವು. ಹಸಿವಾದ ಕೂಡಲೇ ಆಹಾರವನ್ನು ಸೇವಿಸಿದರೆ ಹಸಿವು ಹಿಂಗಿ, ತೃಪ್ತಿಯಾಗುತ್ತದೆ. ಆದರೆ ಕೆಲವು ಗಂಟೆಗಳ ನಂತರ ಪುನಃ ಹಸಿವು ಕಾಣಿಸಿಕೊಳ್ಳುತ್ತದೆ. ಆಗ ಮತ್ತೊಮ್ಮೆ ಆಹಾರ ಸೇವಿಸಿ ತೃಪ್ತಿ ಪಡೆಯಬೇಕು. ಇದೇ ರೀತಿ ಬಾಯಾರಿಕೆಯೂ ಪುನಃ ಪುನಃ ಕಾಣಿಸಿಕೊಳ್ಳುವುದು.

ಈ ರೀತಿ ಬಯಕೆಗಳು ನಾನಾ ಬಗೆಯ ವೈವಿಧ್ಯಮಯ ಲಕ್ಷಣಗಳನ್ನು ಹೊಂದಿ ಮಾನವನ್ನ ಆರ್ಥಿಕ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ. ಬಯಕೆಗಳ ಈ ಲಕ್ಷಣಗಳಿಂದಲೇ ಅನೇಕ ಆರ್ಥಿಕ ನಿಯಮಗಳು ರೂಪುಗೊಂಡಿವೆ. ಯಾವುದೊಂದು ವಿಶಿಷ್ಟ ಬಯಕೆಯನ್ನು ಸಂಪೂರ್ಣ ತೃಪಿಗೊಳಿಸಬಹುದು ಎಂಬ ಲಕ್ಷಣದಿಂದ ಇಳಿ ಮುಖ ಅಂಚಿನ ತುಷ್ಟಿಗುಣ ಸಿದ್ಧಾಂತವು ರಚಿಸಲ್ಪಟ್ಟಿದೆ. ಇದರಂತೆಯೇ ಮೂರನೆಯ ಲಕ್ಷಣವಾದ ಬಯಕೆಗಳ ಪೈಪೋಟಿಯ ಆಧಾರದ ಮೇಲೆ ಸಮಅಂಚಿನ ತುಷ್ಟಿಗುಣದ

ನಿಯಮವನ್ನು ರಚಿಸಲಾಗಿದೆ. ಅವುಗಳನ್ನು ವಿವರವಾಗಿ ಮುಂದೆ ಪ್ರತ್ಯೇಕವಾಗಿ ಪರಿಶೀಲಿಸಿದೆ. ಈ ರೀತಿ ಬಯಕೆಗಳು ನಾನಾ ಲಕ್ಷಣಗಳನ್ನು ಹೊಂದಿರುತ್ತವೆ.

ಬಯಕೆಗಳ ಪೂರೈಸುವ ವಸ್ತುಗಳ ವರ್ಗೀಕರಣ : ಮಾನವನು ಅನೇಕ ಬಯಕೆಗಳನ್ನು ಹೊಂದಿರುವುದರಿಂದ ಅವುಗಳ ಎಣಿಕೆ ಅಸಾಧ್ಯ. ಅದರೂ ಅವನ ಎಲ್ಲ ಬಗೆಯ ಬಯಕೆಗಳನ್ನು ಮುಖ್ಯವಾಗಿ ಮೂರು ಭಾಗಗಳನ್ನಾಗಿ ವಿಂಗಡಿಸ ಬಹುದು : (i) ಅತ್ಯಾವಶ್ಯಕ (ii) ಸುಖೋಪಯೋಗಿ ಮತ್ತು (iii) ವಿಲಾಸಿ.

(i) **ಅತ್ಯಾವಶ್ಯಕ :** ಮನುಷ್ಯ ತನ್ನ ಜೀವನದಲ್ಲಿ ಹಲವು ಬಯಕೆಗಳನ್ನು ತೃಪ್ತಿಪಡಿಸಲೇ ಬೇಕಾಗುತ್ತದೆ. ಆ ಬಯಕೆಗಳನ್ನು ತೃಪ್ತಿಪಡಿಸದೆ ಈ ಜಗತ್ತಿನಲ್ಲಿ ಜೀವಿಸಲು ಸಾಧ್ಯವೇ ಇಲ್ಲ. ಅಂದರೆ ಮನುಷ್ಯನ ಜೀವನಕ್ಕೆ ಮುಖ್ಯವಾಗಿ ಬೇಕಾ ಗುವ ವಸ್ತುಗಳಿಗೆ ಅತ್ಯಾವಶ್ಯಕ ವಸ್ತುಗಳು ಎಂದು ಕರೆಯಬಹುದು. ಉದಾಹರಣೆಗೆ ಆಹಾರ, ಬಟ್ಟೆ, ವಸತಿ. ಈ ವಸ್ತುಗಳಿಲ್ಲದೆ ಮನುಷ್ಯ ಜೀವಿಸುವುದೇ ಅಸಾಧ್ಯ. ಇದೇ ರೀತಿ ಉಪ್ಪು, ಸೀಮೆಎಣ್ಣೆ, ಕಡ್ಡಿಪೆಟ್ಟಿಗೆ, ಹಾಗೂ ಔಷಧಿ. ಇವು ಪ್ರತಿಯೊಬ್ಬನಿಗೂ ಸ್ವಲ್ಪಮಟ್ಟಿಗಾದರೂ ಬೇಕಾಗುತ್ತವೆ. ಎಂತಹ ಬಡವನಾದರೂ ಈ ವಸ್ತುಗಳನ್ನು ಕೊಳ್ಳಲೇಬೇಕು. ಅತ್ಯಾವಶ್ಯಕ ವಸ್ತುಗಳನ್ನು ಪುನಃ (ಅ) ಜೀವನಾವಶ್ಯಕ, (ಆ) ದಕ್ಷತೆಯ ಹಾಗೂ (ಇ) ಸಂಪ್ರದಾಯಿಕ ವಸ್ತುಗಳೆಂದು ಪುನಃ ವಿಂಗಡಿಸಬಹುದು. ಆಹಾರ, ಗಾಳಿ, ನೀರು ಇವು ಜೀವನಾವಶ್ಯಕ ವಸ್ತುಗಳು. ಈ ವಸ್ತುಗಳಿಲ್ಲದೆ ಕೆಲವು ಕ್ಷಣಗಳೂ ಜೀವನ ಸಾಗಲಾಗದು. ಈ ವಸ್ತುಗಳ ಉಪಭೋಗದಿಂದ ಜೀವನಾಧಾರ ವಾದ ಬಯಕೆಗಳನ್ನು ತೃಪ್ತಿಪಡಿಸಲು ಸಾಧ್ಯ. ಮನುಷ್ಯನಿಗೆ ಜೀವನಾಧಾರ ವಸ್ತು ಗಳಲ್ಲದೆ ಮತ್ತೆ ಕೆಲವು ವಸ್ತುಗಳು ಬೇಕಾಗುತ್ತವೆ. ಅಂದರೆ ಮನುಷ್ಯ ದಕ್ಷತೆಯಿಂದ ತನ್ನ ಕೆಲಸಗಳನ್ನು ನಿರ್ವಹಿಸಲು ಅವನು ಕೆಲವು ಬಯಕೆಗಳನ್ನು ತೃಪ್ತಿಗೊಳಿಸಬೇಕಾಗು ವುದು. ದಕ್ಷತೆಯ ವಸ್ತುಗಳಿಲ್ಲದಿದ್ದರೂ ಮನುಷ್ಯ ಜೀವಿಸಬಹುದು. ಆದರೆ ಅವನ ಕಾರ್ಯಶಕ್ತಿಯು ಕುಂಠಿತಗೊಳ್ಳುವುದು. ಹೆಚ್ಚು ಸತ್ವಗಳಿಂದ ಕೂಡಿದ ಆಹಾರ ಕೆಲಸದ ದಕ್ಷತೆಯನ್ನು ಹೆಚ್ಚಿಸುವುದು. ಆದ್ದರಿಂದ ಸತ್ವಪೂರಿತ ಆಹಾರದಿಂದ ಉತ್ಪಾದನಾ ಸಾಮರ್ಥ್ಯ ಹೆಚ್ಚುತ್ತದೆ. ಜೀವನಾವಶ್ಯಕ, ದಕ್ಷತೆ ಹೆಚ್ಚಿಸುವ ವಸ್ತು ಗಳಲ್ಲದೆ ಮನುಷ್ಯನಿಗೆ ಮತ್ತೆ ಕೆಲವು ವಸ್ತುಗಳು ಬೇಕಾಗುತ್ತವೆ. ಅಂದರೆ ನಮ್ಮ ಸಂಪ್ರದಾಯಗಳನ್ನು, ಪದ್ಧತಿಗಳನ್ನು ಅಳವಡಿಸಿಕೊಂಡು ಹೋಗಲು ಕೆಲವು ವಸ್ತುಗಳು ಅತ್ಯಾವಶ್ಯಕ. ಹಿಂದೂ ವಿವಾಹ ಪದ್ಧತಿಯಲ್ಲಿ ಮದುಮಗನಿಗೆ, ಕಟ್ಟುವ ಬಾಸಿಂಗ, ಮದುಮಗಳಿಗೆ ಕಟ್ಟುವ ಮಂಗಳ ಸೂತ್ರ ಇತ್ಯಾದಿ. ಇವುಗಳು ಹಿಂದಿನಿಂದಲೂ ಅನುಸರಿಸುತ್ತ ಬಂದ ಪದ್ಧತಿಗಳು ಇಂದು ಸಂಪ್ರದಾಯವಾಗಿಬಿಟ್ಟಿದೆ.

(ಆ) ಸುಖೋಪಯೋಗಿ : ಸುಖೋಪಯೋಗಿ ವಸ್ತುಗಳನ್ನು ಹಿತಕರ ವಸ್ತು ಗಳು ಎಂದು ಕರೆಯುವುದು ರೂಢಿ. ಮನುಷ್ಯ ಅತ್ಯಾವಶ್ಯಕ ವಸ್ತುಗಳನ್ನು ಪೂರೈಸಿ

ಕೊಂಡ ನಂತರ ತನ್ನ ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳಲು ಅವುಗಳ ಜೊತೆಗೆ ಕೆಲವು ಹಿತಕರ ವಸ್ತುಗಳನ್ನು ಬಳಸಲು ಪ್ರಯತ್ನಿಸುವನು. ಹಿತವಸ್ತುಗಳು ಎಂದರೆ ಸುಖದಿಂದ ಜೀವನವನ್ನು ಸಾಗಿಸಲು ನೆರವಾಗುವ ಕೆಲವು ವಸ್ತುಗಳು. ಪ್ರಕೃತಿಯು ನೀಡಿರುವ ನೆಲದ ಮೇಲೆ ಕುಳಿತರೆ ತೃಪ್ತಿಸಿಗಬಹುದು; ಆದರೆ, ಆರಾಮ ಕುರ್ಚಿಯಲ್ಲಿ ಕುಳಿತರೆ ಇನ್ನೂ ಹಿತಕರವಾಗಿರುತ್ತದೆ. ಬರಿಗಾಲಿನಿಂದ ನಡೆಯ ಬಹುದು; ಆದರೆ, ಚಪ್ಪಲಿಗಳನ್ನು ಉಪಯೋಗಿಸಿದರೆ ಹೆಚ್ಚು ಹಿತಕರ ವಾಗಿರುವುದು. ರೈಲಿನಲ್ಲಿ ಪ್ರಯಾಣ ಮಾಡುವಾಗ ಎರಡನೆಯ ದರ್ಜೆಯ ಡಬ್ಬಿಯಲ್ಲಿ ಕುಳಿತು ಪ್ರಯಾಣ ಮಾಡುವ ಬದಲು ಮೊದಲನೆಯ ದರ್ಜೆಯ ಡಬ್ಬಿಯಲ್ಲಿ ಕುಳಿತು ಪ್ರಯಾಣ ಮಾಡಿದರೆ ಮೆತ್ತನೆಯ ಸೀಟುಗಳು, ವಿಶಾಲಸ್ಥಳ ಮುಂತಾದ ಸೌಲಭ್ಯಗಳು ದೊರೆತು ಪ್ರಯಾಣವು ಮತ್ತಷ್ಟು ಹಿತಕರವಾಗಿರುವುದು. ಬಾಳಿನಲ್ಲಿ ಸುಖವನ್ನು ಒದಗಿಸುವ ಬೀಸಣಿಗೆ (ಫ್ಯಾನ್), ಕುರ್ಚಿ, ಸೋಫಾ, ಸ್ಕೂಟರ್‌ಗಳು ಸುಖದಾಯಕ ವಸ್ತುಗಳಾಗಿವೆ. ಈ ವಸ್ತುಗಳಿಂದ ಮನುಷ್ಯನ ದಕ್ಷತೆ, ಕಾರ್ಯಕ್ಷಮತೆಗಳು ಹೆಚ್ಚುತ್ತವೆ.

(iii) **ವಿಲಾಸಿ :** ಅತ್ಯಾವಶ್ಯಕ ಹಾಗೂ ಸುಖದಾಯಕ ವಸ್ತುಗಳ ಜೊತೆಗೆ ಮನುಷ್ಯ ಕೆಲವು ವಿಲಾಸಿವಸ್ತುಗಳನ್ನು ಬಯಸುತ್ತಾನೆ. ವಿಲಾಸಿವಸ್ತುಗಳು ಅತ್ಯಗತ್ಯ ವಸ್ತುಗಳಲ್ಲ. ಅವು ಶ್ರೀಮಂತಿಕೆಯ ವಸ್ತುಗಳು. ಈ ವಸ್ತುಗಳಿಲ್ಲದೆ ಜೀವಿಸಬಹುದು. ಮೇಲಾಗಿ ವಿಲಾಸಿವಸ್ತುಗಳು ದಕ್ಷತೆಯನ್ನು ಹೆಚ್ಚಿಸದವು. ಆಭರಣಗಳು, ದೊಡ್ಡಬಂಗಲೆಗಳು, ಕಾರುಗಳು, ರೆಫ್ರಿಜರೇಟರ್ ಇವು ವಿಲಾಸಿ ವಸ್ತುಗಳು. ವಿಲಾಸಿವಸ್ತುಗಳನ್ನು ಅಪಾಯಕರ, ಅಪಾಯವಿಲ್ಲದ ಹಾಗೂ ಸಂರಕ್ಷಕ ವಸ್ತುಗಳೆಂದು ವಿಂಗಡಿಸಬಹುದು.

(ಅ) **ಅಪಾಯಕರ ವಿಲಾಸಿವಸ್ತುಗಳು :** ವಿಲಾಸಜೀವನದ ಮೋಜಿಗಾಗಿ ಇವು ಇದೆ. ಈ ವಸ್ತುಗಳ ಉಪಭೋಗದಿಂದ ದಕ್ಷತೆ, ಕಾರ್ಯಕ್ಷಮತೆ ಹೆಚ್ಚುವುದಿಲ್ಲ. ಮೇಲಾಗಿ ಆರೋಗ್ಯಕ್ಕೆ ಹಾನಿಯನ್ನುಂಟುಮಾಡುತ್ತವೆ. ಅಫೀಮು, ಹೆಂಡ, ಸಾರಾಯಿ, ಬ್ರಾಂದಿ, ಸಿಗರೇಟು ಇತ್ಯಾದಿ ಮನುಷ್ಯನ ಜೀವನದಲ್ಲಿ ಹಾನಿಯನ್ನು ತಂದೊಡ್ಡುತ್ತವೆ. ಅಪಾಯವಿಲ್ಲದ ಕೆಲವು ವಿಲಾಸಿವಸ್ತುಗಳಿವೆ. ದೊಡ್ಡಬಂಗಲೆ, ಟೆಲಿವಿಜನ್, ನವೀನ ಕಾರುಗಳು ಇತ್ಯಾದಿ. ಇವುಗಳಿಂದ ಅಪಾಯವಿಲ್ಲ. ಆಭರಣಗಳು, ಬ್ಯಾಂಕಿನಲ್ಲಿನ ಠೇವಣಿಗಳು ಸಂರಕ್ಷಕ ವಿಲಾಸಗಳು. ಇವು ಕುಟುಂಬಕ್ಕೆ ಕಷ್ಟ ಪರಿಸ್ಥಿತಿ ಉಂಟಾದಾಗ ನೆರವಾಗುತ್ತವೆ.

ಈ ವಿಂಗಡನೆಯು ಕಟ್ಟುನಿಟ್ಟಾದ ವಿಂಗಡಣೆಯಲ್ಲ. ಏಕೆಂದರೆ ಒಂದು ವಸ್ತು ಒಬ್ಬರಿಗೆ ಅತ್ಯಗತ್ಯವಾದರೆ ಮತ್ತೊಬ್ಬರಿಗೆ ವಿಲಾಸದವಸ್ತುವಾಗಬಹುದು. ಆದರಂತೆ ಒಬ್ಬರ ವಿಲಾಸದ ವಸ್ತು ಇನ್ನೊಬ್ಬರಿಗೆ ದಕ್ಷತೆ ಹೆಚ್ಚಿಸುವ ಅವಶ್ಯಕ ವಸ್ತುವಾಗ ಬಹುದು.

ಅಧ್ಯಾಯ 2

ಬಳಕೆ

ವಸ್ತು ಇಲ್ಲವೆ ಸೇವೆಗಳಲ್ಲಿನ ತುಷ್ಟಿಗುಣ ಉಪಭೋಗಿಸಿ ಇಷ್ಟಾರ್ಥ ತೃಪ್ತಿ ಪಡಿಸಿಕೊಳ್ಳುವ ಕ್ರಿಯೆ 'ಬಳಕೆ'. ಇದು ಅನುಭವಿಸುವಿಕೆಯೂ ಆದೀತು ಇಲ್ಲವೆ ಉಪ ಭೋಗವೂ ಆದೀತು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅಪೇಕ್ಷೆಗಳನ್ನು ತೃಪ್ತಿ ಪಡಿಸುವುದೇ ಬಳಕೆ. ನೀರನ್ನು ಕುಡಿದರೆ ಬಾಯಾರಿಕೆಯು ಹಿಂಗುತ್ತದೆ. ಆಹಾರ ವನ್ನು ತೆಗೆದುಕೊಂಡರೆ ಹಸಿವು ನೀಗಿ ತೃಪ್ತಿ ಸಿಗುತ್ತದೆ. ಅರ್ಥಶಾಸ್ತ್ರದಲ್ಲಿ ಈ ಆಹಾರ ಸೇವನೆ 'ಬಳಕೆ'. ಒಂದು ಮನೆಯಲ್ಲಿ ವಾಸಮಾಡಿದರೆ ಮನೆಯನ್ನು ಬಳಸಿಕೊಂಡಂತೆ. ಹೊಸ ಅಂಗಿಯನ್ನು ತೊಟ್ಟರೆ ಅದನ್ನು ಬಳಸಿದಂತೆ. ಆದರೆ ಮನೆಯನ್ನಾಗಲೀ ಅಂಗಿಯನ್ನಾಗಲೀ ಆಹಾರ ತಿಂದಂತೆ ತಿನ್ನುವುದಿಲ್ಲ. ಅವುಗಳಲ್ಲಿರುವ ತುಷ್ಟಿಗುಣ (ಉಪಯುಕ್ತತೆ) ಬಳಕೆ ಮಾತ್ರ ಆಗುತ್ತದೆ. ಅವುಗಳ ಸೇವೆಯಿಂದ ತೃಪ್ತಿದೊರೆ ಯುವುದು. ಮನುಷ್ಯನ ಬಯಕೆಗಳ ತೃಪ್ತಿಗಾಗಿ ಬಳಕೆ ಹುಟ್ಟಿದೆ. ಅಪರಿಮಿತ ಬಯಕೆಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ಅನೇಕ ವಸ್ತುಗಳನ್ನು ಉತ್ಪಾದಿಸು ತ್ತಾನೆ. ಉತ್ಪಾದಿಸಿದ ನಂತರ ಅವುಗಳನ್ನು ಉಪಯೋಗಿಸುತ್ತಾನೆ. ಬಳಕೆಗೆ ಕಾಲದ ಮಿತಿಯಿಲ್ಲ. ಅದು ಅಲ್ಪಕಾಲಿಕವಾಗಿರಬಹುದು ಅಥವಾ ದೀರ್ಘಕಾಲಿಕವಾಗಿರ ಬಹುದು. ಕೆಲವು ವಸ್ತುಗಳನ್ನು ಉಪಯೋಗಿಸಿದಾಗ ಅವು ಕೂಡಲೇ ನಾಶವಾಗು ತ್ತವೆ. ಮತ್ತೆ ಕೆಲವು ಕೂಡಲೇ ನಾಶವಾಗುವುದಿಲ್ಲ. ಅವುಗಳನ್ನು ಪದೇ ಪದೇ ಬಹಳ ವರ್ಷಗಳ ಕಾಲ ಬಳಸಬಹುದು. ಉದಾಹರಣೆಗೆ ಆಹಾರ ಒಮ್ಮೆ ತೆಗೆದು ಕೊಂಡರೆ ಅದು ಸ್ವಲ್ಪ ಕಾಲ ಮಾತ್ರ ತೃಪ್ತಿಯು ನೀಡುತ್ತದೆ. ಅದರ ತುಷ್ಟಿಗುಣ ಕೂಡಲೇ ನಾಶವಾಗುತ್ತದೆ. ಅದೇ ಒಂದು ಮನೆಯನ್ನು ತೆಗೆದುಕೊಂಡರೆ ಅದರಲ್ಲಿ ದೀರ್ಘಕಾಲ ವಾಸಿಸಬಹುದು. ಒಂದು ರೇಡಿಯೊ ಕೊಂಡರೆ ಅದನ್ನು ಹಲವು ವರ್ಷ ಬಳಸಬಹುದು. ಅವು ಕೂಡಲೇ ನಾಶವಾಗುವ ವಸ್ತುಗಳಲ್ಲ. ಬಳಕೆಯಲ್ಲಿ ಬಳಕೆ ದಾರನ ಬೇಡಿಕೆ ಕೈಗೂಡಿಬರುವುದು ಬಹು ಮುಖ್ಯ. ತುಷ್ಟಿಗುಣ ನಾಶ ಉಪಭೋಗ ವಲ್ಲ. ಹೊಸಮನೆಯು ಉಪಯೋಗಿಸುವ ಮುನ್ನ ಬೆಂಕಿ ಬಿದ್ದು ನಾಶವಾದರೆ ಅರ್ಥ ಶಾಸ್ತ್ರದ ದೃಷ್ಟಿಯಲ್ಲಿ ಅದರ ಬಳಕೆಯಾದಂತೆ ಆಗಲಿಲ್ಲ. ಇಲ್ಲಿ ಯಾರ ಬೇಡಿಕೆಗಳೂ ಈಡೇರಲಿಲ್ಲ. ಬೆಂಕಿಯಿಂದ ಮನೆಯ ತುಷ್ಟಿಗುಣ ನಾಶವಾಯಿತು. ಆದರೆ ಇಷ್ಟವು ತೃಪ್ತಿಹೊಂದಲಿಲ್ಲ. ಆದ್ದರಿಂದ ಇದು ಬಳಕೆಯಲ್ಲ.

ಬಳಕೆಯ ಬಗೆಗಳು : ಬಳಕೆಯು (i) ಪ್ರತ್ಯಕ್ಷ (ನೇರ), (ii) ಪರೋಕ್ಷ (ಸುತ್ತುವರಿದ) ಹಾಗೂ (iii) ನಿರರ್ಥಕ (ವಿನಾಶಕಾರಕ) ಹೀಗೆ ಮೂರು ಬಗೆಗಳದ್ದಾಗಿದೆ. ಯಾವುದೇ ವಸ್ತುಗಳನ್ನು ನೇರವಾಗಿ (ಪ್ರತ್ಯಕ್ಷ) ಉಪಯೋಗಿಸಿ ಸಂತೃಪ್ತಿ ಪಡೆದರೆ ಅದು 'ಪ್ರತ್ಯಕ್ಷ ಬಳಕೆ'. ಉದಾಹರಣೆಗೆ ಹಸಿವನ್ನು ನೀಗಲು ಆಹಾರವನು ಸೇವಿಸುವುದು, ಶರೀರವನ್ನು ಮುಚ್ಚಿಕೊಳ್ಳಲು ಬಟ್ಟೆತೊಡುವುದು, ಅನೇಕ ಸಂದರ್ಭಗಳಲ್ಲಿ ಬಳಕೆ ನೇರವಾಗಿರದೆ ಪರೋಕ್ಷವಾಗಿರುತ್ತದೆ. ಅಂದರೆ ವಸ್ತುಗಳು ಮಾನವ ಇಷ್ಟಗಳನ್ನು ನೇರವಾಗಿ ತೃಪ್ತಿಪಡಿಸುವುದಿಲ್ಲ. ಆದರೆ ಅವುಗಳನ್ನು ನೇರ ಉಪಭೋಗದ ವಸ್ತುಗಳ ಉತ್ಪಾದನೆಯಲ್ಲಿ ಬಳಸಲಾಗುವುದು. ಉದಾಹರಣೆಗೆ ಬಟ್ಟೆಯು ನಮಗೆ ನೇರವಾದ ತೃಪ್ತಿಯನ್ನು ನೀಡುತ್ತದೆ. ಆದರೆ ಗಿರಣಿಯ ಮಾಲೀಕ ಹತ್ತಿಯನ್ನು ಕೊಂಡು ನೂಲನ್ನು ನೆಯ್ದು ಬಟ್ಟೆಯನ್ನು ತಯಾರಿಸಿ, ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾನೆ. ಇದು 'ಸುತ್ತುವರಿದ (ನೇರವಲ್ಲದ)' ಅಥವಾ 'ಪರೋಕ್ಷ ಬಳಕೆ'. ಯಂತ್ರೋಪಕರಣ, ಕಚ್ಚಾಸಾಮಗ್ರಿ ಇತ್ಯಾದಿ ಉತ್ಪಾದಕರ ವಸ್ತುಗಳನ್ನು ನೇರ ಉಪಭೋಗದ ವಸ್ತುಗಳ ಉತ್ಪಾದನೆಯಲ್ಲಿ ಉಪಯೋಗಿಸುವುದರಿಂದ ಅವು ಪರೋಕ್ಷ ಬಳಕೆಯ ವಸ್ತುಗಳಾಗಿವೆ. ಯಾವ ಪ್ರಯೋಜನವೂ ಆಗದೆ ಕೆಲವು ವಸ್ತುಗಳ ನಾಶ ನಡೆಯುತ್ತದೆ. ಬೆಂಕಿ, ಭೂಕಂಪ, ಮಹಾಪೂರಗಳು ಇತ್ಯಾದಿಗಳಿಂದ ವಸ್ತುಗಳು ನಾಶವಾಗುತ್ತವೆ. ಬೆಂಕಿ ಬಿದ್ದ ಮನೆಯ ಬಳಕೆಯಾದಂತೆಯೇ. ಇದರಿಂದ ತೃಪ್ತಿ ಯಾರಿಗೆ ದೊರಕೀತು? ಪ್ರಯೋಜನ ಯಾರಿಗಾಯಿತು? ಇಂತಹವು 'ವಿನಾಶಕಾರಕ ಬಳಕೆ'ಗಳು.

ಬಳಕೆಯ ಮಹತ್ವ : ಆಧುನಿಕ ಅರ್ಥಶಾಸ್ತ್ರಜ್ಞರು ಬಳಕೆಗೆ ಉತ್ಪಾದನೆಗಿಂತಲೂ ಹೆಚ್ಚು ಮಹತ್ವ ಕೊಟ್ಟಿರುತ್ತಾರೆ. ಏಕೆಂದರೆ ಮನುಷ್ಯನ ಎಲ್ಲ ಆರ್ಥಿಕ ಚಟುವಟಿಕೆಗಳಿಗೆ ಬಳಕೆಯ ನಾಂದಿ. ಮನುಷ್ಯನ ಅಪೇಕ್ಷೆಗಳನ್ನು ತೃಪ್ತಿಗೊಳಿಸಲು ಆರ್ಥಿಕ ಚಟುವಟಿಕೆಗಳು ಅತ್ಯಾವಶ್ಯಕ. ವಸ್ತುವನ್ನು ಉತ್ಪಾದಿಸಬೇಕಾದರೆ ಆ ವಸ್ತುವಿನ ಬಗ್ಗೆ ಮನುಷ್ಯನಿಗೆ ಇಷ್ಟವಿರಬೇಕು. ಆ ವಸ್ತುವಿಗೆ ಸಾಕಷ್ಟು ಬೇಡಿಕೆ ಇರಬೇಕು. ಬಳಕೆದಾರ ಉತ್ಪಾದನೆಯ ನಿರ್ದೇಶಕ. ಜನರಿಗೆ ಇಷ್ಟವಾದ ಪದಾರ್ಥಗಳನ್ನೇ ಉತ್ಪಾದಕರು ಉತ್ಪಾದಿಸಬೇಕಾಗುತ್ತದೆ. ಒಂದು ವೇಳೆ ಅವರಿಗೆ ಬೇಡದ ಪದಾರ್ಥಗಳನ್ನು ಉತ್ಪಾದಿಸಿದರೆ ಉತ್ಪಾದಕರಿಗೆ ಲಾಭ ಸಿಗುವುದಿಲ್ಲ. ಪ್ರತಿಯೊಬ್ಬ ಗ್ರಾಹಕನು ತನ್ನ ಬಳಕೆಯಿಂದ ಹೆಚ್ಚು ತೃಪ್ತಿ ಪಡೆಯಲು ಯತ್ನಿಸುತ್ತಾನೆ. ಬಳಕೆಗೂ ಉತ್ಪಾದನೆಗೂ ನಿಕಟ ಸಂಬಂಧವಿದೆ. ಉತ್ಪಾದನೆಯು ಬಳಕೆಯ ಮೇಲೆ ನಿಂತಿದೆ. ಹಾಗೆಯೇ ಉತ್ಪಾದನೆಯಾಗದ ಹೊರತು ಬಳಕೆಯಾಗುವುದಿಲ್ಲ. ಬಳಕೆ ಹೆಚ್ಚಾದರೆ ಉತ್ಪಾದನೆ ಹೆಚ್ಚುತ್ತದೆ. ಉತ್ಪಾದನೆಯು ಹೆಚ್ಚಿದಾಗ ರಾಷ್ಟ್ರದ ಆದಾಯವು ಹೆಚ್ಚುತ್ತದೆ. ಆದಾಯ ಹೆಚ್ಚಾದಾಗ ದೇಶದಲ್ಲಿ ಪೂರ್ಣ ಉದ್ಯೋಗ ಉಂಟಾಗುತ್ತದೆ. ಬಳಕೆ

ಕಡಮೆಯಾದರೆ ಉತ್ಪಾದನೆಯು ಕುಗ್ಗುತ್ತದೆ. ಇದು ಕಡಮೆ ಆದಾಯಕ್ಕೆ ಎಡೆಮಾಡಿ ಕೊಟ್ಟು ನಿರುದ್ಯೋಗ ಹಾಗೂ ಇತರ ಆರ್ಥಿಕ ಸಮಸ್ಯೆಗಳನ್ನು ತಂದೊಡ್ಡುತ್ತವೆ. ಇದರಿಂದ ಬಳಕೆಯು ಅತ್ಯಂತ ಮಹತ್ವವಾದುದು ಎಂಬುದು ತಿಳಿದು ಬರುತ್ತದೆ.

ಎಂಜಲ್ ಬಳಕೆ ನಿಯಮ : ಈ ನಿಯಮವನ್ನು ಕುಟುಂಬದ ಮುಂಗಡ ಪತ್ರ ಅಂದರೆ ಆಯವ್ಯಯದ ಆಧಾರದ ಮೇಲೆ ರೂಪಿಸಲಾಗಿದೆ. ಕುಟುಂಬದ ಮುಂಗಡ ಪತ್ರವು ಒಂದು ಕುಟುಂಬದ ವಾರ್ಷಿಕ ಆದಾಯ ಹಾಗೂ ವೆಚ್ಚಗಳನ್ನು ತೋರಿಸುವ ಒಂದು ಸಂಕ್ಷಿಪ್ತ ಪಟ್ಟಿ. ಈ ಪಟ್ಟಿ ಆದಾಯದ ಮೂಲಗಳು ಹಾಗೂ ವೆಚ್ಚದ ಬಾಬ್ತುಗಳನ್ನು ಒಳಗೊಂಡಿರುತ್ತದೆ. ಈ ಪಟ್ಟಿಯ ನೆರವಿನಿಂದ ಯಾವುದೇ ಒಂದು ಕುಟುಂಬವು ವಿವಿಧ ವಸ್ತುಗಳಿಗಾಗಿ, ಸೇವೆಗಳಿಗಾಗಿ ಎಷ್ಟೆಷ್ಟು ವೆಚ್ಚ ಮಾಡುವುದೆಂಬುದನ್ನು ತಿಳಿದುಕೊಳ್ಳಬಹುದು. ಜರ್ಮನಿ ದೇಶದ ಡಾ। ಅರ್ನೆಸ್ಟ್ ಎಂಜಲ್ಸ್ ಎಂಬುವರು 1857ರಲ್ಲಿ ಸ್ಯಾಕ್ಸೊನಿ ಎಂಬ ಊರಿನಲ್ಲಿ ಕೆಲವು ಕುಟುಂಬಗಳನ್ನು ಸಮೀಕ್ಷೆ ಮಾಡಿ ಕುಟುಂಬವು ತನ್ನ ಆದಾಯವನ್ನು ವಿವಿಧ ವಸ್ತುಗಳ ಮೇಲೆ ಯಾವ ರೀತಿ ವೆಚ್ಚ ಮಾಡುವುದೆಂಬುದನ್ನು ಪರಿಚಯ ಮಾಡಿಕೊಟ್ಟಿರುವರು. ಇಂದು ಅವರ ನಿಯಮವನ್ನು ಎಂಜಲ್ಸ್ ಅವರ ಬಳಕೆಯ ನಿಯಮವೆಂದು ಕರೆಯಲಾಗುತ್ತದೆ.

ಎಂಜಲ್ಸ್ ಅವರು ಕಾರ್ಮಿಕರು, ಮಧ್ಯಮ ವರ್ಗದವರು ಹಾಗೂ ಶ್ರೀಮಂತರು ಈ ಮೂರು ವರ್ಗಗಳ ಕುಟುಂಬಗಳ ಅಂದಾಜು ಪತ್ರಿಕೆಗಳನ್ನು ಅಧ್ಯಯನ ಮಾಡಿದರು. ಈ ಮೂರು ವರ್ಗಗಳ ಕುಟುಂಬದವರು ಅವರ ಆದಾಯವನ್ನು ಆಹಾರ, ಬಟ್ಟೆ, ಬಾಡಿಗೆ, ಔಷಧ, ಶಿಕ್ಷಣಗಳಿಗಾಗಿ ವೆಚ್ಚ ಮಾಡುವರು. ಅವರು ಯಾವು ಯಾವುದಕ್ಕೆ ಪ್ರತಿಶತ ಎಷ್ಟು ವೆಚ್ಚ ಮಾಡುವರೆಂಬುದನ್ನು ಎಂಜಲ್ಸ್‌ರವರು ಅಧ್ಯಯನ ಮಾಡಿ ಅವರ ಆದಾಯದ ಪ್ರತಿಶತ ವೆಚ್ಚವನ್ನು ಕೋಷ್ಟಕ 1ರಲ್ಲಿ ತೋರಿಸಿದ್ದಾರೆ.

ಡಾ। ಎಂಜಲ್ಸ್ ಅವರು ಈ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಈ ಕೆಳಗಿನ ಅಭಿಪ್ರಾಯಗಳನ್ನು ನಿರೂಪಿಸಿರುವರು :

(i) ಮನುಷ್ಯನ ಆದಾಯವು ಹೆಚ್ಚಿದಂತೆಲ್ಲ ಆಹಾರ ಹಾಗೂ ಇತರ ಅಗತ್ಯ ವಸ್ತುಗಳ ಮೇಲೆ ಮಾಡುವ ಶೇಕಡಾ ವೆಚ್ಚವು ಕಡಮೆಯಾಗುತ್ತ ಹೋಗುತ್ತದೆ.

(ii) ಬಟ್ಟೆಯ ಮೇಲೆ ಮಾಡುವ ಶೇಕಡಾ ವೆಚ್ಚವು ಅಷ್ಟೇ ಇರುತ್ತದೆ.

(iii) ವಸತಿ, ದೀಪ, ಕಟ್ಟಿಗೆಗಳ ವೆಚ್ಚದಲ್ಲಿ ಹೆಚ್ಚು ವ್ಯತ್ಯಾಸ ಕಂಡುಬರುವುದಿಲ್ಲ.

(iv) ಶಿಕ್ಷಣ, ವೈದ್ಯಕೀಯ ಸೌಲಭ್ಯ, ಮನೋರಂಜನೆಗಳ ಮೇಲಿನ ಶೇಕಡಾ ವೆಚ್ಚವು ಹೆಚ್ಚಾಗುತ್ತ ಹೋಗುತ್ತದೆ.

(v) ಆದಾಯ ಹೆಚ್ಚಿದಂತೆ ಹಿತಕರ ಮತ್ತು ಭೋಗವಸ್ತುಗಳಿಗೆ ಬೇಡಿಕೆ ಹೆಚ್ಚಾಗುವುದು.

ಕೋಷ್ಟಕ 1

ಸಮಾಜದ ವಿವಿಧ ವರ್ಗಗಳ ಆದಾಯದಲ್ಲಿನ ಶೇಕಡಾ ವೆಚ್ಚ

ವೆಚ್ಚದ ಬಾಬುಗಳು	ಪ್ರತಿಶತ ವೆಚ್ಚ					
	ಕಾರ್ಮಿಕ ವರ್ಗ (ಬಡವರು)		ಮಧ್ಯಮ ವರ್ಗದವರು		ಶ್ರೀಮಂತ ವರ್ಗದವರು	
ಆಹಾರ	62	95%	55	90%	50	85%
ಬಟ್ಟೆ	16		18		18	
ವಸತಿ (ಬಾಡಿಗೆ)	12		12		12	
ದೀಪ ಹಾಗೂ ಕಟ್ಟಿಗೆ	5		5		5	
ಶಿಕ್ಷಣ	2	5%	3.5	10%	5.5	15%
ವೈದ್ಯಕೀಯ ಸೌಲಭ್ಯ	1		5		3	
ಮನೋರಂಜನೆ ಹಾಗೂ ಹಿತಕರ ವಸ್ತುಗಳು	1		2.5		3.5	
ಕಾನೂನಿನ ರಕ್ಷಣೆ (ತೆರಿಗೆ)	1		2		3	
ಒಟ್ಟು	100		100		100	

ಡಾ॥ ಎಂಜಲ್‌ಅವರ ಪ್ರಕಾರ ಆದಾಯವು ಹೆಚ್ಚಿದಂತೆ ಜೀವನಾವಶ್ಯಕ ವಸ್ತುಗಳ ಬಗ್ಗೆ ಮಾಡುವ ವೆಚ್ಚ ಕಡಮೆಯಾಗಿ ಹಿತಕರ ಹಾಗೂ ವಿಲಾಸಿ ವಸ್ತುಗಳ ಮೇಲೆ ಪ್ರತಿಶತ ವೆಚ್ಚ ಹೆಚ್ಚಾಗುತ್ತದೆ. ಈ ನಿಯಮದಲ್ಲಿ ಆದಾಯ ಮತ್ತು ವೆಚ್ಚಗಳ ಸಂಬಂಧ ಮುಖ್ಯವಾಗಿ ಗಮನಿಸಬೇಕಾದ ಅಂಶವಾಗಿದೆ. ಆದಾಯವು ಹೆಚ್ಚಿದಂತೆಲ್ಲ ಕುಟುಂಬದ ಆಹಾರದ ಮೇಲಿನ ಒಟ್ಟು ಖರ್ಚು ಕಡಮೆಯಾಗುವುದಿಲ್ಲ. ಆದರೆ ಆಹಾರದ್ದ ಮೇಲೆ ಪ್ರತಿಶತ ವೆಚ್ಚ ಕಡಮೆಯಾಗುತ್ತದೆ. ಅಂದರೆ ಎಂಜಲ್‌ಅವರು ಪ್ರತಿಶತ ಹೆಚ್ಚಳವನ್ನು ಮಾತ್ರ ಗಮನಿಸಿರುವರು. ಉದಾಹರಣೆಗೆ ಒಬ್ಬನ ಸಂಬಳ 100 ರೂಪಾಯಿ. ಅವನು ಶೇ. 62ರಷ್ಟು ಅಂದರೆ 62 ರೂ. ಗಳನ್ನು ಆಹಾರಕ್ಕಾಗಿ ವೆಚ್ಚ ಮಾಡುತ್ತಾನೆ. ಮತ್ತೊಬ್ಬನ ಸಂಬಳ 500 ರೂಪಾಯಿಗಳಾದರೆ ಅವನು ಶೇ.

55ರಷ್ಟು ಅಂದರೆ 275 ರೂ. ಗಳನ್ನು ಆಹಾರದ ಮೇಲೆ ವೆಚ್ಚ ಮಾಡುತ್ತಾನೆ. ಆದರೆ ಎರಡನೆಯವನು ಹೆಚ್ಚು ಹಣ ವೆಚ್ಚ ಮಾಡಿದರೂ ಪ್ರತಿಶತ ಪ್ರಮಾಣ ಕಡಮೆ. ಅವರ ಸಿದ್ಧಾಂತದ ತಿರುಳೆಂದರೆ ಕುಟುಂಬದ ವರಮಾನ ಹೆಚ್ಚುತ್ತ ಹೋದಂತೆಲ್ಲ ಆಹಾರ ಮತ್ತು ಅವಶ್ಯಕ ವಸ್ತುಗಳ ಮೇಲಿನ ವೆಚ್ಚದ ಪ್ರಮಾಣ ಕಡಮೆಯಾಗುತ್ತ ಹೋಗುವುದು ಮತ್ತು ಹಿತಕರ ಹಾಗೂ ವಿಲಾಸಿ ವಸ್ತುಗಳ ಮೇಲಿನ ವೆಚ್ಚದ ಪ್ರಮಾಣ ಹೆಚ್ಚಾಗುತ್ತ ಹೋಗುವುದು.

ಇಳಿಮುಖ ಅಂಚಿನ ತುಷ್ಟಿಸಿದ್ಧಾಂತ : ಯಾವುದಾದರೂ ಒಂದು ವಸ್ತುವನ್ನು ಹೆಚ್ಚು ಪ್ರಮಾಣದಲ್ಲಿ ಪಡೆದಾಗ, ಒಂದು ಘಟ್ಟದ ನಂತರ ಆ ವಸ್ತುವಿನ ಬಯಕೆಯ ತೀವ್ರತೆ ಕಡಮೆಯಾಗುತ್ತ ಹೋಗುತ್ತದೆ. ಇದು ಅರ್ಥಶಾಸ್ತ್ರದಲ್ಲಿ ಮೂಲಭೂತ ನಿಯಮ. ಮಾನವನ ಬಯಕೆಗಳು ಅಪರಿಮಿತವಾಗಿದ್ದರೂ ಸಹ ಯಾವುದೊಂದು ಬಯಕೆಯನ್ನು ಸಂಪೂರ್ಣವಾಗಿ ತೃಪ್ತಿಪಡಿಸುವುದು ಸಾಧ್ಯ. ಉದಾಹರಣೆಗೆ ಒಬ್ಬ ಮನುಷ್ಯನಿಗೆ ಬಾಯಾರಿಕೆಯಾದಾಗ ಎರಡು ಮೂರು ಲೋಟ ನೀರನ್ನು ಕುಡಿದು ಸಂಪೂರ್ಣ ತೃಪ್ತಿಹೊಂದಬಹುದು. ಹಸಿವಾದಾಗ ಆಹಾರವನ್ನು ಸೇವಿಸಿ ಸಂಪೂರ್ಣ ತೃಪ್ತಿಹೊಂದಬಹುದು. ತಕ್ಷಣ ಅವನು ನೀರು ಕುಡಿಯಲು ಇಲ್ಲವೆ ಊಟಮಾಡ ಲಿಚ್ಛಿಸುವುದಿಲ್ಲ. ಈ ರೀತಿ, 'ಯಾವುದೊಂದು ವಿಶಿಷ್ಟ ಬಯಕೆಯನ್ನು ಸಂಪೂರ್ಣವಾಗಿ ತೃಪ್ತಿಪಡಿಸಲು ಸಾಧ್ಯ', ಈ ಆಧಾರದ ಮೇಲೆ ಅರ್ಥಶಾಸ್ತ್ರಜ್ಞರು 'ಇಳಿಮುಖ ಅಂಚಿನ ತುಷ್ಟಿಸಿದ್ಧಾಂತ' ವನ್ನು ರಚಿಸಿರುವರು.

ಪ್ರತಿಯೊಬ್ಬ ಮಾನವನಿಗೆ ಅವನ ದಿನನಿತ್ಯದ ಉಪಭೋಗದ ಚಟುವಟಿಕೆಗಳಲ್ಲಿ ಈ ನಿಯಮದ ಅನುಭವವಾಗುತ್ತದೆ. ಆದರೆ ಯಾರೂ ಇದನ್ನು ಗಣನೆಗೆ ತಂದು ಕೊಳ್ಳುವುದಿಲ್ಲ. ಆದರೆ ಅರ್ಥಶಾಸ್ತ್ರಜ್ಞರು ಇದಕ್ಕೆ ಒಂದು ಸ್ಪಷ್ಟವಾದ ರೂಪವನ್ನು ನೀಡಿದ್ದಾರೆ. ಇಂದು ಅರ್ಥಶಾಸ್ತ್ರದಲ್ಲಿನ ಅನೇಕ ತತ್ವಗಳು ಈ ನಿಯಮದ ಮೇಲೆ ಅವಲಂಬಿತವಾಗಿವೆ. ಈ ನಿಯಮದ ಪ್ರಕಾರ **'ಬಳಕೆದಾರನು ಯಾವುದೇ ಒಂದು ವಸ್ತುವನ್ನು ಹೆಚ್ಚು ಹೆಚ್ಚಾಗಿ ಬಳಸಿದಂತೆಲ್ಲ ಆ ವಸ್ತುವಿನ ತುಷ್ಟಿ ಅವನಿಗೆ ಕಡಮೆ ಯಾಗುತ್ತ ಹೋಗುತ್ತದೆ'** ಎಂಬುದೇ ಈ ನಿಯಮ. ಅಂದರೆ ಯಾವುದೊಂದು ವಸ್ತುವನ್ನು ಹೆಚ್ಚು ಹೆಚ್ಚು ಸೇವಿಸುತ್ತಹೋದಂತೆ ಅದರಿಂದ ನಮಗೆ ಸಿಗುವ ತೃಪ್ತಿ ಕಡಮೆಯಾಗುತ್ತ ಹೋಗುತ್ತದೆ. ಉದಾಹರಣೆಗೆ ಒಬ್ಬ ವ್ಯಕ್ತಿ ಒಂದರ ನಂತರ ಒಂದರಂತೆ ಸೇಬು ಹಣ್ಣುಗಳನ್ನು ತಿನ್ನುತ್ತಾನೆಂದು ಕಲ್ಪಿಸೋಣ. ಮೊದಲನೆಯ ಸೇಬು ಹೆಚ್ಚು ತೃಪ್ತಿಯನ್ನು ಕೊಡುತ್ತದೆ. ಎರಡನೆಯ ಸೇಬನ್ನು ತೆಗೆದುಕೊಳ್ಳಲು ಪ್ರೇರೇಪಿಸಿದಾಗ ಅವನಿಗೆ ಮೊದಲನೆಯ ಸೇಬಿನಿಂದ ದೊರೆತಷ್ಟು ತೃಪ್ತಿ ಸಿಗದೆ, ಕಡಮೆ ತೃಪ್ತಿಯನ್ನು ಪಡೆಯುತ್ತಾನೆ. ಪುನಃ ಪ್ರೇರೇಪಿಸಿ ಮತ್ತೊಂದು ಸೇಬನ್ನು ನೀಡಿದಾಗ ಅದರಿಂದ ಎರಡನೆಯ ಸೇಬಿಗಿಂತಲೂ ಕಡಮೆ ತೃಪ್ತಿಯುಸಿಗುತ್ತದೆ. ಈ ಅನುಭವ

ಎಲ್ಲ ಮಾನವರಿಗೂ ಸಾಧಾರಣವಾಗಿ ಒಂದೇ ರೀತಿ ಇರುತ್ತದೆ. ಅಂದರೆ ಯಾವುದಾದರೊಂದು ವಸ್ತುವಿನ ಉಪಭೋಗ ಸತತವಾಗಿ ಹೆಚ್ಚಿದಂತೆ ಅದರಿಂದ ದೊರೆಯುವ ತುಷ್ಟಿ ಕಡಮೆಯಾಗುತ್ತ ಹೋಗುತ್ತದೆ. ಆದರೆ ಯಾವುದೇ ವಸ್ತುವಿನ ಉಪಭೋಗದಿಂದ ಪಡೆದ ತೃಪ್ತಿಯನ್ನು ನಿರ್ದಿಷ್ಟವಾಗಿ ಇಷ್ಟೇ ಎಂದು ಅಳೆಯಲಾಗುವುದಿಲ್ಲ. ತೃಪ್ತಿ ಎಂಬುದು ಮಾನಸಿಕ ಕಲ್ಪನೆ. ಏಕೆಂದರೆ ಸೇಬು ತಿಂದ ಒಬ್ಬ ವ್ಯಕ್ತಿಯನ್ನು ಆ ಸೇಬಿನಿಂದ ಎಷ್ಟು ತೃಪ್ತಿ ಸಿಕ್ಕಿತು ಎಂದು ಕೇಳಿದರೆ ಅವನಿಂದ ಉತ್ತರ ಸಿಗಲಾರದು. ಅವನು ಹೆಚ್ಚು ಸಿಕ್ಕಿತು ಅಥವಾ ಕಡಮೆ ಸಿಕ್ಕಿತು ಎಂದು ತುಲನಾತ್ಮಕ ಉತ್ತರ ಹೇಳಬಲ್ಲನು. ಆಲ್‌ಫ್ರೆಡ್ ಮಾರ್ಷಲ್ ಪ್ರಕಾರ ತನ್ನ ಯಾವುದಾದರೊಂದು ವಸ್ತುವಿನ ಸಂಗ್ರಹಕ್ಕೆ ಕೊಟ್ಟ ಹೆಚ್ಚಳದಿಂದ ವ್ಯಕ್ತಿ ಪಡೆಯುವ ಅಧಿಕ ತುಷ್ಟಿ ತನ್ನಲ್ಲಾಗಲೇ ಇದ್ದ ಸಂಗ್ರಹದ ಹೆಚ್ಚುವರಿಯೊಂದಿಗೆ ಕುಗ್ಗುತ್ತ ಹೋಗುತ್ತದೆ. ಅಂದರೆ ವಸ್ತುವಿನ ಅಧಿಕಾಂಶಗಳಿಂದ ಸಿಗುವ ತುಷ್ಟಿ ಕಡಮೆಯಾಗುತ್ತ ಹೋಗುತ್ತದೆ. ಹೆಚ್ಚಿನ ವಸ್ತುಗಳನ್ನು ಉಪಭೋಗಿಸುವುದರಿಂದ ಸಿಗುವ ತುಷ್ಟಿ 'ಸೀಮಾಂತ (ಅಂಚಿನ) ತುಷ್ಟಿ' ಎಂದು ಕರೆಯುತ್ತಾರೆ. ಆದ್ದರಿಂದ ಈ ನಿಯಮವನ್ನು 'ಇಳಿಮುಖ ಸೀಮಾಂತ (ಅಂಚಿನ) ತುಷ್ಟಿಗುಣ' ನಿಯಮವೆಂದು ಕರೆಯುವರು.

ಈ ನಿಯಮದ ಪ್ರಕಾರ ಒಂದು ವಸ್ತುವಿನ ಘಟಕಗಳನ್ನು ಒಂದಾದಮೇಲೊಂದರಂತೆ ಉಪಭೋಗಿಸಿದಾಗ ಸಿಗುವ ತೃಪ್ತಿಯು ಇಳಿಮುಖವಾಗುತ್ತ ಹೋಗುತ್ತದೆ. ಉಪಭೋಗಮಾಡುವ ವಸ್ತುವಿನ ಪ್ರಮಾಣ ಹೆಚ್ಚಿದಂತೆಲ್ಲ ತುಷ್ಟಿಯು ಹಿಂದಿನ ಘಟಕಗಳ ತುಷ್ಟಿಗಿಂತ ಕಡಮೆಯಾಗುತ್ತ ಹೋಗುತ್ತದೆ. ಈ ನಿಯಮವು ಒಂದು ವಸ್ತುವಿನ ಪ್ರಮಾಣ ಮತ್ತು ತುಷ್ಟಿಗಳಿಗಿರುವ ಸಂಬಂಧವನ್ನು ಸೂಚಿಸುತ್ತದೆ. ಸಂಪೂರ್ಣ ತೃಪ್ತಿಯನ್ನು ಪಡೆದ ನಂತರವೂ ಬಳಕೆಯನ್ನು ಮುಂದುವರಿಸಿದರೆ ತುಷ್ಟಿಯು ನಿಷೇಧಾತ್ಮಕ (ನಿರುಪಯೋಗ) ತುಷ್ಟಿಯಾಗಿ ಪರಿಣಮಿಸುತ್ತದೆ. ಇದನ್ನು ಅಂಕಿಗಳಲ್ಲಿ ಸೂಚಿಸಬಹುದೆಂದು ಮಾರ್ಷಲ್ ಅವರು ಭಾವಿಸಿದ್ದರು.

ಇಳಿಮುಖ ಅಂಚಿನ ತುಷ್ಟಿನಿಯಮವನ್ನು ಒಂದು ಉದಾಹರಣೆಯಿಂದ ಕೋಷ್ಟಕ 2 ರಲ್ಲಿಯಂತೆ ವಿವರಿಸಬಹುದು.

ಮೊದಲನೆಯ ಹಣ್ಣಿನಿಂದ ಅವನಿಗೆ ಸಿಗುವ ತೃಪ್ತಿಯು ಅತ್ಯಂತ ಹೆಚ್ಚು. ಈ ತೃಪ್ತಿಯು 20 ಯೂನಿಟ್‌ಗಳಿವೆ ಎಂದು ತಿಳಿಯೋಣ. ಮೊದಲನೆಯ ಸೇಬಿನಿಂದ ಅವನ ಆಸೆಯು ಕಡಮೆ ಆಗುತ್ತದೆ. ಆದರೆ ಎರಡನೆಯ ಸೇಬನ್ನು ಸೇವಿಸಿದಾಗ ಅವನಿಗೆ ಸಿಗುವ ತೃಪ್ತಿ 16 ಯೂನಿಟ್‌ಗಳು ಮಾತ್ರ. ಮೂರನೆಯ ಸೇಬಿನಿಂದ 12 ಯೂನಿಟ್‌ಗಳು, ನಾಲ್ಕನೆಯ ಸೇಬು 8 ಯೂನಿಟ್‌ಗಳ ತೃಪ್ತಿ ನೀಡುತ್ತದೆ. ಐದನೆಯ ಹಾಗೂ ಆರನೆಯ ಸೇಬು 4 ಮತ್ತು 2 ಯೂನಿಟ್‌ಗಳ ತೃಪ್ತಿ ನೀಡಿದರೆ, ಏಳನೆಯ


ಕೋಷ್ಟಕ 2

ಸೇಬಿನ ಹಣ್ಣುಗಳು ಮನುಷ್ಯನಿಗೆ ನೀಡುವ ತುಷ್ಟಿ ವಿವರ

ಸೇಬು (ಘಟಕಗಳು)	ಪ್ರತಿ ಸೇಬಿನಿಂದ ಪಡೆದ ಅಂಚಿನ ತುಷ್ಟಿ	ಒಟ್ಟು ತುಷ್ಟಿ
1	20	20
2	16	36
3	12	48
4	8	56
5	4	60
6	2	62
7	0	62
8	–2	60

ಸೇಬು ತುಷ್ಟಿ ಶೂನ್ಯವಾಗುತ್ತದೆ. ಅಂದರೆ ಅವನಿಗೆ ತೃಪ್ತಿಯೇ ಆಗುವುದಿಲ್ಲ, ಆ ಹಣ್ಣು ಅವನಿಗೆ ಆಗ ಬೇಕಾಗಲಾರದು. ಇನ್ನೂ ಒಂದು ಸೇಬನ್ನು ಅವನಿಗೆ ಕೊಟ್ಟರೆ ಅದರಿಂದ ತೃಪ್ತಿಗೆ ಬದಲು ಅತೃಪ್ತಿ ಇಲ್ಲವೆ ತೊಂದರೆಯೆನಿಸುತ್ತದೆ. ಇದು ನಕಾರಾತ್ಮಕ ತುಷ್ಟಿ.

ಮೇಲಿನ ಕೋಷ್ಟಕದಲ್ಲಿ ಅಂಚಿನ ತುಷ್ಟಿ ಕುಗ್ಗುತ್ತ ನಡೆದಂತೆ ಒಟ್ಟು ತುಷ್ಟಿ ಒಂದು ಮಟ್ಟದವರೆಗೆ ಅತ್ಯಧಿಕವಾಗುತ್ತ ಹೋಗುವುದನ್ನು ಕಾಣುತ್ತೇವೆ. ನಂತರ ಸೀಮಾಂತ ಅಥವಾ ಅಂಚಿನ ತುಷ್ಟಿಗುಣ ನಕಾರಾತ್ಮಕವಾದಾಗ, ಒಟ್ಟು ತುಷ್ಟಿ ಕಡಮೆಯಾಗುವುದು ತೋರಿಬರುತ್ತದೆ. ಈ ನಿಯಮದ ಪ್ರಕಾರ ಸತತವಾಗಿ ಒಂದಾದನಂತರ ಒಂದರಂತೆ ಹಣ್ಣುಗಳನ್ನು ಸೇವಿಸುತ್ತ ಹೋದರೆ ಅಂಚಿನ ತುಷ್ಟಿಗುಣ ಕಡಮೆಯಾಗುತ್ತ ಹೋಗುತ್ತದೆ. ಇಳಿಮುಖ ಅಂಚಿನ ತುಷ್ಟಿಸಿದ್ಧಾಂತವನ್ನು ರೇಖಾ ಚಿತ್ರದ ಮೂಲಕವೂ ವ್ಯಕ್ತಪಡಿಸಬಹುದು. ಕೋಷ್ಟಕ 2 ರ ಆಧಾರದಿಂದ ಅಂಚಿನ ತುಷ್ಟಿರೇಖೆಯನ್ನು ಆಲೇಖನ 1 ರಲ್ಲಿನಂತೆ ರಚಿಸಬಹುದು.



ಆಲೇಖನ 1 : ಸೇಬಿನ ಹಣ್ಣಿನ ಸೀಮಾಂತ (ಅಂಚು) ತುಷ್ಟಿರೇಖೆ

ಈ ಆಕೃತಿಯಲ್ಲಿ ox ತಲಾಕ್ಷದಲ್ಲಿ ಸೇಬಿನ ಹಣ್ಣುಗಳನ್ನು oy ಲಂಬಾಕ್ಷದಲ್ಲಿ ತುಷ್ಟಿಯನ್ನು ತೋರಿಸಲಾಗಿದೆ. uu^1 ರೇಖೆಯು ಇಳಿಮುಖದ ಅಂಚಿನ ತುಷ್ಟಿ ರೇಖೆಯಾಗಿದೆ. 1, 2, 3, 4, 5, 6ನೆಯ ಸೇಬುಗಳಿಂದ 20, 16, 12, 8, 4, 2 ಘಟಕಗಳಷ್ಟು ತುಷ್ಟಿ ಸಿಗುತ್ತದೆ. 7ನೆಯ ಸೇಬಿನಿಂದ ತುಷ್ಟಿ ಶೂನ್ಯವಾಗಿದ್ದರೆ 8ನೆಯ ಸೇಬಿನಿಂದ ಋಣಾತ್ಮಕ ತುಷ್ಟಿ ಸಿಗುತ್ತದೆ. ಋಣಾತ್ಮಕ ತುಷ್ಟಿಯನ್ನು ox ತಲಾಕ್ಷದ ಕೆಳಗೆ ತೋರಿಸಲಾಗಿದೆ. ಈ ರೇಖೆಯು ಸತತವಾಗಿ ಒಂದರನಂತರ ಮತ್ತೊಂದು ಸೇಬನ್ನು ಸೇವಿಸುವುದರಿಂದ ಸೀಮಾಂತ ತುಷ್ಟಿ ಕುಗ್ಗುತ್ತ ಹೋಗುವುದೆಂಬುದನ್ನು ತೋರಿಸುತ್ತದೆ.

ಪರಿಮಿತಿಗಳು : ಈ ನಿಯಮವು ಬಳಕೆದಾರರು ಉಪಯೋಗಿಸುವ ಎಲ್ಲ ವಸ್ತುಗಳಿಗೂ ಅನ್ವಯಿಸುತ್ತದೆ. ಯಾವುದೊಂದು ವಸ್ತುವನ್ನು ಸತತವಾಗಿ ಹೆಚ್ಚು ಹೆಚ್ಚಾಗಿ ಬಳಸಿದಂತೆಲ್ಲ ಅದರಿಂದ ಸಿಗುವ ತುಷ್ಟಿ ಕಡಮೆಯಾಗುತ್ತ ಹೋಗುತ್ತದೆ. ಈ ನಿಯಮವು ನಿಜವಾಗಬೇಕಾದರೆ ಕೆಲವು ಮಿತಿಗಳಿವೆ. ಈ ಮಿತಿಗಳನ್ನು ಮೀರಿದಾಗ ಈ ನಿಯಮವು ಸುಳ್ಳಾಗಬಹುದು. ಅವು ಮುಂದಿನ ಪುಟದಲ್ಲಿನಂತಿವೆ :

(i) **ವಸ್ತುಗಳ ಯೋಗ್ಯಮಟ್ಟದ ಪ್ರಮಾಣ :** ಬಳಕೆದಾರನು ಉಪಯೋಗಿಸುವ ವಿವಿಧ ವಸ್ತುಗಳ ಪ್ರಮಾಣ ಯೋಗ್ಯಮಟ್ಟದಲ್ಲಿರಬೇಕು. ಅಂದರೆ ವಸ್ತುವಿನ ವಿವಿಧ ಘಟಕಗಳು ಸಣ್ಣ ಅಥವಾ ಅತಿ ದೊಡ್ಡದೂ ಆಗಿರದೆ ಸಾಮಾನ್ಯ ಮಟ್ಟದವು ಆಗಿರಬೇಕು. ಉದಾಹರಣೆಗೆ ಒಂದು ಸೇಬನ್ನು ಹತ್ತು ಭಾಗಗಳನ್ನಾಗಿ ಕತ್ತರಿಸಿ ತಿನ್ನುತ್ತ ಹೋದರೆ ಎರಡನೆಯ ಹಾಗೂ ಮುಂದಿನ ಚೂರುಗಳಿಂದ ತುಷ್ಟಿ ಹೆಚ್ಚಾಗುತ್ತ ಹೋಗುತ್ತದೆ. ನೀರಡಿಕೆಯಾದಾಗ ಚಮಚದಿಂದ ನೀರು ಕುಡಿದರೆ ದಾಹವು ಇಂಗದೆ ಮತ್ತಷ್ಟು ಹೆಚ್ಚಾಗುತ್ತದೆ.

(ii) **ಉಪಯೋಗಿಸುವ ವಸ್ತುಗಳ ಬಿಟ್ಟುಬಿಡದ ಬಳಕೆ :** ವಸ್ತುಗಳನ್ನು ಬಳಸುವಾಗ ಒಂದರನಂತರ ಒಂದರ ಬಳಕೆ ನಡೆಯಬೇಕು. ಅಂದರೆ ಎರಡು ಘಟಕಗಳ ಉಪಭೋಗದ ಮಧ್ಯೆ ಕಾಲಾಂತರವಿರಬಾರದು. ಉದಾಹರಣೆಗೆ ಹಣ್ಣನ್ನು ತಿನ್ನುವುದಾದರೆ ಒಂದರನಂತರ ಮತ್ತೊಂದನ್ನು ತಿನ್ನುತ್ತ ಹೋಗಬೇಕು. ಆಗ ಈ ನಿಯಮವು ಅನ್ವಯಿಸುತ್ತದೆ.

(iii) **ಬಳಕೆಗಾರನ ಸಮಾನ ಗುಣಸ್ವಭಾವ :** ಈ ನಿಯಮವು ಅನ್ವಯವಾಗಬೇಕಾದರೆ ಬಳಕೆಗಾರನ ಸ್ವಭಾವ ಸ್ಥಿರವಾಗಿರಬೇಕು. ಅದರಲ್ಲಿ ಹೆಚ್ಚುಕಡಮೆಯಾಗಬಾರದು.

(iv) **ಬಳಕೆಗಾರನ ಆದಾಯದಲ್ಲಿ ಸ್ಥಿರತೆ :** ಬಳಕೆಗಾರನ ಆದಾಯ ಒಂದೇ ಸಮನಾಗಿರಬೇಕು. ಅವನ ಆದಾಯದಲ್ಲಿ ಕಡಮೆಯಾದರೆ ಈ ನಿಯಮವು ಅನ್ವಯಿಸುವುದಿಲ್ಲ. ಹಣವಿಲ್ಲದಿದ್ದಾಗ ಕಡಮೆ ಹಣವಿದ್ದಾಗ ಕೆಲವು ವಸ್ತುಗಳನ್ನು ಬಳಸದೆಯೇ ಇರಬಹುದು. ಹಣ ಹೆಚ್ಚಾದರೆ ಆಸೆಗಳು ಹೆಚ್ಚಾಗುವುದು ಸಹಜ.

ಅಪವಾದಗಳು : ಈ ನಿಯಮಕ್ಕೆ ಕೆಲವು ಅಪವಾದಗಳಿವೆ. ಅವುಗಳು ಕೆಳಗಿನಂತಿವೆ :

(i) **ಬಳಕೆದಾರರ ವಿಶಿಷ್ಟ ಚಟಗಳು :** ಬಳಕೆದಾರರು ತಮ್ಮ ಅಭಿರುಚಿಗಾಗಿ ಕೆಲವು ಚಟಗಳನ್ನು ಹೊಂದಿದಾಗ ಈ ನಿಯಮವು ಅನ್ವಯಿಸುವುದಿಲ್ಲ. ಸ್ಟಾಂಪುಗಳು, ಹಳೆಯ ನಾಣ್ಯಗಳನ್ನು ಶೇಖರಿಸುವ ಹವ್ಯಾಸವನ್ನು ಕೆಲವರು ಹೊಂದಿದ್ದಾರೆ. ಇವುಗಳನ್ನು ಶೇಖರಿಸಿದಷ್ಟೂ ಶೇಖರಿಸಬೇಕೆಂಬ ಹಂಬಲ ಅವರಲ್ಲಿ ಹೆಚ್ಚಾಗುತ್ತ ಹೋಗುತ್ತದೆ. ಆಗ ಇಳಿಮುಖ ಅಂಚಿನ ತುಷ್ಟಿ ಸಿದ್ಧಾಂತವು ಅನ್ವಯಿಸುವುದಿಲ್ಲ.

(ii) **ಹಣದ ಶೇಖರಣೆ :** ಈ ನಿಯಮವು ಹಣದ ಶೇಖರಣೆಗೆ ಅನ್ವಯಿಸುವುದಿಲ್ಲ. ಹಣಕ್ಕೆ ವಸ್ತುಗಳನ್ನು ಕೊಳ್ಳುವ ಶಕ್ತಿ ಇರುವುದರಿಂದ ಹೆಚ್ಚು ಹಣದಿಂದ ಹೆಚ್ಚು ವಸ್ತುಗಳನ್ನು ಪಡೆಯಬಹುದು. ಆದ್ದರಿಂದ ಹೆಚ್ಚು ಹಣವನ್ನು ಶೇಖರಿಸ

ಬೇಕೆಂಬ ಹವ್ಯಾಸವು ಹೆಚ್ಚಾಗುವುದು. ಹಣವಿದ್ದವನು ಇನ್ನೂ ಹೆಚ್ಚಿನ ಹಣವನ್ನು ಬಯಸುವುದು ಅವನ ಒಂದು ಹುಟ್ಟುಗುಣ. ಈಗಿನ ಕಾಲದಲ್ಲಿ ದುಡ್ಡಿದ್ದವನೇ ದೊಡ್ಡಪ್ಪ. ಆದ್ದರಿಂದ ಸಾಮಾನ್ಯವಾಗಿ ಎಷ್ಟು ಹಣ ಬಂದರೂ ಸಾಕೆಂಬ ಭಾವನೆಯೇ ಯಾರಿಗೂ ಬರುವುದಿಲ್ಲ. ಆದ್ದರಿಂದ ಇಳಿಮುಖ ನಿಯಮವು ಹಣಕ್ಕೆ ಅನ್ವಯಿಸುವುದಿಲ್ಲ. ಆದರೆ ವಾಸ್ತವವಾಗಿ ವಿಚಾರ ಮಾಡಿದರೆ ಈ ನಿಯಮವು ಕೆಲವರಿಗೆ ಮಾತ್ರ ಅನ್ವಯವಾಗುತ್ತದೆ. ಹಣವನ್ನು ಒಂದೇ ಸಮನೆ ಶೇಖರಿಸುವವರು ಕಡುಲೋಭಿಗಳು ಮಾತ್ರ. ಅವರು ಅಸಾಮಾನ್ಯ ಮನುಷ್ಯರು. ಅಂಚಿನ ತುಷ್ಟಿ ನಿಯಮವು ಬಳಕೆಯ ವಸ್ತುಗಳಿಗೆ ಅನ್ವಯಿಸುತ್ತದೆ. ಈ ನಿಯಮವು ಪ್ರಗತಿಪರ ತೆರಿಗೆ ವಿಧಿಸಲು, ಸಮಾಜವಾದ ಸ್ಥಾಪಿಸಲು, ಬಳಕೆದಾರನು ಹಾಸಿಗೆ ಇದ್ದಷ್ಟು ಕಾಲುಚಾಚಲು ಹಾಗೂ ಯಾವುದೊಂದು ವಸ್ತುವಿಗೆ ಯೋಗ್ಯ ಬೆಲೆ ನಿರ್ಧರಿಸಲು ತಳಹದಿಯಾಗಿದೆ.

ಸಮಸೀಮಾಂತ (ಅಂಚಿನ) ತುಷ್ಟಿ ನಿಯಮ: ಸಮಸೀಮಾಂತ ತುಷ್ಟಿನಿಯಮವು ಬಯಕೆಗಳು ಸ್ಪರ್ಧಾತ್ಮಕವಾದುವು ಎಂಬ ಲಕ್ಷಣದ ಮೇಲೆ ರೂಪುಗೊಂಡಿದೆ. ಇದು ಬಳಕೆಯ ಎರಡನೆಯ ಮುಖ್ಯತತ್ವ. ಈ ನಿಯಮವನ್ನು 'ಅದಲು ಬದಲಿನ ತತ್ವ' (ಲಾ ಆಫ್ ಸಬ್‌ಸ್ಟಿಟ್ಯೂಷನ್), 'ಪರಮಾವಧಿ ಸಂತೃಪ್ತಿಯ ತತ್ವ' (ಲಾ ಆಫ್ ಮ್ಯಾಕ್ಸಿಮಂ ಸ್ಯಾಟಿಸ್‌ಫ್ಯಾಕ್ಷನ್) ಹಾಗೂ 'ಗೋಸನ್ನನ ಎರಡನೆಯ ನಿಯಮ' ಎಂದೂ ಕರೆಯುತ್ತಾರೆ.

ನಮ್ಮ ಜನಜೀವನದಲ್ಲಿ ಬಯಕೆಗಳು ಅಪರಿಮಿತವಾಗಿದ್ದು ಸಾಧನಸಂಪತ್ತುಗಳು ಮಿತವಾಗಿರುವುದು, ವಾಸ್ತವವಾಗಿ ಕಂಡುಬರುವ ಅಂಶವಾಗಿದೆ. ಇದನ್ನು ಸಾಂಕೇತಿಕವಾಗಿ ಕೆಳಗಿನಂತೆ ಸೂಚಿಸಬಹುದು :

ಬಯಕೆಗಳು ಸಾಧನ ಸಂಪತ್ತುಗಳು $W > R$: ಮಿತವಾದ ಆದಾಯದಿಂದ ಪರಮಾವಧಿ ಸಂತೃಪ್ತಿಯನ್ನು ಪಡೆಯುವುದೇ ಮನುಷ್ಯನ ಮುಖ್ಯ ಗುರಿ. ಬಳಕೆಗಾರರಲ್ಲಿ ಹಣ ಕಡಮೆ ಇರುತ್ತದೆ. ಪೇಟೆಯಲ್ಲಿ ಹಲವಾರು ವಸ್ತುಗಳನ್ನು ಕೊಳ್ಳಲು ಎಲ್ಲರಿಗೂ ಆಸೆ. ಆಗ ತನ್ನಲ್ಲಿರುವ ಕಡಮೆ ಹಣದಿಂದ ಹೆಚ್ಚಿನ ತೃಪ್ತಿಯನ್ನು ಪಡೆಯಲು ಒಂದು ವಸ್ತುವನ್ನು ಕೊಳ್ಳುವ ಬದಲು ಎರಡು ವಸ್ತುಗಳನ್ನು ಕೊಳ್ಳುತ್ತಾನೆ. ಅಂದರೆ ಆ ವಸ್ತುಗಳಿಂದ ಸಮನಾದ ಸೀಮಾಂತತೃಪ್ತಿ ಸಿಗುವಂತೆ ಹಣ ವೆಚ್ಚ ಮಾಡುತ್ತಾನೆ. ಪ್ರತಿಯೊಂದು ರೂಪಾಯಿಯನ್ನು ವೆಚ್ಚ ಮಾಡುವಾಗ ಅದರಿಂದ ಬರುವ ತೃಪ್ತಿಯನ್ನು ತೂಗಿ ತಾನು ಕೊಡುವ ಹಣಕ್ಕೆ ಆ ವಸ್ತುವಿನಿಂದ ಪಡೆಯುವ ತೃಪ್ತಿಯು ಸಮನಾದಾಗ ಮಾತ್ರ ವಸ್ತುವನ್ನು ಕೊಳ್ಳುತ್ತಾನೆ. ಏಕೆಂದರೆ ಸಮ ಸೀಮಾಂತತೃಪ್ತಿಯು ದೊರೆತಾಗ ಮಾತ್ರ ಬಳಕೆದಾರನಿಗೆ ಪರಮಾವಧಿಯ ಸಂತೃಪ್ತಿ ಸಿಗುತ್ತದೆ. ಆದರೆ ಇಲ್ಲಿ ಯಾವ ವಸ್ತುಗಳನ್ನು ಕಡಮೆ ಅಥವಾ ಹೆಚ್ಚಿನ

ಪ್ರಮಾಣದಲ್ಲಿ ಉಪಭೋಗಿಸಬೇಕೆಂಬುದೇ ದೊಡ್ಡ ಸಮಸ್ಯೆ. ಏಕೆಂದರೆ ನಮ್ಮ ಆದಾಯವನ್ನು ಯಾವ ರೀತಿಯಲ್ಲಿ ವೆಚ್ಚ ಮಾಡಿದರೆ, ಸೀಮಾಂತತೃಪ್ತಿ ಒಂದೇ ಸಮನಾಗಿರುತ್ತದೆ ಎಂಬುದನ್ನು ನೋಡಿಕೊಳ್ಳಬೇಕಾಗುತ್ತದೆ. ಯಾವುದೇ ಬಯಕೆಯಾದರೂ ಅದನ್ನು ಪೂರ್ಣ ಸಂತೃಪ್ತಿಯ ಮಟ್ಟದವರೆಗೆ ಕೊಂಡೊಯ್ಯುವುದು ಉಚಿತವಲ್ಲ. ಅದು ಸಾಧ್ಯವೂ ಅಲ್ಲ. ಆದ್ದರಿಂದ ಬಯಕೆಗಳ ತೃಪ್ತಿಯನ್ನು ಸಂತೃಪ್ತಿ ಮಟ್ಟಕ್ಕಿಂತ ಮೊದಲೇ ನಿಲ್ಲಿಸಬೇಕಾಗುತ್ತದೆ. ಬಯಕೆಗಳ ಪರಮಾವಧಿತೃಪ್ತಿ ದೊರೆಯಬೇಕಾದರೆ ಅವುಗಳ ತೀವ್ರತೆಯು ಒಂದೇ ಸಮನಾಗಿರುವ ಸನ್ನಿವೇಶದಲ್ಲಿ ನಿಲ್ಲಿಸಬೇಕಾಗುತ್ತದೆ. ಆಗ ಬಯಕೆಗಳ ತುಷ್ಟಿ ಸಮನಾಗುವುದರಿಂದ ಹೆಚ್ಚು ತೃಪ್ತಿ ದೊರಕುತ್ತದೆ.

ಯಾವ ರೀತಿ ವಿವಿಧ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ವಿರಳವಾಗಿರುವ ಸಾಧನಗಳನ್ನು ವಿನಿಯೋಗಿಸಿ, ಪರಮಾವಧಿ ತೃಪ್ತಿಯನ್ನು ಪಡೆಯಬಹುದು ಎನ್ನುವುದು ಮುಖ್ಯ ಸಮಸ್ಯೆ. ವಿಚಾರಶಕ್ತಿ ಇರುವ ವ್ಯಕ್ತಿ ಪ್ರತಿಯೊಂದು ವಸ್ತುವಿನ ಬಳಕೆಯನ್ನು ಒಂದು ಘಟ್ಟದವರೆಗೆ ಮುಂದುವರಿಸುತ್ತಾನೆ. ಆ ಘಟ್ಟದ ನಂತರ ತನ್ನಲ್ಲಿರುವ ಹಣವನ್ನು ಇತರ ಪದಾರ್ಥಗಳಿಗೆ ಬಳಸಿ ಹೆಚ್ಚಿನ ತೃಪ್ತಿ ಪಡೆಯುತ್ತಾನೆ. ಸಾಮಾನ್ಯವಾಗಿ ವ್ಯಕ್ತಿಯು ಅನೇಕ ವಸ್ತುಗಳನ್ನು ಕೊಳ್ಳುವಾಗ ಹಣದ ಸೀಮಾಂತ ತುಷ್ಟಿ ಎಲ್ಲ ವಸ್ತುಗಳಿಗೆ ಒಂದೇ ಸಮನಾಗಿರುವಂತೆ, ಎಚ್ಚರ ವಹಿಸುತ್ತಾನೆ. ತೃಪ್ತಿಯು ಪರಮಾವಧಿ ಮಟ್ಟವನ್ನು ಮುಟ್ಟಿದೆ ಎನ್ನುವವರೆಗೂ ಅವನು ಒಂದು ವಸ್ತುವಿಗೆ ಇನ್ನೊಂದು ವಸ್ತುವನ್ನು ಅದಲು ಬದಲು ಮಾಡುತ್ತ ಹೋಗುತ್ತಾನೆ. ಆದರೆ ಈ ಈ ರೀತಿ ಬದಲು ಮಾಡುವುದರಿಂದ, ಹೆಚ್ಚಿನ ತೃಪ್ತಿ ದೊರಕಲಾರದೆಂದು ತಿಳಿದಾಗ ಅವನು ಅದಲು ಬದಲು ಮಾಡುವುದನ್ನು ನಿಲ್ಲಿಸುತ್ತಾನೆ. ಉದಾಹರಣೆಗೆ ಒಬ್ಬ ಗ್ರಾಹಕನಲ್ಲಿ ಕೇವಲ ಐದು ರೂಪಾಯಿಗಳಿವೆ ಎಂದು ಕಲ್ಪಿಸೋಣ. ಆ ಐದು ರೂಪಾಯಿಗಳಿಂದ ಅವನು ಸೇಬನ್ನು ಹಾಗೂ ಕಿತ್ತಳೆ ಹಣ್ಣನ್ನು ಕೊಳ್ಳಬೇಕಾಗಿದೆ. ಈಗ ಬರುವ ಪ್ರಶ್ನೆ ಎಷ್ಟು ಹಣವನ್ನು ಸೇಬಿನ ಮೇಲೆ ಎಷ್ಟು ಹಣವನ್ನು ಕಿತ್ತಳೆ ಹಣ್ಣಿನ ಮೇಲೆ ವೆಚ್ಚಮಾಡಿದರೆ ಅವನಿಗೆ ಅಧಿಕ ತೃಪ್ತಿ ಸಿಗುತ್ತದೆ ಎಂಬುದು. ಇದನ್ನು ತಿಳಿಯಲು ಪ್ರತಿಯೊಂದು ರೂಪಾಯಿನಿಂದಲೂ ಅವನಿಗೆ ಸಿಗುವ ಅಂಚಿನ ತೃಪ್ತಿಯನ್ನು ಕಂಡು ಹಿಡಿದು, ಅದರಿಂದ ಎಷ್ಟು ಹಣವನ್ನು ಯಾವುದಕ್ಕೆ ವೆಚ್ಚಮಾಡಬಹುದೆಂಬುದನ್ನು ತಿಳಿದುಕೊಳ್ಳಬಹುದು.

ಗ್ರಾಹಕನು ತನ್ನಲ್ಲಿರುವ ಹಣವನ್ನೆಲ್ಲ ಸೇಬನ್ನು ಕೊಳ್ಳಲು ಬಳಸಿದರೆ ಅದರಿಂದ ಅವನಿಗೆ ಸಿಗುವ ತೃಪ್ತಿ 30 ಯೂನಿಟ್‌ಗಳು. ಅದೇ 5 ರೂಪಾಯಿಗಳನ್ನು ಕಿತ್ತಳೆ ಹಣ್ಣನ್ನು ಕೊಳ್ಳಲು ಬಳಸಿದರೆ ಅವನಿಗೆ ಸಿಗುವ ಒಟ್ಟು ತೃಪ್ತಿ 20 ಯೂನಿಟ್‌ಗಳು ಎಂದು ಊಹಿಸೋಣ. ಆದರೆ 5 ರೂಪಾಯಿಗಳಿಂದ 30 ಯೂನಿಟ್‌ಗಳಿಗಿಂತ ಹೆಚ್ಚು


ಕೋಷ್ಟಕ 3

ಸೇಬು ಮತ್ತು ಕಿತ್ತಲೆ ಹಣ್ಣುಗಳಿಂದ ಸಿಗುವ ತೃಪ್ತಿ (ಯೂನಿಟ್‌ಗಳಲ್ಲಿ)

ರೂಪಾಯಿಗಳಲ್ಲಿ	ಸೇಬಿನಿಂದ ಸಿಗುವ ತೃಪ್ತಿ	ಕಿತ್ತಳೆ ಹಣ್ಣಿನಿಂದ ಸಿಗುವ ತೃಪ್ತಿ
1	10	8
2	8	6
3	6	4
4	4	2
5	2	0
ಒಟ್ಟು 5 ರೂ. ಗಳು	30	20

ತೃಪ್ತಿ ಪಡೆಯಲು ತನ್ನ ಹಣವನ್ನು ವೆಚ್ಚ ಮಾಡಲು ಪ್ರಾರಂಭಿಸುತ್ತಾನೆ. ಹೇಗೆಂದರೆ ತನ್ನ ಕೊನೆಯ ರೂಪಾಯಿಯನ್ನು ಸೇಬನ್ನು ಕೊಳ್ಳಲು ಬಳಸಿದಾಗ ಅದರಿಂದ ಅವನಿಗೆ ಸಿಗುವ ತೃಪ್ತಿ 2 ಯೂನಿಟ್‌ಗಳು ಮಾತ್ರ. ಆದರೆ ಅದೇ ರೂಪಾಯಿಯಿಂದ ಕಿತ್ತಳೆ ಹಣ್ಣನ್ನು ಕೊಂಡರೆ, ಅದು ಕಿತ್ತಳೆ ಹಣ್ಣನ್ನು ವೆಚ್ಚ ಮಾಡುವ ಮೊದಲನೆಯ ರೂಪಾಯಿಯಾಗಿದ್ದು ಅದರಿಂದ 8 ಯೂನಿಟ್‌ಗಳ ತೃಪ್ತಿ ಸಿಗುತ್ತದೆ. ಅಂದರೆ 5ನೆಯ ರೂಪಾಯಿಯನ್ನು ಸೇಬಿನ ಮೇಲೆ ವೆಚ್ಚ ಮಾಡಿ 2 ಯೂನಿಟ್‌ಗಳ ತೃಪ್ತಿ ಪಡೆಯುವುದಕ್ಕಿಂತಲೂ, ಕಿತ್ತಳೆ ಹಣ್ಣನ್ನು ಕೊಂಡು 8 ಯೂನಿಟ್‌ಗಳ ತೃಪ್ತಿಯನ್ನು ಪಡೆಯಬಹುದು. ಇದು ಲಾಭದಾಯಕವೆಂಬುದರಲ್ಲಿ ಸಂಶಯವೇ ಇಲ್ಲ. ಇದರಿಂದ ಗ್ರಾಹಕ 5 ನೆಯ ರೂಪಾಯಿಯನ್ನು ಸೇಬಿನಿಂದ ಕಿತ್ತಳೆ ಹಣ್ಣನ್ನು ಕೊಳ್ಳಲು ವರ್ಗಾಯಿಸುತ್ತಾನೆ. ಮುಂದೆ 4 ನೆಯ ರೂಪಾಯಿಯಿಂದ ಅವನಿಗೆ ಸಿಗುವ ತೃಪ್ತಿ 4 ಯೂನಿಟ್‌ಗಳು. ಅದನ್ನು ಕಿತ್ತಳೆ ಹಣ್ಣಿಗೆ ವರ್ಗಾಯಿಸುವುದರಿಂದ 6 ಯೂನಿಟ್‌ಗಳ ತೃಪ್ತಿ ಸಿಗುತ್ತದೆ. ಆದ್ದರಿಂದ 4ನೆಯ ರೂಪಾಯಿಯನ್ನೂ ಕಿತ್ತಳೆ ಹಣ್ಣನ್ನು ಕೊಳ್ಳಲು ವರ್ಗಾಯಿಸುತ್ತಾನೆ. ಅಂತೆಯೇ ಸೇಬಿನ ಮೇಲೆ ವೆಚ್ಚ ಮಾಡುವ 3ನೆಯ ರೂಪಾಯಿ 6 ಯೂನಿಟ್ ತೃಪ್ತಿ ನೀಡುವುದು. ಆ ರೂಪಾಯಿಯನ್ನು ಕಿತ್ತಳೆ ಹಣ್ಣನ್ನು ಕೊಳ್ಳಲು ವರ್ಗಾಯಿಸಿದರೆ ಅದರಿಂದ 4 ಯೂನಿಟ್ ತೃಪ್ತಿ ಸಿಗುವುದು. ಅಂದರೆ 2 ಯೂನಿಟ್‌ಗಳಷ್ಟು ಕಡಮೆ ತೃಪ್ತಿ. ಇದರಿಂದ 3ನೆಯ ರೂಪಾಯಿಯನ್ನು ವರ್ಗಾಯಿಸುವುದಿಲ್ಲ. ಇಲ್ಲಿ ಕಂಡುಬರುವ ವಾಸ್ತವಾಂಶ ಎಂದರೆ ಗ್ರಾಹಕನಾದವನು ಕಡಮೆ ತೃಪ್ತಿಯನ್ನು ಕೊಡುವ ವಸ್ತುಗಳನ್ನು ಬಿಟ್ಟು ಹೆಚ್ಚು ತೃಪ್ತಿ ಕೊಡುವ ವಸ್ತುಗಳನ್ನೇ ಕೊಂಡುಕೊಳ್ಳುವನು. ಅಂದರೆ ಕಡಮೆ ಅಂಚಿನ ತುಷ್ಟಿಯುಳ್ಳ ವಸ್ತುವಿನ ಬದಲಾಗಿ

ಹೆಚ್ಚು ಅಂಚಿನ ತುಷ್ಟಿ ವಸ್ತುವನ್ನು ಕೊಳ್ಳುತ್ತಾನೆ. ಈ ಅದಲುಬದಲು ಬದಲಾವಣೆಯಿಂದ ಮೊದಲಿನ ವಸ್ತುವಿನ ಸಂಗ್ರಹ ಕಡಮೆಯಾಗಿ ಅದರ ಸಮಸೀಮಾಂತ ತುಷ್ಟಿ ಹೆಚ್ಚಾಗುತ್ತದೆ. ಎರಡನೆಯ ವಸ್ತುವಿನ ಸಂಗ್ರಹ ಹೆಚ್ಚಾದಂತೆ ಅದರ ಸಮಸೀಮಾಂತ ತುಷ್ಟಿ ಕಡಮೆಯಾಗುತ್ತ ಹೋಗುತ್ತದೆ. ಹೇಗೆಂದರೆ ಮೇಲಿನ ಉದಾಹರಣೆಯಲ್ಲಿ ಗ್ರಾಹಕನು ಮೂರು ರೂಗಳ ಸೇಬನ್ನು 2 ರೂಪಾಯಿಗಳ ಕಿತ್ತಳೆ ಹಣ್ಣನ್ನು ಕೊಳ್ಳುತ್ತಾನೆ. ಆಗ ಈ ಬದಲಾವಣೆಯಿಂದ ಸಿಗುವ ತೃಪ್ತಿ 10+8+6=24 ಯೂನಿಟ್‌ಗಳ ಸೇಬಿನಹಣ್ಣು ಮತ್ತು 8+6=14 ಯೂನಿಟ್‌ಗಳ ಕಿತ್ತಳೆ ಹಣ್ಣು. ಒಟ್ಟು 24+14=38 ಯೂನಿಟ್‌ಗಳ ತೃಪ್ತಿಯು ಲಭ್ಯವಾಗುತ್ತದೆ. ಈ ರೀತಿಯ ಅದಲು ಬದಲಿನ ಬದಲಾವಣೆಯಾಗದಿದ್ದರೆ ಅವನಿಗೆ ಕೇವಲ ಹೆಚ್ಚೆಂದರೆ 30 ಯೂನಿಟ್‌ಗಳ ತೃಪ್ತಿ ಸಿಗುತ್ತಿತ್ತು. ಆದರೆ ಈಗ 38 ಯೂನಿಟ್‌ಗಳ ಪರಮಾವಧಿಯ ತೃಪ್ತಿಯನ್ನು ಪಡೆಯುವುದಲ್ಲದೆ ಆ ಎರಡೂ ವಸ್ತುಗಳ ಸೀಮಾಂತತುಷ್ಟಿಗುಣ ಆ ಮಟ್ಟದಲ್ಲಿ ಸಮವಾಗುತ್ತದೆ. ಆಗ ಆ ವಸ್ತುಗಳನ್ನು ಅದಲುಬದಲು ಮಾಡುವುದನ್ನು ನಿಲ್ಲಿಸುತ್ತಾನೆ. ಹೀಗೆ ಮಾಡಿದಾಗ ಮಾತ್ರ ತೃಪ್ತಿಯು ಪರಮಾವಧಿಯನ್ನು ಮುಟ್ಟುತ್ತದೆ. ಈ ರೀತಿ ಆದಾಯವನ್ನು ವಿವಿಧ ವಸ್ತುಗಳ ಮೇಲೆ ವೆಚ್ಚಮಾಡಿ ಪರಮಾವಧಿ ತೃಪ್ತಿಯನ್ನು ಪಡೆಯಲು ಬಳಕೆದಾರರು ಪ್ರಯತ್ನಿಸುತ್ತಾರೆ. ಈ ನಿಯಮವನ್ನು ರೇಖಾ ಚಿತ್ರದ ಮೂಲಕವೂ ಆಲೇಖನ 2ರಲ್ಲಿನಂತೆ ಸಹ ಪ್ರತಿಪಾದಿಸಬಹುದು.



ಆಲೇಖನ 2 : ಸೇಬು ಮತ್ತು ಕಿತ್ತಳೆ ಹಣ್ಣುಗಳ ಸಮಸೀಮಾಂತ ತುಷ್ಟಿ ರೇಖೆಗಳು

ಮೇಲಿನ ಆ ಲೇಖನದಲ್ಲಿ ಗ್ರಾಹಕ 3 ರೂಪಾಯಿಗಳನ್ನು ಸೇಬಿನ ಮೇಲೂ 2 ರೂಪಾಯಿಗಳನ್ನು ಕಿತ್ತಳೆ ಹಣ್ಣಿನ ಮೇಲೂ ವೆಚ್ಚ ಮಾಡಿದ್ದಾನೆ. ಎರಡೂ ಚಿತ್ರಗಳಲ್ಲಿ ಸಮಸೀಮಾಂತ ತುಷ್ಟಿ ಗುಣವು ಸಮವಿರುವುದು ಕಂಡುಬರುತ್ತದೆ.

ಮಿತಿಗಳು : ಈ ನಿಯಮವು ಕೆಲವು ಮಿತಿಗಳನ್ನು ಹೊಂದಿದೆ. ಯಾವಾಗಲೂ ಈ ನಿಯಮವನ್ನು ಅನುಸರಿಸಲಾಗುವುದಿಲ್ಲ. ವೆಚ್ಚಮಾಡುವ ಪ್ರತಿಯೊಂದು ರೂಪಾಯಿಯ ಬಗ್ಗೆ ಕೂಲಂಕುಶವಾಗಿ ವಿಚಾರಮಾಡಲು ಎಲ್ಲ ಕಾಲದಲ್ಲಿಯೂ ಸಾಧ್ಯವಾಗುವುದಿಲ್ಲ. ಬಳಕೆದಾರನು ಜಾಗರೂಕನಾಗಿದ್ದಲ್ಲಿ ಪ್ರತಿಯೊಂದು ಬಾರಿ ವೆಚ್ಚ ಮಾಡಿದಾಗಲೂ ಕೊನೆಯ ರೂಪಾಯಿಗೆ ಬರುವ ವಸ್ತುಗಳ ಸೀಮಾಂತ ತುಷ್ಟಿಗುಣವು ಒಂದೇಸಮನಾಗಿರುವಂತೆ ನೋಡಿಕೊಳ್ಳುತ್ತಾನೆ. ಯಾವುದಾದರೂ ವಸ್ತುವಿಗೆ ಹೆಚ್ಚಿನ ಹಣ ವೆಚ್ಚವಾಗುತ್ತಿದ್ದ ಪಕ್ಷದಲ್ಲಿ, ಅದನ್ನು ಕಡಮೆ ಮಾಡಿ ಇತರ ವಸ್ತುಗಳಿಗೆ ಆ ಹಣವನ್ನು ಉಪಯೋಗಿಸಿದಲ್ಲಿ ಹೆಚ್ಚಿನ ತೃಪ್ತಿ ಸಿಗಲು ಸಾಧ್ಯ. ಆದ್ದರಿಂದ ಹೆಚ್ಚು ಹಣವನ್ನು ಒಂದು ಪದಾರ್ಥಕ್ಕೆ ವಿನಿಯೋಗಿಸುವುದು ಒಳ್ಳೆಯದಲ್ಲ. ವೆಚ್ಚದ ಕ್ರಮವನ್ನು ಸರಿಯಾಗಿ ವ್ಯವಸ್ಥೆಗೊಳಿಸಿದಲ್ಲಿ ಬರುವ ಅಲ್ಪ ಆದಾಯದಲ್ಲೇ ಪರಮಾವಧಿ ತೃಪ್ತಿಯನ್ನು ಪಡೆಯಲು ಸಾಧ್ಯ. ಆದರೆ ಕೆಲವುವೇಳೆ ಬಳಕೆದಾರ ಅಜ್ಞಾನದಿಂದ ತನ್ನ ಆದಾಯವನ್ನು ಜಾಣತನದಿಂದ ವೆಚ್ಚಮಾಡದಿರಬಹುದು. ಅವನಿಗೆ ಯಾವ ವಸ್ತುವಿನಿಂದ ಹೆಚ್ಚು ತೃಪ್ತಿ ಸಿಗುವುದು, ಯಾವ ವಸ್ತುವಿನಿಂದ ಕಡಮೆ ತೃಪ್ತಿ ಸಿಗುವುದು ಎಂಬುದನ್ನು ಕಂಡುಹಿಡಿಯಲು ಸಾಧ್ಯವಾಗುವುದಿಲ್ಲ. ಕೆಲವು ವೇಳೆ ಮತ್ತೊಬ್ಬರನ್ನು ಅನುಕರಣೆ ಅಥವಾ ಹೊಸ ಅಭಿರುಚಿಗೆ ಮರುಳಾಗಿ ಆದಾಯವನ್ನು ಅವ್ಯವಸ್ಥಿತ ರೀತಿಯಲ್ಲಿ ವೆಚ್ಚ ಮಾಡುವುದರಿಂದ ಪರಮಾವಧಿ ತೃಪ್ತಿ ಸಿಗುವುದಿಲ್ಲ. ದೀರ್ಘಕಾಲ ಬಾಳಿಕೆ ಬರುವ ವಸ್ತುಗಳಾದ ರೇಡಿಯೋ, ಮನೆ, ಸೈಕಲ್‌ಗಳನ್ನು ಅದಲು ಬದಲು ಮಾಡಲಾಗುವುದಿಲ್ಲ. ಸೀಮಾಂತ ತುಷ್ಟಿ ಆ ವಸ್ತುಗಳಲ್ಲಿ ಸಮವಾಗುವಂತೆ ಮಾಡಲು ಆದಾಯವನ್ನು ವೆಚ್ಚ ಮಾಡಲಾಗುವುದಿಲ್ಲ. ಆ ವಸ್ತುಗಳ ತುಷ್ಟಿ ಅಸಮವಾಗಿಯೇ ಉಳಿಯುತ್ತವೆ.

ಬಳಕೆದಾರರಿಗೆ ವಿವಿಧ ವಸ್ತುಗಳಿಂದ ಸಿಗುವ ತೃಪ್ತಿಯನ್ನು ಅಂಕಿ ಸಂಖ್ಯೆಗಳ ಮೂಲಕ ಅಳೆಯಬಹುದೆಂಬ ಊಹೆಯ ಮೇಲೆ ಈ ನಿಯಮವು ರೂಪುಗೊಂಡಿದೆ. ಆದರೆ ಬಳಕೆದಾರರು ಪಡೆಯುವ ತೃಪ್ತಿಯು ಮಾನಸಿಕವಾಗಿದ್ದು ಅದನ್ನು ಅಂಕಿ ಸಂಖ್ಯೆಗಳ ಮೂಲಕ ಅಳೆಯುವುದು ಸಾಧ್ಯವಿಲ್ಲ. ಬಳಕೆದಾರರಿಗೆ ಪೇಟೆಗಳಲ್ಲಿರುವ ವಸ್ತುಗಳು ತಾವು ಕೊಳ್ಳುವ ವಸ್ತುಗಳಿಗಿಂತ ಹೆಚ್ಚು ಉಪಯುಕ್ತವಾಗಿದೆ ಎಂಬುದು ತಿಳಿದಿರುವುದಿಲ್ಲ. ಹೀಗಾಗಿ ಅಜ್ಞಾನದಿಂದ ಹಲವಾರು ಸಲ ಕಡಮೆ ತೃಪ್ತಿ ತರುವ ವಸ್ತುಗಳನ್ನು ಕೊಳ್ಳುತ್ತಾರೆ.

ನಿಯಮದ ಮಹತ್ವ

(i) **ಬಳಕೆದಾರರಿಗೆ :** ಬಳಕೆದಾರರಿಗೆ ಈ ನಿಯಮವು ಅತ್ಯಂತ ಮಹತ್ವದ ನಿಯಮವಾಗಿ ಪರಿಣಮಿಸಿದೆ. ಏಕೆಂದರೆ ಸಾಮಾನ್ಯವಾಗಿ ಬಳಕೆದಾರರಲ್ಲಿ ಹಣವು ಕಡಮೆ ಇರುತ್ತದೆ. ಇಷ್ಟಗಳು ಬಹಳವಿದ್ದು ಅನೇಕ ವಸ್ತುಗಳನ್ನು ಅವರು ಕೊಳ್ಳ

ಬೇಕಾಗಿರುತ್ತದೆ. ಆದ್ದರಿಂದ ತಮ್ಮಲ್ಲಿರುವ ಹಣವನ್ನು ವಸ್ತುಗಳಿಗೆ ಹಂಚಿದಾಗ ಆರ್ಥಿಕ ತೃಪ್ತಿಯು ಯಾವರೀತಿ ಬರುವುದೆಂಬುದನ್ನು ತಿಳಿದುಕೊಂಡು ಅದರಂತೆ ಹಣವನ್ನು ವೆಚ್ಚ ಮಾಡಬಹುದು. ಜಾಗರೂಕನಾಗಿರುವ, ವಿಚಾರಶೀಲನಾಗಿರುವ ಬಳಕೆದಾರನಿಗೆ ಮಾತ್ರ ಇದರ ಉಪಯುಕ್ತತೆ ದೊರೆಯುತ್ತದೆ. ಆದ್ದರಿಂದ ತಮ್ಮಲ್ಲಿ ರುವ ಹಣವನ್ನು ಸರಿಯಾದ ಕ್ರಮದಲ್ಲಿ ವೆಚ್ಚಮಾಡಿ ತೃಪ್ತಿಪಡೆಯಬಹುದೆಂಬುವನ್ನು ಈ ನಿಯಮ ತೋರಿಸುತ್ತದೆ.

(ii) **ಉತ್ಪಾದಕರಿಗೆ :** ಉತ್ಪಾದಕರಿಗೂ ಸಹ ಈ ನಿಯಮ ನೆರವಾಗುತ್ತದೆ. ಉತ್ಪಾದನೆಯ ಅಂಶಗಳನ್ನು ಯಾವ ರೀತಿ ಸಂಯೋಜಿಸಿ, ಕಡಮೆ ವೆಚ್ಚದಿಂದ ಹೆಚ್ಚು ವಸ್ತುಗಳನ್ನು ಉತ್ಪಾದಿಸಿ ಆರ್ಥಿಕಲಾಭ ಅಂದರೆ ಪರಮಾವಧಿಯ ಲಾಭ ಪಡೆಯ ಬಹುದೆಂಬುದನ್ನು ಈ ನಿಯಮವು ತಿಳಿಸುತ್ತದೆ. ಉದ್ಯಮದಾರನಿಗೆ ಉತ್ಪಾದನಾಂಶ ಗಳನ್ನು ಅದಲುಬದಲು ಮಾಡಿ, ಹೆಚ್ಚು ಪ್ರತಿಫಲ ಕೊಡುವ ಅಂಶವನ್ನು ಉತ್ಪಾದನೆ ಯಲ್ಲಿ ಅಳವಡಿಸಿಕೊಂಡು ಕಡಮೆ ಪ್ರತಿಫಲ ಕೊಡುವ ಅಂಶವನ್ನು ಯಾವ ರೀತಿ ಕೈ ಬಿಡಬಹುದು ಎಂಬುದನ್ನು ತಿಳಿಸಿಕೊಡುತ್ತದೆ. ಉದಾಹರಣೆಗೆ ಒಬ್ಬ ಉದ್ಯಮದಾರ 1000 ರೂಪಾಯಿಗಳನ್ನು ಉದ್ದಿಮೆಯಲ್ಲಿ ತೊಡಗಿಸಿ ಒಂದು ಯಂತ್ರವನ್ನು ಕೊಂಡರೆ 3000 ರೂಪಾಯಿಗಳ ವಸ್ತುಗಳು ಉತ್ಪಾದಿಸಲ್ಪಡುತ್ತವೆ. ಅದೇ 1000 ರೂಪಾಯಿ ಗಳನ್ನು ಕೂಲಿಕಾರರ ವೇತನದ ಮೇಲೆ ವೆಚ್ಚಮಾಡಿದಾಗ ಬರುವ ಪ್ರತಿಫಲ 2000 ರೂಪಾಯಿ ಎಂದು ತಿಳಿಯುವಾ ! ಉದ್ಯಮದಾರ ಇಂತಹ ಪರಿಸ್ಥಿತಿಯಲ್ಲಿ ಯಂತ್ರ ವನ್ನೇ ಕೊಳ್ಳುವನು. ಏಕೆಂದರೆ ಕೂಲಿಕಾರರ ಮೇಲೆ ವೆಚ್ಚಮಾಡುವುದಕ್ಕಿಂತಲೂ ಯಂತ್ರದ ಮೇಲೆ ವೆಚ್ಚ ಮಾಡುವುದು ಲಾಭದಾಯಕ.

ಸಾರ್ವಜನಿಕ ಹಣಕಾಸು ವ್ಯವಸ್ಥೆಗಾರರಿಗೆ : ಆಧುನಿಕ ರಾಷ್ಟ್ರಗಳ ಮುಖ್ಯಗುರಿ ಜನತೆಯ ಕಲ್ಯಾಣ. ಜನತೆಯ ಯೋಗಕ್ಷೇಮ ಹೆಚ್ಚಿಸಲು ಸರಕಾರ ತೆರಿಗೆಗಳ ಮೂಲಕ ಹಣ ಪಡೆದು ಅದನ್ನು ಸಾರ್ವಜನಿಕ ಅನುಕೂಲಕ್ಕೆ ಖರ್ಚುಮಾಡುತ್ತದೆ. ಸರಕಾರ ಹಣವನ್ನು ವೆಚ್ಚಮಾಡುವಾಗ ಸಮಾಜದ ಪರಮಹಿತ ತತ್ವಕ್ಕೆ (ಮ್ಯಾಕ್ಸಿಮಮ್ ಸೋಷಿಯಲ್ ಬೆನಿಫಿಟ್) ಹೆಚ್ಚುಗಮನ ಕೊಡುತ್ತದೆ. ಅಂದರೆ ಬಳಕೆದಾರನಂತೆ ಸರಕಾರ ತನ್ನ ಆದಾಯವನ್ನು ವೆಚ್ಚಮಾಡುವಾಗ ಈ ನಿಯಮವನ್ನು ಪಾಲಿಸಿ ಜನತೆಗೆ ಪರಮಾವಧಿ ಕಲ್ಯಾಣವನ್ನು ನೀಡುವುದರ ಜೊತೆಗೆ ಸ್ವತಃ ಲಾಭ ಪಡೆಯಬಹುದು.

ವಿನಿಮಯದಲ್ಲೂ ಸಹ ಸಮಸೀಮಾಂತ ತುಷ್ಟಿ ನಿಯಮವು ಪ್ರಾಮುಖ್ಯತೆ ಯನ್ನು ಪಡೆದಿದೆ. ವಿನಿಮಯದಲ್ಲಿ ಹಣದ ಹಾಗೂ ವಸ್ತುಗಳ ಬದಲಾವಣೆಯಾಗು ತ್ತದೆ. ಹಣವನ್ನು ವಸ್ತುಗಳಿಗೆ ವಿನಿಮಯ ಮಾಡುವುದರಿಂದ ಪರಮಾವಧಿ ತೃಪ್ತಿ ಸಿಗುತ್ತದೆ. ಈ ನಿಯಮ ಬಳಕೆಗಲ್ಲದೆ ಇತರ ಆರ್ಥಿಕ ಕ್ಷೇತ್ರಗಳಿಗೂ ಅನ್ವಯಿಸುತ್ತದೆ.

ಪ್ರತಿಯೊಬ್ಬ ವ್ಯಕ್ತಿಯ ವೆಚ್ಚದ, ಉಳಿತಾಯದ ಮತ್ತು ಭವಿಷ್ಯ ಕಾಲದ ತೃಪ್ತಿಯ ಸಾಧನೆಗಾಗಿ ಆದಾಯವನ್ನು ವಿನಿಯೋಗಿಸುವ ಎಲ್ಲ ಸಂದರ್ಭಗಳಿಗೂ ಇದು ಅನ್ವಯವಾಗುತ್ತದೆ.

ಬಳಕೆದಾರರ ಹೆಚ್ಚುವರಿ: 'ಬಳಕೆದಾರರ ಹೆಚ್ಚುವರಿ' (ಕನ್ಸೂಮರ್ಸ್ ಸರ್‌ಪ್ಲಸ್) ಎಂಬ ಶಬ್ದವನ್ನು ಮೊಟ್ಟಮೊದಲಿಗೆ ಅರ್ಥಶಾಸ್ತ್ರಕ್ಕೆ ಪರಿಚಯ ಮಾಡಿಕೊಟ್ಟವರು ಡಾಕ್ಟರ್ ಆಲ್‌ಫ್ರೆಡ್ ಮಾರ್ಷಲ್. ಬಳಕೆದಾರ ಹೆಚ್ಚುವರಿ ಬಳಕೆಯ ಒಂದು ಮುಖ್ಯ ಕಲ್ಪನೆ. ಈ ಕಲ್ಪನೆಯು ಇಳಿಮುಖ ಸೀಮಾಂತತುಷ್ಟಿ ನಿಯಮದಿಂದ ಹೊರ ಹೊಮ್ಮಿದೆ. ಇದು ಸಾಮಾನ್ಯವಾಗಿ ಎಲ್ಲ ಬಳಕೆದಾರರ ಅನುಭವಕ್ಕೆ ಬಂದಿರುವ ಕಲ್ಪನೆ. ಒಬ್ಬ ವ್ಯಕ್ತಿ ಒಂದು ವಸ್ತುವನ್ನು ಉಪಭೋಗಿಸಿದಾಗ ಸಿಗುವ ಒಟ್ಟು ತೃಪ್ತಿಗೂ ಮತ್ತು ಅದನ್ನು ಪಡೆಯಲು ಹಣ ಕೊಡುವುದರ ಮೂಲಕ ವ್ಯಕ್ತಿಯು ಮಾಡಬೇಕಾದ ತ್ಯಾಗಕ್ಕೂ ನಡುವೆ ಇರುವ ವ್ಯತ್ಯಾಸವನ್ನು ಬಳಕೆದಾರರ ಹೆಚ್ಚುವರಿ ಎಂದು ಕರೆಯಬಹುದು. ಯಾವುದೇ ವಸ್ತುವಿಗೆ ಕೊಟ್ಟ ಬೆಲೆ ಆ ವಸ್ತುವಿನ ಸೀಮಾಂತ ತುಷ್ಟಿಯನ್ನು ಅಳೆಯುತ್ತದೆ. ಬೆಲೆ ಆ ವಸ್ತುವಿನಿಂದ ಸಿಗುವ ತೃಪ್ತಿಗೆ ಸಮನಾಗಿರುತ್ತದೆ. ನಿತ್ಯ ಜೀವನದಲ್ಲಿ ಹಲವು ವಸ್ತುಗಳಿಗೆ ಜನರು ಕೊಡುವ ಬೆಲೆಯು ಆ ವಸ್ತುಗಳಿಂದ ಸಿಗುವ ತುಷ್ಟಿಗಿಂತ ಬಹಳ ಕಡಮೆ ಇರುತ್ತದೆ. ಅವರು ಆ ವಸ್ತುವಿನ ಬೆಲೆಗಿಂತಲೂ ಹೆಚ್ಚು ಬೆಲೆ ಕೊಟ್ಟು ಅವುಗಳನ್ನು ಕೊಳ್ಳಲು ತಯಾರಿರುತ್ತಾರೆ. ಆ ವಸ್ತುವಿಗೆ ಅದರ ಬೆಲೆಗಿಂತಲೂ ಹೆಚ್ಚಿನ ಬೆಲೆ ಕೊಡುವುದು ತಪ್ಪಲ್ಲ, ಎಂಬ ಭಾವನೆಯು ಅನೇಕ ಬಾರಿ ಅವರ ಮನಸ್ಸಿನಲ್ಲಿ ಮೂಡುತ್ತದೆ. ಹೀಗಾಗಿ ಹೆಚ್ಚು ಬೆಲೆ ಕೊಟ್ಟು ಅವರು ಕೆಲವು ವಸ್ತುಗಳನ್ನು ಕೊಳ್ಳಲು ಸಿದ್ಧರಿರುತ್ತಾರೆ. ಆದರೆ ಮಾರುಕಟ್ಟೆಯಲ್ಲಿ ಆ ವಸ್ತುಗಳ ಬೆಲೆ ಕಡಮೆ ಇರುವುದರಿಂದ ಆ ವಸ್ತುವನ್ನು ಕೊಂಡಾಗ ಅದರಿಂದ ಕೊಳ್ಳುವವರಿಗೆ ಅಧಿಕ ತೃಪ್ತಿ ಸಿಗುತ್ತದೆ. ಉದಾಹರಣೆಗೆ ಉಪ್ಪು, ಸೀಮೆಎಣ್ಣೆ, ರೆವಿನ್ಯೂಸ್ಟ್ಯಾಂಪ್, ಕಡ್ಡಿಪೆಟ್ಟಿಗೆ, ಅಂಚೆಕಾರ್ಡುಗಳು, ವರ್ತಮಾನ ಪತ್ರಿಕೆ ಅತ್ಯಾವಶ್ಯಕವಾಗಿ ಬೇಕು. ಎಷ್ಟು ಬೆಲೆ ಕೊಟ್ಟಾದರೂ ಅವುಗಳನ್ನು ಪಡೆಯಲು ಬಯಸುತ್ತೇವೆ. ಆದರೆ ಆ ವಸ್ತುಗಳು ಕಡಮೆ ಬೆಲೆಗೆ ಸಿಕ್ಕಾಗ ಅಧಿಕ ತೃಪ್ತಿ ದೊರೆಯುತ್ತವೆ. ಈ ವಸ್ತುಗಳ ಬೆಲೆ ಕಡಮೆಯಾದರೂ ಅವುಗಳಿಂದ ಸಿಗುವ ತೃಪ್ತಿ ಅಥವಾ ತುಷ್ಟಿ ಅತ್ಯಧಿಕ. ಈ ಹೆಚ್ಚಿನ ತೃಪ್ತಿಯೇ ಬಳಕೆದಾರನ ಅಧಿಕ ತೃಪ್ತಿ ಅಥವಾ ಹೆಚ್ಚುವರಿ.

ಮಾರ್ಷಲ್ ಬಳಕೆದಾರರ ಹೆಚ್ಚುವರಿಯನ್ನು ಈ ರೀತಿ ವಿವರಿಸಿದ್ದಾರೆ. 'ಬಳಕೆದಾರನು ಯಾವುದೊಂದು ವಸ್ತುವನ್ನು ತ್ಯಜಿಸುವ ಬದಲು ಅದಕ್ಕೆ ಹೆಚ್ಚಿನ ಬೆಲೆಯನ್ನು ಕೊಡಲು ಸಿದ್ಧನಾಗಿರುವಾಗಿನ ಹಾಗೂ ಆ ವಸ್ತುವನ್ನು ಕಡಮೆ ಬೆಲೆಗೆ ಕೊಂಡಾಗಿನ ಈ ಎರಡರ ನಡುವಣ ಅಧಿಕ ತೃಪ್ತಿಯೇ ಬಳಕೆದಾರರ ಹೆಚ್ಚುವರಿ'. ಇದನ್ನೇ ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಒಬ್ಬ ವ್ಯಕ್ತಿ ಒಂದು ವಸ್ತುವನ್ನು ನಿರಾಕರಿಸುವುದರ

ಬದಲು ಕೊಳ್ಳಲು ಇಷ್ಟಪಡುವ ಬೆಲೆಗೂ ನಿಜವಾಗಿಯೂ ಅವನು ಕೊಡುವ ಬೆಲೆಗೂ ಇರುವ ವ್ಯತ್ಯಾಸವೇ ಬಳಕೆದಾರನ ಉಳಿತಾಯ ಸುಪ್ತಬೆಲೆಗೂ ಮತ್ತು ವಾಸ್ತವವಾದ ಬೆಲೆಗೂ ಇರುವ ವ್ಯತ್ಯಾಸವೇ ಬಳಕೆದಾರನ ಉಳಿತಾಯವೆಂದು ಟಾಸಿಗ್ ಹೇಳುತ್ತಾನೆ. ಬಳಕೆದಾರನ ಉಳಿತಾಯವನ್ನು ಸೇಬುಹಣ್ಣಿನ ಒಂದು ಉದಾಹರಣೆಯ ಮೂಲಕ ಕೋಷ್ಟಕ 4 ರಲ್ಲಿನಂತೆ ವಿವರಿಸಬಹುದು.

ಕೋಷ್ಟಕ 4

ಸೇಬುಹಣ್ಣು ಕೊಳ್ಳುವಿಕೆಯಲ್ಲಿ ಬಳಕೆದಾರರ ಉಳಿತಾಯ

ಸೇಬಿನ ಹಣ್ಣು (ಸಂಖ್ಯೆ)	ಸೀಮಾಂತ ತುಷ್ಟಿ (ಘಟಕಗಳಲ್ಲಿ)	ಕೊಡಲು ತಯಾರಿರುವ ಬೆಲೆ (ಪೈಸೆಗಳಲ್ಲಿ)	ವಾಸ್ತವವಾಗಿ ಕೊಟ್ಟ ಬೆಲೆ (ಪೈಸೆಗಳಲ್ಲಿ)	ಬಳಕೆದಾರರ ಉಳಿತಾಯ (ಪೈಸೆಗಳಲ್ಲಿ)
1	20	20	5	1
2	15	15	5	10
3	10	10	5	5
4	5	5	5	0
ಒಟ್ಟು 4	50	50	20	30

ಬಳಕೆದಾರನು ಮೊದಲನೆಯ ಸೇಬನ್ನು ಕೊಳ್ಳಲು 20 ಪೈಸೆ ಕೊಡಲು ಸಿದ್ಧನಿರುವನು. ಅವನಿಗೆ ಅದರಿಂದ ಸಿಗುವ ತುಷ್ಟಿಗುಣ 20 ಪೈಸೆಗಳಿಗೆ ಸಮವಾಗಿರುತ್ತದೆ. ಆದರೆ ಅವನು ಅದಕ್ಕೆ ಕೊಡುವ ಬೆಲೆ 5 ಪೈಸೆಗಳು ಮಾತ್ರ. ಅಂದರೆ 20 – 5=15 ಪೈಸೆಗಳಷ್ಟು ಹೆಚ್ಚು ತೃಪ್ತಿ ಸಿಕ್ಕಿತು. ಎರಡನೆಯ ಸೇಬಿಗೆ 15 ಪೈಸೆಗಳು ಕೊಡಲು ಸಿದ್ಧನಿದ್ದು ಅದಕ್ಕೆ ವಾಸ್ತವವಾಗಿ 5 ಪೈಸೆಗಳನ್ನು ಕೊಡುವನು. ಇದರಿಂದ 15 – 5=10 ಪೈಸೆಗಳಷ್ಟು ಹೆಚ್ಚು ತೃಪ್ತಿ ಸಿಗುತ್ತದೆ. ಮೂರನೆಯ ಹಣ್ಣಿಗೆ 10 ಪೈಸೆ ಕೊಡಲು ಸಿದ್ಧನಿದ್ದು ಕೇವಲ 5 ಪೈಸೆಗಳಿಗೆ ಆ ಹಣ್ಣನ್ನು ಪಡೆಯುವನು. 10 – 5=5. ಈ ಹಣ್ಣಿನಿಂದ 10 – 5=5 ಪೈಸೆ ಹೆಚ್ಚು ತೃಪ್ತಿ ಸಿಗುವುದು. ನಾಲ್ಕನೆಯ ಹಣ್ಣಿಗೆ 5 ಪೈಸೆ ಕೊಡಲು ತಯಾರಿದ್ದು ವಾಸ್ತವವಾಗಿ 5 ಪೈಸೆ ಕೊಟ್ಟಾಗ ಹೆಚ್ಚಿನ ತೃಪ್ತಿ ಸಿಗುವುದಿಲ್ಲ. ಆದಕಾರಣ ನಾಲ್ಕು ಹಣ್ಣುಗಳನ್ನು ಮಾತ್ರ ಖರೀದಿ ಮಾಡುವನು. ಆದರೆ ಆರ್ಥಿಕ ತೃಪ್ತಿ ಸಿಗುವುದು ಮೊದಲಿನ ಮೂರು ಹಣ್ಣುಗಳಿಂದ; ಅವನಿಗೆ ಒಟ್ಟು 15+10+5=30 ಪೈಸೆಗಳಷ್ಟು ಹೆಚ್ಚಿನ ತೃಪ್ತಿ ಸಿಗುತ್ತದೆ. ನಾಲ್ಕುಬಾರಿ ಖರ್ಚುಮಾಡಿದ ಒಟ್ಟು ಹಣದಿಂದ 20+15+10+

5=50 ಪೈಸೆಗೆ ಸಮನಾದ ತೃಪ್ತಿ ಅವನಿಗೆ ಸಿಗುತ್ತದೆ. ನಾಲ್ಕು ಸೇಬಿನ ಹಣ್ಣುಗಳಿಗೆ ಬಳಕೆದಾರ ಕೊಡುವ ಬೆಲೆ $4 \times 5 = 20$ ಪೈಸೆಗಳು.

ಬಳಕೆದಾರನ ಹೆಚ್ಚುವರಿ=ಒಟ್ಟುತೃಪ್ತಿ – ಒಟ್ಟು ವೆಚ್ಚ ಮಾಡಿದ ಹಣ

30 =50 – 20


30 ಪೈಸೆಗಳಷ್ಟು ಅಧಿಕ ತೃಪ್ತಿ ಗ್ರಾಹಕನಿಗೆ ಲಭಿಸಿದೆ

ಅಥವಾ

ಬಳಕೆದಾರನ ಹೆಚ್ಚುವರಿ=ಕೊಡಲು ತಯಾರಿರುವ ಬೆಲೆ – ವಾಸ್ತವವಾಗಿ ಕೊಟ್ಟ ಬೆಲೆ

30 = 50 – 20

(ಗ್ರಾಹಕರ ಹೆಚ್ಚುವರಿಯನ್ನು ಆಲೇಖನ 3ರಲ್ಲಿ ಪ್ರತಿಪಾದಿಸಿದೆ.)



ಆಲೇಖನ 3 : ಬಳಕೆದಾರನ ಹೆಚ್ಚುವರಿ ರೇಖಾಕೃತಿ

ಮೇಲೆ ಬಳಕೆದಾರ ಕೊಳ್ಳುವ ವಸ್ತುಗಳ ಘಟಕಗಳನ್ನು OX ರೇಖೆಯ ಅಳತೆ ಮಾಡಲಾಗುವುದು ಮತ್ತು OY ರೇಖೆಯ ಮೇಲೆ ಬಳಕೆದಾರನಿಗೆ ಸಿಗುವ ಉಪಯುಕ್ತತೆಯನ್ನು ಅವನು ಕೊಡುವ ಹಣದಿಂದ ಅಳತೆ ಮಾಡಬಹುದು. ಅಂದರೆ ಒಂದು ನಿರ್ದಿಷ್ಟ ವಸ್ತುವಿನ ಘಟಕವನ್ನು ಕೊಳ್ಳದೆ ಹಾಗೆಯೇ ಬಿಡುವ ಬದಲು ಬಳಕೆದಾರ ಎಷ್ಟು ಹಣವನ್ನು ವೆಚ್ಚ ಮಾಡುತ್ತಾನೆ ಎಂಬುದು. UU^1 ರೇಖೆಯು

ಬಳಕೆದಾರನು ವಸ್ತುವಿನ ಘಟಕಗಳಿಗೆ ಕೊಡಲು ಸಿದ್ಧನಿರುವ ಬೆಲೆಯನ್ನು ಸೂಚಿಸುತ್ತದೆ. MP ರೇಖೆಯು ಬಳಕೆದಾರನು ವಾಸ್ತವವಾಗಿ ಕೊಡುವ ಬೆಲೆಯನ್ನು ಸೂಚಿಸುತ್ತದೆ. ಒಟ್ಟು ಬಳಕೆ OM ಘಟಕಗಳಾದರೆ, ಇವುಗಳಿಗೆ ನೀಡಿರುವ ಬೆಲೆಯನ್ನು AOMP ಭಾಗವು ಸೂಚಿಸುತ್ತದೆ. ಬಳಕೆ ಒಟ್ಟು ತೃಪ್ತಿಯನ್ನೂ ಮತ್ತು ಆ ತೃಪ್ತಿಗೆ ಅನುಸಾರವಾಗಿ ಬಳಕೆದಾರನು ಕೊಡಲು ಸಿದ್ಧನಾಗಿರುವ ಬೆಲೆಯನ್ನು OMPU ಸೂಚಿಸುತ್ತದೆ. ಗ್ರಾಹಕ ಕೊಡಲು ಸಿದ್ಧವಿರುವ ಬೆಲೆಗೆ ಮತ್ತು ವಾಸ್ತವವಾಗಿ ಅವನು ನೀಡುವ ಬೆಲೆಗೆ ಇರುವ ವ್ಯತ್ಯಾಸವನ್ನು UAP ಸೂಚಿಸುತ್ತದೆ. ಇದೇ ಬಳಕೆದಾರನ ಹೆಚ್ಚುವರಿ.

ಟೀಕೆಗಳು : ಬಳಕೆದಾರನ ಹೆಚ್ಚುವರಿ ನಿಯಮವನ್ನು ಕೇವಲ ಕಾಲ್ಪನಿಕ ನಿಯಮವೆಂದು ಟೀಕಿಸಲಾಗಿದೆ. ಬಳಕೆದಾರನು ತನ್ನ ನಿತ್ಯಜೀವನದಲ್ಲಿ ಪ್ರತಿಯೊಂದು ವಸ್ತುವನ್ನು ಕೊಳ್ಳುವಾಗ ಆ ವಸ್ತುವಿಗೆ ಎಷ್ಟು ಬೆಲೆಯನ್ನು ಕೊಡಲು ಸಿದ್ಧನಿರುತ್ತಾನೆ ಎಂಬುದನ್ನು ಮನಸ್ಸಿನಲ್ಲಿ ವಿಚಾರಮಾಡಿ ಅನಂತರ ಆ ವಸ್ತುವಿಗೆ ಕೊಟ್ಟ ಬೆಲೆಯೊಂದಿಗೆ ಹೋಲಿಸಿ ಅಧಿಕ ತೃಪ್ತಿ ಸಿಕ್ಕಿತೆಂದು ಲೆಕ್ಕ ಮಾಡಲು ಸಾಧ್ಯವಿಲ್ಲ. ಅಲ್ಲದೆ ಬಳಕೆದಾರನು ತಾನು ಕೊಳ್ಳಬೇಕಾದ ವಸ್ತುವನ್ನು ಅನೇಕ ಸಣ್ಣ ಘಟಕಗಳನ್ನಾಗಿ ಬಿಡಿಸಿ, ಮೊದಲ ಘಟಕಕ್ಕೆ ಹಾಗೂ ಅದರ ಮುಂದಿನ ಘಟಕಗಳಿಗೆ ಎಷ್ಟೆಷ್ಟು ಬೆಲೆ ಕೊಡಬಹುದು ಎಂದು ಆಲೋಚಿಸುವನು ಎಂಬುದು ಸತ್ಯಕ್ಕೆ ದೂರವಾದದ್ದು. ಇದು ಅವಾಸ್ತವಿಕ ಮತ್ತು ಅಸ್ವಾಭಾವಿಕ. ಅದರಲ್ಲಿ ಬಳಕೆದಾರನಿಗೆ ಅತ್ಯವಶ್ಯಕವಾಗಿ ಬೇಕಾಗಿರುವ ವಸ್ತುಗಳ ಬಗ್ಗೆ ಈ ರೀತಿ ಆಲೋಚಿಸುವುದು ಕಷ್ಟ. ಏಕೆಂದರೆ ಬಳಕೆದಾರನು ಅತಿ ತುರ್ತಾಗಿ ಬೇಕಾಗಿರುವ ವಸ್ತುಗಳಿಗೆ ಎಷ್ಟು ಬೆಲೆಯನ್ನಾದರೂ ಕೊಡಲು ಸಿದ್ಧನಿರಬಹುದು. ಆದ್ದರಿಂದ ಈ ಬೆಲೆಗೆ ಮತ್ತು ವಾಸ್ತವವಾಗಿ ಬಳಕೆದಾರನು ಕೊಡುವ ಬೆಲೆಗೆ ಇರುವ ವ್ಯತ್ಯಾಸ ಬಳಕೆದಾರನ ಹೆಚ್ಚುವರಿಯನ್ನು ಅಳೆಯುವುದೆಂದು ಹೇಳುವುದು ಕೇವಲ ಕಾಲ್ಪನಿಕ. ಅವಶ್ಯವಾದ ವಸ್ತುಗಳಿಗೆ ಹೆಚ್ಚು ಬೆಲೆ ಕೊಡಲು ಎಲ್ಲರೂ ಸಿದ್ಧರಾಗಿರುತ್ತಾರೆ.

ಈ ನಿಯಮವನ್ನು ಅಂಕಿಸಂಖ್ಯೆಗಳಿಂದ ಸುಲಭವಾಗಿ ಅಳೆಯಲು ಸಾಧ್ಯವಾಗುವುದಿಲ್ಲ. ಏಕೆಂದರೆ ತೃಪ್ತಿಯು ಮಾನಸಿಕ. ಆದ್ದರಿಂದ ನಿಜ ಪ್ರಪಂಚದಲ್ಲಿ ಈ ಕಾಲ್ಪನಿಕ ಪದವನ್ನು ಆಚರಣೆಗೆ ತರಲಾಗುವುದಿಲ್ಲ. ಎಲ್ಲರ ಆದಾಯವೂ ಒಂದೇ ಸಮನಾಗಿದ್ದಲ್ಲಿ, ಒಂದು ವಸ್ತುವನ್ನು ಕೊಳ್ಳುವ ಬೆಲೆಯಿಂದ, ಎಲ್ಲರೂ ಒಂದೇ ರೀತಿಯ ತೃಪ್ತಿಯನ್ನು ಪಡೆಯಬಹುದು. ಆದರೆ ಇದು ಸಾಧ್ಯವಿಲ್ಲ. ಏಕೆಂದರೆ ಎಲ್ಲರ ಆದಾಯ ಒಂದೇ ಸಮನಾಗಿರುವುದಿಲ್ಲ. ಆದ್ದರಿಂದ ಹಣದಿಂದ ಸಿಗುವ ತೃಪ್ತಿಯು ಆದಾಯ ಹಾಗೂ ಇತರ ಸ್ಥಿತಿಗತಿಗಳಿಗನುಸಾರವಾಗಿ ವ್ಯತ್ಯಾಸ ಹೊಂದುತ್ತದೆ. ಶ್ರೀಮಂತರಿಗೆ ಬಡವರಿಗಿಂತಲೂ ಹಣದ ಸೀಮಾಂತ ತುಷ್ಟಿ ಕಡಮೆ

ಇರುತ್ತದೆ. ಶ್ರೀಮಂತನು ಕೆಲವು ಹಣ್ಣು ಅಥವಾ ತರಕಾರಿಗಳನ್ನು ಹೆಚ್ಚು ಬೆಲೆ ಕೊಟ್ಟು ಕೊಳ್ಳಬಹುದು. ಆದರೆ ಅವನು ಅದರಿಂದ ಹೆಚ್ಚಿನ ತೃಪ್ತಿಯನ್ನು ಪಡೆಯು ಲಾರ. ಅದೇ ಹಣ್ಣು ಅಥವಾ ತರಕಾರಿಗಳು ಹೇರಳವಾಗಿ ಸಿಗುವ ಕಾಲದಲ್ಲಿ ಬಡವನೂ ಅವನ್ನು ಕಡಮೆ ಬೆಲೆಗೆ ಕೊಳ್ಳುತ್ತಾನೆ. ಆಗ ಇದರಿಂದ ಅವನಿಗೆ ಸಿಗುವ ತೃಪ್ತಿ ಅಪಾರ. ಈ ರೀತಿ ಈ ನಿಯಮವನ್ನು ಬೆಲೆಗಳ ಮೂಲಕ ಅಳೆಯುವ ಪ್ರಯತ್ನ ನಿಷ್ಪ್ರಯೋಜಕ.

ಈ ನಿಯಮ ಜೀವನಾವಶ್ಯಕ ವಸ್ತುಗಳಿಗೆ ಅನ್ವಯಿಸುವುದಿಲ್ಲ. ಆಹಾರ, ಬಟ್ಟೆ, ವಸತಿಗಳಿಗೆ ಬಳಕೆದಾರನ ಹೆಚ್ಚುವರಿಯು ಅಧಿಕವಾಗಿರುತ್ತದೆ. ಈ ವಸ್ತುಗಳಿಲ್ಲದೆ ಮಾನವ ಬದುಕಲಾರ. ಇವುಗಳಿಂದ ಸಿಗುವ ತೃಪ್ತಿ ಹಾಗೂ ಸೀಮಾಂತತುಷ್ಟಿ ಅಪರಿಮಿತವಾದದ್ದು. ಒಬ್ಬನು ತೃಷೆಯಿಂದ ಬಳಲುತ್ತಿದ್ದು, ಮರಣಾಂತಕಸ್ಥಿತಿ ಯಲ್ಲಿರುವಾಗ ಒಂದು ಬಟ್ಟಲು ನೀರಿಗೆ 1 ರೂಪಾಯಿ ಬೆಲೆಯನ್ನು ಕೊಡಲೂ ಸಿದ್ಧನಾಗುವನೆಂದೂ, ಆ ಒಂದು ಬಟ್ಟಲು ನೀರಿನ ಬೆಲೆ ಸಾಮಾನ್ಯವಾಗಿ 10 ಪೈಸೆ ಗಳೆಂದೂ ತಿಳಿಯುವಾ! ಆಗ ಸಿಗುವ ತೃಪ್ತಿ 100 – 10 ಪೈಸೆ=90 ಪೈಸೆ. ಇದು ಹಾಸ್ಯಾಸ್ಪದ. ಏಕೆಂದರೆ ಸಾಯುವುದಕ್ಕಿಂತಲೂ ಬದುಕಲು ಅವನು ಎಷ್ಟು ಬೇಕಾದರೂ ಹಣ ಕೊಡಲು ಸಿದ್ಧನಿರುತ್ತಾನೆ. ಇಲ್ಲಿ ಅವನಿಗೆ ಹಣಕ್ಕಿಂತಲೂ ಜೀವ ಮುಖ್ಯ.

ಉಪಯೋಗಿಸುವ ವಸ್ತುಗಳಿಗೆ ಬದಲಿವಸ್ತುಗಳಿದ್ದಾಗ ಬಳಕೆದಾರನ ಹೆಚ್ಚುವರಿ ಯನ್ನು ಕಂಡುಹಿಡಿಯಲಾಗುವುದಿಲ್ಲ. ಆದಕಾರಣ ಬಳಕೆದಾರನ ಹೆಚ್ಚುವರಿ ಕೇವಲ ಕಾಲ್ಪನಿಕ, ಅದು ವೈಜ್ಞಾನಿಕ ಪದವಲ್ಲ. ಆದಾಗ್ಯೂ ಕೆಲವು ವಸ್ತುಗಳ ಬೆಲೆ ಕಡಮೆ ಇದ್ದು ಅವುಗಳಿಂದ ಅಧಿಕ ತೃಪ್ತಿ ದೊರೆಯುತ್ತದೆ. ಉಪ್ಪು ಬಳಕೆಯಲ್ಲಿ ಹೆಚ್ಚು ಉಪಯುಕ್ತತೆಯನ್ನು ಪಡೆದಿದೆ, ಆದರೆ ಪೇಟೆಯಲ್ಲಿ ಅದರ ಬೆಲೆ ಕಡಮೆ. ಆದರಿಂದ ಬಳಕೆದಾರರಿಗೆ ಅಧಿಕ ತೃಪ್ತಿ ಸಿಗುತ್ತದೆ.

ಬಳಕೆದಾರನ ಹೆಚ್ಚುವರಿ ಮಹತ್ವ : ಬಳಕೆದಾರನ ಹೆಚ್ಚುವರಿಯನ್ನು ಅಳೆಯು ವುದು ಅಸಾಧ್ಯವಾಗಿದ್ದರೂ, ವಾಸ್ತವಿಕ ಜೀವನದಲ್ಲಿ ಈ ನಿಯಮವು ಹೆಚ್ಚು, ಮಹತ್ವವನ್ನು ಪಡೆದಿದೆ. ಈ ನಿಯಮವು ಕೇವಲ ಕಲ್ಪನೆಯದಾಗಿದ್ದರೂ, ಪೂರ್ಣವಾಗಿ ನಿರುಪಯೋಗಿಯಂತೂ ಅಲ್ಲ. ಏಕೆಂದರೆ ಈ ನಿಯಮವು ಅನೇಕ ರಂಗಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ಟಾಸಿಗ್ ಪ್ರಕಾರ ಬಳಕೆದಾರರ ಹೆಚ್ಚುವರಿ ನಿಯಮವನ್ನು ಸರಿಯಾಗಿ ಅಳೆಯಲು ಸಾಧ್ಯವಾಗದಿದ್ದರೂ ಜೀವನದ ಸ್ಥಿರ ಸುಖವಸ್ತುಗಳಿಗೆ ಇದನ್ನು ಅನ್ವಯಿಸಬಹುದು. ಈ ನಿಯಮವು ಸರಕಾರಕ್ಕೆ ತೆರಿಗೆಗಳನ್ನು ವಿಧಿಸುವಾಗ ಅಧಿಕ ತೃಪ್ತಿಯಿರುವಂತಹ ವಸ್ತುಗಳ ಮೇಲೆ ತೆರಿಗೆ ಯನ್ನು ವಿಧಿಸುವುದರಿಂದ ಸರಕಾರದ ಬೊಕ್ಕಸಕ್ಕೆ ಹೆಚ್ಚು ಆದಾಯ ಲಭ್ಯವಾಗು

ತ್ತದೆ. ಕೆಲವು ವಸ್ತುಗಳಿಗೆ ಬಳಕೆದಾರರು ಹೆಚ್ಚು ಬೆಲೆ ಕೊಡಲು ಸಿದ್ಧರಿರುವಾಗ ಅಂತಹ ವಸ್ತುಗಳ ಮೇಲೆ ತೆರಿಗೆ ಹೇರುವುದರಿಂದ ಅವುಗಳ ಬೆಲೆ ಏರುತ್ತದೆ. ಆದರೂ ಜನರು ಹೆಚ್ಚು ಬೆಲೆಗಳನ್ನು ಕೊಟ್ಟು ಅವುಗಳನ್ನು ಕೊಳ್ಳುತ್ತಾರೆ. ಆಗ ಅವರ ಅಧಿಕ ತೃಪ್ತಿ ಕಡಮೆಯಾಗುತ್ತದೆ.

ವ್ಯಾಪಾರಸ್ಥರಿಗೆ ಸಹ ಈ ನಿಯಮವು ಹೆಚ್ಚು ಲಾಭ ಪಡೆಯಲು ಉಪಯುಕ್ತ ವಾಗಿದೆ. ಬಳಕೆದಾರರ ಅಧಿಕ ತೃಪ್ತಿಯಿರುವ ವಸ್ತುಗಳ ಬೆಲೆಯನ್ನು ಹೆಚ್ಚಿಸಿ, ವ್ಯಾಪಾರಿಗಳು ಅಧಿಕ ಲಾಭ ಪಡೆಯಲು ಸಾಧ್ಯವಿದೆ. ವ್ಯಾಪಾರಸ್ಥರು ಬಳಕೆದಾರರ ಅಧಿಕ ತೃಪ್ತಿಯ ಸ್ವಲ್ಪ ಭಾಗವನ್ನು ತಾವು ಲಾಭದ ರೂಪದಲ್ಲಿ ಪಡೆಯುತ್ತಾರೆ.

ಬಳಕೆದಾರರ ಉಳಿತಾಯದ ನಿಯಮವು ಉಪಯುಕ್ತತೆಯ ಮೌಲ್ಯ ಹಾಗೂ ವಿನಿಮಯ ಮೌಲ್ಯಗಳಲ್ಲಿರುವ ವ್ಯತ್ಯಾಸವನ್ನು ಎತ್ತಿ ತೋರಿಸುತ್ತದೆ. ಉದಾಹರಣೆಗೆ, ಉಪ್ಪು, ಬೆಂಕಿಪೊಟ್ಟಣ, ಅಂಚೆಯಕಾರ್ಡು, ಸ್ಟಾಂಪು ಮುಂತಾದ ಅತ್ಯುಪಯುಕ್ತ ವಸ್ತುಗಳಿಗೆ ಅತಿ ಕಡಮೆ ವಿನಿಮಯ ಮೌಲ್ಯವಿರುತ್ತದೆ. ಇವುಗಳಿಂದ ಬಳಕೆದಾರರಿಗೆ ಅತ್ಯಧಿಕ ತೃಪ್ತಿಯು ಲಭ್ಯವಾಗುತ್ತದೆ. ವಜ್ರಕ್ಕೆ ಉಪಯುಕ್ತತೆಯ ಮೌಲ್ಯ ಕಡಮೆ. ಅಂದರೆ ಅದರಿಂದ ಸಿಗುವ ತೃಪ್ತಿ ಕಡಮೆ. ಆದರೆ ವಜ್ರಕ್ಕೆ ಹೆಚ್ಚು ವಿನಿಮಯ ಮೌಲ್ಯವಿದೆ. ಈ ನಿಯಮವು ಬಳಕೆಯಲ್ಲಿ ಮಹತ್ವದ ಪಾತ್ರ ಹೊಂದಿದೆ. ಕೈಗಾರಿಕೆ ಯೊಂದಕ್ಕೆ ಸರಕಾರ ಸಹಾಯ ಧನವನ್ನು ನೀಡುವುದರ ಪರಿಣಾಮವನ್ನು ಪರಿಶೀಲಿಸು ವಾಗಲೂ ಬಳಕೆದಾರನ ಹೆಚ್ಚುವರಿಯ ನಿಯಮವು ನೆರವಾಗುತ್ತದೆ. ಬಳಕೆದಾರರ ಬೇಡಿಕೆ ಹೆಚ್ಚಿಸುವಂತೆ ಸರಕಾರ ವಸ್ತುಗಳನ್ನು ತಯಾರಿಸುವವರಿಗೆ ಸಹಾಯಧನ ನೀಡಬಹುದು. ಹೀಗೆ ಮಾಡುವಾಗ ಬಳಕೆದಾರನ ಹೆಚ್ಚುವರಿಯು ಸರಕಾರಕ್ಕೆ ಆಗುವ ವೆಚ್ಚಕ್ಕಿಂತ ಹೆಚ್ಚಾದರೆ ಮಾತ್ರ ಸಹಾಯಧನ ನೀಡಿಕೆ ಒಳ್ಳೆಯದು.

ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಈ ನಿಯಮವು ಉಪಯುಕ್ತವಾಗಿದೆ. ಈ ನಿಯಮದ ಅಭ್ಯಾಸದಿಂದ ಅಂತರರಾಷ್ಟ್ರೀಯ ವ್ಯಾಪಾರದಿಂದ ಆಗಬಹುದಾದ ಲಾಭದ ವಿವರ ತಿಳಿದುಕೊಳ್ಳಬಹುದು. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಬೇರೆ ಬೇರೆ ರಾಷ್ಟ್ರಗಳಿಂದ ಕೆಲವು ವಸ್ತುಗಳನ್ನು ಕಡಮೆ ಬೆಲೆಗೆ ತರಿಸಿಕೊಳ್ಳುತ್ತೇವೆ. ಆ ವಸ್ತು ಗಳನ್ನು ನಮ್ಮ ರಾಷ್ಟ್ರದಲ್ಲಿಯೇ ಉತ್ಪಾದನೆ ಮಾಡಿದರೆ ಅವುಗಳಿಗೆ ಹೆಚ್ಚು ಬೆಲೆಯನ್ನು ಕೊಡಬೇಕಾಗುತ್ತದೆ. ಅಂದರೆ ವಿದೇಶಿ ವಸ್ತುಗಳಿಂದ ಕಡಮೆ ಬೆಲೆ ಕೊಟ್ಟು ಅಧಿಕ ತೃಪ್ತಿ ದೊರಕಿಸುತ್ತೇವೆ. ನಮ್ಮಲ್ಲೇ ಉತ್ಪಾದಿಸಿದ ವಸ್ತುಗಳಿಗೆ ಹೆಚ್ಚು ಬೆಲೆ ತೆತ್ತು ಕಡಮೆ ತೃಪ್ತಿ ಪಡೆಯುತ್ತೇವೆ. ಇಂತಹ ಪರಿಸ್ಥಿತಿಗಳಲ್ಲಿ ವಸ್ತುಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುವುದೇ ಒಳ್ಳೆಯದು ಎಂಬುದಾಗಿ ಈ ನಿಯಮ ತಿಳಿಸುತ್ತದೆ. ಒಂದು ದೇಶದ ಜೀವನಮಟ್ಟವನ್ನು ಇತರ ದೇಶಗಳೊಂದಿಗೆ ಹೋಲಿಸಲೂ ಈ ನಿಯಮವು ಸಹಾಯ ನೀಡುತ್ತದೆ. ಅಧಿಕ ತೃಪ್ತಿಯನ್ನು ಕೊಡುವ ವಸ್ತುಗಳ

ಉಪಭೋಗವು ಹೆಚ್ಚಿನ ಪ್ರಮಾಣದಲ್ಲಿರುವ ದೇಶದಲ್ಲಿ ಜೀವನಮಟ್ಟವು ಉಚ್ಚ ಮಟ್ಟದಲ್ಲಿದೆ ಎಂಬುದನ್ನು ತಿಳಿಸುತ್ತದೆ.

ಬೇಡಿಕೆ

ಸಾಮಾನ್ಯ ಅರ್ಥದಲ್ಲಿ 'ಬೇಡಿಕೆ' ಎಂದರೆ ಕೇವಲ ಆಸೆ, ಇಚ್ಛೆ. ಆದರೆ ಅರ್ಥ ಶಾಸ್ತ್ರದಲ್ಲಿ 'ಬೇಡಿಕೆ' ಎಂಬ ಪದವನ್ನು ವಿಶಿಷ್ಟ ಅರ್ಥದಲ್ಲಿ ಬಳಸಲಾಗುತ್ತದೆ. ಅಂದರೆ ಕೇವಲ ಆಸೆ, ಇಚ್ಛೆ, ಬಯಕೆಗಳು ಬೇಡಿಕೆಯಾಗಲಾರವು. ಇವು ಬೇಡಿಕೆಯಾಗ ಬೇಕಾದರೆ ಎರಡು ಅಂಶಗಳನ್ನು ಒಳಗೊಂಡಿರಬೇಕು. ಒಂದು ವಸ್ತುವನ್ನು ಬೇಡು ತ್ತೇವೆಂದರೆ ಆ ವಸ್ತುವನ್ನು ಇಚ್ಛಿಸುತ್ತೇವೆ ಹಾಗೂ ಆ ವಸ್ತುವಿಗೆ ತಗಲುವ ಬೆಲೆಯನ್ನು ಕೊಡಲು ಸಿದ್ಧವಿದ್ದೇವೆ ಎಂದರ್ಥ. ಅಂದರೆ, ಕೊಳ್ಳುವ ಶಕ್ತಿ ಹಾಗೂ ಕೊಡುವ ಶಕ್ತಿ ಇದ್ದರೆ ಮಾತ್ರ ಅದು ಬೇಡಿಕೆಯಾಗುತ್ತದೆ. ಕೆಲವು ಉದಾಹರಣೆ ಗಳಿಂದ ಇದನ್ನು ಸ್ಪಷ್ಟಗೊಳಿಸಬಹುದು. ಒಬ್ಬ ಅಧ್ಯಾಪಕ, ಒಂದು ವಸ್ತುವನ್ನು ಬೇಡುತ್ತಿದ್ದರೆ ಆ ವಸ್ತು ಆವನಿಗೆ ಬೇಕಾಗಿದೆ: ಅದಕ್ಕೆ ತಗಲುವ ಬೆಲೆಯನ್ನು ಕೊಡಲು ಆವನು ಸಿದ್ಧನಿದ್ದಾನೆ ಎಂದು ಅರ್ಥ. ಇಲ್ಲಿ ಆವನು ಬೇಡುವ ವಸ್ತು ಎರಡು ಅಂಶಗಳನ್ನು ಹೊಂದಿದೆ. ಈಗ ಅವನ ಆಸೆ ಬೇಡಿಕೆಯಾಯಿತು. ಆದರೆ ಅವನಿಗೆ ಬೇಕಾಗುವ ವಸ್ತುಗಳನ್ನು ಕೊಳ್ಳುವ ಆಸೆ ಇದ್ದು, ಕೊಳ್ಳುವ ಶಕ್ತಿಯು ಇಲ್ಲದಿದ್ದರೆ ಆಗ ಅವನ ಆಶೆಯು ಬೇಡಿಕೆಯಾಗುವುದಿಲ್ಲ. ಇನ್ನೊಬ್ಬ ಅಧ್ಯಾಪಕನಿಗೆ ಇಂಪಾಲ ಕಾರನ್ನು ಕೊಳ್ಳುವ ಆಸೆ. ಅದರಲ್ಲಿ ತಿರುಗಾಡಬೇಕೆಂಬ ಆಸೆ. ಆದರೆ ಅದು 'ಬೇಡಿಕೆ'ಯಾಗುವುದಿಲ್ಲ. ಅದು ಕೇವಲ ಆಸೆ, ಏಕೆಂದರೆ ಆ ಕಾರನ್ನು ಕೊಳ್ಳುವ ಶಕ್ತಿ ಅವನಲ್ಲಿರುವುದಿಲ್ಲ. ಅವನಿಗೆ ರೇಡಿಯೋ ಕೊಳ್ಳುವ ಆಸೆ ಇಲ್ಲ. ಆದರೆ ಅದನ್ನು ಕೊಳ್ಳುವ ಶಕ್ತಿ ಇದೆ. ಆದರೂ ಅದು ಬೇಡಿಕೆಯಾಗಲಾರದು. ಅಂದರೆ ಹಣ ಕೊಡುವ ಶಕ್ತಿ ಇದ್ದು, ವಸ್ತುವನ್ನು ಕೊಳ್ಳುವ ಆಸೆ ಇಲ್ಲದಿದ್ದರೆ ಅದು ಬೇಡಿಕೆಯಾಗು ವುದಿಲ್ಲ. ಏಕೆಂದರೆ ಬಯಕೆ ಅಥವಾ ಆಸೆಯು ಬಹಳ ಮುಖ್ಯವಾದುದು. ಬಯಕೆ ಇಲ್ಲದಿದ್ದರೆ ವ್ಯಕ್ತಿಯು ಯಾವ ಬೆಲೆಯಲ್ಲೂ ವಸ್ತುವನ್ನು ಕೊಳ್ಳಲು ಇಷ್ಟಪಡು ವುದಿಲ್ಲ. ವ್ಯಕ್ತಿಯು ಜಿಪುಣನಾಗಿದ್ದು ಹಣವನ್ನು ವೆಚ್ಚ ಮಾಡುವ ಮನಸ್ಸೇ ಅವನಿಗೆ ಇರದಿದ್ದಲ್ಲಿ ಆಗಲೂ ಅವನ ಬಯಕೆಯು ಬೇಡಿಕೆಯಾಗುವುದಿಲ್ಲ. ಆದ್ದರಿಂದ ಬಯಕೆಯು ಕೊಳ್ಳುವ ಶಕ್ತಿ ಮತ್ತು ಮನಸ್ಸುಗಳಿದ್ದಲ್ಲಿ ಮಾತ್ರ ಬೇಡಿಕೆಯಾಗಿ ಪರಿಣಮಿ ಸುತ್ತದೆ. ಆದ್ದರಿಂದ ಆಸೆ, ಬಯಕೆ, ಇಚ್ಛೆಗಳು ಬೇಡಿಕೆಯಾಗಬೇಕಾದರೆ, (i) ವಸ್ತು ವನ್ನು ಕೊಳ್ಳಲು ಸಾಕಷ್ಟು ಹಣ ಅವನಲ್ಲಿ ಇರಬೇಕು ಹಾಗೂ (ii) ಆ ಹಣವನ್ನು ಬಯಸಿದ ವಸ್ತುವಿಗೆ ಕೊಡಲು ಅವನು ತಯಾರಿರಬೇಕು. ಇವುಗಳ ಜೊತೆಗೆ ಮುಖ್ಯವಾಗಿ ವಸ್ತುವನ್ನು ಹಣಕೊಟ್ಟು ಕೊಳ್ಳುವ ಮನಸ್ಸು ಇರಬೇಕು. ಆಗಲೇ ಬೇಡಿಕೆಯು ಫಲಕಾರಿಯಾಗಲು ಸಾಧ್ಯ.

ಬೇಡಿಕೆಯು ಬೆಲೆಯನ್ನು ಅವಲಂಬಿಸಿರುತ್ತದೆ. ಅಂದರೆ ಬೆಲೆಯಿಲ್ಲದೆ ಬೇಡಿಕೆ ಇಲ್ಲ. ನಮ್ಮ ದೇಶದಲ್ಲಿ 15,000 ಕಾರುಗಳಿಗೆ ಬೇಡಿಕೆ ಇದೆ ಎಂದು ಭಾವಿಸೋಣ. ಆದರೆ ಈ ಹೇಳಿಕೆಗೆ ಏನೂ ಅರ್ಥವಿಲ್ಲ. ಯಾವ ಬೆಲೆಯಲ್ಲಿ ಈ ಬೇಡಿಕೆ ಇದೆ ಎನ್ನುವುದು ಮುಖ್ಯ. ಬೆಲೆಯನ್ನು ಸೂಚಿಸದಿದ್ದಲ್ಲಿ ಬೇಡಿಕೆಗೆ ಏನೂ ಅರ್ಥವಿರುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಬೇಡಿಕೆಯ ಪ್ರಮಾಣ ಬೆಲೆಗಳ ವ್ಯತ್ಯಾಸದಿಂದ ಬದಲಾಗುತ್ತ ಹೋಗುತ್ತದೆ. ಅಂದರೆ, ಒಂದು ಬೆಲೆಯ ಬೇಡಿಕೆಯು ಇನ್ನೊಂದು ಬೆಲೆಯ ಬೇಡಿಕೆಗಿಂತ ಭಿನ್ನವಾಗಿರುತ್ತದೆ. ಸಾಮಾನ್ಯವಾಗಿ ಬೆಲೆ ಹೆಚ್ಚಿದ್ದಾಗ ಕಡಮೆ ವಸ್ತುಗಳನ್ನು ಬೇಡುತ್ತೇವೆ. ಬೆಲೆ ಕಡಮೆ ಇದ್ದಾಗ ಹೆಚ್ಚು ವಸ್ತುಗಳನ್ನು ಬೇಡುತ್ತೇವೆ. ಈ ಪ್ರಕಾರ ಬೇಡಿಕೆಯು ಬದಲಾಗುತ್ತಿರುತ್ತದೆ. ಒಂದು ವಸ್ತುವಿನ 'ಬೇಡಿಕೆ' ಎಂದರೆ ನಿಶ್ಚಿತ ಬೆಲೆಯಲ್ಲಿ, ನಿಶ್ಚಿತ ಕಾಲದಲ್ಲಿ ಬಳಕೆದಾರರು ಕೊಂಡುಕೊಳ್ಳುವ ಪ್ರಮಾಣ.

ಬೇಡಿಕೆಯ ನಿಯಮ : ಬೇಡಿಕೆ ನಿಯಮವು ಇಳಿಮುಖ ತುಷ್ಟಿ ಸಿದ್ಧಾಂತಕ್ಕೆ ಎಡೆಮಾಡಿ ಕೊಟ್ಟಿದೆ. ಈ ನಿಯಮ ಬೆಲೆ ಮತ್ತು ಬೇಡಿಕೆಗಳಿಗೆ ಇರುವ ನಿಕಟ ಸಂಬಂಧವನ್ನೂ ಸೂಚಿಸುತ್ತದೆ. ಯಾವುದೇ ಒಂದು ವಸ್ತುವಿನ ಬೇಡಿಕೆಯ ಪ್ರಮಾಣ ಅದರ ಬೆಲೆಯನ್ನು ಅವಲಂಬಿಸಿರುತ್ತದೆ. ಬೆಲೆಯು ಹೆಚ್ಚಿದ್ದರೆ ಬೇಡಿಕೆಯು ಕಡಮೆಯಾಗಿಯೂ ಮತ್ತು ಬೆಲೆಯು ಕಡಮೆ ಇದ್ದರೆ ಬೇಡಿಕೆಯು ಹೆಚ್ಚಾಗಿಯೂ ಇರುತ್ತದೆ. ಸಾಮಾನ್ಯವಾಗಿ ಜನರು ವಸ್ತುಗಳ ಬೆಲೆ ಕಡಮೆ ಇದ್ದಾಗ ಹೆಚ್ಚು ವಸ್ತುಗಳನ್ನೂ, ಬೆಲೆಗಳು ಹೆಚ್ಚಿದ್ದಾಗ ಕಡಮೆ ವಸ್ತುಗಳನ್ನೂ ಕೊಳ್ಳುವುದು ರೂಢಿ. ಆದರೆ ಅವರು ಈ ಪ್ರವೃತ್ತಿಗೆ ಆದ್ಯತೆ ನೀಡುವುದಿಲ್ಲ. ಅರ್ಥಶಾಸ್ತ್ರಜ್ಞರು, ಬಳಕೆದಾರರ ಬೇಡಿಕೆಗಳ ಪ್ರವೃತ್ತಿಯನ್ನು ಅಧ್ಯಯನಮಾಡಿ ಈ ನಿಯಮವನ್ನು ರಚಿಸಿದ್ದಾರೆ. ಈ ನಿಯಮವನ್ನು ಈ ರೀತಿ ವಿವರಿಸಬಹುದು : 'ವಸ್ತುವಿನ ಬೆಲೆ ಕಡಮೆಯಾದಂತೆ, ಬೇಡಿಕೆಯು ಹೆಚ್ಚಾಗುತ್ತದೆ ಮತ್ತು ಬೆಲೆಯು ಹೆಚ್ಚಾದಂತೆ ಅದಕ್ಕೆ ಬೇಡಿಕೆ ಕಡಮೆಯಾಗುತ್ತದೆ. ಬೆಲೆ ಇಳಿದರೆ ಬೇಡಿಕೆ ಹೆಚ್ಚಾಗುತ್ತದೆ'. ಇದನ್ನು ಒಂದು ಉದಾಹರಣೆಯ ಮೂಲಕ ಪರಿಶೀಲಿಸೋಣ. ಸೇಬಿನ ಬೆಲೆ ಒಂದು ಡಜನ್ನಿಗೆ 10 ರೂಪಾಯಿಗಳಿದ್ದರೆ, ಬೇಡಿಕೆಯು 5 ಡಜನ್‌ಗಳಿರಬಹುದು. ಬೆಲೆಯು ಡಜನ್ನಿಗೆ ಒಂದು ರೂಪಾಯಿ ಆದರೆ, 50 ಡಜನ್‌ಗಳಿಗೆ ಬೇಡಿಕೆ ಬರಬಹುದು. ಕಡಮೆ ಬೆಲೆ ಇದ್ದಾಗ ಅಧಿಕ ಪ್ರಮಾಣದಲ್ಲಿ ವಸ್ತುಗಳನ್ನು ಮಾರಾಟ ಮಾಡಬಹುದು. ಅಂದರೆ ವಸ್ತುಗಳ ಬೆಲೆ ಕುಗ್ಗಿದಾಗ ತುಷ್ಟಿ ಸಹ ಕುಗ್ಗುತ್ತದೆ ಅಥವಾ ಹೆಚ್ಚಿನ ಬೆಲೆಗೆ ಕಡಮೆ ವಸ್ತುಗಳನ್ನು ಮಾರಾಟ ಮಾಡುವುದರಿಂದ ತುಷ್ಟಿ ಹೆಚ್ಚುತ್ತದೆ.

ಬೇಡಿಕೆಯಲ್ಲಿ ಆದಾಯ ಮುಖ್ಯ ಪಾತ್ರ ವಹಿಸುವುದು. ಬಳಕೆದಾರರ ಬಳಿ ಹೆಚ್ಚು ಹಣವಿದ್ದಾಗ ವಸ್ತುಗಳಿಗೆ ಬೇಡಿಕೆಯು ಹೆಚ್ಚು. ಕಡಮೆ ಹಣವಿದ್ದಾಗ ಬೇಡಿಕೆ ಕಡಮೆ. ಆದ್ದರಿಂದ ಬೇಡಿಕೆಯು ಬೆಲೆ ಆದಾಯದೊಂದಿಗೆ ನಿಕಟ ಸಂಪರ್ಕ

ಹೊಂದಿರುತ್ತದೆ. ಈ ನಿಯಮ ಯುದ್ಧದ ಸಮಯದಲ್ಲಿ, ವಸ್ತುಗಳ ಪೂರೈಕೆ ಕಡಮೆ ಇದ್ದಾಗ ಜನರು ಅಜ್ಞಾನಿಗಳಾಗಿದ್ದರೆ, ವಸ್ತುಗಳು ಅತ್ಯಾವಶ್ಯಕ ವಸ್ತುಗಳಾಗಿದ್ದರೆ ಅನ್ವಯಿಸುವುದಿಲ್ಲ. ಉದಾಹರಣೆಗೆ ಜನರಿಗೆ ಉಪ್ಪು ಅತ್ಯಾವಶ್ಯಕ. ಇದಕ್ಕೆ ಬೇಡಿಕೆ ಹೆಚ್ಚು. ಉಪ್ಪಿನ ಬೆಲೆ ಏರಿದರೂ ಅದರ ಬೇಡಿಕೆಯು ಕುಗ್ಗುವುದಿಲ್ಲ.

ಬೇಡಿಕೆ ಅನುಸೂಚಿ : ಬೇರೆ ಬೇರೆ ಬೆಲೆಗಳಿದ್ದಾಗ, ಬೇರೆ ಬೇರೆ ಪ್ರಮಾಣದಲ್ಲಿ ವಸ್ತುಗಳನ್ನು ಕೊಳ್ಳುವುದನ್ನು ಒಂದು ಪಟ್ಟಿಯ ಮೂಲಕ ತೋರಿಸುವುದೇ ಬೇಡಿಕೆಯ ಅನುಸೂಚಿ. ಈ ಅನುಸೂಚಿಯು ಬೆಲೆಗೆ ಮತ್ತು ಬೇಡಿಕೆಯ ಪ್ರಮಾಣಕ್ಕೆ ಇರುವ ಸಂಬಂಧವನ್ನು ಸೂಚಿಸುತ್ತದೆ. ಕೆಳಗೆ ವಿವಿಧ ಬೆಲೆಗಳಲ್ಲಿ ಒಬ್ಬ ವ್ಯಕ್ತಿಯ ಸೇಬಿನ ಬೇಡಿಕೆಯ ವಿವರ ಕೆಳಗಿನ ಕೋಷ್ಟಕದಲ್ಲಿದೆ.

ಕೋಷ್ಟಕ 5

ವಿವಿಧ ಬೆಲೆಗಳಲ್ಲಿ ಸೇಬುಹಣ್ಣಿನ ಬೇಡಿಕೆ


ಬೆಲೆ (ರೂಪಾಯಿಗಳಲ್ಲಿ)	ಬೇಡಿಕೆಯ ಪರಿಮಾಣ (ಡಜನ್‌ಗಳಲ್ಲಿ)
10	5
9	10
8	16
7	22
6	28
5	35
4	40
3	43
2	46
1	50

ಈ ಪಟ್ಟಿಯು ತಿಳಿಸುವ ವಾಸ್ತವಾಂಶ ಬೆಲೆಯು ಒಂದು ರೂಪಾಯಿ ಇದ್ದರೆ 50 ಡಜನ್ ಸೇಬನ್ನೂ, 10 ರೂಪಾಯಿಗಳಿದ್ದರೆ 5 ಡಜನ್ ಸೇಬನ್ನೂ ಕೊಳ್ಳುವನೆಂಬುದು. ಅಂದರೆ, ಕಡಮೆ ಬೆಲೆಗೆ ಹೆಚ್ಚು ವಸ್ತುಗಳನ್ನು, ಹೆಚ್ಚು ಬೆಲೆಗೆ ಕಡಮೆ ವಸ್ತುಗಳನ್ನು ಕೊಳ್ಳುವನು. ಇಂತಹ ಪಟ್ಟಿಯ ಆಧಾರದ ಮೇಲೆ ಬಳಕೆದಾರರ ಬೇಡಿಕೆಯು ವಸ್ತುಗಳ ಬೆಲೆ ಏರಿದಾಗ, ಕುಗ್ಗಿದಾಗ, ಯಾವ ರೀತಿ ಇರುವುದೆಂಬುದನ್ನು ತಿಳಿದುಕೊಳ್ಳಬಹುದು. ವಸ್ತುವಿನ ಬೇಡಿಕೆಯನ್ನು ಒಂದು ನಿಶ್ಚಿತ ಕಾಲದಲ್ಲಿ ತಿಳಿಯಬೇಕಾದರೆ, ಬೆಲೆಗಳ ಒಂದು ಪಟ್ಟಿಯನ್ನು ಮಾಡಿ ಪ್ರತಿಯೊಂದು ಬೆಲೆಗೂ ಬೇಡಿಕೆಯು ಹೀಗೆ ಬದಲಾಯಿಸುತ್ತದೆ ಎನ್ನುವುದರ ಅನುಸೂಚಿಯನ್ನು ರಚಿಸಬೇಕಾದದ್ದು ಅಗತ್ಯ. ಮೇಲಿನ ಪಟ್ಟಿಯಲ್ಲಿ ಒಬ್ಬ ಬಳಕೆದಾರ ಬಗ್ಗೆ ಮಾತ್ರ ವಿವೇಚಿಸಲಾಗಿದೆ. ಆದರೆ ಪೇಟೆಯಲ್ಲಿ ಒಬ್ಬ ಬಳಕೆದಾರ ಇರದೆ ಬಹಳಷ್ಟು ಮಂದಿ ಬಳಕೆದಾರರು ಇರುತ್ತಾರೆ. ಅವರಲ್ಲಿ ಒಂದೇ ವಸ್ತುವನ್ನು ಬಯಸುವವರು ಅನೇಕರು ಇರುತ್ತಾರೆ. ಇವರ ಬೇಡಿಕೆ

ಸಾಮುದಾಯಿಕ ಬೇಡಿಕೆ. ಇವರೆಲ್ಲರ ಬೇಡಿಕೆಯಲ್ಲಿ ವ್ಯತ್ಯಾಸವಿರುವುದಿಲ್ಲ. ಅಂದರೆ ಅವರೆಲ್ಲರೂ ಬೆಲೆ ಕಡಮೆಯಿದ್ದಾಗ ಹೆಚ್ಚು ವಸ್ತುಗಳನ್ನು ಕೊಳ್ಳುತ್ತಾರೆ. ಆದ್ದರಿಂದ ಎಲ್ಲರ ಬೇಡಿಕೆ ಪಟ್ಟಿಗಳು ಬಹುಮಟ್ಟಿಗೆ ಒಂದೇ ರೀತಿಯಲ್ಲಿರುತ್ತವೆ. ಆದಾಗ್ಯೂ ಜನರ ಆದಾಯ, ಉದ್ಯೋಗ, ಅಭಿರುಚಿ ಇತ್ಯಾದಿಗಳಲ್ಲಿ ವ್ಯತ್ಯಾಸವಿರುವುದರಿಂದ ಅವರು ಕೊಳ್ಳುವ ಪ್ರಮಾಣದಲ್ಲಿ ಅಸಮತೆ ಕಂಡುಬರಬಹುದು. ಆದರೆ ದೊಡ್ಡ ಪೇಟೆಗಳಲ್ಲಿ ಎಲ್ಲ ವಯಸ್ಸಿನ ಹಾಗೂ ಎಲ್ಲ ವರ್ಗಗಳ ಜನರು ಸೇರುವುದರಿಂದ ಅವರ ಅಸಮತೆಗಳು ಸಮಗ್ರ ಬೇಡಿಕೆಯಲ್ಲಿ ಒಂದಕ್ಕೊಂದು ಸರಿಹೋಗುತ್ತವೆ.

ಮೇಲಿನ ಅನುಸೂಚಿಯ ಆಧಾರದ ಮೇಲೆ ಬೇಡಿಕೆಯನ್ನು ರೇಖಾಚಿತ್ರದ ಮೂಲಕ ಆಲೇಖನ 4 ರಲ್ಲಿಯಂತೆ ಚಿತ್ರಿಸಬಹುದು.

ಬೇಡಿಕೆಯ ರೇಖೆ : ಬೇಡಿಕೆಯ ನಿಯಮದ ಆಧಾರದಿಂದ ಬೇಡಿಕೆಯ ರೇಖೆ



ಆಲೇಖನ 4 : ಬೇಡಿಕೆಯ ರೇಖೆ

ಯನ್ನು ರಚಿಸಬಹುದು. ಇದರಿಂದ ಬೆಲೆಗೂ ಮತ್ತು ಬೇಡಿಕೆ ಪ್ರಮಾಣಕ್ಕೂ ಇರುವ ಸಂಬಂಧವು ತಿಳಿದುಬರುತ್ತದೆ.

ಈ ಚಿತ್ರದಲ್ಲಿ OX ಅಕ್ಷ ಸೇಬುಹಣ್ಣುಗಳ ಬೇಡಿಕೆ ಪ್ರಮಾಣವನ್ನು OY ಅಕ್ಷ ಸೇಬಿನ ಬೆಲೆಯನ್ನು ತೋರಿಸುತ್ತವೆ. 10 ರೂಪಾಯಿ ಬೆಲೆ ಇದ್ದಾಗ 5 ಡಜನ್ ಸೇಬಿಗೆ ಬೇಡಿಕೆ ಇರುತ್ತದೆ. 9 ರೂಪಾಯಿ ಇದ್ದಾಗ 10 ಡಜನ್, 8 ರೂಪಾಯಿ ಇದ್ದಾಗ 16 ಡಜನ್, 7 ರೂಪಾಯಿ ಇದ್ದಾಗ 22 ಡಜನ್, 6 ರೂಪಾಯಿ ಇದ್ದಾಗ 28 ಡಜನ್, 5 ರೂಪಾಯಿ ಇದ್ದಾಗ 35 ಡಜನ್, 4 ರೂಪಾಯಿ ಇದ್ದಾಗ 40 ಡಜನ್, 3 ರೂಪಾಯಿ ಇದ್ದಾಗ 43 ಡಜನ್, 2 ರೂಪಾಯಿ ಇದ್ದಾಗ 46 ಡಜನ್ ಹಾಗೂ ಒಂದು ರೂಪಾಯಿ ಇದ್ದಾಗ 50 ಡಜನ್‌ಗಳಿಗೆ ಬೇಡಿಕೆ ಇರುತ್ತದೆ.

DD^1 ರೇಖೆಯನ್ನು ಪೇಟೆಯ ಬೇಡಿಕೆಯ ರೇಖೆ ಎಂದು ಕರೆಯುತ್ತಾರೆ. ಬೆಲೆಗಳು ಇಳಿದಾಗ ಬೇಡಿಕೆಯ ಪ್ರಮಾಣವು ಯಾವ ರೀತಿ ಹೆಚ್ಚುತ್ತ ಹೋಗುವು ದೆಂಬುದನ್ನು ಈ ರೇಖೆಯು ತೋರಿಸುತ್ತದೆ. DD^1 ರೇಖೆಯು ಎಡದಿಂದ ಬಲಕ್ಕೆ ಇಳಿಯುತ್ತದೆ. ಏಕೆಂದರೆ ಬೆಲೆ ಹೆಚ್ಚು ಇದ್ದಾಗ ಬೇಡಿಕೆ ಕಡಮೆ ಇರುತ್ತದೆ ಮತ್ತು ಬೆಲೆ ಕಡಮೆ ಇದ್ದಾಗ ಬೇಡಿಕೆ ಹೆಚ್ಚಿರುತ್ತದೆ. ಇದಕ್ಕೆ ಕಾರಣವೆಂದರೆ ಪ್ರಚಲಿತ ಬೆಲೆ ಗಳಲ್ಲಿ ಬಳಕೆದಾರರು ಯಾವ ವಸ್ತುವನ್ನೂ ತಾವು ಸಾಮಾನ್ಯವಾಗಿ ಕೊಳ್ಳುವ ಪ್ರಮಾಣ ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕೊಳ್ಳುವುದಿಲ್ಲ. ಆದರೆ ಯಾವುದಾದರೂ ವಸ್ತು ವಿನ ಬೆಲೆ ಇಳಿದಾಗ ಬಳಕೆದಾರರು ಆ ವಸ್ತುವನ್ನು ಹೆಚ್ಚಾಗಿ ಕೊಳ್ಳುತ್ತಾರೆ. ಬೆಲೆ ಇಳಿದಾಗ ಈ ವಸ್ತುವಿಗೆ ವೆಚ್ಚವಾಗುವ ಹಣದ ಸೀಮಾಂತ ತುಷ್ಟಿ ಇತರ ವಸ್ತುಗಳಿ ಗಾಗಿ ವೆಚ್ಚವಾಗುವ ಹಣದ ಸೀಮಾಂತ ತುಷ್ಟಿಗಿಂತಲೂ ಹೆಚ್ಚಾಗುತ್ತದೆ. ಆದ್ದರಿಂದ ಬಳಕೆದಾರರು ಈ ವಸ್ತುವನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಳ್ಳುತ್ತಾರೆ. ಆದಕಾರಣ ಸಾಮಾನ್ಯವಾಗಿ ಬೇಡಿಕೆಯ ರೇಖೆಯು ಎಡದಿಂದ ಬಲಕ್ಕೆ ಇಳಿಯುತ್ತದೆ.

ಬೇಡಿಕೆಯ ಸ್ಥಿತಿಸ್ಥಾಪಕತ್ವ

ಸ್ಥಿತಿ ಸ್ಥಾಪಕತ್ವ ಎಂದರೆ ಬದಲಾವಣೆಯಾದರೂ ಮೊದಲಿನ ಸ್ಥಿತಿಗೆ ಬರುವುದು. ಬೆಲೆಯಲ್ಲಿ ಬದಲಾವಣೆಯಾದರೆ ಬೇಡಿಕೆಯಲ್ಲಿಯೂ ಬದಲಾವಣೆ ಯಾಗುತ್ತದೆ. ಬೆಲೆ ಏರಿದರೆ ಬೇಡಿಕೆ ಕುಗ್ಗುತ್ತದೆ, ಬೆಲೆ ಇಳಿದರೆ ಬೇಡಿಕೆಯು ಏರುತ್ತದೆ. ಬೆಲೆಯ ಬದಲಾವಣೆಯಿಂದ ಬೇಡಿಕೆಯಲ್ಲಾಗುವ ಬದಲಾವಣೆ 'ಬೇಡಿಕೆಯ ಸ್ಥಿತಿಸ್ಥಾಪಕತ್ವ'. ಬೇಡಿಕೆ ಮತ್ತು ಬೆಲೆ ಇವುಗಳಿಗಿರುವ ನಿಕಟ ಸಂಬಂಧ ವನ್ನು ಇದು ತಿಳಿಸುತ್ತದೆ. ಬೇಡಿಕೆ ನಿಯಮ, ಯಾವುದೇ ಒಂದು ವಸ್ತುವಿನ ಬೆಲೆ ಕಡಮೆಯಾದರೆ ಆ ವಸ್ತುವಿಗೆ ಬೇಡಿಕೆ ಹೆಚ್ಚಾಗುವುದೆಂದು ತಿಳಿಸುವುದು. ಆದರೆ ಬೇಡಿಕೆಯ ಪ್ರಮಾಣವಲ್ಲಿ ಎಷ್ಟರಮಟ್ಟಿಗೆ ಹೆಚ್ಚಾಯಿತು ಅಥವಾ ಕಡಮೆಯಾಯಿತು ಎಂಬುದನ್ನು ತಿಳಿಸುವುದಿಲ್ಲ. ಅದನ್ನು ಬೇಡಿಕೆಯ ಸ್ಥಿತಿಸ್ಥಾಪಕತ್ವವು ತಿಳಿಸುವುದು. ಈ ವ್ಯತ್ಯಾಸವು ಸಣ್ಣ ಪ್ರಮಾಣದಲ್ಲಾಗಲೀ, ಬೃಹತ್ ಪ್ರಮಾಣದಲ್ಲಾಗಲೀ ಆಗಬಹುದು. ಕೆಲವು ವಸ್ತುಗಳ ಬೆಲೆ ಏರಿದರೂ, ಇಳಿದರೂ ಅವುಗಳ ಬೇಡಿಕೆಯ ಪ್ರಮಾಣವು ಕಡಮೆ, ಹೆಚ್ಚು ಆಗುವುದಿಲ್ಲ. ಉದಾಹರಣೆಗೆ ಉಪ್ಪಿನ ಬೆಲೆಯು

ಹೆಚ್ಚಾದರೆ ಅದರ ಬೇಡಿಕೆ ಕಡಮೆಯಾಗುವುದಿಲ್ಲ. ಉಪ್ಪಿನ ಬೆಲೆ ಕುಗ್ಗಿದರೆ ಅದರ ಬೇಡಿಕೆಯ ಪ್ರಮಾಣವು ಹೆಚ್ಚುವುದಿಲ್ಲ. ಅತ್ಯವಶ್ಯ ವಸ್ತುಗಳಾದ ಅಕ್ಕಿ, ಕಡ್ಡಿಪೆಟ್ಟಿಗೆ, ಸೀಮೆಎಣ್ಣೆ, ಜೋಳ ಇತ್ಯಾದಿಗಳ ಬೆಲೆ ಹೆಚ್ಚುಕಡಮೆಯಾದರೂ ಸಹ ಅವುಗಳ ಬೇಡಿಕೆಯ ಪ್ರಮಾಣದಲ್ಲಿ ಹೆಚ್ಚಿನ ವ್ಯತ್ಯಾಸಗಳಾಗುವುದಿಲ್ಲ. ಹೀಗೆ ಸಾಮಾನ್ಯವಾಗಿ ಜೀವನಾವಶ್ಯಕ ವಸ್ತುಗಳಿಗೆ ಬೇಡಿಕೆಯ ಸ್ಥಿತಿಸ್ಥಾಪಕತ್ವವು ಇರುವುದಿಲ್ಲ. ಕೆಲವು ವಸ್ತುಗಳ ಬೆಲೆಯು ಸ್ವಲ್ಪ ಏರಿದಾಗ್ಯೂ ಅವುಗಳ ಬೇಡಿಕೆಯ ಪ್ರಮಾಣ ಬಹಳಷ್ಟು ಕುಗ್ಗುವುದು. ಅವುಗಳ ಬೆಲೆ ಸ್ವಲ್ಪ ಇಳಿದಾಗ ಅವುಗಳ ಬೇಡಿಕೆಯ ಪ್ರಮಾಣವು ಬಹಳಷ್ಟು ಹಿಗ್ಗುವುದು. ಉದಾಹರಣೆಗೆ ರೇಡಿಯೊ, ಗಡಿಯಾರ, ಸೈಕಲ್ ಇತ್ಯಾದಿ. ಅಂದರೆ ಬೇಡಿಕೆಯ ಪ್ರಮಾಣ ಆಯಾ ವಸ್ತುವಿನ ಅವಶ್ಯಕತೆಗೆ ತಕ್ಕಂತೆ ಹೆಚ್ಚುಕಡಮೆಯಾಗುತ್ತದೆ. ಹೀಗೆ ಸುಖೋಪಯೋಗಿ ವಸ್ತುಗಳ ಬೇಡಿಕೆಗೆ ಸ್ಥಿತಿಸ್ಥಾಪಕತ್ವವು ಬಹಳ ಇರುತ್ತದೆ. ಈ ವಸ್ತುಗಳ ಬೆಲೆಯಲ್ಲಿ ಹೆಚ್ಚು ಕಡಮೆಯಾದರೆ, ಅವುಗಳ ಬೇಡಿಕೆಯಲ್ಲೂ ಹೆಚ್ಚುಕಡಮೆಯಾಗುತ್ತದೆ. ಬೆಲೆಯು ಬದಲಾವಣೆಯಾದರೂ, ಬೇಡಿಕೆಯಲ್ಲಿ ಬದಲಾವಣೆಯಾಗದಿದ್ದರೆ ಅಂತಹ ಬೇಡಿಕೆಯನ್ನು ಸ್ಥಿತಿಸ್ಥಾಪಕರಹಿತ ಬೇಡಿಕೆ ಎಂದು ಕರೆಯುತ್ತಾರೆ. ವಸ್ತುಗಳು ಅತ್ಯಾವಶ್ಯಕವಾಗಿದ್ದರೆ ಮಾತ್ರ ಬೆಲೆ ಏರಿದರೂ ಅಥವಾ ಕುಗ್ಗಿದರೂ ಬೇಡಿಕೆಯ ಪ್ರಮಾಣದಲ್ಲಿ ಬದಲಾವಣೆಯಾಗುವುದಿಲ್ಲ; ಅಂದರೆ ಸ್ಥಿತಿಸ್ಥಾಪಕತ್ವವಿರುವುದಿಲ್ಲ. ಬೆಲೆಯ ಬದಲಾವಣೆಯಿಂದ ಬೇಡಿಕೆಯಲ್ಲಿ ಗಮನಾರ್ಹ ಬದಲಾವಣೆಯಾದರೆ ಅಂತಹ ಬೇಡಿಕೆಗೆ 'ಸ್ಥಿತಿಸ್ಥಾಪಕ ಬೇಡಿಕೆ' ಎಂದು ಕರೆಯುತ್ತಾರೆ. ಅಂದರೆ ಬೆಲೆಯು ಹೆಚ್ಚಿದರೆ ವಸ್ತುವಿಗೆ ಬೇಡಿಕೆಯ ಪ್ರಮಾಣ ಕುಗ್ಗುತ್ತದೆ; ಬೆಲೆಯು ಇಳಿದರೆ ಬೇಡಿಕೆಯ ಪ್ರಮಾಣ ಹಿಗ್ಗುವುದು. ಅದಕ್ಕೆ ಸ್ಥಿತಿಸ್ಥಾಪಕತ್ವವು ಇರುತ್ತದೆ. ವಸ್ತುಗಳು ಹಿತಕರವಸ್ತುಗಳಾಗಿದ್ದಾಗ ಮಾತ್ರ ಈ ಬಗೆಯ ಬೇಡಿಕೆ ಕಂಡುಬರುತ್ತದೆ. ಬೆಲೆಗಳ ಬದಲಾವಣೆಗೆ ಬೇಡಿಕೆಯು ತೋರಿಸುವ ಪ್ರತಿಕ್ರಿಯೆಯನ್ನು ಅಳೆದು ತೋರಿಸುವ ಮಹಾಶಕ್ತಿಯೇ ಬೇಡಿಕೆಯ ಸ್ಥಿತಿಸ್ಥಾಪಕತ್ವ.

ಬೇಡಿಕೆಯ ಸ್ಥಿತಿಸ್ಥಾಪಕತ್ವವನ್ನು ನಿರ್ಧರಿಸುವ ಅಂಶಗಳು : ಒಂದು ವಸ್ತುವು ಬೇಡಿಕೆಯ ಸ್ಥಿತಿಸ್ಥಾಪಕತ್ವವನ್ನು ಹೊಂದಿದೆಯೋ ಇಲ್ಲವೇ ಎಂಬುದನ್ನು ನಿಶ್ಚಯಿಸುವುದು ಸುಲಭವಲ್ಲ. ಬೇಡಿಕೆಯು ಸ್ಥಿತಿಸ್ಥಾಪಕತ್ವವನ್ನು ಹೊಂದಿದೆಯೋ ಇಲ್ಲವೇ ಎಂಬುದನ್ನು ತಿಳಿಯಲು ಕೆಳಗಿನ ಕೆಲವು ಅಂಶಗಳನ್ನು ಪರಿಶೀಲಿಸಬೇಕಾಗುತ್ತದೆ :

(i) **ಅತ್ಯಾವಶ್ಯಕ ವಸ್ತುಗಳು :** ಜೀವನಾವಶ್ಯಕ ವಸ್ತುಗಳ ಬೇಡಿಕೆಗೆ ಸಾಮಾನ್ಯವಾಗಿ ಸ್ಥಿತಿಸ್ಥಾಪಕತ್ವವು ಇರುವುದಿಲ್ಲ. ಒಂದುವೇಳೆ ಇದ್ದರೂ ಬಹಳ ಕಡಮೆ ಪ್ರಮಾಣದಲ್ಲಿರುತ್ತದೆ. ಬೆಲೆ ಎಷ್ಟೇ ಆದರೂ, ಜನರು ಈ ವಸ್ತುಗಳನ್ನು ಅವರಿಗೆ ಸಾಕಾಗುವಷ್ಟು ಕೊಳ್ಳುತ್ತಾರೆ. ಅವರು ಸಾಕಾಗುವಷ್ಟು ಕೊಂಡನಂತರ, ಬೆಲೆಯು ಇಳಿದರೆ ಅವರು ಮತ್ತಷ್ಟು ಕೊಳ್ಳುವುದಿಲ್ಲ. ಉದಾಹರಣೆಗೆ ಆಹಾರ ಪದಾರ್ಥಗಳು,

ಸೀಮೆ ಎಣ್ಣೆ, ಬೆಂಕಿಪೊಟ್ಟಣ, ಉಪ್ಪು ಇವುಗಳಿಗೆ ಯಾವ ಬೆಲೆ ಇದ್ದರೂ ಜನರು ಅವುಗಳನ್ನು ಕೊಂಡುಕೊಳ್ಳುತ್ತಾರೆ. ಅವುಗಳ ಬೆಲೆಯಲ್ಲಿ ಬದಲಾವಣೆಯಾದಾಗ್ಯೂ ಬೇಡಿಕೆಯಲ್ಲಿ ಬದಲಾವಣೆಯಾಗುವುದಿಲ್ಲ. ಉಪ್ಪಿನ ಬೆಲೆ ಸೇರಿಗೆ 25 ಪೈಸೆಗಳಿಂದ 50 ಪೈಸೆಗಳಾದರೆ ಬೇಡಿಕೆ ಕಡಮೆಯಾಗಲಾರದು ಅಥವಾ 25 ಪೈಸೆಗಳಿಂದ 13 ಪೈಸೆಗಳಿಗೆ ಇಳಿದರೆ ಬೇಡಿಕೆ ಹೆಚ್ಚಾಗಲಾರದು. ಜನರು ಮೊದಲು ಎಷ್ಟು ಕೊಳ್ಳುತ್ತಿದ್ದರೋ ಅಷ್ಟೇ ಕೊಳ್ಳುತ್ತಾರೆ.

(ii) **ವಿಲಾಸದ ವಸ್ತುಗಳು :** ವಿಲಾಸಿ ವಸ್ತುಗಳ ಬೇಡಿಕೆಯಲ್ಲಿ ಹೆಚ್ಚು ಸ್ಥಿತಿಸ್ಥಾಪಕತ್ವವಿರುತ್ತದೆ. ಏಕೆಂದರೆ ಅವು ಕೂಡಲೇ ಬೇಕಾಗಿರುವುದಿಲ್ಲ. ಜನರು ಅವುಗಳ ಬಳಕೆಯನ್ನು ಬೆಲೆ ಹೆಚ್ಚಿದಾಗ ಕಡಮೆಮಾಡಲೂಬಹುದು. ಬೆಲೆಯು ಕಡಮೆಯಾದಾಗ ಹೆಚ್ಚಿಸಲೂಬಹುದು. ಹೇಗೆಂದರೆ ಅವುಗಳ ಬೆಲೆ ಏರಿದರೆ ಅವುಗಳನ್ನು ಕೊಳ್ಳಲು ಹೆಚ್ಚು ಜನರು ಮುಂದೆ ಬರುವುದಿಲ್ಲ. ಆದರೆ ಅವುಗಳ ಬೆಲೆಯು ಸ್ವಲ್ಪಮಟ್ಟಿಗೆ ಇಳಿದರೆ ಅವುಗಳನ್ನು ಕೊಳ್ಳಲು ಅನೇಕ ಜನರು ಮುಂದೆ ಬರುವರು. ಟ್ರಾನ್ಸಿಸ್ಟರ್ ಬೆಲೆಯು 400 ರೂಪಾಯಿಗಳಿಂದ 325 ಕ್ಕೆ ಇಳಿದರೆ ಕೂಡಲೇ ಬೇಡಿಕೆಯು ಹೆಚ್ಚಾಗುತ್ತದೆ. ಅದೇ 400 ರೂಪಾಯಿಗಳಿಂದ 450 ರೂಪಾಯಿಗಳಿಗೆ ಏರಿದರೆ ಅದರ ಬೇಡಿಕೆಯು ಕುಗ್ಗುತ್ತದೆ.

(iii) **ಬದಲಿ ವಸ್ತುಗಳು :** ಒಂದು ವಸ್ತುವಿಗೆ ಬದಲಾಗಿ ಮತ್ತೊಂದು ವಸ್ತುವನ್ನು ಬಳಸುವಂತಿದ್ದಾಗ ಒಂದು ವಸ್ತುವಿನ ಬೆಲೆ ಏರಿದರೆ ಅದಕ್ಕೆ ಬೇಡಿಕೆ ಕಡಮೆಯಾಗಿ, ಮತ್ತೊಂದು ವಸ್ತುವಿಗೆ ಹೆಚ್ಚು ಬೇಡಿಕೆ ಕಂಡುಬರುತ್ತದೆ. ಉದಾಹರಣೆಗೆ ಕಾಫಿ, ಟೀ. ಕಾಫಿಯ ಬೆಲೆ 30 ಪೈಸೆಗಳಿದ್ದು ಟೀಯ ಬೆಲೆ 25 ಪೈಸೆಗಳಾದರೆ ಜನರು ಕೂಡಲೇ ಕಾಫಿ ಕುಡಿಯುವುದನ್ನು ಬಿಟ್ಟು ಟೀ ಕುಡಿಯುವುದನ್ನು ಪ್ರಾರಂಭಿಸುತ್ತಾರೆ. ಆಗ ಟೀಗೆ ಬೇಡಿಕೆಯು ಹೆಚ್ಚಾಗಿ ಕಾಫಿಗೆ ಬೇಡಿಕೆ ಕಡಮೆಯಾಗುತ್ತದೆ. ಅಂದರೆ ಒಂದು ವಸ್ತುವಿಗೆ ಬದಲಿ ವಸ್ತುಗಳು ಸಿಗುತ್ತಿದ್ದರೆ ಬೇಡಿಕೆಗೆ ಸ್ಥಿತಿಸ್ಥಾಪಕತ್ವ ಉಂಟಾಗುತ್ತದೆ.

ರೈಲು ಪ್ರಯಾಣ ದರವು ಹೆಚ್ಚಾದಂತೆಲ್ಲ ರೈಲುಗಳಲ್ಲಿ ಪ್ರಯಾಣ ಮಾಡುವವರ ಸಂಖ್ಯೆ ಕಡಮೆಯಾಗುತ್ತದೆ. ಜನರು ಹೆಚ್ಚಾಗಿ ಬಸ್ಸುಗಳಲ್ಲೇ ಪ್ರಯಾಣ ಮಾಡುತ್ತಾರೆ. ಅಂದರೆ ಒಂದು ವಸ್ತುವಿನ ಬದಲಾಗಿ ಅಥವಾ ಸೇವೆಯ ಬದಲಾಗಿ ಬದಲಿ ವಸ್ತುಗಳು ದೊರೆಯುವಂತಿದ್ದರೆ ಆ ವಸ್ತುವಿನ ಬೇಡಿಕೆಯು ಸಡಿಲಗೊಳ್ಳುತ್ತದೆ.

(iv) **ನಾನಾ ಉಪಯೋಗಕ್ಕೆ ಬರುವ ವಸ್ತುಗಳು :** ಒಂದೇ ವಸ್ತುವನ್ನು ನಾನಾ ಉಪಯೋಗಗಳಿಗೆ ಬಳಸುವಂತಿದ್ದಾಗ ಬೇಡಿಕೆಯು ಹೆಚ್ಚು ಸ್ಥಿತಿಸ್ಥಾಪಕತ್ವವನ್ನು ಹೊಂದಿರುವುದು. ಸಾಮಾನ್ಯವಾಗಿ ವಿಶೇಷ ಉಪಯೋಗಗಳಿಗೆ ಬರುವಂತಹ ವಸ್ತುಗಳ

ಬೇಡಿಕೆಗೆ ಸ್ಥಿತಿಸ್ಥಾಪಕತ್ವ ಇರುತ್ತದೆ. ಉದಾ. ಕಲ್ಲಿದ್ದಲು, ರಬ್ಬರ್. ಕಲ್ಲಿದ್ದಲಿನ ಬೆಲೆಯು ಕಡಮೆಯಿದ್ದಾಗ ಜರೂರು ಬಳಕೆಗಳಿಗಲ್ಲದೆ ಅಡಿಗೆ ಮಾಡಲು ಕಾರ್ಖಾನೆ ಇತ್ಯಾದಿಗಳಲ್ಲಿ ಉಪಯೋಗಿಸಲಾಗುವುದು. ಅದಕ್ಕೆ ಬೇಡಿಕೆಯು ಹೆಚ್ಚಿರುತ್ತದೆ. ಅದರ ಬೆಲೆ ಏರಿದರೆ ಅದನ್ನು ಜರೂರು ಬಳಕೆಗೆ ಅಂದರೆ ಕಾರ್ಖಾನೆಗಳಲ್ಲಿ ಮಾತ್ರ ಬಳಸಲಾಗುವುದು. ಆಗ ಅದರ ಬೇಡಿಕೆಯು ಕಡಮೆಯಾಗುವುದು.

ಸ್ಥಿತಿಸ್ಥಾಪಕತ್ವದ ಮಹತ್ವ : ಬೇಡಿಕೆಯ ಸ್ಥಿತಿಸ್ಥಾಪಕತ್ವವು ವ್ಯಾಪಾರಸ್ಥರಿಗೆ ಸರಕುಗಳ ಬೆಲೆಯನ್ನು ನಿರ್ಧರಿಸಲು ಮಾರ್ಗದರ್ಶನ ನೀಡುವುದು. ಸರಕುಗಳಿಗೆ ಬೇಡಿಕೆಯು ಕಡಮೆ ಸ್ಥಿತಿಸ್ಥಾಪಕತ್ವವಿದ್ದರೆ ವ್ಯಾಪಾರಸ್ಥ ಬೆಲೆಯನ್ನು ಏರಿಸಿ ಲಾಭ ಪಡೆಯಬಹುದು. ಸ್ಥಿತಿಸ್ಥಾಪಕತ್ವ ಹೆಚ್ಚು ಇದ್ದರೆ ಬೆಲೆಯನ್ನು ಏರಿಸಲಾಗುವುದಿಲ್ಲ. ಬೆಲೆಯನ್ನು ಏರಿಸಿದರೆ ಬೇಡಿಕೆ ಕುಗ್ಗುವುದು. ಬೆಲೆಯನ್ನು ಇಳಿಸಿದರೆ ಬೇಡಿಕೆ ಹೆಚ್ಚಾಗುವುದು. ಆದ್ದರಿಂದ ವಸ್ತುಗಳ ಬೆಲೆಯನ್ನು ನಿರ್ಧರಿಸುವಾಗ ಯಾವ ಸ್ಥಿತಿಸ್ಥಾಪಕತ್ವವುಳ್ಳ ಬೇಡಿಕೆ ತನ್ನ ಸರಕುಗಳಿಗಿದೆ ಎಂಬುದನ್ನು ಅರಿತು, ಅನಂತರ ಬೆಲೆ ಏರಿಸುವ ಅಥವಾ ಕುಗ್ಗಿಸುವ ಕ್ರಮಗಳನ್ನು ಕೈಗೊಳ್ಳುವನು.

ಸರಕಾರದ ಹಣಕಾಸಿನ ದೃಷ್ಟಿಯಿಂದ ಸ್ಥಿತಿಸ್ಥಾಪಕತ್ವ ಮಹತ್ವವನ್ನು ಹೊಂದಿದೆ. ವಸ್ತುಗಳ ಮೇಲೆ ತೆರಿಗೆಗಳನ್ನು ವಿಧಿಸುವಾಗ ಯಾವ ವಸ್ತುಗಳಿಗೆ ಬಿಗುವಿನ ಬೇಡಿಕೆ ಇರುವುದೆಂದು ತಿಳಿದು ಅನಂತರ ತೆರಿಗೆಗಳನ್ನು ವಿಧಿಸಿದರೆ ನಿಶ್ಚಿತವಾದ ಆದಾಯ ಬರುತ್ತದೆ. ಯಾವ ಒಂದು ವಸ್ತುವಿನ ಮೇಲೆ ಸರ್ಕಾರ ತೆರಿಗೆ ಹೇರಿದ ಕೂಡಲೇ ಅದರ ಬೆಲೆ ಹೆಚ್ಚಾಗುತ್ತದೆ. ಬೇಡಿಕೆಯಲ್ಲಿ ಸರಳತೆ ಇದ್ದರೆ ಆ ವಸ್ತುಗಳಿಗೆ ಬೇಡಿಕೆ ಕುಗ್ಗುತ್ತದೆ. ಇದರಿಂದ ನಿರ್ಧರಿಸಿದ ಆದಾಯ ಸರಕಾರಕ್ಕೆ ಬರುವುದಿಲ್ಲ. ಆದ್ದರಿಂದ ವಸ್ತುಗಳ ಮೇಲೆ ತೆರಿಗೆಗಳನ್ನು ಹಾಕುವಾಗ ಸ್ಥಿತಿಸ್ಥಾಪಕತ್ವವನ್ನು ಗಮನಿಸ ಬೇಕಾಗುತ್ತದೆ.

ಸ್ಥಿತಿಸ್ಥಾಪಕತ್ವದ ಅಳತೆ : ಸ್ಥಿತಿಸ್ಥಾಪಕತ್ವವನ್ನು ಕೆಳಗಿನ ಮೂರು ವಿಧವಾಗಿ ಅಳೆಯಬಹುದು :

1. **ಸ್ಥಿತಿಸ್ಥಾಪಕತ್ವದ ಸಮಾನತೆ :** ಬೆಲೆಯಲ್ಲಿ ಬದಲಾವಣೆಯಾದಾಗ ಬೇಡಿಕೆ ಯಲ್ಲಿನ ಬದಲಾವಣೆಯು ಒಂದೇ ಪ್ರಮಾಣದಲ್ಲಾದರೆ ಆಗ ಬೇಡಿಕೆಯ ಸ್ಥಿತಿಸ್ಥಾಪಕತ್ವ ಸಮಾನವಾಗಿರುವುದು.

2. **ಸ್ಥಿತಿಸ್ಥಾಪಕತ್ವವು ಸಮಾನತೆಗಿಂತ ಕಡಮೆಯಾಗಿರುವುದು :** ಬೇಡಿಕೆಯ ಬದಲಾವಣೆಯು ಬೆಲೆಯ ಬದಲಾವಣೆಯ ಪ್ರಮಾಣಕ್ಕಿಂತಲೂ ಕಡಮೆಯಾದರೆ, ಆಗ ಬೇಡಿಕೆಯ ಸ್ಥಿತಿಸ್ಥಾಪಕತ್ವವು ಸಮಾನತೆಗಿಂತಲೂ ಕಡಮೆ ಇರುತ್ತದೆ.

3. ಸ್ಥಿತಿಸ್ಥಾಪಕತ್ವವು ಸಮಾನತೆಗಿಂತ ಹೆಚ್ಚಿರುವುದು : ಬೆಲೆಯಲ್ಲಿ ಬದಲಾವಣೆ ಯಾದಾಗ ಬೇಡಿಕೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬದಲಾವಣೆಗಳಾದರೆ ಆಗ ಬೇಡಿಕೆಯು ಸ್ಥಿತಿಸ್ಥಾಪಕತ್ವವು ಸಮಾನತೆಗಿಂತ ಹೆಚ್ಚಿರುತ್ತದೆ.

ಪೂರೈಕೆ

ಸಾಮಾನ್ಯವಾಗಿ ಉತ್ಪಾದಕರು ಮಾರಾಟ ಮಾಡಲು ಪೇಟೆಗಳಿಗೆ ಕಳುಹಿಸಿದ ವಸ್ತುಗಳಿಗೆ 'ಪೂರೈಕೆ' ಎಂದು ಕರೆಯುವರು. ಒಂದು ನಿರ್ದಿಷ್ಟ ಬೆಲೆಗೆ ಮಾರಾಟ ಮಾಡಲು ಮಾರುಕಟ್ಟೆಯಲ್ಲಿ ಒದಗಿಸಲ್ಪಟ್ಟ ವಸ್ತುಗಳ ಪ್ರಮಾಣವೇ 'ಪೂರೈಕೆ'. ಅಂದರೆ ಯಾವುದೇ ಒಂದು ವಸ್ತುವಿನ ಪೂರೈಕೆ ಅದರ ಸಂಗ್ರಹಕ್ಕಿಂತ ಕಡಮೆ ಇರುತ್ತದೆ. ಪೂರೈಕೆಯು ಸಂಗ್ರಹಕ್ಕಿಂತ ಎಂದೂ ಹೆಚ್ಚಾಗಲಾರದು. ಸಂಗ್ರಹ ವಿದ್ದ ಎಲ್ಲ ಪದಾರ್ಥಗಳನ್ನು ಮಾರಾಟ ಮಾಡಲು ಉತ್ಪಾದಕರು ಇಚ್ಛಿಸುವರು.

ಬೇಡಿಕೆ ಮತ್ತು ಪೂರೈಕೆಗೆ ನಿಕಟ ಸಂಬಂಧವಿದೆ. ಅವೆರಡೂ ಒಂದಕ್ಕೊಂದು ಪೂರಕಗಳು. ಬೇಡಿಕೆ ಇಲ್ಲದೆ ಪೂರೈಕೆ ಇಲ್ಲ. ಪೂರೈಕೆ ಇಲ್ಲದೆ ಬೇಡಿಕೆಯೂ ಇಲ್ಲ. ಬೇಡಿಕೆಯಲ್ಲಿ ತುಷ್ಟಿ ಮಹತ್ವವಾಗಿರುವಂತೆ, ಪೂರೈಕೆಯಲ್ಲಿ ಉತ್ಪಾದನಾ ವೆಚ್ಚವು ಮಹತ್ವವಾಗಿರುತ್ತದೆ. ಬೇಡಿಕೆಯಂತೆ ಪೂರೈಕೆಯೂ ಮಾರಾಟಗಾರರ ವಸ್ತುವನ್ನು ಪೂರೈಸುವ ಇಷ್ಟ ಮತ್ತು ಸಾಮರ್ಥ್ಯಗಳನ್ನು ಅವಲಂಬಿಸಿರುತ್ತದೆ. ಪೂರೈಕೆ ಸಹ ಸಂಬಂಧಾತ್ಮಕವಾಗಿದೆ ಮತ್ತು ಕಾಲ, ಸ್ಥಳಗಳೊಂದಿಗೆ, ಬೆಲೆಯೊಂದಿಗೆ ಬದಲಾಯಿಸುತ್ತ ಹೋಗುತ್ತದೆ. ಉತ್ಪಾದಕರು ವಿವಿಧ ಬೆಲೆಗಳಿಗೆ ಮತ್ತು ವಿವಿಧ ಪ್ರಮಾಣಗಳಲ್ಲಿ ವಸ್ತುಗಳನ್ನು ಪೂರೈಸುತ್ತಾರೆ. ಬೆಲೆ ಹೆಚ್ಚಿದಾಗ ಹೆಚ್ಚು ವಸ್ತುಗಳನ್ನು ಪೂರೈಸುತ್ತಾರೆ. ಬೆಲೆ ಕಡಮೆ ಇದ್ದ ಪರಿಸ್ಥಿತಿಗಳಲ್ಲಿ ಕಡಮೆ ಪ್ರಮಾಣದಲ್ಲಿ ವಸ್ತು ಗಳನ್ನು ಪೂರೈಸುತ್ತಾರೆ. ಬಳಕೆದಾರನು ಬೆಲೆಯನ್ನು ಅರಿಯದೆ, ಎಷ್ಟು ಬೇಕೆಂಬು ದನ್ನು ಬಹಿರಂಗ ಪಡಿಸಲಾರನೋ, ಅದೇ ರೀತಿ ಮಾರಾಟಗಾರ ಬೆಲೆಯನ್ನು ತಿಳಿದು ಕೊಳ್ಳದೆ ತನ್ನ ಪೂರೈಕೆಯ ಪ್ರಮಾಣದ ಬಗ್ಗೆ ಖಚಿತವಾಗಿ ಬಹಿರಂಗ ಪಡಿಸುವುದಿಲ್ಲ. ಅಂದರೆ ಉತ್ಪಾದನೆ ಮತ್ತು ಪೂರೈಕೆಗೆ ವ್ಯತ್ಯಾಸವಿದೆ. ವಸ್ತುವನ್ನು ಉತ್ಪಾದಿಸ ಬಹುದು, ಉತ್ಪಾದಿಸಿದ್ದನ್ನೆಲ್ಲ ಪೂರೈಕೆ ಮಾಡಬೇಕೆಂಬ ಕಡ್ಡಾಯವಿಲ್ಲ. ಬೆಲೆಯು ಕಡಮೆ ಇದ್ದರೆ ಉತ್ಪಾದಕರು ಎಲ್ಲವನ್ನೂ ಮಾರಾಟಮಾಡದೆ ಶೇಖರಿಸಿಟ್ಟು ಮುಂದೆ ಬೆಲೆ ಏರಿದಾಗ ಮಾರಾಟ ಮಾಡಬಹುದು. ಬೆಲೆ ಏರಿದಂತೆಲ್ಲ ಶೇಖರಿಸಿಟ್ಟ ವಸ್ತುಗಳು ಮಾರುಕಟ್ಟೆಗೆ ಮಾರಾಟಮಾಡಲು ಬರುತ್ತವೆ. ಇಂತಹ ಪರಿಸ್ಥಿತಿ ಬಹುಕಾಲ ಬಾಳುವ ವಸ್ತುಗಳಲ್ಲಿ ಕಂಡುಬರುವುದು. ಉದಾಹರಣೆಗೆ ರೇಡಿಯೋ : ಒಬ್ಬ ರೇಡಿಯೊ ಇಂಜನಿಯರನು 10 ರೇಡಿಯೋಗಳನ್ನು ಸುಮಾರು 400 ರೂಪಾಯಿಗಳ ಅಂದಾಜಿನಲ್ಲಿ ಮಾರಾಟಮಾಡಲು ಉತ್ಪಾದಿಸಿರುತ್ತಾನೆ. ಆದರೆ ಬೆಲೆಗಳು ಇದ್ದಕ್ಕಿದ್ದಂತೆ 00 ರೂಪಾಯಿಗಳಾದರೆ ಅವನು ಎಲ್ಲ ರೇಡಿಯೋಗಳನ್ನು ಮಾರುಕಟ್ಟೆಗೆ ಕಳುಹಿಸಿ

ಮಾರಾಟ ಮಾಡಲು ಬಯಸುವುದಿಲ್ಲ. ಬೆಲೆಯು 350 ರೂಪಾಯಿಗಳಾದರೆ 5 ರೇಡಿಯೋಗಳನ್ನು ಮಾರುಕಟ್ಟೆಗೆ ಕಳುಹಿಸಬಹುದು. ಆಗ ಒಟ್ಟು ಉತ್ಪಾದನೆ 10 ರೇಡಿಯೋಗಳಾದರೆ ಪೂರೈಕೆ ಮಾತ್ರ 5. ಬೆಲೆ 400 ರೂಪಾಯಿಗಳಾದರೆ ಅವನು ಉತ್ಪಾದಿಸಿದ ರೇಡಿಯೋಗಳನ್ನೆಲ್ಲ ಮಾರಾಟಮಾಡಬಹುದು. ಆದರೆ ಕೆಲವು ವಸ್ತುಗಳು ಉತ್ಪಾದನೆ ಯಾದಷ್ಟೂ ಪೂರೈಕೆಯಾಗುತ್ತವೆ. ಏಕೆಂದರೆ ಅವು ನಶಿಸಿಹೋಗುವ ಪದಾರ್ಥಗಳು. ಹಾಲು, ಹಣ್ಣುಗಳು, ತರಕಾರಿ, ಮೀನು, ಮೊಟ್ಟೆ, ಹೂವು ಇವುಗಳನ್ನು ಬಹಳ ಕಾಲ ಶೇಖರಿಸಿಡಲಾಗುವುದಿಲ್ಲ. ಬೆಲೆ ಹೆಚ್ಚಿರಲಿ, ಕಡಮೆ ಇರಲಿ ಅವುಗಳನ್ನು ಕೂಡಲೇ ಮಾರಾಟ ಮಾಡಬೇಕಾಗುತ್ತವೆ. ಅಂದರೆ ಇದರಿಂದ ತಿಳಿದುಬರುವ ಅಂಶ, ಪೂರೈಕೆ ಎಂದರೆ ಯಾವುದೇ ಒಂದು ನಿರ್ದಿಷ್ಟ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಪೂರೈಸಲ್ಪಟ್ಟ (ಒದಗಿಸಲ್ಪಟ್ಟ) ವಸ್ತುಗಳ ಪ್ರಮಾಣ.

ಪೂರೈಕೆಯ ನಿಯಮ : ಬೇಡಿಕೆ ಹಾಗೂ ಬೆಲೆಗಳಿಗೆ ಪರೋಕ್ಷ ಸಂಪರ್ಕವಿದ್ದರೆ, ಪೂರೈಕೆ ಮತ್ತು ಬೆಲೆಗೆ ಪ್ರತ್ಯಕ್ಷ ಸಂಪರ್ಕ ಇರುತ್ತದೆ. ಅದು ಹೇಗೆಂಬುದನ್ನು ಪರಿಶೀಲಿಸೋಣ. ಒಂದು ವಸ್ತುವಿನ ಬೆಲೆ ಏರಿದಂತೆಲ್ಲ ಅದರ ಬೇಡಿಕೆ ಕುಗ್ಗುತ್ತದೆ. ವಸ್ತುವಿನ ಬೆಲೆ ಇಳಿದಂತೆಲ್ಲ ಅದರ ಬೇಡಿಕೆ ಹೆಚ್ಚುತ್ತದೆ. ಇದೇ ರೀತಿ, ವಸ್ತುವಿನ ಬೆಲೆ ಹೆಚ್ಚಿದಂತೆಲ್ಲ ಅದರ ಪೂರೈಕೆಯು ಹೆಚ್ಚುತ್ತದೆ; ವಸ್ತುವಿನ ಬೆಲೆ ಇಳಿದಂತೆಲ್ಲ ಅದರ ಪೂರೈಕೆಯು ಕಡಮೆಯಾಗುತ್ತದೆ. ಪೂರೈಕೆಯ ನಿಯಮವು ಈ ರೀತಿ ಇದೆ. ಉಳಿದ ವಸ್ತುಗಳು ಸ್ಥಿರವಾಗಿದ್ದಾಗ ವಸ್ತುವಿನ ಪೂರೈಕೆ ಆ ವಸ್ತುವಿನ ಬೆಲೆ ಏರಿದಂತೆ ಹೆಚ್ಚಾಗುತ್ತದೆ ಮತ್ತು ಬೆಲೆ ಇಳಿದಂತೆ ಪೂರೈಕೆ ಕಡಮೆಯಾಗುತ್ತದೆ. ಅಂದರೆ ವಸ್ತುವಿನ ಪೂರೈಕೆ ಬೆಲೆಯೊಂದಿಗೆ ಬದಲಾಗುತ್ತದೆ. ವಸ್ತುವಿನ ಬೆಲೆ ಮತ್ತು ಪೂರೈಕೆಗಳು ಒಂದೇ ದಿಸೆಯಲ್ಲಿ ಚಲಿಸುತ್ತವೆ. ಹೇಗೆಂದರೆ ವಸ್ತುವಿನ ಬೆಲೆ ಹೆಚ್ಚಿದರೆ ಪೂರೈಕೆಯು ಹೆಚ್ಚುತ್ತದೆ. ಬೆಲೆ ಕಡಮೆಯಾದರೆ ಪೂರೈಕೆಯೂ ಕಡಮೆಯಾಗುತ್ತದೆ.

ವಸ್ತುವಿನ ಬೆಲೆ ಹೆಚ್ಚಿದರೆ ಮಾರಾಟಗಾರನಿಗೆ ಆರ್ಥಿಕ ಲಾಭ ಬರುವುದರಿಂದ ಹೆಚ್ಚು ಪೂರೈಸುತ್ತಾರೆ. ಆಗ ಬೇಡಿಕೆಯು ಕಡಮೆಯಾಗುತ್ತದೆ. ಅದೇ ವಸ್ತುವಿನ ಬೆಲೆ ಇಳಿದಾಗ ಅವರಿಗೆ ಲಾಭ ಕಡಮೆಯಾಗುವುದರಿಂದ ಕಡಮೆ ವಸ್ತುಗಳನ್ನು ಪೂರೈಸುವರು. ಆಗ ಬೇಡಿಕೆಯು ಹೆಚ್ಚಾಗುತ್ತದೆ. ಆದರೆ ಮಾರಾಟಗಾರರು ತಮ್ಮ ವಸ್ತುವಿಗೆ ಒಂದು ಬೆಲೆಯನ್ನು ಕಾಯ್ದಿಟ್ಟಿರುವರು. ಅಂತಹ ಬೆಲೆಯು ಉತ್ಪಾದನಾವೆಚ್ಚ ಮತ್ತು ಅವರ ಲಾಭವನ್ನು ಒಳಗೊಂಡಿರುವುದು. ಅಂತಹ ಬೆಲೆಗೆ 'ಕಾಯ್ದಿಟ್ಟ ಬೆಲೆ' ಎನ್ನುವರು. ಮಾರಾಟಗಾರರು ವಸ್ತುಗಳ ಬೆಲೆ ಇಳಿದಂತೆಲ್ಲಾ ಪೂರೈಕೆಯನ್ನು ಕಡಮೆ ಮಾಡುತ್ತಾ ಹೋಗುತ್ತಾರೆ. ಕಾಯ್ದಿಟ್ಟ ಬೆಲೆಗಿಂತ ಕೆಳಗಿಳಿದರೆ ಅವರು ವಸ್ತುಗಳ ಮಾರಾಟ ಮಾಡುವುದಿಲ್ಲ. ಕಾಯ್ದಿಟ್ಟ ಬೆಲೆಯು ಬಾಳಿಕೆ ಬರುವ ವಸ್ತುಗಳಿಗಾಗಿ ಮಾತ್ರ ಇರುತ್ತದೆ. ನಶಿಸಿ ಹೋಗುವ ವಸ್ತುಗಳಾದ ಹಣ್ಣು, ಹೂವು, ಹಾಲು

ಇತ್ಯಾದಿಗಳಿಗೆ ಇರುವುದಿಲ್ಲ. ಏಕೆಂದರೆ ಅವರು ಪೂರ್ಣ ಅಸಲನ್ನು ಕಳೆದುಕೊಳ್ಳುವ ಬದಲು ಅವುಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕಾಗುತ್ತದೆ. ಉದಾಹರಣೆಗೆ ಮಾವಿನ ಹಣ್ಣಿನ ಕಾಲ, ಪ್ರಾರಂಭದಲ್ಲಿ ಮಾವಿನ ಹಣ್ಣಿನ ಬೆಲೆ ಡಜನ್ನಿಗೆ 12 ರೂಪಾಯಿಗಳಾದರೆ, ಸಾಮಾನ್ಯ ಬಳಕೆದಾರ ಕೊಳ್ಳುವ ಪರಿಸ್ಥಿತಿಯಲ್ಲಿರುವುದಿಲ್ಲ. ಶ್ರೀಮಂತರು ಮಾತ್ರ ಕೊಳ್ಳಬಹುದು. ಬೆಲೆ ಹೆಚ್ಚಿರುವುದರಿಂದ ಬೇಡಿಕೆ ಕಡಮೆ. ಕೆಲವು ಕಾಲದ ನಂತರ ಬೆಲೆಯು 12 ರಿಂದ 4 ರೂಪಾಯಿಗಳಿಗೆ ಇಳಿದರೆ, ಶ್ರೀಮಂತರಲ್ಲದೆ ಸಾಮಾನ್ಯ ಬಳಕೆದಾರರೆಲ್ಲ ಕೊಳ್ಳುತ್ತಾರೆ. ಆಗ ಮಾವಿನ ಹಣ್ಣುಗಳಿಗೆ ಬೇಡಿಕೆಯು ಹೆಚ್ಚುತ್ತದೆ. ಡಜನ್ನಿಗೆ 1 ರೂಪಾಯಿ 20 ಪೈಸೆಗಳಾದರೆ ಎಲ್ಲಿಲ್ಲದ ಬೇಡಿಕೆ ಉಂಟಾಗುತ್ತದೆ. ಅಂದರೆ ಬೆಲೆ ಹೆಚ್ಚಿದಾಗ ಬೇಡಿಕೆ ಕಡಮೆ ಮತ್ತು ಬೆಲೆ ಕಡಮೆ ಇದ್ದಾಗ ಬೇಡಿಕೆ ಹೆಚ್ಚಾಗುವುದು ರೂಢಿ. ಬೆಲೆ ಮತ್ತು ಬೇಡಿಕೆಗಳು ಪರಸ್ಪರ ವಿರುದ್ಧ ಪ್ರಮಾಣದಲ್ಲಿ ಬದಲಾಯಿಸುವುವು ಎಂದು ಹೇಳಬಹುದು.

ಪೂರೈಕೆಯ ನಿಯಮವೂ ಸಹ ಕೆಲವು ಅಪವಾದಗಳಿಗೆ ಒಳಪಟ್ಟಿದೆ.

ಅಪವಾದಗಳು : ಪೂರೈಕೆಯ ನಿಯಮವು ಕೆಲವು ವಸ್ತುಗಳಿಗೆ ಅನ್ವಯಿಸುವುದಿಲ್ಲ. ಒಬ್ಬ ಮಾರಾಟಗಾರ ಹಣದ ಮುಗ್ಗಟ್ಟಿರುವಾಗ ಅವನಲ್ಲಿರುವ ವಸ್ತುಗಳ ಬೆಲೆ ಇಳಿದರೂ, ಪೂರೈಕೆಯನ್ನು ಕಡಮೆಮಾಡದೆ, ತನ್ನಲ್ಲಿರುವ ವಸ್ತುಗಳನ್ನು ಕಡಮೆ ಮಾಡದೆ ತನ್ನಲ್ಲಿರುವ ವಸ್ತುಗಳನ್ನು ಕಡಮೆಮಾಡಿದ ಬೆಲೆಗೆ ಮಾರಾಟ ಮಾ[illegible] ಮುಗ್ಗಟ್ಟನ್ನು ಪರಿಹರಿಸಿಕೊಳ್ಳಬಹುದು. ಇಂತಹ ಪರಿಸ್ಥಿತಿಗಳಲ್ಲಿ ಪೂರೈಕೆಯ ನಿಯಮ ಅನ್ವಯಿಸುವುದಿಲ್ಲ.

ಕೆಲವು ವಸ್ತುಗಳ ಪೂರೈಕೆಯನ್ನು ಬೆಲೆ ಹೆಚ್ಚಾದರೂ ಅಥವಾ ಕಡಮೆಯಾದರೂ ಹೆಚ್ಚಿಸಲು ಇಲ್ಲವೆ ಕಡಮೆಮಾಡಲು ಆಗುವುದಿಲ್ಲ. ಹಳೆಯ ಚಿತ್ರಗಳು, ಹಳೆಯ ನಾಣ್ಯಗಳು ಇವುಗಳ ಪೂರೈಕೆ ನಿರ್ದಿಷ್ಟವಾಗಿರುತ್ತದೆ. ಉದಾ : ಲಿಯೊನಾಡೊ[illegible] ಡಾವಿಂಚಿ ಬರೆದಿದ್ದ ಒಂದು ಚಿತ್ರದ ಬೆಲೆ ಜಾಸ್ತಿಯಾಯಿತೆಂದರೆ ಅದರ ಪೂರೈಕೆಯನು[illegible] ಹೆಚ್ಚಿಸಲಾಗುವುದಿಲ್ಲ.

ಪೂರೈಕೆಯ ನಿಯಮವು ಕಾರ್ಮಿಕರ ಶ್ರಮಕ್ಕೆ ಅನ್ವಯಿಸುವುದಿಲ್ಲ. ಶ್ರಮದ ಬೇ[illegible] ಏರಿದಾಗ ಪೂರೈಕೆಯು ಹೆಚ್ಚಾಗುವುದರ ಬದಲು ಕಡಮೆಯಾಗುತ್ತದೆ. ವೇತನ ಕಡಮೆಯಿದ್ದಾಗ ಕಾರ್ಮಿಕರು ಅವರ ಜೀವನಾವಶ್ಯಕ ವಸ್ತುಗಳನ್ನು ಪಡೆದು ಜೀವ[illegible] ಸಾಗಿಸಲು ತಾವೂ ಹೆಚ್ಚು ದುಡಿಯುವುದಲ್ಲದೆ, ಮಕ್ಕಳನ್ನೂ ಹೆಂಡತಿಯರನ್ನೂ ದುಡಿಸುವಂತೆ ಮಾಡಬಹುದು. ಆದರೆ ವೇತನಗಳು ಅವರ ಕನಿಷ್ಠ ಮಟ್ಟಕ್ಕಿಂ[illegible] ಹೆಚ್ಚು ಹೆಚ್ಚಿದರೆ ಅವರು ಹೆಚ್ಚು ಶ್ರಮಪಡದೆ ಆರಾಮ ಜೀವನ ನಡೆಸಬಹುದ

ಮತ್ತು ಹೆಂಡತಿ ಮಕ್ಕಳನ್ನು ಕೆಲಸಕ್ಕೆ ಕಳುಹಿಸದೆ ಇರಬಹುದು. ಅಂದರೆ ಶ್ರಮದ ಪೂರೈಕೆ ಏರಿದಾಗ ಬೇಡಿಕೆಯು ಹೆಚ್ಚಾಗುವುದರ ಬದಲು ಕಡಮೆಯಾಗುತ್ತದೆ.

ಪೂರೈಕೆ ಪಟ್ಟಿ : ಹಿಂದೆ ಬೇಡಿಕೆಯ ಪಟ್ಟಿಯನ್ನು ತಯಾರಿಸಿದಂತೆ ಪೂರೈಕೆಯ ಪಟ್ಟಿಯನ್ನೂ ಸಹ ತಯಾರಿಸಬಹುದು. ಪೂರೈಕೆಯ ಪಟ್ಟಿಯು ಯಾವ ಯಾವ ಬೆಲೆಗಳಲ್ಲಿ ಮಾರಾಟಗಾರರು ಎಷ್ಟೆಷ್ಟು ಪ್ರಮಾಣದಲ್ಲಿ ವಸ್ತುಗಳನ್ನು ಪೂರೈಸುವರು ಎಂಬುದನ್ನು ತಿಳಿಸುತ್ತದೆ. ಮುಂದೆ, ಪೂರೈಕೆಯ ಪಟ್ಟಿಯು ಬೆಲೆ ಪೂರೈಕೆಗಳ ಸಂಬಂಧವನ್ನು ತೋರಿಸುತ್ತದೆ. ಮಾರಾಟಗಾರ ವಸ್ತುವಿನ ಬೆಲೆ ಹೆಚ್ಚು ಇದ್ದಾಗ ಹೆಚ್ಚು ಪ್ರಮಾಣದಲ್ಲಿ ವಸ್ತುಗಳನ್ನು ಪೂರೈಸುತ್ತಾನೆ. ಬೆಲೆಯು ಕಡಮೆ ಇದ್ದಾಗ ಕಡಮೆ ಪ್ರಮಾಣದಲ್ಲಿ ವಸ್ತುಗಳನ್ನು ಪೂರೈಸುತ್ತಾನೆ. ಅದು ಹೇಗೆಂಬುದನ್ನು ಪರಿಶೀಲಿಸೋಣ.


ಕೋಷ್ಟಕ 6

ಮಾವಿನ ಹಣ್ಣಿನ ಬೆಲೆಗೆ ಅನುಗುಣವಾದ ಪೂರೈಕೆ

ಮಾವಿನ ಹಣ್ಣುಗಳ ಬೆಲೆ (ಡಜನ್ನಿಗೆ ರೂಪಾಯಿಗಳು)	ಪೂರೈಕೆಯ ಪ್ರಮಾಣ (ಡಜನ್‌ಗಳಲ್ಲಿ)
10	40
8	30
6	20
4	10
2	5
1	3

ಮಾವಿನ ಹಣ್ಣುಗಳ ಬೆಲೆ ಡಜನ್ನಿಗೆ 10 ರೂಪಾಯಿಗಳಿದ್ದಾಗ ಪೂರೈಕೆಯು 40 ಡಜನ್ನುಗಳಿರುತ್ತವೆ. ಅದೇ ಬೆಲೆಯು 10 ರೂಪಾಯಿಗಳಿಂದ 8 ರೂಪಾಯಿಗಳಿಗೆ ಇಳಿದಾಗ ಪೂರೈಕೆಯು 40 ಡಜನ್‌ಗಳಿಂದ 30 ಡಜನ್‌ಗಳಿಗೆ ಇಳಿಯುತ್ತದೆ. ಇದೇ ರೀತಿ 1 ರೂಪಾಯಿ ಆದಾಗ ಕೇವಲ 3 ಡಜನ್ ಹಣ್ಣನ್ನು ಪೂರೈಸಲಾಗುವುದು. ಬೆಲೆಯು ಕಡಮೆಯಾದಂತೆಲ್ಲ ಪೂರೈಕೆಯು ಸಹ ಕಡಮೆಯಾಗುತ್ತ ಹೋಗುವುದು ಎಂಬುದು ಇದರಿಂದ ತಿಳಿದು ಬರುತ್ತದೆ. ಈ ಉದಾಹರಣೆಯನ್ನೇ ರೇಖಾಚಿತ್ರದ ಮೂಲಕ ವಿವರಿಸಿದರೆ ಆ ರೇಖೆಗೆ 'ಪೂರೈಕೆ ವಕ್ರರೇಖೆ' ಎನ್ನುವರು.

ಪೂರೈಕೆ ವಕ್ರರೇಖೆ : ಮೇಲಿನ ಪೂರೈಕೆಯ ಪಟ್ಟಿಯ ಆಧಾರದ ಮೇಲೆ ಪೂರೈಕೆಯ ರೇಖೆಯನ್ನು ಆಲೇಖನ 5 ರಲ್ಲಿನಂತೆ ರಚಿಸಬಹುದು.



ಆಲೇಖನ 5 : ಮಾವಿನ ಹಣ್ಣಿನ ಬೆಲೆಗೆ ಅನುಗುಣವಾಗಿ ಪೂರೈಕೆಯನ್ನು ರಚಿಸುವ ರೇಖೆ.

ಈ ಚಿತ್ರದಲ್ಲಿ ಹಣ್ಣುಗಳ ಪೂರೈಕೆಯನ್ನು OX ತಲಾಕ್ಷ ರೇಖೆಯ ಮೂಲಕ ಮತ್ತು ಅವುಗಳ ಬೆಲೆಯನ್ನು OY ಲಂಬಾಕ್ಷದ ಮೂಲಕ ತೋರಿಸಲಾಗಿದೆ. ಪೂರೈಕೆಯ ರೇಖೆಯು ಸಾಮಾನ್ಯವಾಗಿ ಯಾವಾಗಲೂ ಎಡದಿಂದ ಬಲಕ್ಕೆ ಏರುತ್ತದೆ. ಅಂದರೆ ಕಡಮೆ ಬೆಲೆ ಇದ್ದಾಗ ಕಡಮೆ ಪೂರೈಕೆಯು, ಹೆಚ್ಚು ಬೆಲೆ ಇರುವಾಗ ಹೆಚ್ಚು ಪೂರೈಕೆ ಆಗುವುದರಿಂದ ಪೂರೈಕೆ ರೇಖೆಯು ಎಡದಿಂದ ಬಲಕ್ಕೆ ಏರುತ್ತದೆ. ಮೇಲಿನ ರೇಖಾಚಿತ್ರದಿಂದ ಯಾವಬೆಲೆಗೆ ಎಷ್ಟು ಪ್ರಮಾಣದಲ್ಲಿ ಹಣ್ಣು ಪೂರೈಕೆ ಮಾಡಲಾಗುವುದೆಂಬುದು ಮನದಟ್ಟಾಗುತ್ತದೆ.

ಪೂರೈಕೆಯ ಸ್ಥಿತಿಸ್ಥಾಪಕತ್ವ : ಪೂರೈಕೆಯ ಸ್ಥಿತಿಸ್ಥಾಪಕತ್ವ ಎಂದರೆ ಬೆಲೆಯಲ್ಲಾಗುವ ಬದಲಾವಣೆಗಳು. ಅಂದರೆ ಪೂರೈಕೆಯು ಯಾವ ಪ್ರಮಾಣದಲ್ಲಿ (ಪ್ರಕಾರ) ಬದಲಾವಣೆಗಳನ್ನುಂಟು ಮಾಡುವುದು ಎಂಬುದನ್ನು ಇದು ತೋರಿಸುತ್ತದೆ. ಬೇಡಿಕೆಗೆ ಸ್ಥಿತಿಸ್ಥಾಪಕತ್ವ ಇದ್ದಂತೆ, ಪೂರೈಕೆಯು ಸ್ಥಿತಿಸ್ಥಾಪಕತ್ವವನ್ನು ಹೊಂದಿದೆ. ಪೂರೈಕೆ

ನಿಯಮವು ಬೆಲೆಗೂ ಮತ್ತು ಪೂರೈಕೆಗೂ ಇರುವ ನಿಕಟ ಸಂಬಂಧ ಸೂಚಿಸುತ್ತದೆ. ಆ ನಿಯಮದ ಪ್ರಕಾರ ಬೆಲೆ ಹೆಚ್ಚಾದಂತೆ ಪೂರೈಕೆಯು ಹೆಚ್ಚಾಗುತ್ತದೆ. ಬೆಲೆ ಕಡಮೆ ಯಾದಂತೆ ಪೂರೈಕೆ ಕಡಮೆಯಾಗುತ್ತದೆ. ವಸ್ತುಗಳ ಬೆಲೆಯಲ್ಲಿ ಮತ್ತು ಅವುಗಳ ಪೂರೈಕೆಯಲ್ಲಿ ಸರಿಸಮನಾದ ಬದಲಾವಣೆಗಳು ಆಗುವುದಿಲ್ಲ.

ಕೆಲವು ವಸ್ತುಗಳ ಬೆಲೆ ಸ್ವಲ್ಪ ಏರಿದರೂ ಅವುಗಳ ಪೂರೈಕೆಯ ಪ್ರಮಾಣವು ಬಹಳಷ್ಟು ಹೆಚ್ಚಾಗಬಹುದು ಅಥವಾ ಬೆಲೆಯು ಸ್ವಲ್ಪ ಇಳಿದರೂ ಅವುಗಳ ಪೂರೈಕೆಯ ಪ್ರಮಾಣವು ಬಹಳಷ್ಟು ಕಡಮೆಯಾಗಬಹುದು. ಇಂತಹ ಪೂರೈಕೆಗೆ ಹೆಚ್ಚಿನ ಸ್ಥಿತಿಸ್ಥಾಪಕತ್ವವಿರುವ ಪೂರೈಕೆ ಎನ್ನುವರು. ಕೆಲವು ವಸ್ತುಗಳ ಬೆಲೆಯು ಬಹಳಷ್ಟು ಏರಿದರೂ ಅಥವಾ ಇಳಿದರೂ ಅವುಗಳ ಪೂರೈಕೆಯ ಪ್ರಮಾಣವು ಸ್ವಲ್ಪ ಹೆಚ್ಚು ಅಥವಾ ಸ್ವಲ್ಪ ಕಡಮೆಯಾಗಬಹುದು. ಇಂತಹ ಪೂರೈಕೆಗೆ ಕಡಮೆ ಸ್ಥಿತಿ ಸ್ಥಾಪಕತ್ವವಿರುವ ಪೂರೈಕೆ ಎನ್ನುವರು. ಮತ್ತೆ ಕೆಲವು ವಸ್ತುಗಳ ಬೆಲೆಗಳು ಎಷ್ಟು ಪ್ರಮಾಣದಲ್ಲಿ ಏರುತ್ತವೆಯೋ ಅಥವಾ ಇಳಿಯುತ್ತವೆಯೋ ಅಷ್ಟೇ ಪ್ರಮಾಣ ದಲ್ಲಿ ಅವುಗಳ ಪೂರೈಕೆ ಹೆಚ್ಚಾಗುತ್ತದೆ ಅಥವಾ ಕಡಮೆಯಾಗುತ್ತದೆ. ಇಂತಹ ಪೂರೈಕೆಗೆ 'ಸರಿಸಮನಾದ ಸ್ಥಿತಿ ಸ್ಥಾಪಕತ್ವ' ಎಂದು ಕರೆಯುತ್ತಾರೆ. ಉದಾಹರಣೆಗೆ ಒಂದು ವಸ್ತುವಿನ ಬೆಲೆ ಶೇಕಡಾ 5 ಹೆಚ್ಚಾಗಿದ್ದು ಆ ವಸ್ತುವಿನ ಪೂರೈಕೆಯೂ ಶೇಕಡಾ 5 ಹೆಚ್ಚಾದಲ್ಲಿ ಆ ವಸ್ತುವಿನ ಸ್ಥಿತಿಸ್ಥಾಪಕತ್ವವು $1(\frac{5}{5})$ ಆಗುತ್ತದೆ. ಆ ವಸ್ತುವಿನ ಬೆಲೆಯು ಶೇಕಡಾ 5 ರಷ್ಟು ಹೆಚ್ಚಾಗಿ ಪೂರೈಕೆಯು ಶೇಕಡಾ 10 ಹೆಚ್ಚಾದರೆ ಅದು ಹೆಚ್ಚಿನ ಅಂದರೆ $2(\frac{10}{5})$, ಸ್ಥಿತಿಸ್ಥಾಪಕತ್ವವಿರುವ ಪೂರೈಕೆಯಾಗುತ್ತದೆ. ಕೆಲವು ವಸ್ತುಗಳ ಬೆಲೆಗಳು ಏರಿದರೂ, ಇಳಿದರೂ ಅವುಗಳ ಪೂರೈಕೆಯಲ್ಲಿ ಮಾತ್ರ ಯಾವ ಬದಲಾವಣೆ ಗಳೂ ಆಗುವುದಿಲ್ಲ. ಉದಾಹರಣೆಗೆ ಭೂಮಿ. ಭೂಮಿಯ ಬೆಲೆ ಏರಿದರೆ ಹೆಚ್ಚು ಭೂಮಿಯನ್ನು ಪೂರೈಸಲಾಗುವುದಿಲ್ಲ. ಭೂಮಿಯ ಬೆಲೆ ಕುಗ್ಗಿದರೆ ಭೂಮಿಯ ಪೂರೈಕೆಯನ್ನು ಕಡಮೆಮಾಡಲಾಗುವುದಿಲ್ಲ. ಇಂತಹ ಪೂರೈಕೆಗೆ 'ಸ್ಥಿತಿಸ್ಥಾಪಕತ್ವ ರಹಿತ ಪೂರೈಕೆ' ಎನ್ನುವರು. ಇದರಿಂದ ತಿಳಿದು ಬರುವುದೇನೆಂದರೆ ವಸ್ತುಗಳ ಬೆಲೆಯಲ್ಲಿ ಬದಲಾವಣೆಯಾದಂತೆಲ್ಲ ಅವುಗಳ ಪೂರೈಕೆಯಲ್ಲಾಗುವ ಬದಲಾವಣೆಗಳನ್ನು ಅಳೆಯು ವುದೇ ಪೂರೈಕೆಯ ಸ್ಥಿತಿಸ್ಥಾಪಕತ್ವ. ಪೂರೈಕೆಯ ಸ್ಥಿತಿಸ್ಥಾಪಕತ್ವವನ್ನು ಕಂಡು ಹಿಡಿಯಲು ಈ ಸೂತ್ರವನ್ನು ಬಳಸಬಹುದು.

$$\text{ಪೂರೈಕೆಯ ಸ್ಥಿತಿಸ್ಥಾಪಕತ್ವ} = \frac{\text{ಪೂರೈಕೆಯಲ್ಲಾದ ಬದಲಾವಣೆಯ ಪ್ರಮಾಣ}}{\text{ಬೆಲೆಯಲ್ಲಾದ ಬದಲಾವಣೆಯ ಪ್ರಮಾಣ}}$$

ಈ ಸೂತ್ರದಿಂದ ಪೂರೈಕೆಯ ಸ್ಥಿತಿಸ್ಥಾಪಕತ್ವವನ್ನು ಕಂಡುಹಿಡಿಯಬಹುದು.

ಸಮತೋಲನ ಬೆಲೆ ನಿರ್ಧರಿಸುವಿಕೆ

ವಸ್ತುವಿನ ಬೇಡಿಕೆ ಮತ್ತು ಪೂರೈಕೆಗಳು ಸಮನಾದಾಗ ಸಮತೋಲನ ಸ್ಥಿತಿ ಏರ್ಪಡುತ್ತದೆ. ಒಂದು ಸಂಸ್ಥೆಯು ಸಮತೋಲನವನ್ನು ಸಾಧಿಸಬೇಕಾದರೆ ಆ ಸಂಸ್ಥೆಯು ಸರಾಸರಿ ವೆಚ್ಚ ಮತ್ತು ಗಳಿಸಬಹುದಾದ ಆದಾಯಗಳೆರಡೂ ಸಮನಾದಾಗ ಮಾತ್ರ ಸಾಧ್ಯ. ಒಂದು ವಸ್ತುವಿನ ಬೆಲೆಯನ್ನು ನಿಗದಿಪಡಿಸುವ ಅಂಶ ಅದೇ ರೀತಿ ಆಗಿದೆ. ಆ ವಸ್ತುವಿನ ಪೂರೈಕೆ ಮತ್ತು ಬೇಡಿಕೆಗಳು ಸಮನಾದಾಗ ಮಾತ್ರ, ಮಾರುಕಟ್ಟೆಯಲ್ಲಿ ಒಂದು ನಿಶ್ಚಿತ ಕಾಲದಲ್ಲಿ, ಒಂದು ವಸ್ತುವಿಗೆ ಒಂದೇ ಬೆಲೆ ಇರುತ್ತದೆ. ಈ ಬೆಲೆಯು ಪೂರೈಕೆಯ ಪ್ರಮಾಣವನ್ನು ಬೇಡಿಕೆಯ ಪ್ರಮಾಣಕ್ಕೆ ಸರಿದೂಗಿಸುತ್ತದೆ. ಇದರಲ್ಲಿ ವ್ಯತ್ಯಾಸಗಳಿದ್ದರೂ ಅಂತಿಮವಾಗಿ ಪ್ರಭಾವವನ್ನು ಬೀರುವ ಬೇಡಿಕೆ ಮತ್ತು ಪೂರೈಕೆಯ ಶಕ್ತಿಗಳಿಂದ ಈ ಬೆಲೆಯು ನಿರ್ಧಾರವಾಗುತ್ತದೆ. ಅಂದರೆ ಈ ಬೆಲೆ ಬೇಡಿಕೆ ಮತ್ತು ಪೂರೈಕೆಗಳ ಸಮತೋಲನ ಸ್ಥಾನವನ್ನು ಸೂಚಿಸುತ್ತದೆ. ಇದರಿಂದ ಬೆಲೆಯ ನಿರ್ಧಾರದಲ್ಲಿ ಬೇಡಿಕೆ ಮತ್ತು ಪೂರೈಕೆಗಳ ಪಾತ್ರ ಎಷ್ಟು ಹಿರಿದು ಎನ್ನುವುದು ತಿಳಿಯುತ್ತದೆ. ಒಬ್ಬ ವ್ಯಕ್ತಿಯು ಒಂದು ನಿಶ್ಚಿತ ಕಾಲದಲ್ಲಿ ಒಂದು ಬೆಲೆಯಲ್ಲಿ ಕೊಳ್ಳುವ ವಸ್ತುವಿನ ಪ್ರಮಾಣವನ್ನು 'ಬೇಡಿಕೆ' ಎನ್ನುವರು. ಇದನ್ನು ಹಣದ ಬೆಲೆಯಲ್ಲಿ ಅಳೆಯುವರು. ಒಂದು ನಿಶ್ಚಿತ ಕಾಲದಲ್ಲಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಿರುವ ಪ್ರಮಾಣವನ್ನು 'ಪೂರೈಕೆ' ಎಂದು ಕರೆಯುವರು. ಪೂರೈಕೆಯ ಪ್ರಮಾಣಕ್ಕೆ ಮತ್ತು ಬೆಲೆಗೆ ನೇರವಾದ ಸಂಬಂಧವಿದೆ. ವಸ್ತುವಿನ ಬೆಲೆ ಹೆಚ್ಚಿಗೆ ಇದ್ದಾಗ ಅದಕ್ಕೆ ಬೇಡಿಕೆ ಕಡಮೆ ಇರುತ್ತದೆ. ಬೆಲೆ ಕಡಮೆ ಇದ್ದಾಗ ಅದಕ್ಕೆ ಬೇಡಿಕೆ ಹೆಚ್ಚಿಗೆ ಇರುತ್ತದೆ. ಪೂರೈಕೆ ಕಡಮೆ ಇರುತ್ತದೆ. ಮಾರಾಟಗಾರರಲ್ಲಿ ಮತ್ತು ಗ್ರಾಹಕರಲ್ಲಿ ಸಾಮಾನ್ಯವಾಗಿ ಪೈಪೋಟಿ ಮುಖ್ಯವಾಗಿರುತ್ತದೆ. ಮಾರಾಟಗಾರರು ಯಾವಾಗಲೂ ತಮ್ಮ ವಸ್ತುಗಳನ್ನು ಆದಷ್ಟು ಹೆಚ್ಚು ಬೆಲೆಯಲ್ಲಿ ಮಾರಲು ಇಷ್ಟಪಡುತ್ತಾರೆ. ಹಾಗೆಯೇ ಬಳಕೆದಾರರು ಅತಿ ಕಡಮೆ ಬೆಲೆಯಲ್ಲಿ ವಸ್ತುಗಳನ್ನು ಕೊಳ್ಳಲು ಪ್ರಯತ್ನಿಸುತ್ತಾರೆ. ಒಬ್ಬ ಮಾರಾಟಗಾರನು ಒಂದು ವಸ್ತುವನ್ನು ಇತರ ಮಾರಾಟಗಾರರಿಗಿಂತಲೂ ಕಡಮೆ ಬೆಲೆಗೆ ಮಾರಿದರೆ ಎಲ್ಲ ಬಳಕೆದಾರರೂ ಅವನಿಂದಲೇ ಆ ವಸ್ತುಗಳನ್ನು ಕೊಳ್ಳುತ್ತಾರೆ. ಇದರ ಫಲವಾಗಿ ಇತರ ಮಾರಾಟಗಾರರೂ ಸಹ ತಮ್ಮ ವಸ್ತುಗಳ ಬೆಲೆಯನ್ನು ಇಳಿಸಬೇಕಾಗುತ್ತದೆ. ಹಾಗೆಯೇ ಒಬ್ಬ ಗ್ರಾಹಕನು ಒಂದು ವಸ್ತುವಿಗೆ ಇತರರಿಗಿಂತಲೂ ಹೆಚ್ಚಿನ ಬೆಲೆಯನ್ನು ಕೊಡಲು ತಯಾರಿದ್ದರೆ, ಎಲ್ಲ ಮಾರಾಟಗಾರರೂ ಅವನಿಗೇ ಮಾರಲು ಇಷ್ಟಪಡುತ್ತಾರೆ. ಇದರಿಂದ ಇತರರು ಹೆಚ್ಚಿನ ಬೆಲೆಯನ್ನು ಕೊಡಲು ಸಿದ್ಧವಾಗಿರಬೇಕಾಗುತ್ತದೆ. ಈ ರೀತಿ ಬೇಡಿಕೆ ಮತ್ತು ಪೂರೈಕೆಗಳ ಸಂಬಂಧದಿಂದ ಬೆಲೆಯು ನಿರ್ಧಾರವಾಗುತ್ತದೆ.

ಆಲ್‌ಫ್ರೆಡ್ ಮಾರ್ಷಲ್ ಬೆಲೆ ನಿರ್ಧರಿಸುವಿಕೆಗೆ ಮಹತ್ವದ ಸ್ಥಾನವನ್ನು ಕೊಟ್ಟಿದ್ದಾನೆ. ಯಾವುದೇ ವಸ್ತುವಿನ ಬೆಲೆಯನ್ನು ನಿರ್ಧರಿಸುವಾಗ ಬೇಡಿಕೆ ಮತ್ತು

ಪೂರೈಕೆಗಳೆರಡೂ ತಮ್ಮ ಪ್ರಭಾವ ಬೀರುತ್ತವೆ. ವಸ್ತುವಿನ ಮೌಲ್ಯ ನಿರ್ಧರಿಸುವಾಗ ಪೂರೈಕೆ ಎಷ್ಟು ಪ್ರಧಾನವೋ ಬೇಡಿಕೆಯೂ ಅಷ್ಟೇ ಪ್ರಧಾನವಾದುದು. ಇದನ್ನು ಮಾರ್ಷಲ್ ಒಂದು ಕತ್ತರಿಯ ಉದಾಹರಣೆಯ ಮೂಲಕ ಸ್ಪಷ್ಟಪಡಿಸಿದ್ದಾನೆ. ಕತ್ತರಿಯ ಎರಡು ಅಲಗುಗಳು ಸೇರಿದಾಗ ಮಾತ್ರ ಯಾವುದಾದರೂ ವಸ್ತುವನ್ನು ಕತ್ತರಿಸುವುದು ಸಾಧ್ಯ. ಹಾಗೆಯೇ ಬೇಡಿಕೆ ಮತ್ತು ಪೂರೈಕೆಗಳು ಕತ್ತರಿಯ ಎರಡು ಅಲಗುಗಳಿದ್ದಂತೆ. ಒಂದು ಬಟ್ಟೆಯನ್ನು ಕತ್ತರಿಸುವ ಕ್ರಿಯೆಯಲ್ಲಿ ಎರಡೂ ಅಲಗುಗಳೂ ಸಮಾನವಾದ ಪಾತ್ರ, ವಹಿಸುವಂತೆ ವಸ್ತುವಿನ ಬೆಲೆಯನ್ನು ನಿರ್ಧರಿಸುವಲ್ಲಿ ಪೂರೈಕೆ, ಬೇಡಿಕೆಗಳು ಸಮನಾದ ಪಾತ್ರವಹಿಸುತ್ತವೆ. ಕೇವಲ ಕತ್ತರಿಯ ಒಂದೇ ಅಲಗಿನಿಂದ ಬಟ್ಟೆಯನ್ನು ಕತ್ತರಿಸುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಕೇವಲ ಪೂರೈಕೆ ಅಥವಾ ಬೇಡಿಕೆಯೊಂದರಿಂದಲೇ ವಸ್ತುವಿನ ಬೆಲೆಯನ್ನು ನಿರ್ಧರಿಸಲಾಗುವುದಿಲ್ಲ. ಪೂರೈಕೆ ಮತ್ತು ಬೇಡಿಕೆಗಳು ಎರಡೂ ಸಮನಾಗಿರದಿದ್ದರೆ ಏನಾಗುವುದೆಂಬುವನ್ನು ಪರಿಶೀಲಿಸೋಣ. ಪೂರೈಕೆ ಕಡಮೆ ಇದ್ದಾಗ ಬೇಡಿಕೆಯು ಹೆಚ್ಚಿದ್ದರೆ ಬೆಲೆ ಏರುತ್ತದೆ. ಹಾಗೆಯೇ ಪೂರೈಕೆ ಹೆಚ್ಚು ಇದ್ದು, ಬೇಡಿಕೆ ಕಡಮೆಯಾದರೆ ಬೆಲೆ ಇಳಿಯುತ್ತದೆ. ಪೂರೈಕೆ ಮತ್ತು ಬೇಡಿಕೆಗಳು ಸಮನಾಗಿದ್ದಾಗ ಬೆಲೆಯನ್ನು ನಿರ್ಧರಿಸುವುದು ಸುಲಭ ವಾಗುತ್ತದೆ. ಆದರೆ ಬೇಡಿಕೆಯು ಪರಿಸರ ಉಪಯುಕ್ತತೆಯ ಮೂಲಕ ಪೂರೈಕೆ ಪರಿಸರ ವೆಚ್ಚದ ಮೂಲಕವೂ ವಸ್ತುವಿನ ಬೆಲೆಯನ್ನು ನಿರ್ಧರಿಸುತ್ತದೆ.

ಬೇಡಿಕೆ ಪೂರೈಕೆಗಳು ಒಂದರ ವಿರುದ್ಧ ಮತ್ತೊಂದು ಇದ್ದು ಕೆಲವು ವೇಳೆ ಅವೆರಡೂ ಒಂದು ಸ್ಥಿತಿಗೆ ಬಂದು ಸಮತೋಲನಸ್ಥಿತಿ ಏರ್ಪಡುತ್ತದೆ. ಈ ರೀತಿಯ ಸಮತೋಲನಸ್ಥಿತಿ ಯಾವ ರೀತಿ ಏರ್ಪಡುವುದು ಎಂಬುದನ್ನು ತಿಳಿದುಕೊಳ್ಳಲು ಬೇಡಿಕೆಯ ಪಟ್ಟಿ ಹಾಗೂ ಪೂರೈಕೆಯ ಪಟ್ಟಿಯು ಅತ್ಯಾವಶ್ಯಕ.


ಕೋಷ್ಟಕ 7

ಮಾವಿನ ಹಣ್ಣಿನ ಬೆಲೆಗೆ ಅನುಗುಣವಾಗಿ ಬೇಡಿಕೆ ಮತ್ತು ಪೂರೈಕೆ

ಬೆಲೆ (ಡಜನ್ನಿಗೆ ರೂಪಾಯಿಗಳಲ್ಲಿ)	ಬೇಡಿಕೆ (ಡಜನ್‌ಗಳಲ್ಲಿ)	ಪೂರೈಕೆ (ಡಜನ್‌ಗಳಲ್ಲಿ)
5	10	50
4	20	40
3	30	30
2	40	20
1	50	10

ಹಣ್ಣಿನ ಬೆಲೆಯು ಡಜನ್ನಿಗೆ 5 ರೂಪಾಯಿಗಳಿದ್ದಾಗ 10 ಡಜನ್‌ಗಳಿಗೆ ಬೇಡಿಕೆ ಬರುತ್ತದೆ. ಆದರೆ 50 ಡಜನ್ ಹಣ್ಣುಗಳನ್ನು ಪೂರೈಸಲಾಗುತ್ತದೆ. ಮುಂದೆ ಬೆಲೆ 5 ರೂಪಾಯಿಗಳಿಂದ 4 ರೂಪಾಯಿಗಳಿಗೆ ಇಳಿದರೆ ಬೇಡಿಕೆ 10 ಡಜನ್‌ಗಳಿಂದ 20 ಡಜನ್‌ಗಳಿಗೆ ಏರುತ್ತದೆ. ಆದರೆ ಪೂರೈಕೆಯು 50 ಡಜನ್‌ಗಳಿಂದ 40 ಡಜನ್‌ಗಳಿಗೆ ಇಳಿಯುತ್ತದೆ. ಈ ರೀತಿ ಬೇಡಿಕೆ ಹಾಗೂ ಪೂರೈಕೆಗಳ ನಡುವೆ ಘರ್ಷಣೆಯುಂಟಾಗಿ, ಅಂದರೆ ಬಳಕೆದಾರರ ಹಾಗೂ ಮಾರಾಟಗಾರರ ಚೌಕಾಸಿಯಿಂದ ಬೆಲೆಯು 3 ರೂಪಾಯಿಗಳಿಗೆ ಇಳಿದು. 30 ಡಜನ್‌ಗಳಿಗೆ ಬೇಡಿಕೆಯುಂಟಾಗಿ 30 ಡಜನ್‌ಗಳನ್ನು ಪೂರೈಸಲಾಗುವುದು. ಈ ಸಂದರ್ಭದಲ್ಲಿ ಬೇಡಿಕೆ 30 ಡಜನ್‌ಗಳು, ಪೂರೈಕೆಯು 30 ಡಜನ್‌ಗಳಾಗಿದ್ದು, ಬೆಲೆಯನ್ನು ಡಜನ್‌ಗೆ 3 ರೂಪಾಯಿಗಳಂತೆ ನಿರ್ಧರಿಸಲಾಗುತ್ತದೆ. ಈ ಬೆಲೆಗೆ 'ಸಮತೋಲನಬೆಲೆ' ಎಂದು ಕರೆಯುವರು. ಅಂತಹ ಸ್ಥಿತಿಗೆ 'ಸಮತೋಲನಸ್ಥಿತಿ' ಎನ್ನುವರು. ಮತ್ತೊಂದು ಹೆಜ್ಜೆ ಮುಂದಾಗಿ ಬೆಲೆಯು 3 ರೂಪಾಯಿಗಳಿಂದ 2 ರೂಪಾಯಿಗಳಿಗೆ ಇಳಿದರೆ ಬೇಡಿಕೆ 40 ಡಜನ್‌ಗಳಿಗೆ ಏರುತ್ತದೆ, ಪೂರೈಕೆ 20 ಡಜನ್‌ಗಳಿಗೆ ಕುಗ್ಗುತ್ತದೆ. ಕೊನೆಯಲ್ಲಿ 1 ರೂಪಾಯಿ ಆದಾಗ 50 ಡಜನ್‌ಗಳಿಗೆ ಬೇಡಿಕೆ ಇದ್ದು ಕೇವಲ 10 ಡಜನ್‌ಗಳನ್ನು ಮಾತ್ರ ಪೂರೈಸಲಾಗುವುದು. ಬೇಡಿಕೆಯು ಪ್ರಮಾಣವು ಬೆಲೆಗೆ ವಿಪರ್ಯಯವಾಗಿರುವುದರಿಂದಲೂ, ಪೂರೈಕೆಯ ಪ್ರಮಾಣವು ಬೆಲೆಗೆ ನೇರವಾಗಿ ಸಂಬಂಧಪಟ್ಟಿರುವುದರಿಂದಲೂ, ಇವೆರಡರ ಪ್ರಮಾಣಗಳು ಒಂದು ಬೆಲೆಯಲ್ಲಿ ಸರಿದೂಗುತ್ತವೆ. ಸಾಮಾನ್ಯವಾಗಿ ಬೇಡಿಕೆಗಿಂತಲೂ ಪೂರೈಕೆಯ ಪ್ರಮಾಣವು ಹೆಚ್ಚಾದರೆ ಮಾರುಕಟ್ಟೆಯಲ್ಲಿ ಬೆಲೆಗಳು ಇಳಿಯುತ್ತವೆ. ಬೇಡಿಕೆಯು ಪೂರೈಕೆಯ ಪ್ರಮಾಣಕ್ಕಿಂತಲೂ ಹೆಚ್ಚಾದರೆ ಮಾರುಕಟ್ಟೆಯಲ್ಲಿ ಬೆಲೆಗಳು ಏರುತ್ತವೆ. ಬೇಡಿಕೆಯ ನಿಯಮದ ಅನ್ವಯ, ಏರುವ ಬೆಲೆಗಳಿಂದ ಬೇಡಿಕೆ ಕಡಿಮೆಯಾಗುತ್ತದೆ, ಇಳಿಯುವ ಬೆಲೆಗಳು ಅದನ್ನು ಹೆಚ್ಚಿಸುತ್ತವೆ. ಪೂರೈಕೆಯ ನಿಯಮದ ಅನ್ವಯ, ಏರುವ ಬೆಲೆಗಳಿಂದ ಪೂರೈಕೆಯು ಹೆಚ್ಚುತ್ತದೆ, ಇಳಿಯುವ ಬೆಲೆಗಳು ಅದನ್ನು ಕಡಿಮೆ ಮಾಡುತ್ತವೆ. ಇದನ್ನು ಆಲೇಖನ ಚಿತ್ರ 6 ರಲ್ಲಿನಂತೆ ವಿವರಿಸಬಹುದು.

ಆಲೇಖನ ಚಿತ್ರ 6 ರಲ್ಲಿ OX ರೇಖೆಯಲ್ಲಿ ಬೇಡಿಕೆ ಮತ್ತು ಪೂರೈಕೆಯ ಪ್ರಮಾಣವನ್ನೂ, OY ರೇಖೆಯಲ್ಲಿ ಬೆಲೆಯನ್ನೂ ತೋರಿಸಿದೆ. SS^1 ರೇಖೆಯು ಪೂರೈಕೆ ರೇಖೆ. ಈ ರೇಖೆಯು ಬೆಲೆಗಳು ಹೆಚ್ಚಿದಂತೆಲ್ಲ, ಪೂರೈಕೆಯ ಪ್ರಮಾಣವು ಹೆಚ್ಚುತ್ತದೆಂಬುದನ್ನು ತೋರಿಸುತ್ತದೆ. DD^1 ರೇಖೆಯು ಬೇಡಿಕೆಯ ರೇಖೆ. ಈ ರೇಖೆ ಮೇಲಿನಿಂದ ಕೆಳಗಿಳಿಯುತ್ತದೆ. ಅಂದರೆ ಬೆಲೆ ಇಳಿದಂತೆಲ್ಲ ಬೇಡಿಕೆಯ ಪ್ರಮಾಣ ಹೆಚ್ಚುತ್ತ ಹೋಗುವುದೆಂಬುದನ್ನು ಈ ಆಲೇಖನ ಚಿತ್ರ ತೋರಿಸುತ್ತದೆ. ಬೇಡಿಕೆ ಮತ್ತು ಪೂರೈಕೆ ರೇಖೆಗಳು ವಿಮುಖ ದಿಕ್ಕುಗಳಲ್ಲಿ ಸಂಚರಿಸಿ, ಒಂದೆಡೆ ಸಂಧಿಸಲೇ



ಆಲೇಖನ 6 : ಬೇಡಿಕೆ ಮತ್ತು ಪೂರೈಕೆ ರೇಖೆಗಳು

ಬೇಕು. ಈ ಆಲೇಖನ ಚಿತ್ರದಲ್ಲಿ ಈ ಎರಡೂ ರೇಖೆಗಳು K ಎಂಬಲ್ಲಿ ಸಂಧಿಸಿವೆ. ಈ ಬಿಂದುವಿನಲ್ಲಿ ಬೇಡಿಕೆಯು ಪೂರೈಕೆಗೆ ಸಮನಾಗಿದೆ (ಬೇಡಿಕೆ=ಪೂರೈಕೆ). ಈ ಬಿಂದುವನ್ನು 'ಸಮತೋಲನ ಬಿಂದು' ಎನ್ನುವರು. ಈ ಸಮತೋಲನ ಸ್ಥಿತಿಯಲ್ಲಿ ಹಣ್ಣಿನ ಬೆಲೆಯು ಡಜನ್ನಿಗೆ 3 ರೂಪಾಯಿಗಳಾಗಿದ್ದು, ಬೇಡಿಕೆ ಮತ್ತು ಪೂರೈಕೆಗಳು 30 ಡಜನ್‌ಗಳಾಗಿರುತ್ತವೆ. ಅಂದರೆ ಬೇಡಿಕೆ ಹಾಗೂ ಪೂರೈಕೆಗಳೆರಡೂ ಸಮನಾದಾಗ ಸಮತೋಲನ ಉಂಟಾಗುತ್ತದೆ. ಅವೆರಡರ ಸಮತೋಲನವನ್ನುಂಟುಮಾಡುವ ಬೆಲೆಯೇ 'ಸಮತೋಲನ ಬೆಲೆ'. ಈ ಬೆಲೆಯು ಶಾಶ್ವತವಾದ ಬೆಲೆಯಲ್ಲ. ಕಾಲ ಕ್ರಮದಲ್ಲಿ ಏರಿಳಿತಗಳುಂಟಾಗುತ್ತವೆ.

ಮಾರುಕಟ್ಟೆ

ಸಾಮಾನ್ಯ ಅರ್ಥದಲ್ಲಿ ಮಾರುಕಟ್ಟೆ ಎಂದರೆ ವಸ್ತುಗಳನ್ನು ಕೊಳ್ಳುವ ಹಾಗೂ ಮಾರಾಟ ಮಾಡುವ ಒಂದು ನಿರ್ದಿಷ್ಟ ಸ್ಥಳ. ಆದರೆ ಅರ್ಥಶಾಸ್ತ್ರದಲ್ಲಿ 'ಮಾರುಕಟ್ಟೆ' ಎಂಬ ಶಬ್ದಕ್ಕೆ ವಿಶೇಷ ಅರ್ಥವಿದೆ. ಮಾರುವವರು ಕೊಳ್ಳುವವರು ಸಂಪರ್ಕ ಹೊಂದಿರುವ ವ್ಯಾಪಾರ ಕ್ಷೇತ್ರಕ್ಕೆ ಮಾರ್ಕೆಟ್ಟು ಅಥವಾ ಮಾರುಕಟ್ಟೆ ಎಂದು ಹೇಳುವರು. ಆದರೆ ಮಾರುವವರಿಗೆ ಮತ್ತು ಕೊಳ್ಳುವವರಿಗೆ ನೇರವಾಗಿ ಸಂಪರ್ಕವಿರಲೇಬೇಕೆಂಬ ನಿಯಮವಿಲ್ಲ. ಆಧುನಿಕ ಸಂಪರ್ಕಗಳ ಮೂಲಕ ಮಾರುವವರು, ಕೊಳ್ಳುವವರು ದೂರದಿಂದಲೇ ವ್ಯವಹರಿಸಬಹುದು. ಅಂದರೆ ಒಂದು ಪದಾರ್ಥದ ವ್ಯಾಪಾರ

ಕ್ಷೇತ್ರವು ಆ ವಸ್ತುವಿನ ಮಾರುಕಟ್ಟೆಯಾಗುತ್ತದೆ. ಬೆಂಗಳೂರಿನ ಒಬ್ಬ ವ್ಯಾಪಾರಿಯು ಟೆಲಿಫೋನಿನ ಮೂಲಕ ಲಂಡನ್ನಿನಲ್ಲಿರುವ ಮತ್ತೊಬ್ಬ ವ್ಯಾಪಾರಿಯೊಡನೆ ಮಾತನಾಡಿ 1500 ಕ್ವಿಂಟಾಲ್ ಸಿಲ್ಕ್ ಮಾರಲು ಒಪ್ಪಿಕೊಂಡರೆ ಅಲ್ಲೇ ಮಾರುಕಟ್ಟೆಯು ಹುಟ್ಟಿ ತೆನ್ನಬಹುದು. ಇಲ್ಲಿ ವ್ಯಾಪಾರಿ ಮತ್ತು ಗಿರಾಕಿಗಳು ಒಂದೆಡೆ ಸೇರದಿದ್ದರೂ ಬೆಂಗಳೂರಿನ ವ್ಯಾಪಾರಿ ಲಂಡನ್ನಿನ ಗಿರಾಕಿಯೊಂದಿಗೆ ವ್ಯಾಪಾರ ಮುಗಿಸಿದರೆ ಅಲ್ಲಿ ಮಾರುಕಟ್ಟೆಯು ರೂಪ ತಾಳಿತು ಎನ್ನುವುದು ಅರ್ಥಶಾಸ್ತ್ರಜ್ಞರ ಅಭಿಪ್ರಾಯ. ಅರ್ಥಶಾಸ್ತ್ರದಲ್ಲಿ ಅಂಗಡಿಗಳಿಲ್ಲದೆ, ಪದಾರ್ಥಗಳಿಲ್ಲದೆ, ವ್ಯಾಪಾರಿ ಹಾಗೂ ಗಿರಾಕಿಗಳ ಮಿಲನವಿಲ್ಲದೆ ಮಾರುಕಟ್ಟೆಯಾಗುತ್ತದೆ. ಈ ದೃಷ್ಟಿಯಲ್ಲಿ ಮಾರುಕಟ್ಟೆ ಕೇವಲ ಒಂದು ನಿರ್ದಿಷ್ಟ ಸ್ಥಳಕ್ಕೆ ಅನ್ವಯಿಸುವುದಿಲ್ಲ. ಇದು ಇಡೀ ವಿಶ್ವಕ್ಕೇ ವ್ಯಾಪಿಸಬಹುದು. ಆದರೆ ಮಾರುಕಟ್ಟೆಯ ವಿಸ್ತಾರವು ಪದಾರ್ಥವನ್ನು ಕೊಳ್ಳುವವರ ಹಾಗೂ ಮಾರುವವರನ್ನು ಅವಲಂಬಿಸಿರುತ್ತದೆ. ಮಾರ್ಷಲ್ ಪ್ರಕಾರ ಮಾರುಕಟ್ಟೆ ಎಂದರೆ, ಕೊಳ್ಳುವವರ ಮತ್ತು ಮಾರುವವರ ಪರಸ್ಪರ ಸಂಬಂಧವು ಹೆಚ್ಚಾಗಿರುವ ಪ್ರದೇಶ. ಮಾರುಕಟ್ಟೆ ವಿಸ್ತಾರದ ನಿರ್ಧಾರದಲ್ಲಿ ಪದಾರ್ಥಗಳ ಸಾಗಣೆ ಮತ್ತು ಸಾಗು ವೆಚ್ಚಗಳು ಬಹಳ ಮುಖ್ಯ ಪಾತ್ರವನ್ನು ವಹಿಸುತ್ತವೆ. ಮಂದಗತಿಯ ಹಾಗೂ ಅತಿ ವೆಚ್ಚದ ಸಾಗಣೆಯ ವ್ಯವಸ್ಥೆಗಳಿಂದ ಪದಾರ್ಥಗಳನ್ನು ಮಾರಾಟ ಮಾಡುವುದು ಕಷ್ಟ ಮತ್ತು ಅದು ಫಲಕಾರಿಯೂ ಆಗುವುದಿಲ್ಲ. ಅವಶ್ಯಕತೆಯ ಪದಾರ್ಥಗಳಿಗೆ ಸಾಗುವೆಚ್ಚ ಮತ್ತು ದೂರವು ಮುಖ್ಯವಲ್ಲ. ಏಕೆಂದರೆ ಈ ಪದಾರ್ಥಗಳ ಬೆಲೆ ಎಷ್ಟಾದರೂ, ಅವು ಅಗತ್ಯವಾಗಿ ಬೇಕಾಗಿರುವುದರಿಂದ ವ್ಯಕ್ತಿಯು ಕೊಳ್ಳಲೇಬೇಕಾಗುತ್ತದೆ. ಹೀಗೆ ಈ ಪದಾರ್ಥಗಳಿಗೆ ವಿಸ್ತಾರವಾದ ಮಾರುಕಟ್ಟೆಗಳಿವೆ.

ಮಾರುಕಟ್ಟೆ ಬಗೆಗಳು : ಮಾರುಕಟ್ಟೆಗಳು ಮುಖ್ಯವಾಗಿ (i) ಭೌಗೋಳಿಕ ಮಾರುಕಟ್ಟೆಗಳು (ii) ಪದಾರ್ಥಗಳ ಪೇಟೆಗಳು (iii) ಪರಿಪೂರ್ಣ ಮಾರುಕಟ್ಟೆಗಳು (iv) ಅಪರಿಪೂರ್ಣ ಮಾರುಕಟ್ಟೆಗಳು ಹಾಗೂ (v) ಏಕಸ್ವಾಮ್ಯವಾದಿ ಮಾರುಕಟ್ಟೆಗಳೆಂದು ಐದು ಬಗೆಯವಾಗಿವೆ.

(i) **ಭೌಗೋಳಿಕ ಮಾರುಕಟ್ಟೆಗಳು :** ಮಾರುಕಟ್ಟೆಗಳನ್ನು ಭೌಗೋಳಿಕ ಅಂಶಗಳ ಆಧಾರದ ಮೇಲೆ (ಅ) ಸ್ಥಳೀಯ ಮಾರುಕಟ್ಟೆಗಳು (ಆ) ರಾಷ್ಟ್ರೀಯ ಮಾರುಕಟ್ಟೆಗಳು ಹಾಗೂ (ಇ) ಅಂತರರಾಷ್ಟ್ರೀಯ ಮಾರುಕಟ್ಟೆಗಳೆಂದು ಪುನಃ ವಿಂಗಡಿಸಬಹುದು.

(ಅ) **ಸ್ಥಳೀಯ ಮಾರುಕಟ್ಟೆಗಳು :** ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ರೂಪುಗೊಂಡಿರುವ ಮಾರುಕಟ್ಟೆಗಳಿಗೆ 'ಸ್ಥಳೀಯ ಮಾರುಕಟ್ಟೆಗಳು' ಎನ್ನಬಹುದು. ಈ ಮಾರುಕಟ್ಟೆಗಳಲ್ಲಿ ಮಾರಾಟವಾಗುವ ವಸ್ತುಗಳು ಸಾಮಾನ್ಯವಾಗಿ ಹಳ್ಳಿಗಳಿಂದ ಹಾಗೂ ಪಟ್ಟಣಗಳಿಂದ ಹೊರಗಡೆ ಹೋಗುವುದಿಲ್ಲ. ಹಾಲು, ಮೊಸರು, ಬೆಣ್ಣೆ, ತುಪ್ಪ, ಹೂ,

ತರಕಾರಿ ಇತ್ಯಾದಿಗಳು ಸ್ಥಳೀಯ ಮಾರುಕಟ್ಟೆಗಳಲ್ಲಿಯೇ ಮಾರಾಟ ಮಾಡಲ್ಪಡುತ್ತವೆ. ಈ ವಸ್ತುಗಳು ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಪಡೆದಿರುವುದಿಲ್ಲ. ಏಕೆಂದರೆ ಇವು ಅತಿ ಶೀಘ್ರದಲ್ಲಿ ಕೊಳೆತು ನಾಶವಾಗುವ ಪದಾರ್ಥಗಳು.

(ಆ) **ರಾಷ್ಟ್ರೀಯ ಮಾರುಕಟ್ಟೆಗಳು :** ಯಾವುದೇ ಪದಾರ್ಥಗಳಿಗೆ ಇಡೀ ರಾಷ್ಟ್ರದಲ್ಲಿ ಬೇಡಿಕೆ ಇದ್ದರೆ ಅಂತಹ ವಸ್ತುಗಳಿಗೆ ರಾಷ್ಟ್ರೀಯ ಮಾರುಕಟ್ಟೆ ಇದೆ ಎಂದು ಹೇಳಬಹುದು. ಸಿಮೆಂಟ್, ಉಕ್ಕು, ಬಟ್ಟೆ, ಎಣ್ಣೆ ಇತ್ಯಾದಿ ವಸ್ತುಗಳಿಗೆ ರಾಷ್ಟ್ರೀಯ ಮಾರುಕಟ್ಟೆ ಇದೆ. ಇವು ಸಾಗಿಸಬಹುದಾದ ಪದಾರ್ಥಗಳು. ಇವನ್ನು ಸಾಗಿಸಲು ಉತ್ತಮ ಸಾರಿಗೆ ಸಂಪರ್ಕಗಳ ಸೌಲಭ್ಯ ಅತ್ಯಾವಶ್ಯಕ. ಇಂದು ಸಣ್ಣ ಸಣ್ಣ ರಾಷ್ಟ್ರಗಳಲ್ಲೂ ಅನೇಕ ಪದಾರ್ಥಗಳಿಗೆ ಇಡಿಯ ರಾಷ್ಟ್ರದ ಮಾರುಕಟ್ಟೆ ಇದೆ. ಅತಿವೇಗದ ಸಂಚಾರ ಸೌಕರ್ಯಗಳ ಅಭಿವೃದ್ಧಿಯು ಇದಕ್ಕೆ ಕಾರಣವೆನ್ನಬಹುದು.

(ಇ) **ಅಂತರರಾಷ್ಟ್ರೀಯ ಮಾರುಕಟ್ಟೆ :** ಕೆಲವು ವಸ್ತುಗಳು ಬೇರೆ ಬೇರೆ ರಾಷ್ಟ್ರಗಳಲ್ಲಿ ಮಾರುಕಟ್ಟೆಯನ್ನು ಹೊಂದಿರುತ್ತವೆ. ಚಿನ್ನ, ಬೆಳ್ಳಿಗಳು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಮಾರಾಟವಾಗುವುವು. ಈ ವಸ್ತುಗಳ ಬೆಲೆಗಳು ಮುಖ್ಯ ವ್ಯಾಪಾರ ಕೇಂದ್ರಗಳಾದ ಲಂಡನ್, ನ್ಯೂಯಾರ್ಕ್, ಪ್ಯಾರಿಸ್, ಮುಂಬೈ ಮುಂತಾದ ಪಟ್ಟಣಗಳಲ್ಲಿ ಪ್ರಕಟಿಸಲ್ಪಡುತ್ತವೆ. ವಿದೇಶಗಳಲ್ಲಿ ಮಾರಾಟವಾಗುವ ವಸ್ತುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಗಳೆಂದು ಹೇಳಬಹುದು.

(ii) **ಪದಾರ್ಥಗಳ ಮಾರುಕಟ್ಟೆಗಳು :** ಪದಾರ್ಥಗಳ ಆಧಾರದ ಮೇಲೂ ಮಾರುಕಟ್ಟೆಗಳನ್ನು ಹತ್ತಿಯ ಮಾರುಕಟ್ಟೆ, ಚಿನ್ನದ ಮಾರುಕಟ್ಟೆ, ಎಣ್ಣೆಯ ಮಾರುಕಟ್ಟೆ ಇತ್ಯಾದಿಯಾಗಿ ವಿಂಗಡಿಸಬಹುದು. ಈ ಎಲ್ಲ ವಸ್ತುಗಳು ತಮ್ಮದೇ ಆದ ಮಾರುಕಟ್ಟೆಯನ್ನು ಹೊಂದಿದ್ದು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಖ್ಯಾತಿಯನ್ನು ಪಡೆದಿರುತ್ತವೆ.

ಮಿಕ್ಕ ಮೂರು, ಪೈಪೋಟಿಯ ಆಧಾರದ ಮೇಲೆ ವಿಂಗಡಿಸಲ್ಪಟ್ಟಿವೆ. ಅವುಗಳೆಂದರೆ :

(iii) **ಪರಿಪೂರ್ಣ ಮಾರುಕಟ್ಟೆಗಳು :** ಪರಿಪೂರ್ಣ ಮಾರುಕಟ್ಟೆಯಲ್ಲಿ ಪೈಪೋಟಿಯು ಪರಿಪೂರ್ಣವಾಗಿರುತ್ತದೆ. ಪರಿಪೂರ್ಣ ಮಾರುಕಟ್ಟೆಯು ಕೆಲವು ಲಕ್ಷಣಗಳನ್ನು ಹೊಂದಿರುತ್ತದ.

(ಅ) ಪರಿಪೂರ್ಣ ಮಾರುಕಟ್ಟೆಯಲ್ಲಿ ಅಸಂಖ್ಯಾತ ವ್ಯಾಪಾರಿಗಳು, ಗಿರಾಕಿಗಳು ಇರಬೇಕು.

(ಆ) ವ್ಯಾಪಾರಿಗಳಲ್ಲಿ, ಗಿರಾಕಿಗಳಲ್ಲಿ ಸಂಪೂರ್ಣವಾದ ಪೈಪೋಟಿ ಇರಬೇಕು.

(ಇ) ವ್ಯಾಪಾರಿಗಳಿಗೂ, ಗಿರಾಕಿಗಳಿಗೂ ಮಾರುಕಟ್ಟೆಯ ಸಂಪೂರ್ಣ ಪರಿಜ್ಞಾನ ವಿರಬೇಕು. ಅಂದರೆ ಅವರಿಗೆ ಎಲ್ಲಿ, ಯಾವಾಗ, ಯಾವ ವಸ್ತುವಿಗೆ ಎಷ್ಟು ಧಾರಣೆ ಇದೆ ಎಂಬುದು ಗೊತ್ತಿರಬೇಕು.

(ಈ) ಮಾರಾಟದ ಪದಾರ್ಥಗಳನ್ನು ಮಾರುಕಟ್ಟೆಯ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕಳಿಸಲು ಯಾವ ನಿರ್ಬಂಧವೂ ಇರುವುದಿಲ್ಲ. ಈ ಕಾರಣದಿಂದಾಗಿ ಈ ಬಗೆಯ ಮಾರುಕಟ್ಟೆಗಳಲ್ಲಿ ಎಲ್ಲ ಕಡೆಗಳಲ್ಲೂ ಒಂದು ಪದಾರ್ಥಕ್ಕೆ ಒಂದೇ ಬೆಲೆ ಇರುವುದು. ಆ ಬೆಲೆಗೆ ವ್ಯಾಪಾರಿಗಳು, ಮಾರಾಟ ಮಾಡುವವರು, ಗಿರಾಕಿಗಳು ವಸ್ತುಗಳನ್ನು ಕೊಳ್ಳುವರು.

(ಉ) ಮಾರುಕಟ್ಟೆಯಲ್ಲಿ ವಸ್ತುವಿಗೆ ಒಂದೇ ಧಾರಣೆ ಇರುವುದರಿಂದ ವ್ಯಾಪಾರಿಗಳು ಯಾವ ಗಿರಾಕಿಗೆ ಬೇಕಾದರೂ ವಸ್ತುಗಳನ್ನು ಮಾರಾಟ ಮಾಡಬಹುದು. ಅಂತೆಯೇ ಗಿರಾಕಿಗಳು ಯಾವೊಬ್ಬ ಮಾರಾಟಗಾರನಿಂದಲೂ ಅವನಿಗೆ ಬೇಕಾದ ವಸ್ತುಗಳನ್ನು ಕೊಳ್ಳಬಹುದು,

ಈ ಲಕ್ಷಣಗಳು ಮಾರುಕಟ್ಟೆಗಳಲ್ಲಿ ಕಂಡುಬಂದರೆ ಅಂತಹ ಮಾರುಕಟ್ಟೆಗಳನ್ನು 'ಪರಿಪೂರ್ಣ ಮಾರುಕಟ್ಟೆ'ಗಳೆಂದು ಕರೆಯಬಹುದು. ಮಾರುಕಟ್ಟೆಗಳು ಪರಿಪೂರ್ಣವಾಗಿರಬೇಕಾದರೆ, ಒಂದು ಮಾರುಕಟ್ಟೆಯ ಎಲ್ಲ ಮಾರಾಟಗಾರರಿಗೂ ಮತ್ತು ಕೊಳ್ಳುವವರಿಗೂ ಸುಲಭವಾದ ಮತ್ತು ಶೀಘ್ರವಾದ ಸಂಪರ್ಕಸಂಬಂಧವಿರಬೇಕು. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪದಾರ್ಥಗಳನ್ನು ಸುರಕ್ಷಿತವಾಗಿ ಮತ್ತು ಮಿತವ್ಯಯದಿಂದ ಸಾಗಿಸಲು ಸಂಚಾರಸೌಲಭ್ಯಗಳ ವ್ಯವಸ್ಥೆಯು ಉತ್ತಮವಾಗಿರಬೇಕು. ಇದರಿಂದ ಮಾರುಕಟ್ಟೆ ವ್ಯಾಪಾರ ಸುಲಭ ಹಾಗೂ ಶೀಘ್ರವಾಗಿ ಆಗುತ್ತದೆ. ಆದರೆ ವಾಸ್ತವ ಜಗತ್ತಿನಲ್ಲಿ ಈ ಬಗೆಯ ಪರಿಪೂರ್ಣ ಮಾರುಕಟ್ಟೆಗಳು ಕಂಡು ಬರುವುದಿಲ್ಲ. ಎಲ್ಲ ಕಡೆಗಳಲ್ಲೂ ಈ ಮಾರುಕಟ್ಟೆಗಳು ಅಪರಿಪೂರ್ಣವಾಗಿವೆ.

(vi) **ಅಪರಿಪೂರ್ಣ ಮಾರುಕಟ್ಟೆಗಳು :** ಅಪರಿಪೂರ್ಣ ಮಾರುಕಟ್ಟೆಗಳೆಂದರೆ ಪರಿಪೂರ್ಣ ಮಾರುಕಟ್ಟೆಯ ಲಕ್ಷಣಗಳನ್ನು ಹೊಂದಿರದ ಮಾರುಕಟ್ಟೆಗಳು. ನಿಜ ಪ್ರಪಂಚದಲ್ಲಿ ಕಂಡುಬರುವ ಮಾರುಕಟ್ಟೆಗಳೆಲ್ಲ ಅಪರಿಪೂರ್ಣ ಮಾರುಕಟ್ಟೆಗಳು. ಇಂತಹ ಮಾರುಕಟ್ಟೆಗಳಲ್ಲಿ ಅಪರಿಪೂರ್ಣ ಪೈಪೋಟಿಯು ಕಂಡುಬರುವುದು. ಆದರೆ ಅಪರಿಪೂರ್ಣ ಮಾರುಕಟ್ಟೆಗಳೂ ಕೆಲವು ಲಕ್ಷಣಗಳನ್ನು ಹೊಂದಿರುತ್ತವೆ. ಅವುಗಳೆಂದರೆ :

(ಅ) ಒಂದೇ ವಸ್ತುವಿಗೆ ಮಾರುಕಟ್ಟೆಯ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಧಾರಣೆಗಳಿರುತ್ತವೆ.

(ಆ) ವ್ಯಾಪಾರಿಗಳಿಗೆ ಹಾಗೂ ಗಿರಾಕಿಗಳಿಗೆ ವಸ್ತುಗಳ ಬೆಲೆಗಳ ಬಗ್ಗೆ, ವಸ್ತುಗಳ ಬಗ್ಗೆ ಸಂಪೂರ್ಣ ಪರಿಜ್ಞಾನವಿರುವುದಿಲ್ಲ.

(ಇ) ಮಾರಾಟ ಮಾಡುವವರು ಕಡಮೆ ಸಂಖ್ಯೆಯಲ್ಲಿದ್ದು ಕೊಳ್ಳುವವರು ಮಾತ್ರ ಅಸಂಖ್ಯಾತರಿರುತ್ತಾರೆ.

(ಈ) ವ್ಯಾಪಾರಿ-ಗಿರಾಕಿಗಳ ಮಧ್ಯೆ ಇರುವ ಪೈಪೋಟಿ ಯಾವಾಗಲೂ ಅಪರಿಪೂರ್ಣವಾಗಿರುತ್ತದೆ.

(ಉ) ಮಾರಾಟ ಮಾಡುವ ಪದಾರ್ಥಗಳು ಒಂದೇ ತೆರನಾಗಿರುವುದಿಲ್ಲ. ಪದಾರ್ಥಗಳಿಗೆ ಬೇರೆ-ಬೇರೆ ಲೇಬಲ್ಲುಗಳನ್ನು, ಟ್ರೇಡ್ ಮಾರ್ಕ್‌ಗಳನ್ನು ಕೊಟ್ಟಿರುವರು. ಕೆಲವು ಜನರು ಕೆಲವೇ ಬ್ರ್ಯಾಂಡ್‌ಗಳನ್ನು ಬಳಸುವುದರಿಂದ ಆ ವಸ್ತುವಿನ ಬೆಲೆ ಎಷ್ಟಾದರೂ ಪಡೆಯುವರು. ಇದರಿಂದ ಒಂದು ವಸ್ತುವಿಗೆ ಒಂದೇ ಬೆಲೆ ಇರಲಾರದು. ಈ ರೀತಿ ಒಂದೇ ವಸ್ತುವಿಗೆ ಒಂದೇ ಮಾರುಕಟ್ಟೆಯಲ್ಲಿ ವಿವಿಧ ಬೆಲೆಗಳನ್ನು ಕೊಡಬೇಕಾಗಿರುವುದರ ಮುಖ್ಯ ಕಾರಣ ವಸ್ತುಗಳನ್ನು ಕೊಳ್ಳುವವರ ಅಜ್ಞಾನ, ಪದಾರ್ಥಗಳಲ್ಲಿ ಕಂಡುಬರುವ ಕಾಲ್ಪನಿಕ ವ್ಯತ್ಯಾಸ ಹಾಗೂ ಒಂದು ನಿರ್ದಿಷ್ಟವಾದ ಬ್ರ್ಯಾಂಡ್‌ನ ಬಗ್ಗೆ ಗಿರಾಕಿಗಳಿಗಿರುವ ವ್ಯಾಮೋಹಗಳೇ ಕಾರಣ.

ಏಕಸ್ವಾಮ್ಯ

ಗೊತ್ತಾದ ಮಾರುಕಟ್ಟೆಯಲ್ಲಿ ಒಂದು ವಸ್ತು ಅಥವಾ ಸೇವೆಯ ವಿಶಿಷ್ಟ ಹಕ್ಕೋಟಿಗೆ ಏಕಸ್ವಾಮ್ಯ ಎಂದು ಕರೆಯುತ್ತಾರೆ. ಅಂದರೆ ಒಂದು ಮಾರುಕಟ್ಟೆಯಲ್ಲಿ ವಸ್ತುವನ್ನು ಮಾರುವ ಅಥವಾ ಕೊಳ್ಳುವ ಬಗ್ಗೆ ಮಾರಾಟಗಾರನು ಪಡೆದಿರುವ ವಿಶಿಷ್ಟಹಕ್ಕು. ಒಂದು ವಸ್ತುವಿಗೆ ಪ್ರತಿಯಾಗಿ ಬೇರೆಯಾವ ವಸ್ತುವನ್ನೂ ಸಾಮಾನ್ಯವಾಗಿ ಬಳಸುವುದು ಸಾಧ್ಯವಿಲ್ಲದಿದ್ದರೆ ಅಂತಹ ಸ್ಥಿತಿಯೇ ಏಕಸ್ವಾಮ್ಯ. ಮಾರಾಟಗಾರರ ಮಧ್ಯೆ ಸ್ಪರ್ಧೆಯಿಲ್ಲದಂತಹ ಮಾರುಕಟ್ಟೆಯ ಪರಿಸ್ಥಿತಿಯನ್ನು ಏಕಸ್ವಾಮ್ಯವೆಂದು ಕರೆಯುವುದು ರೂಢಿ. ಅಂದರೆ ಏಕಸ್ವಾಮ್ಯ ಮಾರುಕಟ್ಟೆಗಳಲ್ಲಿ ಪೈಪೋಟಿಯೇ ಇರುವುದಿಲ್ಲ. ಎಲ್ಲಿ ಪೈಪೋಟಿಯು ಕಂಡುಬರುವುದಿಲ್ಲವೋ ಅಂತಹ ಪೇಟೆಗಳನ್ನು ಏಕಸ್ವಾಮ್ಯ ಮಾರುಕಟ್ಟೆಗಳು ಎನ್ನುವರು. ಒಬ್ಬ ವ್ಯಕ್ತಿ ಅಥವಾ ಸಂಸ್ಥೆಯು ಒಂದು ಸರಕಿನ ಪೂರೈಕೆಯ ಮೇಲೆ ಸಂಪೂರ್ಣ ನಿಯಂತ್ರಣವನ್ನು ಹೊಂದಿದ್ದರೆ ಅದಕ್ಕೆ ಏಕಸ್ವಾಮ್ಯವೆಂದು ಕರೆಯುವರು. ಏಕಸ್ವಾಮ್ಯ ಮಾರುಕಟ್ಟೆಗಳಲ್ಲಿ ಕೆಲವೇ ವ್ಯಾಪಾರಿಗಳು ವಸ್ತುಗಳ ಬೆಲೆಗಳನ್ನು ನಿಯಂತ್ರಿಸುವ ಶಕ್ತಿಯನ್ನು ಪಡೆದಿರುತ್ತಾರೆ. ವಸ್ತುಗಳನ್ನು ಕೊಳ್ಳುವವರು ಹಲವು ಮಂದಿ. ಆದರೆ ಮಾರಾಟ ಮಾಡುವ ಒಡೆತನ ಮಾತ್ರ ಒಬ್ಬನಿಗೆ ಅಥವಾ ಒಂದು ಸಂಸ್ಥೆಗೆ ಸೇರಿರುತ್ತದೆ. ಈ ವ್ಯಕ್ತಿಗಳ ಅಥವಾ ಸಂಸ್ಥೆಗಳ ಗುರಿ ಹೆಚ್ಚು ಲಾಭ ಪಡೆಯಬೇಕೆನ್ನುವುದು. ವ್ಯಾಪಾರದಲ್ಲಿ ಸಹಜವಾಗಿ ಕಂಡುಬರುವ ಪೈಪೋಟಿಯಿಂದ ಏಕಸ್ವಾಮ್ಯ ಉಂಟಾಗಬಹುದು. ಪೈಪೋಟಿಯು ಹಾನಿಕಾರಕವೆಂದು ಕಂಡುಬಂದಾಗ ಜನತೆಯ ಹಿತದೃಷ್ಟಿಯಿಂದ ಸರಕಾರ ಇಂತಹ ಏಕಸ್ವಾಮ್ಯ ಮಾರುಕಟ್ಟೆಗಳನ್ನು ಸ್ಥಾಪಿಸುತ್ತದೆ

ಪೈಪೋಟಿಯ ಪರಿಸ್ಥಿತಿಯಿದ್ದಲ್ಲಿ, ಇಡೀ ಮಾರುಕಟ್ಟೆಯಲ್ಲಿನ ಪದಾರ್ಥದ ಬೇಡಿಕೆ ಮತ್ತು ಪೂರೈಕೆಗಳಿಂದ ಬೆಲೆಯನ್ನು ನಿಗದಿಮಾಡಲಾಗುತ್ತದೆ. ಆದರೆ ಏಕಸ್ವಾಮ್ಯ ಪರಿಸ್ಥಿತಿಯಲ್ಲಿ ಒಟ್ಟು ಪೂರೈಕೆಯನ್ನು ಹೆಚ್ಚು ಕಡಮೆ ಮಾಡಿ ಆ ಮೂಲಕ ವಸ್ತುಗಳ ಬೆಲೆಯನ್ನು ಬದಲಾಯಿಸುವುದು ಸಾಧ್ಯ. ಏಕಸ್ವಾಮ್ಯವನ್ನು ಹೊಂದಿರುವ ವ್ಯಕ್ತಿ ಅಥವಾ ಸಂಸ್ಥೆಗೆ ಪ್ರತಿಸ್ಪರ್ಧಿಗಳ ಭಯವಿರುವುದಿಲ್ಲ. ಪೂರೈಕೆಯ ಮೇಲೆ ಪೂರ್ಣವಾದ ಹತೋಟಿಯನ್ನು ಪಡೆದಿರುವುದರಿಂದ ಉತ್ಪಾದನೆಯ ವೆಚ್ಚಕ್ಕಿಂತಲೂ ಸಾಧ್ಯವಿದ್ದಷ್ಟು ಹೆಚ್ಚಿನ ಬೆಲೆಗೆ ವಸ್ತುಗಳನ್ನು ಮಾರಿ ಹೆಚ್ಚಿನ ಲಾಭ ಪಡೆಯಬಹುದು. ಏಕಸ್ವಾಮ್ಯದ ಬೆಲೆಯು ಸ್ಪರ್ಧೆಯ ಬೆಲೆಗಿಂತಲೂ ಹೆಚ್ಚಾಗಿರುತ್ತದೆ

ಏಕಸ್ವಾಮ್ಯ ಮಾರುಕಟ್ಟೆಗಳು ಖಾಸಗೀ ಕ್ಷೇತ್ರ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಕಂಡುಬರುತ್ತವೆ. ರೈಲುಸಾರಿಗೆ, ಅಂಚೆ ಮತ್ತು ತಂತಿ ಇಲಾಖೆ, ವಾಯುಸಾರಿಗೆ ಮುಂತಾದ ಕ್ಷೇತ್ರಗಳಲ್ಲಿ ಸಾರ್ವಜನಿಕ ಏಕಸ್ವಾಮ್ಯತೆಯು ಕಂಡುಬರುತ್ತದೆ. ಔಷಧಗಳ ತಯಾರಿಕೆ, ಎಣ್ಣೆಯ ಉತ್ಪಾದನೆ ಮುಂತಾದ ಕ್ಷೇತ್ರಗಳು ಖಾಸಗಿ ರಂಗದಲ್ಲಿ ಕಂಡುಬರುತ್ತವೆ. ಭಾರತದಲ್ಲಿ ಕೆಲವು ವ್ಯಾಪಾರಿ ಕಂಪೆನಿಗಳು ಪೆಟ್ರೋಲಿನ ಮಾರಾಟ ಮಾಡುವುದನ್ನು ಪಡೆದಿರುತ್ತವೆ. ಈ ಕಂಪೆನಿಗಳು ಪೆಟ್ರೋಲಿಗೆ ಹೆಚ್ಚು ಬೆಲೆಯನ್ನು ನಿಗದಿಮಾಡಿ ಅಧಿಕ ಲಾಭ ಪಡೆಯುತ್ತವೆ. ಎಣ್ಣೆಯ ಬೇಡಿಕೆಗೆ ಸ್ಥಿತಿಸ್ಥಾಪಕತ್ವ ಇದ್ದರೆ ಹೆಚ್ಚು ಬೆಲೆಯನ್ನು ನಿಗದಿಪಡಿಸಿ ಲಾಭಗಳಿಸಲು ಸಾಧ್ಯವಾಗುವುದಿಲ್ಲ. ಹೆಚ್ಚು ಬೆಲೆಯನ್ನು ನಿಗದಿಮಾಡಿದರೆ ಬೇಡಿಕೆಯು ಕುಗ್ಗುವುದು. ಆದ್ದರಿಂದ ಏಕಸ್ವಾಮ್ಯವಾದಿಗಳು ವಸ್ತುಗಳ ಬೇಡಿಕೆ, ಸ್ಥಿತಿಸ್ಥಾಪಕತ್ವವನ್ನು ಹೊಂದಿದೆಯೋ ಇಲ್ಲವೇ ಎಂಬುದನ್ನು ಪರಿಶೀಲಿಸಿ ಅನಂತರ ಬೆಲೆಯನ್ನು ನಿರ್ಧರಿಸುತ್ತಾರೆ. ಆದರೆ ವಾಸ್ತವ ಪ್ರಪಂಚದಲ್ಲಿ ಏಕಸ್ವಾಮ್ಯವಾದಿಗಳು ಬಹಳ ಕಡಮೆ.

ಏಕಸ್ವಾಮ್ಯದ ಬಗೆಗಳು : ಏಕಸ್ವಾಮ್ಯದಲ್ಲಿ ಪ್ರಮುಖವಾಗಿ ನಾಲ್ಕು ಬಗೆಗಳಿವೆ. ಅವು ಕೆಳಗಿನಂತಿವೆ :

(ಅ) **ಸ್ವಾಭಾವಿಕ ಏಕಸ್ವಾಮ್ಯ :** ಈ ಬಗೆಯ ಏಕಸ್ವಾಮ್ಯವು ನೈಸರ್ಗಿಕ ಕಾರಣಗಳಿಂದ ಕಂಡುಬರುತ್ತದೆ. ಕೆಲವು ವೇಳೆ ಅನುಕೂಲವಾದ ನೈಸರ್ಗಿಕ ಸಂಪತ್ತಿನಿಂದ ರಾಷ್ಟ್ರದಲ್ಲಿ ಕೆಲವು ವಸ್ತುಗಳನ್ನು ಉತ್ಪಾದಿಸಬಹುದು. ಸ್ವಾಭಾವಿಕ ಏಕಸ್ವಾಮ್ಯವೆಂದರೆ ಕೆಲವು ಪದಾರ್ಥಗಳನ್ನು ಒಂದು ರಾಷ್ಟ್ರದಲ್ಲಿ ಉತ್ಪಾದಿಸುವುದು ಸಾಧ್ಯ. ಉದಾಹರಣೆಗೆ ಸೆಣಬಿನ ಉತ್ಪಾದನೆಯಲ್ಲಿ ಬಂಗಾಳ ರಾಜ್ಯ ಸ್ವಾಭಾವಿಕ ಏಕಸ್ವಾಮ್ಯವನ್ನು ಪಡೆದಿದೆ. ಹಾಗೆಯೇ ವಜ್ರಗಳಲ್ಲಿ ದಕ್ಷಿಣ ಆಫ್ರಿಕಾ ಏಕಸ್ವಾಮ್ಯವನ್ನು ಪಡೆದಿದ್ದರೆ, ತೈಲದಲ್ಲಿ ಮಧ್ಯ ಪೂರ್ವ ರಾಷ್ಟ್ರಗಳು ಏಕಸ್ವಾಮ್ಯ ಪಡೆದಿವೆ. ಕಾಶ್ಮೀರ ಉಣ್ಣೆಯ ಉತ್ಪಾದನೆಯಲ್ಲಿ ನೈಸರ್ಗಿಕ ಏಕಸ್ವಾಮ್ಯ ಪಡೆದಿದ್ದು ಕಾಶ್ಮೀರ ಶಾಲುಗಳು ಜಗತ್ಪ್ರಸಿದ್ಧಿಯಾಗಿ

(ಆ) **ನ್ಯಾಯಬದ್ಧವಾದ ಏಕಸ್ವಾಮ್ಯ :** ಏಕಸ್ವಾಮ್ಯವನ್ನು ಕಾನೂನು ಮೂಲಕ ನಿರ್ಮಿಸಬಹುದು. ಸಾಮಾನ್ಯ ಪ್ರಗತಿಯನ್ನುಂಟುಮಾಡಲು ಸರಕಾರ ಕಾನೂನಿನ ಮೂಲಕ ಏಕಸ್ವಾಮ್ಯವನ್ನು ಕಾರ್ಯರೂಪಕ್ಕೆ ತರಬಹುದು. ಕೆಲವು ವಸ್ತುಗಳನ್ನು ರಾಷ್ಟ್ರದ ಕಾನೂನು ರಕ್ಷಿಸುತ್ತದೆ. ಉದಾಹರಣೆಗೆ ಯಾವುದಾದರೂ ಒಂದು ವಸ್ತುವನ್ನು ಉತ್ಪಾದಿಸಿದಾಗ ಆ ಸಂಸ್ಥೆಗೆ ಸ್ವಾಮ್ಯದ ಹಕ್ಕನ್ನು ಸರಕಾರ ಕೊಡುತ್ತದೆ. ಇವನ್ನು ಯಾರೇ ಆಗಲಿ ಅವರ ಒಪ್ಪಿಗೆ ಇಲ್ಲದೆ ಕಾಪಿ ಮಾಡುವಂತಿಲ್ಲ. ಲೇಖಕರ ಗ್ರಂಥಸ್ವಾಮ್ಯ, ವ್ಯಾಪಾರಿ ಚಿಹ್ನೆ, ವಸ್ತುಗಳಿಗೆ ಲೇಬಲ್ ಅಂಟಿಸುವುದು, ಇವುಗಳನ್ನು ಅವರ ಹೊರತು ಬೇರೆ ಯಾರೂ ಬಳಸುವಂತಿಲ್ಲ. ಇವುಗಳ ಬಗ್ಗೆ ಕಾನೂನಿನ ಸಂರಕ್ಷಣೆ ಇರುತ್ತದೆ.

(ಇ) **ಸಾಮಾಜಿಕ ಏಕಸ್ವಾಮ್ಯ :** ಸಾಮಾಜಿಕ ಏಕಸ್ವಾಮ್ಯವನ್ನು ಕಾನೂನು ನಿರ್ಮಿಸುವುದು. ಸಮಾಜದ ಹಿತವೇ ಈ ಬಗೆಯ ಏಕಸ್ವಾಮ್ಯದ ಗುರಿ. ಅಂದರೆ ರಾಷ್ಟ್ರದಲ್ಲಿ ಸಮಾಜದ ಒಳಿತಿಗೆ ಕೆಲವು ಉದ್ದಿಮೆಗಳನ್ನು ಸರಕಾರವು ವಹಿಸಿಕೊಳ್ಳುವುದು. ಇಂತಹ ಏಕಸ್ವಾಮ್ಯಕ್ಕೆ 'ಸಾಮಾಜಿಕ ಏಕಸ್ವಾಮ್ಯ' ಎಂದು ಹೆಸರು. ಈ ಬಗೆಯ ಏಕಸ್ವಾಮ್ಯವು ಸಮಾಜದ ಹಿತದೃಷ್ಟಿಯಿಂದ ಅತ್ಯಾವಶ್ಯಕ. ಉದಾಹರಣೆಗೆ ರೈಲುಗಳು, ಅಂಚೆ ಮತ್ತು ತಂತಿ ಇಲಾಖೆ, ನೀರಿನ ಪೂರೈಕೆ, ವಿದ್ಯುಚ್ಛಕ್ತಿ. ಒಂದು ರಾಜ್ಯದಲ್ಲಿನ ವಿದ್ಯುಚ್ಛಕ್ತಿಯ ಪೂರೈಕೆಯನ್ನು ಆ ರಾಜ್ಯದ ಸರಕಾರವು ವಹಿಸಿಕೊಳ್ಳುತ್ತದೆ. ಈ ಬಗೆಯ ಸರ್ವಜನೋಪಯೋಗಿ ಉದ್ಯಮ ಕ್ಷೇತ್ರಗಳ ವ್ಯವಸ್ಥೆಗಳಲ್ಲಿ ಪೈಪೋಟಿಗೆ ಅವಕಾಶವಿರುವುದಿಲ್ಲ. ಪೈಪೋಟಿ ಇದ್ದರೆ ಲಾಭವೇ ಮುಖ್ಯ ಗುರಿಯಾಗಿದ್ದು ಸಮಾಜಕ್ಕೆ ಹಾನಿಯುಂಟಾಗುತ್ತದೆ. ಬಡವರಿಗೆ ತೊಂದರೆಯಾಗುತ್ತದೆ. ಸಾರ್ವಜನಿಕರಿಗೆ ಸರಿಯಾದ ಸೇವೆ ದೊರೆಯುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಸಾಮಾಜಿಕ ಏಕಸ್ವಾಮ್ಯಗಳು ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ಮಿತವಾಗಿರುತ್ತವೆ.

(ಈ) **ಇಚ್ಛಾಪೂರ್ವಕ ಏಕಸ್ವಾಮ್ಯ :** ಏಕಸ್ವಾಮ್ಯ ಸ್ಥಿತಿಯಲ್ಲೂ ಕೆಲವು ವೇಳೆ ಪೈಪೋಟಿ ಇರಬಹುದು. ಆದರೆ ಪೈಪೋಟಿಯಿಂದ ಹಾನಿ ಎಂದು ಮನಗಂಡ ಉದ್ಯಮಿಗಳು ತಮ್ಮ ತಮ್ಮೊಳಗೆ ಪೈಪೋಟಿ ನಿಲ್ಲಿಸಿ, ಒಂದು ರೀತಿಯ ಒಪ್ಪಂದಕ್ಕೆ ಬರಬಹುದು. ಹೀಗೆ ಕೆಲವು ವೇಳೆ, ಕೆಲವು ಸಂದರ್ಭಗಳಲ್ಲಿ ಕೆಲವು ಸಂಸ್ಥೆಗಳು ಅಥವಾ ಕೆಲವು ಜನ ಒಟ್ಟುಗೂಡಿ ತಾವೇ ಮುಂದೆ ಬಂದು ಸ್ವೇಚ್ಛಾಪೂರ್ವಕವಾಗಿ ಏಕಸ್ವಾಮ್ಯವನ್ನು ಸ್ಥಾಪಿಸಬಹುದು. ಇದರಿಂದ ಎರಡು ಅಥವಾ ಹೆಚ್ಚು ಸಂಸ್ಥೆಗಳು ಒಟ್ಟುಗೂಡಬಹುದು. ಹೀಗೆ ಸಂಭವಿಸುವುದೇ ಇಚ್ಛಾಪೂರ್ವಕ ಏಕಸ್ವಾಮ್ಯ. ಪೈಪೋಟಿಯನ್ನು ನಿವಾರಿಸಿ ಹೆಚ್ಚು ಲಾಭಗಳಿಸಲು ಈ ಬಗೆಯ ಏಕಸ್ವಾಮ್ಯವನ್ನು ಸ್ಥಾಪಿಸುವುದುಂಟು. ಉದಾಹರಣೆಗೆ ಟ್ರಸ್ಟ್‌ಗಳು, ಕಾರ್ಟೆಲ್ಲುಗಳು, ಬಳಕೆದಾರರ ಸಂಸ್ಥೆಗಳು. ಇವು ರೂಪತಾಳಿ ಏಕಸ್ವಾಮ್ಯತೆಯನ್ನು ನಿರ್ಮಿಸಬಹುದು.

ಅಧ್ಯಾಯ 3

ಉತ್ಪಾದನೆ

ಅರ್ಥಶಾಸ್ತ್ರದಲ್ಲಿ 'ಉತ್ಪಾದನೆ'ಗೆ ವಿಶೇಷ ಅರ್ಥವಿದೆ. ಅಂದರೆ ವಸ್ತುಗಳ ಉಪಯುಕ್ತತೆಯನ್ನು ಹೆಚ್ಚಿಸಿ ಅವುಗಳ ಮೂಲಕ ವಿನಿಮಯ ಬೆಲೆಯನ್ನು ಹೆಚ್ಚಿಸುವುದು ಹಾಗೂ ತುಷ್ಟಿ ಗುಣವನ್ನು ಹೆಚ್ಚಿಸುವುದು ಉತ್ಪಾದನೆಯ ಮುಖ್ಯ ಲಕ್ಷಣಗಳು. ಯಾವ ವಸ್ತುವನ್ನೂ ಮನುಷ್ಯ ಸ್ವತಃ ನಿರ್ಮಿಸಲಾರ ಹಾಗೂ ಅವುಗಳನ್ನು ನಾಶ ಪಡಿಸಲಾರ. ಹಾಗೆಯೇ ಪ್ರಕೃತಿಯ ಸ್ವಾಭಾವಿಕ ಸಂಪತ್ತನ್ನು ಹೆಚ್ಚಿಸಲಾರ. ಮನುಷ್ಯನಿಗೆ ನೈಸರ್ಗಿಕ ಕೊಡುಗೆಯಾಗಿ ಬಂದಿರುವ ವಸ್ತುಗಳನ್ನು ಹೆಚ್ಚು ಉಪಯೋಗವಾಗುವಂತೆ ಮಾಡುವ ಸಾಮರ್ಥ್ಯ ಮಾತ್ರ ಅವನಿಗಿದೆ. ಕಾಡಿನಲ್ಲಿ ಮರದ ದಿಮ್ಮಿಗಳು ಸಾಕಷ್ಟು ಬಿದ್ದಿರುತ್ತವೆ. ಮರದ ದಿಮ್ಮಿಗಳು ಕಾಡಿನಲ್ಲಿ ಬಿದ್ದಿದ್ದರೆ ಯಾರಿಗೂ ಉಪಯೋಗವಾಗುವುದಿಲ್ಲ. ಆದರೆ ಮರದ ದಿಮ್ಮಿಗಳನ್ನು ಕಾಡಿನಿಂದ ಸಾಗಿಸಿದ ನಂತರ ಬಡಗಿ ಅವುಗಳನ್ನು ಮೇಜು, ಕುರ್ಚಿ, ಮಂಚಗಳಾಗಿ ಪರಿವರ್ತಿಸಿ ಅವುಗಳಲ್ಲಿ ಉಪಯುಕ್ತತೆಯನ್ನು ತುಂಬುತ್ತಾನೆ. ಸಮುದ್ರದಲ್ಲಿ ಸಾಕಷ್ಟು ಮುತ್ತುಗಳು ಅಡಗಿರುತ್ತವೆ. ಆದರೆ ಸಮುದ್ರದಲ್ಲಿ ಅಡಗಿರುವ ಮುತ್ತಿಗೆ ಬೆಲೆ ಇರುವುದಿಲ್ಲ. ಅದೇ ಮುತ್ತುಗಳನ್ನು ಸಮುದ್ರದಿಂದ ಹೊರತೆಗೆದು ಮಾರಾಟ ಮಾಡಲ್ಪಟ್ಟಾಗ ಅದಕ್ಕೆ ಬೆಲೆ ಬರುತ್ತದೆ. ಉಪಯುಕ್ತತೆಯನ್ನು ಹೆಚ್ಚು ಮಾಡಿದಂತೆ ವಸ್ತುವಿನ ಮೌಲ್ಯವೂ ಸಹ ಹೆಚ್ಚುತ್ತದೆ. ಇಲ್ಲಿ ಬಡಗಿಯು ಮರದ ದಿಮ್ಮಿಯನ್ನು ಸೃಷ್ಟಿಸಿಲ್ಲ. ಅದು ನಿಸರ್ಗ ನೀಡಿದ ಒಂದು ಕೊಡುಗೆ. ಆದರೆ ಅದನ್ನು ಹೊರತೆಗೆದು ಪ್ರಯೋಜನವಾಗುವಂತೆ ಮಾಡಲಾಗಿದೆ. ಈ ರೀತಿ ನಿಸರ್ಗದಲ್ಲಿ ಸಿಗುವ, ಪ್ರಯೋಜನರಹಿತ ಅಥವಾ ಉಪಯುಕ್ತತೆಯಿಲ್ಲದ ಅಥವಾ ಕಡಮೆ ಉಪಯುಕ್ತತೆ ಇರುವ ವಸ್ತುಗಳಿಗೆ ತುಷ್ಟಿಗುಣ ತುಂಬಿ ಅವುಗಳನ್ನು ಹೆಚ್ಚು ಉಪಯುಕ್ತತೆಯುಳ್ಳ ವಸ್ತುಗಳನ್ನಾಗಿ ಮಾಡುವ ಒಂದು ಚಟುವಟಿಕೆಯೇ ಉತ್ಪಾದನೆ. ಉತ್ಪಾದನೆ ವಸ್ತುವಿನ ತುಷ್ಟಿಗುಣವನ್ನು ಹೆಚ್ಚಿಸುವುದಲ್ಲದೆ ಅದರ ಮೌಲ್ಯವನ್ನೂ ಹೆಚ್ಚಿಸುತ್ತದೆ. ವಸ್ತುಗಳಲ್ಲಿರುವ ತುಷ್ಟಿಗುಣವನ್ನು ಬಳಸಿದಾಗ ಉಪಯೋಗವಾಗುತ್ತದೆ. ಅದೇ ವಸ್ತುಗಳಿಗೆ ತುಷ್ಟಿಗುಣವನ್ನು ಸೇರಿಸಿದಾಗ ಉತ್ಪಾದನೆಯಾಗುತ್ತದೆ. ಆದರೆ ಇಲ್ಲಿ ತುಷ್ಟಿಗುಣದ ಜೊತೆಗೆ ಮೌಲ್ಯವೂ ಹೆಚ್ಚಾಗಬೇಕಾದುದು ಅವಶ್ಯ.

ಉತ್ಪಾದನೆಯ ಬಗೆಗಳು : ಯಾವುದೇ ವಸ್ತುಗಳ ಉತ್ಪಾದನೆಯಾಗಬೇಕಾದರೆ ಆ ವಸ್ತುಗಳಿಗೆ ತುಷ್ಟಿಗುಣ ಸೇರಿಸಿ ವಸ್ತುಗಳನ್ನು ಉತ್ಪಾದಿಸಬೇಕು. ವಸ್ತುಗಳ

ಉತ್ಪಾದನೆಯನ್ನು (i) ರೂಪ ಅಥವಾ ಆಕಾರದ ಉಪಯುಕ್ತತೆ, (ii) ಸ್ಥಳದ ಉಪಯುಕ್ತತೆ, (iii) ಕಾಲದ ಉಪಯುಕ್ತತೆ ಎಂದು ಮೂರು ಬಗೆಯಾಗಿ ವಿಂಗಡಿಸಲಾಗಿದೆ.

(i) **ರೂಪ ಅಥವಾ ಆಕಾರದ ಉಪಯುಕ್ತತೆ :** ಯಾವುದೇ ಒಂದು ವಸ್ತುವಿನ ರೂಪ ಅಥವಾ ಆಕಾರವನ್ನು ಮಾರ್ಪಡಿಸಿ ತುಷ್ಟಿಗುಣ ಸೇರಿಸುವುದರಿಂದ ಅದರ ಬೆಲೆಯನ್ನು ಹೆಚ್ಚಿಸಿದರೆ ಆ ವಸ್ತುವಿಗೆ ಆಕಾರದ ಉಪಯುಕ್ತತೆ ಇದೆ ಎಂಬುದು ಕಂಡುಬರುವುದು. ಅಂದರೆ ವಸ್ತುವಿಗೆ ಆಕಾರದ ಉಪಯುಕ್ತತೆ ಸೇರಿಸುವುದರಿಂದ ವಸ್ತುವನ್ನು ಉತ್ಪಾದಿಸಬಹುದು. ಉದಾಹರಣೆಗಾಗಿ ಮೇಲೆ ಹೇಳಿದ ಕಾಡಿನಲ್ಲಿ ಸಿಗುವ ಮರದಿಂದ ಬಡಗಿಯು ಕುರ್ಚಿಗಳನ್ನು ತಯಾರಿಸುತ್ತಾನೆ. ಅದೇ ರೀತಿ ಪ್ರಾಣಿಯ ಒರಟಾದ ಚರ್ಮವನ್ನು ನಯಗೊಳಿಸಿ, ಅದರಿಂದ ಪಾದರಕ್ಷೆ, ಕೈಚೀಲಗಳನ್ನು ತಯಾರಿಸಬಹುದು. ಹೀಗೆ ಆಕಾರದ ಬದಲಾವಣೆಯಿಂದ ಉಪಯುಕ್ತತೆಯನ್ನು ಹೆಚ್ಚಿಸುವುದರಿಂದ ವಸ್ತುವಿನ ಉತ್ಪಾದನೆಯಾಗುತ್ತದೆ.

(ii) **ಸ್ಥಳದ ಉಪಯುಕ್ತತೆ :** ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಸ್ತುಗಳನ್ನು ಸಾಗಿಸಿ ಅವುಗಳ ಉಪಯುಕ್ತತೆಯನ್ನು ಹೆಚ್ಚಿಸುವುದಕ್ಕೆ 'ಸ್ಥಳದ ಉಪಯುಕ್ತತೆ' ಎನ್ನುತ್ತೇವೆ. ವಸ್ತುಗಳನ್ನು ಸ್ಥಳಾಂತರಿಸುವುದರ ಮೂಲಕ ಅವುಗಳ ಉಪಯುಕ್ತತೆ ಹೆಚ್ಚುವುದಲ್ಲದೆ ಅವುಗಳಿಗೆ ಬೇಡಿಕೆಯೂ ಉಂಟಾಗುತ್ತದೆ. ಹೇಗೆಂದರೆ ಒಂದು ಸ್ಥಳದಲ್ಲಿ ಒಂದು ವಸ್ತು ಹೇರಳವಾಗಿರಬಹುದು. ಅದೇ ವಸ್ತು ಉಳಿದ ಕಡೆಗಳಲ್ಲಿ ದೊರೆಯದಿರಬಹುದು. ಇಂತಹ ಸಂದರ್ಭಗಳಲ್ಲಿ ಹೇರಳವಾಗಿ ದೊರೆಯುವ ಪ್ರದೇಶಗಳಿಂದ ಆ ವಸ್ತುಗಳನ್ನು ದೊರೆಯದಿರುವ ಪ್ರದೇಶಗಳಿಗೆ ಸ್ಥಳಾಂತರಿಸಿದರೆ ಉತ್ಪಾದನೆಯಾದಂತೆ. ಮರಳು ಗಾಡಿನಲ್ಲಿ, ನದಿಗಳ ದಂಡೆಗಳಲ್ಲಿ ಮರಳು ಹೇರಳವಾಗಿ ಬಿದ್ದಿರುತ್ತದೆ. ಅಲ್ಲಿ ಮರಳಿನ ಉಪಯುಕ್ತತೆ ಇರುವುದಿಲ್ಲ. ಅದೇ ಮರಳನ್ನು ಟ್ರಕ್ಕುಗಳಲ್ಲಿ, ಲಾರಿಗಳಲ್ಲಿ, ಗಾಡಿಗಳಲ್ಲಿ ಪಟ್ಟಣಗಳಿಗೆ ಸಾಗಿಸಿದರೆ ಪಟ್ಟಣಗಳಲ್ಲಿ ಮನೆಗಳನ್ನು ನಿರ್ಮಿಸಲು ಮರಳು ಉಪಯೋಗವಾಗುತ್ತದೆ. ಮೇಲಾಗಿ ಮರಳಿಗೆ ಬೆಲೆಯೂ ಸಿಗುವುದು. ಇದು ಸ್ಥಳದ ವರ್ಗಾವಣೆಯಿಂದ ಉಂಟಾದ ತುಷ್ಟಿಗುಣ.

(iii) **ಕಾಲದ ಉಪಯುಕ್ತತೆ :** ಕೆಲವು ವಸ್ತುಗಳನ್ನು ಹೇರಳವಾಗಿ ದೊರೆಯುವಾಗ ಕೊಂಡು ಶೇಖರಿಸಿಟ್ಟು ಅವುಗಳ ಪೂರೈಕೆಯು ಕಡಮೆಯಾದಾಗ ಮಾರಾಟ ಮಾಡಿದರೆ ಅವುಗಳಿಗೆ ಹೆಚ್ಚು ಬೆಲೆ ದೊರೆಯುತ್ತದೆ. ಇದು 'ಕಾಲದ ಉಪಯುಕ್ತತೆ'. ಸುಗ್ಗಿಯ ಕಾಲದಲ್ಲಿ ವರ್ತಕರು ಆಹಾರಧಾನ್ಯಗಳನ್ನು ಕಡಮೆ ಬೆಲೆಗೆ ಕೊಂಡು ಅವುಗಳನ್ನು ಶೇಖರಿಸಿಟ್ಟು, ಕೆಲವು ತಿಂಗಳ ನಂತರ ಎಲ್ಲರ ಬಳಿಯೂ ಆಹಾರ

ಧಾನ್ಯಗಳು ಮುಗಿದು ಹೋದಾಗ ಅವುಗಳನ್ನು ಮಾರಾಟಮಾಡಿ ಹೆಚ್ಚಿನ ಲಾಭ ಪಡೆಯುತ್ತಾರೆ. ಇದೂ ಒಂದು ಬಗೆಯ ಉತ್ಪಾದನೆ.

ಮೇಲಿನ ವಿವರಣೆಯಿಂದ ತಿಳಿದು ಬರುವ ಮುಖ್ಯ ಅಂಶ, ವಸ್ತುಗಳ ರೂಪ ಅಥವಾ ಆಕಾರವನ್ನು ಮಾರ್ಪಡಿಸುವುದರಿಂದ, ವಸ್ತುಗಳು ಹೇರಳವಾಗಿ ಸಿಗುವ ಪ್ರದೇಶಗಳಿಂದ ಅಭಾವವಿರುವ ಪ್ರದೇಶಗಳಿಗೆ ಸಾಗಿಸಿ ವರ್ಗಾವಣೆ ಮಾಡುವ ಮೂಲಕ ಹಾಗೂ ಹೇರಳವಾಗಿ ದೊರೆಯುವ ವೇಳೆಯಲ್ಲಿ ವಸ್ತುಗಳನ್ನು ಕೊಂಡು ಶೇಖರಿಸಿ, ಅವುಗಳ ಕೊರತೆ ಕಂಡುಬಂದಾಗ ಮಾರಾಟಮಾಡುವುದರಿಂದ ಉತ್ಪಾದನೆ ಉಂಟಾಗುತ್ತದೆ. ಅಂದರೆ ಆ ವಸ್ತುಗಳು ಹೆಚ್ಚು ಉಪಯುಕ್ತತೆಯನ್ನು ಪಡೆಯುತ್ತವೆ.

ಉತ್ಪಾದನಾ ಅಂಶಗಳು

ಫ್ರೇಸರನ ಪ್ರಕಾರ ಮೂಲ ಉತ್ಪಾದನಾ ಸಾಧನಗಳ ಒಂದು ಗುಂಪನ್ನು ಉತ್ಪಾದನೆಯ ಅಂಶಗಳೆಂದು ಕರೆಯಬಹುದು. ಈ ಒಂದೊಂದು ಗುಂಪಿನ ಬಿಡಿ ಸಾಧನಗಳಿಗೆ ಅಂಶಗಳೆಂದು ಹೆಸರು. ಫ್ರೆಡರಿಕ್ ಬೆನ್‌ಹ್ಯಾವನ್ ಪ್ರಕಾರ ಉತ್ಪಾದನೆಗೆ ನೆರವಾಗುವ ವಸ್ತು ಏನೇ ಇರಲಿ, ಅದು ಉತ್ಪಾದನೆಯ ಅಂಶ. ಉತ್ಪಾದನಾ ಕಾರ್ಯದಲ್ಲಿ ವಿವಿಧ ಅಂಶಗಳು ಪಾತ್ರ ವಹಿಸುತ್ತವೆ. ನಿಸರ್ಗ ಸಂಪತ್ತಿದ್ದರೆ ಮಾತ್ರ ಯಾವುದೊಂದು ವಸ್ತುವನ್ನು ಉತ್ಪಾದಿಸಲು ಸಾಧ್ಯ. ನಿಸರ್ಗಸಂಪತ್ತನ್ನು ಬಳಸಿ ಕೊಂಡು ಹೊರ ವಸ್ತುಗಳನ್ನು ಉತ್ಪಾದಿಸಬೇಕಾದರೆ ಕಾರ್ಮಿಕರು, ಯಂತ್ರೋಪಕರಣ ಗಳು ಬೇಕು. ಇವುಗಳ ಜೊತೆಗೆ ಉತ್ಪಾದನಾ ಕಾರ್ಯವನ್ನು ಸಂಘಟಿಸಲು ಸಂಘಟನಕಾರರು ಅಗತ್ಯ. ಯಾವುದೇ ಒಂದು ವಸ್ತುವನ್ನು ಉತ್ಪಾದನೆ ಮಾಡಬೇಕಾದರೆ ನಾಲ್ಕು ಅಂಶಗಳು ಅಥವಾ ಸಾಧನಗಳು ಅವಶ್ಯ. ಅವುಗಳೆಂದರೆ: (1) ಭೂಮಿ (2) ಶ್ರಮ (3) ಬಂಡವಾಳ ಮತ್ತು (4) ಸಂಘಟನೆ. ಈ ನಾಲ್ಕು ಅಂಶಗಳ ನೆರವು ಉತ್ಪಾದನೆಯಲ್ಲಿ ಅವಶ್ಯಕ. ಇವು ಉತ್ಪಾದನೆಗೆ ಅಗತ್ಯವಾಗಿ ಬೇಕಾದ ಸಾಧನಗಳಾಗಿವೆ. ಇವುಗಳಲ್ಲಿ ಯಾವುದೇ ಒಂದು ಅಂಶ ಕಡಿಮೆಯಾದರೂ ಉತ್ಪಾದನೆ ನಡೆಯಲಾರದು. ಭೂಮಿ ಇಲ್ಲದೆ ಕೃಷಿ ಮಾಡಲಾಗುವುದಿಲ್ಲ. ಭೂಮಿ ತಾನಾಗಿಯೇ ಬೇಕಾದ ವಸ್ತುಗಳನ್ನು ಉತ್ಪತ್ತಿ ಮಾಡಿಕೊಡುವುದಿಲ್ಲ. ಮನುಷ್ಯ ಶ್ರಮವಹಿಸಿ, ಬೆವರು ಸುರಿಸಿ ದುಡಿದರೆ ಬೇಕಾದಂತಹ ವಸ್ತುಗಳು ಉತ್ಪಾದನೆಯಾಗುತ್ತವೆ. ಅಂದರೆ ಭೂಮಿಯನ್ನು ಉತ್ತು, ಬಿತ್ತಿ, ಕಳೆ ತೆಗೆದು, ಪೈರನ್ನು ಕೊಯ್ದು ಶ್ರಮಪಟ್ಟಾಗ ಮಾತ್ರ ಉತ್ಪಾದನೆ ಸಾಧ್ಯ. ಹೀಗೆ ವಸ್ತುವಿನ ಉತ್ಪಾದನೆಗೆ ಭೂಮಿ ಮತ್ತು ಶ್ರಮ ಎರಡೂ ಮುಖ್ಯ. ಕೇವಲ ಭೂಮಿ ಮತ್ತು ಶ್ರಮಗಳಿದ್ದರೂ ವಸ್ತುಗಳ ಉತ್ಪಾದನೆಯಾಗುವುದಿಲ್ಲ. ಭೂಮಿಯನ್ನು ಉಳುಮೆ ಮಾಡಲು ನೇಗಿಲು ಹಾಗೂ ಎತ್ತು, ಬೀಜ,

ಗೊಬ್ಬರಗಳೇ ಮೊದಲಾದ ಇಲುವರಿ ವಸ್ತುಗಳು ಬೇಕು. ಇವುಗಳನ್ನು ಕೊಳ್ಳಲು ಹಣಬೇಕು. ಇದೇ ಬಂಡವಾಳ ಉದ್ದಿಮೆಗಳನ್ನು ಬೃಹತ್ ಪ್ರಮಾಣದಲ್ಲಿ ಕಾರ್ಯ ರೂಪಕ್ಕೆ ತರಲು ಸಂಘಟನಕಾರನ ಸೇವೆಯು ಬೇಕು. ಸಂಘಟನಕಾರನು ಉತ್ಪಾದನೆಯ ಇತರ ಅಂಶಗಳನ್ನು ಒಟ್ಟುಗೂಡಿಸಿ ಅವುಗಳನ್ನು ಉತ್ಪಾದನೆಯ ಕೆಲಸ ದಲ್ಲಿ ತೊಡಗಿಸುವುದರಲ್ಲಿ ನೈಪುಣ್ಯತೆಯನ್ನು ಪಡೆದಿರುತ್ತಾನೆ. ಸಂಘಟನಕಾರನು ನಿರ್ವಹಿಸಬೇಕಾದ ಮುಖ್ಯ ಕಾರ್ಯ ಇತರ ಉತ್ಪಾದನೆಯ ಅಂಶಗಳಾದ ಭೂಮಿ, ಕಾರ್ಮಿಕರು, ಬಂಡವಾಳಗಳನ್ನು ಸಂಘಟಿಸಿ ಉತ್ಪಾದನೆಯ ಕಾರ್ಯದಲ್ಲಿ ತೊಡಗಿಸು ವುದು. ಸಂಘಟನೆ ಇಲ್ಲದೆ ಉತ್ಪಾದನೆ ಸಾಧ್ಯವಿಲ್ಲ. ಅಂದರೆ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆ ಈ ನಾಲ್ಕು ಅಂಶಗಳು ಸಹಕರಿಸಿದರೆ ಮಾತ್ರ ವಸ್ತುಗಳ ಉತ್ಪಾದನೆಯಾಗುತ್ತದೆ.

1. ಭೂಮಿ

ಅರ್ಥಶಾಸ್ತ್ರದಲ್ಲಿ 'ಭೂಮಿ' ಎಂದರೆ ಪ್ರಕೃತಿಯ ಎಲ್ಲ ವಸ್ತು ಹಾಗೂ ಶಕ್ತಿ ಗಳನ್ನು ಮನುಷ್ಯ ತನ್ನ ಸ್ವಂತ ಉಪಯೋಗ ಹಾಗೂ ಉಪಭೋಗಕ್ಕಾಗಿ ಬಳಸುವುದು. ಭೂಮಿ ಎಂದರೆ ಮನುಷ್ಯನಿಗೆ ನಿಸರ್ಗ ಉಚಿತವಾಗಿ ನೀಡಿರುವ ಎಲ್ಲ ನೈಸರ್ಗಿಕ ವಸ್ತು ಗಳು. ಮಾನವನ ಕೃತಿಗಳಿಗೆ ಅವನು ಬಳಸುವ ಪದಾರ್ಥಗಳಿಗೆ ಭೂಮಿಯು ಮೂಲಾ ಧಾರವಾಗಿದೆ ಹಾಗೂ ಪ್ರಧಾನ ಮಿತ್ರನಾಗಿದೆ. ಭೂಮಿಯು ಮಾನವನ ಆರ್ಥಿಕ ಬೆಳವಣಿಗೆಗೆ ಎಡೆಮಾಡಿಕೊಡುವ ಪ್ರಚಂಡ ಶಕ್ತಿಯಾಗಿದೆ ಎಂದರ್ಥ. ಕೃಷಿಭೂಮಿ, ಖನಿಜ ಸಂಪತ್ತು, ಮಳೆ, ಸೂರ್ಯನ ಬೆಳಕು, ಅರಣ್ಯ ಸಂಪತ್ತು ಹೀಗೆ ನೈಸರ್ಗಿಕ ಸಂಪತ್ತೆಲ್ಲವೂ ಭೂಮಿಯಲ್ಲಿ ಅಡಕಗೊಂಡಿದ್ದು ಇವುಗಳೆಲ್ಲವೂ ನಿಸರ್ಗವು ಮಾನವನಿಗೆ ನೀಡಿರುವ ಅತಿ ಮುಖ್ಯವಾದ ಸಂಪತ್ತಾಗಿದೆ. ಈ ಸಂಪತ್ತುಗಳಿಲ್ಲದೆ ಯಾವ ವಸ್ತು ವನ್ನೂ ಉತ್ಪಾದಿಸಲಾಗುವುದಿಲ್ಲ. ನಿಸರ್ಗದ ಸಹಾಯವಿಲ್ಲದೆ ಮಾನವ ಬದುಕಲಾರ. ನಮಗೆ ಬೇಕಾದ ಪ್ರತಿಯೊಂದು ವಸ್ತುವನ್ನು ನಿಸರ್ಗದಿಂದ ಪಡೆಯುತ್ತೇವೆ. ಫಲವ ತ್ತಾದ ಭೂಮಿ, ಸಾಕಷ್ಟು ನೀರಿನ ಪೂರೈಕೆ, ಒಳ್ಳೆಯ ಹವಾಗುಣ ಹೊಂದಿರುವ ದೇಶ ಗಳಲ್ಲಿ ಹೆಚ್ಚು ಸಂಪತ್ತನ್ನು ಉತ್ಪಾದಿಸಬಹುದು. ಇಂತಹ ನೈಸರ್ಗಿಕ ಸಂಪತ್ತಿಲ್ಲದೆ ಯಾವ ವಿಧವಾದ ವಸ್ತುಗಳನ್ನೂ ಉತ್ಪಾದಿಸಲು ಸಾಧ್ಯವಿಲ್ಲ.

ಭೂಮಿಯ ಲಕ್ಷಣಗಳು : ಭೂಮಿಯು ಮೂಲ ಉತ್ಪಾದಕ ಸಾಧನ ಸಂಪತ್ತು. ಡೇವಿಡ್ ರಿಕಾರ್ಡೋ ಪ್ರಕಾರ ಭೂಮಿಯ ಗುಣಧರ್ಮಗಳು ಮೂಲ ಭೂತ ಹಾಗೂ ಅವಿನಾಶಿ. ಇದು ಕೆಲವು ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ. ಈ ಲಕ್ಷಣಗಳು ಉತ್ಪಾದನಾ ವ್ಯವಸ್ಥೆಯ ದೃಷ್ಟಿಯಿಂದ ಬಹಳ ಮುಖ್ಯವಾಗಿವೆ. ಭೂಮಿಗೆ ಮುಖ್ಯವಾಗಿ ಮುಂದಿನ ಪುಟಗಳಲ್ಲಿ ವಿವರಿಸಿರುವ ಐದು ಲಕ್ಷಣಗಳಿವೆ :

(i) **ನಿಸರ್ಗವು ಉಚಿತವಾಗಿ ನೀಡಿರುವ ಕೊಡುಗೆ :** ಅರ್ಥಶಾಸ್ತ್ರದಲ್ಲಿ ಭೂಮಿ ಎಂದರೆ ನೈಸರ್ಗಿಕ ಸಂಪತ್ತು. ಭೂಮಿಯ ದೃಷ್ಟಿಯಲ್ಲಿ ಮಾನವನ ಪ್ರಯತ್ನ ಸ್ವಲ್ಪವೂ ಇಲ್ಲ. ಮಾನವನ ಉಪಯೋಗಕ್ಕಾಗಿ ಹಾಗೂ ಅವನಿಗೆ ಅತ್ಯಾವಶ್ಯಕವಾದ ವಸ್ತುಗಳನ್ನು ಉತ್ಪಾದಿಸಿ ಉಪಭೋಗಿಸುವ ಸಲುವಾಗಿ ನಿಸರ್ಗ ಉಚಿತವಾಗಿ ನೀಡಿರುವ ಒಂದು ಕೊಡುಗೆಯೇ ಭೂಮಿ. ಗಾಳಿ, ಭೂಮಿ, ಕಾಡುಗಳು, ಖನಿಜಗಳು, ಸೂರ್ಯನ ಬೆಳಕು, ನೀರು ಇತ್ಯಾದಿಗಳಿಗೆ ನಾವು ಬೆಲೆಕೊಡುವುದಿಲ್ಲ. ಇವೆಲ್ಲವೂ ಪ್ರಕೃತಿಯ ವರ ಪ್ರಸಾದ. ಮನುಷ್ಯ ನೈಸರ್ಗಿಕ ವರಗಳನ್ನು ತನ್ನ ಉಪಯೋಗಕ್ಕೆ ಸರಿಹೊಂದುವಂತೆ ಮಾರ್ಪಡಿಸಿ, ಆ ವಸ್ತುಗಳಿಂದ ತನ್ನ ಜೀವನ ಸಾಗಿಸುತ್ತಾನೆ. ಅರಣ್ಯಗಳನ್ನು ನಾಶ ಪಡಿಸಿ, ಆ ಭೂಮಿಯಲ್ಲಿ ಕೃಷಿಮಾಡಿ ಆಹಾರ ಧಾನ್ಯಗಳನ್ನು ಉತ್ಪಾದಿಸುತ್ತಾನೆ. ಗಣಿಗಳಲ್ಲಿರುವ ಖನಿಜಗಳನ್ನು ಹೊರತೆಗೆಯುತ್ತಾನೆ. ಸಮುದ್ರದಲ್ಲಿ ಸಿಗುವ ಮುತ್ತು ಹವಳಗಳನ್ನು ಹುಡುಕಿ ತಂದು ತನ್ನ ಉಪಯೋಗಕ್ಕಾಗಿ ಬಳಸಿಕೊಳ್ಳುವನು. ಹರಿಯುವ ನದಿಗಳಿಗೆ ಅಡ್ಡಲಾಗಿ ಅಣೆಕಟ್ಟನ್ನು ಕಟ್ಟಿ, ನೀರನ್ನು ಶೇಖರಿಸಿ, ಅವರಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತಾನೆ. ಈ ರೀತಿ ಮಾನವನು ದೇವರು ಉದಾರವಾಗಿ ಉಚಿತವಾಗಿ ನೀಡಿದ ಕೊಡುಗೆಗಳನ್ನು ಜಾಣ್ಮೆಯಿಂದ ಬಳಸಿಕೊಳ್ಳುತ್ತ ತನ್ನ ಜೀವನ ಸಾಗಿಸುವನು. ಉತ್ಪಾದನೆಯ ಇತರ ಅಂಶಗಳಾದ ಶ್ರಮ, ಬಂಡವಾಳ, ಸಂಘಟನೆಗಳು ನಿಸರ್ಗವು ನೀಡಿರುವ ಕೊಡುಗೆಗಳಲ್ಲಿ ಅವೆಲ್ಲವೂ ಮಾನವನಿಂದ ನಿರ್ಮಿತವಾಗಿವೆ.

(ii) **ಪೂರೈಕೆಯು ಮಿತವಾಗಿರುವಿಕೆ :** ಭೂಮಿಯು ನಿಸರ್ಗವು ಉಚಿತವಾಗಿ ನೀಡಿರುವ ಕೊಡುಗೆ. ಆದರೆ ಈ ಕೊಡುಗೆಗೆ ಒಂದು ಮಿತಿ ಇದೆ. ನಿಸರ್ಗ ನೀಡಿರುವ ಯಾವುದೇ ಸಂಪತ್ತಾಗಲೀ ಅಪರಿಮಿತವಾಗಿರದೆ ಮಿತವಾಗಿರುತ್ತದೆ. ಅದನ್ನು ಹೆಚ್ಚು ಕಡಮೆ ಮಾಡಲು ಸಾಧ್ಯವಿಲ್ಲ. ಬೆಲೆ ಹೆಚ್ಚಿದಂತೆ ಉಳಿದ ವಸ್ತುಗಳನ್ನು ಉತ್ಪಾದಿಸಬಹುದು. ಆದರೆ ಭೂಮಿಯ ವಿಸ್ತೀರ್ಣವನ್ನು ಹೆಚ್ಚಿಸಲಾಗುವುದಿಲ್ಲ. ಬೆಲೆ ಕುಗ್ಗಿದಂತೆ ಉಳಿದ ವಸ್ತುಗಳ ಪೂರೈಕೆಯನ್ನು ಕಡಮೆ ಮಾಡಬಹುದು. ಆದರೆ ಭೂಮಿಯ ವಿಸ್ತೀರ್ಣವನ್ನು ಕಡಮೆ ಮಾಡಲಾಗುವುದಿಲ್ಲ. ಅಂದರೆ ಮನಸ್ಸಿಗೆ ಬಂದಂತೆ ಭೂಮಿಯ ಪೂರೈಕೆಯನ್ನು ಹಿಗ್ಗಿಸುವುದಾಗಲೀ ಕುಗ್ಗಿಸುವುದಾಗಲೀ ಸಾಧ್ಯವಿಲ್ಲ. ಭೂಮಿಯ ಪೂರೈಕೆ ಮಿತವಾದುದು. ಭೂಮಿಗೆ ಪೂರೈಕೆ ಬೆಲೆಯಿಲ್ಲ. ಅಂದರೆ ಬೆಲೆ ಹೆಚ್ಚಿದಾಗ ಅದಕ್ಕೆ ತಕ್ಕಂತೆ ಭೂಮಿಯು ಪೂರೈಕೆಯನ್ನು ಹೆಚ್ಚಿಸುವುದು ಸಾಧ್ಯವಿಲ್ಲ. ಅದೇ ರೀತಿ ಬೆಲೆ ಇಳಿದಾಗ ಭೂಮಿಯ ಪ್ರಮಾಣವನ್ನು ತಗ್ಗಿಸಲಾಗುವುದಿಲ್ಲ.

(iii) **ಸ್ಥಿರವಾಗಿರುವಿಕೆ :** ಭೂಮಿ ಯಾವಾಗಲೂ ಸ್ಥಿರವಾಗಿರುವ ಗುಣವನ್ನು ಹೊಂದಿದೆ. ಆದರೆ ಇತರ ಉತ್ಪಾದನೆಯ ಅಂಶಗಳು ಈ ಗುಣವನ್ನು ಹೊಂದಿಲ್ಲ. ಅವು ಕಾಲಕ್ರಮೇಣ ನಾಶವಾಗುತ್ತವೆ. ಬಂಡವಾಳ ಕ್ಷೀಣವಾಗುತ್ತದೆ. ಯಂತ್ರಗಳು ಸವೆದು ಹೋಗುತ್ತವೆ. ಭೂಮಿ ಮಾತ್ರ ಶಾಶ್ವತವಾಗಿ ಉಳಿಯುತ್ತದೆ. ಮೇಲಾಗಿ

ಯಾವಾಗಲೂ ಭೂಮಿಯು ಒಂದೇ ಬಗೆಯಾಗಿರುತ್ತದೆ. ಭೂಕಂಪಗಳು ಸಂಭವಿಸಿದಾಗ್ಯೂ ಉಳಿದ ಅಂಶಗಳು ನಾಶವಾಗುತ್ತವೆಯೇ ಹೊರತು ಭೂಮಿ ನಾಶವಾಗುವುದಿಲ್ಲ. ಭೂಮಿಯನ್ನು ನಾಶಪಡಿಸುವುದು ಅಸಾಧ್ಯ. ಆದರೆ ಭೂಮಿಯ ಫಲವತ್ತತೆಯನ್ನು ಕಡಮೆ ಮಾಡಬಹುದು. ಅಂದರೆ ಒಂದೇ ಪ್ರದೇಶದಲ್ಲಿ ಹೆಚ್ಚು ಹೆಚ್ಚು ಧಾನ್ಯಗಳನ್ನು ಬೆಳೆದಂತೆ ಆ ಭೂಮಿಯ ಫಲವತ್ತತೆ ಕಡಮೆಯಾಗಬಹುದು. ಆದರೆ ಕೆಲವು ಕಾಲ ಆ ಭೂಮಿಯಲ್ಲಿ ಏನನ್ನೂ ಬೆಳೆಯದೆ ಬೀಳುಬಿಟ್ಟರೆ ಮತ್ತೆ ಆ ಭೂಮಿಯು ಮೊದಲಿನ ಫಲವತ್ತತೆಯನ್ನು ಪಡೆದುಕೊಳ್ಳುವುದು. ಹೀಗೆ ಭೂಮಿಯು ಸ್ಥಿರವಾಗಿರುವ ಲಕ್ಷಣವನ್ನು ಹೊಂದಿದೆ.

(iv) **ಭೌಗೋಳಿಕ ಚಲನಶಕ್ತಿ ಪಡೆದಿರುವಿಕೆ :** ಉತ್ಪಾದನಾ ಅಂಶಗಳಾದ ಬಂಡವಾಳ, ಕಾರ್ಮಿಕರು ಮತ್ತು ಸಂಘಟನೆಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಬಹುದು. ವಸ್ತುಗಳನ್ನೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಬಹುದು. ಆದರೆ ಭೂಮಿಯನ್ನು ಮಾತ್ರ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲಾಗುವುದಿಲ್ಲ. ಅಂದರೆ ಭೂಮಿ ಅಚಲ. ಭೂಮಿ ಇರುವ ಸ್ಥಳದಲ್ಲಿಯೇ ಉತ್ಪಾದಿಸಬೇಕು. ಅಂತೆಯೇ ಗಣಿಗಳನ್ನೂ ಸಹ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲಾಗುವುದಿಲ್ಲ. ಇತರ ಉತ್ಪಾದನಾ ಅಂಶಗಳಾದ ಬಂಡವಾಳ, ಕೂಲಿಕಾರ ಮತ್ತು ಸಂಘಟನಕಾರ ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸಬಹುದು. ಆದರೆ ಭೂಮಿಯು ಭೌಗೋಳಿಕ ಚಲನಶಕ್ತಿಯನ್ನು ಪಡೆದಿಲ್ಲ. ಇದು ಭೂಮಿಯ ವಿಶಿಷ್ಟ ಲಕ್ಷಣ.

(v) **ವೈವಿಧ್ಯತೆ :** ಭೂಮಿಯು ಹೊಂದಿರುವ ಮತ್ತೊಂದು ಲಕ್ಷಣ ಭೂಮಿಯ ಎಲ್ಲ ಭಾಗಗಳೂ ಒಂದೇ ಗುಣವನ್ನು ಹೊಂದಿರುವುದಿಲ್ಲ. ಅಂದರೆ ಭೂಮಿಯ ಫಲವತ್ತತೆಯಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವ್ಯತ್ಯಾಸವಿರುತ್ತದೆ. ಒಂದೇ ತೆರನಾದ ಎರಡು ತುಂಡು ಭೂಮಿ ಸಿಗುವುದು ಅಸಾಧ್ಯ. ಭೂಮಿಯ ಒಂದು ಭಾಗವಿದ್ದಂತೆ ಮತ್ತೊಂದು ಭಾಗವಿರುವುದಿಲ್ಲ. ಅಂದರೆ ಎರಡು ಬೇರೆ ಬೇರೆ ಭೂಮಿಗಳನ್ನು ಪರೀಕ್ಷಿಸಿದರೆ ಅವು ಒಂದೇ ಸಮನಾಗಿರುವುದಿಲ್ಲ. ಅವು ನಾನಾ ವ್ಯತ್ಯಾಸಗಳನ್ನು ಹೊಂದಿರುತ್ತವೆ. ಒಂದು ಹೊಲದ ಒಂದು ಭಾಗ ಮತ್ತೊಂದು ಭಾಗಕ್ಕಿಂತಲೂ ಫಲವತ್ತಾಗಿರಬಹುದು ಅಥವಾ ಬಂಜರು ಪ್ರದೇಶವಾಗಿರಬಹುದು. ಒಂದು ಪ್ರದೇಶವು ಗೋಧಿಯನ್ನು ಬೆಳೆಯಲು ಯೋಗ್ಯವಾಗಿದ್ದರೆ ಇನ್ನೊಂದು ಪ್ರದೇಶವು ಬತ್ತ ಬೆಳೆಯಲು ಯೋಗ್ಯವಾಗಿರುತ್ತದೆ. ಇತರ ಉತ್ಪಾದನಾ ಅಂಶಗಳಿಗೆ ಭೂಮಿಯನ್ನು ಹೋಲಿಸಿದಾಗ ಭೂಮಿಯು ಅನೇಕ ವಿಶಿಷ್ಟ ಲಕ್ಷಣಗಳನ್ನು ಹೊಂದಿರುವುದು ಕಂಡುಬರುತ್ತದೆ.

2. ಶ್ರಮ

ವಸ್ತುಗಳನ್ನು ಉತ್ಪಾದಿಸಲು ನೆರವಾಗುವ ಅತ್ಯಂತ ಮುಖ್ಯವಾದ ಎರಡನೆಯ ಅಂಶ ಶ್ರಮ. ಪ್ರಕೃತಿಯಲ್ಲಿ ಅಡಗಿರುವ ಸುಪ್ತ ಸಂಪತ್ತನ್ನು ಪಡೆಯುವುದು ಸುಲಭವಲ್ಲ. ಅದನ್ನು ಪಡೆದು ಅನುಭವಿಸಬೇಕಾದರೆ ಮಾನವನ ಶ್ರಮ ಮತ್ತು ಪ್ರಯತ್ನಗಳನ್ನು ವಿನಿಯೋಗಿಸುವುದು ಅಗತ್ಯ. ಶ್ರಮವಿಲ್ಲದೆ, ಶ್ರಮದ ನೆರವಿಲ್ಲದೆ ವಸ್ತುಗಳನ್ನು ಉತ್ಪಾದಿಸುವುದು ಅಶಕ್ಯ. ಏಕೆಂದರೆ ಬರೀಯ ನೈಸರ್ಗಿಕ ಸಂಪತ್ತು ಇದ್ದ ಮಾತ್ರಕ್ಕೆ ವಸ್ತುವಿನ ಉತ್ಪಾದನೆಯಾಗುವುದಿಲ್ಲ. ಆ ನೈಸರ್ಗಿಕ ಸಂಪತ್ತನ್ನು ಮಾನವನು ತನ್ನ ಶ್ರಮದಿಂದ ಉಪಯೋಗಿಸಿದಾಗಲೇ ವಸ್ತುವಿನ ಉತ್ಪಾದನೆಯಾಗುವುದು ಸಾಧ್ಯ. ಅಂದರೆ ಮಾನವನ ಶ್ರಮ ಬಹಳ ಮುಖ್ಯವಾದುದು.

ಅರ್ಥಶಾಸ್ತ್ರದಲ್ಲಿ 'ಶ್ರಮ' ಎಂಬ ಶಬ್ದಕ್ಕೆ ವಿಶಿಷ್ಟವಾದ ಅರ್ಥವಿದೆ. ದೈಹಿಕವಾಗಿಯಾಗಲೀ ಮಾನಸಿಕವಾಗಿಯಾಗಲೀ ಯಾರು ಪ್ರತಿಫಲಕ್ಕಾಗಿ ಕೆಲಸ ಮಾಡುವರೋ ಅವರು ಶ್ರಮಿಕರು ಎನಿಸಿಕೊಳ್ಳುವರು. ಡಾಕ್ಟರುಗಳು ಉಪಾಧ್ಯಾಯರು ಮಾಡುವ ಕೆಲಸವೂ ಶ್ರಮ. ಕಾರ್ಖಾನೆಯಲ್ಲಿ ಕೆಲಸಗಾರರು ಮಾಡುವ ಕೆಲಸವೂ ಶ್ರಮ. ಅಂದರೆ ದೈಹಿಕ ಮತ್ತು ಮಾನಸಿಕ ಶ್ರಮ ಎರಡೂ ಸೇರಿವೆ. ಇಲ್ಲಿ ಉಪಾಧ್ಯಾಯರು ವಕೀಲರು, ಡಾಕ್ಟರುಗಳು, ಮಾನಸಿಕ ಶ್ರಮವನ್ನು ವಿನಿಯೋಗಿಸಿದರೆ, ಕಾರ್ಖಾನೆಯ ಕೆಲಸಗಾರರು ದೈಹಿಕ ಶ್ರಮವನ್ನು ವಿನಿಯೋಗಿಸುವರು. ಎಲ್ಲರೂ ತಮ್ಮ ಶ್ರಮವನ್ನು ವಿನಿಯೋಗಿಸುವುದು ಪ್ರತಿಫಲ ಹೊಂದಲು (ಹಣ ಗಳಿಸಲು). ಅಂದರೆ ಶ್ರಮವನ್ನು ಹಣಕ್ಕೆ ಮಾರಿದರೆ ಮಾತ್ರ ಆ ಶ್ರಮ ಅರ್ಥಶಾಸ್ತ್ರದಲ್ಲಿ ಶ್ರಮವಾಗುತ್ತದೆ. ಅಂದರೆ ಧನಾರ್ಜನೆಗೆ ಸಾಧಕವಾಗುವ ಮಾನವ ಪ್ರಯತ್ನವೆಲ್ಲವೂ ಶ್ರಮ. ಈ ಅರ್ಥದಲ್ಲಿ ಶ್ರಮಿಕನು ಕೂಲಿಕಾರನಿರಲಿ, ಶಿಕ್ಷಕನಿರಲಿ, ವೈದ್ಯನಿರಲಿ, ಪೋಲೀಸಿನವನಿರಲಿ ಇವರೆಲ್ಲರೂ ಪ್ರತಿಫಲವನ್ನು ಅಪೇಕ್ಷಿಸಿ ಕೆಲಸಮಾಡಿದ್ದಾದರೆ ಆ ಕೆಲಸವು ಶ್ರಮ ಎನಿಸಿಕೊಳ್ಳುತ್ತದೆ. ಆದರೆ ಸಂತೋಷಕ್ಕಾಗಿ ಕೈಗೊಂಡ ಕಾರ್ಯಗಳು ಶ್ರಮದ ಕಕ್ಷೆಯಲ್ಲಿ ಬರುವುದಿಲ್ಲ. ಕೆಲವು ಸಲ ಪುಕ್ಕಟೆಯಾಗಿ, ಸ್ವಸಂತೋಷಕ್ಕಾಗಿ, ಕರ್ತವ್ಯ ನೆರವೇರಿಸಲು ಮಾಡಿದ ಶ್ರಮ, ಅರ್ಥಶಾಸ್ತ್ರದಲ್ಲಿ ಶ್ರಮವಾಗಲಾರದು. ಉದಾಹರಣೆಗೆ ಮಕ್ಕಳನ್ನು ನೋಡಿಕೊಳ್ಳುವುದರಲ್ಲಿ ತಾಯಿಯ ಶ್ರಮ. ಮಗು ಅನಾರೋಗ್ಯದಿಂದಿದ್ದಾಗ ತಾಯಿ ಆರೈಕೆ ಮಾಡುತ್ತಾಳೆ. ಶ್ರಮದಿಂದ ದಂಡಿದು ರಕ್ಷಣೆ ಮಾಡುವಳು. ಆದರೆ ತನ್ನ ಶ್ರಮಕ್ಕೆ ತಾಯಿ ಪ್ರತಿಫಲವನ್ನು ಅಪೇಕ್ಷಿಸುವುದಿಲ್ಲ. ಅಂದರೆ ತಾಯಿಯ ಶ್ರಮ ಶ್ರಮವಲ್ಲ. ಏಕೆಂದರೆ ಹಣದ ರೂಪದಲ್ಲಿ ಆಕೆಗೆ ಪ್ರತಿಫಲ ದೊರೆಯುವುದಿಲ್ಲ. ಆದರೆ ಇದೇ ಕೆಲಸವನ್ನು ಆಸ್ಪತ್ರೆಯಲ್ಲಿ ಒಬ್ಬ ದಾದಿಯು ಮಾಡಿದ್ದಾದರೆ ಅದು ಶ್ರಮ. ಅವಳು ಪ್ರತಿಫಲಕ್ಕಾಗಿ ಶ್ರಮಮಾಡಿರುತ್ತಾಳೆ. ಅವಳು ಶ್ರಮಪಟ್ಟು ದುಡಿದುದು ಹಣವನ್ನು ಗಳಿಸಲು. ಆದ ಕಾರಣ, ದಾದಿಯ ಶ್ರಮವು ಅರ್ಥಶಾಸ್ತ್ರದಲ್ಲಿ

ಶ್ರಮವೆನಿಸಿಕೊಳ್ಳುವುದು. ಹೀಗೆಯೇ ತಂದೆ ಮಗನಿಗೆ ಹೇಳಿಕೊಡುವ ಪಾಠ, ದೈಹಿಕ ಆರೋಗ್ಯಪಾಲನೆಗಾಗಿ ಮಾಡುವ ವ್ಯಾಯಾಮ, ನಮ್ಮ ಸ್ವಂತ ತೋಟದಲ್ಲಿ ಮಾಡುವ ಕೆಲಸ, ಇವು ಸಾಮಾನ್ಯ ಅರ್ಥಶಾಸ್ತ್ರದಲ್ಲಿ ಶ್ರಮ ಎನಿಸಿಕೊಂಡರೂ ಅರ್ಥಶಾಸ್ತ್ರದ ದೃಷ್ಟಿಯಲ್ಲಿ ಶ್ರಮವಲ್ಲ. ಏಕೆಂದರೆ ಇವೆಲ್ಲವೂ ಸ್ವಸಂತೋಷಕ್ಕಾಗಿ ಪ್ರತಿಫಲಾಪೇಕ್ಷೆ ಇಲ್ಲದೆ ಕೈಗೊಂಡ ಕಾರ್ಯಗಳು. ಇವರಿಂದ ತಿಳಿದುಬರುವ ಅಂಶ ಹಣಕ್ಕಾಗಿ ಮಾಡಿದ ಮಾನಸಿಕ ಹಾಗೂ ದೈಹಿಕ ಶ್ರಮವನ್ನು ನಿಜವಾದ ಶ್ರಮವೆಂಬುದು. ಆದರೆ ಆ ಶ್ರಮ ಇತರರಿಗಾಗಿ ವಿನಿಯೋಗವಾಗಬೇಕು ಹಾಗೂ ಆ ಶ್ರಮಕ್ಕೆ ಪ್ರತಿಫಲವಾಗಿ ಹಣ ದೊರೆಯಬೇಕು. ಅಂತಹ ಕೆಲಸ ದೈಹಿಕವಾಗಲೀ, ಮಾನಸಿಕವಾಗಲೀ ವಿನಿಯೋಗ ವಾದರೆ ಅಂತಹುದನ್ನೇ ಶ್ರಮ ಎನ್ನುವುದು.

ಉತ್ಪಾದೀ ಹಾಗೂ ಅನುತ್ಪಾದೀಶ್ರಮ

ಹದಿನೆಂಟನೇ ಶತಮಾನದ ಫ್ರೆಂಚ್ ಪ್ರಕೃತಿ ಪ್ರಾಧಾನ್ಯವಾದಿಗಳು (ಫಿಸಿಯೋಕ್ರಾಟ್ಸ್) ಉತ್ಪಾದೀಶ್ರಮ ಎಂಬ ಶಬ್ದವನ್ನು ಮೊಟ್ಟ ಮೊದಲಿಗೆ ಬಳಸಿದರು. ಇವರ ಪ್ರಕಾರ ಕೃಷಿ ಮಾತ್ರ ಉತ್ಪಾದೀಶ್ರಮ. ಉಳಿದ ಎಲ್ಲ ಬಗೆಯ ಶ್ರಮವನ್ನು ಅನುತ್ಪಾದೀಶ್ರಮವೆಂದು ಇವರು ಪರಿಗಣಿಸಿದ್ದರು. ಇವರ ದೃಷ್ಟಿಯಲ್ಲಿ ಕೃಷಿಯೊಂದೇ ಫಲದಾಯಕ. ಆದ್ದರಿಂದ, ಕೃಷಿಯಲ್ಲಿ ವಿನಿಯೋಗಿಸಲಾದ ಶ್ರಮವನ್ನು ಉತ್ಪಾದೀ ಶ್ರಮವೆಂದೂ, ಕೈಗಾರಿಕೆ, ವಾಣಿಜ್ಯ ಮುಂತಾದ ಕ್ಷೇತ್ರ ಗಳಲ್ಲಿನ ಶ್ರಮವನ್ನು ಅನುತ್ಪಾದೀಶ್ರಮವೆಂದು ಇವರು ಸಾರಿದರು. ಆದರೆ ಕಾಲ ಕ್ರಮೇಣ ಸಿದ್ಧವಸ್ತುಗಳ ತಯಾರಕರ ಶ್ರಮವನ್ನೂ ಉತ್ಪಾದೀಶ್ರಮದ ಪಟ್ಟಿಯಲ್ಲಿ ಸೇರಿಸಲಾಯಿತು.

'ಉತ್ಪಾದೀಶ್ರಮ' ಎಂದರೆ ಸಂಪತ್ತಿನ ಉತ್ಪಾದನೆಗೆ ಕಾರಣವಾದ ದುಡಿಮೆ ಎಂದರ್ಥ. ಆಡಂ ಸ್ಮಿತ್ ಹಾಗೂ ಆತನ ಕಾಲದ ಇತರ ಅರ್ಥಶಾಸ್ತ್ರಜ್ಞರ ಅಭಿಪ್ರಾಯದಲ್ಲಿ ವಸ್ತುಗಳ ಮೌಲ್ಯವನ್ನು ಹೆಚ್ಚಿಸದ ದುಡಿಮೆ ಉತ್ಪಾದೀಶ್ರಮವಲ್ಲ. ಅಂದರೆ ಕಣ್ಣಿಗೆ ಕಾಣುವಂತಹ ವಸ್ತುಗಳನ್ನು ಉತ್ಪಾದಿಸಿದಾಗ ಮಾತ್ರ ಶ್ರಮವು ಉತ್ಪಾದೀಶ್ರಮವಾಗುತ್ತದೆ. ಈ ದೃಷ್ಟಿಯಿಂದ ನಟ, ಸಂಗೀತಗಾರ, ಸೈನಿಕ, ವಕೀಲ, ಅಧ್ಯಾಪಕ ಮೊದಲಾದವರ ಸೇವೆಗಳು ಉತ್ಪಾದೀಶ್ರಮಗಳಲ್ಲ.

ಆದರೆ ಆಧುನಿಕ ಅರ್ಥಶಾಸ್ತ್ರಜ್ಞರ ಪ್ರಕಾರ ಭೌತಿಕ ಮತ್ತು ಅಭೌತಿಕ ಸೇವೆ ಗಳನ್ನು ಉತ್ಪಾದಿಸುವ ಶ್ರಮಗಳೆರಡೂ ಉತ್ಪಾದೀಶ್ರಮ ಎನಿಸಿಕೊಳ್ಳುತ್ತವೆ. ಇವರ ದೃಷ್ಟಿಯಲ್ಲಿ ಉತ್ಪಾದೀಶ್ರಮ ಹಾಗೂ ಅನುತ್ಪಾದೀಶ್ರಮಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಸಾರಿಗೆ ಕೆಲಸಗಾರರು, ಬ್ಯಾಂಕ್ ನೌಕರರು ಮೊದಲಾದ ಶ್ರಮಜೀವಿಗಳು

ತಮ್ಮ ತಮ್ಮ ಕ್ಷೇತ್ರಗಳಲ್ಲಿ ವಿನಿಯೋಗಿಸುವ ಶ್ರಮ ಮತ್ತು ಕೈಗಾರಿಕೋದ್ಯಮಗಳಲ್ಲಿ ಬುದ್ಧಿಶಕ್ತಿಯನ್ನು ಒದಗಿಸುವ ಉದ್ಯಮ ಚಾಲಕರ, ವ್ಯವಸ್ಥಾಪಕರ ಹಾಗೂ ಆಡಳಿತಗಾರರ ಶ್ರಮ ಈ ಎರಡೂ ಕಚ್ಚಾವಸ್ತುಗಳನ್ನು ಬೆಳೆಯುವವರ ಮತ್ತು ಕೈಗಾರಿಕಾ ಉಪಕರಣಗಳನ್ನು ತಯಾರಿಸುವವರ ಶ್ರಮದಷ್ಟೇ ಮುಖ್ಯವಾದದ್ದೆಂದು ಆಧುನಿಕ ಅರ್ಥಶಾಸ್ತ್ರಜ್ಞರು ತೋರಿಸಿಕೊಟ್ಟಿದ್ದಾರೆ.

ಉತ್ಪಾದೀ ಹಾಗೂ ಅನುತ್ಪಾದೀಶ್ರಮದ ಬಗ್ಗೆ ಇನ್ನೂ ಕೆಲವು ಅಂಶಗಳನ್ನು ಗಮನಿಸಬೇಕು. ಹಲವು ವೇಳೆ ಶ್ರಮದ ಉದ್ದೇಶ ಸಫಲವಾಗದಿರಬಹುದು. ವಸ್ತು (ಭೌತಿಕ) ಹಾಗೂ ಸೇವೆ (ಅಭೌತಿಕ)ಗಳಲ್ಲಿ ಉಪಯುಕ್ತತೆಯನ್ನು ಸೃಷ್ಟಿಸುವ ಉದ್ದೇಶ ಇದ್ದರೂ ಆ ಶ್ರಮ ವಿಫಲಗೊಳ್ಳಬಹುದು. ಉದಾಹರಣೆಗೆ ಪನಾಮಾ ಕಾಲುವೆಯ ನಿರ್ಮಾಣವನ್ನು ಮೊಟ್ಟಮೊದಲು ಕೈಗೊಂಡಾಗ ಅದರಲ್ಲಿ ವಿನಿಯೋಗಿಸಿದ ಶ್ರಮ ವಿಫಲವಾಯಿತು. ಮತ್ತೆ ಆ ಕೆಲಸದಲ್ಲಿ ತೊಡಗಿದಾಗ ಅದನ್ನು ಸಾಧಿಸಲು ಮತ್ತೆ ಶ್ರಮವನ್ನು ಬಳಸಿಕೊಳ್ಳಲಾಯಿತು. ಅಂದರೆ ಮೊದಲು ಉಪಯೋಗಿಸಿದ ಶ್ರಮ ವ್ಯರ್ಥವಾಯಿತು. ಮಾರ್ಷಾಲ್‌ರವರ ಪ್ರಕಾರ ಇಂಥ ವ್ಯರ್ಥವಾದ ಶ್ರಮವನ್ನು ಅನುತ್ಪಾದೀಶ್ರಮವೆಂದು ಪರಿಗಣಿಸಬೇಕು.

ಸಮಾಜಘಾತಕ ಕಾರ್ಯಗಳಿಗಾಗಿ ಬಳಸಲಾದ ಶ್ರಮವೂ ಅನುತ್ಪಾದೀಶ್ರಮವಾಗುತ್ತದೆ. ಉದಾಹರಣೆಗೆ ಹಡಗುಗಳ್ಳರು, ದರೋಡೆಕಾರರು, ಕಳ್ಳರು, ಜೂಜುಕೋರರು ಮುಂತಾದವರು. ಆದರೆ ಅಳಲೆಕಾಯಿಪಂಡಿತ, ಮದ್ಯತಯಾರಕ ಇವರ ಶ್ರಮವು ಉತ್ಪಾದೀಶ್ರಮವಾಗುತ್ತದೆ. ಏಕೆಂದರೆ ಇಲ್ಲಿ ವಸ್ತುವಿನ ಉತ್ಪಾದನೆಯಾಗದಿದ್ದರೂ ಇವರ ಸೇವೆಯ ಫಲವನ್ನು ಹಣ ಕೊಟ್ಟು ಕೊಳ್ಳುವವರಿದ್ದಾರೆ. ಅರ್ಥಶಾಸ್ತ್ರದ ವ್ಯಾಪ್ತಿಯಲ್ಲಿ ನೀತಿ, ಅನೀತಿಗಳಿಗೆ ಸ್ಥಾನವಿಲ್ಲ. ವಿಮಾಕೆಲಸಗಾರರ ಮತ್ತು ಸಮರ್ಥರಾದ ಸಣ್ಣ ವ್ಯಾಪಾರಿಗಳ ಶ್ರಮವನ್ನು ಉತ್ಪಾದೀಶ್ರಮವೆಂದು ಪರಿಗಣಿಸಲಾಗುತ್ತದೆ. ಶ್ರಮಿಕರ ದೃಷ್ಟಿಯಲ್ಲಿ ಉಪಯುಕ್ತತೆ ಹೊಂದಿರುವ ಚಟುವಟಿಕೆಗಳೆಲ್ಲವೂ ಉತ್ಪಾದೀಶ್ರಮ. ನ್ಯಾಯ ಸಮ್ಮತವಲ್ಲದ ಚಟುವಟಿಕೆಗಳು ಈ ಕಕ್ಷೆಯಲ್ಲಿ ಬರುವುದಿಲ್ಲ. ಉದಾಹರಣೆಗೆ ಸಟ್ಟಾವ್ಯಾಪಾರಿಗಳ ಶ್ರಮ ಹಾಗೂ ಶಿಕ್ಷಾರ್ಹ ಚಟುವಟಿಕೆಗಳು ಉತ್ಪಾದೀಶ್ರಮ ಆಗಲಾರವು.

ಶ್ರಮದ ಲಕ್ಷಣಗಳು : ಶ್ರಮವು ಉತ್ಪಾದನೆಯ ದ್ವಿತೀಯ ಅಂಶ. ಶ್ರಮವೂ ಇತರ ಉತ್ಪಾದನಾ ಅಂಶಗಳಂತೆ, ಐದು ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ. ಇವು ಈ ಕೆಳಕಂಡಂತಿವೆ :

(i) **ಶ್ರಮ ಶ್ರಮಿಕನಿಂದ ಪ್ರತ್ಯೇಕಿಸಲಾಗದ ಶಕ್ತಿ :** ಶ್ರಮವು ಶ್ರಮಿಕನೊಂದಿಗೆ ಹಾಸುಹೊಕ್ಕಾಗಿ ಹೊಂದಿಕೊಂಡಿದೆ. ಶ್ರಮ ಶ್ರಮಿಕನಿಗೆ ರಕ್ತಗತವಾಗಿ ಬಂದಿರುತ್ತದೆ. ಶ್ರಮಿಕನಾದವನು ತನ್ನ ಶ್ರಮವನ್ನು ಇತರರಿಗೆ ಮಾರಾಟ ಮಾಡುವವನೇ ಹೊರತು

ತನ್ನನ್ನೇ ಮಾರಿಕೊಳ್ಳುವುದಿಲ್ಲ. ಶ್ರಮವನ್ನು ವಿನಿಯೋಗಿಸಬೇಕಾದರೆ ಶ್ರಮಿಕ ಸ್ವತಃ ದೈಹಿಕವಾಗಿ ಕೆಲಸದಲ್ಲಿರಬೇಕಾಗುತ್ತದೆ. ಅಂದರೆ ಶ್ರಮಿಕನಿಂದ ಕೆಲಸವನ್ನು ಬೇರ್ಪಡಿಸಲಾಗುವುದಿಲ್ಲ. ತಾನು ಮಾಡುವ ಕೆಲಸವನ್ನು ತಾನೇ ಸ್ವತಃ ಮಾಡಬೇಕಾಗುತ್ತದೆ. ತಾನು ಮಾಡುವ ಕೆಲಸವನ್ನು ಮತ್ತೊಬ್ಬರಿಗೆ ಹೇಳಿಮಾಡಿಸಲು ಬರುವುದಿಲ್ಲ. ಉಪಾಧ್ಯಾಯ ಅಥವಾ ವೈದ್ಯನು ಮನೆಯಲ್ಲಿ ಕುಳಿತು ತನ್ನ ಶ್ರಮವನ್ನು ಕಳಿಸಲಾಗುವುದಿಲ್ಲ. ಇದೇ ರೀತಿ ಕಾರ್ಖಾನೆಯ ಕೆಲಸಗಾರ ಹಣವನ್ನು ಗಳಿಸಬೇಕಾದರೆ ತಾನೇ ಸ್ವತಃ ಕಾರ್ಖಾನೆಗೆ ಹೋಗಿ ಕೆಲಸಮಾಡಬೇಕು. ಅಂದರೆ ಶ್ರಮಿಕನಿಂದ ಶ್ರಮವನ್ನು ಪ್ರತ್ಯೇಕಿಸಲಾಗುವುದಿಲ್ಲ. ಶ್ರಮಿಕನಿಗೂ ಶ್ರಮಕ್ಕೂ ಪರಸ್ಪರ ನಿಕಟ ಸಂಬಂಧವಿದೆ.

(ii) **ಶ್ರಮವು ಮಾನವೀಯವಾಗಿರುವಿಕೆ :** ಉತ್ಪಾದನೆಯ ಇತರ ಅಂಶಗಳಾದ ಭೂಮಿ ಮತ್ತು ಬಂಡವಾಳಗಳು ಶ್ರಮದಂತೆ ಮಾನವೀಯವಲ್ಲ. ಎಲ್ಲ ಬಗೆಯ ವಸ್ತುಗಳನ್ನು ಉತ್ಪಾದಿಸುವ ಮುಖ್ಯಗುರಿ ಮಾನವನ ಇಷ್ಟಗಳನ್ನು ತೃಪ್ತಿಪಡಿಸುವಿಕೆ. ಆದ್ದರಿಂದ ದುಡಿಯುವ ಶ್ರಮಿಕನನ್ನು ಮಾನವೀಯತೆ ಮತ್ತು ಪ್ರೀತಿಯಿಂದ ಕಾಣಬೇಕು. ಭೂಮಿ, ಬಂಡವಾಳಗಳು ಜೀವವಿಲ್ಲದ ವಸ್ತುಗಳು. ಅವುಗಳನ್ನು ನೋಡಿದಂತೆ ಶ್ರಮಿಕನನ್ನು ನೋಡಬಾರದು. ಅವನಿಗೆ ವೇತನ ಕೊಡುವುದಷ್ಟೇ ಮುಖ್ಯವಲ್ಲ. ಆದರ ಜೊತೆಗೆ ಕೆಲಸ ಮಾಡುವ ವೇಳೆ, ವಿಶ್ರಾಂತಿಯ ಅವಧಿ, ರಜೆ, ನಿವೃತ್ತಿ ವೇತನ ಇತ್ಯಾದಿ ಅಂಶಗಳಿಗೆ ಆದ್ಯಗಮನ ನೀಡಬೇಕಾದ್ದು ಅಗತ್ಯ. ಇತರೆ ಭೂಮಿ, ಬಂಡವಾಳಗಳಿಗೆ ಇವುಗಳ ಅವಶ್ಯಕತೆ ಇರುವುದಿಲ್ಲ.

(iii) **ನಶಿಸಿಹೋಗುವಿಕೆ :** ಶ್ರಮವು ಬೇಗನೆ ನಶಿಸಿಹೋಗುವ ಗುಣವನ್ನು ಹೊಂದಿದೆ. ಶ್ರಮ, ಹಾಲು, ಹೂಗಳಂತೆ ಬಹು ಬೇಗನೆ ನಾಶವಾಗುವ ಗುಣವನ್ನು ಪಡೆದಿದೆ. ಭೂಮಿ, ಯಂತ್ರಗಳನ್ನು ಕೆಲವು ಕಾಲದ ಮಟ್ಟಿಗೆ ಉಪಯೋಗಿಸದೆ ಇಡಬಹುದು. ಆದರೆ ಶ್ರಮವನ್ನು ಸಂಗ್ರಹಿಸಿಡಲಾಗುವುದಿಲ್ಲ. ಅಕಸ್ಮಾತ್ ಒಂದು ದಿನ ಕೆಲಸಗಾರನು ಕೆಲಸ ಮಾಡದೆ ಕುಳಿತರೆ ಅವನ ಅಂದಿನ ಶ್ರಮವು ನಾಶವಾದಂತೆಯೇ, ಏಕೆಂದರೆ ಕೆಲಸವಿಲ್ಲದೆ ಕಳೆದ ಕಾಲವು ಮತ್ತೆ ಹಿಂತಿರುಗಿ ಬರಲಾರದು. ಈ ಅರ್ಥದಲ್ಲಿ ಶ್ರಮವು ತೀವ್ರವಾಗಿ ನಾಶಹೊಂದುತ್ತದೆ ಎಂದು ಹೇಳುತ್ತೇವೆ. ಇದು ಶ್ರಮದ ವೈಶಿಷ್ಟ್ಯ. ಏಕೆಂದರೆ ಇತರ ಉತ್ಪಾದನಾಂಶಗಳಾದ ಭೂಮಿ, ಬಂಡವಾಳಗಳು ಈ ಲಕ್ಷಣಗಳನ್ನು ಹೊಂದಿಲ್ಲ. ಅವು ಬಾಳಿಕೆ ಬರುವ ವಸ್ತುಗಳು. ಶ್ರಮ ಬಾಳಿಕೆ ಬರುವ ವಸ್ತುವಲ್ಲ. ಅದು ನಾಶವಾಗುವಂತಹದ್ದು.

(iv) **ಪೂರೈಕೆ ಇಲ್ಲದಿರುವಿಕೆ :** ವಸ್ತುಗಳ ಪೂರೈಕೆಗೆ ಮತ್ತು ಕಾರ್ಮಿಕರ ಪೂರೈಕೆಗೆ ಸಾಕಷ್ಟು ವ್ಯತ್ಯಾಸ ಕಂಡುಬರುತ್ತದೆ. ಏಕೆಂದರೆ ವಸ್ತುಗಳ ಬೆಲೆಯು ಏರಿದಂತೆಲ್ಲಾ ಹೆಚ್ಚು ಲಾಭ ಪಡೆಯಲು ವಸ್ತುಗಳ ಪೂರೈಕೆಯೂ ಸಹ ಹೆಚ್ಚಾಗುತ್ತದೆ.

ಆದರೆ ಶ್ರಮಕ್ಕೆ ಮಾತ್ರ ಪೂರೈಕೆ ಇರುವುದಿಲ್ಲ. ಕೂಲಿಯ ದರ ಕಡಮೆ ಇದ್ದರೆ, ಹೆಚ್ಚು ಕೆಲಸ ಮಾಡುವ ಪರಿಸ್ಥಿತಿ ಉಂಟಾಗಿ ಮನೆಯಲ್ಲಿರುವವರೆಲ್ಲ ದುಡಿಯಬೇಕಾಗುತ್ತದೆ. ಇದರಿಂದ ಶ್ರಮದ ಪೂರೈಕೆ ಕಡಮೆಯಾಗುವುದರ ಬದಲು ಹೆಚ್ಚಾಗುತ್ತದೆ. ಕೂಲಿಯ ದರ ಹೆಚ್ಚಿದರೆ ಮನೆಯಲ್ಲಿನ ಹೆಣ್ಣುಮಕ್ಕಳು ದುಡಿಯಲು ಮುಂದೆ ಬರುವುದಿಲ್ಲ. ಆಗ ಕೂಲಿಕಾರರ ಪೂರೈಕೆ ಕಡಮೆಯಾಗುತ್ತದೆ. ಕೂಲಿಕಾರರ ಬೇಡಿಕೆ ಕಡಮೆ ಇದ್ದರೆ ತಕ್ಷಣ ಕೂಲಿಯ ದರ ಇಳಿಯುತ್ತದೆ. ಆದರೆ ಬೇಡಿಕೆಗೆ ತಕ್ಕಂತೆ ಕೂಲಿಕಾರರ ಸಂಖ್ಯೆಯನ್ನು ಶೀಘ್ರವಾಗಿ ಏರಿಸಲು ಅಥವಾ ತಗ್ಗಿಸಲು ಸಾಧ್ಯವಾಗುವುದಿಲ್ಲ. ಅವರಿಗೆ ಬೇಡಿಕೆ ಹೆಚ್ಚಿದರೆ ಕೂಲಿಯ ದರವೂ ಸಹ ಏರುತ್ತದೆ. ಆರ್ಥಿಕ ಮುಗ್ಗಟ್ಟಿದ್ದಾಗ ವಸ್ತುಗಳಿಗೆ ಬೇಡಿಕೆ ತಗ್ಗಿ ಬೆಲೆ ಇಳಿಯುತ್ತದೆ. ಆಗ ಕಾರ್ಮಿಕರಿಗೆ ಬೇಡಿಕೆ ತಗ್ಗಿ ಅವರ ಕೂಲಿಯದರ ಇಳಿಯುತ್ತದೆ. ಅದಕ್ಕೆ ತಕ್ಕಂತೆ ಕಾರ್ಮಿಕರ ಪೂರೈಕೆಯನ್ನು ತಗ್ಗಿಸುವುದು ಸಾಧ್ಯವಾಗುವುದಿಲ್ಲ.

(v) **ಕಡಮೆ ಚಲನಶಕ್ತಿ ಹೊಂದಿರುವಿಕೆ :** ಶ್ರಮಿಕರು ಸಾಮಾನ್ಯವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಲು ಬಯಸುವುದಿಲ್ಲ. ಕಡಮೆ ವೇತನ ಬರುತ್ತಿದ್ದರೂ ಅವರು ತಮ್ಮ ಭಾಷೆ, ಆಚಾರ ವಿಚಾರಗಳು ಹೊಂದಿಕೆಯಾಗುವ ಪ್ರದೇಶಗಳಲ್ಲೇ ಇರಲು ಬಯಸುತ್ತಾರೆ. ಅನಿವಾರ್ಯ ಪ್ರಸಂಗಗಳಲ್ಲಿ ಮಾತ್ರ ಅವರು ಬೇರೆ ಕಡೆಗೆ ಹೋಗುವ ಸಾಧ್ಯತೆಯುಂಟು. ಮೇಲಾಗಿ ಶ್ರಮಿಕರು ಬುದ್ಧಿಶಕ್ತಿ, ಜಾಣ್ಮೆ, ವಿವೇಚನಾ ಶಕ್ತಿಯನ್ನು ಹೊಂದಿರುತ್ತಾರೆ. ಈ ಲಕ್ಷಣಗಳನ್ನು ಉಳಿದ ಉತ್ಪಾದನಾಂಶಗಳಾದ ಭೂಮಿ, ಬಂಡವಾಳಗಳು ಪಡೆದಿಲ್ಲ.

ಶ್ರಮಿಕರ ಕಾರ್ಯದಕ್ಷತೆ ಬೇರೆ ಬೇರೆ ಇರುತ್ತದೆ. ಪ್ರತಿಯೊಬ್ಬ ಶ್ರಮಿಕನೂ ಬೇರೆ ಬೇರೆ ಕಾರ್ಯ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಯಂತ್ರೋಪಕರಣಗಳು ಎಲ್ಲ ವೇಳೆಯಲ್ಲೂ ಒಂದೇ ರೀತಿಯಾಗಿ ಒಂದೇ ಬಗೆಯ ನೈಪುಣ್ಯದಿಂದ ಕಾರ್ಯ ನಿರ್ವಹಿಸಿದಂತೆ ಶ್ರಮಿಕನಿಂದ ಸಾಧ್ಯವಿಲ್ಲ.

ಶ್ರಮದ ದಕ್ಷತೆ : ದಕ್ಷತೆ ಎಂದರೆ ಶ್ರಮಿಕರ ಕೆಲಸ ಮಾಡುವ ಸಾಮರ್ಥ್ಯ ಮತ್ತು ಪ್ರವೃತ್ತಿ. ವಸ್ತುಗಳ ಉತ್ಪಾದನೆಯು ಶ್ರಮಿಕರ ಶ್ರಮದ ದಕ್ಷತೆಯನ್ನು ಅವಲಂಬಿಸಿರುತ್ತದೆ. ಅಷ್ಟರು ದಕ್ಷರಾಗಿದ್ದಷ್ಟೂ ಹೆಚ್ಚು ವಸ್ತುಗಳನ್ನು ಉತ್ಪಾದಿಸುತ್ತಾರೆ. ಆದರೆ ಒಂದು ದೇಶದಲ್ಲಿ ವಸ್ತುಗಳ ಉತ್ಪಾದನೆಯ ಗಾತ್ರವು ಆ ದೇಶದದಲ್ಲಿರುವ ಕೆಲಸಗಾರರ ಸಂಖ್ಯೆಯನ್ನು ಅವಲಂಬಿಸಿರದೆ ಅವರ ದಕ್ಷತೆಯನ್ನು ಅವಲಂಬಿಸಿರುತ್ತದೆ. ಕೆಲಸಗಾರರು ದಕ್ಷರಾಗಿದ್ದರೆ ಅಧಿಕ ಪ್ರಮಾಣದಲ್ಲಿ ವಸ್ತುಗಳನ್ನು ಉತ್ಪಾದಿಸುತ್ತಾರೆ. ಕೆಲವು ವೇಳೆ ಒಬ್ಬ ಉತ್ತಮ ಕೆಲಸಗಾರನು ಇಬ್ಬರು ಸಾಮಾನ್ಯ ಕೆಲಸಗಾರರು ಮಾಡುವಷ್ಟು ಕೆಲಸ ಮಾಡುವನು. ಅಂದರೆ ಉತ್ತಮ ಕೆಲಸಗಾರನ

ದಕ್ಷತೆ ಸಾಮಾನ್ಯ ಕೆಲಸಗಾರನ ದಕ್ಷತೆಯ ಎರಡರಷ್ಟಿರುತ್ತದೆ. ಇದು ಶ್ರಮದ ಅಥವಾ ಕೆಲಸಗಾರರ ದಕ್ಷತೆ. ಶ್ರಮಿಕರ ದಕ್ಷತೆ ಒಂದೇ ವಿಧವಾಗಿರುವುದಿಲ್ಲ. ಕೆಲವು ಶ್ರಮಿಕರು ಹೆಚ್ಚು ದಕ್ಷರಿರಬಹುದು, ಮತ್ತೆ ಕೆಲವರು ಕಡಮೆ ದಕ್ಷರಿರಬಹುದು. ದಕ್ಷತೆ ಶ್ರಮಿಕನ ಬುದ್ಧಿಶಕ್ತಿ, ಅನುಭವ, ದೈಹಿಕಶಕ್ತಿ, ತರಬೇತಿ ಮುಂತಾದುವುಗಳನ್ನು ಅವಲಂಬಿಸಿದೆ. ದಕ್ಷತೆ ಹೆಚ್ಚಿದ್ದಲ್ಲಿ ಉತ್ಪಾದನೆಯು ಹೆಚ್ಚಾಗುತ್ತದೆ. ಏಕೆಂದರೆ ಹೆಚ್ಚು ದಕ್ಷತೆಯುಳ್ಳವರು ಸಮಯವನ್ನು ಹಾಳುಮಾಡದೆ ಜಾಣ್ಮೆಯಿಂದ ಎಲ್ಲ ಕೆಲಸಗಳನ್ನು ನಿರ್ವಹಿಸುವರು. ಕಡಮೆ ದಕ್ಷತೆ ಇದ್ದಲ್ಲಿ ಕಡಮೆ ಉತ್ಪಾದನೆಯಾಗುತ್ತದೆ. ಉತ್ಪಾದನೆ ಶ್ರಮದ ದಕ್ಷತೆಯನ್ನವಲಂಬಿಸಿರುತ್ತದೆ. ಶ್ರಮದ ದಕ್ಷತೆಯೇ ದೇಶದ ಆಸ್ತಿ. ಕಾರ್ಲ್‌ಮಾರ್ಕ್ಸ್ ಅವರ ಪ್ರಕಾರ ಶ್ರಮವೇ ಸಂಪತ್ತಿನ ಮೂಲ. ಶ್ರಮವು ಸಮಾಜದಲ್ಲಿ ಮಾನವನ ಅಸ್ತಿತ್ವಕ್ಕೆ ಪ್ರಮುಖ ಕಾರಣ ಹಾಗೂ ಶ್ರಮವು ಉತ್ಪಾದನೆಯ ಮೂಲ. ಆದಾಗ್ಯೂ ಶ್ರಮವು ಶ್ರಮಿಕರ ದಕ್ಷತೆಯನ್ನು ಅವಲಂಬಿಸಿರುತ್ತದೆ. ಶ್ರಮಿಕರ ದಕ್ಷತೆಯನ್ನು ಕೆಲವು ಅಂಶಗಳ ಆಧಾರದ ಮೇಲೆ ನಿರ್ಧರಿಸಬಹುದು.

ದಕ್ಷತೆಯನ್ನು ನಿರ್ಧರಿಸುವ ಮುಖ್ಯ ಅಂಶಗಳು : ಎಲ್ಲ ಕಾರ್ಮಿಕರ ಶ್ರಮದ ಶಕ್ತಿಯು ಕೆಳಗಿನ ಕೆಲವು ಅಂಶಗಳನ್ನು ಅವಲಂಬಿಸಿರುತ್ತದೆ.

(i) **ಜನಾಂಗ :** ಯಾವುದೇ ಒಬ್ಬ ಮನುಷ್ಯನ ದೈಹಿಕ ಶಕ್ತಿಯ ಚತುರತೆಯು ಅವನ ಜನಾಂಗದ ಅನುವಂಶಿಕ ಅಂಶವನ್ನು ಅವಲಂಬಿಸಿರುತ್ತದೆ. ಬೇರೆ ಬೇರೆ ಬುಡಕಟ್ಟಿನ ಜನರು ವಿವಿಧ ದಕ್ಷತೆಯನ್ನು ಪಡೆದಿರುವರು. ಪಠಾಣರು, ಮರಾಠರು, ಸಿಕ್ಕರು, ಕೊಡವರು, ಇತರ ಜನಾಂಗಗಳಿಗಿಂತ ಹೆಚ್ಚು ಶ್ರಮವಹಿಸಿ ದುಡಿಯುವರು, ಹೆಚ್ಚು ಉತ್ಪಾದಿಸುವರು. ಇದಕ್ಕೆ ಮುಖ್ಯ ಕಾರಣ ಅವರ ಬುಡಕಟ್ಟು. ಕಾರ್ಮಿಕರ ದಕ್ಷತೆಯನ್ನು ನಿರ್ಧರಿಸುವ ಒಂದು ಅಂಶ ಅವನು ಯಾವ ಬುಡಕಟ್ಟಿಗೆ ಸೇರಿದವನೆಂಬುದು. ಅಂದರೆ ಶ್ರಮದ ದಕ್ಷತೆ ವಂಶಪಾರಂಪರ್ಯವಾಗಿ ಬಂದಿರುತ್ತದೆ.

(ii) **ವಾತಾವರಣ :** ಕೆಲವು ಸಲ ಕಾರ್ಮಿಕರ ದಕ್ಷತೆ ಹವಾಮಾನವನ್ನು ಅವಲಂಬಿಸುತ್ತದೆ. ಹವಾಮಾನ ಶೀತದಿಂದ ಕೂಡಿದ್ದರೆ ಅಲ್ಲಿ ಶ್ರಮಿಕರು ಹೆಚ್ಚು ದಕ್ಷರಾಗಿ ಕೆಲಸ ಮಾಡುತ್ತಾರೆ. ಉಷ್ಣಪ್ರದೇಶಗಳಲ್ಲಿ ಕಾರ್ಮಿಕರು ಬಹುಬೇಗನೆ ಆಯಾಸಗೊಳ್ಳುವರು. ಯೂರೋಪಿನ ಕೆಲಸಗಾರರನ್ನು ಭಾರತದ ಕೆಲಸಗಾರರಿಗೆ ಹೋಲಿಸಿದರೆ ಯೂರೋಪಿನ ಕೆಲಸಗಾರರು ಭಾರತದ ಕೆಲಸಗಾರರಿಗಿಂತಲೂ ಹೆಚ್ಚು ದಕ್ಷರಾಗಿರುತ್ತಾರೆ. ಯೂರೋಪಿನಲ್ಲಿ ತಂಪು ಹವಾಗುಣವಿರುವುದರಿಂದ ಕೆಲಸಗಾರರು ಹೆಚ್ಚು ಆಯಾಸಗೊಳ್ಳದೆ ದುಡಿಯಲು ನೆರವಾಗುತ್ತದೆ. ಆದರೆ ನಮ್ಮಲ್ಲಿ ಕೆಲವು ಪ್ರದೇಶಗಳಲ್ಲಿ ಹನ್ನೊಂದು ಗಂಟೆಯ ನಂತರ ಸೂರ್ಯನ ತಾಪಕ್ಕೆ ರೈತರು ಆಯಾಸಗೊಂಡು ಹೊಲದಲ್ಲಿ ದುಡಿಯಲಾಗುವುದಿಲ್ಲ. ಅಂದರೆ ವಾತಾವರಣವು ಆಯಾ ದೇಶದ ಕೆಲಸಗಾರರ ದಕ್ಷತೆ ಮೇಲೆ ವಿಶಿಷ್ಟ ಪ್ರಭಾವ ಬೀರುತ್ತದೆ.

(iii) **ಆಹಾರ, ಉಡುಪು ಮತ್ತು ವಸತಿ :** ಕೆಲಸಗಾರರ ದಕ್ಷತೆ ಅವರು ಸೇವಿಸುವ ಆಹಾರ, ವಾಸಿಸುವ ಮನೆ ಹಾಗೂ ಅವರು ತೊಡುವ ಬಟ್ಟೆಗಳನ್ನು ಅವಲಂಬಿಸಿರುತ್ತದೆ. ಕೆಲಸಗಾರರ ಕಾರ್ಯಸಾಮರ್ಥ್ಯವನ್ನು ಹೆಚ್ಚಿಸುವುದರಲ್ಲಿ ಈ ಮೂರು ಅಂಶಗಳು ಪ್ರಧಾನ ಪಾತ್ರವಹಿಸುತ್ತವೆ. ಇವುಗಳ ಕೊರತೆ ಶ್ರಮಿಕರ ಬದುಕಿನಲ್ಲಿ ಅಪಾಯಕರ ಸ್ಥಿತಿಯನ್ನು ತಂದೊಡ್ಡುತ್ತದೆ. ಕಾರ್ಮಿಕನು ಪೌಷ್ಟಿಕಾಂಶಗಳುಳ್ಳ ಆಹಾರವನ್ನು ತೆಗೆದುಕೊಂಡರೆ ಒಳ್ಳೆಯ ದೈಹಿಕಶಕ್ತಿಯನ್ನು ಪಡೆದಿರುತ್ತಾನೆ. ರೋಗರುಜಿನಗಳು, ಕಾಯಿಲೆಗಳು ಬರದೆ ಒಳ್ಳೆಯ ಸೌಕರ್ಯಗಳಿಂದ, ವಿಶಾಲವಾದ ಗಾಳಿ, ಬೆಳಕುಗಳಿಂದ ಕೂಡಿದ ಮನೆಯಲ್ಲಿ ವಾಸಿಸಿದರೆ ಅವನ ದಕ್ಷತೆ ಹೆಚ್ಚುತ್ತದೆ. ಕೆಟ್ಟ ಆಹಾರ, ಅಸಂಪೂರ್ಣ ಬಟ್ಟೆ, ಗುಡಿಸಲುಗಳಲ್ಲಿ ವಾಸಿಸುವುದು ಅವನ ಕೆಲಸದ ಶಕ್ತಿಯನ್ನು ಕುಗ್ಗಿಸಿ ಅವನನ್ನು ರೋಗಗ್ರಸ್ತನನ್ನಾಗಿ ಮಾಡಿ ಅವನ ದಕ್ಷತೆಯನ್ನು ಕುಂಠಿತಗೊಳಿಸುತ್ತವೆ. ಆದ್ದರಿಂದ ಶ್ರಮಿಕರು ದಕ್ಷತೆಯಿಂದ ದುಡಿಯಲು ಒಳ್ಳೆಯ ಆಹಾರ, ಉಡುಪು ಹಾಗೂ ವಸತಿಗಳು ಅತ್ಯಾವಶ್ಯಕ. ಅವು ಅವನ ದಕ್ಷತೆಯನ್ನು ಹೆಚ್ಚಿಸಲು ನೆರವಾಗುತ್ತವೆ.

(iv) **ಕೆಲಸದ ವೇಳೆ :** ಕಾರ್ಮಿಕರ ದಕ್ಷತೆಯನ್ನು ನಿರ್ಧರಿಸುವ ಮತ್ತೊಂದು ಮುಖ್ಯವಾದ ಅಂಶವೆಂದರೆ 'ಕೆಲಸದ ವೇಳೆ.' ಶ್ರಮಜೀವಿಗಳು ದಕ್ಷತೆಯಿಂದ ಕೆಲಸ ನಿರ್ವಹಿಸಬೇಕಾದರೆ ಕೆಲಸದ ವೇಳೆ ಹೆಚ್ಚಿರಬಾರದು. ಶ್ರಮಿಕನನ್ನು ಹೆಚ್ಚು ಗಂಟೆಗಳ ಕಾಲ ಕೆಲಸಮಾಡಲು ಹೇಳಿದಾಗ ಅವನ ದಕ್ಷತೆ ಕಡಮೆಯಾಗುತ್ತದೆ. ಅಂದರೆ ಕೆಲಸದ ಅವಧಿ ದೀರ್ಘವಾದಷ್ಟೂ ಕಾರ್ಮಿಕನಿಗೆ ಆಯಾಸವಾಗಿ ದೇಹದ ಶಕ್ತಿ ಕುಂದಿ ಅವನ ಕಾರ್ಯಸಾಮರ್ಥ್ಯ ತಗ್ಗುತ್ತದೆ. ಉದಾಹರಣೆಗೆ ಅವನಿಗೆ ದಿನಕ್ಕೆ 12 ಗಂಟೆಗಳ ಕೆಲಸ ಕೊಟ್ಟರೆ ಅವನ ದಕ್ಷತೆ ಕಡಮೆಯಾಗುತ್ತದೆ. ಅದರ ಬದಲಿಗೆ ಪ್ರತಿದಿನ 7–8 ಗಂಟೆಗಳು ಕೆಲಸ ಮಾಡಲು ಹೇಳಿದರೆ ಸಾಕಷ್ಟು ಮುತುವರ್ಜಿ ವಹಿಸಿ ದುಡಿಯುತ್ತಾನೆ. ಇದರಿಂದ ಅವನ ದಕ್ಷತೆಯು ಹೆಚ್ಚುತ್ತದೆ. ಅಂತರರಾಷ್ಟ್ರೀಯ ಸಂಘ ವಿಶ್ವದ ಎಲ್ಲ ಕಾರ್ಖಾನೆಗಳಲ್ಲಿ ಕೆಲಸಗಾರರಿಗೆ ಪ್ರತಿ ದಿನ 8 ಗಂಟೆಗಳು ಮಾತ್ರ ಕೆಲಸವಿರಬೇಕೆಂದೂ ಹಾಗೂ ಕೆಲವು ಕಾಲ ವಿರಾಮವಿರಬೇಕೆಂದೂ ನಿರ್ಧರಿಸಿದೆ. ಏಕೆಂದರೆ ಈ ರೀತಿ ಕೆಲಸದ ವೇಳೆಯನ್ನು ನಿಗದಿಪಡಿಸಿ, ಆ ವೇಳೆಯಲ್ಲಿ ಸ್ವಲ್ಪ ವಿರಾಮ ನೀಡಿದರೆ ಕಾರ್ಮಿಕನ ದಕ್ಷತೆಯು ಹೆಚ್ಚುತ್ತದೆ.

(v) **ಕೂಲಿದರ :** ಪ್ರತಿಯೊಬ್ಬ ಕೆಲಸಗಾರನ ದಕ್ಷತೆ ಅವನಿಗೆ ಕೊಡುವ ವೇತನವನ್ನು ಅವಲಂಬಿಸಿರುತ್ತದೆ. ಅವನಿಗೆ ಸಾಕಷ್ಟು ವೇತನವನ್ನು ನೀಡುವುದಲ್ಲದೆ, ಅದರ ವಿತರಣೆಯು ನಿಯತ ಕಾಲದಲ್ಲಾಗಬೇಕು. ಇದರಿಂದ ಅವನಿಗೆ ಕೆಲಸ ಮಾಡಲು ಹುಮ್ಮಸ್ಸು ಬರುತ್ತದೆ, ಕಡಮೆ ಕೂಲಿಯಿದ್ದು ಅವನನ್ನು ಹೆಚ್ಚು ದುಡಿಯುವಂತೆ ಮಾಡಿದರೆ ಅವನ ದಕ್ಷತೆ ಕುಗ್ಗುತ್ತದೆ. ಏಕೆಂದರೆ ಕಡಮೆ ಕೂಲಿಯಲ್ಲಿ

ಶ್ರಮಿಕನು ತನ್ನ ಜೀವನದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲಾಗುವುದಿಲ್ಲ. ಆದ್ದರಿಂದ ಹೆಚ್ಚಿನ ಕೂಲಿ, ನಿಶ್ಚಿತ ವೇಳೆಯಲ್ಲಿ ಅದರ ವಿತರಣೆ, ಹೆಚ್ಚಿನ ಕೆಲಸಕ್ಕೆ ಹೆಚ್ಚಿನ ಕೂಲಿ ಮುಂತಾದ ಸೌಲಭ್ಯಗಳು ದಕ್ಷತೆಯನ್ನು ಹೆಚ್ಚಿಸುತ್ತವೆ. ಅಧಿಕಾರಿಗಳು ಮೊದಲಿಗೆ ತಮಗೆ ಇಷ್ಟಬಂದಷ್ಟು ಕೂಲಿಯನ್ನು ಕೊಡುತ್ತಿದ್ದರು. ಇತ್ತೀಚೆಗೆ ಸರಕಾರವು ಕಾಯಿದೆಗಳ ಮೂಲಕ ಕನಿಷ್ಠಕೂಲಿಯನ್ನು ನಿರ್ಧರಿಸಿ ಅದರಿಂದ ಶ್ರಮಿಕರಿಗೆ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುವಂತೆ ಮಾಡಿದೆ. ಇದರಿಂದ ಕಾರ್ಮಿಕರು ಕನಿಷ್ಠಕೂಲಿ ಪಡೆದಂತಾಗಿ ಅವರ ಜೀವನಮಟ್ಟ ಹೆಚ್ಚುವುದಲ್ಲದೆ ದಕ್ಷತೆಯನ್ನು ಹೆಚ್ಚಿಸಿಕೊಳ್ಳಲೂ ನೆರವಾಗುತ್ತದೆ.

(vi) **ಕಾರ್ಯಸ್ಥಳ ಹಾಗೂ ಯಂತ್ರೋಪಕರಣಗಳು :** ಶ್ರಮಿಕನ ದಕ್ಷತೆಯು ಅವನು ದುಡಿಯುವ ಸ್ಥಳ ಹಾಗೂ ಉಪಯೋಗಿಸುವ ಸಾಧನಗಳನ್ನು ಅವಲಂಬಿಸಿರುತ್ತದೆ. ಒಳ್ಳೆಯ ಗಾಳಿ, ಬೆಳಕಿರುವ ಕಾರ್ಖಾನೆಗಳಿದ್ದು, ಉತ್ತಮವಾದ ಯಂತ್ರಗಳಿದ್ದರೆ ಕಾರ್ಮಿಕರು ದಕ್ಷತೆ ಮತ್ತು ಉತ್ಸಾಹದಿಂದ ದುಡಿಯುತ್ತಾರೆ. ಯಂತ್ರಗಳು ಹಳೆಯದಾಗಿದ್ದರೆ ಅವರ ದಕ್ಷತೆಯು ಕುಗ್ಗುವುದು. ಮುಂದೆ, ಯಂತ್ರಗಳು ಸಮರ್ಪಕವಾಗಿ ತಮ್ಮ ಕೆಲಸ ನಿರ್ವಹಿಸದಿದ್ದರೆ ಶ್ರಮಿಕನು ತನ್ನ ದಕ್ಷತೆಯನ್ನು ತೋರಿಸಲಾಗುವುದಿಲ್ಲ.

(vii) **ನಿಕಟ ಸಂಪರ್ಕ :** ದುಡಿಯುವ ಶ್ರಮಿಕರೊಂದಿಗೆ, ಆ ಕಾರ್ಖಾನೆಗಳ ಮಾಲೀಕರು ನಿಕಟ ಸಂಪರ್ಕಹೊಂದಿರಬೇಕು. ಕಾರ್ಮಿಕರನ್ನು ಆಗಾಗ ಭೇಟಿ ಮಾಡಿ ಅವರ ಕಷ್ಟಸುಖಗಳನ್ನು ವಿಚಾರಿಸಬೇಕು. ಅವರ ಅಭಿಮಾನವನ್ನು ಗೆಲ್ಲಬೇಕು. ಅವರ ಕ್ಷೇಮ ಸಮಾಚಾರಗಳ ಕಡೆ ತಮ್ಮ ಗಮನ ಹರಿಸಬೇಕು. ಅವರ ಮಕ್ಕಳಿಗೆ ಶಾಲೆ ಕಾಲೇಜುಗಳ ಸೌಲಭ್ಯ, ಪುಸ್ತಕ ಭಂಡಾರಗಳು, ಉದ್ಯಾನವನಗಳು ಇತ್ಯಾದಿಗಳನ್ನು ಒದಗಿಸಬೇಕು. ಆಡಳಿತವು ಸಮರ್ಪಕವಾಗಿರಬೇಕು. ಈ ರೀತಿ ಇದ್ದರೆ ಸಂಪುಗಳು ನಡೆಯುವುದಿಲ್ಲ. ಕಾರ್ಮಿಕರಿಗೂ ಸಹ ಕಾರ್ಖಾನೆಗಳ ಬಗ್ಗೆ, ಮಾಲೀಕರ ಬಗ್ಗೆ ಒಳ್ಳೆಯ ಅಭಿಪ್ರಾಯಗಳು ಮೂಡಿ ಬರುತ್ತವೆ. ಇದರಿಂದ ಕೆಲವು ವೇಳೆ ಅವರ ದಕ್ಷತೆ ಅಧಿಕಗೊಳ್ಳುತ್ತದೆ.

(viii) **ಶಿಕ್ಷಣ ಹಾಗೂ ತರಬೇತಿ :** ಶ್ರಮದ ದಕ್ಷತೆ ಉಚಿತ ತರಬೇತಿಗಳನ್ನು ಅವಲಂಬಿಸಿರುತ್ತದೆ. ದಕ್ಷತೆ ಹೆಚ್ಚಬೇಕಾದರೆ ಸ್ವಾಭಾವಿಕ ಬುದ್ಧಿಶಕ್ತಿಯ ಜೊತೆಗೆ, ಶ್ರಮಿಕನು ಸರಿಯಾದ ಶಿಕ್ಷಣ ಹಾಗೂ ತರಬೇತಿ ಪಡೆದಿರಬೇಕು. ಏಕೆಂದರೆ ಒಬ್ಬ ವ್ಯಕ್ತಿಗೆ ಎಷ್ಟೇ ಬುದ್ಧಿ ಇದ್ದರೂ, ಸರಿಯಾದ ತರಬೇತಿಯಿರದಿದ್ದರೆ, ಅವನಲ್ಲಿ ಸುಪ್ತಗೊಂಡಿರುವ ಸಾಮರ್ಥ್ಯ ಬೆಳಕಿಗೆ ಬರುವುದಿಲ್ಲ. ಶ್ರಮಿಕನಾದವನು ದಕ್ಷತೆಯಿಂದ ದುಡಿಯಲು ಸಾಮಾನ್ಯವಿದ್ಯೆ ಹಾಗೂ ತಾಂತ್ರಿಕ ವಿದ್ಯೆಯು ಅತ್ಯಾವಶ್ಯಕ.

ಕಾರ್ಮಿಕರು ಶಿಕ್ಷಣ ಹಾಗೂ ತರಬೇತಿ ಪಡೆದಿದ್ದರೆ ಹೆಚ್ಚು ದಕ್ಷರಾಗಿರುತ್ತಾರೆ. ಇದಕ್ಕೆ ಕಾರಣವೆಂದರೆ ಶಿಕ್ಷಣದಿಂದ ಶ್ರಮಜೀವಿಗಳಲ್ಲಿ ಹೊಣೆಗಾರಿಕೆ ಹೆಚ್ಚುತ್ತದೆ. ಅವರು ಕರ್ತವ್ಯಭ್ರಷ್ಟರಾಗುವುದಿಲ್ಲ. ತರಬೇತಿಯಿಂದ ಯಂತ್ರೋಪಕರಣಗಳನ್ನು ಸರಿಯಾಗಿ ಉಪಯೋಗಿಸುವ ಶಕ್ತಿ ಪಡೆಯುತ್ತಾರೆ. ಉತ್ಪಾದನಾ ಕ್ಷೇತ್ರದಲ್ಲಿ ಅವರ ಪಾತ್ರವನ್ನು ಅರಿತು, ಕೆಲಸವನ್ನು ಜಾಣ್ಮೆಯಿಂದ ನಿರ್ವಹಿಸುತ್ತಾರೆ. ಮೇಲಾಗಿ ಕಾರ್ಮಿಕರು ಸುಶಿಕ್ಷಿತರಾಗಿದ್ದರೆ, ಕಾರ್ಖಾನೆಯ ಮಾಲೀಕರೊಂದಿಗೆ, ಆಡಳಿತವರ್ಗದೊಂದಿಗೆ ಸೌಹಾರ್ದತೆಯಿಂದ ವರ್ತಿಸುತ್ತಾರೆ. ಆದ್ದರಿಂದ ಇತ್ತೀಚೆಗೆ ಎಲ್ಲ ಕಾರ್ಖಾನೆಗಳಲ್ಲಿ ಕಾರ್ಮಿಕರನ್ನು ನೇಮಕಮಾಡಿಕೊಳ್ಳುವಾಗ, ಉಚಿತ ಶಿಕ್ಷಣ ಹಾಗೂ ತರಬೇತಿ ಪಡೆದಿರುವ ಕಾರ್ಮಿಕರನ್ನು ಮಾತ್ರ ಆರಿಸಲಾಗುತ್ತದೆ.

(ix) **ರಾಜಕೀಯ ಮತ್ತು ಸಾಮಾಜಿಕ ರಕ್ಷಣೆ :** ಕಾರ್ಮಿಕರ ದಕ್ಷತೆಯ ಹೆಚ್ಚುವಿಕೆಗೆ ಇದು ಬಹಳ ಅತ್ಯವಶ್ಯ. ಒಳ್ಳೆಯ ರಾಜಕೀಯ ವಾತಾವರಣ, ಸಾಮಾಜಿಕ ರಕ್ಷಣೆ ಇದ್ದಲ್ಲಿ ಅಲ್ಲಿಯ ಕಾರ್ಮಿಕರು ಹೆಚ್ಚು ದಕ್ಷತೆಯಿಂದ ದುಡಿಯುತ್ತಾರೆ.

ಈ ರೀತಿ, ಮೇಲಿನ ಎಲ್ಲ ಅಂಶಗಳು ಕಾರ್ಮಿಕರ ದಕ್ಷತೆಯನ್ನು ಹೆಚ್ಚಿಸಲು ನೆರವಾಗುತ್ತವೆ. ಕಾರ್ಮಿಕರು ದಕ್ಷರಾಗದಿದ್ದರೆ ಶ್ರೇಷ್ಠಗುಣಮಟ್ಟದ ಮತ್ತು ಸಾಕಷ್ಟು ವಸ್ತುಗಳನ್ನು ಉತ್ಪಾದಿಸಲಾಗುವುದಿಲ್ಲ. ಇದರಿಂದ ಬಳಕೆದಾರರಿಗೆ ಯೋಗ್ಯಬೆಲೆಗೆ ವಸ್ತುಗಳು ಸಿಗುವುದಿಲ್ಲ. ಆದ್ದರಿಂದ ಶ್ರಮಿಕರ ದಕ್ಷತೆಯನ್ನು ಹೆಚ್ಚಿಸಲು ಅದಕ್ಕೆ ನೆರವಾಗುವ ಸೌಲಭ್ಯಗಳನ್ನು ಅವರಿಗೆ ಒದಗಿಸುವುದು ಎಲ್ಲರ ಆದ್ಯ ಕರ್ತವ್ಯ. ಇದರಿಂದ ಅವರಿಗೂ ಸುಖವಾಗುತ್ತದೆ; ಅಲ್ಲದೆ ರಾಷ್ಟ್ರವು ಆರ್ಥಿಕ ಅಭಿವೃದ್ಧಿಯನ್ನು ಹೊಂದಲೂ ನೆರವಾಗುತ್ತದೆ.

ಜನಸಂಖ್ಯೆ

ಒಂದು ದೇಶದಲ್ಲಿ ವಸ್ತುಗಳ ಉತ್ಪಾದನಾ ಪ್ರಮಾಣವು ಅಲ್ಲಿಯ ಕೆಲಸಗಾರರ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಕೆಲಸಗಾರರ ಸಂಖ್ಯೆಯು ಜನಸಂಖ್ಯಾ ಪ್ರಮಾಣದ ಮೇಲೆ ಸ್ಥಿತಿದೆ. ಆದ್ದರಿಂದ ಜನಸಂಖ್ಯೆ ಉತ್ಪಾದನೆಯ ಮೇಲೆ ಮಹತ್ತರ ಪರಿಣಾಮವನ್ನುಉಂಟುಮಾಡುತ್ತದೆ. ಇವರ ಬಗ್ಗೆ ಅನೇಕ ಅರ್ಥ ಶಾಸ್ತ್ರಜ್ಞರು ಅನೇಕ ರೀತಿಯ ಸಿದ್ಧಾಂತಗಳನ್ನು ರಚಿಸಿದ್ದಾರೆ.

ಜನಸಂಖ್ಯೆಯ ಬಗ್ಗೆ ಕೆಳಗಿನ ಎರಡು ಸಿದ್ಧಾಂತಗಳು ಮುಖ್ಯವಾದವು :

(i) ಥಾಮಸ್ ರಾಬರ್ಟ್ ಮಾಲ್ಥುಸ್‌ನ ಜನಸಂಖ್ಯೆಯ ಸಿದ್ಧಾಂತ

(ii) ಎಡ್ವಿನ್ ಕ್ಯಾನನ್‌ನ ಆದರ್ಶ ಜನಸಂಖ್ಯೆ ಸಿದ್ಧಾಂತ

(i) ಮಾಲ್ಥುಸ್‌ನ ಜನಸಂಖ್ಯೆಯ ಸಿದ್ಧಾಂತ : ಜನಸಂಖ್ಯೆಯ ಬಗ್ಗೆ ಥಾಮಸ್ ರಾಬರ್ಟ್ ಮಾಲ್ಥುಸ್‌ನು ನೀಡಿರುವ ಸಿದ್ಧಾಂತವು ಅತಿಮಹತ್ವದ ಸಿದ್ಧಾಂತವೆಂದು ಪರಿಗಣಿಸಲ್ಪಟ್ಟಿದೆ. ಟಿ. ಆರ್. ಮಾಲ್ಥುಸ್ಸನು 18ನೆಯ ಶತಮಾನದಲ್ಲಿದ್ದ ಆಂಗ್ಲ ಮೇಧಾವಿ, ಅರ್ಥಶಾಸ್ತ್ರಜ್ಞ. ಸಂಪ್ರದಾಯ ಪಂಥದ ಬೆಳವಣಿಗೆಯಲ್ಲಿ ಆಡಂ ಸ್ಮಿತ್‌ನಷ್ಟೇ ಹಿರಿಯ ಪಾತ್ರವಹಿಸಿದ ಜ್ಞಾನಿ. ಈತ ಪ್ರಾಚೀನ ರಾಜಕೀಯ ಅರ್ಥಶಾಸ್ತ್ರದ ಅಸ್ತಿಭಾರವನ್ನು ಹಾಕಿದವರಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿಕೊಂಡ ಧೀಮಂತ ಅರ್ಥಶಾಸ್ತ್ರಜ್ಞ. ಇವನೊಬ್ಬ ಉದ್ದಾಮ ಲೇಖಕ, ಜನಸಂಖ್ಯಾ ಸ್ಫೋಟದ ಪ್ರವಾದಿ. ಈತ ಕ್ರಿಶ್ಚಿಯನ್ ಧರ್ಮಾಧಿಕಾರಿ. ಇಂದು ಇವನ ಹೆಸರನ್ನು ಕೇಳದವರಿಲ್ಲ. ಅಂದು ಇವನು ನೀಡಿದ ಜನಸಂಖ್ಯಾ ಸಿದ್ಧಾಂತ ಇಂದು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ತನ್ನದೇ ಆದ ಮಹತ್ವವನ್ನು ಪಡೆದಿದೆ. 1798 ರಲ್ಲಿ 'ಎಸ್ಸೇ ಆನ್ ದಿ ಪ್ರಿನ್ಸಿಪಲ್ ಆಫ್ ಪಾಪ್ಯುಲೇಷನ್' ಎಂದು ಜನಸಂಖ್ಯೆಯ ಮೇಲೆ ಮಾಲ್ಥುಸ್ ಒಂದು ಪ್ರಬಂಧವನ್ನು ರಚಿಸಿದನು. ಕಾರ್ಖಾನೆ ಪದ್ಧತಿಯ ಪ್ರಾಬಲ್ಯದಿಂದ ಆಗ ದೇಶದಲ್ಲಿ ನಿರುದ್ಯೋಗ, ಬಡತನ, ರೋಗರುಜಿನಗಳು ತಾಂಡವವಾಡುತ್ತಿದ್ದುವು. ಇಂಗ್ಲೆಂಡಿನ ಅಂದಿನ ನಿರುದ್ಯೋಗ, ಬಡತನಗಳಿಗೆ ಮುಖ್ಯ ಕಾರಣ ಜನಸಂಖ್ಯೆ ಎಂದು ಮಾಲ್ಥುಸ್ ಅಭಿಪ್ರಾಯ ಪಟ್ಟ. ಆ ಸಮಸ್ಯೆಗೆ ಸಮರ್ಪಕವಾದ ವಿವರಣೆಯನ್ನು ಕೊಡಲು ಈ ಪ್ರಬಂಧ ವನ್ನು ಬರೆದನು. ಈ ಪ್ರಬಂಧದಲ್ಲಿ ಜನಸಂಖ್ಯೆಯ ಸಿದ್ಧಾಂತವನ್ನು ವಿವರವಾಗಿ ಚಿತ್ರಿಸಿದ್ದಾನೆ. ಈ ಕೃತಿ ಜನರ ಗಮನ ಸೆಳೆದು ಅನೇಕ ವಾದ ವಿವಾದಗಳಿಗೆ ಎಡೆ ಮಾಡಿಕೊಟ್ಟಿತು. ನಂತರ ಮಾಲ್ಥುಸ್ ಯೂರೋಪಿನ ಎಲ್ಲ ಭಾಗಗಳಲ್ಲಿ ಪ್ರಯಾಣ ಕೈಗೊಂಡು, ಜನಸಂಖ್ಯೆಯ ಬಗ್ಗೆ ಆಳವಾದ ವ್ಯಾಸಂಗಮಾಡಿ ತನ್ನ ಸಿದ್ಧಾಂತಗಳಿಗೆ ಸೂಕ್ತವಾದ ವಿಷಯಗಳನ್ನು ಸಂಗ್ರಹಿಸಿ ಮತ್ತೊಮ್ಮೆ ಒಂದು ದೊಡ್ಡ ಪುಸ್ತಕವನ್ನು 1803 ರಲ್ಲಿ ಪ್ರಕಟಿಸಿದನು. ಈ ಪುಸ್ತಕವು ಮಾಲ್ಥುಸ್‌ನ ಕುಶಲಹಸ್ತದಲ್ಲಿ ಅವನ ಅಗಾಧವಾದ ಜ್ಞಾನ ಹಾಗೂ ಆಳವಾದ ಜ್ಞಾನಗಳ ಫಲವಾಗಿ ಮೂಡಿಬಂದ ಕೃತಿರತ್ನ. ಈ ಕೃತಿಯು ಸರ್ವಾನುಮತದಿಂದ ಸುಶಿಕ್ಷಿತ ಪ್ರಪಂಚವನ್ನು ಚಕಿತಗೊಳಿಸುವಂತೆ ಮಾಡಿತು. ಇದರ ಪರಿಣಾಮವಾಗಿ ಅವನ ಸಿದ್ಧಾಂತವು ಮನೆಮಾತಾಯಿತು.

ಮಾಲ್ಥುಸ್‌ನ ಸಿದ್ಧಾಂತದ ತಿರುಳು ಈ ರೀತಿ ಇದೆ : ಜನರು ಜೀವಿಸಿರಲು ಆಹಾರವು ಅಗತ್ಯ. ಆಹಾರದಿಂದಲೇ ಮನುಷ್ಯನ ಜೀವನ. ಮಾನವನಿಗೆ ಉತ್ಪಾದಿಸುವಲ್ಲಿ ಅಪರಿಮಿತ ಶಕ್ತಿ ಇದೆ. ಅದನ್ನು ಅವರು ಸಂತಾನದ ಮೂಲಕ ಪ್ರದರ್ಶಿಸುವರು. ಆದರೆ ಭೂಮಿಯು ಪರಿಮಿತ ಫಲವತ್ತತೆಯಿಂದ ಸಾಕಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುವ ಶಕ್ತಿ ಹೊಂದಿಲ್ಲ. ಇದರ ಫಲಿತಾಂಶವೇ ಜನ ಸಂಖ್ಯೆಯ ಹೆಚ್ಚಳ. ಆದರೆ ಜನಸಂಖ್ಯೆಯು ಆಹಾರದ ಪೂರೈಕೆಗಿಂತಲೂ ಹೆಚ್ಚಾಗಿ

ಏರುತ್ತಾ ಹೋಗುತ್ತದೆ. ಅಂದರೆ ಜನಸಂಖ್ಯೆಯು ಗುಣಕವಾಗುತ್ತಾ ಏರುತ್ತದೆ. ಜನ ಸಂಖ್ಯೆಯನ್ನು ನಿಯಂತ್ರಿಸದಿದ್ದಲ್ಲಿ ಅದು ಪ್ರತಿ 25 ವರ್ಷಗಳಲ್ಲಿ ದ್ವಿಗುಣಗೊಳ್ಳುವುದು. ಆದರೆ ಜನಸಂಖ್ಯೆಯಷ್ಟೇ ವೇಗದಲ್ಲಿ ಜನರಿಗೆ ಅತ್ಯಾವಶ್ಯಕವಾಗಿರುವ ಆಹಾರದ ವೃದ್ಧಿ ಯಾಗುವುದಿಲ್ಲ. ಏಕೆಂದರೆ ಉಳುಮೆ ಮಾಡತಕ್ಕ ಭೂಮಿ ಕಡಮೆ ಇದ್ದು, ಉಳುವ ವಿಧಾನದಲ್ಲಿ ಸುಧಾರಣೆಗಳನ್ನು ತರುವುದು ಪರಿಮಿತಗೊಂಡಿರುವುದರಿಂದ ಆಹಾರದ ಉತ್ಪಾದನೆಯನ್ನು ದ್ವಿಗುಣಗೊಳಿಸುವುದು ಅಷ್ಟು ಸುಲಭವಲ್ಲ. ಜನಸಂಖ್ಯೆ ಹಾಗೂ ಆಹಾರೋತ್ಪಾದನೆ ಇವೆರಡರಲ್ಲಿ ಜನಸಂಖ್ಯೆ ಬೆಳವಣಿಗೆ ಅತ್ಯಂತ ವೇಗದಿಂದ ನಡೆಯು ತ್ತದೆ. ಹೇಗೆಂದರೆ, ಜನಸಂಖ್ಯೆಯು 1, 2, 4, 8, 16, 32, 64, 128 ಈ ರೀತಿ ಜ್ಯಾಮಿತಿ ಪ್ರಮಾಣದಲ್ಲಿ ಬೆಳೆಯುತ್ತದೆ. ಆದರೆ ಆಹಾರಧಾನ್ಯಗಳು ಅಂಕಗಣಿತ ಪ್ರಮಾಣದಲ್ಲಿ ಅಂದರೆ 1, 2, 3, 4, 5, 6, 7, 8, 9, 10 ಈ ರೀತಿ ಬೆಳೆಯುತ್ತವೆ. ಕೃಷಿ ಇಳಿಮುಖ ಉತ್ಪಾದನಾ ಸಿದ್ಧಾಂತಕ್ಕೆ ಒಳಪಡುವುದರಿಂದ ಆಹಾರೋತ್ಪಾದನೆ ನಿಧಾನವಾದ ಅಂಕಗಣಿತ ಶ್ರೇಣಿಯಲ್ಲಿ ಬೆಳೆಯುತ್ತದೆ. ಈ ರೀತಿ ಜನಸಂಖ್ಯೆಯು ಪ್ರಮಾಣವು ಮಿತಿ ಮೀರಿ ಆಹಾರಧಾನ್ಯಗಳ ಪ್ರಮಾಣವು ಕುಗ್ಗುತ್ತಾ ಹೋಗುವುದ ರಿಂದ ಜನರು ಆಹಾರದ ಪೂರೈಕೆಯಾಗದೆ ಹೊಟ್ಟೆಗೆ ಅನ್ನವಿಲ್ಲದೆ ಸಾಯುವ ಪರಿಸ್ಥಿತಿ ಬರುತ್ತದೆ. ಆಹಾರ ಮತ್ತು ಜನಸಂಖ್ಯೆ ನಡುವೆ ಅಂತರ ಉಂಟಾಗಿ ಅಸಮತೆ ತಲೆ ದೋರುತ್ತದೆ. ಆಹಾರಕ್ಕಾಗಿ ಜನರಲ್ಲಿ ಕಚ್ಚಾಟ, ಕೊಲೆ, ಸುಲಿಗೆ, ಶೋಷಣೆ, ಭ್ರಷ್ಟಾಚಾರಗಳು ಕಂಡುಬಂದು ಮಾನುಷ್ಯನ ಜೀವನವೇ ದುಸ್ತರವಾಗಿ ಪರಿಣಮಿಸು ತ್ತದೆ. ಆದ್ದರಿಂದ ಈ ಎರಡು ಅಸಮಾನ್ಯಾದ ಶಕ್ತಿಗಳನ್ನು ಪ್ರಕೃತಿಯು ಸಮವಾಗಿರಿಸ ಬೇಕಾಗುವುದು. ಅಂದರೆ ಇಂತಹ ಪರಿಸ್ಥಿತಿ ಉಂಟಾದಾಗ ಪ್ರಕೃತಿಯು ತಾನಾಗಿಯೇ ತೀವ್ರ ರೀತಿಯಲ್ಲಿ ಜನಸಂಖ್ಯೆಯನ್ನು ನಿಯಂತ್ರಿಸಲು ಮುಂದೆ ಬರುತ್ತದೆ. ಕ್ಷಾಮ, ಪ್ಲೇಗು, ಕಾಲರಾ, ಮಲೇರಿಯಾ, ಭೂಕಂಪ, ಯುದ್ಧಗಳು ಪ್ರಕೃತಿಯು ಪ್ರಕೋಪದ ಚಿಹ್ನೆಗಳು. ಇದರಿಂದ ಸಾಕಷ್ಟು ರಕ್ತಪಾತ ಹಾನಿಗಳನ್ನು ಕಣ್ಣಾರೆ ಕಾಣಬೇಕಾಗುತ್ತದೆ. ಪ್ರಕೃತಿಯು, ಈ ಸಂಹಾರಲೀಲೆಯಲ್ಲಿ ಸಬಲನು ಮಾತ್ರ ಉಳಿದು ದುರ್ಬಲನು ಅಳಿಯುವನು. ಅಲ್ಲದೆ, ಜನಸಂಖ್ಯೆ ಮತ್ತು ಆಹಾರೋತ್ಪಾದನೆ ಈ ಎರಡು ಮಹಾನ್‌ಶಕ್ತಿಗಳ ಅಸಮತೆ ಮತ್ತು ಅವುಗಳನ್ನು ಸಮವಾಗಿರಿಸಲು ಪ್ರಕೃತಿಯು ಕೈಗೊಳ್ಳುವ ಭೀಕರ ಕಾರ್ಯಕ್ರಮಗಳು, ರಾಷ್ಟ್ರದ ಪರಿಪೂರ್ಣ ಸುಖಸಂತೋಷಗಳ ಸಾಧಿಸು ವಿಕೆಗೆ ಅಡ್ಡಿಯನ್ನು ತಂದೊಡ್ಡುತ್ತವೆ. ಆದ್ದರಿಂದ ಬುದ್ಧಿವಂತನಾದ ಮಾನವ ಇದಕ್ಕೆ ಅವಕಾಶಕೊಡದೆ ಸೌಮ್ಯವಾದ ಉಪಾಯಗಳಿಂದ ಜನಸಂಖ್ಯೆಯನ್ನು ನಿಯಂತ್ರಿಸುವುದು ಒಳ್ಳೆಯದು. ವಿಧಿನಿರ್ಮಿತ ಮತ್ತು ನಿವಾರಕ ಪ್ರತಿಬಂಧಾತ್ಮಕ ಉಪಾಯಗಳು ಜನ ಸಂಖ್ಯೆ ನಿಯಂತ್ರಣ ಮಾಡಬಲ್ಲವು. ವಿಧಿನಿರ್ಮಿತ ಉಪಾಯಗಳಲ್ಲಿ ಪ್ರಕೃತಿಯು ಕಾಲರಾ, ಮಲೇರಿಯಾ ಮುಂತಾದ ರೋಗ, ಶಿಶು ಮರಣ, ಯುದ್ಧ, ಕ್ಷಾಮ ಡಾಮರ ಇತ್ಯಾದಿಗಳು ಮರಣದ ಸಂಖ್ಯೆಯನ್ನು ಹೆಚ್ಚಿಸಿ ಜನಸಂಖ್ಯೆಯನ್ನು ತಡೆಗಟ್ಟುತ್ತವೆ.

ಇದರಿಂದ ದುಃಖ, ರಕ್ತಪಾತಗಳುಂಟಾಗುತ್ತವೆ. ನಿವಾರಕ ಉಪಾಯಗಳನ್ನು ಮಾನವನು ಕೈಗೊಳ್ಳಬೇಕಾಗುತ್ತದೆ. ಅವನಲ್ಲಿ ಅಡಕಗೊಂಡಿರುವ ಬುದ್ಧಿಶಕ್ತಿ ಹಾಗೂ ಯೋಚನಾ ಶಕ್ತಿಗಳಿಂದ ಅವನು ಕೆಲವು ಕ್ರಮಯೋಜಿಸಲು ಸಾಧ್ಯವಿದೆ. ವಿಧಿನಿರ್ಮಿತ ಉಪಾಯ ಗಳನ್ನು ತಡೆದು, ಮನುಷ್ಯನ ಸಾವುನೋವುಗಳನ್ನು ನಿವಾರಿಸಬೇಕಾದರೆ, ಸೂಕ್ತವಾದ ನಿವಾರಕ ಪ್ರತಿಬಂಧಾತ್ಮಕ ಉಪಾಯಗಳನ್ನು ರೂಪಿಸಬೇಕು. ಅವುಗಳಲ್ಲಿ ಈ ಮುಂದಿನವು ಮುಖ್ಯವಾಗಿವೆ: (i) ಸಂತಾನ ನಿಯಂತ್ರಣ ಕ್ರಮ ಕೈಗೊಳ್ಳುವಿಕೆ (ii) ಮದುವೆಯ ವಯಸ್ಸನ್ನು ಮುಂದೂಡುವಿಕೆ (iii) ಇಂದ್ರಿಯ ನಿಗ್ರಹ ಆಚರಿಸುವಿಕೆ ಮತ್ತು (iv) ಬ್ರಹ್ಮಚರ್ಯವನ್ನು ಪಾಲಿಸುವಿಕೆ.

ಈ ಕೆಲವು ಪ್ರತಿಬಂಧಕೋಪಾಯಗಳಿಂದ ಮಿತಿಮೀರಿ ಬೆಳೆಯುವ ಜನ ಸಂಖ್ಯೆಯನ್ನು ತಡೆಗಟ್ಟಬಹುದೆಂದು ಮಾಲ್ಥಸ್ ಅಭಿಪ್ರಾಯಪಟ್ಟನು. ಕೃಷಿಪ್ರಧಾನ ವಾಗಿರುವ, ಬಾಲ್ಯವಿವಾಹ, ನಿರೀಕ್ಷತೆ, ದೈವಿಕ ಶಕ್ತಿಯಲ್ಲಿ ಅತಿಯಾದ ನಂಬಿಕೆ ಮುಂತಾದ ಪದ್ಧತಿಗಳನ್ನು ಅನುಸರಿಸುವ ಹಲವು ದೇಶಗಳಲ್ಲಿ ಮಾಲ್ಥಸ್‌ನ ಸಿದ್ಧಾಂತವು ಸಂಪೂರ್ಣ ಸತ್ಯವಾಗಿದೆ. ಅತಿ ಜನಸಂಖ್ಯೆಯ ಬವಣೆಯಿಂದ ಇಂದು ನರಳುತ್ತಿರುವ ಭಾರತದ ಉದಾಹರಣೆಯನ್ನು ತೆಗೆದುಕೊಂಡರೆ ಮಾಲ್ಥಸ್‌ನ ದೂರದರ್ಶಿತ್ವದ ಅರಿವು ನಮ ಗಾಗುತ್ತದೆ. ಮೂವತ್ತು ವರ್ಷಗಳ ಸ್ವಾತಂತ್ರ್ಯ ಹಾಗೂ ಇಪ್ಪತ್ತೈದು ವರ್ಷಗಳ ಯೋಜನೆಗಳ ನಂತರವೂ ಸಹ ಭಾರತದಲ್ಲಿ ಉಪವಾಸ, ದಾರಿದ್ರ್ಯ, ಹಾಗೂ ಮರಣಗಳ ತಾಂಡವ ನೃತ್ಯವನ್ನು ನಾವು ಕಾಣುತ್ತಿದ್ದೇವೆ. ಜನ ಸಂಖ್ಯೆಯ ಅಸ್ಫೋಟನೆ, ಆಹಾರದ ಅಭಾವ, ಪ್ರಕೃತಿಯ ಪ್ರಕೋಪಗಳನ್ನು ಕಾಣುತ್ತಿರುವುದರಿಂದ ಮಾಲ್ಥಸ್‌ನ ತತ್ವವು ಅಕ್ಷರಶಃ ಭಾರತಕ್ಕೆ ಅನ್ವಯಿಸುವುದೆಂದು ಹೇಳಬಹುದು.

ಟೀಕೆಗಳು : ಮಾಲ್ಥಸ್‌ನ ಜನಸಂಖ್ಯಾಸಿದ್ಧಾಂತದ ಮುಖ್ಯ ತಿರುಳು ಆಹಾರೋತ್ಪಾದನೆಗಿಂತ ಜನಸಂಖ್ಯೆ ವೇಗವಾಗಿ ವೃದ್ಧಿಯಾಗುತ್ತದೆ ಎಂಬುದು. ಇದರಿಂದ ಮಿತಿಮೀರಿದ ಜನಸಂಖ್ಯೆ ಉದ್ಭವಿಸುವುದು. ಆದರೆ ಈ ಸಿದ್ಧಾಂತವು ಕೆಲವು ಟೀಕೆಗಳಿಗೆ ಗುರಿಯಾಯಿತು. ಅವು ಈ ಕೆಳಗೆ ವಿವರಿಸಿದಂತಿವೆ:

(1) ಮಾಲ್ಥಸ್‌ನ ಜನಸಂಖ್ಯೆಯ ತತ್ವದ ಪ್ರಕಾರ, ಜನಸಂಖ್ಯೆಯು ಜ್ಯಾಮಿತಿಯ ಪ್ರಮಾಣದಿಂದ ಬಹುಬೇಗ ಬೆಳೆದು ಅಂಕಗಣಿತ ಪ್ರಮಾಣದಲ್ಲಿ ಬೆಳೆಯುವ ಆಹಾರವನ್ನು ಮೀರಿಸಿ, ದೇಶವು ಹೆಚ್ಚು ಜನಸಂಖ್ಯೆಯನ್ನು ಹೊಂದುವುದು. ಆದರೆ ಮಾಲ್ಥಸ್‌ನ ಈ ತತ್ವ ಯೂರೋಪಿನಲ್ಲಿ ನಿಜವಾಗಿ ತೋರಿಬರಲಿಲ್ಲ. ಇಂಗ್ಲೆಂಡಿನ ಕೃಷಿರಂಗದಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಹಾಗೂ ಕೈಗಾರಿಕಾ ರಂಗದಲ್ಲಿ ಉಂಟಾದ ಮಹತ್ತರ ಮುನ್ನಡೆಯಿಂದ ವಿದೇಶ ವ್ಯಾಪಾರ ಹೆಚ್ಚಿ ಅದರ ಫಲವಾಗಿ ಆಹಾರದ ಆಮದು ಹೆಚ್ಚಿತು. ವೈಜ್ಞಾನಿಕ ಜನನ ನಿಯಂತ್ರಣ ಸಾಧನಗಳ ಪ್ರಚಾರ

ದಿಂದ ಜನಸಂಖ್ಯೆಯ ಬೆಳವಣಿಗೆಯೂ ಸಹ ಬಹುಮಟ್ಟಿಗೆ ಇಳಿಮುಖವಾಯಿತು. ಕೃಷಿ ತಂತ್ರಗಳು, ರಾಸಾಯನಿಕ ಗೊಬ್ಬರಗಳ ಉಪಯೋಗ, ಹೊಸಬೀಜಗಳಿಂದ ಆಹಾರದಲ್ಲಿ ಅಧಿಕ ಉತ್ಪಾದನೆಯನ್ನು ಪಡೆಯಲಾಯಿತು. ಈ ಕ್ರಾಂತಿಕಾರಕ ಬದಲಾವಣೆಗಳು ಇಂಗ್ಲೆಂಡಿನಲ್ಲಿ ಮಾಲ್ಥುಸ್‌ನ ಸಿದ್ಧಾಂತವನ್ನು ಹುಸಿಯಾಗುವಂತೆ ಮಾಡಿದವು. ಇದರಿಂದ ಮಾಲ್ಥುಸ್‌ನು ಒಬ್ಬ ನಿರಾಶಾವಾದಿ ಎಂದು ಪರಿಗಣಿಸಲ್ಪಟ್ಟನು.

(2) ಮಾಲ್ಥುಸ್‌ನ ಪ್ರಕಾರ ಆಹಾರವು ಬಹು ನಿಧಾನವಾಗಿ ಅಂಕಗಣಿತ ಪ್ರಮಾಣದಲ್ಲಿ ಬೆಳೆಯುವುದು ಯಂತ್ರಗಳ ಯುಗದಲ್ಲಿ ಅಷ್ಟು ನಿಜವೆನಿಸಲಿಲ್ಲ. ಕೃಷಿರಂಗದಲ್ಲಿ ಅನೇಕ ಸಂಶೋಧನೆಗಳಾಗಿವೆ. ನವೀನ ರೀತಿಯ ಬೇಸಾಯ, ರಾಸಾಯನಿಕ ಗೊಬ್ಬರಗಳ ಉಪಯೋಗ, ಉತ್ಕೃಷ್ಟ ಬೀಜಗಳು, ಆಧುನಿಕ ಯಂತ್ರೋಪಕರಣಗಳ ಬಳಕೆಯಿಂದ ಆಹಾರಧಾನ್ಯಗಳನ್ನು ಹೆಚ್ಚುಹೆಚ್ಚಾಗಿ ಉತ್ಪಾದಿಸಲಾಗುತ್ತಿದೆ.

(3) ಮಾಲ್ಥುಸ್‌ನ ತತ್ವವು ಎಲ್ಲ ರಾಷ್ಟ್ರಗಳಿಗೂ ಅನ್ವಯಿಸುವುದಿಲ್ಲ. ಯೂರೋಪಿನ ಹಾಗೂ ವಿಶ್ವದ ಕೆಲವು ರಾಷ್ಟ್ರಗಳಲ್ಲಿ ಜನಸಂಖ್ಯೆಯು ಅವಶ್ಯಕತೆಗಿಂತ ಕಡಮೆ ಇದ್ದು ಕಾರ್ಮಿಕರನ್ನು ಇತರ ರಾಷ್ಟ್ರಗಳಿಂದ ಪಡೆಯುತ್ತದೆ. ಅಂತಹ ರಾಷ್ಟ್ರಗಳಲ್ಲಿ ಜನಸಂಖ್ಯೆಯ ಕೊರತೆ ಒಂದು ಮುಖ್ಯ ಸಮಸ್ಯೆಯಾಗಿ ಪರಿಣಮಿಸಿದೆ.

ಇಪ್ಪತ್ತನೆಯ ಶತಮಾನದಲ್ಲಿ ಮಾಲ್ಥುಸ್‌ನ ಸಿದ್ಧಾಂತವು ಸರಿ ಎಂದು ತೋರುವುದಿಲ್ಲ. ಮಾಲ್ಥುಸ್ ತನ್ನ ಸಿದ್ಧಾಂತವನ್ನು 1798 ರಲ್ಲಿ ಪ್ರತಿಪಾದಿಸಿದನು. ಅಂದಿನ ಪರಿಸ್ಥಿತಿಗೂ ಇಂದಿನ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಪ್ರಕೃತಿಗೆ ಮಾಲ್ಥುಸ್ ಅಧಿಕ ಪ್ರಾಶಸ್ತ್ಯ ನೀಡಿರುವನು. ಇತ್ತೀಚೆಗೆ ಕ್ಷಾಮಡಾಮರಗಳು, ರೋಗರುಜಿನಗಳು ನಿಯಂತ್ರಿತವಾಗಿವೆ. ಸಾಧನಸಂಪರ್ಕಗಳ ಸೌಲಭ್ಯದಿಂದ ಕ್ಷಾಮಗಳನ್ನು ಸುಲಭವಾಗಿ ಎದುರಿಸಲಾಗಿದೆ. ಸ್ತ್ರೀಯರು ಮುಂದೆ ಬಂದು ವಿದ್ಯಾವಂತರಾಗಿ ಕೆಲಸಗಳಿಗೆ ಹೋಗುವುದರಿಂದ ತಡವಾಗಿ ವಿವಾಹವಾಗುವರು. ಅವರ ವೈವಾಹಿಕ ಜೀವನ ತಡವಾಗಿ ಪ್ರಾರಂಭವಾಗುವುದು. ಜನನ ನಿಯಂತ್ರಣದ ವಿವಿಧ ಸಾಧನಗಳು ಸುಲಭವಾಗಿ ಸಿಗುವುದರಿಂದ ಜನಸಂಖ್ಯೆಯು ಕಡಮೆಯಾಗುತ್ತ ಬಂದಿದೆ. ಮಾನವನೇ ಉದ್ದೇಶಪೂರ್ವಕವಾಗಿ ಈಗ ಜನಸಂಖ್ಯೆಯನ್ನು ತಡೆಗಟ್ಟುತ್ತಿದ್ದಾನೆ. ಗರ್ಭನಿರೋಧಕ ವಿಧಾನಗಳು ಇಂದು ನಾಗರಿಕ ಜನತೆಯಲ್ಲಿ ಸಾರ್ವತ್ರಿಕವಾಗಿ ಹರಡಿವೆ. ಇದರಿಂದಾಗಿ ಜನರ ಜೀವನಮಟ್ಟ ಸುಧಾರಿಸಿದೆ. ಆದ್ದರಿಂದ ಮಾಲ್ಥುಸ್‌ನ ತತ್ವ ನಿರಾಶಾವಾದವನ್ನು ಬೋಧಿಸುವ ಸಂಕುಚಿತ ಸಿದ್ಧಾಂತವೆನ್ನಬಹುದು. ಮಾಲ್ಥುಸನ ಸಿದ್ಧಾಂತದ ಪ್ರಕಾರ ಆಹಾರೋತ್ಪಾದನೆ ಹೆಚ್ಚಿದರೆ ಜನಸಂಖ್ಯೆ ಹೆಚ್ಚುವುದು. ಆಹಾರೋತ್ಪಾದನೆ ಕಡಮೆಯಾದರೆ ಜನರಿಗೆ ಆಹಾರದ ಪೂರೈಕೆ ಕಡಮೆಯಾಗಿ ಜನಸಂಖ್ಯೆ ಇಳಿಮುಖವಾಗುತ್ತದೆ.

ಆದರೆ ಇದು ಸರಿಯಲ್ಲ. ನಾಗರೀಕತೆ ಬೆಳೆದಂತೆಲ್ಲ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಜನಸಂಖ್ಯೆ ತೀವ್ರವಾಗಿ ಬೆಳೆಯುತ್ತಿದೆ. ಆದರೆ ಆ ರಾಷ್ಟ್ರಗಳು ಕುಟುಂಬ ಯೋಜನೆಗಳ ಮೂಲಕ ಜನಸಂಖ್ಯೆಯನ್ನು ನಿಯಂತ್ರಿಸುತ್ತವೆ. ಈ ರೀತಿ ಮಾಲ್ಥುಸ್‌ನ ಸಿದ್ಧಾಂತವು ಅನೇಕ ಟೀಕೆಗಳಿಗೆ ಗುರಿಯಾಯಿತು.

ಆದರೆ ಮಾಲ್ಥುಸ್‌ನ ಸಿದ್ಧಾಂತದಲ್ಲಿ ತಿರುಳಿಲ್ಲವೆಂದಲ್ಲ. ಈ ಸಿದ್ಧಾಂತವು ಬೆಳೆಯುವ ಜನಸಂಖ್ಯೆಯಿಂದ ಉಂಟಾಗುವ ಅನಿಷ್ಟ ಪರಿಣಾಮಗಳನ್ನು ತಿಳಿಸಿ, ಅದನ್ನು ತಡೆಗಟ್ಟಲು ಎಚ್ಚರಿಸಿರುವುದು ನಿಜಕ್ಕೂ ಅಭಿನಂದನೀಯವಾದದ್ದು. ಆದ್ದರಿಂದ ಮಾಲ್ಥುಸ್‌ನಿಗೆ ಎಲ್ಲರ ಅಭಿನಂದನೆಗಳು ಸಲ್ಲಲೇಬೇಕು.

ಆದರ್ಶ ಜನಸಂಖ್ಯೆಯ ಸಿದ್ಧಾಂತ

ನವೀನ ಅರ್ಥಶಾಸ್ತ್ರಜ್ಞರು, ಮಾಲ್ಥುಸ್‌ನ ತತ್ವವನ್ನು ಅವೈಜ್ಞಾನಿಕ ಮತ್ತು ಅಸಮರ್ಪಕವೆಂದು ತಿರಸ್ಕರಿಸಿ, ತಮ್ಮದೇ ಆದ ಹೊಸ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಅವರ ಸಿದ್ಧಾಂತವನ್ನು 'ಆದರ್ಶ ಜನಸಂಖ್ಯೆ ಸಿದ್ಧಾಂತ'ವೆಂದು ಕರೆಯುತ್ತಾರೆ. ಈ ತತ್ವದ ಮುಖ್ಯ ಬೋಧಕ ಎಡ್ವಿನ್ ಕ್ಯಾನನ್. ಇವನು ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಈ ಸಿದ್ಧಾಂತವನ್ನು ಮಂಡಿಸಿದನು. ಈ ಸಿದ್ಧಾಂತವು ಜನಸಂಖ್ಯೆಗೆ ಮತ್ತು ಉತ್ಪಾದನಾ ದಕ್ಷತೆಗೆ ಸಂಬಂಧಿಸಿದೆ. ದೇಶದ ಸಂಪತ್ತಿಗೆ ಸಂಬಂಧಪಟ್ಟಿದ್ದು, ಇತರ ಉತ್ಪಾದನಾ ಕತೃಗಳೊಂದಿಗೆ ಸಹಕರಿಸಿ ಪರಮಾವಧಿ ಉತ್ಪಾದನೆಗೆ ದಾರಿ ಮಾಡಿಕೊಡುವ ಜನಸಂಖ್ಯೆಯನ್ನು ಆದರ್ಶ ಜನಸಂಖ್ಯೆಯೆಂದು ಕರೆಯುತ್ತಾರೆ. ಜೆ.ಇ. ಮೀಡ್ ಎಂಬ ಅರ್ಥಶಾಸ್ತ್ರಜ್ಞನ ಅಭಿಪ್ರಾಯದಲ್ಲಿ '**ಆದರ್ಶ ಜನಸಂಖ್ಯೆ ಎಂದರೆ ಪ್ರತಿಯೊಬ್ಬ ವ್ಯಕ್ತಿಗೆ ಪರಮಾವಧಿ ತೃಪ್ತಿಯನ್ನು ಕೊಡುವ ಜನಸಂಖ್ಯೆ.**' ಆರ್ಥಿಕ ವ್ಯವಸ್ಥೆಯ ಎಲ್ಲ ಅಂಶಗಳಿಂದ ಆದರ್ಶ ಜನಸಂಖ್ಯೆ ನಿರ್ಧಾರವಾಗುತ್ತದೆ ಹಾಗೂ ಬಂಡವಾಳದ ಬೆಳವಣಿಗೆಯಿಂದ ರೂಪಾಂತರ ಹೊಂದುತ್ತದೆ. ಇವನ ಪ್ರಕಾರ ನೈಸರ್ಗಿಕ ಹಾಗೂ ಬಂಡವಾಳ ಸಂಪನ್ಮೂಲಗಳು, ಲಭ್ಯವಿರುವ ತಾಂತ್ರಿಕ ಜ್ಞಾನದೊಂದಿಗೆ ಯಾವ ಜನಸಂಖ್ಯೆ ಪ್ರಮಾಣದಿಂದ ದೇಶದಲ್ಲಿ ತಲಾ ನಿಜ ಆದಾಯವು ಅತಿ ಹೆಚ್ಚಿನ ಮಟ್ಟವನ್ನು ತಲುಪುವುವೋ ಆ ಜನಸಂಖ್ಯೆಯ ಪ್ರಮಾಣವೇ ಆದರ್ಶ ಅಥವಾ ಮಾದರಿ ಜನಸಂಖ್ಯೆ. ಅಂದರೆ ಒಂದು ರಾಷ್ಟ್ರವು ತನ್ನಲ್ಲಿರುವ ಸಂಪನ್ಮೂಲಗಳಿಗೆ ತಕ್ಕಂತೆ ಜನಸಂಖ್ಯೆಯನ್ನು ಹೊಂದಿರಬೇಕು. ಜನಸಂಖ್ಯೆ ಕಡಮೆ ಇದ್ದಾಗ ಸಂಪನ್ಮೂಲಗಳಿಂದ ಹೆಚ್ಚು ಉತ್ಪಾದನೆ ಮಾಡುವುದು ಸಾಧ್ಯವಾಗುವುದಿಲ್ಲ. ಇದರಿಂದ ಉತ್ಪಾದನೆಯೂ ಕಡಮೆಯಾಗಿ, ಜನರ ಜೀವನಮಟ್ಟ ಕಡಮೆಯಾಗುತ್ತದೆ. ರಾಷ್ಟ್ರದ ಉತ್ಪಾದನೆಯು ಪರಮಾವಧಿಗಿಂತ ಕಡಮೆ ಇರುವುದರಿಂದ ಅಲ್ಲಿನ ಜನರ ಸರಾಸರಿ ಉತ್ಪನ್ನವು ಕಡಮೆಯಾಗುತ್ತದೆ. ಸಂಪನ್ಮೂಲಗಳಿಗಿಂತ ಹೆಚ್ಚು ಜನಸಂಖ್ಯೆ ಇದ್ದಲ್ಲಿ

ಉತ್ಪಾದನೆಯಾದ ಸಂಪತ್ತನ್ನು ಹಂಚಿದಾಗ ಜನರ ಉತ್ಪನ್ನ ಕಡಮೆಯಾಗುತ್ತದೆ. ಆದ್ದರಿಂದ ಸಾಧನ ಸಂಪತ್ತುಗಳನ್ನು ಸಂಪೂರ್ಣವಾಗಿ ಬಳಸಿ ಪರಮಾವಧಿ ಉತ್ಪಾದನೆಯನ್ನು ಪಡೆಯಬೇಕಾದರೆ ಆದರ್ಶ ಜನಸಂಖ್ಯೆ ಇರುವುದು ಅಗತ್ಯವಾಗುತ್ತದೆ. ಸಂಪನ್ಮೂಲಗಳು ಕಡಮೆ ಇದ್ದು ಹೆಚ್ಚು ಜನಸಂಖ್ಯೆ ಇರಕೂಡದು. ಈ ಪರಿಸ್ಥಿತಿ ಉಂಟಾದರೆ ಆ ರಾಷ್ಟ್ರದ ಜನಸಂಖ್ಯೆ ಮಿತಿ ಮೀರಿದೆ ಎನ್ನಬಹುದು. ಜನಸಂಖ್ಯೆಯು ನಿಗದಿಯಾದ ಪ್ರಮಾಣಕ್ಕಿಂತ ಕಡಮೆ ಇದ್ದರೆ ಅಲ್ಲಿ ಜನಸಂಖ್ಯೆಯ ಕೊರತೆ ಇದೆ ಎನ್ನಬಹುದು. ಆದ್ದರಿಂದ ಒಂದು ದೇಶದಲ್ಲಿ ಎಲ್ಲ ಉತ್ಪಾದನಾ ಸಾಧನಗಳು, ತಾಂತ್ರಿಕಜ್ಞಾನ, ಬಂಡವಾಳ ಇವುಗಳ ಉಪಯೋಗದಿಂದ ಉತ್ಪನ್ನವು ಪರಮಾವಧಿಯನ್ನು ಹೊಂದಲು ಆದರ್ಶ ಪ್ರಮಾಣದ ಜನಸಂಖ್ಯೆ ಇರುವುದು ಅತ್ಯಾವಶ್ಯಕ.

ಟೀಕೆಗಳು : ಆದರ್ಶ ಜನಸಂಖ್ಯಾ ಸಿದ್ಧಾಂತ, ದೇಶದ ಸಂಪನ್ಮೂಲಗಳಿಗೆ ಮತ್ತು ಜನಸಂಖ್ಯೆಗೆ ಇರುವ ಸಂಬಂಧವನ್ನು ವಿವರಿಸುತ್ತದೆ. ಆದರೆ ಯಾವ ಒಂದು ಸಂಖ್ಯೆ ಆದರ್ಶ ಜನಸಂಖ್ಯೆ ಎಂದು ಹೇಳಲು ಸಾಧ್ಯವಿಲ್ಲ ಹಾಗೂ ಹೊಸ ಸಂಪನ್ಮೂಲಗಳು ಆಗಾಗ ಕಂಡುಬರುತ್ತವೆ. ತಾಂತ್ರಿಕ ಜ್ಞಾನ ಬೆಳೆದಂತೆಲ್ಲ ಉತ್ಪಾದನೆಯು ಹೆಚ್ಚುತ್ತ ಹೋಗುತ್ತದೆ. ಆದಕಾರಣ ಆದರ್ಶ ಜನಸಂಖ್ಯೆ ತತ್ವವು ಕೆಲವು ದೋಷಗಳನ್ನು ಹೊಂದಿದೆ. ಆದರ್ಶ ಜನಸಂಖ್ಯೆ ಸಂಬಂಧದಲ್ಲಿ ಈಗಿನ ಅರ್ಥಶಾಸ್ತ್ರಜ್ಞರು ಜನಸಂಖ್ಯೆ ಹೆಚ್ಚೋ ಅಥವಾ ಕಡಮೆಯೋ ಎಂಬುದನ್ನು ಕಂಡುಹಿಡಿಯುತ್ತಾರೆ. ಆದರೆ ಇದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಏಕೆಂದರೆ ಜನಸಂಖ್ಯೆ ಒಂದು ಚಲನಾತ್ಮಕವಾದ ಶಕ್ತಿ. ಇದನ್ನು ಸರಿಯಾಗಿ ನಿರ್ಧರಿಸುವುದು ಕಷ್ಟ. ಕೆಲವರು ಈ ತತ್ವವು ಮಾಲ್ಥಸ್‌ನ ತತ್ವಕ್ಕಿಂತಲೂ ಶ್ರೇಷ್ಠವೆಂದು ಅಭಿಪ್ರಾಯ ಪಟ್ಟಿದ್ದಾರೆ. ಜನಸಂಖ್ಯೆಗೆ ಮತ್ತು ಆಹಾರ ಧಾನ್ಯಗಳ ಉತ್ಪಾದನೆಗೆ ನಿಕಟ ಸಂಬಂಧವಿದೆ. ಏರುವ ಜನಸಂಖ್ಯೆ ನಾಡಿಗೆ ಆಪತ್ತೆಂದು ಮಾಲ್ಥಸ್ ಅಭಿಪ್ರಾಯಪಟ್ಟರೆ ಹೊಸ ಸಿದ್ಧಾಂತವು ಅದು ಸರಿಯಲ್ಲವೆಂದು ಅಭಿಪ್ರಾಯ ಪಡುತ್ತದೆ.

ಆದರ್ಶ ಜನಸಂಖ್ಯೆ ತತ್ವ ಬರೀ ಆಹಾರ ಧಾನ್ಯಗಳನ್ನೇ ಅಲ್ಲದೆ ಇತರ ಸಂಪನ್ಮೂಲಗಳನ್ನು ಗಣನೆಗೆ ತಂದುಕೊಳ್ಳಬೇಕೆಂಬುದಾಗಿ ತಿಳಿಸುತ್ತದೆ. ಆದ್ದರಿಂದ ಆಧುನಿಕ ಸಿದ್ಧಾಂತ ಮಾಲ್ಥಸ್ಸ್‌ನ ಸಿದ್ಧಾಂತಕ್ಕಿಂತಲೂ ಅನೇಕ ಉತ್ತಮ ಅಂಶಗಳನ್ನೊಳಗೊಂಡಿದೆ.

ಶ್ರಮ ವಿಭಜನೆ

ಶ್ರಮ ವಿಭಜನೆಯು ಆಧುನಿಕ ಯಂತ್ರಯುಗದ ಒಂದು ಮುಖ್ಯ ಲಕ್ಷಣವಾಗಿ ಪರಿಣಮಿಸಿದೆ. ಆಧುನಿಕ ಯುಗದಲ್ಲಿ ಮನುಷ್ಯನ ಬಯಕೆಗಳು ಅಪರಿಮಿತವಾದವು. ಆದ್ದರಿಂದ ಮನುಷ್ಯನ ನಾನಾ ಬಯಕೆಗಳನ್ನು ಪೂರೈಸಲು ಯಂತ್ರಗಳ ಸಹಾಯದಿಂದ

ವಸ್ತುಗಳನ್ನು ಉತ್ಪಾದಿಸುವುದು ರೂಢಿಗೆ ಬಂದಿದೆ. ಯಂತ್ರಗಳನ್ನು ಬಳಸಲು ನುರಿತ ಹಾಗೂ ಅವುಗಳನ್ನು ಬಳಸುವುದರಲ್ಲಿ ವಿಶಿಷ್ಟತೆ ಪಡೆದಿರುವ ಶ್ರಮಜೀವಿಗಳ ಸೇವೆಯು ಅತ್ಯಾವಶ್ಯಕ. ಆ ಶ್ರಮಜೀವಿಗಳು ಕೆಲವು ವಿಭಾಗಗಳಲ್ಲಿ ಮಾತ್ರ ಪರಿಣತಿ ಹೊಂದಿರುತ್ತಾರೆ. ಅವರ ಶ್ರಮ, ಶಕ್ತಿ ಫಲಪ್ರದವಾಗುವಂತೆ ಮಾಡಲು ಶ್ರಮವಿಭಜನೆ ಅತಿ ಮುಖ್ಯ. ಅರ್ಥಶಾಸ್ತ್ರದಲ್ಲಿ ಶ್ರಮವಿಭಜನೆಯನ್ನು 'ಕಾರ್ಮಿಕನ ವಿಶಿಷ್ಟತೆ' ಎಂದು ಕರೆಯುತ್ತಾರೆ. ಕಾರ್ಮಿಕನು ನಿರ್ವಹಿಸುವ ಕೆಲಸವನ್ನು 'ವಿಶಿಷ್ಟತೆ' ಎಂದು ಕರೆಯಲು ಮುಖ್ಯ ಕಾರಣ, ಎಲ್ಲ ಕೆಲಸಗಳನ್ನು ಒಬ್ಬನೇ ಮಾಡುವ ಬದಲು, ಆ ಕೆಲಸವನ್ನು ಅನೇಕ ವಿಭಾಗಗಳಾಗಿ ವಿಂಗಡಿಸಿ, ಒಂದೊಂದು ವಿಭಾಗವನ್ನು ಒಬ್ಬೊಬ್ಬ ನುರಿತ ಕಾರ್ಮಿಕ ನೋಡಿಕೊಂಡರೆ ಅಂತಹ ಕಾರ್ಯವನ್ನು 'ಶ್ರಮವಿಭಜನೆ' ಎಂದು ಕರೆಯಬಹುದು. ಅಂತಹ ವ್ಯಕ್ತಿಯನ್ನು ಆ ಕಾರ್ಯದ ನಿಪುಣನೆಂದೂ, ತಜ್ಞನೆಂದೂ ಕರೆಯಬಹುದು. ಆದ್ದರಿಂದ ಶ್ರಮವಿಭಜನೆ ಎಂದರೆ ಕೆಲಸದ ಹಂಚಿಕೆ. ಈ ರೀತಿ ಪ್ರತಿಯೊಂದು ವಿಭಾಗವನ್ನೂ ಬೇರ್ಪಡಿಸಿ, ನುರಿತ ತಜ್ಞರಿಂದ ವಸ್ತುಗಳನ್ನು ತಯಾರಿಸುವುದರಿಂದ, ವಸ್ತುಗಳು ತ್ವರಿತವಾಗಿ ಉತ್ಪಾದನೆಯಾಗುವುದಲ್ಲದೆ ಅಧಿಕ ಉತ್ಪಾದನೆಯನ್ನು ಪಡೆಯಬಹುದು.

ಹಿಂದಿನ ಕಾಲದಿಂದಲೂ ಶ್ರಮ ವಿಭಜನೆ ರೂಢಿಗೆ ಬಂದಿದೆ. ಪ್ರತಿಯೊಂದು ಮನೆಯಲ್ಲಿ ಗಂಡ ವ್ಯವಹಾರ ನೋಡಿಕೊಂಡರೆ, ಹೆಂಡತಿ ಮನೆಯ ಕೆಲಸಗಳನ್ನು, ಮಕ್ಕಳ ಪಾಲನೆ ಪೋಷಣೆಯನ್ನು ನಿರ್ವಹಿಸುತ್ತಿದ್ದಳು. ಅಂದರೆ ಗಂಡ ವ್ಯವಹಾರದಲ್ಲಿ ಶ್ರಮವಿಭಜನೆಯನ್ನು ಅನುಸರಿಸಿದರೆ ಹೆಂಡತಿ ಉಳಿದ ಕೆಲಸಗಳಲ್ಲಿ ತಲ್ಲೀನಳಾಗಿರುತ್ತಿದ್ದಳು. ಈಗಲೂ ಸಹ ಹಳ್ಳಿಗಳಲ್ಲಿ ಕೆಲವರು ಕೃಷಿಯನ್ನು, ಕೆಲವರು ಕಮ್ಮಾರಿಕೆಯನ್ನು ಇನ್ನು ಕೆಲವರು ಬಡಗಿಯ ಕೆಲಸಗಳನ್ನು ಮಾಡುವರು. ಇದಕ್ಕೆ ಉದ್ಯೋಗಗಳ ಶ್ರಮವಿಭಜನೆ ಎನ್ನುವರು. ಶ್ರಮವಿಭಜನೆ ಇತ್ತೀಚಿಗೆ ಯಂತ್ರಗಳ ಉತ್ಪಾದನೆಗೆ ಅನ್ವಯಿಸುತ್ತದೆ. ಈಗಿನ ಯಂತ್ರಯುಗದಲ್ಲಿ ವಸ್ತುಗಳನ್ನು ಯಾವುದೇ ಒಬ್ಬ ವ್ಯಕ್ತಿ ಯಂತ್ರಗಳಿಲ್ಲದೆ ಉತ್ಪಾದಿಸಲಾರ. ಉತ್ಪಾದಿಸಿದರೂ ಹೆಚ್ಚು ವಸ್ತುಗಳನ್ನು ಉತ್ಪಾದಿಸಲಾರ. ಈ ರೀತಿ ಉತ್ಪಾದಿಸಿದ ವಸ್ತುಗಳ ಬೆಲೆ ಹೆಚ್ಚು. ಒಬ್ಬ ಬೂಟು ಹೊಲಿಯುವವನಿಗೆ ಒಂದು ಜೊತೆ ಬೂಟುಗಳನ್ನು ತಯಾರಿಸಿಕೊಡಲು ತಿಳಿಸಿದರೆ ಇಡೀ ದಿನ ಶ್ರಮಪಟ್ಟು ಒಂದು ಜೊತೆ ಬೂಟುಗಳನ್ನು ಮಾತ್ರ ತಯಾರಿಸುವನು. ಇಲ್ಲಿ ಶ್ರಮವಿಭಜನೆ ಇಲ್ಲ. ಚರ್ಮವನ್ನು ಕತ್ತರಿಸುವುದರಿಂದ ಹಿಡಿದು, ಅದನ್ನು ಹೊಲಿದು, ಪಾಲಿಷ್ ಮಾಡಿ, ಪ್ಯಾಕ್ ಮಾಡಿ ಕೊಡುವವರೆಗೆ ಎಲ್ಲ ಕೆಲಸಗಳನ್ನು ಅವನೊಬ್ಬನೇ ನಿರ್ವಹಿಸಬೇಕು. ಇದರಿಂದ ಕೆಲಸ ನಿಧಾನವಾಗುತ್ತದೆ. ಆದರೆ ಬೂಟು ಕಂಪೆನಿಯಲ್ಲಿ ಯಂತ್ರಗಳಿಂದ ಬೂಟುಗಳು ತಯಾರಾಗುತ್ತವೆ. ಒಂದೊಂದು ಯಂತ್ರ ಒಂದೊಂದು ಕೆಲಸ ನಿರ್ವಹಿಸಿ ರಾಶಿರಾಶಿಯಾಗಿ ಬೂಟುಗಳನ್ನು ತಯಾರಿಸು

ತ್ತವೆ. ಯಂತ್ರಗಳೇ ಪ್ಯಾಕ್ ಸಹ ಮಾಡುತ್ತವೆ. ಆದರೆ ಈ ಯಂತ್ರವನ್ನು ನಡೆಸುವ ಕೆಲಸಗಾರ ಮತ್ತೊಂದು ಯಂತ್ರವನ್ನು ನಡೆಸಲು ತರಬೇತಿ ಹೊಂದಿರುವುದಿಲ್ಲ. ಅವನ ವಿಭಾಗದ ಯಂತ್ರವನ್ನು ಮಾತ್ರ ನಡೆಸುವುದರಲ್ಲಿ ಅವನು ತಜ್ಞತೆ ಹೊಂದಿರುವನು. ಇಂದು ಶ್ರಮವಿಭಜನೆಯು ವಸ್ತುಗಳ ಉತ್ಪಾದನೆಯಲ್ಲಿ ಅತ್ಯಂತ ಮಹತ್ತರವಾದ ಪಾತ್ರವನ್ನು ಹೊಂದಿದೆ. ಆದರೆ ಶ್ರಮವಿಭಜನೆಯು ಕೆಲವು ಅನುಕೂಲಗಳನ್ನು ಹಾಗೂ ಅನಾನುಕೂಲಗಳನ್ನು ಪಡೆದಿವೆ.

ಅನುಕೂಲಗಳು : ಶ್ರಮವಿಭಜನೆಯಿಂದ ನಾನಾ ಅನುಕೂಲಗಳು ಲಭಿಸುತ್ತವೆ.

(i) **ಅಧಿಕ ಉತ್ಪಾದನೆ :** ಶ್ರಮವಿಭಜನೆಯಿಂದ ಯಂತ್ರಗಳನ್ನು ಬಳಸಿ ಅಧಿಕ ಪ್ರಮಾಣದಲ್ಲಿ ವಸ್ತುಗಳನ್ನು ಉತ್ಪಾದಿಸಬಹುದು. ಅರ್ಥಶಾಸ್ತ್ರ ಪಿತಾಮಹರಾದ ಆಡಂ ಸ್ಮಿತ್‌ರವರು ಶ್ರಮವಿಭಜನೆಗೆ ಹೆಚ್ಚಿನ ಆದ್ಯತೆ ನೀಡಿದ್ದರು. ಅವರು ಒಂದು ಗುಂಡುಸೂಜಿಯ ಕಾರ್ಖಾನೆಯನ್ನು ತೆಗೆದುಕೊಂಡು ಒಬ್ಬನೇ ಕಾರ್ಮಿಕ ಗುಂಡುಸೂಜಿಗಳನ್ನು ಮಾಡಿದರೆ ಇಡೀ ದಿನದಲ್ಲಿ ಕೆಲವೇ ಸೂಜಿಗಳನ್ನು ತಯಾರಿಸುವನು. ಏಕೆಂದರೆ ಒಬ್ಬನೇ ತಂತಿಯನ್ನು ಸಮನಾಗಿ ಕತ್ತರಿಸಬೇಕು ; ಅವುಗಳನ್ನು ಚೂಪು ಮಾಡಬೇಕು; ಉಜ್ಜಿ ಪಾಲಿಷ್ ಮಾಡಬೇಕು. ಅನಂತರ ಅವುಗಳನ್ನು ಎಣಿಕೆ ಮಾಡಿ ಪೆಟ್ಟಿಗೆಗಳಲ್ಲಿ ಹಾಕಿ ಪ್ಯಾಕ್ ಮಾಡಬೇಕು. ಆದರೆ ಶ್ರಮವಿಭಜನೆಯನ್ನು ಅನುಸರಿಸಿದರೆ ಒಂದು ದಿನಕ್ಕೆ ಹಲವಾರು ಗುಂಡುಸೂಜಿಗಳನ್ನು ತಯಾರಿಸಬಹುದು. ಒಬ್ಬೊಬ್ಬ ಕಾರ್ಮಿಕ ಒಂದೊಂದು ಕೆಲಸವನ್ನು ನಿರ್ವಹಿಸುತ್ತಾನೆ. ಇದರಿಂದ ಕೆಲಸಗಳು ಸುಗಮವಾಗಿ, ವೇಗವಾಗಿ ನಡೆಯುತ್ತವೆ. ಈಗಿನ ಯಂತ್ರಯುಗದಲ್ಲಿ ಎಲ್ಲ ವಸ್ತುಗಳೂ ಶ್ರಮ ವಿಭಜನೆಯಿಂದಲೇ ಸಿದ್ಧವಾಗುತ್ತವೆ. ಶ್ರಮವಿಭಜನೆಯಲ್ಲಿ ಕೆಲಸಗಾರರು ವಿಶೇಷ ತರಬೇತಿ ಪಡೆದು ಅವರು ಪರಬೇತಿ ಪಡೆದ ಕೆಲಸಗಳನ್ನು ಮಾತ್ರ ನಿರ್ವಹಿಸುತ್ತಾರೆ. ಎಲ್ಲವನ್ನು ಒಬ್ಬ ಕೆಲಸಗಾರ ನಿರ್ವಹಿಸಲಾರ. ಎಲ್ಲರೂ ಕಲೆತು ಕೆಲಸಗಳನ್ನು ನಿರ್ವಹಿಸುತ್ತಾರೆ. ಅಂದರೆ ಶ್ರಮವಿಭಜನೆಯಿಂದ ಅಧಿಕ ಪ್ರಮಾಣದಲ್ಲಿ ವಸ್ತುಗಳನ್ನು ಉತ್ಪಾದಿಸಬಹುದು.

(ii) **ಕೆಲಸಗಾರನ ಕುಶಲತೆ ಹಾಗೂ ದಕ್ಷತೆಗಳ ಸದುಪಯೋಗ :** ಶ್ರಮ ವಿಭಜನೆಯಲ್ಲಿ ಆಯಾ ಕೆಲಸಗಳಲ್ಲಿ ವಿಶಿಷ್ಟತೆ ಪಡೆದಿರುವ ನುರಿತ ವ್ಯಕ್ತಿಗಳು ಮಾತ್ರ ಆಯಾ ಕೆಲಸಗಳಲ್ಲಿ ತೊಡಗುತ್ತಾರೆ. ಇಂಜಿನಿಯರಿಂಗ್ ಓದಿದವನು ಕಾರಕೂನನಾಗುವುದಿಲ್ಲ. ಲೆಕ್ಕದಲ್ಲಿ ಪರಿಣತಿ ಪಡೆದವನು ಅಕೌಂಟ್ಸ್ ಇಲಾಖೆಯಲ್ಲಿ ನೇಮಕಗೊಳ್ಳುತ್ತಾನೆ. ಇದರಿಂದ ಕೆಲಸಗಾರರು ತಮ್ಮ ಕುಶಲತೆಗನುಗುಣವಾಗಿ ಕೆಲಸಗಳನ್ನು ನಿರ್ವಹಿಸುವುದರಿಂದ ಅವರ ಕುಶಲತೆ ಹೆಚ್ಚಿ ಉತ್ಪಾದನೆಯು ಕಾಲಕ್ರಮೇಣ ಅಧಿಕಗೊಳ್ಳುತ್ತದೆ.

ಶ್ರಮ ವಿಭಜನೆಯಿಂದ ಕೆಲಸಮಾಡುವ ಕೆಲಸಗಾರರ ದಕ್ಷತೆ ಹೆಚ್ಚುತ್ತದೆ. ಶ್ರಮ ವಿಭಜನೆ ಇಲ್ಲದಿದ್ದರೆ ಒಬ್ಬ ಕೆಲಸಗಾರ ಒಂದು ದಿನದಲ್ಲಿ ಕೆಲವು ವಸ್ತುಗಳನ್ನು ಮಾತ್ರ ಉತ್ಪಾದಿಸಬಲ್ಲ. ಇದರಿಂದ ಅವನು ಹೆಚ್ಚು ದಕ್ಷನಾಗಿರಲು ಸಾಧ್ಯವಿಲ್ಲ. ಶ್ರಮ ವಿಭಜನೆಯಿಂದ ಹೆಚ್ಚು ವಸ್ತುಗಳನ್ನು ಉತ್ಪಾದಿಸಬಹುದು. ಅಂದರೆ ಶ್ರಮವಿಭಜನೆ ಯಿಂದ ಪ್ರತಿಯೊಬ್ಬ ಕೆಲಸಗಾರನ ದಕ್ಷತೆ ಹೆಚ್ಚುತ್ತದೆ. ಹೇಗೆಂದರೆ ಒಂದೇ ಕೆಲಸವನ್ನು ಪದೇಪದೇ ಮಾಡುವುದರಿಂದ ಅವನು ಆ ಕೆಲಸದಲ್ಲಿ ನಿಪುಣನಾಗಿ ವಿಶಿಷ್ಟತೆ ಹೊಂದಿ ತ್ವರಿತ ವೇಗದಲ್ಲಿ ಕೆಲಸ ನಿರ್ವಹಿಸುತ್ತಾನೆ. ಅವನ ನಿಪುಣತೆ ಹಾಗೂ ಜಾಣ್ಮೆಯಿಂದ ಉತ್ಪಾದನೆ ಸಹ ಅಧಿಕವಾಗುತ್ತದೆ.

(iii) **ವೇಳೆ ಮಿತವ್ಯಯ :** ಯಂತ್ರಗಳು ಹಾಗೂ ಶ್ರಮ ವಿಭಜನೆ ಒಂದ ಕ್ಕೊಂದು ಪೂರಕಗಳು. ಯಂತ್ರಗಳಿಂದ ವಸ್ತುಗಳನ್ನು ಉತ್ಪಾದಿಸಲು ಶ್ರಮ ವಿಭಜನೆ ಅತ್ಯಾವಶ್ಯಕ. ಹಾಗೆಯೇ ಶ್ರಮವಿಭಜನೆಯಿಂದ ಕಾರ್ಯಗಳನ್ನು ನಿರ್ವಹಿಸಲು, ಯಂತ್ರಗಳಿಂದ ಉತ್ಪಾದನೆಯನ್ನು ಮಾಡಬೇಕು. ಯಂತ್ರಗಳು ಕೆಲವೇ ನಿಮಿಷಗಳಲ್ಲಿ ಸಾಕಷ್ಟು ವಸ್ತುಗಳನ್ನು ತಯಾರಿಸುತ್ತವೆ. ಹೀಗಾಗಿ ವಸ್ತುಗಳ ತಯಾರಿಕೆಯಲ್ಲಿ ವೇಳೆಯ ಮಿತವ್ಯಯ ನಡೆದಿರುತ್ತದೆ. ಸ್ವಲ್ಪ ವೇಳೆಯಲ್ಲಿ ಅಧಿಕ ವಸ್ತುಗಳನ್ನು ತಯಾರಿಸಬಹುದು. ವೇಳೆಯು ಅಪವ್ಯಯವಾಗುವುದಿಲ್ಲ.

(iv) **ಕಡಮೆ ಬೆಲೆಗೆ ವಸ್ತುಗಳ ಪೂರೈಕೆ :** ಶ್ರಮವಿಭಜನೆಯಿಂದ ಅಧಿಕ ವಸ್ತು ಗಳನ್ನು ತಯಾರಿಸಲಾಗುತ್ತದೆ. ವಸ್ತುಗಳನ್ನು ಅಧಿಕ ಪ್ರಮಾಣದಲ್ಲಿ ತಯಾರಿಸುವುದ ರಿಂದ ಉತ್ಪಾದನಾ ವೆಚ್ಚವು ಕಡಮೆಯಾಗುತ್ತದೆ. ಇದರಿಂದ ಕಡಮೆ ಬೆಲೆಗೆ ವಸ್ತು ಗಳನ್ನು ಮಾರಾಟ ಮಾಡಬಹುದು. ಉದಾಹರಣೆಗೆ ಖಾದಿ ಬಟ್ಟೆಯನ್ನು ಕೈಯಿಂದ ತಯಾರಿಸಿದರೆ ಉತ್ಪಾದನೆ ಕಡಮೆಯಾಗಿ ಬಟ್ಟೆಯ ಬೆಲೆ ಹೆಚ್ಚಾಗುತ್ತದೆ. ಯಂತ್ರ ಗಳಿಂದ ತಯಾರಿಸಿದರೆ ಬಟ್ಟೆಗಳು ಬಹಳ ಕಡಮೆ ಬೆಲೆಗೆ ಸಿಗುತ್ತವೆ. ಕೈಯಿಂದ ತಯಾರಿಸಿದ ವಸ್ತುಗಳಿಗಿಂತ ಯಂತ್ರಗಳಿಂದ ತಯಾರಾದ ವಸ್ತುಗಳು ಬಹಳ ಕಡಮೆ ಬೆಲೆಗೆ ಸಿಗುವುದಲ್ಲದೆ ಒಳ್ಳೆಯ ಗುಣಮಟ್ಟವನ್ನು ಹೊಂದಿರುತ್ತವೆ.

(v) **ಸಂಶೋಧನೆಗೆ ಚಾಲನೆ :** ಶ್ರಮವಿಭಜನೆ ಸಂಶೋಧನೆಗೆ ಅಡಿಪಾಯ ವಾಗುತ್ತದೆ.

ಅನಾನುಕೂಲಗಳು : ಶ್ರಮವಿಭಜನೆಯು ಕೆಲವು ಅನಾನುಕೂಲಗಳನ್ನೂ ಸಹ ಹೊಂದಿದೆ.

(i) **ಕೆಲಸದಲ್ಲಿ ಜಿಗುಪ್ಸೆ :** ಶ್ರಮಿಕರು ಒಂದೇ ವಿಭಾಗದಲ್ಲಿ ನುರಿತ ತಜ್ಞರಾದ್ದ ರಿಂದ ಒಂದೇ ಕೆಲಸವನ್ನು ಪುನಃ ಪುನಃ ಮಾಡಬೇಕಾಗುತ್ತದೆ. ಅವರಿಗೆ ಬೇರೆ ಕೆಲಸ

ಗಳನ್ನು ಮಾಡಲಾಗುವುದಿಲ್ಲ ಹಾಗೂ ಮಾಡಲು ಅವರಿಗೆ ಬರುವುದೂ ಇಲ್ಲ. ಬೂಟು ಪಾಲಿಷ್ ಮಾಡುವವನಿಗೆ ಅದನ್ನು ಬಿಟ್ಟು ಬೇರೆ ಕೆಲಸ ಬರುವುದಿಲ್ಲ. ಪ್ರತಿನಿತ್ಯ ಅವನು ಸಾವಿರಾರು ಬೂಟುಗಳಿಗೆ ಪಾಲಿಷ್ ಮಾಡಿ ಬೇಸತ್ತಿರುವನು. ಇದರಿಂದ ಕೆಲಸದಲ್ಲಿ ಜಿಗುಪ್ಸೆ ಉಂಟಾಗಿ ಆಸಕ್ತಿ ಉಳಿಯುವುದಿಲ್ಲ.

(ii) **ನಿರುದ್ಯೋಗ ಅಭಿವೃದ್ಧಿ :** ಶ್ರಮವಿಭಜನೆ ನಿರುದ್ಯೋಗವನ್ನು ಅಧಿಕಗೊಳಿಸುತ್ತದೆ. ಒಂದು ಯಂತ್ರ ನೂರಾರು ಜನ ಕಾರ್ಮಿಕರು ಮಾಡುವ ಕೆಲಸವನ್ನು ನಿರ್ವಹಿಸಿರುವುದರಿಂದ ಅನೇಕರಿಗೆ ಕೆಲಸಗಳು ದೊರೆಯುವುದಿಲ್ಲ. ಅವರು ನಿರುದ್ಯೋಗಿಗಳಾಗಿ ನಿರಾಶಾಜೀವಿಗಳಾಗುತ್ತಾರೆ. ಆದ್ದರಿಂದ ಶ್ರಮವಿಭಜನೆ ಹಾಗೂ ಯಾಂತ್ರೀಕರಣ ಕೆಲಸ ಮಾಡುವವರಲ್ಲಿ ನಿರುದ್ಯೋಗವನ್ನುಂಟು ಮಾಡುತ್ತದೆ.

(iii) **ನೈಪುಣ್ಯತೆಯ ನಾಶ :** ಕಾರ್ಖಾನೆಗಳಲ್ಲಿ ದುಡಿಯುವ ಕೆಲಸಗಾರರ ಕೆಲಸ ಯಾಂತ್ರಿಕವಾಗಿರುತ್ತದೆ. ಅವರು ಕೇವಲ ಯಂತ್ರಗಳನ್ನೇ ನಡೆಸುತ್ತಿರಬೇಕು. ಅವರು ಯಾವ ಒಂದು ವಸ್ತುವನ್ನೂ ಪೂರ್ಣವಾಗಿ ತಯಾರಿಸುವುದಿಲ್ಲ. ಕುರ್ಚಿ ಮಾಡುವ ಕಾರ್ಖಾನೆಗಳಲ್ಲಿ ಕೆಲವರು ಕುರ್ಚಿಯ ಕಾಲುಗಳನ್ನೂ, ಕೆಲವರು ಕೈಗಳಿಡುವ ಸ್ಥಳಗಳನ್ನೂ ಮತ್ತೆ ಕೆಲವರು ಕುರ್ಚಿಯ ಬೆನ್ನಿನ ಭಾಗಗಳನ್ನೂ ತಯಾರಿಸುವರು. ಮತ್ತೊಬ್ಬನು ಎಲ್ಲವನ್ನು ಜೋಡಿಸುತ್ತಾನೆ. ಹೀಗೆ ಹಲವಾರು ಕೆಲಸಗಾರರು ಕೆಲವು ಭಾಗಗಳನ್ನು ಹಂಚಿಕೊಂಡಿರುವುದರಿಂದ, ಆ ಭಾಗಗಳಲ್ಲಿ ಮಾತ್ರ ಅವರು ಅನುಭವ ಪಡೆದಿರುತ್ತಾರೆ. ಉಳಿದ ಭಾಗಗಳ ಉತ್ಪಾದನೆಯಲ್ಲಿ ಅವರಿಗೆ ಅನುಭವವಿರುವುದಿಲ್ಲ. ಇದರಿಂದ ಕೆಲಸಗಾರರ ನಿಪುಣತೆ ಕುಗ್ಗುತ್ತದೆ. ಅಲ್ಲದೆ ಕೈಕುಶಲತೆಯನ್ನು ಪ್ರದರ್ಶಿಸಲು ಅವನಿಗೆ ಅವಕಾಶವಿರುವುದಿಲ್ಲ. ಮೇಲಾಗಿ ಕೆಲವು ವೇಳೆ ಇಂತಹ ಕಾರ್ಖಾನೆಗಳನ್ನು ಮುಚ್ಚಿದಾಗ ಅಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಉಳಿದ ಕಾರ್ಖಾನೆಗಳಲ್ಲಿ ಕೆಲಸ ಸಿಗುವುದಿಲ್ಲ. ಏಕೆಂದರೆ ಇವರು ಒಂದೇ ಕೆಲಸದಲ್ಲಿ ನಿಪುಣರಾಗಿರುತ್ತಾರೆ.

(iv) **ಪರಾವಲಂಬನದ ಹೆಚ್ಚಳ :** ಶ್ರಮವಿಭಜನೆ ಪರಾವಲಂಬನೆಯನ್ನು ಹೆಚ್ಚಿಸುತ್ತದೆ. ಕೆಲಸಗಾರರು ಸ್ವತಃ ಸ್ವಾವಲಂಬಿಗಳಾಗಿ ವಸ್ತುಗಳನ್ನು ಉತ್ಪಾದಿಸಲು ಅಸಮರ್ಥರಾಗಿರುವುದರಿಂದ ಇನ್ನೊಬ್ಬರ ಮೇಲೆ ಪರಾವಲಂಬಿಗಳಾಗಿರಬೇಕಾಗುತ್ತದೆ. ಇದು ಅನೇಕ ತೊಂದರೆಗಳಿಗೆ ಎಡೆಮಾಡಿಕೊಡುತ್ತದೆ.

ಈ ಕೆಲವು ಅನಾನುಕೂಲಗಳು ಶ್ರಮವಿಭಜನೆಯಿಂದ ಕಂಡುಬಂದಾಗ್ಯೂ, ಶ್ರಮವಿಭಜನೆಯನ್ನು ತೆಗಳುವಂತಿಲ್ಲ, ಬಿಡುವಂತಿಲ್ಲ. ಇಂದಿನ ಯಂತ್ರಯುಗದಲ್ಲಿ ಶ್ರಮವಿಭಜನೆ ಅನಿವಾರ್ಯ.

3. ಬಂಡವಾಳ

ವಸ್ತುಗಳನ್ನು ಉತ್ಪಾದಿಸಲು ನೆರವಾಗುವ ಮತ್ತೊಂದು ಮುಖ್ಯ ಅಂಶ ಬಂಡವಾಳ. ಭೂಮಿಯನ್ನು ಬಿಟ್ಟು ಉತ್ಪಾದನೆಗೆ ಸಹಾಯವಾಗುವ ವ್ಯಕ್ತಿಗಳ

ಹಾಗೂ ಜನತೆಯ ಹಣವನ್ನು ಬಂಡವಾಳ ಎಂದು ಕರೆಯಬಹುದು. ಬಂಡವಾಳ ಮತ್ತು ಹಣ ಇವೆರಡನ್ನೂ ಬೇರೆ ಬೇರೆ ಮಾಡಿ, ಉತ್ಪಾದನೆಗೆ ಸಹಾಯಕ ವಾಗುವ ಸಾಧನಗಳನ್ನು ಬಂಡವಾಳ ಎಂದೂ, ಉತ್ಪಾದನೆಯಿಂದ ಬರುವ ವಸ್ತು ಗಳನ್ನು ಹಣವೆಂದೂ ಮಾರ್ಷಲ್ ಕರೆದಿದ್ದಾನೆ. ಸಾಮಾನ್ಯ ಭಾಷೆಯಲ್ಲಿ 'ಬಂಡವಾಳ' ಎಂದರೆ ಹಣ. ಒಬ್ಬ ವ್ಯಕ್ತಿಯ ಬಂಡವಾಳ ಎಷ್ಟೆಂದು ಕೇಳಿದ ಕೂಡಲೇ ನಮ್ಮ ಕಣ್ಣ ಮುಂದೆ ಬರುವುದು ಆತನ ಖಾತೆಯಲ್ಲಿ ಬ್ಯಾಂಕಿನಲ್ಲಿ ಎಷ್ಟು ಹಣವಿದೆ, ಎಷ್ಟು ಮನೆ ಗಳನ್ನು ಹೊಂದಿರುವನು ಎಂಬುದು. ಅರ್ಥಶಾಸ್ತ್ರದಲ್ಲಿ 'ಬಂಡವಾಳ'ವೆಂದರೆ ಹಣ ಮಾತ್ರವಲ್ಲ. ಉತ್ಪಾದನೆಗಾಗಿ ಉಪಯೋಗಿಸುವ ಎಲ್ಲ ವಸ್ತುಗಳನ್ನು ಕೂಡಿಸಿ ಬಂಡ ವಾಳ ಎಂದು ಕರೆಯುವೆವು. ಉದಾಹರಣೆಗೆ ಯಂತ್ರೋಪಕರಣಗಳು, ನೇಗಿಲುಗಳು, ಎತ್ತುಗಳು, ಬಿತ್ತನೆಯ ಬೀಜಗಳು, ಗೊಬ್ಬರಗಳು, ಬಂಡವಾಳ ಎನಿಸಿಕೊಳ್ಳುತ್ತವೆ. ಈ ವಸ್ತುಗಳು ಮಾನವನಿಂದ ನಿರ್ಮಿತವಾದವು ಮತ್ತು ಇವನ್ನು ಸಂಪತ್ತಿನ ಉತ್ಪಾದನೆ ಯಲ್ಲಿ ಮಾತ್ರ ಉಪಯೋಗಿಸುತ್ತೇವೆ. ಈ ವಸ್ತುಗಳು ಪದಾರ್ಥಗಳ ಉತ್ಪಾದನೆಗೆ ಕಾರಣವಾಗುತ್ತವೆ. ದರ್ಜಿಗೆ ಹೊಲಿಗೆ ಯಂತ್ರ, ಬಟ್ಟೆಗಳನ್ನು ಹೊಲಿದು ಸಿದ್ಧಪಡಿಸಲು ನೆರವಾಗುವುದರಿಂದ ಅದು ಅವನಿಗೆ ಬಂಡವಾಳವಾಗುತ್ತದೆ. ಸಿದ್ಧಪಡಿಸಿದ ವಸ್ತುಗಳನ್ನು ಕೊಟ್ಟು ಹಣ ಪಡೆಯುತ್ತಾನೆ. ಇದರಿಂದ ಹಣಗಳಿಸಲು ನೆರವಾಯಿತು. ಅಂದರೆ ಮಾನವನಿಂದ ನಿರ್ಮಿತವಾಗಿ ಉತ್ಪಾದನೆಯಲ್ಲಿ ಬಳಸಲ್ಪಡುವ ಎಲ್ಲ ಸಂಪತ್ತನ್ನೂ ಬಂಡವಾಳ ಎಂಬುದಾಗಿ ಅರ್ಥಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿರುವರು. ಭೂಮಿ ಮತ್ತು ಶ್ರಮಗಳ ಸಹಕಾರದ ಫಲವೇ ಬಂಡವಾಳ. ಭೂಮಿಯ ಶ್ರಮದ ಪ್ರಯತ್ನದ ಫಲದಿಂದ ಲಭಿಸಿದ ಎಲ್ಲ ಉತ್ಪನ್ನವನ್ನೂ ಅಥವಾ ಅದರ ಒಂದು ಭಾಗ ವನ್ನು ಉತ್ಪಾದನಾ ಕಾರ್ಯದಲ್ಲಿ ವಿನಿಯೋಗಿಸಿದ್ದೇ ಬಂಡವಾಳ. ಸಂಪತ್ತನ್ನು ಉತ್ಪಾದನೆಯಲ್ಲಿ ಬಳಸಿದಾಗ ಮಾತ್ರ ಅದು ಬಂಡವಾಳ ಎಂದು ಕರೆಸಿಕೊಳ್ಳುತ್ತದೆ. ಉದಾಹರಣೆಗೆ ರೈತನು ನೇಗಿಲನ್ನು ಬೇಸಾಯದಲ್ಲಿ ಬಳಸದೆ ಹಾಗೆಯೇ ಇಟ್ಟಿದ್ದಲ್ಲಿ, ಅದು ಅವನ ಸಂಪತ್ತು ಎನಿಸಿಕೊಳ್ಳುತ್ತದೆ. ಆದರೆ ಅದೇ ನೇಗಿಲನ್ನು ಅವನು ಬೇಸಾಯದಲ್ಲಿ ಬಳಸಿದರೆ, ಅದು ಅವನ ಬಂಡವಾಳವಾಗುತ್ತದೆ. ಹೀಗೆ ಎಲ್ಲ ಬಂಡವಾಳ ಸಂಪತ್ತು ಎನಿಸಿಕೊಳ್ಳುತ್ತದೆ. ಆದರೆ ಎಲ್ಲ ಸಂಪತ್ತೂ ಬಂಡವಾಳ ವಾಗುವುದಿಲ್ಲ. ಹಣ ಬಂಡವಾಳವೇ ಆದರೂ ಅದನ್ನು ಉತ್ಪಾದನೆಯಲ್ಲಿ ನೇರವಾಗಿ ಬಳಸುವುದಿಲ್ಲ.

ಭೂಮಿ ಹಾಗೂ ಶ್ರಮದಿಂದ ಬಂಡವಾಳ ಬೇರೆಯಾಗಿದೆ. ಭೂಮಿಯು ನಿಸರ್ಗ ನಿರ್ಮಿತವಾದರೆ ಬಂಡವಾಳವು ಮಾನವನಿರ್ಮಿತ ಸಾಧನ.

ಬಂಡವಾಳದ ವರ್ಗೀಕರಣ : ಬಂಡವಾಳವನ್ನು (1) ಸ್ಥಿರ ಬಂಡವಾಳ ಮತ್ತು ಚರ ಬಂಡವಾಳ (2) ಬಳಕೆದಾರರ ಮತ್ತು ಉತ್ಪಾದಕರ ಬಂಡವಾಳ,

(3) ಏಕೋದ್ದೇಶ ಮತ್ತು ವಿವಿಧೋದ್ದೇಶ ಬಂಡವಾಳ ಹಾಗೂ (4) ಹಣರೂಪದ ಮತ್ತು ವಾಸ್ತವಿಕ ಬಂಡವಾಳ ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು.

(1) **ಸ್ಥಿರ ಬಂಡವಾಳ ಮತ್ತು ಚರ ಬಂಡವಾಳ :** ಸ್ಥಿರ ಬಂಡವಾಳವೆಂದರೆ ದೀರ್ಘಕಾಲ ಬಾಳಿಕೆ ಬರುವ ಹಾಗೂ ಉತ್ಪಾದನೆಯಲ್ಲಿ ಪದೇ ಪದೇ ಬಳಸಲು ಬರುವಂತಹ ವಸ್ತುಗಳು. ಇವುಗಳನ್ನು ಉತ್ಪಾದನೆಯಲ್ಲಿ ಅವು ಹಾಳಾಗುವವರೆಗೂ ಪದೇ ಪದೇ ಉಪಯೋಗಿಸಬಹುದು. ಯಂತ್ರೋಪಕರಣಗಳನ್ನು ಸ್ಥಿರ ಬಂಡವಾಳ ಎನ್ನಬಹುದು. ಹೊಲಿಗೆ ಯಂತ್ರವನ್ನು ಬಟ್ಟೆ ಹೊಲಿಯಲು ದೀರ್ಘಕಾಲ ಬಳಸಬಹುದು. ಸ್ಥಿರ ಬಂಡವಾಳ ದೀರ್ಘಾಯುಷ್ಯವನ್ನು ಹೊಂದಿರುತ್ತದೆ. ಟ್ರಾಕ್ಟರ್ ದೀರ್ಘಕಾಲ ಬಾಳಿಕೆ ಬರುತ್ತದೆ. ಸ್ಥಿರ ಬಂಡವಾಳದಿಂದ ಪ್ರತಿಫಲ ಬರುವುದು ತಡವಾಗುತ್ತದೆ. ಚರ ಬಂಡವಾಳವನ್ನು ಕಾರ್ಯವಾಹಕ ಬಂಡವಾಳವೆಂದೂ ಕರೆಯುತ್ತಾರೆ. ಈ ಬಗೆಯ ಬಂಡವಾಳವನ್ನು ಪುನಃ ಪುನಃ ಉಪಯೋಗಿಸಲು ಸಾಧ್ಯವಾಗುವುದಿಲ್ಲ. ಒಂದು ಸಲ ಅವುಗಳನ್ನು ಬಳಸಿದ ಮೇಲೆ ಮತ್ತೆ ಅವು ಉಪಯೋಗಕ್ಕೆ ಬರದಂತಾಗುತ್ತವೆ. ಕಚ್ಚಾ ಹತ್ತಿಯನ್ನು ಉಪಯೋಗಿಸಿ ಬಟ್ಟೆಯನ್ನು ತಯಾರಿಸಿದರೆ ಮತ್ತೆ ಅದು ಉಪಯೋಗವಾಗುವುದಿಲ್ಲ. ಹತ್ತಿಯ ಬಟ್ಟೆಯ ಗಿರಣಿಗಳಲ್ಲಿ ಯಂತ್ರಗಳು ಸ್ಥಿರ ಬಂಡವಾಳವಾದರೆ ಹತ್ತಿಯು ಚರ ಬಂಡವಾಳ. ಚರ ಬಂಡವಾಳ ದೀರ್ಘಾಯುಷ್ಯವನ್ನು ಪಡೆದಿರುವುದಿಲ್ಲ. ಅಂದರೆ ಅವು ಹೆಚ್ಚು ಬಾಳಿಕೆ ಬರುವುದಿಲ್ಲ. ಒಮ್ಮೆ ಮಾತ್ರ ಬಳಸಲು ಬರುವಂಥದ್ದು. ಚರ ಬಂಡವಾಳದಿಂದ ಪ್ರತಿಫಲವು ಕೂಡಲೇ ಬರುತ್ತದೆ.

(2) **ಉತ್ಪಾದಕರ ಮತ್ತು ಬಳಕೆದಾರರ ಬಂಡವಾಳ :** ಉತ್ಪಾದಕರ ಬಂಡವಾಳವೆಂದರೆ ವಸ್ತುಗಳನ್ನು ಉತ್ಪಾದಿಸಲು ಉತ್ಪಾದಕರು ಬಳಸುವ ಬಂಡವಾಳ. ಉದಾಹರಣೆಗೆ ವೈದ್ಯರು, ಕಾರನ್ನು ಸ್ವಂತಕ್ಕಾಗಿ, ಸಿನಿಮಾಕ್ಕೆ ಹೋಗಿಬರಲು ಬಳಸಿದರೆ ಅದು ಉತ್ಪಾದನೆಯ ಬಂಡವಾಳವಾಗುವುದಿಲ್ಲ. ಅದೇ ಕಾರನ್ನು ಒಂದು ಉದ್ಯೋಗಕ್ಕಾಗಿ ಬಳಸಿದಾಗ ಅದು ಬಂಡವಾಳವಾಗುತ್ತದೆ. ಆದ್ದರಿಂದ ಸ್ವಂತಕ್ಕಾಗಿ ಬಳಸಲ್ಪಡುವ ವಸ್ತುಗಳು ಬಂಡವಾಳವಾಗುವುದಿಲ್ಲ. ಅವು ಬಳಕೆಯ ವಸ್ತುಗಳಾಗಿರುತ್ತವೆ. ಸ್ವಂತ ಮನೆಯಲ್ಲಿ ವಾಸ ಮಾಡಿದರೆ ಅದು ಬಳಕೆಯ ವಸ್ತುವಾಗುತ್ತದೆ. ಆದರೆ, ಆ ಮನೆಯನ್ನು ಇತರರಿಗೆ ಬಾಡಿಗೆಗೆ ಕೊಟ್ಟು ಬಾಡಿಗೆ ಪಡೆದರೆ ಆಗ ಮನೆಯು ಉತ್ಪಾದಕರ ವಸ್ತುವಾಗುವುದು. ಯಂತ್ರಗಳು, ಕಚ್ಚಾ ಮಾಲುಗಳು, ಉಪಕರಣಗಳು–ಇವು ಉತ್ಪಾದನಾ ಬಂಡವಾಳ ಎನಿಸಿಕೊಳ್ಳುವುವು.

ಬಳಕೆದಾರರ ಬಂಡವಾಳವೆಂದರೆ ಉಪಭೋಗದ ವಸ್ತುಗಳು. ಆಹಾರ, ಬಟ್ಟೆ, ಮನೆ, ಅವು ನಮ್ಮ ಬಯಕೆಗಳನ್ನು ತೃಪ್ತಿಪಡಿಸುತ್ತವೆ. ಅವುಗಳನ್ನು ಉತ್ಪಾದನೆಯಲ್ಲಿ

ನೇರವಾಗಿ ಬಳಸುವುದಿಲ್ಲ. ಅವು ಅಪ್ರತ್ಯಕ್ಷವಾಗಿ ಉತ್ಪಾದನೆಗೆ ನೆರವಾಗುತ್ತವೆ. ವಸ್ತುಗಳ ಉತ್ಪಾದನೆಯಲ್ಲಿ ಅತಿ ದೊಡ್ಡ ಪಾತ್ರವಹಿಸುವ ಕಾರ್ಮಿಕರಿಗೆ ಈ ವಸ್ತುಗಳು ಅಗತ್ಯ.

(3) **ಏಕೋದ್ದೇಶ ಹಾಗೂ ವಿವಿಧೋದ್ದೇಶ ಬಂಡವಾಳ :** ಬಂಡವಾಳವನ್ನು ಏಕೋದ್ದೇಶ ಬಂಡವಾಳ ಹಾಗೂ ವಿವಿಧೋದ್ದೇಶ ಬಂಡವಾಳವೆಂಬುದಾಗಿ **ವಿಂಗಡಣೆ** ಮಾಡಬಹುದು. ಏಕೋದ್ದೇಶ ಬಂಡವಾಳವೆಂದರೆ ಒಂದೇ ಉದ್ದೇಶಕ್ಕಾಗಿ ತೊಡಗಿಸಿದ ಬಂಡವಾಳ. ಹೊಲಿಗೆ ಯಂತ್ರವನ್ನು 500 ರೂಪಾಯಿಗಳಿಗೆ ಕೊಂಡರೆ ಅದರಿಂದ ಕೇವಲ ಬಟ್ಟೆಗಳನ್ನು ಹೊಲಿದುಕೊಳ್ಳಬಹುದು. ಅದನ್ನು ಇತರ ಕೆಲಸಗಳಿಗೆ ಬಳಸಲಾಗುವುದಿಲ್ಲ. ನೇಗಿಲನ್ನು ಹೊಲ ಉಳಲು ಮಾತ್ರ ಬಳಸಬಹುದು. ಈ ರೀತಿ ಯಾವುದಾದರೂ ಒಂದು ಕೆಲಸಕ್ಕೆ ಮಾತ್ರ ಬಳಸಲು ಕೊಂಡ ವಸ್ತುವಿಗೆ ಏಕೋದ್ದೇಶ ಬಂಡವಾಳವೆನ್ನಬಹುದು.

ವಿವಿಧೋದ್ದೇಶ ಬಂಡವಾಳವೆಂದರೆ ನಾವು ತೊಡಗಿಸಿದ ಬಂಡವಾಳದಿಂದ ಅನೇಕ ಉದ್ದೇಶಗಳನ್ನು ಈಡೇರಿಸಿಕೊಳ್ಳಬಹುದು. ಉದಾಹರಣೆ, ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು, ನದಿಗಳಿಗೆ ಅಣೆಕಟ್ಟನ್ನು ಕಟ್ಟಲು ಹೂಡಿದ ಬಂಡವಾಳ. ಇಂತಹ ಬಂಡವಾಳದಿಂದ ಅನೇಕ ಉದ್ದೇಶಗಳನ್ನು ಪಡೆಯಬಹುದು – ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು, ಜಮೀನುಗಳಿಗೆ ನೀರನ್ನು ಹಾಯಿಸುವುದು, ಪ್ರವಾಹಗಳನ್ನು ತಡೆಗಟ್ಟುವುದು ಇತ್ಯಾದಿ.

(4) **ಹಣದ ರೂಪ ಹಾಗೂ ವಾಸ್ತವಿಕ ಬಂಡವಾಳ :** ಉತ್ಪಾದನೆಗಾಗಿ ಉಪಯೋಗಿಸಲು ನೇಗಿಲು, ಬಿತ್ತನೆ ಬೀಜ, ಗೊಬ್ಬರ ಇತ್ಯಾದಿ ಬೇಕು. ಇವುಗಳನ್ನು ಕೊಳ್ಳಲು ಹಣಬೇಕು. ಅನಂತರ ಅವುಗಳಿಂದ ಬೆಳೆ ಬೆಳೆದಾಗ ಧಾನ್ಯಗಳನ್ನು ಪಡೆಯಬಹುದು. ಆದ್ದರಿಂದ ಕೃಷಿಯ ಉಪಕರಣಗಳು, ಬೀಜಗಳು, ಗೊಬ್ಬರ ಇವುಗಳನ್ನು ವಾಸ್ತವಿಕ ಬಂಡವಾಳವೆಂದು ಕರೆಯುತ್ತಾರೆ. ಹಣವೂ ಬಂಡವಾಳವೇ, ಏಕೆಂದರೆ ಹಣದಿಂದ ಉತ್ಪಾದನೆಗೆ ನೆರವಾಗುವ ವಸ್ತುಗಳನ್ನು ಕೊಳ್ಳಬಹುದು. ಒಟ್ಟಿನಲ್ಲಿ ಹೇಳುವುದಾದರೆ, ವಸ್ತುಗಳನ್ನು ವಾಸ್ತವಿಕ ಬಂಡವಾಳವೆಂದೂ, ಹಣವನ್ನು ಹಣದ ರೂಪದ ಬಂಡವಾಳವೆಂದೂ ಕರೆಯಬಹುದು.

ಬಂಡವಾಳ ಸಂಗ್ರಹಣೆ : ಬಂಡವಾಳ ಮೂಲ ಉತ್ಪಾದನೆಯ ಅಂಶವಲ್ಲ. ಭೂಮಿ ಹಾಗೂ ಶ್ರಮಗಳಿಂದ ಬಂಡವಾಳ ಉತ್ಪಾದನೆಯಾದ ಅಂಶ. ಅಂದರೆ ಶ್ರಮ ಹಾಗೂ ಭೂಮಿಯ ಸಂಯುಕ್ತವೇ ಉತ್ಪಾದನೆ. ಇದು ಮನುಷ್ಯ ಹಾಗೂ ನಿಸರ್ಗದ ಸಂಯುಕ್ತ ಫಲ. ಬಂಡವಾಳವನ್ನು ಶೇಖರಿಸುವ ಸಾಧನ ಉಳಿತಾಯ ಹಾಗೂ ಉಳಿತಾಯ ಮಾಡಿದುದನ್ನು ಪುನಃ ಉತ್ಪಾದನೆಯಲ್ಲಿ ತೊಡಗಿಸುವುದು. ಉಳಿತಾಯದಿಂದ

ಮಾತ್ರ ಬಂಡವಾಳ ನಿರ್ಮಾಣವಾಗಲು ಸಾಧ್ಯ. ಆದರೆ ಉಳಿತಾಯ ಸುಪ್ತಾವಸ್ಥೆಯಲ್ಲಿರದೆ ಉತ್ಪಾದನೆಗೆ ಸಹಾಯಕವಾಗುವಂತಿರಬೇಕು. ಆಗಲೇ ಬಂಡವಾಳ ನಿರ್ಮಾಣ ಸಾಧ್ಯ. ಆದರೆ ಉತ್ಪಾದನೆಗೊಂಡ ಎಲ್ಲ ವಸ್ತುಗಳನ್ನು ಉಪಭೋಗ ಮಾಡಿದರೆ ಉಳಿತಾಯವಾಗುವುದಿಲ್ಲ. ಉಳಿತಾಯವನ್ನು ಮಾಡದೆ ಬಂಡವಾಳದ ಶೇಖರಣೆಯಾಗಲಾರದು. ಅಂದರೆ ಜನರು ತಮ್ಮ ಆದಾಯವೆಲ್ಲವನ್ನೂ ಉಪಭೋಗದ ವಸ್ತುಗಳಾಗಿ ವೆಚ್ಚಮಾಡಿದರೆ ಬಂಡವಾಳದ ಶೇಖರಣೆಯಾಗುವುದಿಲ್ಲ. ಎಲ್ಲ ರಾಷ್ಟ್ರಗಳು ಯಾವ ರೀತಿ ಬಂಡವಾಳವನ್ನು ಸಂಗ್ರಹಣ ಮಾಡುವುವು ಎಂಬುದು ಬಹಳ ಮುಖ್ಯ. ರಾಷ್ಟ್ರಗಳ ಬಡತನ, ಶ್ರೀಮಂತಿಕೆಗಳು ಆ ರಾಷ್ಟ್ರಗಳಲ್ಲಿ ಉತ್ಪಾದನೆಯಾಗುವ ವಸ್ತುಗಳ ಗಾತ್ರವನ್ನು ಅವಲಂಬಿಸಿರುತ್ತವೆ. ಬಂಡವಾಳ ಹೆಚ್ಚಾಗಿದ್ದರೆ ಹೆಚ್ಚು ವಸ್ತುಗಳನ್ನು ಉತ್ಪಾದಿಸಬಹುದು.

ಬಂಡವಾಳವು ಮನುಷ್ಯನ ಸ್ವಪ್ರಯತ್ನದ ಫಲ. ಇದು ದೇವರು ಕೊಟ್ಟ ಕೊಡುಗೆಯೂ ಅಲ್ಲ, ವರವೂ ಅಲ್ಲ. ಒಂದು ರಾಷ್ಟ್ರದಲ್ಲಿ ವಾಸಿಸುವ ಜನಗಳು ಕಡಮೆ ವೆಚ್ಚ ಮಾಡಿ ಉಳಿಸಿದ ಹಣವೇ ಬಂಡವಾಳ. ಜನಗಳ ಸರಾಸರಿ ಆದಾಯ — ಖರ್ಚು = ಉಳಿತಾಯ. ಜನಗಳ ವರಮಾನ ಕಡಮೆ ಇದ್ದರೆ, ಖರ್ಚು ಹೆಚ್ಚಿದ್ದರೆ ಉಳಿತಾಯವಾಗುವುದಿಲ್ಲ. ಜನರ ಆದಾಯ ಜಾಸ್ತಿ ಇದ್ದು, ವೆಚ್ಚ ಕಡಮೆ ಇದ್ದರೆ ಉಳಿತಾಯ ಹೆಚ್ಚಾಗಿರುತ್ತದೆ. ಆಗ ಬಂಡವಾಳ ಸಹ ಹೆಚ್ಚಾಗಿರುತ್ತದೆ. ಹಿಂದುಳಿದ ರಾಷ್ಟ್ರಗಳಲ್ಲಿ ಆದಾಯ ಕಡಮೆ ಇದ್ದು ವೆಚ್ಚವು ಹೆಚ್ಚಿರುವುದರಿಂದ ಉಳಿತಾಯ ಬಹಳ ಕಡಮೆ ಇರುತ್ತದೆ. ಭಾರತದಲ್ಲಿ ಜನರ ಆದಾಯ ಕಡಮೆಯಾದುದರಿಂದ ಅವರ ಉಳಿತಾಯದ ಶಕ್ತಿ ಕಡಮೆಯಾಗಿರುತ್ತದೆ. ಮೇಲಾಗಿ ಬಂಡವಾಳ ಕಡಮೆ, ಇದರಂತೆ ಉತ್ಪಾದನೆ ಕಡಮೆಯಾಗಿದೆ. ಜನಸಂಖ್ಯೆ ಹೆಚ್ಚಳದ ಫಲವಾಗಿ ಬಡತನ ಎಲ್ಲೆಲ್ಲೂ ತಾಂಡವವಾಡುತ್ತಿದೆ. ಉಳಿತಾಯವಂತೂ ಬಹಳ ಕಡಮೆ. ಉಳಿತಾಯವಿಲ್ಲದೆ ಬಂಡವಾಳದ ಶೇಖರಣೆಯಾಗುವುದಿಲ್ಲ. ಉಳಿತಾಯವೆಲ್ಲ ಬಂಡವಾಳವಾಗಲು ಸಾಧ್ಯವಿಲ್ಲ. ಏಕೆಂದರೆ ಉಳಿತಾಯ ಮಾಡಿದ ಹಣವು ಉತ್ಪಾದನೆಯಲ್ಲಿ ತೊಡಗಿದಾಗ ಮಾತ್ರ ಅದು ಬಂಡವಾಳವಾಗುತ್ತದೆ. ಉಳಿತಾಯಗಳನ್ನು ಸಂಗ್ರಹಿಸಿ, ಆ ರೀತಿ ಸಂಗ್ರಹಿಸಿದ ಹಣವನ್ನು ಉತ್ಪಾದನೆಯಲ್ಲಿ ತೊಡಗಿಸುವವರಿಗೆ ಒದಗಿಸಬೇಕು. ಈ ಕೆಲಸವನ್ನು ಬ್ಯಾಂಕುಗಳು ನಿರ್ವಹಿಸಬೇಕು. ಈ ರೀತಿ ಮಾಡುವುದರಿಂದ ಬಂಡವಾಳ ಬೆಳೆಯುತ್ತದೆ. ಆದರೆ ಬ್ಯಾಂಕುಗಳು ಲಾಭಕ್ಕಾಗಿ ದುಡಿಯುವ ಸಂಸ್ಥೆಗಳು. ಬಂಡವಾಳದ ಬೆಳವಣಿಗೆಗೆ ಉಳಿತಾಯವು ಒಂದು ಮುಖ್ಯ ಸಾಧನ. ಕೆಲವರು ತಮ್ಮ ಆದಾಯದ ಸ್ವಲ್ಪ ಭಾಗವನ್ನು ಉಳಿತಾಯ ಮಾಡುತ್ತಾರೆ. ಉಳಿತಾಯವೇ ಆಪದ್ಧನ. ಅವರು ಉಳಿಸುವ ಹಣ ಅವರು ಉಳಿಸುವ ಸಾಮರ್ಥ್ಯ ಮತ್ತು ಇಚ್ಛೆಗಳನ್ನು ಅವಲಂಬಿಸಿರುತ್ತದೆ. ಬಂಡವಾಳ ಸಂಗ್ರಹಣೆ ಉಳಿತಾಯ ಮಾಡುವ ಶಕ್ತಿ ಹಾಗೂ ಉಳಿತಾಯ ಮಾಡುವ ಮನಸ್ಸಿನ ಇಚ್ಛೆಗಳನ್ನು ಅವಲಂಬಿಸಿರುತ್ತದೆ.

ಉಳಿತಾಯ ಮಾಡುವ ಶಕ್ತಿ : ಬಂಡವಾಳ ಬೆಳೆಯಬೇಕಾದರೆ ಉಳಿತಾಯವೇ ಏಕೈಕ ಮಾರ್ಗ. ಆದರಂತೆ ಒಂದು ರಾಷ್ಟ್ರದ ಬಂಡವಾಳ ಸಂಗ್ರಹಣೆ ಜನರ ಉಳಿತಾಯದ ಶಕ್ತಿಯನ್ನು ಅವಲಂಬಿಸಿರುತ್ತದೆ. ಉತ್ಪಾದನೆ ಉಪಭೋಗಕ್ಕಿಂತಲೂ ಹೆಚ್ಚಾಗಿದ್ದರೆ ಉಳಿತಾಯ ಮಾಡುವ ಶಕ್ತಿಯು ಇದೆ ಎಂದು ಅರ್ಥ. ಅಂದರೆ ಉಳಿತಾಯ ಮಾಡುವ ಶಕ್ತಿ ಇರಬೇಕಾದರೆ ಹೆಚ್ಚು ಉತ್ಪಾದನೆ ಇರಬೇಕು ಅಥವಾ ಕಡಮೆ ಉಪಭೋಗವಿರಬೇಕು. ಜನರ ವರಮಾನ ಹೆಚ್ಚಾಗಿದ್ದರೆ ಅವರ ಉಳಿತಾಯದ ಶಕ್ತಿಯೂ ಹೆಚ್ಚಾಗಿರುತ್ತದೆ. ಜನರ ವರಮಾನ ಕಡಮೆಯಾಗಿದ್ದರೆ ಅವರ ಉಳಿತಾಯದ ಶಕ್ತಿ ಕಡಮೆಯಾಗಿರುತ್ತದೆ. ಬಡವರಲ್ಲಿ ಉಳಿತಾಯದ ಶಕ್ತಿ ಬಹಳ ಕಡಮೆ. ಉದಾಹರಣೆಗೆ ಅಮೆರಿಕಾ ಹಾಗೂ ಭಾರತ ದೇಶಗಳನ್ನು ತೆಗೆದುಕೊಳ್ಳೋಣ. ಅಮೆರಿಕಾ ದೇಶದಲ್ಲಿ ಜನರ ಆದಾಯ ಹೆಚ್ಚಿಗೆ ಇರುವುದರಿಂದ ಅಲ್ಲಿ ಹೆಚ್ಚು ಬಂಡವಾಳ ಶೇಖರಣೆಯಾಗುತ್ತದೆ. ಆದ್ದರಿಂದ ಅಲ್ಲಿ ಹೆಚ್ಚು ಬಂಡವಾಳವಿದ್ದು ಅದರಿಂದ ಉತ್ಪಾದನಾ ಶಕ್ತಿ ಅಧಿಕವಾಗಿದೆ. ಭಾರತದಲ್ಲಿ ಜನರ ಆದಾಯ ಕಡಮೆ ; ಉಳಿತಾಯವೂ ಕಡಮೆ. ಇದರಿಂದ ಬಂಡವಾಳ ಶೇಖರಣೆ ಕಡಮೆ. ಕಡಮೆ ಬಂಡವಾಳ ಕಡಮೆ ಉತ್ಪನ್ನಕ್ಕೆ ಎಡೆಮಾಡಿಕೊಡುತ್ತದೆ. ಹೀಗೆ ಭಾರತ ಬಡತನ-ಕಡಮೆ ಆದಾಯ-ಕಡಮೆ ಉಳಿತಾಯ-ಕಡಮೆ ಆದಾಯ-ಬಡತನ ಈ ರೀತಿಯ ವಿಷ ಚಕ್ರದಲ್ಲಿ ಸಿಕ್ಕುಬಿದ್ದಿದೆ.

ಉಳಿತಾಯ ಮಾಡುವ ಮನಸ್ಸು : ಜನರಲ್ಲಿ ಉಳಿತಾಯ ಮಾಡುವ ಶಕ್ತಿ ಇದ್ದರೂ ಉಳಿತಾಯ ಮಾಡುವ ಮನಸ್ಸಿರುವುದಿಲ್ಲ. ಇಂತಹ ಪರಿಸ್ಥಿತಿಗಳಲ್ಲಿ ಸಾಕಷ್ಟು ಬಂಡವಾಳ ಶೇಖರಣೆಯಾಗುವುದಿಲ್ಲ. ಆದಕಾರಣ ಉಳಿತಾಯ ಮಾಡುವ ಶಕ್ತಿಯ ಜೊತೆಗೆ ಉಳಿತಾಯ ಮಾಡುವ ಮನಸ್ಸಿರಬೇಕು. ಅಂದರೆ ಉಳಿತಾಯ ಮಾಡುವ ಇಚ್ಛೆಯು ವ್ಯಕ್ತಿಯ ಮಾನಸಿಕ ಸ್ಥಿತಿಯನ್ನವಲಂಬಿಸಿರುತ್ತದೆ. ಆದರೆ ಕೆಲವು ವೇಳೆ ಮನುಷ್ಯನ ಉಳಿತಾಯದ ಇಚ್ಛೆ ಕೆಳಗಿನ ಕೆಲವು ಅಂಶಗಳನ್ನು ಅವಲಂಬಿಸಿರುವುದು :

(i) ಉಳಿತಾಯ ಕೆಲವರಲ್ಲಿ ಸ್ವಯಂ ಪ್ರೇರಣೆಯಿಂದ ಆಗುತ್ತದೆ; ಮತ್ತೆ ಕೆಲವರು ಹೆಚ್ಚು ಬಡ್ಡಿಯ ಆಸೆಗಾಗಿ ಉಳಿತಾಯ ಮಾಡುತ್ತಾರೆ. ಉಳಿತಾಯದ ಮಟ್ಟವನ್ನು ನಿರ್ಧರಿಸುವಾಗ ಬಡ್ಡಿಯ ದರ ಬಹಳ ಮುಖ್ಯವಾದುದು. ಬಡ್ಡಿಯ ದರ ಹೆಚ್ಚಾಗಿದ್ದರೆ ಹೆಚ್ಚು ಹಣವನ್ನು ಉಳಿತಾಯ ಮಾಡುವರು. ಬಡ್ಡಿಯ ದರ ಕಡಮೆ ಇದ್ದರೆ ಕಡಮೆ ಹಣವನ್ನು ಉಳಿತಾಯ ಮಾಡುತ್ತಾರೆ.

(ii) ಕುಟುಂಬದ ಮೇಲಿನ ವಿಶ್ವಾಸದಿಂದ ಉಳಿತಾಯವನ್ನು ಮಾಡುತ್ತಾರೆ. ತಂದೆ ಮಗಳ ಮದುವೆಗಾಗಿ, ಮಗನ ವಿದ್ಯಾಭ್ಯಾಸಕ್ಕಾಗಿ ಜೀವವಿಮಾ ಕಂಪನಿಗಳಲ್ಲಿ

ಹಣವನ್ನು ಉಳಿತಾಯ ಮಾಡುತ್ತಾನೆ. ಕುಟುಂಬದ ಮೇಲಿನ ಮಮತೆಯು ಉಳಿತಾಯಕ್ಕೆ ಒಂದು ಮುಖ್ಯವಾದ ಕಾರಣ.

(iii) ಇವುಗಳಲ್ಲದೆ ವೃದ್ಧಾಪ್ಯದಲ್ಲಿ ಆಡಚಣೆಯಾಗುವುದೆಂದು ಉಳಿತಾಯ ಮಾಡುತ್ತಾರೆ.

(iv) ಲಾಭದ ದೃಷ್ಟಿಯಿಂದಲೂ ಹಣವನ್ನು ಉಳಿತಾಯ ಮಾಡುತ್ತಾರೆ. ಶ್ರೀಮಂತರು, ಅಧಿಕ ವರಮಾನವನ್ನು ಹೊಂದಿರುವುದರಿಂದ ಹೆಚ್ಚು ಉಳಿತಾಯ ಮಾಡುತ್ತಾರೆ.

ಈ ಅಂಶಗಳು ಒಂದಿಲ್ಲೊಂದು ರೀತಿಯಲ್ಲಿ ಬಂಡವಾಳ ಸಂಗ್ರಹಿಸಲು ನೆರವಾಗುತ್ತವೆ. ಹಣದ ಬೆಲೆಯು ಸ್ಥಿರವಾಗಿದ್ದು, ಬ್ಯಾಂಕುಗಳು ಅಭಿವೃದ್ಧಿ ಹೊಂದಿ ಉದ್ಯಮಗಳಲ್ಲಿ ಹಣವನ್ನು ಹಾಕುವ ಅನುಕೂಲಗಳು ಹೆಚ್ಚಿದ್ದಲ್ಲಿ ಉಳಿತಾಯಕ್ಕೆ ಉತ್ತೇಜನ ದೊರೆಯುತ್ತದೆ. ಇದು ದಕ್ಷತೆಯಿಂದ ಕೂಡಿದ ಸರ್ಕಾರ, ದೇಶದಲ್ಲಿನ ಶಾಂತಿಯುತ ಸ್ಥಿತಿ, ಮುಂತಾದಂವುಗಳನ್ನು ಅವಲಂಬಿಸಿದೆ. ಯುದ್ಧ, ಸ್ವಾಭಾವಿಕ ವಿಪತ್ತುಗಳು, ಹಣದುಬ್ಬರ, ಅಧಿಕ ತೆರಿಗೆ ಇತ್ಯಾದಿಗಳು ಜನರಲ್ಲಿ ಹಣವನ್ನು ಉಳಿಸುವ ಆಸೆಯನ್ನು ಮೊಟಕುಗೊಳಿಸುತ್ತವೆ.

4. ಸಂಘಟನೆ

ಉತ್ಪಾದನೆಯಲ್ಲಿ ನೆರವಾಗುವ ನಾಲ್ಕನೆಯ ಉತ್ಪಾದನಾ ಅಂಶ ಸಂಘಟನೆ. ಉತ್ಪಾದನಾಂಶಗಳಾದ ಭೂಮಿ, ಶ್ರಮ ಹಾಗೂ ಬಂಡವಾಳಗಳೊಂದಿಗೆ ನಾಲ್ಕನೆಯ ಈ ಅಂಶವು ಹತ್ತೊಂಬತ್ತನೆಯ ಶತಮಾನದ ಅಂತ್ಯದ ವೇಳೆಗೆ ಸೇರಿಕೊಂಡಿತು. ವಿವಿಧ ಉತ್ಪಾದನಾಂಶಗಳನ್ನು ಒಂದು ಕಡೆ ಸೇರಿಸಿ, ಅವೆಲ್ಲವನ್ನೂ ಸೂಕ್ತ ಪ್ರಮಾಣದಲ್ಲಿ ಸಂಯೋಜಿಸುವುದಕ್ಕೆ 'ಸಂಘಟನೆ' ಎನ್ನುತ್ತಾರೆ. ಈ ಕಾರ್ಯವನ್ನು ನಿರ್ವಹಿಸುವ ವ್ಯಕ್ತಿಯನ್ನು **'ಸಂಘಟನಾಕಾರ'** ಎಂದು ಕರೆಯುತ್ತಾರೆ. ಆಧುನಿಕ ಯುಗದಲ್ಲಿ ಸಂಘಟನೆ ಇಲ್ಲದೆ ಯಾವ ವಸ್ತುವನ್ನೂ ಉತ್ಪಾದಿಸಲಾಗುವುದಿಲ್ಲ. ಇಂದು ಉತ್ಪಾದನೆಯ ಅಂಶಗಳಲ್ಲಿ ಸಂಘಟನೆಗೆ ಮಹತ್ವದ ಸ್ಥಾನ ದೊರೆತಿದೆ. ಆದರೆ ಹಿಂದಿನ ಕಾಲದಲ್ಲಿ ಕೆಲಸಗಾರರು ತಮ್ಮ ಉತ್ಪಾದನೆಗೆ ಬೇಕಾದ ಎಲ್ಲ ಸಲಕರಣೆಗಳನ್ನು ಹೊಂದಿರುತ್ತಿದ್ದರು. ಆಗ ಉದ್ದಿಮೆಗಳನ್ನು ಉದ್ದಿಮೆದಾರನೊಬ್ಬನೇ ನೋಡಿಕೊಳ್ಳುತ್ತಿದ್ದನು. ಭೂಮಿ, ಶ್ರಮ ಹಾಗೂ ಬಂಡವಾಳಗಳನ್ನು ಉದ್ದಿಮೆಯಲ್ಲಿ ತೊಡಗಿಸಿ ತಾನೇ ವಸ್ತುಗಳನ್ನು ಉತ್ಪಾದಿಸುತ್ತಿದ್ದನು. ಆ ರೀತಿ ಉತ್ಪಾದಿಸಿದ ವಸ್ತುಗಳ ಮಾರಾಟವನ್ನೂ ತಾನೇ ನಿರ್ವಹಿಸುತ್ತಿದ್ದನು. ಆಗ ಸಂಘಟನೆಯ ಅವಶ್ಯಕತೆ ಅಷ್ಟಾಗಿ ಕಂಡುಬರಲಿಲ್ಲ. ಮೇಲಾಗಿ ಆರ್ಥಿಕ ಜೀವನವು ಬಹಳ ಸರಳ ಹಾಗೂ ಸುಲಭವಾಗಿದ್ದಿತು.

ಆಧುನಿಕ ಯುಗದಲ್ಲಿ ಆರ್ಥಿಕ ಜೀವನವು ಸುಲಭವಾಗಿಲ್ಲ. ಬಹಳ ಕ್ಲಿಷ್ಟವಾಗಿದೆ. ಮನುಷ್ಯನ ಬಯಕೆಗಳು ಕಾಲ ಮುಂದುವರಿದಂತೆಲ್ಲ ಅವೂ ಸಹ ಹೆಚ್ಚುತ್ತಿವೆ. ಆದ್ದರಿಂದ ವಸ್ತುಗಳನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸಬೇಕು. ಇದಕ್ಕೆ ಬಂಡವಾಳ, ದೊಡ್ಡ ದೊಡ್ಡ ಕಾರ್ಖಾನೆಗಳು, ಯಂತ್ರಗಳು, ಸಾವಿರಾರು ಜನ ಶ್ರಮಿಕರು ಬೇಕು. ಭೂಮಿ ಒಂದು ಕಡೆ, ಕಾರ್ಮಿಕರು ಮತ್ತೊಂದು ಕಡೆ, ಬಂಡವಾಳ ಒಂದು ಕಡೆ ಚೆಲ್ಲಾಪಿಲ್ಲಿಯಾಗಿರುತ್ತವೆ. ಇವುಗಳೆಲ್ಲವನ್ನು ಸಂಘಟಿಸಿ, ಅಂದರೆ ಒಟ್ಟಿಗೆ ಕೂಡಿಸಿ' ಕೆಲಸವನ್ನು ಪ್ರಾರಂಭಿಸಿ, ವಸ್ತುಗಳನ್ನು ಉತ್ಪಾದಿಸಲು ನುರಿತ ಸಂಘಟಕರು ಅತ್ಯಾವಶ್ಯಕ. ಈ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುವ ವ್ಯಕ್ತಿಗಳು ಸಂಘಟನಾಕಾರರು.

ಸಂಘಟನಾಕಾರ ನಿರ್ವಹಿಸುವ ಕಾರ್ಯಗಳು : ಭೂಮಿ, ಶ್ರಮ ಮತ್ತು ಬಂಡವಾಳಗಳು ಸ್ವತಃ ಏನನ್ನೂ ಉತ್ಪಾದಿಸಲಾರವು. ಭೂಮಿಯಲ್ಲಿ ಕೃಷಿಯನ್ನು ಕೈಗೊಳ್ಳದಿದ್ದಲ್ಲಿ ಮಾನವನ ಬಯಕೆಗಳು ತೃಪ್ತಿಯಾಗುವುದಿಲ್ಲ. ಹಾಗೆಯೇ ಶ್ರಮವು ತನ್ನಷ್ಟಕ್ಕೆ ತಾನೇ ಏನನ್ನೂ ಉತ್ಪಾದಿಸಲಾರದು. ಭೂಮಿ ಮತ್ತು ಶ್ರಮ ಎರಡೂ ಸೇರಿದಾಗ ಮಾತ್ರ ಆಹಾರದ ಉತ್ಪಾದನೆಯಾಗಲು ಸಾಧ್ಯ. ಹಾಗೆಯೇ ಬಂಡವಾಳವನ್ನು ಇವುಗಳೊಂದಿಗೆ ಸೂಕ್ತ ರೀತಿಯಲ್ಲಿ ಬಳಸಬೇಕು. ಈ ರೀತಿ ಈ ಮೂರು ಅಂಶಗಳನ್ನು ಸಂಘಟಿಸಿ, ಉತ್ಪಾದನೆಗೆ ನೆರವಾಗುವ ರೀತಿಯಲ್ಲಿ ಮಾಡುವುದೇ ಸಂಘಟನಾಕಾರನ ಅತಿ ಮುಖ್ಯ ಕರ್ತವ್ಯ. ಅವನ ಸಾಹಸ, ನಿರ್ದೇಶನಗಳಿಲ್ಲದಿದ್ದರೆ, ಉತ್ಪಾದನೆ ಮುಂದುವರಿಯಲಾರದು. ಸಂಘಟನಾಕಾರನು ಉತ್ಪಾದನೆ ಅಂಶಗಳನ್ನು ಒಂದೆಡೆ ಸೇರಿಸಿ, ಉತ್ಪಾದನೆಯನ್ನು ಪ್ರಚೋದಿಸುತ್ತಾನೆ ಹಾಗೂ ಹೆಚ್ಚಿಸುತ್ತಾನೆ. ಒಂದು ಉದ್ದಿಮೆಯ ಉತ್ಪಾದನೆಯನ್ನು ವ್ಯವಸ್ಥೆಗೊಳಿಸುವ ಕೆಲಸ ಸಂಘಟನಾಕಾರನಿಗೆ ಸೇರಿರುತ್ತದೆ. ಸಂಘಟನಾಕಾರನು ಆಧುನಿಕ ಉತ್ಪಾದನಾ ಪದ್ಧತಿಯ ಕೇಂದ್ರಬಿಂದು ಇದ್ದಂತೆ ; ಸೇನಾದಳದ ನಾಯಕನಿದ್ದಂತೆ. ಏಕೆಂದರೆ ಉದ್ಯಮದ ವ್ಯವಹಾರ ನಿರ್ಧಾರಗಳ ಎಲ್ಲ ಹೊಣೆ ಇವನಿಗೇ ಸೇರಿದೆ. ಆದ್ದರಿಂದ ಸಂಘಟನಾಕಾರನಾದವನು ಉತ್ಪಾದನಾ ಕ್ಷೇತ್ರದಲ್ಲಿ ಸಾಕಷ್ಟು ಅನುಭವ, ಜ್ಞಾನಗಳನ್ನೂ, ತರಬೇತಿಯನ್ನೂ ಪಡೆದಿರುವ ಪ್ರಭಾವಶಾಲಿ ವ್ಯಕ್ತಿಯಾಗಿರಬೇಕು. ಉದ್ದಿಮೆಗಳ ಸೂತ್ರಧಾರನಾದ ಸಂಘಟನಾಕಾರನು ಹಲವು ಮುಖ್ಯವಾದ ಕಾರ್ಯಗಳನ್ನು ನಿರ್ವಹಿಸುವನು. ಅವುಗಳೆಂದರೆ :

(i) **ಉತ್ಪಾದನೆಯನ್ನು ಸಂಘಟಿಸುವಿಕೆ :** ವಸ್ತುಗಳನ್ನು ಉತ್ಪಾದಿಸುವುದರಲ್ಲಿ ಸಂಘಟನಾಕಾರನ ಕೆಲಸ ಅತಿ ದೊಡ್ಡದು ಹಾಗೂ ಕಷ್ಟವಾದದ್ದು. ಕೆಲವು ವೇಳೆ ಸಂಘಟನಾಕಾರರಲ್ಲಿ ಸಾಕಷ್ಟು ಬಂಡವಾಳವಿಲ್ಲದಿರಬಹುದು. ತಾನೇ ದುಡಿಯಬೇಕಾಗಬಹುದು. ಆದರೆ ಸಂಘಟನೆ ಮಾಡುವುದರಲ್ಲಿ ಸಾಕಷ್ಟು ಜಾಣತನವಿರುತ್ತವೆ. ಈತ ಮುಂದೆ ವಸ್ತುಗಳನ್ನು ಉತ್ಪಾದಿಸುವುದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತಾನೆ. ಎಲ್ಲ ವಸ್ತುಗಳನ್ನು ಉತ್ಪಾದಿಸಬೇಕು, ಅವುಗಳಿಗೆ ಬೇಕಾದ ಯಂತ್ರಗಳು, ಕಚ್ಚಾ

ಪದಾರ್ಥಗಳು ಎಲ್ಲಿ ಸಿಗುತ್ತವೆ, ಕಾರ್ಮಿಕರನ್ನು ಒಟ್ಟುಗೂಡಿಸುವುದು, ಎಷ್ಟು ವಸ್ತುಗಳನ್ನು ಉತ್ಪಾದಿಸಬೇಕು, ಎಲ್ಲಿ ಮಾರಾಟ ಮಾಡಬೇಕು ಇತ್ಯಾದಿ ಅಂಶಗಳನ್ನು ನಿರ್ಣಯಿಸುವವನು ಸಂಘಟನಾಕಾರ. ಅನಂತರ ಸಾರಿಗೆ ಸೌಲಭ್ಯಗಳು, ಮಾರುಕಟ್ಟೆಗೆ ಸಮೀಪದ ಸ್ಥಳ, ವಿದ್ಯುಚ್ಛಕ್ತಿ, ನೀರಿನ ಸೌಲಭ್ಯಗಳು ದೊರೆಯುವ ಸ್ಥಳಗಳನ್ನು ಆಯ್ದು ಸಂಘಟನಾಕಾರ ಕಾರ್ಖಾನೆಯನ್ನು ಸ್ಥಾಪಿಸಬೇಕಾಗುತ್ತದೆ. ಈ ಅಂಶಗಳು ಎಲ್ಲರಿಗೂ ಹೊಳೆಯುವುದಿಲ್ಲ.

(ii) **ಉತ್ಪಾದನೆ ಅಂಶಗಳನ್ನು ಸಂಘಟಿಸುವಿಕೆ :** ಯಾವ ಯಾವ ವಸ್ತುಗಳನ್ನು ಉತ್ಪಾದಿಸಬೇಕು ಎಂಬುದನ್ನು ನಿರ್ಣಯಿಸಿದ ನಂತರ ಆ ವಸ್ತುಗಳನ್ನು ಉತ್ಪಾದಿಸಲು ಕಾರ್ಖಾನೆಯನ್ನು ನಿರ್ಮಿಸಬೇಕಾಗುತ್ತದೆ. ಕಾರ್ಖಾನೆಗಳಿಗೆ ಯಂತ್ರಗಳು ಬೇಕು. ಯಂತ್ರಗಳನ್ನು ಕೊಳ್ಳಲು ಬಂಡವಾಳವನ್ನು ಒಟ್ಟುಗೂಡಿಸಬೇಕು. ಕಾರ್ಖಾನೆಗೆ ಭೂಮಿಯನ್ನು ಪಡೆಯಬೇಕು. ಕೂಲಿಕಾರರನ್ನು ಒಟ್ಟುಗೂಡಿಸಬೇಕು. ಕಚ್ಚಾ ಮೂಲುಗಳನ್ನು ಸಂಗ್ರಹಿಸಬೇಕು. ಈ ಎಲ್ಲ ಅಂಶಗಳನ್ನು ಸಂಘಟಿಸಿ ವಸ್ತುಗಳನ್ನು ಉತ್ಪಾದಿಸುವುದು, ಉತ್ಪಾದನೆಯು ಸರಳವಾಗಿ ನಡೆಯುವಂತೆ ನೋಡಿಕೊಳ್ಳುವುದು ಸಂಘಟನಾಕಾರನು ನಿರ್ವಹಿಸುವ ಎರಡನೆಯ ಕಾರ್ಯ.

(iii) **ಉತ್ಪಾದನಾ ವಸ್ತುಗಳ ಪ್ರಮಾಣ ನಿರ್ಧಾರ :** ಎಷ್ಟು ಪ್ರಮಾಣದಲ್ಲಿ ವಸ್ತುಗಳನ್ನು ಉತ್ಪಾದಿಸಬೇಕು ಎಂಬುದು ಉತ್ಪಾದನೆಯಲ್ಲಿ ಮುಖ್ಯ. ಆದರೆ ಈ ನಿರ್ಧಾರ ವಸ್ತುಗಳಿಗಿರುವ ಮಾರುಕಟ್ಟೆಯನ್ನು ಅವಲಂಬಿಸಿರುತ್ತದೆ. ಮಾರುಕಟ್ಟೆಯಲ್ಲಿಯ ಬೇಡಿಕೆ, ವಸ್ತುಗಳ ಗುಣಮಟ್ಟ ಬೇಡಿಕೆಯನ್ನು ಅವಲಂಬಿಸಿರುತ್ತದೆ. ಇದನ್ನು ತಿಳಿದು ಉತ್ಪಾದನೆಯ ಮಟ್ಟವನ್ನು ನಿರ್ಧರಿಸಬೇಕಾಗುತ್ತದೆ. ಇದು ಅನುಭವದಿಂದ ತಿಳಿಯುವ ಅಂಶ.

(iv) **ಮೇಲ್ವಿಚಾರಣೆ :** ಉತ್ಪಾದನಾಂಶಗಳನ್ನು ಸಂಘಟಿಸಿ, ಕಾರ್ಖಾನೆಯನ್ನು ಸ್ಥಾಪಿಸಿ, ಕೆಲಸ ಪ್ರಾರಂಭಿಸಿದ ಮೇಲೆ ಸಂಘಟನಾಕಾರನ ಹೊಣೆ ಮುಗಿಯುವಿಲ್ಲ. ಅವನು ನಿರ್ವಹಿಸಬೇಕಾದ ಮತ್ತೊಂದು ಮುಖ್ಯ ಕಾರ್ಯ ವಿವಿಧ ವಿಭಾಗಗಳು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿವೆಯೋ ಅಥವಾ ಇಲ್ಲವೇ ಎಂಬುದನ್ನು ನೋಡಿಕೊಳ್ಳುವುದು. ಪ್ರತಿಯೊಂದು ಇಲಾಖೆ ದಕ್ಷತೆಯಿಂದ ಕೆಲಸಮಾಡುವಂತೆ ಮೇಲ್ವಿಚಾರಣೆ ವಹಿಸಬೇಕು. ದಕ್ಷ ನಿರ್ದೇಶನ ಮತ್ತು ಮೇಲ್ವಿಚಾರಣೆಗಳಿಂದ ಮಾತ್ರ ಉತ್ಪಾದನೆಯು ಹೆಚ್ಚಿ ಲಾಭ ದೊರಕಲು ಸಾಧ್ಯ. ಈ ಗುಣಗಳು ಸಂಘಟನಾಕಾರನಲ್ಲಿ ಇರಬೇಕು.

(v) **ಹಂಚಿಕೆ :** ವಸ್ತುಗಳನ್ನು ಉತ್ಪಾದಿಸಿದ ನಂತರ ಆ ವಸ್ತುಗಳು ಮಾರಾಟವಾಗಲು ಮಾರುಕಟ್ಟೆಗಳಿಗೆ ತಲುಪಬೇಕು. ವಸ್ತುಗಳ ಬೆಲೆ ನಿರ್ಧರಿಸಬೇಕು.

ಯೋಗ್ಯ ರೀತಿಯಲ್ಲಿ ಅವುಗಳ ಹಂಚಿಕೆಯನ್ನು ಮಾಡಬೇಕು. ಈ ಕೆಲಸವನ್ನು ಸಂಘಟನಾಕಾರನೇ ಮಾಡುತ್ತಾನೆ.

(vi) **ಹಾನಿ ಮತ್ತು ಅನಿಶ್ಚಿತತೆಗಳ ಹೊಣೆಗಾರಿಕೆ** : ಉದ್ದಿಮೆಯಲ್ಲಿ ಉಂಟಾದ ಲಾಭ ಹಾಗೂ ಹಾನಿಗಳ ಸಂಪೂರ್ಣ ಹೊಣೆ ಸಂಘಟನಾಕಾರನದು.

ಸಂಘಟನಾಕಾರನು ಧೈರ್ಯಶಾಲಿಯಷ್ಟೇ ಅಲ್ಲ, ವ್ಯವಹಾರ ಚತುರನೂ ಆಗಿರಬೇಕು. ಸಂಘಟನಾಕಾರನು ತಾಂತ್ರಿಕಜ್ಞಾನ, ಮುಂದಾಲೋಚನೆ, ವಸ್ತುಗಳನ್ನು ಉತ್ಪಾದಿಸುವಲ್ಲಿ ನಿರ್ಣಯ ಕೈಗೊಳ್ಳುವಿಕೆ, ಮೇಲ್ವಿಚಾರಣೆ, ಹಾನಿ ಹಾಗೂ ಅನಿಶ್ಚಿತತೆಗಳ ಹೊಣೆಗಾರಿಕೆ ಅರಿವು, ಶ್ರಮಿಕರ ವಿಶ್ವಾಸ ಸಂಪಾದಿಸುವಿಕೆ ಈ ಕೆಲವು ಅರ್ಹತೆಗಳನ್ನು ಪಡೆದಿರಬೇಕಾಗುತ್ತದೆ. ಆಗ ಅವನು ಉದ್ದಿಮೆಯ ನಾಯಕನಾಗುತ್ತಾನೆ. ಆಗಾಗ್ಗೆ ಲಭ್ಯವಾಗುವ ಸಂಶೋಧನೆಗಳನ್ನು ಉತ್ಪಾದನೆಯಲ್ಲಿ ಅಳವಡಿಸಿಕೊಂಡು, ಉತ್ಪಾದನೆಯ ವೆಚ್ಚವನ್ನು ತಗ್ಗಿಸುವುದರೊಂದಿಗೆ ತನ್ನ ಲಾಭವನ್ನೂ ಹೆಚ್ಚಿಸಿಕೊಂಡು ಸಮರ್ಥ ಉತ್ಪಾದನೆಯನ್ನು ಕೈಗೊಳ್ಳುವವನೇ ನಿಜವಾದ ಸಂಘಟನಾಕಾರ.

ಪ್ರತಿಫಲದ ನಿಯಮಗಳು

ವಸ್ತುಗಳ ಉತ್ಪಾದನೆಯು ಕೆಲವೊಂದು ನಿಯಮಗಳಿಗೆ ಒಳಪಟ್ಟಿರುತ್ತದೆ. ಈ ನಿಯಮಗಳಲ್ಲಿ ಕೆಳಗಿನ ಮೂರು ಅಂಶಗಳು ಮುಖ್ಯ :

(1) ಏರಿಕೆಯ ಪ್ರತಿಫಲದ ನಿಯಮ

(2) ಇಳಿಕೆಯ ಪ್ರತಿಫಲದ ನಿಯಮ

(3) ಸ್ಥಿರವಾದ ಪ್ರತಿಫಲದ ನಿಯಮ

1. ಏರಿಕೆಯ ಪ್ರತಿಫಲದ ನಿಯಮ

ಸಂಘಟನಾಕಾರನು ವಸ್ತುವಿನ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ಶ್ರಮ ಮತ್ತು ಬಂಡವಾಳಗಳನ್ನು ಅಧಿಕ ಪ್ರಮಾಣದಲ್ಲಿ ಬಳಸಿದಂತೆ ಪ್ರತಿಫಲವೂ ಹೆಚ್ಚಾಗುತ್ತ ಹೋಗುತ್ತದೆ. ಅದರ ಜೊತೆಗೆ ಉತ್ಪಾದನೆಯ ಪ್ರಮಾಣವೂ ಏರುತ್ತ ಹೋಗುತ್ತದೆ. ಇದು **ಏರಿಕೆಯ ಪ್ರತಿಫಲದ ನಿಯಮ**. ಸರಾಸರಿ ಉತ್ಪಾದನಾ ವೆಚ್ಚಗಳು ಕಡಿಮೆಯಾಗುತ್ತ ಹೋಗುವುದರಿಂದ ಈ ನಿಯಮಕ್ಕೆ **ಇಳಿಮುಖ ವೆಚ್ಚದ ನಿಯಮ** ಎಂದು ಕರೆಯುವುದು ರೂಢಿಯಲ್ಲಿ ಇದೆ. ಒಂದು ಯೂನಿಟ್ ಶ್ರಮ ಮತ್ತು ಬಂಡವಾಳವನ್ನು ಒಂದು ಸೈಕಲ್ ಉದ್ದಿಮೆಯಲ್ಲಿ ತೊಡಗಿಸಿ 1000 ಸೈಕಲ್‌ಗಳನ್ನು ಉತ್ಪಾದಿಸಿದರೆ ಆಗ 200 ರೂಪಾಯಿ ಇರುತ್ತದೆ ಎಂದು ಭಾವಿಸೋಣ. 2 ಯೂನಿಟ್ ಶ್ರಮ ಮತ್ತು ಬಂಡವಾಳವನ್ನು ತೊಡಗಿಸಿದಾಗ ಎರಡು ಸಾವಿರ ಸೈಕಲ್ಲುಗಳನ್ನು ಉತ್ಪಾದಿಸಿದರೆ, ಪ್ರತಿಯೊಂದು ಸೈಕಲ್ಲಿನ ಉತ್ಪಾದನಾ ವೆಚ್ಚ 180 ರೂಪಾಯಿ

ಆಗುತ್ತದೆ. ಹೆಚ್ಚು ಬಂಡವಾಳ ಮತ್ತು ಶ್ರಮವನ್ನು ತೊಡಗಿಸಿದಂತೆ ಉತ್ಪಾದನೆ ಹೆಚ್ಚಿ ಉತ್ಪಾದನಾ ವೆಚ್ಚ ಕಡಮೆಯಾಗುತ್ತ ಹೋಗುತ್ತದೆ. ಈ ತತ್ವವು ಉದ್ದಿಮೆಗಳಿಗೆ ಮಾತ್ರ ಅನ್ವಯಿಸುತ್ತದೆ. ಏಕೆಂದರೆ ಉದ್ದಿಮೆಯ ಗಾತ್ರ ಹೆಚ್ಚಿದಂತೆ ಉತ್ಪಾದನೆಯನ್ನು ಹೆಚ್ಚಿಸುವಾಗ ಆಂತರಿಕ ಲಾಭಗಳು ದೊರೆಯುತ್ತವೆ. ಇದರಿಂದ ಉತ್ಪಾದನೆಯ ವೆಚ್ಚ ಕಡಮೆಯಾಗುತ್ತ ಹೋಗುತ್ತದೆ. ಮುಂದೆ ಉತ್ಪಾದನೆಯ ಸಂಪನ್ಮೂಲಗಳು ಕಡಮೆ ಬೆಲೆಗೆ ದೊರೆತು ಅವುಗಳನ್ನು ಯೋಗ್ಯ ರೀತಿಯಲ್ಲಿ ಬಳಸುವುದರಿಂದ ಉತ್ಪಾದನೆಯು ಹೆಚ್ಚಾಗಿ ವೆಚ್ಚವು ಕಡಮೆಯಾಗುತ್ತ ಹೋಗುತ್ತದೆ. ಅತ್ಯಾಧುನಿಕ ಯಂತ್ರೋಪಕರಣಗಳನ್ನು ದೊಡ್ಡ ಪ್ರಮಾಣದಲ್ಲಿ ಬಳಸುವುದರಿಂದ ಸಂಶೋಧನೆಗಳನ್ನು ಉದ್ದಿಮೆಗಳಲ್ಲಿ ಅಳವಡಿಸುವುದರಿಂದ ಉತ್ಪಾದನೆಯನ್ನು ಹೆಚ್ಚಿಸಿ ವೆಚ್ಚವನ್ನು ತಗ್ಗಿಸಬಹುದು.

2. ಇಳಿಕೆಯ ಪ್ರತಿಫಲ ನಿಯಮ

ಉತ್ಪಾದನೆ ಅಂಶಗಳಲ್ಲಿ ಒಂದು ಅಂಶವನ್ನು ಸ್ಥಿರವಾಗಿರಿಸಿಕೊಂಡು ಉಳಿದ ಅಂಶಗಳನ್ನು ಹೆಚ್ಚಿಸುತ್ತ ಹೋದರೆ, ಯಾವುದೋ ಒಂದು ಹಂತದಿಂದಾಚೆಗೆ ಉತ್ಪನ್ನದ ಹೆಚ್ಚುವರಿ ಇಳಿಮುಖವಾಗುತ್ತ ಹೋಗುವುದಕ್ಕೆ ಇಳಿಮುಖ ಪ್ರತಿಫಲ ನಿಯಮ ಎಂದು ಕರೆಯುತ್ತಾರೆ. ಅಂದರೆ ಉತ್ಪಾದಕನು ಉತ್ಪಾದನೆಯನ್ನು ಹೆಚ್ಚಿಸಲು ಹೆಚ್ಚು ಹೆಚ್ಚು ಬಂಡವಾಳ ಮತ್ತು ಶ್ರಮವನ್ನು ಬಳಸಿದಂತೆ ಪ್ರತಿಫಲವು ಇಳಿಮುಖವಾಗುತ್ತ ಹೋಗುತ್ತದೆ. ಅದರ ಜೊತೆಗೆ ಒಟ್ಟು ಉತ್ಪಾದನೆಯು ಹೆಚ್ಚಿದರೂ ಅದು ಇಳಿಮುಖ ಪ್ರಮಾಣದಲ್ಲಿ ಹೆಚ್ಚಾಗುತ್ತ ಹೋಗುತ್ತದೆ. ಸರಾಸರಿ ಉತ್ಪಾದನಾ ವೆಚ್ಚಗಳು ಕ್ರಮೇಣ ಹೆಚ್ಚುವುದರಿಂದ ಈ ನಿಯಮಕ್ಕೆ ಏರಿಕೆಯ ವೆಚ್ಚದ ನಿಯಮವೆಂದೂ ಕರೆಯುವುದು ರೂಢಿ.

ಹಿಂದಿನ ಕಾಲದಲ್ಲಿ ಅರ್ಥಶಾಸ್ತ್ರಜ್ಞರು ಇಳಿಕೆಯ ಪ್ರತಿಫಲ ನಿಯಮಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದರು. ಈ ತತ್ವವು ಅರ್ಥ ಶಾಸ್ತ್ರದಲ್ಲಿ ಬಹಳ ಮುಖ್ಯವಾದ ತತ್ವವಾಗಿ ಪರಿಣಮಿಸಿದೆ. ಈ ನಿಯಮ ಮುಖ್ಯವಾಗಿ ಕೃಷಿಕ್ಷೇತ್ರದಲ್ಲಿ ಕಂಡುಬರುತ್ತದೆ. ಡೇವಿಡ್ ರಿಕಾರ್ಡೋ ಎಂಬ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞನ ಪ್ರಸಿದ್ಧ ಗೇಣಿಯ ಸಿದ್ಧಾಂತ ಹಾಗೂ ಥಾಮಸ್ ರಾಬರ್ಟ್ ಮಾಲ್ಥಸ್‌ರವರ ಜನಸಂಖ್ಯೆಯ ಸಿದ್ಧಾಂತಗಳಿಗೆ ಇಳಿಕೆಯ ಪ್ರತಿಫಲದ ನಿಯಮವು ತಳಹದಿಯಾಗಿ ಪರಿಣಮಿಸಿದೆ. ಉತ್ಪಾದನೆಯನ್ನು ಹೆಚ್ಚಿಸುತ್ತ ಹೋದಂತೆ ಪ್ರತಿಘಟಕದ ಉತ್ಪಾದನಾ ವೆಚ್ಚವು ಹೆಚ್ಚುತ್ತ ಹೋದರೆ ಆ ಉದ್ದಿಮೆ ಇಳಿಕೆಯ ಪ್ರತಿಫಲದ ನಿಯಮಕ್ಕೆ ಒಳಗಾಗಿರುತ್ತದೆ ಎಂದರ್ಥ. ಈ ನಿಯಮದ ಮೇಲೆ ರಿಕಾರ್ಡೋರವರ ಗೇಣಿಯ ಸಿದ್ಧಾಂತ ಹಾಗೂ ಮಾಲ್ಥಸ್‌ನ ಜನಸಂಖ್ಯಾ ಸಿದ್ಧಾಂತಗಳು ರೂಪುಗೊಂಡಿವೆ.

ಭೂಮಿಯನ್ನು ಎರಡು ವಿಧಗಳಿಂದ ಉಳುಮೆ ಮಾಡಬಹುದು. ತೀಕ್ಷ್ಣ ಬೇಸಾಯ ಹಾಗೂ ವ್ಯಾಪಕ ಬೇಸಾಯ. ಈ ಎರಡು ವಿಧಗಳಿಂದ ಭೂಮಿಯನ್ನು ಉಳುಮೆ ಮಾಡಿದರೆ ಇಳಿಮುಖ ಪ್ರತಿಫಲ ನಿಯಮ ಕಂಡುಬರುತ್ತದೆ. ಸಾಮಾನ್ಯವಾಗಿ ಈ ನಿಯಮವು ಪ್ರತಿಯೊಬ್ಬ ರೈತನಿಗೆ ಅನುಭವದಿಂದ ಗೊತ್ತಾಗಿರುತ್ತದೆ.

ಪ್ರಾಚೀನ ಗ್ರೀಕ್ ಬರಹಗಾರನಾದ ಜೆನಫನ್ ಪ್ರಕಾರ 'ಅಗತ್ಯವಾಗಿ ಬೇಕಾಗಿರುವುದಕ್ಕಿಂತಲೂ ಹೆಚ್ಚಿನ ಶ್ರಮವನ್ನು ಬಳಸಿದಲ್ಲಿ ಆಗುವ ಪರಿಣಾಮ ಉತ್ಪನ್ನ ನಷ್ಟ'. ಜೆನ್‌ಫನ್‌ನ ಪಂಥಕ್ಕೇ ಸೇರಿದ ಮತ್ತೊಬ್ಬ ಪ್ರಸಿದ್ಧ ಬರಹಗಾರನಾದ ಟೊರ್ಗೋ ಅಭಿಪ್ರಾಯದಲ್ಲಿ 'ಹೆಚ್ಚು ಹೆಚ್ಚು ಬಂಡವಾಳವನ್ನು ಒಂದು ನಿರ್ದಿಷ್ಟವಾದ ಭೂಮಿಯ ಮೇಲೆ ಉಪಯೋಗಿಸಿದಾಗ, ಮೊದಮೊದಲು ಉತ್ಪನ್ನದ ಮಟ್ಟ ಏರಿದರೂ, ಒಂದು ಘಟ್ಟದ ಅನಂತರ ಬಂಡವಾಳದ ಪ್ರಮಾಣಕ್ಕಿಂತಲೂ ಕಡಮೆಯಾಗುತ್ತಾ ಹೋಗುತ್ತದೆ. ಕೊನೆಗೆ ಈ ಇಳಿತವು ಶೂನ್ಯದತ್ತ ಸಾಗುತ್ತದೆ.

ಡೇವಿಡ್ ರಿಕಾರ್ಡೋ ಈ ನಿಯಮದ ಆಧಾರದ ಮೇಲೆ ಭವಿಷ್ಯದ ದುಃಖ ಮತ್ತು ನಿರಾಶಾದಾಯಕ ಸ್ಥಿತಿಯನ್ನು ಈ ರೀತಿ ವಿವರಿಸಿದ್ದಾನೆ: ಜನಸಂಖ್ಯೆ ಹೆಚ್ಚಿದಂತೆ, ಭೂಮಿಗೆ ಅಧಿಕ ಬೇಡಿಕೆ ಉಂಟಾಗುತ್ತದೆ. ಇದರ ಫಲವಾಗಿ ಮೊದಲು ಹೆಚ್ಚು ಫಲವತ್ತಾದ ಭೂಮಿಗೆ ಮಾತ್ರ ಬೇಡಿಕೆ ಕಂಡು ಬಂದರೆ ಅನಂತರ ಕ್ರಮೇಣವಾಗಿ ಕಡಮೆ ಫಲವತ್ತತೆಯನ್ನು ಹೊಂದಿರುವ ಭೂಮಿಗೂ ಬೇಡಿಕೆ ಕಂಡುಬರುತ್ತದೆ. ಆದರೆ ಇಳಿಮುಖ ಪ್ರತಿಫಲದ ನಿಯಮದಂತೆ, ಈ ಭೂಮಿಯಲ್ಲಿ ಉತ್ಪನ್ನ ಕಡಮೆಯಾಗುತ್ತ ಹೋಗುತ್ತದೆ. ಇದರಿಂದ ಆಹಾರದ ಬೆಲೆ ಹೆಚ್ಚುತ್ತದೆ. ಗೇಣಿಯೂ ಹೆಚ್ಚುತ್ತ ಹೋಗುತ್ತದೆ. ಇದರ ಫಲವಾಗಿ ಲಾಭದ ಪ್ರಮಾಣ ಕಡಮೆಯಾಗುತ್ತದೆ. ಆದರೆ ನಾಗರಿಕ ಪ್ರಪಂಚದಲ್ಲಿ ತೀವ್ರವಾಗಿ ಮುಂದುವರಿಯುತ್ತಿರುವ ಕೃಷಿವಿಜ್ಞಾನವನ್ನು ಗಮನಿಸಿದರೆ ಇವನ ಸಿದ್ಧಾಂತದಲ್ಲಿ ತಿರುಳಿಲ್ಲದಿರುವುದು ಕಂಡುಬರುತ್ತದೆ.

ಥಾಮಸ್ ರಾಬರ್ಟ್ ಮಾಲ್ಥಸ್ ಇಳಿಮುಖ ಪ್ರತಿಫಲ ನಿಯಮವನ್ನು ತನ್ನ ಜನಸಂಖ್ಯಾ ಸಿದ್ಧಾಂತಕ್ಕೆ ಬಳಸಿಕೊಂಡು ಈ ರೀತಿ ಹೇಳಿದ್ದಾನೆ: 'ಜನಸಂಖ್ಯೆಯು ವೇಗವಾಗಿ ಏರುತ್ತಾ ಹೋಗುವ ಶಕ್ತಿಯನ್ನು ಪಡೆದಿದೆ. ಆದರೆ ಆಹಾರದ ಉತ್ಪಾದನೆಯು ಇಳಿಮುಖ ಪ್ರತಿಫಲ ನಿಯಮದ ಪ್ರಕಾರ ಜನಸಂಖ್ಯೆಯ ಪ್ರಮಾಣಕ್ಕಿಂತಲೂ ಕಡಮೆಯಾಗುತ್ತದೆ. ಆದ್ದರಿಂದ ಆಹಾರದ ಸಮಸ್ಯೆ ತಲೆದೋರುತ್ತದೆ'. ಆದರೆ ಇಂದು ಜನಸಂಖ್ಯೆಯನ್ನು ನಿರೋಧಕಗಳ ಬಳಕೆಯಿಂದ ಕಡಮೆಮಾಡಬಹುದು ಮತ್ತು ವೈಜ್ಞಾನಿಕ ಕೃಷಿ ವಿಧಾನಗಳಿಂದ ಆಹಾರೋತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಿರುವುದರಿಂದ ಮಾಲ್ಥಸ್‌ನ ಈ ಸಿದ್ಧಾಂತ ಅಷ್ಟಾಗಿ ಸರಿಯಲ್ಲ ಎನ್ನಬಹುದು.

ಸೀನಿಯರ್ ಎಂಬ ಅರ್ಥಶಾಸ್ತ್ರಜ್ಞನ ಪ್ರಕಾರ 'ಕೃಷಿ ವಿಧಾನವು ಇದ್ದ ಹಾಗೆಯೇ ಇದ್ದು ಒಂದು ನಿರ್ದಿಷ್ಟ ನೆಲದ ಮೇಲೆ ಶ್ರಮವನ್ನು ಹೆಚ್ಚಾಗಿ ಬಳಸಿದಾಗ, ಕಡಮೆ

ಪ್ರಮಾಣದ ಉತ್ಪನ್ನವು ದೊರಕುತ್ತದೆ'. ಅಂದರೆ ಸೀನಿಯರ್ ಅಭಿಪ್ರಾಯದಲ್ಲಿ ಕೃಷಿ ವಿಧಾನದಲ್ಲಿ ಬದಲಾವಣೆಯಾದರೆ ಇಳಿಮುಖ ಪ್ರತಿಫಲ ನಿಯಮದ ಪ್ರವೃತ್ತಿಯಲ್ಲಿ ಬದಲಾವಣೆಯಾಗಬಹುದು. ಸೀನಿಯರ್‌ನ ಅಭಿಪ್ರಾಯದಲ್ಲಿ ತಿರುಳಿದೆ ಎನ್ನಬಹುದು.

ಮುಂದೆ ಆಲ್‌ಫ್ರೆಡ್ ಮಾರ್ಷಲ್ ಈ ನಿಯಮಕ್ಕೆ ಹೆಚ್ಚಿನ ಗಮನ ಕೊಟ್ಟನು. ಆಲ್ ಫ್ರೆಡ್ ಮಾರ್ಷಲ್‌ರವರ ಪ್ರಕಾರ 'ವ್ಯವಸಾಯದ ವಿಧಾನಗಳಲ್ಲಿ ಯಾವ ಸುಧಾರಣೆಗಳೂ ಆಗದಿದ್ದಲ್ಲಿ, ಒಂದು ಹಿಡುವಳಿಯ ವ್ಯವಸಾಯಕ್ಕಾಗಿ ಹೆಚ್ಚು ಬಂಡ ವಾಳ ಮತ್ತು ಶ್ರಮಗಳನ್ನು ಉಪಯೋಗಿಸಿದಂತೆ ಉತ್ಪನ್ನ ಹೆಚ್ಚಾಗುತ್ತಾ ಹೋಗು ತ್ತದೆ. ಆದರೆ ಈ ಹೆಚ್ಚಿನ ಹುಟ್ಟುವಳಿಯು ಒಂದು ಘಟಕದ ನಂತರ ಹೆಚ್ಚಿಸಲಾದ ಬಂಡವಾಳ ಮತ್ತು ಶ್ರಮಗಳ ಪ್ರಮಾಣಗಳಿಗೆ ಸರಿಸಮಾನವಾಗಿರುವುದಿಲ್ಲ.'

ಅಭಿಜಾತ ಪಂಥದ ಎಲ್ಲ ಅರ್ಥಶಾಸ್ತ್ರಜ್ಞರು ಇಳಿಮುಖ ಪ್ರತಿಫಲವನ್ನು ಮುಖ್ಯ ವಾಗಿ ಕೃಷಿಗೆ ಸಂಬಂಧಪಟ್ಟಂತೆ ಚರ್ಚಿಸಿದ್ದಾರೆ. ಅವರ ಪ್ರಕಾರ ಈ ನಿಯಮವು ಪ್ರಮುಖವಾಗಿ ಗೇಣಿಗೆ ಸಂಬಂಧಪಟ್ಟಿದೆ. ಅವರ ದೃಷ್ಟಿಯಲ್ಲಿ ಏರಿಕೆಯ ಪ್ರತಿಫಲ ನಿಯಮವು ಶ್ರಮ ವಿಭಾಗದ ಒಂದು ಅಂಗ. ಆದರೆ ಮಾರ್ಷಲ್ ಪ್ರಕಾರ ಏರಿಕೆಯ ಹಾಗೂ ಇಳಿಮುಖ ಪ್ರತಿಫಲಗಳೆರಡೂ ಬೆಲೆಯ ಸಿದ್ಧಾಂತದ ಒಂದು ಅವಿಭಾಜ್ಯ ಅಂಗ. ಹೀಗೆ ಈ ನಿಯಮವು ಪೂರೈಕೆಯ ಸಿದ್ಧಾಂತಕ್ಕೆ ಅಡಿಗಲ್ಲಾಯಿತು. ಈ ದಿಸೆಯಲ್ಲಿ ವಿಚಾರ ಮಾಡಿದರೆ ಈ ನಿಯಮವು ಕೇವಲ ಭೂಮಿ ಅಥವಾ ಒಂದು ಉತ್ಪಾದನಾಂಶಕ್ಕೆ ಸಂಬಂಧಪಡದೆ ವಿರಳ ಪೂರೈಕೆಯಿರುವ ಎಲ್ಲ ಉತ್ಪಾದನಾಂಶಗಳಿಗೂ ಅನ್ವಯವಾಗು ತ್ತದೆ. ಮಾರ್ಷಲ್, ಈ ನಿಯಮವು ಬೆಲೆಯ ಸಿದ್ಧಾಂತಕ್ಕೆ ಹೇಗೆ ಅಡಿಗಲ್ಲಾಗುತ್ತ ದೆಂಬುದನ್ನೂ, ಭೂಮಿ ಹಾಗೂ ಇತರ ಉತ್ಪಾದನಾಂಶಗಳಿಗೆ ಯಾವ ರೀತಿ ಅನ್ವಯ ವಾಗುತ್ತದೆಂಬುದನ್ನೂ ಸಾಧಿಸಿತೋರಿಸಿದ್ದಾನೆ.

ಕೃಷಿಯಲ್ಲಿ ಯಂತ್ರೋಪಕರಣಗಳನ್ನು, ಸುಧಾರಿಸಿದ ಬೀಜ, ಗೊಬ್ಬರಗಳನ್ನು ಉಪಯೋಗಿಸದೆ ಹೆಚ್ಚು ಶ್ರಮ ಮತ್ತು ಬಂಡವಾಳಗಳನ್ನೂ ವಿನಿಯೋಗಿಸಿದರೆ ಮೊದಲ ಉತ್ಪಾದನೆಯು ಹೆಚ್ಚುತ್ತ ಹೋಗುವುದು. ಆದರೆ ಅದು ಇದೇ ರೀತಿ ಅನಿಯಮಿತ ವಾಗಿ ಉತ್ಪಾದನೆ ಹೆಚ್ಚಿಸಲು ಸಾಧ್ಯವಿಲ್ಲ ಎನ್ನುವುದು ಎಲ್ಲ ರೈತರಿಗೂ ತಿಳಿದಿರುವ ಸಂಗತಿ. ಆದರೆ ಶ್ರಮ ಮತ್ತು ಬಂಡವಾಳವನ್ನು ಹೆಚ್ಚಿಸಿದಂತೆ ಮೊದಲಿಗೆ ಪ್ರತಿ ಫಲವು ಇಮ್ಮಡಿಯಾಗಬಹುದು. ಆದರೆ ಬರಬರುತ್ತ ಭೂಮಿಯಿಂದ ಬರುವ ಪ್ರತಿ ಫಲ ಇಳಿಯುತ್ತಾ ಹೋಗುವುದು ಹಾಗೂ ಉತ್ಪಾದನಾ ವೆಚ್ಚವು ಹೆಚ್ಚುವುದು. ಈ ನಿಯಮದ ಪ್ರಕಾರ ಒಟ್ಟು ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿದ್ದರೂ ಅಂಚಿನ ಪ್ರತಿಫಲ (ಸೀಮಾಂತ ಉತ್ಪಾದನೆಯು) ಇಳಿಮುಖವಾಗುತ್ತ ಹೋಗುತ್ತದೆ.

ಈ ನಿಯಮವನ್ನು ಒಂದು ಉದಾಹರಣೆಯಿಂದ ವಿವರಿಸಬಹುದು ; ಒಬ್ಬ ರೈತನಲ್ಲಿ 2 ಎಕರೆ ಭೂಮಿ ಇದೆ. ಅದರಲ್ಲಿ ಜೋಳವನ್ನು ಬೆಳೆಯುವನು. ಈ

ಭೂಮಿಯಿಂದ ಹೆಚ್ಚು ಫಸಲನ್ನು ಪಡೆಯುವ ಇಚ್ಛೆಯಿಂದ ಹೆಚ್ಚು ಶ್ರಮ ಮತ್ತು ಬಂಡವಾಳಗಳನ್ನು ತೊಡಗಿಸುವನು. ಆದರಿಂದ ಅವನಿಗೆ ಬರುವ ಪ್ರತಿಫಲ ಕೋಷ್ಟಕ 8 ರಲ್ಲಿನಂತಿರುತ್ತದೆ.

ಕೋಷ್ಟಕ 8

ಜೋಳದ ಉತ್ಪಾದನೆಯಲ್ಲಿ ತೊಡಗಿಸಿದ ವಿವಿಧ ಯೂನಿಟ್ (ಏಕಮಾನ) ಶ್ರಮ ಮತ್ತು ಬಂಡವಾಳಗಳು ಉತ್ಪಾದನೆಯ ಮೇಲೆ ಉಂಟುಮಾಡುವ ಪರಿಣಾಮ

ಜಮೀನಿನ ವಿಸ್ತೀರ್ಣ (ಎಕರೆಗಳಲ್ಲಿ)	ಶ್ರಮ ಮತ್ತು ಬಂಡವಾಳ (ಯೂನಿಟ್)	ಸೀಮಾಂತ ಉತ್ಪಾದನೆ	ಒಟ್ಟು ಉತ್ಪಾದನೆ (ಪಲ್ಲಗಳಲ್ಲಿ)
2	1	—	10
2	2	8	18
2	3	6	24
2	4	4	28
2	5	2	30
2	6	0	30
—	7	—2	28

ಇಲ್ಲಿ ಜಮೀನಿನ ವಿಸ್ತೀರ್ಣವನ್ನು ಹೆಚ್ಚಿಸಿಲ್ಲ. ಜಮೀನಿನ ವಿಸ್ತೀರ್ಣ ಕೇವಲ 2 ಎಕರೆಗಳು. ಶ್ರಮ ಮತ್ತು ಬಂಡವಾಳವನ್ನು ಹೆಚ್ಚು ಮಾಡಿದೆ. ಶ್ರಮ ಮತ್ತು ಬಂಡವಾಳ ಏರಿದಂತೆ ಉತ್ಪಾದನೆಯೂ ಏರಬೇಕೆಂಬುದು ಸಾಮಾನ್ಯ ನಿಯಮ. ಏರಿದರೂ ಏರಬಹುದು. ಏರಿಲ್ಲದೆ ಇರಬಹುದು. ಬಂಡವಾಳ ಮತ್ತು ಶ್ರಮದ ಒಂದು ಯೂನಿಟ್‌ಅನ್ನು 2 ಎಕರೆ ಭೂಮಿಯಲ್ಲಿ ಕೃಷಿಮಾಡಲು ತೊಡಗಿಸಿದಾಗ ಅವನಿಗೆ ಸಿಗುವ ಪ್ರತಿಫಲ 10 ಪಲ್ಲಗಳು. ಮೊದಲನೆಯ ಯೂನಿಟ್‌ನಿಂದ ರೈತನಿಗೆ ಸಿಕ್ಕ ಸರಾಸರಿ ಪ್ರತಿಫಲ 10 ಪಲ್ಲಗಳು. ಒಂದು ಯೂನಿಟ್ ಶ್ರಮ ಮತ್ತು ಬಂಡವಾಳವನ್ನು ಹೆಚ್ಚು ವೆಚ್ಚ ಮಾಡಿದ್ದರಿಂದ ಸಾಧಿಸಿದ ಪ್ರತಿಫಲ 18 – 10=8. ಇದು ಸೀಮಾಂತ ಉತ್ಪಾದನೆ. ಅದೇ ರೈತ ಅದೇ ಹೊಲದಲ್ಲಿ 3 ಯೂನಿಟ್‌ಗಳನ್ನು ತೊಡಗಿಸಿದಾಗ ಬರುವ ಪ್ರತಿಫಲ 24 ಪಲ್ಲ. ಅಂದರೆ ಹೆಚ್ಚು ಹಣವನ್ನು ತೊಡಗಿಸಿದಂತೆ ಆದರಿಂದ ಸಿಗುವ ಪ್ರತಿಫಲ ಕಡಮೆಯಾಗುತ್ತ ಹೋಗುತ್ತದೆ. ಇದರಿಂದ

ತಿಳಿದು ಬರುವ ಅಂಶ, ಶ್ರಮ ಮತ್ತು ಬಂಡವಾಳವನ್ನು ಹೆಚ್ಚು ತೊಡಗಿಸಿದಂತೆ ಉತ್ಪಾದನೆಯು ಹೆಚ್ಚುತ್ತ ಹೋದರೂ ಸೀಮಾಂತ ಉತ್ಪಾದನೆಯು ಕಡಮೆಯಾಗುತ್ತ ಹೋಗುತ್ತದೆ. ಸೀಮಾಂತ ಉತ್ಪಾದನೆ ಎಂದರೆ ಅಧಿಕ ಯೂನಿಟ್‌ನಿಂದ ಬಂದ ಉತ್ಪಾದನೆ. ಅಂದರೆ ಉತ್ಪನ್ನವು ಇಳಿಯುವ ವೇಗದಲ್ಲಿ ವೃದ್ಧಿಯಾಗುತ್ತದೆ. ಒಂದು ವೇಳೆ ರೈತನು ಶ್ರಮದ ಪ್ರಮಾಣವನ್ನು ಹೆಚ್ಚಿಸಿದ್ದಾನೆಂದುಕೊಂಡರೆ, ಆಗ ಜೋಳದ ಒಟ್ಟು ಉತ್ಪನ್ನದಲ್ಲಿ ಯಾವ ಹೆಚ್ಚಳವೂ ಆಗದಿರಬಹುದು ಅಥವಾ ಅದು ಇಳಿಯಲೂ ಬಹುದು.

ಕಲ್ಪನೆಗಳು : ಇಳಿಮುಖ ಪ್ರತಿಫಲನಿಯಮವು ಕೆಲವು ಕಲ್ಪನೆಗಳ ಆಧಾರದ ಮೇಲೆ ರೂಪುಗೊಂಡಿದೆ.

(i) **ಭೂಮಿ :** ಭೂಮಿಯು ಪೂರ್ತಿಕೆ ಒಂದೇ ಸಮನಾಗಿದ್ದು, ಆ ಭೂಮಿಯನ್ನು ಪದೇ ಪದೇ ಉಪಯೋಗಿಸುವುದರಿಂದ ಕೂಲಿ ಮತ್ತು ಬಂಡವಾಳ ಹೆಚ್ಚಿಸಿದಾಗ ಈ ನಿಯಮ ಅನ್ವಯಿಸುತ್ತದೆ. ಆದರೆ ಹೆಚ್ಚು ಭೂಮಿಯನ್ನು ಉಳುಮೆ ಮಾಡಿದರೆ ಈ ನಿಯಮವು ಅನ್ವಯಿಸುವುದಿಲ್ಲ.

(ii) **ಉಳುಮೆ ಮಾಡುವ ಪದ್ಧತಿ :** ಭೂಮಿಯನ್ನು ಉಳುಮೆ ಮಾಡುವ ಪದ್ಧತಿಯಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲವೆಂದು ಕಲ್ಪನೆ ಮಾಡಿಕೊಳ್ಳಬೇಕು. ಉತ್ಕೃಷ್ಟ ಬೀಜಗಳು, ರಾಸಾಯನಿಕ ಗೊಬ್ಬರಗಳು, ಆಧುನಿಕ ಯಂತ್ರಗಳು ಇತ್ಯಾದಿಗಳನ್ನು ಉಪಯೋಗಿಸಿದಲ್ಲಿ ಉತ್ಪಾದನೆಯು ಅಧಿಕಗೊಳ್ಳುತ್ತದೆ. ಇಂತಹ ಸಂದರ್ಭಗಳಲ್ಲಿ ಇಳಿಮುಖ ಪ್ರತಿಫಲನಿಯಮ ಅನ್ವಯಿಸುವುದಿಲ್ಲ.

(iii) **ಹೊಸ ಭೂಮಿ :** ಒಂದು ಹೊಸ ಜಾಗದಲ್ಲಿ ಉಳುಮೆ ಮಾಡಿದರೆ ಆ ಭೂಮಿಯು ಫಲವತ್ತಾದ ಅಂಶಗಳನ್ನು ಒಳಗೊಂಡಿರುವುದರಿಂದ ಮೊದಲಿಗೆ ಉತ್ಪಾದನೆ ಹೆಚ್ಚಾಗುತ್ತದೆ. ಈ ನಿಯಮ ಹೊಸ ಭೂಮಿಯನ್ನು ಗಣನೆಗೆ ತೆಗೆದುಕೊಂಡಾಗ ಅನ್ವಯಿಸುವುದಿಲ್ಲ.

ಇಳಿಮುಖ ಪ್ರತಿಫಲನಿಯಮ ಹಾಗೂ ಕೃಷಿರಂಗ : ಇಳಿಮುಖ ಪ್ರತಿಫಲ ನಿಯಮವನ್ನು ಕೃಷಿರಂಗದಲ್ಲಿ ಮಾತ್ರ ಅಳವಡಿಸಿ, ಈ ನಿಯಮ ಹೆಚ್ಚಾಗಿ ಕೃಷಿರಂಗಕ್ಕೆ ಮಾತ್ರ ಅನ್ವಯಿಸುವುದೆಂದು ಅಭಿಪ್ರಾಯಪಟ್ಟರು. ಈ ನಿಯಮ ಮುಖ್ಯವಾಗಿ ಕೃಷಿಯಲ್ಲಿ ಕಂಡುಬರುತ್ತದೆ. ಕೃಷಿ ಹೆಚ್ಚಾಗಿ ನಿಸರ್ಗವನ್ನು ಅವಲಂಬಿಸಿರುವ ಉದ್ದಿಮೆ. ಕೃಷಿಕ್ಷೇತ್ರದಲ್ಲಿ ನೆಲದ ಪೂರೈಕೆ ಪ್ರಕೃತಿಯಿಂದ ನಿಯಂತ್ರಿತವಾಗಿರುವುದರಿಂದ ಈ ನಿಯಮ ಅಲ್ಲಿ ಶೀಘ್ರವಾಗಿ ಅನ್ವಯವಾಗುತ್ತದೆ. ಹವಾಗುಣ ಹಾಗೂ ಮಳೆಗಳು ಮಾನವನ ನಿಯಂತ್ರಣದಲ್ಲಿರುವುದಿಲ್ಲ. ಕೃಷಿಯಲ್ಲಿ ಮಾನವನ ಪ್ರಯತ್ನಕ್ಕೆ ಹೆಚ್ಚಿನ

ಅವಕಾಶವಿರುವುದಿಲ್ಲ. ಕೃಷಿ ಪದ್ಧತಿಯಲ್ಲಿ ಇದ್ದಕ್ಕಿದ್ದಂತೆ ಹೆಚ್ಚಿನ ಸುಧಾರಣೆಗಳನ್ನು ಮಾಡಲಾಗುವುದಿಲ್ಲ. ಯಂತ್ರಗಳನ್ನು ಕೃಷಿಯಲ್ಲಿ ಬಳಸುವುದು ಕಡಮೆ. ಭೂಮಿಯ ಫಲವತ್ತತೆ ಒಂದೇ ರೀತಿ ಇರದೆ ಕಡಮೆಯಾಗುತ್ತ ಹೋಗುತ್ತದೆ. ಹೆಚ್ಚು ಬಂಡವಾಳ ತೊಡಗಿಸಿದರೂ ಹೆಚ್ಚು ಪ್ರತಿಫಲ ಸಿಗುವುದಿಲ್ಲ. ಮುಂದೆ ಕೃಷಿಯಲ್ಲಿ ಸರಿಯಾದ ಮೇಲ್ವಿಚಾರಣೆ ಮಾಡುವುದು ಕಷ್ಟ. ಆದ್ದರಿಂದ ಕೃಷಿಯಲ್ಲಿ ಇಳಿಮುಖ ಪ್ರತಿಫದ ಸಿದ್ಧಾಂತವು ಹೆಚ್ಚಾಗಿ ಕಂಡುಬರುವುದು ಮನವರಿಕೆಯಾಗಿದೆ. ಇಂದು ಮಾನವನು ತನ್ನ ಬುದ್ಧಿಶಕ್ತಿಯಿಂದ ಕೃತಕ ಗೊಬ್ಬರ, ಸುಧಾರಿತ ತಳಿ, ವೈಜ್ಞಾನಿಕ ರೀತಿಯ ಕೃಷಿ ಇತ್ಯಾದಿಗಳಿಂದ ಇಳಿಮುಖ ಪ್ರತಿಫಲ ನಿಯಮದ ಅನ್ವಯದ ಕಾಲವನ್ನು ಮುಂದುವರಿಸುವ ಶಕ್ತಿಯನ್ನು ಪಡೆದಿದ್ದಾನೆ. ಈ ನಿಯಮವನ್ನು ಸಂಪೂರ್ಣವಾಗಿ ಮೀರಿಸಲು ಮನುಷ್ಯ ಅಸಮರ್ಥನಾಗಿದ್ದಾನೆಂದೇ ಹೇಳಬೇಕು. ಆಧುನಿಕ ಅರ್ಥಶಾಸ್ತ್ರಜ್ಞರು ಈ ನಿಯಮದ ಮೇಲೆ ಹೆಚ್ಚಿನ ಬೆಳಕನ್ನು ಬೀರಿದ್ದಾರೆ. ಅವರ ಪ್ರಕಾರ ಇಳಿಮುಖ ಪ್ರತಿಫಲ ನಿಯಮ ಕೃಷಿ ಕ್ಷೇತ್ರಕ್ಕೇ ಅಲ್ಲದೆ ಗಣಿ, ಮೀನುಗಾರಿಕೆ, ಕೈಗಾರಿಕೆ ಹೀಗೆ ಇತರ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಈ ಉದ್ದಿಮೆಗಳಲ್ಲಿ ನಿಸರ್ಗವು ಮುಖ್ಯ ಪಾತ್ರ ವಹಿಸುತ್ತದೆ. ಈ ಉದ್ದಿಮೆಗಳಲ್ಲಿ ಮನುಷ್ಯನ ಪ್ರಯತ್ನ ಹಾಗೂ ಬಂಡವಾಳಕ್ಕೆ ಹೆಚ್ಚು ಅವಕಾಶವಿರುವುದಿಲ್ಲ. ಉದಾಹರಣೆಗೆ ಕಲ್ಲಿದ್ದಲಿನ ಗಣಿ. ಮೊದಲು ಕಲ್ಲಿದ್ದಲು ಹೇರಳವಾಗಿ ಸಿಗುತ್ತದೆ. ಹೆಚ್ಚು ಕಲ್ಲಿದ್ದಲನ್ನು ಹೊರ ತೆಗೆದಂತೆಲ್ಲ ಕಲ್ಲಿದ್ದಲಿನ ಪ್ರಮಾಣ ಕಡಮೆಯಾಗುತ್ತದೆ. ಅಂದರೆ ಭೂಮಿಯ ಒಳಗೆ ಆಳವಾಗಿ ಸಾವಿರಾರು ಅಡಿಗಳಿಂದ ಕಲ್ಲಿದ್ದಲನ್ನು ಹೊರತೆಗೆಯಬೇಕು. ಬಂಡವಾಳವನ್ನು ತೊಡಗಿಸಿದ ಪ್ರಮಾಣದಲ್ಲಿ ಉತ್ಪಾದನೆಯಾಗುವುದಿಲ್ಲ. ಇದರಿಂದ ಕಲ್ಲಿದ್ದಲಿನ ಬೆಲೆ ಹೆಚ್ಚುತ್ತದೆ. ಮೀನುಗಾರಿಕೆ ಉದ್ದಿಮೆಯಲ್ಲಿ ಮೊದಲಿಗೆ ದಂಡೆಯ ಸಮೀಪದಲ್ಲಿಯ ಮೀನುಗಳನ್ನು ಹಿಡಿಯಬಹುದು. ಮೀನನ್ನು ಹಿಡಿದಂತೆಲ್ಲ ಮೀನುಗಳ ಸಂಖ್ಯೆ ಕಡಮೆಯಾಗುತ್ತದೆ. ನಂತರ ಸಮುದ್ರದಲ್ಲಿ ಹತ್ತು ಇಪ್ಪತ್ತು ಮೈಲಿ ಒಳಗೆ ಹೋಗಿ ಮೀನನ್ನು ಹಿಡಿಯಬೇಕಾಗುತ್ತದೆ. ಇದಕ್ಕಾಗಿ ದೊಡ್ಡ ಬಲೆಗಳು, ಯಾಂತ್ರಿಕ ದೋಣಿಗಳು ಅಗತ್ಯವಾಗುತ್ತದೆ. ಇವುಗಳಿಗಾಗಿ ಹೆಚ್ಚಿನ ಹಣ ಪಾವತಿ ಮಾಡಬೇಕು. ಇವೆಲ್ಲವನ್ನೂ ಸೇರಿಸಿ ಮೀನುಗಾರ ಮೀನಿನ ಬೆಲೆಯನ್ನು ನಿಗದಿಪಡಿಸುತ್ತಾನೆ. ಅಂದರೆ ಗಣಿಗಳು ಮೀನುಗಾರಿಕೆಯ ಉದ್ದಿಮೆಗಳು ಈ ನಿಯಮಕ್ಕೆ ಒಳಗಾಗಿವೆ.

ಕೈಗಾರಿಕಾ ಕ್ಷೇತ್ರದಲ್ಲಿ ನಿಸರ್ಗಕ್ಕಿಂತಲೂ ಹೆಚ್ಚಿನ ಪಾತ್ರ ಮಾನವನದು. ಆದ್ದರಿಂದ ಮಾನವನ ಬುದ್ಧಿ, ಉತ್ಪಾದನಾಂಶಗಳ ಉತ್ತಮ ಸಂಯೋಜನೆ ಮತ್ತು ವೈಜ್ಞಾನಿಕ ರೀತಿಯ ವ್ಯವಸ್ಥೆ ಇತ್ಯಾದಿಗಳಿಂದ ಈ ಕ್ಷೇತ್ರದಲ್ಲಿ ಇಳಿಮುಖ ಪ್ರತಿಫಲ ನಿಯಮದ ಅನ್ವಯದ ಕಾಲವು ಮತ್ತಷ್ಟು ಮುಂದೆ ಹೋಗಿದೆ. ಈ ಕ್ಷೇತ್ರದಲ್ಲಿ ಮಾನವನು ಈ ನಿಯಮವನ್ನು ಗೆಲ್ಲಲು ಇದುವರಿಗೆ ಸಮರ್ಥನಾಗಿಲ್ಲ.

ಇಳಿಮುಖ ಪ್ರತಿಫಲ ನಿಯಮ ನಾವು ಜೀವಿಸಿರುವಷ್ಟೇ ಸತ್ಯವಾದದ್ದು. ಈ ನಿಯಮ ಇಲ್ಲದಿದ್ದಲ್ಲಿ ಜನಸಂಖ್ಯೆ ಮತ್ತು ಗೇಣಿ ನಿಯಮಗಳ ಸ್ವರೂಪವೇ ಬೇರೆಯಾಗುತ್ತಿತ್ತು, ಆದ್ದರಿಂದ ಈ ನಿಯಮ ಹೆಚ್ಚಿನ ಮಹತ್ವಪೂರ್ಣದ್ದಾಗಿದೆ.

3. ಸ್ಥಿರ ಪ್ರತಿಫಲ ನಿಯಮ

ಸ್ಥಿರ ಪ್ರತಿಫಲ ಎಂದರೆ ಒಟ್ಟು ಉತ್ಪಾದನೆಯಲ್ಲಿ ಹೆಚ್ಚು ಅಥವಾ ಕಡಮೆ ಆಗದೆ ಒಂದೇ ಸಮನಾಗಿರುವುದು. ಯಾವುದೊಂದು ಉದ್ದಿಮೆಯು ಉತ್ಪಾದನೆಯನ್ನು ಹೆಚ್ಚಿಸಿದಾಗ್ಯೂ, ಕಡಮೆ ಮಾಡಿದಾಗ್ಯೂ ಒಟ್ಟು ಉತ್ಪಾದನೆಯು ಮಾತ್ರ ಕಡಮೆಯಾಗದೆ ಒಂದೇ ಸಮನಾಗಿದ್ದರೆ ಆದು ಉದ್ದಿಮೆಗೆ ಸ್ಥಿರ ಪ್ರತಿಫಲದ ಉದ್ದಿಮೆ. ಈ ನಿಯಮದ ಪ್ರಕಾರ ಉತ್ಪಾದನೆಯನ್ನು ಹೆಚ್ಚಿಸಲು ಹೆಚ್ಚು ಬಂಡವಾಳ ಮತ್ತು ಶ್ರಮಗಳನ್ನು ಬಳಸಿದಂತೆ ಉತ್ಪಾದನೆಯು ಸಮ ಪ್ರಮಾಣದಲ್ಲಿ ಹೆಚ್ಚುತ್ತ ಹೋಗುವುದು. ಇದನ್ನು ಕೋಷ್ಟಕ 8 ರಲ್ಲಿನ ವಿವರಗಳಿಂದ ಸ್ಪಷ್ಟಗೊಳಿಸಬಹುದು.

ಕೋಷ್ಟಕ 8

ಕುರ್ಚಿ ತಯಾರಿಕೆಯಲ್ಲಿ ವಿವಿಧ ಯೂನಿಟ್ ಬಂಡವಾಳ ಮತ್ತು ಶ್ರಮದ ಪರಿಣಾಮ

ಬಂಡವಾಳ ಮತ್ತು ಶ್ರಮ (ಯೂನಿಟ್‌ಗಳಲ್ಲಿ)	ಒಟ್ಟು ಕುರ್ಚಿಗಳ ಉತ್ಪಾದನೆ (ಸಂಖ್ಯೆಗಳಲ್ಲಿ)	ಪ್ರತಿ ಕುರ್ಚಿಗೆ ತಗಲುವ ವೆಚ್ಚ (ರೂಪಾಯಿಗಳಲ್ಲಿ)
1	1000	200-00
2	2000	200-00
3	3000	200-00

ಮೇಲಿನ ಕೋಷ್ಟಕದಲ್ಲಿ ಶ್ರಮ ಮತ್ತು ಬಂಡವಾಳಗಳ ಮೇಲಿನ ವೆಚ್ಚವನ್ನು ಇಮ್ಮಡಿ ಮಾಡಿದಾಗ ಕುರ್ಚಿಗಳ ಉತ್ಪಾದನೆಯು ಇಮ್ಮಡಿಯಾಗಿದೆ. ಮೂರು ಪಟ್ಟು ಹೆಚ್ಚಿಸಿದಾಗ, ಕುರ್ಚಿಗಳ ಉತ್ಪಾದನೆಯೂ ಮೂರು ಪಟ್ಟು ಹೆಚ್ಚಿದೆ. ಆದರೆ ಪ್ರತಿ ಕುರ್ಚಿಗೆ ತಗಲುವ ವೆಚ್ಚ ಒಂದೇ ಸಮನಾಗಿರುತ್ತದೆ. ಅಂದರೆ ಪ್ರತಿಫಲವು ಸ್ಥಿರವಾಗಿರುತ್ತದೆ. ಆದ್ದರಿಂದ ಈ ನಿಯಮವನ್ನು ಸ್ಥಿರ ಪ್ರತಿಫಲ ನಿಯಮವೆಂದು ಕರೆಯುವರು.

ಉತ್ಪಾದನಾ ವೆಚ್ಚ

ಉತ್ಪಾದನಾ ವೆಚ್ಚವೆಂದರೆ ಉದ್ದಿಮೆದಾರರು ವಸ್ತುಗಳನ್ನು ಉತ್ಪಾದಿಸಲು ಉತ್ಪಾದನಾ ಅಂಶಗಳನ್ನು ಹಾಗೂ ಇತರ ಕಾರ್ಯಗಳನ್ನು ನಿರ್ವಹಿಸಲು ವೆಚ್ಚ ಮಾಡುವ ಒಟ್ಟು ಹಣ. ಅಂದರೆ ಒಂದು ವಸ್ತುವಿನ ನಿರ್ದಿಷ್ಟ ಪ್ರಮಾಣದ ಉತ್ಪತ್ತಿಯಲ್ಲಿ ನೆರವಾಗುವ ಎಲ್ಲ ಉತ್ಪಾದನಾಂಶಗಳಿಗೆ ಕೊಡಬೇಕಾದ ಹಣದ ಮೊತ್ತ. ಉತ್ಪಾದನಾ ವೆಚ್ಚಕ್ಕೆ ಮತ್ತು ವಸ್ತುವಿನ ಉತ್ಪತ್ತಿಯ ಮೊತ್ತಕ್ಕೆ ನೇರವಾದ ಸಂಬಂಧವಿದೆ. ಉತ್ಪಾದನಾ ವೆಚ್ಚವನ್ನು ಹಣದ ವೆಚ್ಚ ಮತ್ತು ಯಥಾರ್ಥ ಅಥವಾ ನೈಜ ವೆಚ್ಚವೆಂದು ವಿಂಗಡಿಸಬಹುದು. ವಸ್ತುವನ್ನು ತಯಾರಿಸಲು ಉತ್ಪಾದಕನು ಹಣದ ರೂಪದಲ್ಲಿ ಮಾಡಿದ ಖರ್ಚುಗಳೆಲ್ಲವೂ ಉತ್ಪಾದನಾ ವೆಚ್ಚದಲ್ಲಿ ಸೇರುತ್ತದೆ. ಆದ್ದರಿಂದ ಇದನ್ನು ಉತ್ಪಾದನಾ ಹಣದ ವೆಚ್ಚ ಎಂತಲೂ ಕರೆಯಬಹುದು. ಉತ್ಪಾದಕನಿಗೆ ಇದು ಬಹಳ ಮುಖ್ಯ. ಯಾವುದೇ ವಸ್ತುವನ್ನು ಉತ್ಪಾದನೆ ಮಾಡಬೇಕಾದರೆ ಉತ್ಪಾದನಾ ಅಂಶಗಳಾದ ಭೂಮಿ, ಶ್ರಮ, ಬಂಡವಾಳಗಳು ಅಗತ್ಯ, ಇವುಗಳನ್ನು ಸಂಘಟಿಸಬೇಕು. ಅನಂತರ ಕಚ್ಚಾ ಮಾಲು, ಯಂತ್ರಗಳು, ಕಾರ್ಮಿಕರುಗಳನ್ನು ಸಂಯೋಜಿಸಿ ಅವರ ಸೇವೆಯನ್ನು ಪಡೆಯಬೇಕು. ಅವರ ಸೇವೆಗಳಿಗೆ ಪ್ರತಿಫಲವನ್ನು ಗೇಣಿ, ವೇತನ, ಬಡ್ಡಿಯ ರೂಪದಲ್ಲಿ ಅವರವರ ಶ್ರಮಕ್ಕೆ ತಕ್ಕಂತೆ ಸಲ್ಲಿಸಬೇಕು. ಹೀಗೆ ಉತ್ಪಾದಕರು ವಸ್ತುಗಳನ್ನು ಉತ್ಪಾದಿಸಿದ ಮೇಲೆ ಒಟ್ಟು ಎಷ್ಟು ವೆಚ್ಚವಾಯಿತು ಎಂಬುದು ತಿಳಿದು ಬರುತ್ತದೆ. ಉತ್ಪಾದನಾ ವೆಚ್ಚ ಉತ್ಪಾದಕನು ಉತ್ಪಾದನಾ ಅಂಶಗಳಿಗೆ ಅವರ ಸೇವೆಯನ್ನು ಸಲ್ಲಿಸಿ ವಸ್ತುಗಳನ್ನು ಉತ್ಪಾದಿಸಲು ನೆರವಾಗುವುದಕ್ಕೆ ನೀಡಿದ ಸಂಭಾವನೆ. ಈ ಉತ್ಪಾದನಾ ವೆಚ್ಚದಲ್ಲಿ ವಸ್ತುವನ್ನು ಉತ್ಪಾದಿಸಲು ಹಾಗೂ ಉತ್ಪಾದಿಸಿದ ವಸ್ತುವು ಬಳಕೆದಾರರ ಕೈಸೇರಲು ವಹಿಸಿದ ಎಲ್ಲ ವೆಚ್ಚಗಳು ಸೇರಿರುತ್ತವೆ.

ಉತ್ಪಾದಕನ ದೃಷ್ಟಿಯಲ್ಲಿ ಉತ್ಪಾದನಾ ವೆಚ್ಚ (i) ಕಾರ್ಮಿಕರ ಕೂಲಿ, (ii) ಬಂಡವಾಳದ ಮೇಲೆ ಬಡ್ಡಿ, (iii) ಭೂಮಿ ಹಾಗೂ ಇತರ ಬಗೆಯ ಸ್ವತ್ತನ್ನು ಬಳಸಿದ್ದಕ್ಕೆ ಪ್ರತಿಯಾಗಿ ಅದರ ಮಾಲೀಕರಿಗೆ ಕೊಟ್ಟ ಬಾಡಿಗೆ ಹಾಗೂ ಸಂಭಾವನೆ, (iv) ಅಸಿದ್ಧ ವಸ್ತುಗಳ ವೆಚ್ಚ, (v) ಯಂತ್ರಗಳ ದುರಸ್ತಿಯ ಖರ್ಚು, (vi) ಸಾರಿಗೆ ವೆಚ್ಚ ಮತ್ತು ಜಾಹೀರಾತಿನ ವೆಚ್ಚ, (vii) ವಸ್ತುಗಳ ಉತ್ಪಾದನೆಯಲ್ಲಿ ತೊಡಗಲು ತಯಾರಿಕರಿಗೆ ದೊರಕುವ ಲಾಭ. ಈ ಎಲ್ಲ ಅಂಶಗಳನ್ನು ಒಳಗೊಂಡಿದೆ.

(i) **ಸ್ಥಿರ ಹಾಗೂ ಬದಲಾಗುವ ವೆಚ್ಚಗಳು :** ಉತ್ಪಾದಕರು ತಮ್ಮ ಉತ್ಪಾದನೆಯ ವೆಚ್ಚವನ್ನು 'ಸ್ಥಿರ ವೆಚ್ಚಗಳು' ಮತ್ತು 'ಬದಲಾಗುವ ವೆಚ್ಚಗಳು' ಎಂದು ವಿಂಗಡಿಸಿರುವರು. ಸ್ಥಿರ ವೆಚ್ಚಗಳೆಂದರೆ ಉದ್ದಿಮೆಯನ್ನು ಸ್ಥಾಪಿಸಲು ಕಟ್ಟಡಗಳಿಗೆ ಕೊಡಬೇಕಾದ ಗೇಣಿ (ಬಾಡಿಗೆ), ಬಂಡವಾಳದ ಮೇಲೆ ಬಡ್ಡಿ, ಕಾರ್ಮಿಕರಿಗೆ ನೀಡುವ ವೇತನ, ಸರಕಾರಕ್ಕೆ ಕೊಡಬೇಕಾದ ತೆರಿಗೆ, ಮಾರಾಟ ಹಾಗೂ ಜಾಹೀರಾತಿನ

ವೆಚ್ಚಗಳು. ಉತ್ಪಾದನೆಯು ಇರಲಿ, ಇಲ್ಲದಿರಲಿ ಈ ವೆಚ್ಚಗಳು ಒಂದೇ ಸಮನೆ ಇರುತ್ತವೆ. ಉತ್ಪಾದನೆ ಕಾರ್ಯಗಳನ್ನು ಕೈಗೊಳ್ಳದಿದ್ದರೂ ಈ ವೆಚ್ಚಗಳನ್ನು ನಿರ್ವಹಿಸಲೇ ಬೇಕಾಗುತ್ತದೆ. ಉತ್ಪಾದನೆಯು ಅಧಿಕಗೊಂಡರೂ ಸ್ಥಿರ ವೆಚ್ಚವು ಅಧಿಕಗೊಳ್ಳುವುದಿಲ್ಲ. ಕಡಮೆಯಾದರೆ ಅವು ಕಡಮೆಯಾಗುವುದಿಲ್ಲ. ಅಂದರೆ ಉತ್ಪಾದನೆಯೊಡನೆ ಬದಲಾಗದೆ ಸ್ಥಿರವಾಗಿರುವ ವಚ್ಚಗಳಿಗೆ ಸ್ಥಿರವೆಚ್ಚಗಳು ಎಂದು ಕರೆಯುತ್ತಾರೆ. ಈ ವೆಚ್ಚಗಳನ್ನು ಶಾಶ್ವತ ವೆಚ್ಚಗಳೆಂದೂ, ಪೂರಕ ವೆಚ್ಚಗಳೆಂದೂ ಕರೆಯುತ್ತಾರೆ. ಉತ್ಪಾದಕನಾದವನೂ ಕಾರಖಾನೆಯಲ್ಲಿ ವಸ್ತುಗಳನ್ನು ಉತ್ಪಾದಿಸಲಿ, ಬಿಡಲಿ ಉತ್ಪಾದಕನು ಮಾತ್ರ ಕಾರಖಾನೆಯ ಬಾಡಿಗೆ, ಕಾರ್ಮಿಕರಿಗೆ ವೇತನ, ಸಾಲಗಳ ಮೇಲಿನ ಬಡ್ಡಿ, ಯಂತ್ರಗಳ ಸವಕಳಿಯ ವೆಚ್ಚ, ಸರಕಾರಕ್ಕೆ ಕೊಡಬೇಕಾದ ತೆರಿಗೆಗಳು, ಆಡಳಿತ ಇಲಾಖೆಯ ಸಿಬ್ಬಂದಿಯ ವೇತನಗಳನ್ನು ನೀಡಲೇ ಬೇಕಾಗುವುದು. ಇಂತಹ ಬಾಬುಗಳಿಗೆ ಉತ್ಪಾದಕನು ಮಾಡುವ ವೆಚ್ಚವೇ ಸ್ಥಿರವೆಚ್ಚ. ಸ್ಥಿರವೆಚ್ಚಕ್ಕೂ ಉತ್ಪಾದನೆಗೂ ನೇರ ಸಂಬಂಧವಿರುವುದಿಲ್ಲ.

ಬದಲಾಗುವ ವೆಚ್ಚಗಳನ್ನು ವ್ಯತ್ಯಾಸವಾಗುವ ವೆಚ್ಚಗಳು ಎಂದು ಸಾಮಾನ್ಯವಾಗಿ ಕರೆಯುವುದು ರೂಢಿ. ಉತ್ಪಾದನೆಯೊಂದಿಗೆ ಹೆಚ್ಚು ಕಡಮೆಯಾಗವ ವೆಚ್ಚಗಳಿಗೆ 'ಬದಲಾಗುವ (ವ್ಯತ್ಯಾಸವಾಗುವ) ವೆಚ್ಚಗಳು' ಎಂದು ಕರೆಯುತ್ತಾರೆ. ಉದಾಹರಣೆಗೆ ಕೂಲಿ, ಆಸಿದ್ಧ ವಸ್ತುಗಳು. ಉತ್ಪಾದನೆ ಕಡಮೆಯಾದಂತೆಲ್ಲ ವೆಚ್ಚಗಳೂ ಸಹ ಬದಲಾಯಿಸಿರುತ್ತವೆ. ಇವು ಉತ್ಪಾದನೆಗೆ ನೇರವಾಗಿ ಸಂಬಂಧಿಸಿರುತ್ತವೆ. ಉತ್ಪಾದನೆ ಹೆಚ್ಚಾದಂತೆ ವೆಚ್ಚಗಳೂ ಸಹ ಹೆಚ್ಚಾಗುತ್ತವೆ. ಉತ್ಪಾದನೆ ಶೂನ್ಯವಿದ್ದರೆ ಬದಲಾಗುವ ವೆಚ್ಚಗಳೂ ಸಹ ಶೂನ್ಯವಾಗಿರುತ್ತವೆ. ಬದಲಾಗುವ ವೆಚ್ಚಗಳೆಂದರೆ, ಕಚ್ಚಾ ಮಾಲುಗಳನ್ನು ಕೊಳ್ಳಲು ವೆಚ್ಚ ಮಾಡುವ ಹಣ, ನಿಯಮಿಸಿಕೊಳ್ಳುವ ತಾತ್ಕಾಲಿಕ ಕೊಡುವ ವೇತನ, ಸವಕಳಿಯನ್ನು ಸರಿಪಡಿಸಲು ವೆಚ್ಚ ಮಾಡುವ ಹಣ, ಉತ್ಪಾದನೆಗೆ ಉಪಯೋಗಿಸುವ ವಿದ್ಯುಚ್ಛಕ್ತಿ, ಕಲ್ಲಿದ್ದಲು ಇತ್ಯಾದಿ. ವಸ್ತುಗಳ ಉತ್ಪಾದನೆಯು ಹೆಚ್ಚಾದಂತೆಲ್ಲ ಹೆಚ್ಚು ಕಚ್ಚಾಮಾಲು ಬೇಕಾಗುತ್ತದೆ. ಹೆಚ್ಚು ಕೂಲಿಕಾರರ ಅವಶ್ಯಕತೆಯು ಕಂಡುಬರುತ್ತದೆ. ಅಂದರೆ ಬದಲಾಗುವ ವೆಚ್ಚ ಉತ್ಪಾದನೆ ಹೆಚ್ಚಾದಂತೆ ಹೆಚ್ಚುತ್ತದೆ ಹಾಗೂ ಉತ್ಪಾದನೆ ಕಡಮೆಯಾದಂತೆಲ್ಲ ಅದೂ ಕುಗ್ಗುತ್ತದೆ. ಬದಲಾಗುವ ವೆಚ್ಚವು ವಸ್ತುಗಳ ಉತ್ಪತ್ತಿಗೆ ಮೂಲಭೂತವಾದದ್ದು. ಅಂದರೆ ಅದು ಮೂಲ ವೆಚ್ಚ. ಉತ್ಪಾದನೆಯ ಕಾರ್ಯ ನಡೆದರೆ ಮಾತ್ರ ಈ ಖರ್ಚು ಇರುತ್ತದೆ.

ಸ್ಥಿರ ಹಾಗೂ ಬದಲಾಗುವ ವೆಚ್ಚಗಳ ಪ್ರಮಾಣ ಉತ್ಪಾದನೆಯ ಪ್ರಮಾಣವನ್ನು ಅವಲಂಬಿಸಿರುತ್ತದೆ. ಉತ್ಪಾದನೆಯ ಪ್ರಮಾಣದಲ್ಲಿ ಹೆಚ್ಚು ಕಡಮೆಯಾದರೆ ವೆಚ್ಚಗಳ ಪ್ರಮಾಣವಲ್ಲಿಯೂ ಸಹ ಕ್ರಮವಾಗಿ ಕಡಿತ ಕಂಡುಬರುವುದು. ಸ್ಥಿರ ಹಾಗೂ ಬದಲಾಗುವ ವೆಚ್ಚಗಳೆರಡನ್ನೂ ಸೇರಿಸಿದರೆ ಉತ್ಪಾದಕನ ಒಟ್ಟು ವೆಚ್ಚವು ತಿಳಿಯುತ್ತದೆ.

(ii) **ಅನುವು (ಸದವಕಾಶದ) ವೆಚ್ಚ :** ಅನುವು ವೆಚ್ಚವನ್ನು ಯಥಾರ್ಥ ವೆಚ್ಚ, ಸ್ಥಳಾಂತರ ವೆಚ್ಚ, ವರ್ಗಾವಣೆಯ ವೆಚ್ಚ ಅಥವಾ ಸದವಕಾಶದ ವೆಚ್ಚ ಎಂದು ಕರೆಯುತ್ತಾರೆ. ಯಥಾರ್ಥ ವೆಚ್ಚದ ಬಗ್ಗೆ ಅರ್ಥಶಾಸ್ತ್ರಜ್ಞರ ವ್ಯಾಖ್ಯೆಗಳು ಅನೇಕ ಬಗೆಯಾಗಿವೆ. ಆಡಂ ಸ್ಮಿತ್‌ನ ಪ್ರಕಾರ ವಸ್ತುಗಳ ಉತ್ಪಾದನೆಗಾಗಿ ಕಾರ್ಮಿಕರು ವಿನಿಯೋಗಿಸಿದ ಶ್ರಮ ಮತ್ತು ತ್ಯಾಗಗಳೇ ಅದರ ಯಥಾರ್ಥ ವೆಚ್ಚ. ಮಾರ್ಷಲ್ ಪ್ರಕಾರ ವಿವಿಧ ಗುಣಮಟ್ಟಗಳನ್ನು ಹೊಂದಿರುವ ಎಲ್ಲ ಶ್ರಮ ಯತ್ನಗಳೂ ಯಥಾರ್ಥ ವೆಚ್ಚಕ್ಕೆ ಸೇರುತ್ತವೆ. ಆಸ್ಟ್ರಿಯನ್ ಪಂಥದ ಅರ್ಥಶಾಸ್ತ್ರಜ್ಞರ ದೃಷ್ಟಿಯಲ್ಲಿ ಸಂಪನ್ಮೂಲಗಳು ಮಿತವಾಗಿರುವುದರಿಂದ, ಬಯಸುವ ಎಲ್ಲ ವಸ್ತುಗಳನ್ನು ಪಡೆಯು ವುದು ಸಾಧ್ಯವಿಲ್ಲ. ಆದ್ದರಿಂದ ಒಂದು ವಸ್ತುವನ್ನು ಪಡೆಯಬೇಕಾದರೆ ಇನ್ನೊಂದನ್ನು ಬಿಡಬೇಕಾಗುತ್ತದೆ. ಒಂದು ವಸ್ತುವನ್ನು ಬಿಟ್ಟು ಬೇರೊಂದನ್ನೇ ಆಯ್ಕೆ ಮಾಡಿ ಕೊಂಡ ವ್ಯಕ್ತಿಯು ವಾಸ್ತವವಾಗಿ ಅದನ್ನು ತ್ಯಾಗ ಮಾಡಿದಂತಾಗುತ್ತದೆ. ಈ ತ್ಯಾಗವೇ ಆ ವಸ್ತುವಿನ ಯಥಾರ್ಥ ವೆಚ್ಚ.

ಈ ವೆಚ್ಚದ ವಿವರಣೆಯನ್ನು ಅಮೆರಿಕಾದ ಅರ್ಥಶಾಸ್ತ್ರಜ್ಞರಾದ **ದೇವನ್ ಪೋರ್ಟ್** ಹೀಗೆ ಕೊಟ್ಟಿದ್ದಾನೆ. ಒಬ್ಬ ಹುಡುಗಿಯ ಬಳಿಯಲ್ಲಿ ಎರಡು ಬಗೆಯ ಹಣ್ಣುಗಳು ಇರುತ್ತವೆ, ಒಬ್ಬ ತುಂಟ ಹುಡುಗನು ಆ ಹಣ್ಣುಗಳನ್ನು ಕಸಿದುಕೊಳ್ಳಲು ಅವಳ ಬೆನ್ನು ಹತ್ತಿದ್ದಾನೆ, ಆಗ ಆ ಹುಡುಗಿಗೆ ತನ್ನ ಬಳಿ ಇರುವ ಯಾವುದಾದರೂ ಒಂದು ಹಣ್ಣನ್ನು ಚಲ್ಲಿ, ಇನ್ನೊಂದು ಹಣ್ಣಿನೊಂದಿಗೆ ಓಡಿಹೋಗುತ್ತಾಳೆ. ಇದರಿಂದ ಅವಳಿಗೆ ಕನಿಷ್ಟಪಕ್ಷ ಒಂದು ಹಣ್ಣಾದರೂ ಉಳಿಯುತ್ತದೆ. ಅವಳು ಒಂದು ಹಣ್ಣನ್ನು ಪಡೆಯಲು ಇನ್ನೊಂದು ಹಣ್ಣನ್ನು ತ್ಯಾಗಮಾಡಬೇಕಾಗುತ್ತದೆ. ಅನುವು ವೆಚ್ಚದ ನಿಯಮವು ಎಲ್ಲ ಬಗೆಯ ಆಧುನಿಕ ಉತ್ಪಾದನಾ ವಿಧಾನಗಳಿಗೆ ಅನ್ವಯಿಸುತ್ತದೆ. ಈ ನಿಯಮವನ್ನು ಎಲ್ಲ ಅರ್ಥಶಾಸ್ತ್ರಜ್ಞರು ನಾನಾ ಉಪಯೋಗಗಳಿಗೆ ಬರುವ ಆರ್ಥಿಕ ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಹೆಚ್ಚಾಗಿ ಬಳಸಿದ್ದಾರೆ. ಇಂದಿನ ಆಧುನಿಕ ಯುಗ ದಲ್ಲಿ ಉತ್ಪಾದನಾಂಶಗಳು ವಿರಳವಾಗಿರುವುದರಿಂದ, ಎಲ್ಲ ಉದ್ದಿಮೆಗಳು ಅವುಗಳ ಅಗತ್ಯಗಳಿಗೆ ಬೇಕಾದಷ್ಟು ಪ್ರಮಾಣದಲ್ಲಿ ಉತ್ಪಾದನಾಂಶಗಳನ್ನು ಪಡೆಯಲಾಗುವುದಿಲ್ಲ. ಕೆಲವು ಉದ್ದಿಮೆಗಳು ಅವುಗಳ ಅಗತ್ಯಕ್ಕಿಂತ ಅರ್ಧದಷ್ಟು ಅಂಶಗಳನ್ನು ಹೊಂದಿದರೆ, ಕೆಲವು ಉದ್ದಿಮೆಗಳು, ಉತ್ಪಾದನಾಂಶಗಳನ್ನು ಪಡೆಯದೆಯೇ ಇರಬಹುದು. ಇಂತಹ ಸಂದರ್ಭಗಳಲ್ಲಿ ನಮಗೆ ಅವಶ್ಯಕತೆ ಇರುವ ಉತ್ಪಾದನಾಂಶವನ್ನು ಅದರ ಮೊದಲನೆಯ ಬಳಕೆಯಿಂದ ನಮ್ಮಲ್ಲಿಗೆ ವರ್ಗಾಯಿಸಿಕೊಳ್ಳಲು ಅದಕ್ಕೆ ತಕ್ಕ ಬೆಲೆಯನ್ನು ಪಾವತಿಮಾಡ ಬೇಕು. ಈ ರೀತಿ ಕೊಡುವ ಬೆಲೆಯೇ ಅನುವು ವೆಚ್ಚ ಅಥವಾ ವರ್ಗಾವಣೆಯವೆಚ್ಚ.

ಒಂದು ಭೂಮಿಯನ್ನು ಉಳುಮೆ ಮಾಡಬೇಕಾಗಿದೆ ಎಂದು ಭಾವಿಸೋಣ. ಆ ಭೂಮಿಯನ್ನು ಉಳುಮೆ ಮಾಡುವುದರಿಂದ ವರ್ಷಕ್ಕೆ 500 ರೂಗಳ ಆದಾಯ

ಬರಬಹುದು. ಆ ಭೂಮಿಯನ್ನು ಕಾರ್ಖಾನೆ ನಿರ್ಮಿಸಲು ತೆಗೆದುಕೊಂಡರೆ ಕಾರ್ಖಾನೆಯ ಮಾಲಿಕ ಭೂಮಿಯ ಒಡೆಯನಿಗೆ ಕನಿಷ್ಟ ಪಕ್ಷ 500 ರೂಗಳನ್ನು ಮತ್ತು ಅದಕ್ಕಿಂತ ಹೆಚ್ಚು ಹಣವನ್ನು ಪ್ರತಿ ವರ್ಷ ಕೊಡಬೇಕಾಗುತ್ತದೆ. ಕಾರ್ಖಾನೆಯ ಮಾಲಿಕ 500 ರೂಗಳಿಗಿಂತ ಕಡಮೆ ಹಣ ಕೊಟ್ಟರೆ ಆ ಭೂಮಿಯನ್ನು ಉಳುಮೆಮಾಡುವುದರಿಂದ ಕಾರ್ಖಾನೆಯನ್ನು ನಿರ್ಮಿಸಲು ಪರಿವರ್ತಿಸಲಾಗುವುದಿಲ್ಲ. ಅಂದರೆ ಕೃಷಿಯಿಂದ ಗಳಿಸುವ ಆದಾಯಕ್ಕಿಂತ ಕೊಡುವ ಉತ್ತೇಜಕ ಹಣವೇ ಅನುವು ವೆಚ್ಚ. ಇದನ್ನು ವರ್ಗಾವಣೆಯ ವೆಚ್ಚವೆಂದೂ ಕರೆಯುವರು. ಉದಾಹರಣೆಗೆ ಒಂದು ಎಕರೆ ಭೂಮಿಯಲ್ಲಿ ಜೋಳ ಬೆಳೆದರೆ 1000 ರೂಗಳ ಆದಾಯ, ಗೋಧಿ ಬೆಳೆದರೆ 1200 ರೂಗಳ ಆದಾಯ ಬರುತ್ತದೆ. ಆಗ ಸಾಮಾನ್ಯವಾಗಿ ಗೋಧಿ ಬೆಳೆಯಲು ಇಚ್ಛಿಸುವುದು ಸಹಜ. ಆಗ ಗೋಧಿಯ ಸದವಕಾಶ ವೆಚ್ಚವು ಬಿಟ್ಟುಕೊಟ್ಟ ಜೋಳದ ಬೆಳೆಗೆ ಸಮ. ಅಂದರೆ ಗೋಧಿಯನ್ನು ಬೆಳೆದು ಜೋಳವನ್ನು ಬಿಟ್ಟುಕೊಟ್ಟರೆ, ಆಗ ಗೋಧಿಯ ಸದುಪಯೋಗ ವೆಚ್ಚ ವರ್ಗಾವಣೆಯ ವೆಚ್ಚವಾಗುತ್ತದೆ.

ಇತ್ತೀಚೆಗೆ ಉತ್ಪಾದನಾ ಕ್ಷೇತ್ರದಲ್ಲಿ ಅನುವು ವೆಚ್ಚ ಹಿರಿಯ ಪಾತ್ರವನ್ನು ವಹಿಸುತ್ತಿದೆ. ಏಕೆಂದರೆ ವಸ್ತುಗಳನ್ನು ಉತ್ಪಾದಿಸಲು ಅತ್ಯಾವಶ್ಯಕವಾಗಿ ಉತ್ಪಾದನಾಂಶಗಳಾದ ಭೂಮಿ, ಕಾರ್ಮಿಕರು, ಬಂಡವಾಳ, ಕಚ್ಚಾಮಾಲು, ಯಂತ್ರೋಪಕರಣಗಳು ಬೇಕಾಗುತ್ತವೆ. ಇವು ನಮಗೆ ಹೇರಳವಾಗಿ ಸಿಗುವುದಿಲ್ಲ. ಅವುಗಳ ಪೂರೈಕೆಯು ಯಾವಾಗಲೂ ಒಂದು ಮಿತಿಗೆ ಒಳಪಟ್ಟಿರುತ್ತದೆ. ಆದರೆ ಈ ಅಂಶಗಳನ್ನು ಅನೇಕ ವಸ್ತುಗಳ ಉತ್ಪಾದನೆಯಲ್ಲಿ ಬಳಸಬಹುದು. ಆದರೆ ಅವುಗಳ ಪೂರೈಕೆಯು ಮಿತವಾಗಿರುವುದರಿಂದ ಒಂದು ವಸ್ತುವಿನ ಉತ್ಪಾದನೆಗೆ ಕೆಲವು ಅಂಶಗಳನ್ನು ಬಳಸಿದರೆ ಮತ್ತೊಂದು ವಸ್ತುವಿನ ಉತ್ಪಾದನೆಗೆ ಅವು ಲಭ್ಯವಾಗುವುದಿಲ್ಲ. ಅಂದರೆ ಉತ್ಪಾದನಾಂಶಗಳು ವಿರಳವಾಗಿರುವುದರಿಂದ ಯಾವುದೇ ವಸ್ತುವನ್ನು ಉತ್ಪಾದಿಸಬೇಕಾದರೂ ಅದಕ್ಕೆ ಅವಶ್ಯವಾದ ಉತ್ಪಾದನಾ ಅಂಶವನ್ನು ಬೇರೊಂದು ಅವಕಾಶದಿಂದ ಪಡೆಯಬೇಕಾಗುತ್ತದೆ. ಬಳಕೆದಾರರು ಒಂದು ವಸ್ತುವಿಗೆ ಒಂದು ಬೆಲೆ ಕೊಟ್ಟುಕೊಳ್ಳಲು ಸಿದ್ಧರಾಗಿರುವವರೆಗೆ ಮಾತ್ರ ಆ ಬೆಲೆಯ ಮಟ್ಟಕ್ಕೆ ಉತ್ಪಾದನಾಂಶಗಳನ್ನು ಕೊಳ್ಳಲು ಉತ್ಪಾದಕರು ಸಿದ್ಧರಾಗಿರುತ್ತಾರೆ. ಹೀಗೆ ಒಂದು ವಸ್ತು ಬಳಕೆದಾರನ ಹಂತದಲ್ಲಿ ನಿರ್ಣಯವಾಗುವ ಅನುವು ವೆಚ್ಚವು ಅರ್ಥಶಾಸ್ತ್ರದಲ್ಲಿ ಬಹಳ ಪ್ರಮುಖ ಸ್ಥಾನವನ್ನು ಪಡೆದಿವೆ. ಈ ವೆಚ್ಚದ ಆಧಾರದ ಮೇಲೆ ಉತ್ಪಾದನಾಂಶಗಳ ನಡುವೆ ಅಂತಿಮವಾಗಿ ವರಮಾನದ ಹಂಚಿಕೆಯಾಗುತ್ತದೆ. ಆಧುನಿಕ ಉತ್ಪಾದನೆಯಲ್ಲಿ ಈ ಬಗೆಯ ವೆಚ್ಚಗಳು ವಾಸ್ತವವಾಗಿ ಪ್ರಾಮುಖ್ಯತೆ ಪಡೆದಿವೆ. ಏಕೆಂದರೆ ಉತ್ಪಾದನಾಂಶಗಳಿಗೆ ನಾವು ಸಲ್ಲಿಸುವ ಪ್ರತಿ ಬೆಲೆ ಅನುವು ವೆಚ್ಚವನ್ನೂ ಹೊಂದಿರುತ್ತದೆ.

ಘಟಕದ ಸಮತೋಲನ ಸ್ಥಿತಿ

ಪ್ರತಿಯೊಂದು ಉದ್ದಿಮೆಯಲ್ಲಿ ಅನೇಕ ಘಟಕಗಳು ಇರುತ್ತವೆ. ಪ್ರತಿಯೊಂದು ಘಟಕವೂ ವಸ್ತುಗಳನ್ನು ಉತ್ಪಾದಿಸುವಲ್ಲಿ ತಲ್ಲೀನವಾಗಿರುವುದು. ಯಾವುದೇ ಒಂದು ಘಟಕ ಹೆಚ್ಚು ಲಾಭವನ್ನು ಪಡೆಯುವ ಸ್ಥಿತಿಯಲ್ಲಿ ಇದ್ದರೆ ಆಗ ಆ ಘಟಕವನ್ನು ಸಮತೋಲನಸ್ಥಿತಿಯಲ್ಲಿದೆ ಎನ್ನುತ್ತೇವೆ. ಆ ಘಟಕವು ಉತ್ಪಾದನೆಯನ್ನು ಹೆಚ್ಚು ಮಾಡಿದರೆ ಕಡಮೆ ಲಾಭ, ಉತ್ಪಾದನೆಯನ್ನು ಕಡಮೆ ಮಾಡಿದರೂ ಲಾಭ ಕಡಮೆ ಯಾಗಿ ಇರುತ್ತದೆ. ಅಂದರೆ ಹೆಚ್ಚು ಅಥವಾ ಕಡಮೆಯಾಗಿಯೂ ಉತ್ಪಾದಿಸಬಾರದು. ಇಂತಹ ಸ್ಥಿತಿಯನ್ನು ಘಟಕವು ಮುಟ್ಟಿದರೆ ಆಗ ಆ ಘಟಕವು ಸಮತೋಲನ ಸ್ಥಿತಿ ಯಲ್ಲಿರುತ್ತದೆ. ಪ್ರತಿಯೊಂದು ಘಟಕವೂ ಲಾಭವನ್ನು ಪಡೆಯಲು ವಸ್ತುಗಳನ್ನು ಉತ್ಪಾದಿಸುತ್ತಿರುತ್ತದೆ. ಆದರೆ ಆ ಘಟಕಕ್ಕೆ ಸಂದಾಯವಾಗುವ ಲಾಭವು ಉತ್ಪಾದನಾ ವೆಚ್ಚ ಹಾಗೂ ಉತ್ಪಾದಿಸಿದ ವಸ್ತುವನ್ನು ಮಾರಾಟ ಮಾಡುವುದರಿಂದ ಬರುವ ಆದಾಯವನ್ನೂ ಅವಲಂಬಿಸಿರುತ್ತದೆ. ಉತ್ಪಾದನೆಯ ವೆಚ್ಚ ಅತಿ ಕಡಮೆ ಇದ್ದು, ಬರುವ ಆದಾಯವು ಅತಿ ಹೆಚ್ಚು ಇದ್ದರೆ ಘಟಕಕ್ಕೆ ಅಧಿಕ ಲಾಭ ದೊರೆಯುತ್ತದೆ. ಬಳಕೆದಾರರು ವಸ್ತುಗಳಿಗೆ ಕೊಡುವ ಬೆಲೆಯೇ ಉತ್ಪಾದಕರಿಗೆ ಬರುವ ಆದಾಯ. ಇದನ್ನು ತಿಳಿಯಲು ಎರಡು ಬಗೆಯ ಆದಾಯಗಳನ್ನು ಮನನ ಮಾಡಬೇಕು. (i) ಸರಾಸರಿ ಆದಾಯ, (ii) ಸೀಮಾಂತ ಆದಾಯ.

(i) **ಸರಾಸರಿ ಆದಾಯ :** ಸರಾಸರಿ ಆದಾಯವೆಂದರೆ ವಸ್ತುವಿನ ಮಾರಾಟದ ಬೆಲೆ. ಸೀಮಾಂತ ಆದಾಯವು ವಸ್ತುವಿನ ಒಂದು ಹೆಚ್ಚು ಯೂನಿಟ್ಟನ್ನು ಮಾರಾಟ ಮಾಡುವುದರಿಂದ ಬರುವ ಬೆಲೆಯನ್ನು ಸೂಚಿಸುತ್ತದೆ. ಉತ್ಪಾದನೆಯ ವೆಚ್ಚವು ಅತಿ ಕಡಮೆ ಇದ್ದು, ಉತ್ಪನ್ನವು ಅತಿ ಹೆಚ್ಚಿರುವಾಗ ಅದಕ್ಕೆ ಅಧಿಕ ಲಾಭ ದೊರೆಯು ತ್ತದೆ. ಈ ಸ್ಥಿತಿ ಯಾವಾಗ ಉಂಟಾಗುತ್ತದೆ ಎಂಬುದನ್ನು ಸರಾಸರಿ ಆದಾಯ ಮತ್ತು ಸೀಮಾಂತ ಆದಾಯಗಳ ನೆರವಿನಿಂದ ಕಂಡುಹಿಡಿಯಬಹುದು. ವಸ್ತುಗಳನ್ನು ಉತ್ಪಾದಿಸುತ್ತಾ ಹೋದಂತೆಲ್ಲ ಅದರ ಘಟ್ಟವನ್ನು ಮೀರಿದ ಕೂಡಲೇ, ಅಂತಹ ವಸ್ತುಗಳನ್ನು ಮಾರಾಟ ಮಾಡುವುದರಿಂದ ಬರುವ ಆದಾಯವು ಕಡಮೆಯಾಗುತ್ತ ಹೋಗುತ್ತದೆ.

ಈ ಕೋಷ್ಟಕದಿಂದ ಸರಾಸರಿ ಹಾಗೂ ಸೀಮಾಂತ ಆದಾಯಗಳಲ್ಲಿರುವ ಅಂತರ ಮನದಟ್ಟಾಗುತ್ತದೆ. ಸರಾಸರಿ ಆದಾಯ ಆ ವಸ್ತುವಿನ ಒಂದು ಯೂನಿಟ್ ಬೆಲೆ ಯಾಗಿರುತ್ತದೆ.

ಕೋಷ್ಟಕ 9

ಸರಾಸರಿ ಹಾಗೂ ಸೀಮಾಂತ ಆದಾಯಗಳ ವಿವರಣೆ


ಮಾರಾಟವಾದ ಯೂನಿಟ್‌ಗಳು	ಬೆಲೆ ಸರಾಸರಿ ಆದಾಯ	ಒಟ್ಟು ಆದಾಯ	ಸೀಮಾಂತ ಆದಾಯ
1	20	20	—
2	19	38	18
3	18	54	16
4	17	68	14
5	16	80	12
6	**15**	**90**	**10**
7	14	98	8
8	13	104	6
9	12	108	4
10	11	110	2

ಒಟ್ಟು ಆದಾಯ=ಸರಾಸರಿ ಆದಾಯ × ಮಾರಾಟವಾದ ಯೂನಿಟ್‌ಗಳು. ಸರಾಸರಿ ಆದಾಯ 15, ಮಾರಾಟವಾದ ಯೂನಿಟ್‌ಗಳು 6, ಅಂದರೆ ಒಟ್ಟು ಆದಾಯ 15×6=90 ಯೂನಿಟ್‌ಗಳು.

ಸೀಮಾಂತ ಆದಾಯ=ಒಟ್ಟು ಆದಾಯದ ಮುಂದಿನ ಯೂನಿಟ್‌ನ ಮಾರಾಟದಿಂದ ಬರುವ ಉತ್ಪನ್ನ—ಹಿಂದಿನ ಯೂನಿಟ್‌ನ ಮಾರಾಟದಿಂದ ಬಂದ ಉತ್ಪನ್ನ. ಮೂರನೆಯ ಯೂನಿಟ್‌ಅನ್ನು ಮಾರಾಟ ಮಾಡಿದ್ದರಿಂದ ಬಂದಿದ್ದ ಆದಾಯ 54. ಎರಡಗೆ ಯೂನಿಟ್ ಮಾರಾಟ ಮಾಡಿದ್ದರಿಂದ ಬಂದಿದ್ದ ಲಾಭ 38. ಅಂದರೆ 54 – 38 = 66 ಸೀಮ್ಯಾಂತ ಆದಾಯ. ಒಟ್ಟು ಆದಾಯವು ಅಧಿಕಗೊಂಡಂತೆಲ್ಲ ಸೀಮಾಂತ ಆದಾಯವು ಕಡಮೆಯಾಗುತ್ತ ಹೋಗುವುದು. ಹಾಗೆಯೇ ಸರಾಸರಿ ಆದಾಯವೂ ಸಹ ಇಳಿಯುತ್ತ ಹೋಗುತ್ತದೆ. ಮೇಲಿನ ಉದಾಹರಣೆಯಲ್ಲಿ ಸರಾಸರಿ ಮತ್ತು ಸೀಮಾಂತ ಆದಾಯಗಳೆರಡೂ ಇಳಿಯುತ್ತಿದ್ದು, ಸರಾಸರಿ ಆದಾಯ ಸಾವಕಾಶ

ವಾಗಿಯೂ ಮತ್ತು ಸೀಮಾಂತ ಆದಾಯವು ತ್ವರಿತವಾಗಿಯೂ ಕಡಮೆಯಾಗುತ್ತಿರುವುದನ್ನು ಗಮನಿಸಬಹುದು.

ಸರಾಸರಿ ಹಾಗೂ ಸೀಮಾಂತ ಆದಾಯಗಳನ್ನು ರೇಖಾ ಚಿತ್ರದ ಮೂಲಕವೂ ಆಲೇಖನ 7 ರಲ್ಲಿನಂತೆ ತೋರಿಸಬಹುದು.




ಆಲೇಖನ 7 : ಸರಾಸರಿ ಹಾಗೂ ಸೀಮಾಂತ ಆದಾಯಗಳ ವಿವರ

OX ರೇಖೆಯಲ್ಲಿ ಮಾರುವ ವಸ್ತುಗಳನ್ನೂ, OY ರೇಖೆಯಲ್ಲಿ ಆದಾಯವನ್ನೂ ತೋರಿಸಿದೆ. ಸಾಮಾನ್ಯವಾಗಿ ಸರಾಸರಿ ಆದಾಯ ರೇಖೆ ಮೇಲುಗಡೆ ಇರುತ್ತದೆ. ಸೀಮಾಂತ ಆದಾಯ ರೇಖೆಯು ಸರಾಸರಿ ರೇಖೆಯು ಕೆಳಗಡೆ ಇರುತ್ತದೆ. ಅಂದರೆ ಸರಾಸರಿ ಆದಾಯವು ಸೀಮಂತ ಆದಾಯಕ್ಕಿಂತ ಹೆಚ್ಚು ಇರುತ್ತದೆ.

ಘಟಕವು ಸಮತೋಲಸ್ಥಿತಿಯನ್ನು ಯಾವಾಗ ಹೊಂದುವುದು ಎಂಬುದನ್ನು ತಿಳಿದುಕೊಳ್ಳೋಣ. ಘಟಕದ ಸಮತೋಲಸ್ಥಿತಿಯನ್ನು ಎರಡು ವಿಧಗಳಿಂದ ಪಡೆಯಬಹುದು (i) ಒಟ್ಟು ಆದಾಯ ಮತ್ತು ಒಟ್ಟು ಉತ್ಪಾದನೆಯ ಖರ್ಚುಗಳನ್ನು ತೆಗೆದುಕೊಳ್ಳುವುದರಿಂದ ಮತ್ತು (ii) ಸೀಮಾಂತ ಆದಾಯ ಮತ್ತು ಸೀಮಾಂತ ಉತ್ಪಾದನೆಯ ವೆಚ್ಚವನ್ನು ತೆಗೆದುಕೊಳ್ಳುವುದರಿಂದ ಪ್ರತಿಯೊಬ್ಬ ಉತ್ಪಾದಕನೂ ಲಾಭ ಹೆಚ್ಚುವವರೆಗೆ ಉತ್ಪಾದನೆಯನ್ನು ವಿಸ್ತರಿಸುತ್ತಾನೆ. ಅಕಸ್ಮಾತ್ ಹಾನಿ ಉಂಟಾಗುವ ಸಂಭವ ಕಂಡುಬಂದರೆ ಉತ್ಪಾದನೆಯನ್ನು ಕುಗ್ಗಿಸುತ್ತಾನೆ. ಉತ್ಪಾದಕನು ಅಧಿಕ

ಲಾಭ ಪಡೆಯುವಾಗ ಮಾತ್ರ ಘಟಕವು ಸಮತೋಲನಸ್ಥಿತಿಯನ್ನು ಮುಟ್ಟುತ್ತದೆ. ಉತ್ಪಾದನೆಯನ್ನು ಕುಗ್ಗಿಸುವುದರಿಂದ ಅವನ ಲಾಭ ಕಡಮೆಯಾಗುತ್ತದೆ. ಲಾಭವೆಂದರೆ ಉತ್ಪಾದನೆಯ ವೆಚ್ಚಕ್ಕೂ ಮತ್ತು ಮಾರಾಟದಿಂದ ಬರುವ ಆದಾಯಕ್ಕೂ ಇರುವ ವ್ಯತ್ಯಾಸ. ಆದಾಯ ಹೆಚ್ಚಿಗೆ ಇದ್ದು, ಉತ್ಪಾದನೆ ವೆಚ್ಚ ಕಡಮೆ ಇದ್ದಾಗ ಲಾಭವು ಹೆಚ್ಚಿಗೆ ಇರುತ್ತದೆ. ಉತ್ಪಾದನೆಯ ವೆಚ್ಚವು ಉತ್ಪಾದನೆ ಹೆಚ್ಚಾದಂತೆ ಕಡಮೆಯಾಗುತ್ತದೆ ಮತ್ತು ಒಂದು ಘಟ್ಟವನ್ನು ಮೀರಿದ ನಂತರ ಉತ್ಪಾದನೆಯ ವೆಚ್ಚ ಹೆಚ್ಚಾಗುತ್ತದೆ. ವಸ್ತುಗಳು ಮಾರಾಟವಾಗದಿದ್ದಾಗ ಒಟ್ಟು ಆದಾಯ ಶೂನ್ಯವಿರುತ್ತದೆ. ಮಾರಾಟ ಹೆಚ್ಚಿದಂತೆ ಆದಾಯವು ಹೆಚ್ಚುತ್ತ ಹೋಗುತ್ತದೆ. ಅದು ಆ ಘಟ್ಟವನ್ನು ತಲುಪಿದ ನಂತರ ಇಳಿಯುತ್ತಾ ಹೋಗುತ್ತದೆ. ಕೆಳಗಿನ ಚಿತ್ರದಲ್ಲಿ ಒಟ್ಟು ಆದಾಯ ಮತ್ತು ಒಟ್ಟು ಉತ್ಪಾದನಾ ವೆಚ್ಚವನ್ನೂ ಹಾಗೂ ಅಧಿಕಲಾಭ ತರುವ ಉತ್ಪಾದನೆಯನ್ನು ತೋರಿಸಲಾಗಿದೆ.



ಆಲೇಖನ 8 : ಅಧಿಕ ಲಾಭ ತರುವ ಉತ್ಪಾದನೆ ವಿವರ

ಆದಾಯ ರೇಖೆಯು O ನಿಂದ ಹೊರಟು ಮೊದಲು ಏರುತ್ತಲೂ ಅನಂತರ ಇಳಿಮುಖವಾಗಿದೆ. ON′ ಉತ್ಪಾದನೆಯಾಗುವವರೆಗೆ ಉತ್ಪಾದನೆಯ ವೆಚ್ಚವು ಹೆಚ್ಚಿಗೆ ಇರುತ್ತದೆ. ON′ ವರೆಗೆ ಉತ್ಪಾದನೆಯನ್ನು ವಿಸ್ತರಿಸಿದರೆ ಒಟ್ಟು ಆದಾಯ ಕಡಮೆಯಾಗಿ ನಷ್ಟ ಸಂಭವಿಸುತ್ತದೆ. ಆದ್ದರಿಂದ ON ಹಾಗೂ ON′ ಗಳ ಮಧ್ಯೆ ಉತ್ಪಾದನೆಯು ನಿಂತರೆ ಉದ್ದಿಮೆದಾರನಿಗೆ ಹೆಚ್ಚು ಲಾಭ ಸಿಗುವುದು.

ಸೀಮಾಂತ ಆದಾಯ ಮತ್ತು ಸೀಮಾಂತ ವೆಚ್ಚ : ಮೇಲಿನ ಉದಾಹರಣೆಯಿಂದ ತಿಳಿದುಬಂದ ಒಂದು ಅಂಶ ಎಂದರೆ ಯಾವುದೇ ಘಟಕವು ಸಮತೋಲನ ಸ್ಥಿತಿಯನ್ನು ಪಡೆದಿರಬೇಕಾದರೆ ಆ ಘಟಕವು ಅತ್ಯಧಿಕ ಲಾಭವನ್ನು ಪಡೆಯುತ್ತಿರಬೇಕು. ಅಂದರೆ ಅತ್ಯಧಿಕ ಲಾಭವನ್ನು ಪಡೆಯುವಾಗ ಘಟಕವು ಸಮತೋಲ ಸ್ಥಿತಿಯಲ್ಲಿರುತ್ತದೆ. ಉತ್ಪಾದನೆಯನ್ನು ವಿಸ್ತರಿಸುವುದರಿಂದ ಬರುವ ಆದಾಯವು ಉತ್ಪಾದನೆಯ ವೆಚ್ಚಕ್ಕಿಂತ ಕಡಮೆ ಇರುವವರೆಗೆ ಉತ್ಪಾದನೆಯನ್ನು ವಿಸ್ತರಿಸುವುದು ಲಾಭದಾಯಕ. ಸೀಮಾಂತ ಉತ್ಪಾದನೆಯ ವೆಚ್ಚ ಮತ್ತು ಸೀಮಾಂತ ಆದಾಯಗಳು ಸಮನಾದಾಗ (MC=MR) ಘಟಕವು ಸಮತೋಲ ಸ್ಥಿತಿಯನ್ನು ಮುಟ್ಟುತ್ತದೆ.

ಘಟಕವು ಸಮತೋಲಸ್ಥಿತಿಯನ್ನು ತಲಪಲು ಸೀಮಿತ ವೆಚ್ಚ ಹಾಗೂ ಸೀಮಿತ ಆದಾಯಗಳು ಸಮನಾಗಿರಬೇಕು. ಮುಂದೆ, ಸೀಮಿತ ವೆಚ್ಚದ ರೇಖೆಯು ಸೀಮಾಂತ. ಆದಾಯದ ರೇಖೆಯನ್ನು ಕೆಳಗಿನಿಂದ ಛೇದಿಸಿಕೊಂಡು ಹೋಗಬೇಕು. ಛೇದವಾಗದಿದ್ದರೆ ಘಟಕ ಸಮತೋಲಸ್ಥಿತಿಯನ್ನು ಮುಟ್ಟಿರುವುದಿಲ್ಲ.

ಒಂದು ಘಟಕದ ಸಮತೋಲನ ಸ್ಥಿತಿಯನ್ನು ನಿರ್ಧರಿಸಲು ಎರಡು ಅಂಶಗಳು ಮುಖ್ಯ. ಅವುಗಳೆಂದರೆ

(i) ಸೀಮಾಂತ ವೆಚ್ಚ=ಸೀಮಾಂತ ಆದಾಯ (MC—MR)

(ii) ಸೀಮಾಂತ ವೆಚ್ಚದ ರೇಖೆಯು ಸೀಮಾಂತ ಆದಾಯ ರೇಖೆಯನ್ನು ಕೆಳಗಿನಿಂದ ಛೇದಿಸಬೇಕು.

ಈ ಎರಡೂ ಅಂಶಗಳು ಘಟಕದ ಸಮತೋಲನ ಸ್ಥಿತಿಯನ್ನು ನಿರ್ಧರಿಸುತ್ತವೆ.

ಪ್ರಮಾಣ ಮಿತವ್ಯಯಗಳು

ಉತ್ಪಾದನೆಯ ಪ್ರಮಾಣ ಉತ್ಪಾದನೆಯ ವೆಚ್ಚವನ್ನು ನಿರ್ಧರಿಸುತ್ತವೆ. ಉತ್ಪಾದನೆಯ ವೆಚ್ಚ ಹೆಚ್ಚಾದರೆ ಲಾಭ ಕಡಮೆಯಾಗುತ್ತದೆ. ಆದ್ದರಿಂದ ಪ್ರಾರಂಭಿಸುವ ಉದ್ದಿಮೆಯು ಸಣ್ಣ ಪ್ರಮಾಣದ್ದೋ ದೊಡ್ಡ ಪ್ರಮಾಣದ್ದೋ ಎಂಬುದನ್ನು ನಿರ್ಧರಿಸಿಕೊಳ್ಳುವುದು ಅವಶ್ಯ. ಎಲ್ಲ ಉದ್ದಿಮೆಗಳನ್ನು ಬೃಹತ್ (ದೊಡ್ಡ) ಪ್ರಮಾಣದಲ್ಲಿ ಸಂಘಟಿಸಲು ಸಾಧ್ಯವಾಗುವುದಿಲ್ಲ. ದೊಡ್ಡ ಪ್ರಮಾಣದ ಉದ್ದಿಮೆಗಳಿಗೆ ಹೆಚ್ಚು ಬಂಡವಾಳ ಅತ್ಯಾವಶ್ಯಕ. ಅಂತೆಯೇ ಎಲ್ಲ ಉದ್ದಿಮೆಗಳನ್ನೂ ಸಣ್ಣ ಪ್ರಮಾಣದಲ್ಲಿ ಸಂಘಟಿಸಲೂ ಆಗುವುದಿಲ್ಲ. ಇವೆರಡೂ ಒಂದಕ್ಕೊಂದು ಪೂರಕಗಳು. ಈಗ ಎರಡೂ ಬಗೆಯ ಉದ್ದಿಮೆಗಳು ಕಾರ್ಯಾಚರಣೆಯಲ್ಲಿವೆ. ವಸ್ತುಗಳನ್ನು ಉತ್ಪಾದಿಸಿ ಬಳಕೆದಾರರಿಗೆ ಒದಗಿಸುವುದರಲ್ಲಿ ಸಣ್ಣ ಹಾಗೂ

ಬೃಹತ್‌ಪ್ರಮಾಣದ ಉದ್ದಿಮೆಗಳು ಮಹತ್ವದ ಪಾತ್ರವಹಿಸುತ್ತವೆ. ಆದರೆ ಲಾಭದ ದೃಷ್ಟಿಯಿಂದ ಸಣ್ಣ ಪ್ರಮಾಣದ ಉದ್ದಿಮೆಗಳಿಗಿಂತಲೂ ಬೃಹತ್ ಪ್ರಮಾಣದ ಉದ್ದಿಮೆಗಳು ಅನೇಕ ಲಾಭಗಳನ್ನು ಒದಗಿಸುತ್ತವೆ. ಸಾಮಾನ್ಯವಾಗಿ ಬೃಹತ್ ಪ್ರಮಾಣದಲ್ಲಿ ಉತ್ಪಾದನೆಯನ್ನು ಕೈಕೊಂಡಾಗ ಉತ್ಪಾದನೆಯ ವೆಚ್ಚ ಕಡಮೆ ಇರುತ್ತದೆ. ಅವುಗಳಿಂದ ಹೆಚ್ಚು ಲಾಭ ಸಿಗುವ ಸಂಭವವುಂಟು. ಆದ್ದರಿಂದ ಬೃಹತ್ ಪ್ರಮಾಣದಲ್ಲಿ ಉದ್ದಿಮೆಗಳು ಸ್ಥಾಪಿಸಲ್ಪಡುತ್ತವೆ. ಬೃಹತ್ ಪ್ರಮಾಣದ ಉದ್ದಿಮೆಗಳೆಂದರೆ ಕಬ್ಬಿಣ ಮತ್ತು ಉಕ್ಕು, ಸಕ್ಕರೆ, ಬಟ್ಟೆಯ ಉದ್ದಿಮೆ, ವಿಮಾನ ತಯಾರಿಕೆ ಇತ್ಯಾದಿ.

ಆಧುನಿಕ ಬೃಹತ್ ಪ್ರಮಾಣದ ಉತ್ಪಾದನೆಯಲ್ಲಿ ದೊರೆಯುವ ಪ್ರಯೋಜನಗಳು (i) ಆಂತರಿಕ ಪ್ರಯೋಜನಗಳು ಹಾಗೂ (ii) ಬಾಹ್ಯ ಪ್ರಯೋಜನ ಎಂದು ಎರಡು ತೆರನಾಗಿವೆ.

(i) **ಆಂತರಿಕ ಪ್ರಯೋಜನಗಳು :** ಆಂತರಿಕ ಪ್ರಯೋಜನಗಳನ್ನು ಆಂತರಿಕ ಮಿತವ್ಯಯಗಳು ಎಂಬುದಾಗಿ ಕರೆಯುವುದು ರೂಢಿ. ಇಂದಿನ ಯಂತ್ರ ಯುಗದಲ್ಲಿ ಬೃಹತ್ ಪ್ರಮಾಣದ ಉತ್ಪಾದನೆಯು ಸಾಮಾನ್ಯವಾಗಿದೆ. ಬೃಹತ್ ಪ್ರಮಾಣದ ಉದ್ದಿಮೆಯು ತನ್ನ ಆಂತರಿಕ ಆಡಳಿತವನ್ನು ಅಥವಾ ವ್ಯವಹಾರವನ್ನು ಸುವ್ಯವಸ್ಥಿತಗೊಳಿಸಿ ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸಿದರೆ ಕೆಲವೊಂದು ಪ್ರಯೋಜನಗಳು ದೊರೆಯುತ್ತದೆ. ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸುವುದರಿಂದ ಉತ್ಪಾದನಾ ವೆಚ್ಚವು ಕಡಮೆಯಾಗಂತ್ತದೆ. ಉತ್ಪಾದಿಸಲ್ಪಟ್ಟ ವಸ್ತುಗಳ ಗುಣಮಟ್ಟ ಸುಧಾರಿಸುತ್ತದೆ. ಅಂದರೆ ಉತ್ಪಾದನೆಯ ಪ್ರಮಾಣ ಹೆಚ್ಚಿದಂತೆ ಉದ್ದಿಮೆಯು ಹೆಚ್ಚು ಲಾಭಗಳಿಸಲು ಶಕ್ಯವಾಗುತ್ತದೆ. ಈ ಲಾಭಗಳು ಅಥವಾ ಮಿತವ್ಯಯಗಳು ಕೇವಲ ಬೃಹತ್ ಪ್ರಮಾಣದ ಉದ್ದಿಮೆಗೆ ಮಾತ್ರ ಸೀಮಿತವಾಗಿರುತ್ತವೆ. ಸಣ್ಣ ಪ್ರಮಾಣದ ಉತ್ಪಾದನೆಯಲ್ಲಿ ಈ ಮಿತವ್ಯಯಗಳು ಲಭಿಸುವುದಿಲ್ಲ.

ಆಂತರಿಕ ಪ್ರಯೋಜನಗಳನ್ನು ಐದು ಭಾಗಗಳಾಗಿ ವಿಂಗಡಿಸಬಹುದು. ಇವುಗಳಿಗೆ ಮಿತವ್ಯಯಗಳೆಂದೂ ಹೇಳಬಹುದು.

(i) ತಾಂತ್ರಿಕ ಮಿತವ್ಯಯಗಳು

(ii) ಆಡಳಿತ ಮಿತವ್ಯಯಗಳು

(iii) ವಾಣಿಜ್ಯ ಮಿತವ್ಯಯಗಳು

(iv) ಹಣಕಾಸಿನ ಮಿತವ್ಯಯಗಳು ಹಾಗೂ

(v) ಅನಿಶ್ಚಿತತೆಯ ನಷ್ಟಗಳನ್ನು ಹೊರುವ ಮಿತವ್ಯಯಗಳು.

(i) **ತಾಂತ್ರಿಕ ಮಿತವ್ಯಯಗಳು :** ಬೃಹತ್ ಪ್ರಮಾಣದ ಉದ್ದಿಮೆಗಳಲ್ಲಿ ಹೆಚ್ಚು ಬಂಡವಾಳವನ್ನು ಉದ್ದಿಮೆಗಳಲ್ಲಿ ತೊಡಗಿಸಲಾಗುತ್ತದೆ. ಸಂಘಟನಾಕಾರರು ಅವರ ಬಳಿ ಸಾಕಷ್ಟು ಬಂಡವಾಳವಿರುವುದರಿಂದ ಆಧುನಿಕ ಯಂತ್ರೋಪಕರಣಗಳನ್ನು ಕೊಳ್ಳುತ್ತಾರೆ. ಹೊಸ ಯಂತ್ರಗಳನ್ನು ಅನುಷ್ಠಾನಕ್ಕೆ ತರುವುದರಿಂದ ಉತ್ಪಾದನೆಯು ಹೆಚ್ಚುವುದಲ್ಲದೆ ಉತ್ಪಾದನೆಯ ವೆಚ್ಚವು ಕಡಮೆಯಾಗುತ್ತದೆ. ಶ್ರಮವಿಭಜನೆಗೆ ಅವಕಾಶವಿರುವುದರಿಂದ ಹೆಚ್ಚು ಮಿತವ್ಯಯ ಸಾಧಿಸಬಹುದು. ವಸ್ತುಗಳ ಬೆಲೆ ಹಾಗೂ ಗುಣಮಟ್ಟವು ಬಳಕೆದಾರರಿಗೆ ತೃಪ್ತಿಯಾದರೆ, ವಸ್ತುಗಳ ಮಾರಾಟ ಹೆಚ್ಚಿ ಅಧಿಕ ಲಾಭ ದೊರೆಯುವುದು. ಬೃಹತ್‌ಪ್ರಮಾಣದ ಉದ್ದಿಮೆಗಳಲ್ಲಿ ಪ್ರತಿಯೊಂದು ಕೆಲಸವನ್ನೂ ಪ್ರತ್ಯೇಕ ಯಾಂತ್ರಿಕ ವಿಧಾನದಿಂದ ಮಾಡಲಾಗುವುದು. ಉತ್ಪಾದನೆಯ ವಿವಿಧ ಭಾಗಗಳನ್ನು ಅದು ಪಡೆದಿರುತ್ತದೆ. ಕಚ್ಚಾ ಮಾಲನ್ನು ಸಾಗಿಸುವುದರಿಂದ ಹಿಡಿದು, ಸಿದ್ಧಪಡಿಸಿದ ವಸ್ತುಗಳನ್ನು ಮಾರುಕಟ್ಟೆಗಳಿಗೆ ಕಳುಹಿಸುವ ಎಲ್ಲ ಏರ್ಪಾಡು ಗಳನ್ನು ಮಾಡಲಾಗುವುದು. ಸಣ್ಣ ಪ್ರಮಾಣದ ಉತ್ಪಾದನೆಯಲ್ಲಿ ಈ ರೀತಿಯ ಮಿತವ್ಯಯಗಳು ದೊರೆಯುವುದಿಲ್ಲ.

(ii) **ಆಡಳಿತ ಮಿತವ್ಯಯಗಳು :** ಬೃಹತ್ ಪ್ರಮಾಣದ ಉದ್ದಿಮೆಗಳಲ್ಲಿ ಉತ್ಪಾದನಾಕಾರ್ಯ ಸುಗಮವಾಗಿ ಸಾಗಲು ಉದ್ದಿಮೆಯನ್ನು ಅನೇಕ ವಿಭಾಗಗಳಾಗಿ ವಿಂಗಡಿಸಲಾಗಿರುತ್ತದೆ. ಪ್ರತಿಯೊಂದು ವಿಭಾಗಕ್ಕೆ ನಿಪುಣರಾದ ಕೆಲಸಗಾರರನ್ನು ನೇಮಿಸಲಾಗಿರುತ್ತದೆ. ಉದಾಹರಣೆಗೆ ಉತ್ಪಾದನಾ ವಿಭಾಗ, ಖರೀದಿ ವಿಭಾಗ, ಲೆಕ್ಕಪತ್ರ ವಿಭಾಗ, ಜಾಹೀರಾತು ವಿಭಾಗ ಇತ್ಯಾದಿ. ಇವೆಲ್ಲವುಗಳ ಮೇಲೆ ಮೇಲ್ವಿಚಾರಣೆ ವಹಿಸಲು ಒಬ್ಬ ಮುಖ್ಯ ಆಡಳಿತಗಾರನು ನೇಮಕವಾಗಿರುತ್ತಾನೆ. ಈ ಎಲ್ಲ ವಿಭಾಗ ಗಳಿಗೆ ಮೇಲ್ವಿಚಾರಣೆ ನೋಡಿಕೊಳ್ಳಲು ತಜ್ಞ ವ್ಯವಸ್ಥಾಪಕರನ್ನು ನೇಮಿಸ ಲಾಗಿರುತ್ತದೆ. ಇದರಿಂದ ಉತ್ಪಾದನೆಯಲ್ಲಿ ಹೆಚ್ಚಳವುಂಟಾಗಿ, ಉತ್ಪಾದನೆಯ ವೆಚ್ಚ ಕಡಿಮೆಯಾಗುವುದಲ್ಲದೆ ಒಳ್ಳೆಯ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಲಾಗುತ್ತದೆ. ದಕ್ಷ ಆಡಳಿತದಿಂದ ವೇಳೆಯೂ ಸಹ ಅಪವ್ಯಯವಾಗುವುದಿಲ್ಲ. ಕಚ್ಚಾ ಸರಕುಗಳ ದುರುಪಯೋಗವಾಗುವುದಿಲ್ಲ. ಕಾರ್ಮಿಕರ ಮೇಲೆ ಆಯಾ ವಿಭಾಗದ ಅಧಿಕಾರಿಯ ಸಂಪೂರ್ಣ ನಿಯಂತ್ರಣವಿರುವುದರಿಂದ ಮುಷ್ಕರಗಳುಂಟಾಗುವುದಿಲ್ಲ. ಅವರಿಂದ ಪೂರ್ಣಕೆಲಸವನ್ನು ಪಡೆಯಬಹುದು. ಯಂತ್ರೋಪಕರಣಗಳು ಹಾಳಾಗುವುದಿಲ್ಲ. ಇದರಿಂದ ಹೆಚ್ಚು ವಸ್ತುಗಳು ಉತ್ಪಾದಿತಗೊಂಡು ಮಾರಾಟವಾಗಿ ಉದ್ದಿಮೆಯು ಲಾಭವನ್ನು ಪಡೆಯುವುದು.

(iii) **ವಾಣಿಜ್ಯ ಮಿತವ್ಯಯಗಳು :** ಬೃಹತ್ ಪ್ರಮಾಣದ ಉದ್ದಿಮೆಯು ತನಗೆ ಬೇಕಾದ ಕಚ್ಚಾ ಪದಾರ್ಥಗಳನ್ನು ಬೃಹತ್ ಪ್ರಮಾಣದಲ್ಲಿ ಕೊಂಡುಕೊಳ್ಳುವುದು. ಈ ಸಂಸ್ಥೆಯು ತನ್ನ ಎಲ್ಲ ವ್ಯವಹಾರವನ್ನು ಬೃಹತ್ ಪ್ರಮಾಣದಲ್ಲಿ ಮಾಡುವುದರಿಂದ

ಆದಕ್ಕೆ ಅನೇಕ ಲಾಭಗಳು ದೊರೆಯುತ್ತವೆ. ಕಚ್ಚಾ ಪದಾರ್ಥಗಳನ್ನು ಬೃಹತ್ ಪ್ರಮಾಣದಲ್ಲಿ ಕೊಂಡಾಗ ಕಡಮೆ ಬೆಲೆಗೆ ಕಚ್ಚಾ ಮಾಲು ದೊರೆಯುತ್ತವೆ. ಮೇಲಾಗಿ ಕಚ್ಚಾ ಮಾಲನ್ನು ಮಾರಾಟ ಮಾಡುವವರು ದೊಡ್ಡ ಉದ್ದಿಮೆಗೆ ತಮ್ಮಲ್ಲಿರುವ ಮಾಲನ್ನು ಮಾರಾಟಮಾಡಲು ಅಪೇಕ್ಷಿಸುವರು. ಬೃಹತ್ ಪ್ರಮಾಣದಲ್ಲಿ ವ್ಯಾಪಾರ ಮಾಡುವುದರಿಂದ ಸಾರಿಗೆ ವೆಚ್ಚವು ಕೂಡ ಕಡಮೆಯಾಗುವುದು. ಉತ್ಪಾದಿಸಿದ ವಸ್ತುಗಳನ್ನು ಕಡಮೆ ದರದ ಬಾಡಿಗೆಯಲ್ಲಿ ಮಾರುಕಟ್ಟೆಗಳಿಗೆ ಸಾಗಿಸಬಹುದು ಇಂತಹ ಉದ್ದಿಮೆಗಳಿಗೆ ಸಾಲದ ಸೌಲಭ್ಯಗಳು ಹೆಚ್ಚಾಗಿರುತ್ತವೆ. ದೊಡ್ಡ ಉದ್ದಿಮೆ ಗಳಿಗೆ ಬ್ಯಾಂಕುಗಳು, ಸಾಹುಕಾರರು ಸಾಲವನ್ನು ನೀಡುತ್ತಾರೆ. ಏಕೆಂದರೆ ಅವರು ನೀಡಿದ ಸಾಲ ಹಿಂತಿರುಗಿ ಬರುವುದೆಂಬ ಧೈರ್ಯವಿರುತ್ತದೆ. ದೊಡ್ಡ ಕಾರ್ಖಾನೆಗಳು ಸಾಕಷ್ಟು ಹಣವನ್ನು ಸಂಶೋಧನೆಗಾಗಿ ವೆಚ್ಚಮಾಡಿ, ಅದರ ಮೂಲಕ ಉತ್ಪಾದನೆಯ ಹೊಸ ವಿಧಾನಗಳನ್ನು, ವಸ್ತುಗಳ ಗುಣಮಟ್ಟವನ್ನು, ಹೊಸ ನಮೂನೆಯ ವಸ್ತು ಗಳನ್ನು ಹೊಂದುವ ಸಾಧ್ಯತೆಯುಂಟು. ಇದರಿಂದ ಲಾಭ ಸಂಪಾದಿಸಬಹುದು. ತಯಾರಾದ ವಸ್ತುಗಳನ್ನು, ಬೆಲೆಗಳು ಅನುಕೂಲವಾಗಿದ್ದಾಗ ಮಾರಾಟ ಮಾಡ ಬಹುದು. ಜನರಿಗೆ ವಸ್ತುಗಳ ಬಗ್ಗೆ ತಿಳಿವಳಿಕೆ ಮೂಡಿಸುವ ಸಲುವಾಗಿ ಬೃಹತ್ ಪ್ರಮಾಣದ ಉದ್ದಿಮೆಗಳು ಜಾಹಿರಾತುಗಳ ಮೇಲೆ ಹಣವನ್ನು ವೆಚ್ಚ ಮಾಡುತ್ತವೆ. ಅಂದರೆ ದೈನಿಕ ಪತ್ರಿಕೆಗಳ ಮೂಲಕ, ಸಿನಿಮಾ ಸ್ಲೈಡ್‌ಗಳ ಮೂಲಕ, ಜಾಹಿರಾತು ಗಳನ್ನು ನೀಡಿ ಹೆಚ್ಚು ವಸ್ತುಗಳನ್ನು ಮಾರಾಟ ಮಾಡಿ ಲಾಭ ಪಡೆಯುತ್ತವೆ. ಆದರೆ ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಇಂತಹ ಕೆಲಸಗಳನ್ನು ಮಾಡಿ ಲಾಭ ಪಡೆಯಲಾಗು ವುದಿಲ್ಲ, ಅಂದರೆ ವಾಣಿಜ್ಯದ ಮಿತವ್ಯಯಗಳು ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ದೊರೆಯುವುದಲ್ಲ.

(iv) **ಹಣಕಾಸಿನ ಮಿತವ್ಯಯ :** ಹಣಕಾಸಿನ ದೃಷ್ಟಿಯಿಂದ ವಿಚಾರಿಸಿ ದ್ದಾದರೆ, ಬೃಹತ್ ಪ್ರಮಾಣದ ಉದ್ದಿಮೆಗಳಿಗೆ ಹಣಕಾಸಿನ ಅನುಕೂಲತೆಗಳು ಸಾಕಷ್ಟಿರುತ್ತವೆ, ಬೃಹತ್ ಉದ್ದಿಮೆಯು ತನಗೆ ಬೇಕಾಗುವ ಬಂಡವಾಳವನ್ನು ಶೇರುಗಳ ಮೂಲಕ, ಡಿಬೆಂಚರುಗಳ ಮೂಲಕ ಪಡೆಯುತ್ತವೆ. ಬ್ಯಾಂಕುಗಳಿಂದ ಸುಲಭ ಬಡ್ಡಿಯ ದರದಲ್ಲಿ ದೊಡ್ಡ ಮೊತ್ತದ ಸಾಲವನ್ನು ಪಡೆಯುತ್ತವೆ. ಸಾರ್ವ ಜನಿಕರು, ಬ್ಯಾಂಕುಗಳು, ಈ ಉದ್ದಿಮೆಗಳಿಗೆ ಸಾಲಕೊಡಲು ಹಿಂದೆ ಮುಂದೆ ನೋಡು ವುದಿಲ್ಲ. ಏಕೆಂದರೆ ಬೃಹತ್ ಪ್ರಮಾಣದ ಉತ್ಪಾದನಾ ಸಂಸ್ಥೆಗಳು ಸಾಲ ತೀರಿಸುವ ಸಾಮರ್ಥ್ಯ ಹೊಂದಿರುತ್ತವೆ. ಅವು ಉತ್ತಮ ಭದ್ರತೆಯನ್ನು ಒದಗಿಸುತ್ತವೆ. ಸಾಮಾನ್ಯವಾಗಿ ದೊಡ್ಡ ಉದ್ದಿಮೆಗಳ ಪರಿಸ್ಥಿತಿ ಚನ್ನಾಗಿ ಇರುವುದು (ಭದ್ರ ವಾಗಿರುತ್ತವೆ). ಆದರೆ ಈ ಸೌಲಭ್ಯಗಳು ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ದೊರೆಯುವುದಿಲ್ಲ.

(v) **ಅನಿಶ್ಚಿತತೆಯ ನಷ್ಟಗಳನ್ನು ಹೊರುವ ಮಿತವ್ಯಯಗಳು :** ಆಧುನಿಕ ಯುಗದಲ್ಲಿ ವ್ಯವಹಾರವು ಅನಿಶ್ಚತತೆಯಿಂದ ಕೂಡಿದೆ. ಆದರೆ ಬೃಹತ್ ಪ್ರಮಾಣದ ಉದ್ದಿಮೆ, ವ್ಯವಹಾರದಲ್ಲಿ ಉದ್ಭವಿಸಬಹುದಾದ ಅನಿಶ್ಚಿತತೆಯ ನಷ್ಟಗಳನ್ನು ಎದುರಿಸುವ ಶಕ್ತಿ ಪಡೆದಿರುತ್ತದೆ. ಉದ್ದಿಮೆಯು ಎದುರಿಸಬೇಕಾದ ಅನಿಶ್ಚಿತತೆಯ ನಷ್ಟಗಳನ್ನು ಎದುರಿಸುವ ಶಕ್ತಿ ಪಡೆದಿರುತ್ತದೆ. ಉದ್ದಿಮೆಯು ಎದುರಿಸಬೇಕಾದ ಅನಿಶ್ಚತತೆಯ ನಷ್ಟಗಳೆಂದರೆ ಬೆಲೆಗಳಲ್ಲಿಯ ಏರಿಳಿತ, ಬೇಡಿಕೆಯಲ್ಲಿ ವ್ಯತ್ಯಾಸ, ಜನರ ಉಪಭೋಗದಲ್ಲಿ ಉಂಟಾಗುವ ಬದಲಾವಣೆ ಇತ್ಯಾದಿ. ಇವುಗಳಿಂದ ಉದ್ದಿಮೆಯು ನಷ್ಟವನ್ನನುಭವಿಸುವ ಸಂಭವವಿರುತ್ತದೆ. ಉದ್ದಿಮೆ ಉತ್ಪಾದಿಸುವ ವಸ್ತುಗಳಿಗೆ ಬೇಡಿಕೆ ಕಡಮೆಯಾಗಬಹುದು. ಆದರೆ ಬೃಹತ್ ಪ್ರಮಾಣದ ಉದ್ದಿಮೆಯು ಹಲವು ಬಗೆಯ ವಸ್ತುಗಳನ್ನು ತಯಾರಿಸುವುದರಿಂದ, ಅನಿಶ್ಚಿತತೆಯ ನಷ್ಟಗಳನ್ನು ಕಡಮೆಮಾಡಿ ಕೊಳ್ಳಬಹುದು. ಹೇಗೆಂದರೆ ಒಂದು ಮಾರುಕಟ್ಟೆಯಲ್ಲಿ ಬೇಡಿಕೆ ಕುಗ್ಗಿದರೆ, ಆ ವಸ್ತುವನ್ನು ಮತ್ತೊಂದು ಮಾರುಕಟ್ಟೆಗೆ ಸಾಗಿಸಿ ಮಾರಾಟಮಾಡಬಹುದು. ಆದರೆ ಸಣ್ಣ ಪ್ರಮಾಣದ ಉದ್ದಿಮೆಯು ಉತ್ಪಾದಿಸಿದ ವಸ್ತುಗಳಿಗೆ ಬೇಡಿಕೆ ಕಡಮೆಯಾದರೆ ಕೂಡಲೇ ಅದನ್ನು ಮುಚ್ಚುವ ಪರಿಸ್ಥಿತಿ ಉಂಟಾಗುತ್ತದೆ. ಆದರೆ ಬೃಹತ್ ಪ್ರಮಾಣದ ಉದ್ದಿಮೆ ಇಂತಹ ಪರಿಸ್ಥಿತಿಗಳನ್ನು ಎದುರಿಸುವ ಸಾಮರ್ಥ್ಯವನ್ನು ಪಡೆದಿರುತ್ತದೆ.

(vi) **ಬಾಹ್ಯ ಮಿತವ್ಯಯಗಳು :** ಬೃಹತ್ ಪ್ರಮಾಣದ ಉದ್ದಿಮೆಗೆ ಆಂತರಿಕ ಮಿತವ್ಯಯಗಳಲ್ಲದೆ ಬಾಹ್ಯಮಿತವ್ಯಯಗಳು ಸಹ ಲಭ್ಯವಾಗುತ್ತವೆ. ಯಾವುದೇ ಒಂದು ಉದ್ದಿಮೆ ಒಂದು ಪ್ರದೇಶದಲ್ಲಿ ಬೆಳೆದಂತೆಲ್ಲಾ ಅದರ ಸುತ್ತಲೂ ಸಹಾಯಕ ಉದ್ದಿಮೆಗಳು ಅಭಿವೃದ್ಧಿ ಹೊಂದುತ್ತವೆ. ಉದ್ದಿಮೆಯು ಬೆಳೆದಂತೆ ಆ ಪ್ರದೇಶದ ಸಾರಿಗೆ ಸಂಪರ್ಕಗಳು ಹೆಚ್ಚಾಗುತ್ತವೆ. ವಿದ್ಯುಚ್ಛಕ್ತಿಯ ಸೌಲಭ್ಯವು ದೊರೆಯುತ್ತದೆ. ರೈಲು, ರಸ್ತೆ, ಅಂಚೆ ಮತ್ತು ತಂತಿ, ಟೆಲಿಫೋನುಗಳ ಸೌಲಭ್ಯವನ್ನು ಆ ಪ್ರದೇಶವು ಪಡೆಯುತ್ತದೆ, ಅನೇಕ ಬ್ಯಾಂಕುಗಳು ಅಲ್ಲಿ ತಮ್ಮ ಶಾಖೆಗಳನ್ನು ಪ್ರಾರಂಭಿಸಿ ಉದ್ದಿಮೆಯ ಪ್ರಗತಿಗೆ, ಅಭಿವೃದ್ಧಿಗೆ ಬೇಕಾದ ಹಣಕಾಸಿನ ಸೌಲಭ್ಯ ಗಳನ್ನು ಒದಗಿಸುತ್ತವೆ. ನುರಿತ ಕೆಲಸಗಾರರು ಅಲ್ಲಿಗೆ ಬಂದು ಉದ್ಯೋಗಗಳಲ್ಲಿ ತಲ್ಲೀನರಾಗುತ್ತಾರೆ. ಯಂತ್ರಗಳ ಬಿಡಿಭಾಗಗಳು, ಯಂತ್ರಗಳನ್ನು ರಿಪೇರಿ ಮಾಡಲು ಅನೇಕ ಅಂಗಡಿಗಳು ಸ್ಥಾಪಿತವಾಗುತ್ತವೆ. ಉದ್ದಿಮೆಯಿಂದ ಲಭಿಸುವ ಉಪವಸ್ತು ಗಳನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು. ಹೀಗಾಗಿ ಉದ್ದಿಮೆಯ ಅಭಿವೃದ್ಧಿಗೆ ಬೇಕಾದ ಎಲ್ಲ ಸಾಧನಗಳು ಅಲ್ಲಿ ಕೇಂದ್ರೀಕೃತವಾಗುತ್ತವೆ. ಈ ರೀತಿ ಬೃಹತ್ ಪ್ರಮಾಣದ ಉದ್ದಿಮೆಗಳಿಗೆ ಅನೇಕ ಮಿತವ್ಯಯಗಳು ಲಭ್ಯವಾಗುತ್ತವೆ. ಆದಾಗ್ಯೂ ಸಹ ಇತ್ತೀಚೆಗೆ ಸಣ್ಣ ಪ್ರಮಾಣದ ಉದ್ದಿಮೆಗಳು ಹೆಚ್ಚು ಹೆಚ್ಚಾಗಿ ಕಾರ್ಯರೂಪಕ್ಕೆ ಬರುತ್ತವೆ.

ಸಣ್ಣ ಪ್ರಮಾಣದ ಉತ್ಪಾದನೆ : ಆಧುನಿಕ ಯುಗದಲ್ಲಿ ಬೃಹತ್ ಪ್ರಮಾಣದ ಉದ್ದಿಮೆಗಳು ಅನೇಕ ಮಿತವ್ಯಯಗಳನ್ನು ಹೊಂದಿ ಹೆಚ್ಚು ಮಹತ್ವ ಪಡೆದಿದ್ದರೂ ಕೆಲವು ರಾಷ್ಟ್ರಗಳಲ್ಲಿ ಸಣ್ಣ ಪ್ರಮಾಣದ ಉದ್ದಿಮೆಗಳೂ ಸಹ ಬೃಹತ್ ಪ್ರಮಾಣದಷ್ಟೇ ಮಹತ್ವವನ್ನು ಪಡೆದಿದೆ. ಬೃಹತ್ ಪ್ರಮಾಣದ ಉದ್ದಿಮೆಗಳು ಎಲ್ಲ ಬಗೆಯ ವಸ್ತುಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಲಾಗುವುದಿಲ್ಲ. ಉತ್ಪಾದಿಸಿದ ವಸ್ತುಗಳಿಗೆ ಸಾಕಷ್ಟು ಬೇಡಿಕೆಯೂ ಇರುವುದಿಲ್ಲ. ಬೇಡಿಕೆ ಇಲ್ಲದಿದ್ದಾಗ ಬೃಹತ್ ಪ್ರಮಾಣದಲ್ಲಿ ವಸ್ತುಗಳನ್ನು ಉತ್ಪಾದಿಸುವುದು ಲಾಭದಾಯಕವಲ್ಲ. ಇಂತಹ ಪರಿಸ್ಥಿತಿಗಳಲ್ಲಿ ವಸ್ತುಗಳನ್ನು ಕಡಮೆ ಪ್ರಮಾಣದಲ್ಲಿ ಉತ್ಪಾದಿಸಬೇಕಾಗುತ್ತದೆ. ಕೆಲವು ವಸ್ತುಗಳನ್ನು ಕಡಮೆ ಪ್ರಮಾಣದಲ್ಲಿ ಉತ್ಪಾದಿಸುತ್ತಾರೆ. ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಹೆಚ್ಚು ಬಂಡವಾಳದ ಅವಶ್ಯಕತೆಯೂ ಇರುವುದಿಲ್ಲ. ಸಣ್ಣ ಯಂತ್ರಗಳು, ಕಡಮೆ ಬಂಡವಾಳದಿಂದ ಉದ್ದಿಮೆಗಳನ್ನು ಸ್ಥಾಪಿಸಬಹುದು. ನಿರುದ್ಯೋಗಿಗಳಿಗೆ ಇಂತಹ ಉದ್ದಿಮೆಗಳಿಂದ ಕೆಲಸ ದೊರೆಯುತ್ತದೆ. ಸಣ್ಣ ಪ್ರಮಾಣದಲ್ಲಿ ಉತ್ಪಾದಿಸಿದ ವಸ್ತುಗಳಿಗೆ ಸಾಮಾನ್ಯವಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಗಳಿರುವುದಿಲ್ಲ. ಅವುಗಳನ್ನು ಸ್ಥಳೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತಾರೆ. ಭಾರತದಂತಹ ನಿರುದ್ಯೋಗ ಹೆಚ್ಚಿರುವ ರಾಷ್ಟ್ರಗಳಲ್ಲಿ ಸಣ್ಣ ಪ್ರಮಾಣದ ಉದ್ದಿಮೆಗಳಿಂದ ಮಾತ್ರ ನಿರುದ್ಯೋಗ ನಿವಾರಣೆ ಸಾಧ್ಯ.

ಅನುಕೂಲಗಳು : ಸಣ್ಣ ಪ್ರಮಾಣದ ಉದ್ದಿಮೆಯು ಕೆಳಗಿನ ಐದು ಅನುಕೂಲಗಳನ್ನು ಪಡೆದಿದೆ.

(i) **ಸ್ಥಾಪನೆ ಸುಲಭ :** ಸಣ್ಣ ಪ್ರಮಾಣದ ಉದ್ದಿಮೆಗಳನ್ನು ಸ್ಥಾಪಿಸುವುದು ಬಹಳ ಸುಲಭ. ಕಡಮೆ ಬಂಡವಾಳದಿಂದ ಇಂತಹ ಉದ್ದಿಮೆಗಳನ್ನು ಸ್ಥಾಪಿಸಬಹುದು. ಉದಾಹರಣೆಗೆ ಕಿರಾಣಿ ಅಂಗಡಿ, ಜೇನುಸಾಕಾಣಿಕೆ, ಹೇರ್‌ಕಟಿಂಗ್ ಸೆಲೂನ್, ಬಟ್ಟೆ ಹೊಲಿಯುವ ಅಂಗಡಿಗಳು ಇತ್ಯಾದಿ. ಸಾಮಾನ್ಯ ಮನುಷ್ಯನೂ ಸಹ ಸಣ್ಣ ಉದ್ದಿಮೆಯನ್ನು ಸ್ಥಾಪಿಸಿ, ವಸ್ತುಗಳನ್ನು ಉತ್ಪಾದಿಸಿ ತನ್ನ ಜೀವನ ಸಾಗಿಸಬಹುದು. ಅವನಿಗೆ ತೊಂದರೆಯಾದರೆ ಉದ್ದಿಮೆಯನ್ನು ಸುಲಭವಾಗಿ ಮುಚ್ಚಲೂಬಹುದು. ಇಲ್ಲಿ ಉದ್ದಿಮೆದಾರ ಹೆಚ್ಚು ಸ್ವಾತಂತ್ರ್ಯವನ್ನು ಪಡೆದಿರುತ್ತಾನೆ.

(ii) **ದಕ್ಷ ಮೇಲ್ವಿಚಾರಣೆ :** ಸಣ್ಣ ಪ್ರಮಾಣದ ಉದ್ದಿಮೆಯನ್ನು ಒಬ್ಬನೇ ವ್ಯಕ್ತಿಯು ಪ್ರಾರಂಭಿಸಿ, ಅದರ ಕಾರ್ಯಭಾರವನ್ನು ನಿರ್ವಹಿಸುವುದರಿಂದ ಹೆಚ್ಚಿನ ಮೇಲ್ವಿಚಾರಣೆಯ ಅವಶ್ಯಕತೆಕಂಡುಬರುವುದಿಲ್ಲ. ಕೆಲವು ಜನ ಕೆಲಸಗಾರರನ್ನು ತನ್ನ ಸಹಾಯಕ್ಕಾಗಿ ನೇಮಿಸಿಕೊಂಡರೂ ಅವರೊಂದಿಗೆ ತಾನೂ ಇರುವುದರಿಂದ ಮೇಲ್ವಿಚಾರಣೆಯ ಅವಶ್ಯಕತೆ ಕಂಡುಬರುವುದಿಲ್ಲ. ಎಲ್ಲರೂ ಸಂತೃಪ್ತಿಯಿಂದ

ಸಮರ್ಪಕವಾಗಿ ತಮ್ಮ ಕೆಲಸಗಳನ್ನು ನಿರ್ವಹಿಸುತ್ತಾರೆ. ಇಲ್ಲಿ ಕೆಲಸಗಾರರು ಕಡಮೆ ಇರುವುದರಿಂದ ನಿಕಟಸಂಬಂಧ ಏರ್ಪಡುತ್ತದೆ. ಮಾಲೀಕ ಹಾಗೂ ಕೆಲಸಗಾರರ ಎಂಬ ಭೇದಭಾವ ಕಂಡುಬರುವುದಿಲ್ಲ.

(iii) **ಬಳಕೆದಾರರೊಂದಿಗೆ ಸಂಪರ್ಕ :** ಸಣ್ಣ ಪ್ರಮಾಣದ ಉದ್ದಿಮೆಗಳಲ್ಲಿ ಬಳಕೆದಾರರೊಂದಿಗೆ ನೇರ ಸಂಪರ್ಕವನ್ನು ಹೊಂದಲು ಸಾಧ್ಯ. ಬಳಕೆದಾರರ ಮನಸ್ಸನ್ನು ಅರಿತು, ಅವರಿಗೆ ಬೇಕಾದ ವಸ್ತುಗಳನ್ನು ಉತ್ಪಾದಿಸಿ, ಪೂರೈಸಲು ಅನುಕೂಲವಾಗುತ್ತದೆ. ಬಳಕೆದಾರರು ಸ್ವತಃ ಒಂದು ಆರ್ಡರ್ ಕೊಟ್ಟು ವಸ್ತುಗಳನ್ನು ಸಿದ್ಧಪಡಿಸಲು ಹೇಳುವರು. ಅವರ ಅಭಿಲಾಷೆ, ಅಪೇಕ್ಷೆಗಳಿಗೆ ತಕ್ಕಂತೆ ವಸ್ತುಗಳನ್ನು ತಯಾರಿಸಿಕೊಟ್ಟಾಗ ಬಳಕೆದಾರರಿಗೆ ಸಂತೃಪ್ತಿಯಾಗುವುದು.

(iv) **ವ್ಯಕ್ತಿ ಸ್ವಾತಂತ್ರ್ಯ :** ಸಣ್ಣ ಪ್ರಮಾಣದ ಉದ್ದಿಮೆಯಲ್ಲಿ ಉದ್ದಿಮೆದಾರನು ತನ್ನ ಇಚ್ಛೆಯಂತೆ ವ್ಯಾಪಾರಮಾಡುವ ಸ್ವಾತಂತ್ರ್ಯವನ್ನು ಪಡೆದಿರುವನು. ಏಕೆಂದರೆ ಅವನು ಯಾರ ಅಪ್ಪಣೆಯನ್ನು ಪಡೆಯಬೇಕಾಗಿಲ್ಲ. ಈ ಬಗೆಯ ಸ್ವಾತಂತ್ರ್ಯ ಬೃಹತ್ ಪ್ರಮಾಣದ ಉದ್ದಿಮೆಗೆ ಇರುವುದಿಲ್ಲ.

(v) **ಹೊಂದಿಕೊಳ್ಳುವ ಶಕ್ತಿ :** ಸಣ್ಣ ಪ್ರಮಾಣದ ಉದ್ದಿಮೆಗಳು ಬಳಕೆದಾರರ ಬೇಡಿಕೆ ಮತ್ತು ಅಭಿರುಚಿಗಳಿಗನುಸಾರವಾಗಿ ಉತ್ಪಾದಿತ ವಸ್ತುಗಳಲ್ಲಿ ನವೀನತೆಯನ್ನು ತರಬಹುದು. ಸಮಯಕ್ಕೆ ತಕ್ಕಂತೆ ತನ್ನ ವ್ಯವಹಾರಗಳನ್ನು ಬದಲಾಯಿಸಿಕೊಳ್ಳಬಹುದು.

ಅನನುಕೂಲಗಳು : ಸಣ್ಣ ಪ್ರಮಾಣದ ಉದ್ದಿಮೆಯಲ್ಲಿ ಕೆಲವು ಅನನುಕೂಲಗಳು ಇಲ್ಲದಿಲ್ಲ. ಅವುಗಳಲ್ಲಿ ಮುಖ್ಯವಾದವುಗಳೆಂದರೆ :

(i) **ಹೆಚ್ಚಿಗೆ ಬಂಡವಾಳ ತೊಡಗಿಸುವಿಕೆಗೆ ಅವಕಾಶವಿಲ್ಲದಿರುವಿಕೆ :** ಈಗಿನ ಪ್ರಪಂಚದಲ್ಲಿ ಎಲ್ಲ ವಸ್ತುಗಳನ್ನೂ ಸಣ್ಣ ಪ್ರಮಾಣದಲ್ಲಿ ಉತ್ಪಾದಿಸಲಾಗುವುದಿಲ್ಲ. ಮನುಷ್ಯನ ಬಯಕೆಗಳು ದಿನೇ ದಿನೇ ಹೆಚ್ಚುತ್ತಿರುವುದರಿಂದ ಅವನಿಗೆ ಸಾಕಷ್ಟು ಬಗೆಯ ವಸ್ತುಗಳು ಬೇಕಾಗುತ್ತದೆ. ಅವುಗಳನ್ನೆಲ್ಲ ಉತ್ಪಾದಿಸಲು ಸಾಕಷ್ಟು ಬಂಡವಾಳ ಅತ್ಯಾವಶ್ಯಕ. ಆದರೆ ಸಣ್ಣ ಉದ್ದಿಮೆಗಳಲ್ಲಿ ಹೆಚ್ಚು ಬಂಡವಾಳವಿರುವುದಿಲ್ಲ.

(ii) **ಶ್ರಮ ವಿಭಜನೆಗೆ ಅವಕಾಶವಿಲ್ಲದಿರುವಿಕೆ :** ಸಣ್ಣ ಪ್ರಮಾಣದ ಉದ್ದಿಮೆಗಳಲ್ಲಿ ಶ್ರಮ ವಿಭಜನೆಗೆ ಪ್ರವೇಶವೇ ಇಲ್ಲ. ಇಲ್ಲಿ ಯಂತ್ರಗಳ ಬಳಕೆಯು ಬಹಳ ಕಡಮೆ. ಭಾರೀ ಯಂತ್ರಗಳಿಂದ ದೊರಕಬಹುದಾದ ಪ್ರಯೋಜನಗಳು ಸಣ್ಣ ಉದ್ದಿಮೆಗಳಿಗೆ ದೊರೆಯುವುದಿಲ್ಲ. ಯಂತ್ರಗಳನ್ನು ಉಪಯೋಗಿಸಿದರೆ ಮಾತ್ರ

ಶ್ರಮವಿಭಜನೆಗೆ ಪ್ರವೇಶವಿರುತ್ತದೆ. ಆದ್ದರಿಂದ ಆಧುನಿಕ ಕಾರ್ಖಾನೆಗಳು ಶ್ರಮ ವಿಭಜನೆಯಿಂದ ಪಡೆಯುವ ಲಾಭಗಳನ್ನು ಸಣ್ಣ ಉದ್ದಿಮೆಗಳು ಪಡೆಯಲಾರವು.

(iii) **ಉಪವಸ್ತುಗಳ ಉಪಯೋಗಕ್ಕೆ ಅವಕಾಶವಿಲ್ಲದಿರುವಿಕೆ :** ಸಣ್ಣ ಪ್ರಮಾಣದ ಉದ್ದಿಮೆಗಳಲ್ಲಿ ಉಪವಸ್ತುಗಳನ್ನು ಲಾಭದಾಯಕವಾಗಿ ಉಪಯೋಗಿಸಲಾಗುವುದಿಲ್ಲ. ಅವುಗಳನ್ನು ಎಸೆಯಬೇಕಾಗುತ್ತದೆ. ಉದಾಹರಣೆಗೆ ಸಕ್ಕರೆ ಉದ್ದಿಮೆ. ಕಬ್ಬಿನಿಂದ ತೆಗೆದ ಸಿಪ್ಪೆಯನ್ನು ಸೌದೆಯಂತೆ ಬಳಸಲಾಗುವುದು. ಇದರಿಂದ ಲಾಭ ಕಡಮೆ. ಆದರೆ ದೊಡ್ಡ ಪ್ರಮಾಣದ ಉದ್ದಿಮೆಗಳಲ್ಲಿ ಉಪವಸ್ತುಗಳನ್ನು ಉಪಯೋಗಿಸುವುದರಿಂದ ಹೆಚ್ಚು ಲಾಭ ಬರುತ್ತದೆ. ಕಬ್ಬಿನ ಸಿಪ್ಪೆಯನ್ನು ಆಲ್ಕೋಹಾಲ್ ತಯಾರಿಸಲು, ಪೇಪರ್ ತಯಾರಿಸಲು ಬಳಸಲಾಗುವುದು.

(iv) **ಸಂಶೋಧನೆಗೆ ಅವಕಾಶವಿಲ್ಲದಿರುವಿಕೆ :** ಸಣ್ಣ ಪ್ರಮಾಣದ ಉದ್ದಿಮೆಗಳಲ್ಲಿ ಸಾಕಷ್ಟು ಬಂಡವಾಳವಿಲ್ಲದಿರುವುದರಿಂದ ಸಂಶೋಧನೆಗಳನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಸಂಶೋಧನೆಯಿಂದ ಒದಗುವ ಅನುಕೂಲಗಳು, ಲಾಭಗಳು ಸಣ್ಣ ಉದ್ದಿಮೆಗಳಿಗೆ ದೊರೆಯುವುದಿಲ್ಲ. ಆದರೆ ಬೃಹತ್ ಪ್ರಮಾಣದ ಉದ್ದಿಮೆಗಳು ಸಂಶೋಧನೆಗಳನ್ನು ಕೈಗೊಂಡು ಅವುಗಳಿಂದ ಕಡಮೆ ವೆಚ್ಚದಲ್ಲಿ ವಸ್ತುಗಳನ್ನು ಉತ್ಪಾದಿಸಿ ಅಧಿಕ ಲಾಭ ಗಳಿಸುವುವು.

(v) **ಪೈಪೋಟಿಗೆ ಆಸ್ಪದವಿಲ್ಲದಿರುವಿಕೆ :** ಸಣ್ಣ ಪ್ರಮಾಣದ ಉದ್ದಿಮೆಗಳು ಬೃಹತ್ ಪ್ರಮಾಣದ ಉದ್ದಿಮೆಗಳೊಂದಿಗೆ ಸ್ಪರ್ಧಿಸಲಾಗುವುದಿಲ್ಲ. ಅಕಸ್ಮಾತ್ ಸ್ಪರ್ಧಿಸಿದ್ದಾದರೆ ಸಣ್ಣ ಉದ್ದಿಮೆಗಳು ನಾಶವಾಗುವುದರಲ್ಲಿ ಸಂಶಯವೇ ಇಲ್ಲ. ಈ ರೀತಿ ಸಣ್ಣ ಉದ್ದಿಮೆಗಳು ಸಾಕಷ್ಟು ಲಾಭವನ್ನು ಪಡೆಯಲಾರವು. ಬ್ಯಾಂಕುಗಳು, ಸಾಹುಕಾರರು ಈ ಬಗೆಯ ಉದ್ದಿಮೆಗಳಿಗೆ ಹಣದ ನೆರವು ನೀಡುವುದಿಲ್ಲ. ಏಕೆಂದರೆ ಅವು ನೀಡಿದ ಸಾಲವು ಹಿಂತಿರುಗಿ ಬರುವುದಿಲ್ಲವೆಂಬುದು ಅವರ ಅನುಭವ. ವ್ಯವಹಾರದಲ್ಲಿ ಸಂಭವಿಸುವ ನಷ್ಟಗಳನ್ನು ಎದುರಿಸಲು ಈ ಉದ್ದಿಮೆಗಳು ಅಸಮರ್ಥವಾಗಿರುತ್ತವೆ. ಇದರಿಂದ ಪ್ರಗತಿ ಹೊಂದಿ ಸ್ಪರ್ಧಿಸುವುದು ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಸಾಧ್ಯವಾಗುವುದಿಲ್ಲ.

ಈ ಬಗೆಯ ಉದ್ದಿಮೆಗಳ ಭವಿಷ್ಯದ ಬಗ್ಗೆ ಹೇಳುವುದಾದರೆ, ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಒಳ್ಳೆಯ ಭವಿಷ್ಯವಿದೆ. ಜಪಾನ್, ಅಮೆರಿಕಾಗಳಲ್ಲಿ ಸಣ್ಣ ಉದ್ದಿಮೆಗಳು ಮಹತ್ತರ ಪಾತ್ರವಹಿಸಿವೆ. ಭಾರತದಲ್ಲಿ ಸ್ವಾತಂತ್ರ್ಯಾನಂತರ ಕೈಕೊಂಡ ಕೈಗಾರಿಕಾ ಧೋರಣೆಯಂತೆ ಸಾಕಷ್ಟು ಗಮನವನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ನೀಡಲಾಗಿದೆ. ಉದಾಹರಣೆಗೆ ಖಾದಿ ಉದ್ದಿಮೆ, ಸೋಪಿನ ಕಾರ್ಖಾನೆ, ಬೆಂಕಿಪೊಟ್ಟಣ ಕಾರ್ಖಾನೆ,

ಕೋಳಿಸಾಕಾಣಿಕೆ, ಬೀಡಿ ಕಾರ್ಖಾನೆ ಇತ್ಯಾದಿ. ಈ ಉದ್ದಿಮೆಗಳು ಹೆಚ್ಚಿನ ಜನರಿಗೆ ಉದ್ಯೋಗ ನೀಡುತ್ತವೆ. ನಿರುದ್ಯೋಗವನ್ನು ಕಡಮೆಮಾಡಲು, ಬಂಡವಾಳದ ಕೊರತೆ ನೀಗಲು, ಸಣ್ಣ ಪ್ರಮಾಣದ ಉದ್ದಿಮೆಗಳು ನೆರವಾಗುವುವು. ಅನೇಕ ಹಿಂದುಳಿದ ರಾಷ್ಟ್ರಗಳು ಬಂಡವಾಳದ ಕೊರತೆಯನ್ನು ಅನುಭವಿಸುತ್ತಿರುವುದರಿಂದ ಸಣ್ಣ ಕೈಗಾರಿಕೆಗಳನ್ನು ಸಂಘಟಿಸಲಾಗುತ್ತಿದೆ. ಭಾರತದಂತಹ ಅನಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೆಲಸಗಾರರು ಹೆಚ್ಚಿದ್ದು ಬಂಡವಾಳದ ಕೊರತೆ ಇರುವುದರಿಂದ ಸಣ್ಣ ಪ್ರಮಾಣದ ಉದ್ದಿಮೆಗಳು ವಸ್ತುಗಳನ್ನು ಉತ್ಪಾದಿಸಿ ಬಳಕೆದಾರರಿಗೆ ಒದಗಿಸುವುದರಲ್ಲಿ ಬಹಳ ಸಹಾಯಕವಾಗಿವೆ.

ಅಧ್ಯಾಯ 4

ವಿನಿಮಯ

ಹಣದ ಅಧ್ಯಯನ ಬಹಳ ಸ್ವಾರಸ್ಯಕರ ಮತ್ತು ಅರ್ಥಗರ್ಭಿತ ವಿಷಯ. ಹಾಗೆಯೇ ಆಧುನಿಕ ಯುಗದಲ್ಲಿ ವಿನಿಮಯವು ಅತ್ಯಂತ ಪ್ರಮುಖ ಪಾತ್ರವನ್ನು ಹೊಂದಿದೆ. ಮಾನವನು ವಿನಿಮಯ ಮಾಡುವ ಉದ್ದೇಶದಿಂದಲೇ ವಸ್ತು ಮತ್ತು ಸೇವೆಗಳನ್ನೂ ಉತ್ಪಾದಿಸುತ್ತಾನೆ. ಹಿಂದಿನ ಕಾಲದಲ್ಲಿ ವಿನಿಮಯದ ಅವಶ್ಯಕತೆ ಇರಲಿಲ್ಲ. ಏಕೆಂದರೆ ಹಿಂದಿನ ಕಾಲದಲ್ಲಿ ಹಣ ಇರಲಿಲ್ಲ ಮತ್ತು ಜನರು ಹಣದ ಉಪ ಯೋಗವನ್ನು ತಿಳಿದಿರಲಿಲ್ಲ. ಅಂದರೆ ಆಗಿನ ಸಮಾಜವು ಹಣರಹಿತ ಸಮಾಜವಾಗಿತ್ತು. ಆಗ ಜನರ ಬಯಕೆಗಳು ಪರಿಮಿತವಾಗಿದ್ದು ಪ್ರತಿ ಹಳ್ಳಿಯೂ ಸ್ವಯಂ ಪೂರ್ಣತೆ ಯನ್ನು ಪಡೆದಿದ್ದಿತು. ಅವರಿಗೆ ಬೇಕಾದ ವಸ್ತುಗಳನ್ನು ಅವರೇ ಸ್ವತಃ ಉತ್ಪಾದಿಸಿ ಕೊಳ್ಳುತ್ತಿದ್ದರು. ಕಾಲಕ್ರಮೇಣ ಜನರ ಬಯಕೆಗಳು ಹೆಚ್ಚಿದಂತೆ ಅವರಿಗೆ ಬೇಕಾದ ಅತ್ಯವಶ್ಯಕ ವಸ್ತುಗಳನ್ನು ಇತರರಿಂದ ಪಡೆಯುತ್ತಿದ್ದರು. ವಸ್ತುಗಳನ್ನು ವಸ್ತುಗಳಿಗೆ ನೇರವಾಗಿ ವಿನಿಮಯಮಾಡಿಕೊಳ್ಳುವ ಪದ್ಧತಿ ಆಗ ಇತ್ತು. ಹಣದ ಉಪಯೋಗ ವಿಲ್ಲದೆಯೇ ವಸ್ತುಗಳ ವಿನಿಮಯವು ನಡೆಯುತ್ತಿದ್ದುದರಿಂದ ಈ ಪದ್ಧತಿಯನ್ನು 'ಸಾಟಿ ಪದ್ಧತಿ' ಎಂದು ಕರೆಯುತ್ತಿದ್ದರು. ಆಗಿನ ಕಾಲದಲ್ಲಿ ಮಾರಾಟ ಹಳ್ಳಿಗಳಲ್ಲಿ ಆಗುತ್ತಿದ್ದುದರಿಂದ ಈ ಬಗೆಯ ಅದಲು ಬದಲು ಪದ್ಧತಿ ಅಥವಾ ಸಾಟಿ ಪದ್ಧತಿ ಸುಲಭವಾಗಿ, ಸರಳವಾಗಿ ನಡೆಯುತ್ತಿತ್ತು. ಆದರೆ ಕ್ರಮೇಣ ಈ ಪದ್ಧತಿಯು ಕೆಲವು ಅನಾನುಕೂಲಗಳನ್ನು ತಂದೊಡ್ಡಿ, ಹಣದ ಪ್ರವೇಶಕ್ಕೆ ಕಾರಣವಾಯಿತು. ಸಾಟಿ ಪದ್ಧತಿ ದೋಷಗಳನ್ನು ಹೋಗಲಾಡಿಸುವ ಸಲುವಾಗಿ ಹಣ ಜನ್ಮತಾಳಿತು.

ಸಾಟಿ ಪದ್ಧತಿಯ ಅನಾನುಕೂಲಗಳು : ಸಾಟಿ ಪದ್ಧತಿಯಲ್ಲಿ ಕೆಲವು ಲೋಪ ದೋಷಗಳಿದ್ದುದು ತೋರಿಬರುತ್ತದೆ.

(i) ಮನುಷ್ಯನ ಇಷ್ಟಗಳಲ್ಲಿ ಪರಸ್ಪರ ಹೊಂದಾಣಿಕೆ ಇರಲಿಲ್ಲ.

(ii) ಸಾಮಾನ್ಯ ಮೌಲ್ಯಮಾಪನದ ಅಭಾವ.

(iii) ವಸ್ತುಗಳನ್ನು ವಿಭಾಗಿಸುವ ಅನಾನುಕೂಲ.

(iv) ಸಂಗ್ರಹದ ಅಭಾವ.

(i) **ಮನುಷ್ಯನ ಇಷ್ಟಗಳಲ್ಲಿ ಪರಸ್ಪರ ಹೊಂದಾಣಿಕೆ ಇರಲಿಲ್ಲ :** ಹಿಂದಿನ ಕಾಲದಲ್ಲಿ ಜನರು ತಮ್ಮ ವ್ಯವಹಾರಗಳಲಿ ಹಣವನು ಬಳಸುತ್ತಿರಲಿಲ. ಏಕೆಂದರೆ

ಹಣವು ಆಗ ಅಸ್ತಿತ್ವಕ್ಕೆ ಬಂದಿರಲಿಲ್ಲ. ವಸ್ತುಗಳನ್ನು ನೇರವಾಗಿ ವಸ್ತುಗಳಿಗೆ ವಿನಿಮಯ ಮಾಡಿಕೊಳ್ಳುವ ಪದ್ಧತಿಯು ರೂಢಿಯಲ್ಲಿತ್ತು. ಬಳಕೆದಾರರು ವಸ್ತುಗಳನ್ನು ಅದಲು ಬದಲು ಮಾಡಿಕೊಳ್ಳುತ್ತಿದ್ದರು. ಆಗ ಸಮಾಜವು ಚಿಕ್ಕದಾಗಿತ್ತು, ಮಾನವನ ಬಯಕೆಗಳು ಮಿತವಾಗಿದ್ದುದರಿಂದ ಈ ಪದ್ಧತಿಯು ಸುಗಮವಾಗಿ ನಡೆಯುತ್ತಿತ್ತು. ಕಾಲಕ್ರಮೇಣ ಬೇಡಿಕೆಗಳು ಬೆಳೆದಂತೆಲ್ಲ ಸಾಟಿ ಪದ್ಧತಿಯು ಸುಗಮವಾಗಿ ಕಾರ್ಯಗಳನ್ನು ನಿರ್ವಹಿಸಲಾರದೆ ಅನೇಕ ತೊಂದರೆಗಳಿಗೆ ಎಡೆಮಾಡಿಕೊಟ್ಟಿತು. ಇಬ್ಬರ ಬೇಡಿಕೆಗಳು ಒಂದಕ್ಕೊಂದು ಹೊಂದಿಕೊಳ್ಳಲಾರದೆ ಅದಲು ಬದಲು ಪದ್ಧತಿಯು ಸಮರ್ಪಕವಾಗಿ ಕಾರ್ಯ ನಿರ್ವಹಿಸದಂತಾಯಿತು. ಉದಾಹರಣೆಗೆ ರಾಮು ಮತ್ತು ಭೀಮ ಎಂಬುವರು ವಸ್ತುಗಳನ್ನು ವಿನಿಮಯ ಮಾಡಿಕೊಳ್ಳಬೇಕು. ರಾಮುನಿಗೆ ಜೋಳ ಬೇಕಾಗಿದೆ. ಅದಕ್ಕೆ ಪ್ರತಿಯಾಗಿ ಅವನ ಬಳಿ ಕುರಿ ಇದೆ. ರಾಮುನಿಗೆ ಜೋಳ ಸಿಗಬೇಕಾದರೆ ಭೀಮನ ಪರಿಚಯವಾಗಿ, ತನ್ನ ಕುರಿಯನ್ನು ಭೀಮನಿಗೆ ಕೊಟ್ಟು ಜೋಳವನ್ನು ಪಡೆಯಬೇಕು. ಭೀಮ ತನ್ನಲ್ಲಿರುವ ಜೋಳವನ್ನು ಕುರಿಗೆ ಮಾರಲು ತಯಾರಿರಬೇಕು. ಈ ರೀತಿ ಅವರ ಬಯಕೆಗಳು ಪರಸ್ಪರ ಹೊಂದಿಕೊಂಡರೆ ಮಾತ್ರ ವಸ್ತುಗಳ ವಿನಿಮಯವಾಗುತ್ತದೆ. ಆದರೆ ಭೀಮನು ಜೋಳಕ್ಕೆ ಬದಲು ಹತ್ತಿಯನ್ನು ಕೇಳಿದರೆ ವಿನಿಮಯ ಸಾಧ್ಯವಾಗುವುದಿಲ್ಲ. ರಾಮು ಮತ್ತೊಬ್ಬನನ್ನು ಹುಡುಕಿ ಹತ್ತಿಯನ್ನು ಪಡೆಯಬೇಕು. ಅನಂತರ ಹತ್ತಿಯನ್ನು ಕೊಟ್ಟು ಜೋಳವನ್ನು ಪಡೆಯಬೇಕಾಗುತ್ತದೆ. ಪ್ರತಿಯೊಂದು ವಿನಿಮಯ ಯಶಸ್ವಿಯಾಗಬೇಕಾದರೂ ಇಬ್ಬರಲ್ಲಿ ಒಬ್ಬನು ಇನ್ನೊಬ್ಬನಿಗೆ ಬೇಕಾದ್ದನ್ನು ಕೊಡಲು ಸಿದ್ಧವಿರಬೇಕು. ಅಂದರೆ ಕೊಳ್ಳುವವರ ಮತ್ತು ಮಾರುವವರ ಬಯಕೆಗಳಲ್ಲಿ ಪರಸ್ಪರ ಹೊಂದಾಣಿಕೆ ಇರಬೇಕು. ಇಲ್ಲದಿದ್ದರೆ ವಸ್ತುಗಳ ವಿನಿಮಯವಾಗುವುದಿಲ್ಲ. ಆದರೆ ಈಗ ವಾಸ್ತವವಾಗಿ ವಿಚಾರ ಮಾಡಿದರೆ ವಸ್ತುಗಳನ್ನು ಕೊಳ್ಳುವವರ ಹಾಗೂ ಮಾರುವವರ ಅಪೇಕ್ಷೆಗಳು ಹೊಂದಾಣಿಕೆಯಾಗುವುದಿಲ್ಲ. ಹಣವು ಈ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸುತ್ತದೆ.

(ii) **ಸಾಮಾನ್ಯ ಮೌಲ್ಯಮಾಪನದ ಅಭಾವ :** ಬೇಡಿಕೆಗಳು ಹೊಂದಾಣಿಕೆಯಾದ ನಂತರ ಉದ್ಭವಿಸುವ ಮತ್ತೊಂದು ದೊಡ್ಡ ಸಮಸ್ಯೆ ಎಂದರೆ ವಿನಿಮಯದ ಮೌಲ್ಯಮಾಪನ. ವಸ್ತುಗಳ ವಿನಿಮಯ ಪದ್ಧತಿಯಲ್ಲಿ ವಸ್ತುಗಳ ಬೆಲೆಗಳನ್ನು ನಿರ್ಧರಿಸುವುದು ಅತಿ ಕಷ್ಟದ ಕೆಲಸ. ಏಕೆಂದರೆ ಪ್ರತಿಯೊಂದು ವಿನಿಮಯದಲ್ಲೂ ಒಂದೊಂದು ಬೆಲೆಯನ್ನು ನಿರ್ಧರಿಸಬೇಕಾಗುತ್ತದೆ. ಒಂದು ಚೀಲ ಜೋಳಕ್ಕೆ ಒಂದು ಬೆಲೆ, ಒಂದು ಕುರಿಗೆ ಒಂದು ಬೆಲೆ, ಹಂದಿಗೆ ಮತ್ತೊಂದು ಬೆಲೆ. ಇಲ್ಲಿ ಒಂದು ಕುರಿ ಎಷ್ಟು ಚೀಲ ಜೋಳಕ್ಕೆ ಸಮ ಎಂಬುದನ್ನು ಇತ್ಯರ್ಥ ಮಾಡುವುದು. ಇದರಂತೆ ಆಗ ಸಾವಿರಾರು ವಸ್ತುಗಳಿಗೆ ಸಾವಿರಾರು ಬೆಲೆಗಳನ್ನು ನಿಶ್ಚಯಿಸಬೇಕಾದ ಪ್ರಸಂಗ

ಬರುತ್ತಿತ್ತು. ಪ್ರತಿಯೊಬ್ಬ ವ್ಯಕ್ತಿ ವಸ್ತುಗಳನ್ನೂ ವಿನಿಮಯ ಮಾಡುವಾಗ ಈ ಪಟ್ಟಿಯನ್ನು ಮುಂದಿಟ್ಟುಕೊಂಡು ವ್ಯವಹಾರ ಮಾಡಬೇಕಾಗಿತ್ತು. ಇದು ಅತಿ ಕಷ್ಟದ ಕೆಲಸ. ಅಲ್ಲದೆ ಎಲ್ಲ ವಸ್ತುಗಳ ಮೌಲ್ಯವನ್ನಳೆಯುವ ಯಾವ ಒಂದು ಸಾಧನವೂ ಆಗ ಇಲ್ಲದಿದ್ದುದರಿಂದ ವಿನಿಮಯದಲ್ಲಿ ಯಾರಾದರೊಬ್ಬರು ಹಾನಿಯನ್ನು ಅನುಭವಿಸಬೇಕಾಗಿದ್ದಿತು. ಇದಕ್ಕೆ ಮುಖ್ಯ ಕಾರಣ ಮೌಲ್ಯಮಾಪನದ ಅಭಾವ. ಆದರೆ ಹಣವು ಚಲಾವಣೆಯಲ್ಲಿದ್ದರೆ ಈ ಕಷ್ಟವನ್ನು ಸುಲಭವಾಗಿ ಪರಿಹರಿಸಬಹುದು. ವಸ್ತುಗಳ ಬೆಲೆಯನ್ನು ಹಣದ ರೂಪದಲ್ಲಿ ಪರಿವರ್ತಿಸಬಹುದು. ಇದರಿಂದ ಮೌಲ್ಯ ಮಾಪನ ಸುಲಭವಾಗಿದೆ.

(iii) **ವಸ್ತುಗಳನ್ನು ವಿಭಾಗಿಸುವ ಅನಾನುಕೂಲ :** ಬೆಲೆಗಳಲ್ಲಿ ವ್ಯತ್ಯಾಸ ವಿಲ್ಲದೆ ವಸ್ತುಗಳನ್ನು ವಿಭಾಗ ಹಾಗೂ ಉಪ ವಿಭಾಗ ಮಾಡುವಂತಿದ್ದರೆ, ವಸ್ತು ವಿನಿಮಯ ಸುಲಭ. ಆದರೆ ವಸ್ತುಗಳನ್ನು ಸಾಟಿ ಪದ್ಧತಿಯಲ್ಲಿ ವಿಭಜಿಸುವುದು ಹೇಗೆ ? ವಸ್ತುಗಳನ್ನು ನೇರವಾಗಿ ವಸ್ತುಗಳಿಗೆ ವಿನಿಮಯ ಮಾಡುವಲ್ಲಿ ಕಂಡುಬರುವ ಸಾಟಿ ಪದ್ಧತಿಯ ಮತ್ತೊಂದು ಅನಾನುಕೂಲವೆಂದರೆ ಕೆಲವು ವಸ್ತುಗಳನ್ನು ವಿಭಾಗಿ ಸಲು ಸಾಧ್ಯವಾಗದಿರುವುದು. ಒಂದು ಕುರಿ 50 ಕೆಜಿ ಜೋಳಕ್ಕೆ ವಿನಿಯೋಗ ವಾಗುವುದೆಂದು ಭಾವಿಸೋಣ. ಭೀಮನು ಜೋಳವನ್ನು ಕುರಿಗೆ ಮಾರಲು ಇಚ್ಛಿಸು ವನು. ಆದರೆ ಭೀಮ 30 ಕೆಜಿ ಜೋಳವನ್ನು ಮಾತ್ರ ಕೊಡಲು ಸಿದ್ಧನಿರುವನು. ಹಾಗಾದರೆ ರಾಮ ಭೀಮನಿಗೆ 30 ಕೆಜಿ ಜೋಳಕ್ಕೆ ಎಷ್ಟು ಕುರಿಯನ್ನು ಕೊಡಬೇಕು ? ಅರ್ಧ ಕುರಿಯನ್ನು ಕತ್ತರಿಸಿ ಕೊಡಲು ಸಾಧ್ಯವಾಗುವುದಿಲ್ಲ. ಇದರಿಂದ ಅನೇಕ ವಸ್ತುಗಳನ್ನು ಅದಲು ಬದಲು ಮಾಡುವ ಪ್ರಯತ್ನಗಳು ವಿಫಲವಾಗುತ್ತವೆ. ಹಣ ದಿಂದ ಈ ಸಮಸ್ಯೆಯನ್ನು ಪರಿಹರಿಸಬಹುದು. ಯಾರೇ ಆದರೂ ತಮ್ಮಲ್ಲಿರುವ ವಸ್ತುಗಳನ್ನು ಹಣಕ್ಕೆ ಮಾರಿ ಬಂದ ಹಣದಿಂದ ಬೇಕಾದ ವಸ್ತುಗಳನ್ನು ಕೊಂಡು ಕೊಳ್ಳಬಹುದು.

(iv) **ಸಂಗ್ರಹದ ಅಭಾವ :** ಸಾಟಿಪದ್ಧತಿಯ ಮತ್ತೊಂದು ಅನಾನುಕೂಲ ವೆಂದರೆ ಸಂಪತ್ತಿನ ಶೇಖರಣೆಯನ್ನು ಮಾಡಲಾಗದಿದ್ದುದು. ಜನರು ಯಾವ ವಸ್ತುಗಳ ರೂಪದಲ್ಲಿ ಸಂಪತ್ತನ್ನು ಶೇಖರಿಸಬೇಕೆಂಬುದನ್ನು ನಿರ್ಧರಿಸುವುದು ಬಹಳ ಕಷ್ಟದ ಕೆಲಸ. ಸಂಪತ್ತನ್ನು ಬತ್ತ, ಜೋಳ, ಗೋಧಿ, ಕುರಿ, ಹಂದಿಗಳ ರೂಪದಲ್ಲಿ ಸಂಗ್ರಹಿಸಿಟ್ಟರೆ ಕಾಲಕ್ರಮೇಣ ಇವು ತಾವಾಗಿಯೇ ನಾಶಹೊಂದುತ್ತವೆ. ಇದರಿಂದ ಸಂಪತ್ತನ್ನು ದಾಸ್ತಾನು ಮಾಡುತ್ತದೆ, ಇದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತ್ತು. ಆದರೆ ಹಣವನ್ನು ಹಲವಾರು ವರ್ಷಗಳವರೆಗೆ ಸಂಗ್ರಹಿಸಿಡಬಹುದು. ಹಣವು ಇತರ ವಸ್ತುಗಳಂತೆ ನಾಶವಾಗುವುದಿಲ್ಲ ಹಾಗೂ ಬೆಲೆಯಲ್ಲಿ ವ್ಯತ್ಯಾಸವಾಗುವುದಿಲ್ಲ. 100 ರೂಪಾಯಿಗಳ ನೋಟು ಯಾವಾಗಲೂ 100 ರೂಪಾಯಿಗಳೇ. ಆದರೆ ಒಂದು ಕುರಿ

ನಾಲ್ಕು ಬಾರಿ ಮರಿಗಳಿಗೆ **ಜನ್ಮ ನೀಡಿದರೆ ಅದು ನಿಶ್ಯಕ್ತಿಯನ್ನು** ಹೊಂದಿ ಅದರ ಬೆಲೆ ಕುಗ್ಗುತ್ತದೆ.

ಈ ರೀತಿಯಾಗಿ ನಾನಾ ತೊಂದರೆಗಳು ಸಾಟಿಪದ್ಧತಿಯಲ್ಲಿ ಕಂಡು ಬಂದುದರಿಂದ ವ್ಯಾಪಾರವು ಕುಂಠಿತಗೊಂಡು, ಉತ್ಪಾದನೆಯು ಕುಂಠಿತಗೊಳ್ಳುವಂತೆ ಮಾಡಿತು. ಇವುಗಳಿಂದ ವಿಮುಕ್ತಿ ಪಡೆಯಲು ಅನೇಕ ಬಗೆಯ ವಸ್ತುಗಳನ್ನು ಹಣವೆಂದು ಪರಿಗಣಿಸಲು ಪ್ರಾರಂಭಿಸಿದರು. ಆಯಾ ಕಾಲಗಳ ಆರ್ಥಿಕಾಭಿವೃದ್ಧಿಗೆ ಅನುಸಾರ ವಾಗಿ ಬೇರೆ ಬೇರೆ ಪದಾರ್ಥಗಳನ್ನು ಹಣವೆಂದು ಬಳಸಲಾಗುತ್ತಿತ್ತು. ಆಕಳು, ಕವಡೆ, ಗೋಧಿ, ಬಿಲ್ಲುಬಾಣ, ತಂಬಾಕು, ಆನೆಯದಂತ, ಹುಲಿಯ ಹಲ್ಲು ಮುಂತಾದ ವಸ್ತುಗಳನ್ನು ಹಿಂದಿನ ಕಾಲದಲ್ಲಿ ಜನರು ಹಣವೆಂದು ಉಪಯೋಗಿಸುತ್ತಿದ್ದರು. ಕೆಲವು ಜನರು ಹಂದಿ, ಕುದುರೆ, ಕುರಿಗಳನ್ನು ಹಣವೆಂಬುದಾಗಿ ತಿಳಿದಿದ್ದರು. ಧಾನ್ಯ ಗಳೂ ಸಹ ಕೆಲವರಿಗೆ ಹಣವಾಯಿತು. ಆದರೆ ಈ ಎಲ್ಲ ವಸ್ತುಗಳು ನಾಶವಾಗು ವುದರಿಂದ ಇವು ಒಳ್ಳೆಯ ಹಣವಾಗಿ (ವಿನಿಮಯ ಸಾಧನವಾಗಿ) ಉಳಿಯಲಿಲ್ಲ. ಅಲ್ಲದೆ ಈ ವಸ್ತುಗಳ ಆಕಾರ, ಗಾತ್ರ ಮತ್ತು ಗುಣಗಳು ಒಂದೇ ಸಮ ಇಲ್ಲದಿದ್ದುದ ರಿಂದ ವಿನಿಮಯ ಕಾರ್ಯ ಬಹಳ ತೊಡಕಿನದಾಗುತ್ತಿತ್ತು. ಇದರಿಂದಾಗಿ ಕಾಲ ಕ್ರಮೇಣ ಎಲ್ಲ ಜನರು ವಿನಿಮಯದಲ್ಲಿ ಒಂದು ವಸ್ತುವನ್ನು ಸಾಮಾನ್ಯವಾಗಿ ಒಪ್ಪಿ ಕೊಂಡರೆ ಅದೇ ಹಣವಾಗುವ ಸಂಭವ ಕಂಡುಬಂದಿತು. ಇದರ ಫಲವಾಗಿ ಹಣವು ನಾಣ್ಯಗಳ ರೂಪದಲ್ಲಿ ಕಂಡುಹಿಡಿಯಲ್ಪಟ್ಟಿತು. ಚಿನ್ನ, ಬೆಳ್ಳಿ, ತಾಮ್ರ ಮುಂತಾದ ಲೋಹಗಳಿಂದ ಮಾಡಿದ ನಾಣ್ಯಗಳು ಕಂಡುಬಂದವು. ಹೀಗೆ ವಸ್ತುಗಳನ್ನು ವಸ್ತು ಗಳಿಗೆ ನೇರವಾಗಿ ವಿನಿಮಯ ಮಾಡುವ ಬದಲು ವಸ್ತುಗಳನ್ನು ಹಣಕ್ಕೊ, ಇದ ರಂತೆಯೇ ಹಣವನ್ನು ವಸ್ತುಗಳಿಗೊ ವಿನಿಮಯಮಾಡುವ ಪದ್ಧತಿಯು ಕಾರ್ಯ ರೂಪಕ್ಕೆ ಬಂದಿತು.

ಹಣದ ವಿನಿಮಯ

ಸಾಟಿಪದ್ಧತಿಯಲ್ಲಿ ಹಲವಾರು ದೋಷಗಳು ಕಂಡುಬಂದುದರಿಂದ ಬೇಸತ್ತ ಜನರು ಸರ್ವಸ್ವೀಕೃತವಾದ ಮಾಧ್ಯಮವೆನಿಸುವ ಒಂದು ವಸ್ತುವನ್ನು ಕಂಡು ಹಿಡಿದರು. ಅದೇ ಹಣ ಮೊದಲು ಬಂಗಾರ, ಬೆಳ್ಳಿ, ತಾಮ್ರ ಮುಂತಾದ ಲೋಹ ಗಳಿಂದ ಮಾಡಿದ ನಾಣ್ಯಗಳು ಹಣದ ರೂಪದಲ್ಲಿ ಕಂಡುಬಂದವು. ಇದರಿಂದ ಜನರಿಗೆ ಹಣದ ಉಪಯೋಗ ತಿಳಿಯುತ್ತ ಬಂದಿತು. ಇದರ ಪರಿಣಾಮವಾಗಿ ವಸ್ತುಗಳನ್ನು ವಸ್ತುಗಳಿಗೆ ನೇರವಾಗಿ ಬದಲಾಯಿಸುವ ಪದ್ಧತಿ ನಿಂತು ವಸ್ತುಗಳನ್ನು ಹಣಕ್ಕೊ ಹಣವನ್ನು ವಸ್ತುಗಳಿಗೊ ವಿನಿಮಯ ಮಾಡುವ ಪದ್ಧತಿಯು ಪ್ರಾರಂಭವಾಯಿತು. ಈ ಪದ್ಧತಿಯೇ ಹಣದ ವಿನಿಮಯ. ಹಣದ ವಿನಿಮಯವೆಂದರೆ ವಸ್ತುಗಳನ್ನು

ನೇರವಾಗಿ ವಸ್ತುಗಳಿಗೆ ವಿನಿಮಯಂಮಾಡದೆ, ವಸ್ತುಗಳನ್ನು ಹಣಕ್ಕೆ ವಿನಿಮಯ ಮಾಡಿ, ಅನಂತರ ಹಣವನ್ನು ವಸ್ತುಗಳನ್ನು ಕೊಳ್ಳಲು ವಿನಿಮಯ ಮಾಡುವುದಂ. ಹಣ ಬಳಕೆಗೆ ಬಂದ ಮುಖ್ಯ ಉದ್ದೇಶ, ಸಾಟಿಪದ್ಧತಿಯಲ್ಲಿ ಕಂಡುಬಂದ ನಾನಾ ಕುಂದು ಕೊರತೆಗಳನ್ನು ನಿವಾರಿಸುವುದು. ಈಗ ಹಣದ ವಿನಿಮಯ ಯಾವರೀತಿ ಸಾಟಿಪದ್ಧತಿಯ ಕುಂದಂಕೊರತೆಗಳನ್ನು ನಿವಾರಿಸಿತು ಎಂಬುದನ್ನು ತಿಳಿದಂಕೊಳ್ಳೋಣ.

ಮೊದಲಿಗೆ ವಿನಿಮಯ ಪದ್ಧತಿಯಲ್ಲಿ ಪರಸ್ಪರ ಅಪೇಕ್ಷೆಗಳು ಹೊಂದಿಕೊಳ್ಳ ಬೇಕಾದ ಅವಶ್ಯಕತೆ ಇದ್ದಿತು. ಇಲ್ಲದಿದ್ದರೆ ವಿನಿಮಯ ನಡೆಯುತ್ತಿರಲಿಲ್ಲ. ಆದರೆ ಹಣವು ಬಳಕೆಗೆ ಬಂದನಂತರ ಪರಸ್ಪರ ಹೊಂದಾಣಿಕೆ ಬೇಕಾಗಿಲ್ಲ. ಏಕೆಂದರೆ ರಾಮ ತನ್ನ ಕುರಿಯನ್ನು ಕೊಡಲು ಜೋಳ ಕೊಡುವವನನ್ನು ಹುಡುಕಬೇಕಾದ ಪ್ರಮೇಯವಿಲ್ಲ. ಅವನು ತನ್ನ ಕುರಿಯನ್ನು ಹಣಕ್ಕೆ ಮಾರಾಟ ಮಾಡಿ ಬಂದ ಹಣದಿಂದ ಮಾರುಕಟ್ಟೆಯಲ್ಲಿ ತನಗೆ ಬೇಕಾದಷ್ಟು ಜೋಳವನ್ನು ಕೊಳ್ಳಬಹುದು. ಹೀಗೆ ಹಣದ ವಿನಿಮಯದಿಂದ ವಸ್ತುಗಳನ್ನು ಸುಲಭವಾಗಿ ಮಾರಾಟ ಮಾಡಬಹುದು. ಹಣ ಮಾರಾಟಗಾರರನ್ನು ಕೊಂಡುಕೊಳ್ಳುವವರನ್ನು ಒಟ್ಟುಗೂಡಿಸುವ ಒಂದು ಕೊಂಡಿ ಎನ್ನಬಹುದು. ಅಂದರೆ ಹಣವು ತನ್ನ ಪ್ರವೇಶದಿಂದ ವಸ್ತುಗಳ ವಿನಿಮಯದ ಅನಾನುಕೂಲತೆಯನ್ನು ತೊಡೆದುಹಾಕಿತು. ಹಣವು ವಸ್ತುಗಳನ್ನು ವಿಭಜಿಸುವ ತೊಂದರೆಯನ್ನು ನಿವಾರಿಸಿತಂ. ವಸ್ತುವಿನಿಮಯ ಪದ್ಧತಿಯಲ್ಲಿ ಒಂದು ಕುರಿಗೆ ನೂರು ಕೋಳಿಗಳೆಂದು ಭಾವಿಸುವಾ. ಆದರೆ ರಾಮನಿಗೆ 50 ಕೋಳಿಗಳು ಬೇಕಾಗಿರು ತ್ತವೆ. ಕುರಿಯನ್ನು ಅರ್ಧಭಾಗ ಮಾಡಿಕೊಡಬೇಕಾಗುತ್ತದೆ. ಆದರೆ ಇದು ಸಾಧ್ಯ ವಿಲ್ಲ. ಹಣದ ಚಲಾವಣೆಯಿಂದ ರಾಮ ತನ್ನ ಕುರಿಯನ್ನು ಮಾರಿ ಬಂದ ಹಣದಿಂದ ತನಗೆ ಬೇಕಾದಷ್ಟು ಕೋಳಿಗಳನ್ನು ಕೊಳ್ಳಬಹುದು. ಹಣದ ಬಳಕೆಯಿಂದ ವಸ್ತು ಗಳನ್ನು ವಿಭಜಿಸುವ ಅವಶ್ಯಕತೆ ಕಂಡುಬರುವುದಿಲ್ಲ. ಹಣವು ಬಳಕೆಗೆ ಬಂದಾಗಿನಿಂದ ವಸ್ತುಗಳ ಮೌಲ್ಯಮಾಪನವನ್ನು ಸುಲಭವಾಗಿ ಮಾಡಲು ಸಾಧ್ಯವಾಯಿತು. ಎಲ್ಲ ವಸ್ತುಗಳ ಬೆಲೆಯನ್ನು ಹಣದಲ್ಲಿ ಅಳೆಯಬಹುದು. ಒಂದು ಕುರಿಗೆ 100 ರೂ. ಒಂದು ಪೆನ್ನಿಗೆ 5 ರೂ. ಒಂದು ಕೆಜಿ ಅಕ್ಕಿಗೆ 3 ರೂ. ಇತ್ಯಾದಿಯಾಗಿ ವಸ್ತುಗಳ ಬೆಲೆಯನ್ನು ಹಣದಲ್ಲಿ ಅಳೆಯಬಹುದು. ಹಣವಿಲ್ಲದಿದ್ದಾಗ ವಸ್ತುಗಳ ಬೆಲೆಯನ್ನು ನಿರ್ಧರಿಸುವುದು ಬಹಳ ಕಷ್ಟದ ಕೆಲಸವಾಗಿತ್ತು. ಹಣದ ರೂಪದಲ್ಲಿ ಸಂಪತ್ತನ್ನು ಸುಲಭವಾಗಿ ಸಂಗ್ರಹಿಸಬಹುದು ಮತ್ತು ಹಣವನ್ನು ದೀರ್ಘಕಾಲ ಶೇಖರಿಸಿಡಬಹುದು. ಹಣ ಎಷ್ಟು ದಿನಗಳಿದ್ದರೂ ಕೆಡುವುದಿಲ್ಲ. ಆದರೆ ವಸ್ತುಗಳು ನಶಿಸಿ ಹೋಗುವುದಲ್ಲದೆ ನಾಶವಾಗುವ ಸಂಭವವೂ ಉಂಟು. ಪ್ರಾಣಿಗಳು ನಶಿಸಿ ಸಾಯುತ್ತವೆ.

ಹಣದ ಮೂಲಕ ವಸ್ತುಗಳ ವಿನಿಮಯದಲ್ಲಿ ಕಂಡುಬಂದ ಕೊರತೆಗಳು ನಿವಾರಣೆ ಯಾಗಿ, ವಿನಿಮಯವು ಸರಾಗವಾಗಿ ನಡೆಯುವಂತಾಯಿತು. ಮನುಷ್ಯ ಕಂಡುಹಿಡಿದ

ವಸ್ತುಗಳಲ್ಲೆಲ್ಲ ಹಣವು ಆಶ್ಚರ್ಯಕರವಾದ ವಸ್ತು ಎನ್ನಬಹುದು. ಹಣದಿಂದಾಗಿ ದೇಶ ಪ್ರಗತಿಹೊಂದಲು, ಹೆಚ್ಚು ಉತ್ಪಾದನೆಯನ್ನು ಕೈಕೊಳ್ಳಲು ಹಣದ ಪ್ರವೇಶವು ನೆರವಾಯಿತು.

ಹಣದ ಅರ್ಥ ವಿವರಣೆ

ಹಣವು ಮಾನವನು ಕಂಡುಹಿಡಿದ ವಸ್ತುಗಳಲ್ಲೆಲ್ಲ ಅತ್ಯಂತ ಮಹತ್ವಪೂರ್ಣವಾದ ವಸ್ತು. ಈಗ ನಾವು ಜೀವಿಸುತ್ತಿರುವ ಪ್ರಪಂಚ ಹಣದ ಪ್ರಪಂಚ. ಹಣವಿಲ್ಲದೆ ಯಾವ ಬಗೆಯ ವ್ಯವಹಾರವನ್ನೂ ಮಾಡಲಾಗುವುದಿಲ್ಲ. ಆಧುನಿಕಯುಗದಲ್ಲಿ ಹಣ ಯಾರಿಗೂ ತಿಳಿಯದ ವಸ್ತುವಾಗಿರದಿದ್ದರೂ ಅದರ ವಾಖ್ಯೆಯನ್ನು ಹೇಳುವುದು ಅಷ್ಟು ಸುಲಭದ ಕೆಲಸವಲ್ಲ. ಹಣವೆಂದರೆ ಯಾವ ವಸ್ತುವನ್ನು ಸಾಮಾನ್ಯವಾಗಿ ಜನರು ವಸ್ತುಗಳನ್ನು ವಿನಿಮಯ ಮಾಡುವಾಗ ಬಳಸುವರೋ ಅದೇ ಹಣ. ಒಂದು ಸಮಾಜದಲ್ಲಿ ಎಲ್ಲ ಜನರು ಒಪ್ಪಿ ಸ್ವೀಕರಿಸುವ ಒಂದು ವಿನಿಮಯದ ವಸ್ತುವಿಗೆ ಹಣ ಎನ್ನಬಹುದು. 'ಸಾರ್ವತ್ರಿಕ ಒಪ್ಪಿಗೆ' ಹಣದ ಮೂಲಭೂತ ಗುಣ. ಹಣವೆಂದರೆ ಎಲ್ಲ ವಸ್ತುಗಳ ವಿನಿಮಯದಲ್ಲಿ ಭಾಗವಹಿಸಲು ಹಾಗೂ ಭೂತ ಮತ್ತು ವರ್ತಮಾನಗಳ ಎಲ್ಲ ಋಣಗಳನ್ನು ತೀರಿಸಲು ಬಳಸುವ ಸಾರ್ವತ್ರಿಕ ಒಪ್ಪಿಗೆ ಪಡೆದಿರುವ ವಸ್ತು. ಹಣವನ್ನು ವಿನಿಮಯದ ಮತ್ತು ಮೌಲ್ಯ ಮಾಪನದ ಸಾಧನ ಎನ್ನುವರು. ಹಿಂದೆ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ವಸ್ತುಗಳನ್ನು ಹಣ ಎಂದು ಸ್ವೀಕರಿಸುತ್ತಿದ್ದರು. ಅಬಿಸೀನಿಯಾದಲ್ಲಿ ಉಪ್ಪನ್ನು ಹಣವೆಂದು ಸ್ವೀಕರಿಸುತ್ತಿದ್ದರು. ವರ್ಜೀನಿಯಾದಲ್ಲಿ ತಂಬಾಕು, ವೆಸ್ಟ್ ಇಂಡೀಸ್‌ನಲ್ಲಿ ಸಕ್ಕರೆ, ಚೈನಾದಲ್ಲಿ ಟೀ, ಭಾರತದಲ್ಲಿ ಆಕಳುಗಳನ್ನು ಧನವಾಗಿ ಸ್ವೀಕರಿಸುತ್ತಿದ್ದರು. ನಾಗರೀಕತೆ ಬೆಳೆದಂತೆ ವಸ್ತುಗಳ ಬದಲು ನಾಣ್ಯಗಳನ್ನು ಹಣವೆಂದು ಸ್ವೀಕರಿಸಲು ಆರಂಭಿಸಿದರು. ಈಗ ನಮ್ಮಲ್ಲಿ ಕರೆನ್ಸಿನೋಟುಗಳು ಹಣವೆನ್ನಿಸಿಕೊಂಡಿವೆ. ಅಂದರೆ ಇಪ್ಪತ್ತನೆಯ ಶತಮಾನದಲ್ಲಿ ಹಣ ಕಾಗದದಿಂದ ತಯಾರಿಸಲ್ಪಟ್ಟಿದೆ. ಅಮೆರಿಕಾದಲ್ಲಿ ಚೆಕ್ಕುಗಳನ್ನು ವ್ಯವಹಾರಗಳಲ್ಲಿ ಬಳಸಲಾಗುವುದು. ಅಲ್ಲಿ ಚೆಕ್ಕುಗಳಲ್ಲಿ ಸಾರ್ವತ್ರಿಕ ಒಪ್ಪಿಗೆಯಿದೆ. ಭಾರತದಲ್ಲಿರುವ ಕಾಗದದ ಹಣಕ್ಕೆ ಸಾರ್ವತ್ರಿಕ ಒಪ್ಪಿಗೆಯಿದೆ. ಯಾರು ಬೇಕಾದರೂ ಅದನ್ನು ಸ್ವೀಕರಿಸುವರು. ಉದಾಹರಣೆಗೆ 10 ರೂಪಾಯಿಗಳ ನೋಟು ಇದನ್ನು ಯಾರು ಕೊಟ್ಟರೂ ಅವರಿಗೆ ಹತ್ತು ರೂಪಾಯಿಗಳಷ್ಟು ವಸ್ತುಗಳು ದೊರೆಯುತ್ತವೆ. ಆದ್ದರಿಂದ ಹತ್ತು ರೂಪಾಯಿಗಳ ನೋಟನ್ನು ಹಣ ಎಂದು ಕರೆಯುತಾರೆ. ಎಲ್ಲರೂ ಆ ನೋಟನ್ನು ಹಣಕ್ಕೆ ಸರಿಸಮಾನವೆಂದು ಸ್ವೀಕರಿಸುವುದರಿಂದ ಆ ನೋಟು ಹಣವಾಗುತ್ತದೆ. ಈಗ ಚೆಕ್ಕುಗಳ ಯುಗ. ಪ್ರಪಂಚದ ಮುಂದುವರಿದ ರಾಷ್ಟ್ರಗಳಲ್ಲಿ ವ್ಯವಹಾರ ಚೆಕ್‌ಗಳ ಮೂಲಕ ನಡೆಯುತ್ತದೆ. ಚೆಕ್‌ಗಳು ಮತ್ತು ಡ್ರಾಫ್ಟ್‌ಗಳು ಹಣವಲ್ಲದಿದ್ದರೂ ಅವು ಹಣಮಾಡುವ ಎಲ್ಲ ಕಾರ್ಯಗಳನ್ನೂ ಮಾಡುತ್ತವೆ. ಆದ್ದರಿಂದ ವ್ಯವಹಾರಿಕ ಹಣ ಚೆಕ್ಕುಗಳೇ ಆಗಿವೆ.

ದೊಡ್ಡ ವ್ಯವಹಾರಗಳಲ್ಲಿ ಅಂದರೆ ಸಾವಿರಾರು ರೂಪಾಯಿಗಳ ಕೊಡುವಿಕೆಯಲ್ಲಿ ಸಾಮಾನ್ಯವಾಗಿ ಚೆಕ್‌ಗಳನ್ನು ಬಳಸಲೇ ಬೇಕಾಗುತ್ತದೆ. ರಕ್ಷಣೆ ಮತ್ತು ಲೆಕ್ಕಪತ್ರವಿಡುವ ದೃಷ್ಟಿಯಿಂದಲೂ ಚೆಕ್‌ಗಳ ಮೂಲಕ ನಡೆಸುವ ವ್ಯವಹಾರವು ಬಹಳ ಪ್ರಯೋಜನ ಕಾರಿಯಾಗಿದೆ. ಆದಾಗ್ಯೂ ಹಿಂದುಳಿದ ದೇಶಗಳಲ್ಲಿ ಬ್ಯಾಂಕಿನ ಚೆಕ್‌ನ್ನು ಹಣವೆಂದು ಎಲ್ಲರೂ ಸ್ವೀಕರಿಸುವುದಿಲ್ಲ. ಏಕೆಂದರೆ ಈ ರಾಷ್ಟ್ರಗಳಲ್ಲಿ ಹೆಚ್ಚು ಜನರು ಅನಕ್ಷರಸ್ಥ ರಾಗಿರುತ್ತಾರೆ ಹಾಗೂ ಬ್ಯಾಂಕಿಂಗ್ ಸೌಲಭ್ಯಗಳು ಹೆಚ್ಚಾಗಿರುವುದಿಲ್ಲ. ಅಲ್ಲದೆ ಚೆಕ್ಕುಗಳು ಹಣವನ್ನು ಪ್ರತಿನಿಧಿಸುತ್ತವೆಯೇ ಹೊರತು ಅವೇ ನಿಜವಾದ ಹಣವಲ್ಲ. ಆದ್ದರಿಂದ ಅವುಗಳನ್ನು ಪ್ರತಿನಿಧಿ ಹಣ ಎಂದು ಕರೆಯುತ್ತಾರೆ.

ಹಣಕ್ಕೂ ಮತ್ತು ಇತರ ವಸ್ತುಗಳಿಗೂ ವ್ಯತ್ಯಾಸವಿದೆ. ಅಕ್ಕಿ, ಜೋಳ, ಬಟ್ಟೆ ಇತ್ಯಾದಿ ವಸ್ತುಗಳು ಜನರ ಬಯಕೆಗಳನ್ನು ನೇರವಾಗಿ ತೃಪ್ತಿಪಡಿಸುತ್ತವೆ. ಆದರೆ ಹಣ ಜನರ ಬಯಕೆಗಳನ್ನು ನೇರವಾಗಿ ತೃಪ್ತಿಪಡಿಸಲಾರದು. ವಸ್ತುಗಳನ್ನು ಕೊಳ್ಳಲು ಹಣ ಜನರಿಗೆ ನೆರವುನೀಡುತ್ತದೆ. ಅದಕ್ಕೆ ವಸ್ತುಗಳನ್ನು ಕೊಳ್ಳುವ ಶಕ್ತಿ ಇದೆ. ಅದು ಎಲ್ಲರಿಗೂ ಬೇಕಾದ ಯಾರಿಂದಲೂ ತಿರಸ್ಕರಿಸಲ್ಪಡದ ಸರ್ವ ಸ್ವೀಕೃತ ವಾದ ಒಂದು ಆಕರ್ಷಣೀಯವಸ್ತು. ವಿನಿಮಯ ಕಾರ್ಯಗಳಲ್ಲಿ ಲೇವಾದೇವಿ ವ್ಯವ ಹಾರಗಳಲ್ಲಿ ಜನರು ಹಣವನ್ನು ಒಮ್ಮತದಿಂದ ಸ್ವೀಕರಿಸುತ್ತಾರೆ. ಆದರೆ ಜನರು ವಸ್ತುಗಳನ್ನು ಹೀಗೆ ಸರ್ವಸಮ್ಮತಿಯಿಂದ ಸ್ವೀಕರಿಸುವುದಿಲ್ಲ. ಈ ರೀತಿ ಹಣ ಇಷ್ಟರ ಮಟ್ಟಿಗೆ ಜನಪ್ರಿಯವಾಗಿರಲು ಮುಖ್ಯ ಕಾರಣ ಅದು ಒಂದೇ ಸಮನಾದ ಮೌಲ್ಯವನ್ನು ಪಡೆದಿರುತ್ತದೆ ಎಂದು ಹೇಳಬಹುದು. ಹೀಗೆ ಹಣವೆಂದರೆ ಮೌಲ್ಯದ ಸಾಮಾನ್ಯ ಮಾನದಂಡವಾಗಿರುವ ಮತ್ತು ಒಂದೇ ಸಮನಾದ ಮೌಲ್ಯವನ್ನು ಹೊಂದಿದ್ದು, ಸರ್ವ ಸಮ್ಮತ ವಿನಿಮಯ ಮಾಧ್ಯಮವಾಗಿರುವ ಒಂದು ವಸ್ತು. ಹಣದ ವ್ಯಾಖ್ಯೆ ಹಣ ನಿರ್ವಹಿಸುವ ಕಾರ್ಯಗಳನ್ನವಲಂಬಿಸಿರುತ್ತದೆ. ವಾಕರ್ ಎಂಬ ಅರ್ಥಶಾಸ್ತ್ರಜ್ಞನ ಪ್ರಕಾರ 'ಹಣದ ಕೆಲಸವನ್ನು ಮಾಡುವುದೇ ಹಣ'. ಆದರೆ ಈ ನಿರೂಪಣೆಯಲ್ಲಿಯು ಹಣದ ಕೆಲಸವೇನು ? ಇದು ಸ್ಪಷ್ಟವಾಗಿಲ್ಲ. ಟೇಲರ್ ಎಂಬ ಮತ್ತೊಬ್ಬ ಲೇಖಕನ ಪ್ರಕಾರ ' ವಿನಿಮಯದ ಮಾಧ್ಯಮವಾಗಲು ವಿಶೇಷವಾಗಿ ನಿರ್ಮಿಸಿದ ಹಾಗೂ ಮೀಸ ಲಿರಿಸಿದ ವಸ್ತುವೇ ಹಣ.' ಡಿ. ಎಚ್. ರಾಬರ್ಟ್‌ಸನ್ ಅವರು ' ವಸ್ತುಗಳ ವಿನಿಮಯ ಗಳಲ್ಲಿ ಹಾಗೂ ಬೇರೆ ವಿಧದ ವ್ಯಾವಹಾರಿಕ ಋಣಗಳನ್ನು ತೀರಿಸುವಲ್ಲಿ ಸಾಮಾನ್ಯವಾಗಿ ಒಪ್ಪಿಗೆ ಪಡೆದಿರುವ ವಸ್ತುವೇ ಹಣ ' ಎಂದು ಅಭಿಪ್ರಾಯಪಟ್ಟಿರುವರು.

ಹತ್ತೊಂಬತ್ತನೆಯ ಶತಮಾನದ ಕ್ಲಾಸಿಕಲ್ (ಲಕ್ಷಣ) ಅರ್ಥಶಾಸ್ತ್ರಜ್ಞರ ಪ್ರಕಾರ ಹಣದ ಬಳಕೆಯಿಂದ ಉತ್ಪಾದನೆಯ ನಿಜವಾದ ವಿಧಾನದ ಮೇಲೆ ಯಾವ ವಿಶಿಷ್ಟ ಪರಿಣಾಮವೂ ಉಂಟಾಗುದಿಲ್ಲ. ಅಂದರೆ ಅವರ ದೃಷ್ಟಿಯಲ್ಲಿ ಹಣವೆನ್ನುವುದು ಕೆಲಸಕ್ಕೆಬಾರದ ಒಂದು ಬರಡುವಸ್ತು. ಪ್ರಸಿದ್ಧ ಅರ್ಥಶಾಸ್ತ್ರಜ್ಞ ಆಡಂಸ್ಮಿತ್

ಹಣವನ್ನು ಒಂದು ಸ್ವಲ್ಪವೂ ಹುಲ್ಲು ಬೆಳೆಯದ ಹೆದ್ದಾರಿಗೆ ಹೋಲಿಸಿದ್ದಾನೆ. ಆವನ ದೃಷ್ಟಿಯಲ್ಲಿ ಹಣ ವಿನಿಮಯ ಕಾರ್ಯದಲ್ಲಿ ನೆರವನ್ನು ನೀಡುವುದೇ ಹೊರತು ಆರ್ಥಿಕ ವ್ಯವಸ್ಥೆಯಲ್ಲಿ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಆದರೆ ಇಂದಿನ ಆಧುನಿಕ ಯುಗದಲ್ಲಿ ಕ್ಲಾಸಿಕಲ್ ಅರ್ಥಶಾಸ್ತ್ರಜ್ಞರ ಅಭಿಪ್ರಾಯಗಳಿಗೆ ಅಷ್ಟಾಗಿ ಮನ್ನಣೆ ಇಲ್ಲ. ಇಂದು 'ದುಡ್ಡಿದ್ದವನೇ ದೊಡ್ಡಪ್ಪ.' ಹಣದ ಆಧಾರವೊಂದರಿಂದಲೇ ಇಂದಿನ ಆರ್ಥಿಕ ಪ್ರಪಂಚದಲ್ಲಿ ಎಂತಹ ಕಷ್ಟದ ಕಾರ್ಯವನ್ನಾದರೂ ಸುಲಭವಾಗಿ ಸಾಧಿಸಬಹುದು. ಅರ್ಥ ಯಶಸ್ಸಿಗೆ ಒಂದು ಮುಖ್ಯಸಾಧನ. ಜನರ ಮಿತಿ ಇಲ್ಲದ ಬಯಕೆಗಳ ಪೂರೈಕೆಗೆ, ಅಧಿಕ ಪ್ರಮಾಣದ ಉತ್ಪಾದನೆಗೆ, ಸಿದ್ಧವಸ್ತುಗಳ ಹಂಚುವಿಕೆಗೆ, ಮಾರುಕಟ್ಟೆಗಳ ಅಭಿವೃದ್ಧಿಗೆ, ಸಾರಿಗೆ ಸಂಪರ್ಕಗಳ ಅಭಿವೃದ್ಧಿಗೆ ಹಣ ಮುಖ್ಯ ಆಧಾರ ವಾಗಿದೆ. ಹಣದಿಂದ ಎಲ್ಲ ಭೌತಿಕ ಸುಖಸಂತೋಷಗಳನ್ನು ಪಡೆಯಬಹುದು. ಆಧುನಿಕ ಪ್ರಪಂಚದಲ್ಲಂತೂ ಹಣದ ಪ್ರಾಮುಖ್ಯತೆ, ಪ್ರಭಾವಗಳು ದಿನೇದಿನೇ ಅಧಿಕ ವಾಗುತ್ತಿವೆ. ಮಾನವ ನಿರ್ಮಿತವಾದ ಅನೇಕ ವಸ್ತುಗಳಲ್ಲಿ ಹಣವು ಅದ್ಭುತವಾದ ಸ್ಥಾನವನ್ನು ಪಡೆದಿದೆ.

ಒಟ್ಟಿನಲ್ಲಿ ಹೇಳುವುದಾದರೆ, ವಿನಿಮಯ ಮಾಧ್ಯಮವಾಗಿ, ಸಾಲಗಳನ್ನು ನಿರ್ಧರಿಸಲು ಉಪಯೋಗಿಸುವ ಹಾಗೂ ಸಾರ್ವತ್ರಿಕ ಒಪ್ಪಿಗೆ ಪಡೆದಿರುವ ವಸ್ತುವೇ ಹಣ. ಹಣವು ಈಗಿನ ಪ್ರಪಂಚದಲ್ಲಿ ಹಿರಿದಾದ ಪಾತ್ರಹೊಂದಿದ್ದು, ಕೆಲವು ಮುಖ್ಯ ಕಾರ್ಯಗಳನ್ನೂ ನಿರ್ವಹಿಸುತ್ತದೆ.

ಹಣದ ಕಾರ್ಯಗಳು : ಆಧುನಿಕ ಅರ್ಥವ್ಯವಸ್ಥೆಯಲ್ಲಿ ಹಣವು (i) ವಿನಿಮಯ ಮಾಧ್ಯಮದ, (ii) ಮೌಲ್ಯಮಾಪನದ, (iii) ಮೌಲ್ಯಶೇಖರಣೆಯ ಹಾಗೂ (iv) ಮುಂದೂಡುವ ಪಾವತಿಯ ಸಾಧನಗಳಾಗಿವೆ.

(i) **ವಿನಿಮಯ ಮಾಧ್ಯಮ ಸಾಧನ :** ಆಧುನಿಕಯುಗದಲ್ಲಿ ಹಣವು ನಿರ್ವಹಿಸುವ ಮೊದಲನೆಯ ಕಾರ್ಯ ವಸ್ತುಗಳನ್ನು ಮತ್ತು ಸೇವೆಗಳನ್ನು ಅದಲು ಬದಲು ಮಾಡಲು ನೆರವಾಗುವುದು. ಹಣವು ವಿನಿಮಯ ಮಾಧ್ಯಮವಾಗಿ ವರ್ತಿಸುತ್ತದೆ. ಅಂದರೆ ಯಾವುದೇ ವಸ್ತುವನ್ನು ಯಾವುದೇ ಸಮಯದಲ್ಲಿ ಕೊಳ್ಳಲು, ಮಾರಲು, ಹಣವು ವಿನಿಮಯದ ಮಾಧ್ಯಮವಾಗಿ ಕೆಲಸಮಾಡುವುದು. ಇಲ್ಲಿ ವಸ್ತುಗಳ ಮತ್ತು ಸೇವೆಗಳ ವಿನಿಮಯವು ಹಣದ ಮುಖಾಂತರ ನಡೆಯುವುದು· ನಮ್ಮಲ್ಲಿರುವ ವಸ್ತುಗಳನ್ನು ಹಣಕ್ಕೆ ಮಾರಾಟಮಾಡಬಹುದು. ಬಂದ ಹಣದಿಂದ ನಮಗೆ ಬೇಕಾದ ಇತರ ವಸ್ತುಗಳನ್ನು ಕೊಳ್ಳಬಹುದು. ಇದರಂತೆಯೇ ಶಿಕ್ಷಕರು, ಡಾಕ್ಟರುಗಳು ಹಣಕ್ಕೆ ತಮ್ಮ ಸೇವೆಯನ್ನು ಮಾರಿ, ಆದರಿಂದ ತಮಗೆ ಬೇಕಾದ ವಸ್ತುಗಳನ್ನು ಕೊಳ್ಳುವರು. ಈ ಕಾರ್ಯವು ಸಾಟ ಪದ್ಧತಿಯ ಮೊದಲನೆಯ

ದೋಷವನ್ನು ನಿವಾರಿಸುವುದು. ಸಾಟಿ ಪದ್ಧತಿಯಲ್ಲಿ ಇಚ್ಛೆಗಳು ಹೊಂದಾಣಿಕೆಯಾಗಲೇ ಬೇಕು. ಇಲ್ಲದಿದ್ದರೆ ವಸ್ತುಗಳ ವಿನಿಮಯವಾಗುವುದಿಲ್ಲ. ಆದರೆ ಹಣದ ಪ್ರಪಂಚದಲ್ಲಿ ಇಚ್ಛೆಗಳ ಹೊಂದಾಣಿಕೆ ಅನವಶ್ಯಕ. ಈಗ ಹಣವು ಈ ದೋಷಗಳನ್ನು ಹೋಗಲಾಡಿಸಿ ವಸ್ತುಗಳ ವಿನಿಮಯ ಸರಾಗವಾಗಿ ನಡೆಯಲು ನೆರವಾಗಿದೆ.

(ii) **ಹಣವು ಮೌಲ್ಯಮಾಪನದ ಸಾಧನ :** ಹಣವು ನಿರ್ವಹಿಸುವ ಮತ್ತೊಂದು ಕಾರ್ಯ ಎಲ್ಲಿ ವಸ್ತುಗಳ ಮತ್ತು ಸೇವೆಗಳ ಮೌಲ್ಯವನ್ನು ನಿರ್ಧರಿಸುವುದು. ಹಣರಹಿತ ಸಮಾಜದಲ್ಲಿ ಎಲ್ಲ ವಸ್ತುಗಳ ಹಾಗೂ ಸೇವೆಗಳ ಬೆಲೆಯನ್ನು ನಿರ್ಧರಿಸುವುದು ಕಷ್ಟದ ಕೆಲಸವಾಗಿತ್ತು. ಆಗ ವಸ್ತುಗಳಿಗೆ ಒಂದು ಸಾಮಾನ್ಯ ಮೌಲ್ಯಮಾಪನವಿರಲಿಲ್ಲ. ಆದರೆ ಈಗ ಬಟ್ಟೆಯ ಅಳತೆಯನ್ನು ಮೀಟರ್‌ಗಳಲ್ಲಿ ಅಳೆಯುವಂತೆ, ವಸ್ತುಗಳ ಬೆಲೆಯನ್ನು ಹಣದಲ್ಲಿ ತಿಳಿಯುತ್ತೇವೆ. ಆದ್ದರಿಂದ ಹಣ ಎಲ್ಲವಸ್ತುಗಳ ಮತ್ತು ಸೇವೆಗಳ ಮೌಲ್ಯದ ಅಳತೆಗೋಲೆಂದು ಹೇಳಬಹುದು. ಈ ಕಾರ್ಯ ಸಾಟಿಪದ್ಧತಿಯ ದೋಷವಾದ ಮೌಲ್ಯಮಾಪನದ ಅಭಾವವನ್ನು ನಿವಾರಿಸಿದೆ. ಹೇಗೆಂದರೆ ಹಣರಹಿತ ಸಮಾಜದಲ್ಲಿ ಒಂದು ಚೀಲ ಜೋಳ ಅಥವಾ ಅಕ್ಕಿಯ ಬೆಲೆ 10 ಕುರಿಗಳು, ಇದರಿಂದ ವಿನಿಮಯವು ಸರಾಗವಾಗಿ ನಡೆಯುತ್ತಿರಲಿಲ್ಲ. ಆದರೆ ಈಗಿನ ಪ್ರಪಂಚದಲ್ಲಿ ಎಲ್ಲ ವಸ್ತುಗಳ ಬೆಲೆಯನ್ನು ಹಣದ ಮೂಲಕ ನಿರ್ಧರಿಸಬಹುದು.

(iii) **ಮೌಲ್ಯ ಶೇಖರಣೆಯ ಸಾಧನ :** ಹಣ ಮೌಲ್ಯ ಶೇಖರಣೆಗೆ ಅತಿ ಮುಖ್ಯಸಾಧನ. ಹಣದಿಂದ ಮನುಷ್ಯ ತನಗೆ ಬೇಕಾದವಸ್ತುಗಳನ್ನು ಮತ್ತು ಸೇವೆಗಳನ್ನು ಪಡೆಯಬಹುದು. ಅಂತಹ ಅದ್ಭುತ ಶಕ್ತಿಯನ್ನು ಅದು ಪಡೆದಿದೆ. ಆದ್ದರಿಂದ ತನ್ನ ಇಡೀ ಬಾಳನ್ನು ಮನುಷ್ಯ ಹಣಗಳಿಸಲು ವಿನಿಯೋಗಿಸುವುದಲ್ಲದೆ ಗಳಿಸಿದ ಹಣವನ್ನು ಶೇಖರಿಸಿಡುತ್ತಾನೆ. ಮಾನವ ತನ್ನ ಸಂಪತ್ತನ್ನು ಹಣದರೂಪದಲ್ಲಿ ಶೇಖರಿಸಿಟ್ಟರೆ ಯಾವುದೇ ಆಪತ್ತು ಉಂಟಾದರೂ ತೊಂದರೆಗೊಳಗಾಗುವುದಿಲ್ಲ. ಈ ಕಾರ್ಯದಿಂದ ಸಾಟಿಪದ್ಧತಿಯ ದೋಷನಿವಾರಣೆಯಾಗಿದೆ. ಹಿಂದಿನ ಕಾಲದಲ್ಲಿ ಸಂಪತ್ತನ್ನು ವಸ್ತುಗಳ ರೂಪದಲ್ಲಿ ಅಂದರೆ ಜೋಳ, ರಾಗಿ, ಬತ್ತ, ಗೋಧಿ, ಕುರಿ, ಕೋಳಿ, ಹಂದಿಗಳು ಇತ್ಯಾದಿ ರೂಪಗಳಲ್ಲಿ ಶೇಖರಿಸಿಡುತ್ತಿದ್ದರು. ಇವು ನಾಶವಾಗುವ ಸಂಭವವಿದೆ. ಮೇಲಾಗಿ ಸಂಪತ್ತು ದಿನೇ ದಿನೇ ಕುಗ್ಗುತ್ತಲೂ ಇತ್ತು, ಆದರೆ ಹಣವು ಸ್ಥಿರತೆಯನ್ನು ಹೊಂದಿರುವುದರಿಂದ ಹಣವನ್ನು ಸಂಪತ್ತಿನರೂಪದಲ್ಲಿ ಶೇಖರಿಸಿಡಬಹುದು. ಈಗ ಎಲ್ಲರೂ ಅವರುಳಿ ಇರುವ ಧಾನ್ಯಗಳನ್ನು, ಪ್ರಾಣಿಗಳನ್ನು ಮಾರಾಟಮಾಡಿ ಬಂದ ಹಣವನ್ನು ಶೇಖರಿಸಿಡುತ್ತಾರೆ. ಸಂಪತ್ತನ್ನು ಕೂಡಿಸಲು ಹಣ ಅನುಕೂಲವಾದ ಸಾಧನ. 1,000 ರೂಪಾಯಿಗಳನ್ನು ಉಳಿತಾಯಮಾಡಿ ಬ್ಯಾಂಕಿನಲ್ಲಿಡಬಹುದು ಹಾಗೂ ಬೇಕಾದಾಗ ಅದನ್ನು ಹಿಂದಕ್ಕೆ ಪಡೆದು ಬಳಸಬಹುದು. ಈ ರೀತಿ ಶೇಖರಿಸಿದ ಹಣ ನಾಶವಾಗಲಾರದು. ಬ್ಯಾಂಕಿನಲ್ಲಿ ಹಣವನ್ನಿಡುವುದರಿಂದ ಆ ಹಣವು ಬಡ್ಡಿಯನ್ನು

ದುಡಿಯುತ್ತದೆ. ಕಳ್ಳರಭಯವಿರುವುದಿಲ್ಲ. ಆದರೆ ಹಣದ ಬೆಲೆಯಲ್ಲಿ ಏರಿಳಿತಗಳಾಗ ದಂತೆ ನೋಡಿಕೊಳ್ಳಬೇಕಾದುದು ಕೇಂದ್ರಬ್ಯಾಂಕಿನ ಕರ್ತವ್ಯ. ಇಲ್ಲದಿದ್ದರೆ ಜನರು ಹಣದ ಬಗ್ಗೆ ನಂಬಿಕೆ ಕಳೆದುಕೊಳ್ಳುವರು.

(iv) **ಪಾವತಿಯನ್ನು ಮುಂದೂಡುವ ಸಾಧನ :** ಪಾವತಿಯನ್ನು ಮುಂದೂಡಲು ಹಣವು ಮುಖ್ಯಸಾಧನವಾಗಿ ಪರಿಣಮಿಸಿದೆ. ಈಗಿನ ನಾಗರಿಕ ಪ್ರಪಂಚದಲ್ಲಿ ನಗದು ಹಣದ ವ್ಯಾಪಾರಕ್ಕಿಂತ ಸಾಲದ ಹಣದ ವ್ಯವಹಾರವೇ ಹೆಚ್ಚು. ವಸ್ತುಗಳನ್ನು ಕೊಂಡಕೂಡಲೇ ಹಣವನ್ನು ಕೊಡದೆ, ಕೆಲವುಕಾಲದ ನಂತರ ಕೊಡುವುದಾಗಿ ವಾಗ್ದಾನ ಮಾಡುತ್ತಾರೆ. ಸಾಹುಕಾರನಾಗಲೀ, ವ್ಯಾಪಾರಸ್ಥನಾಗಲೀ ಸಾಲ ಕೊಡುವ ಮುಖ್ಯಕಾರಣ ಹಣದ ಮೌಲ್ಯ ಸ್ಥಿರವಾಗಿರುವುದು. ಹಣವನ್ನು ಹಿಂದಕ್ಕೆ ಪಡೆಯುವಾಗ ಆ ಹಣಕ್ಕೆ ಬಡ್ಡಿ ಸಂದಾಯವಾಗುತ್ತದೆ.

ಒಟ್ಟಿನಲ್ಲಿ ಹಣ ಮೇಲಿನ ನಾಲ್ಕು ಕಾರ್ಯಗಳನ್ನು ನಿರ್ವಹಿಸಿ, ಸಾಟಿಪದ್ಧತಿಯಲ್ಲಿ ಕಂಡುಬರುವ ದೋಷಗಳನ್ನು ಪರಿಹರಿಸಿದೆ.

ಹಣದ ಮೌಲ್ಯ

ಹಣದ ಮೌಲ್ಯವೆಂದರೆ ಅದರ ಕೊಳ್ಳುವ ಶಕ್ತಿ ಅಥವಾ ಹಣದ ಒಂದು ಘಟಕ ಎಷ್ಟು ವಸ್ತುಗಳನ್ನು ಕೊಳ್ಳಬಲ್ಲದು ಎಂಬುದು ಆಗಿದೆ. ಒಂದು ವಸ್ತುವಿನ ಮೌಲ್ಯವನ್ನು ಅದರ ಬೆಲೆಯ ಮೂಲಕ ನಿರ್ಧರಿಸಲಾಗುವುದು ; ಆದರೆ ಹಣದ ಮೌಲ್ಯವನ್ನು ಹಣದಿಂದಲೇ ನಿರ್ಧರಿಸಲಾಗುವುದಿಲ್ಲ. ಹಣದ ವ್ಯವಸ್ಥೆಯಲ್ಲಿ ಎಲ್ಲ ವಸ್ತುಗಳ ಹಾಗೂ ಸೇವೆಗಳ ಮೌಲ್ಯವನ್ನು ಹಣವೆಂಬ ಅಳತೆಗೋಲಿನಿಂದ ಅಳೆಯುತ್ತೇವೆ. ಉದಾಹರಣೆಗೆ, ಒಂದು ಬುಷ್‌ಷರಟಿನ ಬೆಲೆ 40 ರೂಪಾಯಿ. ಒಂದು ಪೆನ್ನಿನ ಬೆಲೆ 5 ರೂಪಾಯಿಗಳು ಇತ್ಯಾದಿ; ಆದರೆ ಹಣದ ಮೌಲ್ಯವನ್ನು ಅಳೆಯುವ ನಿರ್ದಿಷ್ಟವಾದ ಅಳತೆಗೋಲಿಲ್ಲ. ಆದಕಾರಣ ಹಣದ ಮೌಲ್ಯವನ್ನು ಇತರ ವಸ್ತುಗಳ ಬೆಲೆಗಳ ಮೂಲಕ ಅಳೆಯಬಹುದು. ಹಣದ ಮೌಲ್ಯ ಅದರ ಕೊಳ್ಳುವ ಶಕ್ತಿಯನ್ನವಲಂಬಿಸಿರುತ್ತವೆ. ಆದರೆ ವಸ್ತುಗಳ ಬೆಲೆಗಳು ಬೇಡಿಕೆ ಹಾಗೂ ಪೂರೈಕೆಗಳನ್ನು ಅವಲಂಬಿಸಿರುತ್ತವೆ. ಅಂದರೆ ವಸ್ತುವಿನ ಬೆಲೆಯನ್ನು ಬೇಡಿಕೆ ಹಾಗೂ ಪೂರೈಕೆಶಕ್ತಿಗಳ ಮೇಲೆ ನಿರ್ಧರಿಸಲಾಗುತ್ತದೆ. ಆದರೆ ಹಣದ ಮೌಲ್ಯವನ್ನು ಈ ರೀತಿ ನಿರ್ಧರಿಸಲಾಗುವುದಿಲ್ಲ.

ಹಣದ ಮೌಲ್ಯವು ಸ್ಥಿರವಾಗಿರದೆ ಬದಲಾಗುತ್ತಿರುತ್ತದೆ. ಕೆಲವು ವೇಳೆ ಬೆಲೆಗಳು ಇಳಿದಾಗ ಹಣವು ಹೆಚ್ಚು ವಸ್ತುಗಳನ್ನು ಕೊಳ್ಳಬಲ್ಲದು; ಹಾಗೆಯೇ ಬೆಲೆಗಳು ಏರಿದಾಗ ಕೆಲವು ವೇಳೆ ಕಡಮೆ ವಸ್ತುಗಳನ್ನು ಕೊಳ್ಳಬಲ್ಲದು. ಹಣ ಹೆಚ್ಚಿಗೆ ವಸ್ತುಗಳನ್ನು ವಿನಿಮಯಮಾಡಿಕೊಂಡಾಗ ಹಣದ ಮೌಲ್ಯ ಜಾಸ್ತಿ ಎನ್ನುತ್ತೇವೆ. ಒಂದು ರೂಪಾಯಿಗೆ

1 ಕೆಜಿ ಅಕ್ಕಿ ಸಿಕ್ಕಾಗ 5 ರೂಪಾಯಿಗಳಿಗೆ 5 ಕೆಜಿ ಅಕ್ಕಿಯನ್ನು ಕೊಳ್ಳಬಹುದು. ಆದರೆ ಅಕ್ಕಿ ಬೆಲೆ ಒಂದು ರೂಪಾಯಿಗೆ $\frac{1}{2}$ ಕೆಜಿಯಾದರೆ 5 ರೂಪಾಯಿಗಳಿಗೆ $2\frac{1}{2}$ ಕೆಜಿ ಅಕ್ಕಿಯನ್ನು ಕೊಳ್ಳಬಹುದು. ಈಗ ಹಣದ ಮೌಲ್ಯ ಕಡಮೆಯಾಯಿತು. ಏಕೆಂದರೆ ಮೊದಲ ಒಂದು ರೂಪಾಯಿಗೆ 1 ಕೆಜಿ ಅಕ್ಕಿಯನ್ನೂ ಕೊಳ್ಳಬಹುದಿತ್ತು. ಆದರೆ ಬೆಲೆಗಳ ಏರಿಕೆಯಿಂದ ಅದೇ ಒಂದು ರೂಪಾಯಿಗೆ $\frac{1}{2}$ ಕೆಜಿ ಅಕ್ಕಿಯನ್ನು ಕೊಳ್ಳಬಹುದಿತ್ತು. ಮುಂದೆ ಅಕ್ಕಿಯ ಬೆಲೆ ಒಂದು ಕೆಜಿಗೆ 50 ಪೈಸೆ ಆದಾಗ ಹಣದ ಮೌಲ್ಯ ಏರುತ್ತದೆ. ಹಣ ಹೆಚ್ಚುವಸ್ತುಗಳನ್ನು ಕೊಳ್ಳುವ ಶಕ್ತಿಪಡೆದಿದ್ದಾಗ ಹಣದ ಮೌಲ್ಯ ಹೆಚ್ಚಿಗೆ ಇದೆ ಎಂಬುದಾಗಿಯೂ, ಹಣವು ಕಡಮೆ ವಸ್ತುಗಳನ್ನು ಕೊಳ್ಳುವಾಗ ಹಣದ ಮೌಲ್ಯ ಸಾಮಾನ್ಯ ಬೆಲೆಯ ಪ್ರಮಾಣವನ್ನವ ಲಂಬಿಸಿರುತ್ತದೆ. ವಸ್ತುಗಳ ಬೆಲೆಗಳು ಹೆಚ್ಚಿದ್ದಾಗ ಹಣದ ಕೊಳ್ಳುವ ಶಕ್ತಿ ಕಡಮೆ ಇರುತ್ತದೆ. ವಸ್ತುಗಳ ಬೆಲೆಗಳು ಕಡಮೆ ಇದ್ದಾಗ ಹಣದ ಕೊಳ್ಳುವಶಕ್ತಿ ಹೆಚ್ಚು ಇರುತ್ತದೆ. ಸಾಮಾನ್ಯ ಬೆಲೆಯ ಪ್ರಮಾಣ ಹೆಚ್ಚಿಗೆ ಇದ್ದಾಗ ಹಣದ ಮೌಲ್ಯವು ಕಡಮೆಯಾಗಿ ಮತ್ತು ಸಾಮಾನ್ಯ ಬೆಲೆಯ ಪ್ರಮಾಣ ಕಡಮೆ ಇದ್ದಾಗ ಹಣದ ಮೌಲ್ಯ ಹೆಚ್ಚಾಗಿಇರುತ್ತದೆ. ಆದ್ದರಿಂದ ಹಣದ ಮೌಲ್ಯವನ್ನು ಕಂಡು ಹಿಡಿಯಬೇಕಾದರೆ ಸಾಮಾನ್ಯ ಬೆಲೆಯ ಪ್ರಮಾಣವನ್ನು ತಿಳಿದಿರುವುದು ಅವಶ್ಯಕ.

ಹಣದ ಮೌಲ್ಯವನ್ನು ಇತರ ಪದಾರ್ಥಗಳ ಮೌಲ್ಯವನ್ನು ನಿರ್ಧರಿಸುವಂತೆಯೇ ನಿರ್ಧರಿಸಬಹುದು. ಹಣದ ಮೌಲ್ಯವನ್ನು ನಿರ್ಧರಿಸಲು ಅನೇಕ ಸಿದ್ಧಾಂತಗಳಿವೆ. ಅವುಗಳಲ್ಲಿ (i) ಹಣದ ಪರಿಮಾಣ ಸಿದ್ಧಾಂತ ಹಾಗೂ (ii) ಉಳಿತಾಯ ಮತ್ತು ಬಂಡವಾಳ ಹೂಡುವಿಕೆಯ ಸಿದ್ಧಾಂತಗಳು ಮುಖ್ಯವಾದವುಗಳು.

(i) **ಹಣದ ಪರಿಮಾಣ ಸಿದ್ಧಾಂತ :** ವಸ್ತುಗಳ ಬೆಲೆಗಳು ಚಲಾವಣೆಯಲ್ಲಿರುವ ಹಣದ ಪರಿಮಾಣವನ್ನು ಅವಲಂಬಿಸಿರುತ್ತದೆ. ಅದನ್ನು ಹಣದ ಪರಿಮಾಣಸಿದ್ಧಾಂತದಿಂದ ತಿಳಿದುಕೊಳ್ಳಬಹುದು. ಹಣದ ಮೌಲ್ಯವು ರಾಷ್ಟ್ರದಲ್ಲಿ ವಸ್ತುಗಳನ್ನು ಕೊಳ್ಳುವ ಶಕ್ತಿಯನ್ನು ಅವಲಂಬಿಸಿರುವುದು. ಹತ್ತೊಂಬತ್ತನೆಯ ಶತಮಾನದಲ್ಲಿ ಹಣವನ್ನು ಚಿನ್ನ ಅಥವಾ ಬೆಳ್ಳಿಯ ಲೋಹಗಳಿಂದ ತಯಾರಿಸಲಾಗಿತ್ತು. ಹಣದ ಮೌಲ್ಯವನ್ನು ಆ ನಾಣ್ಯದ ಉತ್ಪಾದನಾ ವೆಚ್ಚದ ಮೇಲೆ ನಿರ್ಧರಿಸಬಹುದೆಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದರು. ಇಂದು ಹಣವನ್ನು ಕಾಗದದಿಂದ ತಯಾರಿಸಬೇಕಾಗಿದೆ. ಕಾಗದದ ಉತ್ಪಾದನಾ ವೆಚ್ಚ ಅಷ್ಟೇನೂ ಹೇಳಿಕೊಳ್ಳುವಂತಿಲ್ಲ. ಆದ್ದರಿಂದ ಉತ್ಪಾದನಾ ವೆಚ್ಚಕ್ಕೆ ಮತ್ತು ಹಣದ ಮೌಲ್ಯಕ್ಕೆ ಯಾವ ವಿಧವಾದ ಪರಸ್ಪರ ಸಂಬಂಧವಿಲ್ಲ. ಆದ್ದರಿಂದ ಹಣದ ಪರಿಮಾಣ ಸಿದ್ಧಾಂತವು ಹಣದ ಮೌಲ್ಯವನ್ನು ಯಾವ ರೀತಿ

ನಿರ್ಧರಿಸಬಹುದೆಂಬುದನ್ನು ತಿಳಿಸುವುದು. ಹಣದ ಮೌಲ್ಯವು ಚಲಾವಣೆಯಲ್ಲಿರುವ ಹಣದ ಗಾತ್ರವನ್ನು ಅವಲಂಬಿಸಿರುತ್ತದೆ ಎಂಬುದನ್ನು ಹಣಕಾಸಿನ ಪರಿಮಾಣ ತತ್ವದಲ್ಲಿ ತಿಳಿಸಲಾಗಿದೆ. ಅಂದರೆ ವಸ್ತುಗಳ ಪೂರೈಕೆ ಒಂದೇ ಸಮನಾಗಿದ್ದಾಗ ಚಲಾವಣೆ ಹಣದ ಗಾತ್ರವನ್ನು ಏರಿಸಿದಲ್ಲಿ ಹಣದ ಮೌಲ್ಯ ಕಡಮೆಯಾಗುತ್ತದೆ. ಹಾಗೆಯೇ ವಸ್ತುಗಳ ಪೂರೈಕೆ ಒಂದೇ ಸಮನಾಗಿದ್ದಾಗ ಚಲಾವಣೆಯ ಹಣದ ಗಾತ್ರವನ್ನು ತಗ್ಗಿಸಿದಲ್ಲಿ ಹಣದ ಮೌಲ್ಯ ಹೆಚ್ಚಾಗುವುದು. ಈ ಸಿದ್ಧಾಂತದ ಬಗ್ಗೆ (ಅ) ಇರ್‌ವಿಂಗ್‌ಫಿಷರ್ ಹಾಗೂ (ಆ) ಕೇಂಬ್ರಿಜ್ ಈ ಎರಡು ಸಮೀಕರಣಗಳು ರೂಪುಗೊಂಡಿವೆ. ಹಣದ ಮೌಲ್ಯವು ಬೆಲೆಗಳ ಮಟ್ಟವನ್ನವಲಂಬಿಸಿರುತ್ತದೆ. ಆದರೆ ವಸ್ತುಗಳ ಬೆಲೆಗಳ ಏರಿಳಿತಗಳು ಚಲಾವಣೆಯಲ್ಲಿರುವ ಹಣದ ಪರಿಮಾಣವನ್ನು ಅವಲಂಬಿಸಿರುತ್ತದೆ. ಅಂದರೆ ಹಣದ ಮೌಲ್ಯವು ಚಲಾವಣೆಯಲ್ಲಿರುವ ಹಣದ ಪರಿಮಾಣವನ್ನು ಅವಲಂಬಿಸಿರುವುದರಿಂದ ಈ ತತ್ವಕ್ಕೆ ಹಣದ ಪರಿಮಾಣ ಸಿದ್ಧಾಂತವೆಂದು ಕರೆಯುವರು. ಈ ಎರಡೂ ಸಮೀಕರಣಗಳು ಹಣದ ಬೇಡಿಕೆ ಮತ್ತು ಪೂರೈಕೆಗಳಿಗೆ ಸಂಬಂಧಿಸಿದ ವಿಶೇಷ ಸ್ವಭಾವದ ಮೇಲೆ ರಚಿಸಲ್ಪಟ್ಟಿವೆ. ಹಣದ ಮೌಲ್ಯ ಇತರ ಪದಾರ್ಥಗಳ ಮೌಲ್ಯದಂತೆ ಬೇಡಿಕೆ ಮತ್ತು ಪೂರೈಕೆಗಳ ಸಮತೋಲನದಿಂದ ನಿರ್ಧಾರವಾಗುವುದು.

(ಅ) **ಫಿಷರ್ ಸಮೀಕರಣ :** ಅಮೆರಿಕಾದ ಖ್ಯಾತ ಅರ್ಥಶಾಸ್ತ್ರಜ್ಞ ಇರ್‌ವಿಂಗ್ ಫಿಷರ್ ಹಣದ ಪರಿಮಾಣ ಸಿದ್ಧಾಂತದ ಪ್ರತಿಪಾದಕನಾಗಿದ್ದಾನೆ. ಅವನು ಹಣದ ಮೌಲ್ಯವನ್ನು 1926 ರಲ್ಲಿ ಒಂದು ಸಿದ್ಧಾಂತವನ್ನು ಸಮೀಕರಣದ ಮೂಲಕ ಪ್ರತಿಪಾದಿಸಿದನು. ಅವನು ಪ್ರತಿಪಾದಿಸಿದ ನಿಯಮವನ್ನು, 'ಫಿಷರ್ ಸಮೀಕರಣ' ಎಂಬುದಾಗಿ ಕರೆಯುತ್ತಾರೆ. ಇವನ ಸಮೀಕರಣದ ಮುಖ್ಯ ತಿರುಳೆಂದರೆ ಹಣದ ಮೌಲ್ಯವು ಚಲಾವಣೆಯಲ್ಲಿರುವ ಹಣದ ಪರಿಮಾಣವನ್ನವಲಂಬಿಸಿರುವುದು. ಈ ಸಿದ್ಧಾಂತವನ್ನು ಜಾನ್‌ಲಾಕ್, ಡೇವಿಡ್‌ಹ್ಯೂಮ್ ಹಾಗೂ ಜಾನ್‌ಸ್ಟೂವರ್ಟ್ ಮಿಲ್ ಮುಂತಾದ ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಮೊದಲೇ ವಿವರಿಸಿದ್ದರು. ಫಿಷರ್ ಅದನ್ನು ಸಮೀಕರಣದ ಮೂಲಕ ಸ್ಪಷ್ಟಪಡಿಸಿದ್ದಾನೆ. ಇವನು 1911 ರಲ್ಲಿ 'ದಿ ಪರ್ಚೇಸಿಂಗ್ ಫಾವರ್ ಆಫ್ ಮನಿ' ಎಂಬ ಪುಸ್ತಕದಲ್ಲಿ ಪರಿಮಾಣ ಸಿದ್ಧಾಂತವನ್ನು ನಿರೂಪಿಸಿರುತ್ತಾನೆ. 17ನೆಯ ಶತಮಾನದಲ್ಲಿ ಜಾನ್‌ಲಾಕ್ ಎಂಬ ಪ್ರಸಿದ್ಧ ಇಂಗ್ಲೀಷ್ ತತ್ವಜ್ಞಾನಿ ಈ ಸಿದ್ಧಾಂತವನ್ನು ಕಾರ್ಯರೂಪಕ್ಕೆ ತಂದನು. ಕ್ರಿ. ಶ. 1752 ರಲ್ಲಿ ಡೇವಿಡ್‌ಹ್ಯೂಮ್ ತನ್ನ ಪ್ರಬಂಧವಾದ 'ಹಣ' ದಲ್ಲಿ ಈ ಸಿದ್ಧಾಂತವನ್ನು ಮತ್ತಷ್ಟು ವಿಸ್ತಾರವಾಗಿ ವಿವರಿಸಿದ್ದಾನೆ. ಜೆ. ಎಸ್. ಮಿಲ್ ಹಣದ ಪರಿಮಾಣ ತತ್ವಕ್ಕೆ ಸ್ಪಷ್ಟವಾದ ರೂಪಕೊಟ್ಟಿದ್ದಾನೆ. ಆತನ ಪ್ರಕಾರ ಹಣದ ಮೌಲ್ಯ ಹಣದ ಪರಿಮಾಣದೊಂದಿಗೆ ಬದಲಾಗುತ್ತಹೋಗುತ್ತದೆ. ಅಂದರೆ ಹಣದ ಪರಿಮಾಣ ಹೆಚ್ಚಾದಂತೆಲ್ಲ ಅದರ ಮೌಲ್ಯವು ಕಡಮೆಯಾಗುತ್ತಹೋಗುತ್ತದೆ. ಹಾಗೆಯೇ

ಹಣದ ಪರಿಮಾಣ ಕಡಮೆಯಾದಂತೆ ಅದರ ಮೌಲ್ಯವು ಹೆಚ್ಚುತ್ತಾ ಹೋಗುತ್ತದೆ. ಫಿಷರ್ ಈ ಸಿದ್ಧಾಂತಕ್ಕೆ ಸ್ಪಷ್ಟವಾದ ರೂಪುಕೊಟ್ಟನು. ಈತ ಹಣದ ಪರಿಮಾಣ ತತ್ವದ ಮುಖ್ಯ ಪ್ರತಿಪಾದಕ. ಆದ್ದರಿಂದ ಈ ಸಿದ್ಧಾಂತಕ್ಕೆ ಈತನ ಹೆಸರಿನೊಂದಿಗೆ ಸಮ್ಮಿಳನಗೊಂಡಿದೆ.

ಹಣದ ಪರಿಮಾಣತತ್ವ ಫಿಷರ್‌ನಿಂದ ಪ್ರಸಿದ್ಧಿಗೆ ಬಂದಿದೆ. ಈತ ಹಣದ ಪೂರೈಕೆ ಮತ್ತು ವಸ್ತುಗಳ ಬೆಲೆಗಳಿಗೆ ಇರುವ ಸಂಬಂಧವನ್ನು ಸಮೀಕರಣದ ರೂಪದಲ್ಲಿ ವಿವರಿಸಿರುವನು. ಫಿಷರ್ ಪ್ರಕಾರ ಹಣದ ಪರಿಮಾಣ ಮತ್ತು ಬೆಲೆಗೆ ಪ್ರಮಾಣಾನುಗುಣವಾದ ಪ್ರತ್ಯಕ್ಷ ಸಂಬಂಧವಿದೆ. ಆದ್ದರಿಂದ ಚಲಾವಣೆಯಲ್ಲಿರುವ ಹಣದ ಪರಿಮಾಣವು ದ್ವಿಗುಣಗೊಂಡರೆ ವಸ್ತುಗಳ ಬೆಲೆಗಳೂ ದ್ವಿಗುಣಗೊಳ್ಳುತ್ತವೆ. ಆದರೆ ಹಣದ ಮೌಲ್ಯ ಮೊದಲಿಗಿಂತ ಅರ್ಧದಷ್ಟು ಕಡಮೆಯಾಗುತ್ತದೆ. ಹಣದ ಪರಿಮಾಣ ಅರ್ಧದಷ್ಟು ಕಡಮೆಯಾದರೆ ಪದಾರ್ಥಗಳ ಬೆಲೆ ಅರ್ಧದಷ್ಟು ಕಡಮೆಯಾಗುತ್ತದೆ. ಹಣದ ಬೆಲೆಯು ಮೊದಲಿಗಿಂತ ದ್ವಿಗುಣವಾಗುತ್ತದೆ. ಈ ನಿಯಮ ಅನ್ವಯಿಸಬೇಕಾದರೆ ಇತರ ವಿಷಯಗಳು ಬದಲಾಯಿಸದೆ ಒಂದೇ ಸಮನಾಗಿರಬೇಕು. ಆ ವಿಷಯಗಳು ಪದಾರ್ಥಗಳ ಪೂರೈಕೆ, ಜನಸಂಖ್ಯೆ, ಜನರ ಅಭಿರುಚಿಗಳು, ಉತ್ಪಾದನೆಯ ವಿಧಾನಗಳಲ್ಲಿ ಬದಲಾವಣೆಯಾಗದಿರಬೇಕು. ಈ ರೀತಿ ಹಣದ ಮೌಲ್ಯವು ಹಣದ ಪರಿಮಾಣವನ್ನು ಅವಲಂಬಿಸಿರುತ್ತದೆ. ಹಣದ ಬೇಡಿಕೆ ವಸ್ತುವಿನ ಬೇಡಿಕೆಗಿಂತ ವಿಭಿನ್ನವಾಗಿದೆ. ಅಂದರೆ ಹಣದ ಬೇಡಿಕೆ ವಿಚಿತ್ರವಾದದ್ದು. ಜನರು ವಸ್ತುಗಳನ್ನು ಬೇಡುವ ಮುಖ್ಯಕಾರಣ ಆ ವಸ್ತುಗಳು ತುಷ್ಟಿಗುಣವನ್ನು ಹೊಂದಿರುತ್ತವೆ. ಜನರು ಹಣವನ್ನು ಬಯಸುವುದಕ್ಕೂ ವಸ್ತುಗಳನ್ನು ಬಯಸುವುದಕ್ಕೂ ವ್ಯತ್ಯಾಸವಿದೆ. ಏಕೆಂದರೆ ವಸ್ತುಗಳು ಜನರ ಬಯಕೆಗಳನ್ನು ನೇರವಾಗಿ ತೃಪ್ತಿಪಡಿಸುವ ಶಕ್ತಿಯನ್ನು ಹೊಂದಿರುತ್ತವೆ. ಅದನ್ನು ನಾವು ತುಷ್ಟಿಗುಣವೆನ್ನುತ್ತೇವೆ. ಆದರೆ ಹಣವು ಜನರ ಅಪೇಕ್ಷೆಗಳನ್ನು ನೇರವಾಗಿ ತೃಪ್ತಿಪಡಿಸುವುದಿಲ್ಲ. ಏಕೆಂದರೆ ಹಣವನ್ನು ಆಹಾರದಂತೆ ತಿನ್ನಲಾಗುವುದಿಲ್ಲ, ಬಟ್ಟೆಯಂತೆ ತೊಡಲಾಗುವುದಿಲ್ಲ. ಆದರೂ ಹಣ ವಸ್ತುಗಳನ್ನು ಕೊಳ್ಳುವ ಶಕ್ತಿಯನ್ನು ಪಡೆದಿರುವುದರಿಂದ ಜನರು ಅದನ್ನು ಬಯಸುತ್ತಾರೆ. ಹಣವು ವಿನಿಮಯ ಮಾಧ್ಯಮವಾದುದರಿಂದ ಜನರು ಅದನ್ನು ಅಪೇಕ್ಷಿಸುವರು.

ಫಿಷರ್ ಪ್ರಕಾರ ಹಣದಬೇಡಿಕೆ ಎಷ್ಟು ಪ್ರಮಾಣದಲ್ಲಿ ವಸ್ತುಗಳನ್ನು ಮಾರಾಟಕ್ಕಿಟ್ಟಿರುವರು ಎಂಬುದನ್ನು ಅವಲಂಬಿಸಿರುತ್ತದೆ. ಹೆಚ್ಚು ವ್ಯವಹಾರಗಳು ಉಂಟಾದರೆ ಹಣಕ್ಕೆ ಹೆಚ್ಚು ಬೇಡಿಕೆ ಇರುವುದು, ಕಡಮೆ ವ್ಯವಹಾರಗಳು ಉಂಟಾದರೆ ಹಣಕ್ಕೆ ಕಡಮೆ ಬೇಡಿಕೆ ಇರುವುದು ಎಂದು ತಿಳಿಯಬಹುದು. ವಸ್ತುಗಳು ಹಾಗೂ ಸೇವೆಗಳ ಪೂರೈಕೆ ಒಟ್ಟು ಉತ್ಪಾದನೆಯನ್ನು ಅವಲಂಬಿಸಿರುತ್ತದೆ. ಒಟ್ಟು ಉತ್ಪಾದನೆ ಲಭ್ಯ

ವಾಗುವ ಉತ್ಪಾದನಾಂಶಗಳನ್ನು ಹಾಗೂ ಉತ್ಪಾದನಾಂಶಗಳ ದಕ್ಷತೆಯನ್ನು ಅವಲಂಬಿಸಿರುತ್ತದೆ. ಕಡಮೆ ಅವಧಿಯಲ್ಲಿ ಈ ಎಲ್ಲ ಅಂಶಗಳು ಬಹುಮಟ್ಟಿಗೆ ಸ್ಥಿರವಾಗಿರುತ್ತವೆ. ಆದ್ದರಿಂದ ವಸ್ತುಗಳ ಹಾಗೂ ಸೇವೆಗಳ ಪೂರೈಕೆ ಹೆಚ್ಚು ಕಡಮೆ ಸ್ಥಿರವಾಗಿರುತ್ತವೆ. ಆದ್ದರಿಂದ ಹಣದ ಬೇಡಿಕೆ ಸಹ ಸ್ಥಿರವಾಗಿ ಇರುತ್ತದೆ. ಹಣಕ್ಕಿರುವ ಬೇಡಿಕೆಯನ್ನು ಕೊಟ್ಟಾಗ ಅದರ ಮೌಲ್ಯವು ಹಣದ ಪೂರೈಕೆಯನ್ನು ಅವಲಂಬಿಸಿರುತ್ತದೆ. ವಸ್ತುಗಳ ಬೆಲೆಗಳು ಯಾವರೀತಿ ಅವುಗಳ ಬೇಡಿಕೆ-ಪೂರೈಕೆಗಳ ಮೇಲೆ ನಿರ್ಧರಿಸಲ್ಪಡುವುವೋ, ಅದೇ ರೀತಿ ಹಣದ ಮೌಲ್ಯವು ಹಣದ ಪೂರೈಕೆ ಹಾಗೂ ಬೇಡಿಕೆಗಳಿಂದ ನಿರ್ಧರಿಸಲ್ಪಡುತ್ತದೆ. ಹಣದ ಪೂರೈಕೆ ಅಧಿಕಗೊಂಡರೆ ವಸ್ತುಗಳ ಬೆಲೆಗಳು ಏರುತ್ತವೆ. ಸಾಮಾನ್ಯ ಬೆಲೆಗಳ ಮಟ್ಟ ಏರಿದಂತೆ ಹಣದ ಮೌಲ್ಯ ಕುಗ್ಗುತ್ತದೆ. ಅಂದರೆ ಹಣದ ಪರಿಮಾಣ ಹಾಗೂ ಸಾಮಾನ್ಯ ಬೆಲೆಗಳಲ್ಲಿ ಪ್ರತ್ಯಕ್ಷ ಸಂಬಂಧವಿದೆ ಎಂಬುದು ಮನದಟ್ಟಾಗುತ್ತದೆ. ಈ ಸಂಬಂಧವನ್ನು 18ನೆಯ ಶತಮಾನದಲ್ಲಿ ಡೇವಿಡ್‌ಹ್ಯೂಮ್ ಎಂಬ ಅರ್ಥಶಾಸ್ತ್ರಜ್ಞ ಕಂಡುಹಿಡಿದನು. ಬೆಲೆಗಳ ಮಟ್ಟ ಮತ್ತು ಹಣದ ಪರಿಮಾಣಗಳ ಮಧ್ಯೆ ನೇರ ಹಾಗೂ ಅನುಪಾತಿ ಸಂಬಂಧವಿದೆ ಎಂದು ಅಭಿಪ್ರಾಯಪಟ್ಟನು. ಇದನ್ನೇ ಫಿಷರ್ 'ಹಣದ ಕೊಳ್ಳುವ ಶಕ್ತಿ' ಎಂಬ ಪುಸ್ತಕದಲ್ಲಿ ಅದೇ ವಿಚಾರಗಳಿಗೆ ಹೊಸರೂಪನೀಡಿ ಸಮೀಕರಣದ ಮೂಲಕ ವಿವರಿಸಿದ್ದಾನೆ.

ವಸ್ತುಗಳನ್ನು ಹಾಗೂ ಸೇವೆಗಳನ್ನು ಕೊಳ್ಳಲು ಹಣವನ್ನು ಉಪಯೋಗಿಸುತ್ತಾರೆ. ಅಂದರೆ ಹಣಕ್ಕೆ ವಸ್ತುಗಳನ್ನು ಕೊಳ್ಳುವ ಶಕ್ತಿ ಇದೆ. ವಸ್ತುಗಳ ಬೇಡಿಕೆಗೆ ಮತ್ತು ಹಣದ ಬೇಡಿಕೆಗೆ ವ್ಯತ್ಯಾಸವಿದೆ. ವಸ್ತುಗಳನ್ನು ಬೇಡುವುದು ಅವು ಉಪಯುಕ್ತತೆಯನ್ನು ಪಡೆದಿರುವುದರಿಂದ. ಹಣಕ್ಕೆ ಬೇಡಿಕೆ ಇರುವದು ಅದು ವಸ್ತುಗಳನ್ನು ಕೊಳ್ಳುವ ಶಕ್ತಿ ಪಡೆದಿರುವುದರಿಂದ. ಆದಕಾರಣ ಪರಿಮಾಣ ಸಿದ್ಧಾಂತದ ಪ್ರತಿಪಾದಕರು ಒಂದು ಸಮಾಜದಲ್ಲಿ ವಸ್ತುಗಳ ಮಾರಾಟದ ಪ್ರಮಾಣದ ಮೇಲೆ ಹಣಕ್ಕೆ ಬೇಡಿಕೆ ಇರುವುದೆಂದು ಅಭಿಪ್ರಾಯಪಟ್ಟಿರುವರು. ಆದರೆ ಈ ಅಭಿಪ್ರಾಯ ದೋಷದಿಂದ ಕೂಡಿದೆ. ಏಕೆಂದರೆ ಎಲ್ಲ ಹಣವನ್ನು ವಿನಿಮಯದ ಉದ್ದೇಶಕ್ಕಾಗಿ ಬಳಸುವುದಿಲ್ಲ. ಮುಂದೆ ವಸ್ತುಗಳು ಹೆಚ್ಚು, ಕಡಮೆಯಾದ ಸಂದರ್ಭಗಳಲ್ಲಿ ಹಣದ ಪೂರೈಕೆಯೂ ಸಹ ಹೆಚ್ಚು, ಕಡಮೆಯಾಗುತ್ತದೆ. ಅಂದರೆ ಪದಾರ್ಥಗಳ ಪ್ರಮಾಣವು ವ್ಯತ್ಯಾಸವಾದಂತೆ ಹಣದ ಪ್ರಮಾಣವೂ ವ್ಯತ್ಯಾಸವಾಗುವುದು.

ಆದರೆ ಆಧುನಿಕ ಅರ್ಥಶಾಸ್ತ್ರಜ್ಞರು ಹಣದ ಬೇಡಿಕೆಯನ್ನು ಮತ್ತೊಂದು ರೀತಿಯಲ್ಲಿ ವಿವರಿಸಿದ್ದಾರೆ. ಅವರ ಪ್ರಕಾರ ಹಣದ ಬೇಡಿಕೆ ಎಂದರೆ ಹಣವನ್ನು ಸಂಗ್ರಹಿಸಿಟ್ಟುಕೊಳ್ಳುವ ಬೇಡಿಕೆ. ಹಣವು ನಮ್ಮ ದೈನಂದಿನ ವೆಚ್ಚಗಳನ್ನು ಪೂರೈಸಲು ಹಾಗೂ ಅನಿರೀಕ್ಷಿತವಾಗಿ ಉಂಟಾಗುವ ತೊಡಕುಗಳನ್ನು ನಿವಾರಿಸಲು ಅತ್ಯಾ

ವಶ್ಯಕ. ಜನರು ಹಣವನ್ನು ಅಪೇಕ್ಷಿಸುವುದು ವೆಚ್ಚಮಾಡುವುದಕ್ಕಲ್ಲ. ಆ ಹಣವನ್ನು ನಗದು ರೂಪದಲ್ಲಿಟ್ಟುಕೊಂಡು ಆಪತ್ಕಾಲದಲ್ಲಿ ಬಳಸುವ ಉದ್ದೇಶ ಅವರದು. ದೈನಂದಿನ ವ್ಯವಹಾರಗಳನ್ನು ನಿರ್ವಹಿಸಲು ಅನಿರೀಕ್ಷಿತವಾಗಿ ಉಂಟಾಗುವ ವೆಚ್ಚಗಳನ್ನು ಪೂರೈಸಲು ಶೀರ ಬಡವರನ್ನು ಬಿಟ್ಟರೆ ಉಳಿದ ಪ್ರತಿಯೊಬ್ಬರೂ ಸ್ವಲ್ಪವಾದರೂ ನಗದು ಹಣವನ್ನು ಇಟ್ಟುಕೊಳ್ಳುತ್ತಾರೆ. ಸಂದರ್ಭಕ್ಕೆ ತಕ್ಕಂತೆ ನಗದು ಹಣದ ಪ್ರಮಾಣ ವ್ಯತ್ಯಾಸವಾಗುತ್ತ ಹೋಗುತ್ತದೆ. ಅಂದರೆ ವೇತನವನ್ನು ಪಡೆಯುವ ಒಬ್ಬ ಮನುಷ್ಯನ ಬಳಿ ವೇತನ ಬಂದ ಮೊದಲ ವಾರದಲ್ಲಿ ನಗದು ಅಧಿಕವಾಗಿದ್ದು ತಿಂಗಳ ಕೊನೆಯ ವಾರದಲ್ಲಿ ಅದರ ಪ್ರಮಾಣವು ಕಡಮೆಯಾಗುತ್ತ ಬರುತ್ತದೆ. ನವೀನ ಅರ್ಥಶಾಸ್ತ್ರಜ್ಞ ಜಾನ್‌ಮೇನಾರ್ಡ್‌ಕೀನ್ಸ್ ತನ್ನದೇ ಆದ ಅಭಿಪ್ರಾಯಗಳನ್ನು ಮಂಡಿಸಿದ್ದಾನೆ. ಅವನ ಪ್ರಕಾರ ಜನರು ಮೂರು ಬಗೆಯ ಪ್ರೇರಕಶಕ್ತಿಗಳಿಂದ ನಗದು ಹಣವನ್ನು ಹೊಂದಿರಲು ಬಯಸುತ್ತಾರೆ. ಕೀನ್ಸ್ ಹಣದೊಲವಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಿದ್ದಾನೆ. ಅವರ ದೃಷ್ಟಿಯಲ್ಲಿ ಹಣದ ಒಲವು (i) ವ್ಯವಹಾರ ಪ್ರೇರಕಶಕ್ತಿ, (ii) ಮುಂಜಾಗ್ರತೆಯ ಪ್ರೇರಕಶಕ್ತಿ ಹಾಗೂ (iii) ಸಟ್ಟಾವ್ಯಾಪಾರಶಕ್ತಿ, ಹೀಗೆ ಮೂರು ಬಗೆಯ ಪ್ರೇರಕಶಕ್ತಿಗಳಿಂದ ರೂಪಿತವಾಗಿದೆ.

ಹಣದ ಪೂರೈಕೆ ಲೋಹದ ಹಣ, ಕಾಗದದ ಹಣ ಹಾಗೂ ಬ್ಯಾಂಕುಗಳ ಠೇವಣಿಗಳನ್ನು ಅವಲಂಬಿಸಿರುತ್ತದೆ. ಅಂದರೆ ಒಂದು ದೇಶದ ಸಮಗ್ರ ಹಣ ಪ್ರಮಾಣ ಪ್ರಮುಖವಾಗಿ ಎರಡು ಅಂಶಗಳನ್ನು ಒಳಗೊಂಡಿರುವುದು. ಸಾಧಾರಣ ಹಣ, ಸಾಲರೂಪದ ಹಣ. ನಾಣ್ಯಗಳು ಮತ್ತು ನೋಟುಗಳು ಸಾಮಾನ್ಯ ಹಣದ ಗುಂಪಿಗೆ ಸೇರುತ್ತವೆ. ಚಿನ್ನದ ಹಣದ ಪದ್ಧತಿಯಲ್ಲಿ ಪ್ರಧಾನ ನಾಣ್ಯಗಳ ಪ್ರಮಾಣ ಚಿನ್ನದ ಪ್ರಮಾಣದ ಮೇಲೆ ನಿರ್ಧರಿಸಲ್ಪಡುತ್ತದೆ. ಲೋಹದ ಹಣದ ಪೂರೈಕೆ ಹೊಸದಾಗಿ ಚಿನ್ನದ ಗಣಿಗಳನ್ನು ಕಂಡುಹಿಡಿಯುವುದರಿಂದ ಹಾಗೂ ಹೊಸ ವಿಧಾನದಿಂದ ಚಿನ್ನವನ್ನು ಉತ್ಪಾದಿಸುವುದರ ಮೇಲೆ ಅವಲಂಬಿಸಿರುತ್ತದೆ. ಆದರೆ ಗಣಿಗಳಿಂದ ಚಿನ್ನದ ಅದಿರನ್ನು ತೆಗೆದಂತೆ ಚಿನ್ನದ ಪೂರೈಕೆ ಕಡಮೆಯಾಗುತ್ತದೆ. ಕಾಗದದ ಹಣದ ಪೂರೈಕೆಯು ಕೇಂದ್ರಬ್ಯಾಂಕಿನ ಹಣಕಾಸಿನ ನೀತಿಯನ್ನವಲಂಬಿಸಿರುವುದು. ಹಾಗೆಯೇ ಸರಕಾರದ ಹಣದ ಆವಶ್ಯಕತೆಯ ಮೇಲೂ ಬ್ಯಾಂಕುಗಳ ಠೇವಣಿಗಳು ಕೇಂದ್ರ ಬ್ಯಾಂಕಿನಲ್ಲಿ ಸದಸ್ಯ ರಾಷ್ಟ್ರಗಳ ಶೇಕಡಾ ಎಷ್ಟನ್ನು ಮೀಸಲು ನಿಧಿಯಾಗಿಟ್ಟಿರಬೇಕೆಂಬುದನ್ನೂ ಅವಲಂಬಿಸಿರುತ್ತದೆ. ಕೇಂದ್ರ ಬ್ಯಾಂಕು ಸರ್ಕಾರಿ ಸಾಲಪತ್ರಗಳ ಆಧಾರದ ಮೇಲೆ ನೋಟುಗಳನ್ನು ಹೊರಡಿಸುತ್ತದೆ. ಸಾಲದ ಹಣವು ಬ್ಯಾಂಕುಗಳು ಅನುಸರಿಸುವ ಹಣಕಾಸಿನ ನೀತಿಯನ್ನವಲಂಬಿಸಿರುತ್ತದೆ. ಇದು ಜನರು ಬ್ಯಾಂಕುಗಳಲ್ಲಿ ಎಷ್ಟರ ಮಟ್ಟಿಗೆ ನಂಬಿಕೆ ಹೊಂದಿದ್ದಾರೆ, ಅವರು ಬ್ಯಾಂಕುಗಳನ್ನು ಬಳಸುವ ಅಭ್ಯಾಸ ಎಷ್ಟರ ಮಟ್ಟಿಗಿದೆ ಎಂಬುದನ್ನು ಅವಲಂಬಿಸಿರುತ್ತದೆ. ಅಂದರೆ ಒಟ್ಟಿನಲ್ಲಿ ಬ್ಯಾಂಕುಗಳು ಸಾಲ

ಸೃಷ್ಟಿಸಲು ಇಟ್ಟಿರುವ ದ್ರವ್ಯಕೋಶ. ಜನರು ಬ್ಯಾಂಕುಗಳ ಸೌಲಭ್ಯವನ್ನು ಬಳಸುವ ಸ್ವಭಾವ ಹಾಗೂ ಕೇಂದ್ರ ಬ್ಯಾಂಕಿನ ಹಣಕಾಸಿನ ನೀತಿಗಳು ಬ್ಯಾಂಕು ಹಣದ ಪ್ರಮಾಣ ವನ್ನು ನಿರ್ಧರಿಸುತ್ತವೆ. ಆದ್ದರಿಂದ ವಸ್ತುವಿನ ಬೆಲೆಯನ್ನು ಬೇಡಿಕೆ ಮತ್ತು ಪೂರೈಕೆ ಗಳ ಪರಸ್ಪರ ಪ್ರಭಾವದ ಮೇಲೆ ನಿರ್ಧರಿಸಬಹುದು. ಹಣದ ಬೇಡಿಕೆಯನ್ನು ಕೊಟ್ಟರೆ, ಹಣದ ಮೌಲ್ಯವು ಹಣದ ಪೂರೈಕೆಯ ಅಂಶವನ್ನು ಅವಲಂಬಿಸಿರುತ್ತದೆ. ಅದೇರೀತಿ, ಹಣದ ಪೂರೈಕೆಯನ್ನು ಕೊಟ್ಟಿದ್ದರೆ, ಹಣದ ಮೌಲ್ಯ ಹಣದ ಬೇಡಿಕೆ ಯನ್ನವಲಂಬಿಸಿರುತ್ತದೆ. ಹಣಕ್ಕೆ ಬೇಡಿಕೆ ಹೆಚ್ಚಿದಂತೆಲ್ಲ, ಹಣದ ಮೌಲ್ಯವು ಹೆಚ್ಚಿರುತ್ತದೆ. ಹಣಕ್ಕೆ ಬೇಡಿಕೆ ಕಡಮೆಯಾದಾಗ ಹಣದ ಮೌಲ್ಯ ಕಡಮೆಯಾಗು ತ್ತದೆ. ಹಣದ ಒಟ್ಟು ಪೂರೈಕೆಯನ್ನು (i) ಅಸ್ತಿತ್ವದಲ್ಲಿರುವ ಹಣದ ಪರಿಮಾಣ ಹಾಗೂ (ii) ಚಲಾವಣೆಯ ವೇಗ ಈ ಎರಡು ಅಂಶಗಳಿಂದ ನಿರ್ಧರಿಸಬಹುದು.

ಇಡೀ ರಾಷ್ಟ್ರದಲ್ಲಿರುವ ನಾಣ್ಯಗಳು, ನೋಟುಗಳು ಹಾಗೂ ಠೇವಣಿಗಳು ಹಣದ ಪೂರೈಕೆಯನ್ನು ನಿರ್ಧರಿಸುವುದಲ್ಲದೆ, ಹಣದ ಚಲಾವಣೆಯ ವೇಗವನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಹಣದ ಚಲಾವಣೆಯ ವೇಗವೆಂದರೆ ಯಾವುದೇ ಒಂದು ನಿರ್ದಿಷ್ಟ ಅವಧಿಯಲ್ಲಿ ಒಂದು ಹಣದ ಘಟಕವು ಎಷ್ಟುಬಾರಿ ಸರಾಸರಿ ಬದಲಾಯಿ ಸುವುದು ಎಂಬುದಕ್ಕೆ ಚಲಾವಣೆಯ ವೇಗ ಎಂದು ಕರೆಯುತ್ತಾರೆ. ಉದಾಹರಣೆಗೆ 10 ರೂಪಾಯಿಗಳ ಒಂದು ನೋಟು 10 ಬಾರಿ ವಸ್ತುಗಳನ್ನು ಕೊಳ್ಳಲು ವಿನಿಮಯ ಮಾಡಿದಾಗ ಅಂದರೆ ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಬದಲಾಯಿಸಿದಾಗ ಅದು $10 \times 10 = 100$ ರೂಪಾಯಿಗಳ ಕೆಲಸ ಮಾಡಿದಂತಾಯಿತು. ಹಣದ ಒಟ್ಟು ಪೂರೈಕೆ ಎಂದರೆ ಒಟ್ಟು ಹಣ + ಚಲಾವಣೆಯಿಂದ ಗುಣಿಸಲ್ಪಟ್ಟ ಹಣ ಎಂದು ಅರ್ಥ.

ಹಣದ ಪೂರೈಕೆಯು ಒಟ್ಟುಪೂರೈಕೆ × ಚಲಾವಣೆಯ ವೇಗ $10 \times 10 = 100$ ರೂಪಾಯಿಗಳು : ಅಂದರೆ ನಾವು ಚಲಾವಣೆಯಲ್ಲಿರುವ ಹಣವನ್ನಲ್ಲದೆ ಚಲಾವಣೆಯ ವೇಗವನ್ನೂ ಸಹ ಗಣನೆಗೆ ತೆಗೆದುಕೊಳ್ಳಬೇಕು. ಆದರೆ ವಸ್ತುಗಳು ಕೈಗಳಿಂದ ಕೈಗಳಿಗೆ ಬದಲಾಯಿಸಲ್ಪಟ್ಟರೆ ಅವುಗಳ ಪೂರೈಕೆ ಹೆಚ್ಚುವುದಿಲ್ಲ. ಉದಾಹರಣೆಗೆ ಒಂದು ಅಕ್ಕಿ ಚೀಲವು 20 ಕೈಗಳನ್ನು ಬದಲಾಯಿಸಿದರೂ ಅದು 20 ಚೀಲಗಳಾಗುವುದಿಲ್ಲ.

ಫಿಷರ್ ಹಣದ ಬೇಡಿಕೆ ಹಾಗೂ ಪೂರೈಕೆಯ ಸಂಬಂಧವನ್ನು ಕೆಳಗಿನಂತೆ ಒಂದು ಸಮೀಕರಣದ ಮೂಲಕ ವಿವರಿಸಿರುವರು. ಇದು ಫಿಷರ್ ವಿನಿಮಯದ ಸಮೀಕರಣ ವೆಂದು ಪ್ರಸಿದ್ಧಿಯಾಗಿದೆ :

$$MV = PT$$

ಹಣದ ಒಟ್ಟು ಬೇಡಿಕೆ = ಹಣದ ಒಟ್ಟು ಪೂರೈಕೆ

$$P = \frac{MV}{T}$$ ಎಂಬುದಾಗಿಯೂ ಬರೆಯಬಹುದು.

M = ಚಲಾವಣೆಯಲ್ಲಿರುವ ಹಣ, ಈ ಹಣದಲ್ಲಿ ಚಲಾವಣೆಯಲ್ಲಿರುವ ನೋಟುಗಳು, ನಾಣ್ಯಗಳು ಸೇರಿದ್ದು ಬ್ಯಾಂಕು ಠೇವಣಿಗಳು ಹೊರತಾಗಿರುತ್ತವೆ.

V = ಹಣದ ಚಲಾವಣೆಯ ವೇಗ

ರಾಷ್ಟ್ರದಲ್ಲಿರುವ ಹಣ = $M \times V$ ಅಥವಾ MV

T = ರಾಷ್ಟ್ರದಲ್ಲಿ ವ್ಯಾಪಾರಕ್ಕೆ ಸಿದ್ಧವಾಗಿರುವ ವಸ್ತುಗಳು ಹಾಗೂ ಸೇವೆಗಳು

P = ವಸ್ತುಗಳ ಬೆಲೆ

ಈ ಮೇಲಿನ ಸಮೀಕರಣದಲ್ಲಿ ಬ್ಯಾಂಕುಗಳ ಠೇವಣಿಗಳನ್ನು ಹಣವೆಂದು ಭಾವಿಸಿಲ್ಲ. ಆದರೆ ನಾವು ಇಂದು ಆಧುನಿಕ ಯುಗದಲ್ಲಿ ಜೀವಿಸುತ್ತಿದ್ದೇವೆ. ಆಧುನಿಕ ಯುಗದಲ್ಲಿ ಹಣದ ಪೂರೈಕೆಯಲ್ಲಿ ನಾಣ್ಯಗಳು, ಬ್ಯಾಂಕು ನೋಟುಗಳಲ್ಲದೆ ಬ್ಯಾಂಕ್ ಠೇವಣಿಗಳೂ ಸಹ ಹಣದ ಕಾರ್ಯವನ್ನು ನಿರ್ವಹಿಸುತ್ತವೆ. ಸಾಲದ ಹಣವಾದ ಚೆಕ್‌ಗಳೂ ಚಲಾವಣೆಯಲ್ಲಿರುತ್ತವೆ. ಆದ್ದರಿಂದ ಫಿಷರ್ ತನ್ನ ಸಮೀಕರಣವನ್ನು ವಿಸ್ತರಿಸಿ ಅದರಲ್ಲಿ ಬ್ಯಾಂಕ್ ಠೇವಣಿಗಳನ್ನು ಅಳವಡಿಸಿದನು. ಬ್ಯಾಂಕುಗಳಲ್ಲಿ ಠೇವಣಿಗಳ ರೂಪದಲ್ಲಿರುವ ಹಣವನ್ನು ಗಣನೆಗೆ ತೆಗೆದುಕೊಂಡಾಗ ಸಮೀಕರಣದಲ್ಲಿ ಬದಲಾವಣೆಯಾಗುತ್ತದೆ. ಬ್ಯಾಂಕ್ ಠೇವಣಿಗಳನ್ನು M^1 ಎಂದೂ, ಇಂತಹ ಹಣದ ಚಲಾವಣೆಯ ವೇಗವನ್ನು V^1 ಎಂದೂ ಕರೆದನು. ಇದನ್ನು ಸರಕಾರದಿಂದ ಚಲಾವಣೆಗೆ ತಂದ ಹಣಕ್ಕೆ ಸೇರಿಸಿದಲ್ಲಿ ಸಮೀಕರಣವು $MV+M^1V^1=PT$ ಆಗುವುದು PTಯು $MV+M^1V^1$ಗೆ ಸಮನಾಗಿರುತ್ತದೆ. ಸಾಮಾನ್ಯ ಬೆಲೆಯ ಮಟ್ಟವನ್ನು ಕಂಡುಹಿಡಿಯಲು ಈ ಸಮೀಕರಣವನ್ನು ಉಪಯೋಗಿಸಬೇಕು.

$$P=\frac{MV+M^1V^1}{T}$$

P = ವಸ್ತುಗಳ ಬೆಲೆ

M = ಸಾಧಾರಣ ಹಣ, ಚಲಾವಣೆಯಲ್ಲಿ ಅಸ್ತಿತ್ವದಲ್ಲಿರುವ ಹಣ

M_1 = ಬ್ಯಾಂಕುಗಳಲ್ಲಿಟ್ಟಿರುವ ಹಣ

V = ಚಲಾವಣೆಯಲ್ಲಿರುವ ಸಾಧಾರಣ ಹಣ ಸಂಚರಿಸುವ ವೇಗ

V^1 = ಚಲಾವಣೆಯಲ್ಲಿರುವ ಬ್ಯಾಂಕುಗಳ ಹಣ ಸಂಚರಿಸುವ ವೇಗ

T = ಮಾರಾಟಕ್ಕಿರುವ ಸರಕುಸೇವೆಗಳ ಸಮಗ್ರಪ್ರಮಾಣ

ಫಿಷರನ ಪ್ರಕಾರ ಬೇಡಿಕೆಯು ಪೂರೈಕೆಗೆ ಸಮನಾಗಿರುತ್ತದೆ. $PT=MV+M^1V^1$ ಹಣದ ಪರಿಮಾಣವನ್ನು ವೇಗದಿಂದ ಗುಣಿಸಿ ಬಂದ ಗುಣಲಬ್ಧವನ್ನು ಪದಾರ್ಥಗಳ ಸಂಖ್ಯೆಯಿಂದ ಭಾಗಿಸಿದರೆ ಪದಾರ್ಥಗಳ ಬೆಲೆ ತಿಳಿಯುತ್ತದೆ. ಅಂದು

ಫಿಷರ್ ಸಿದ್ಧಾಂತದ ಮುಖ್ಯ ಅಂಶ ಸಾಮಾನ್ಯ ಬೆಲೆಯು ಮಟ್ಟ ಹೆಚ್ಚಿಗೆ ಇದ್ದಾಗ ಹಣದ ಮೌಲ್ಯ ಕಡಮೆಯಾಗುತ್ತದೆ. ಹಾಗೆಯೇ ಸಾಮಾನ್ಯ ಬೆಲೆಯು ಮಟ್ಟ ಕಡಮೆ ಇದ್ದಾಗ ಹಣದ ಮೌಲ್ಯ ಹೆಚ್ಚಾಗುತ್ತದೆ. ಅಂದರೆ ಈ ಸಿದ್ಧಾಂತದ ಮುಖ್ಯ ವಿಶ್ಲೇಷಣೆ ಹಣದ ಮೌಲ್ಯ ಪ್ರಮುಖವಾಗಿ ಹಣದ ಪರಿಮಾಣವನ್ನು ಅವಲಂಬಿಸಿರುತ್ತದೆ. ಯಾವುದೇ ಒಂದು ಅವಧಿಯಲ್ಲಿ ಹಣದ ಪರಿಮಾಣದಲ್ಲಿ ವ್ಯತ್ಯಾಸವಾದರೂ ಸಹ ಒಟ್ಟು ಉತ್ಪಾದನೆಯ ಮೊತ್ತದ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ ಎಂಬುದು ಫಿಷರ್ ಅಭಿಪ್ರಾಯ. ಆದರೆ ಉಳಿದ ವಸ್ತುಗಳು ಸ್ಥಿರವಾಗಿರಬೇಕು. ಜನಸಂಖ್ಯೆ, ಉತ್ಪಾದನಾ ವಿಧಾನಗಳು ಸ್ಥಿರವಾಗಿರಬೇಕು. ಒಟ್ಟು ಉತ್ಪಾದನೆಯು ಅಲ್ಪ ಕಾಲಾವಧಿಯಲ್ಲಿ ಸ್ಥಿರವಾಗಿರಬೇಕು.

ಹಣದ ಚಲಾವಣೆಯು ಹೆಚ್ಚು ಕಡಮೆ ಸ್ಥಿರವಾಗಿಯೇ ಇರುತ್ತದೆ. ಏಕೆಂದರೆ ಜನರ ಅಭ್ಯಾಸಗಳು ಬದಲಾವಣೆಯಾಗುವುದಿಲ್ಲ.

MM^1 ಹೆಚ್ಚು ಕಡಮೆ ಸ್ಥಿರವಾಗಿರುತ್ತದೆ.

ಇದರಿಂದ ತಿಳಿದುಬರುವುದೇನಂದರೆ ಮಾರಾಟಕ್ಕೆ ತಯಾರಿಸುವ ವಸ್ತುಗಳ ಮತ್ತು ಸೇವೆಗಳ ಪ್ರಮಾಣದಲ್ಲಿ ವ್ಯತ್ಯಾಸವಾಗುವುದಿಲ್ಲ. ಹಣದ ಬೇಡಿಕೆಯಲ್ಲೂ ವ್ಯತ್ಯಾಸವಾಗುವುದಿಲ್ಲ. ಹಣದ ಬೇಡಿಕೆ ಸ್ಥಿರವಾಗಿದ್ದರೆ ಹಣದ ಮೌಲ್ಯ ಅದರ ಪೂರೈಕೆಯನ್ನು ಅವಲಂಬಿಸಿರುತ್ತದೆ. V ಮತ್ತು T ಗಳು ಅಲ್ಪಾವಧಿಯಲ್ಲಿ ಸ್ಥಿರವಾಗಿರುತ್ತವೆ.

ಹಣದ ಮೌಲ್ಯವು ಹಣದ ಪರಿಮಾಣದೊಂದಿಗೆ ನೇರಸಂಪರ್ಕ ಹೊಂದಿರುವುದು. ಹಣದ ಮೌಲ್ಯದಲ್ಲಿ ಬದಲಾವಣೆಗಳಾಗಬೇಕಾದರೆ ಹಣದ ಪೂರೈಕೆಯಿಂದ ಮಾತ್ರ. ಹಣದ ಪರಿಮಾಣ ಎರಡರಷ್ಟಾದರೆ, ಹಣದ ಮೌಲ್ಯ ಅರ್ಧಕ್ಕೆ ಇಳಿಯುತ್ತದೆ. ಹಣದ ಪರಿಮಾಣ ಅರ್ಧಕ್ಕೆ ಇಳಿದರೆ. ಹಣದ ಮೌಲ್ಯ ಮೊದಲಿನ ಎರಡರಷ್ಟಾಗುತ್ತದೆ. ಅಂದರೆ ಹಣದ ಮೌಲ್ಯ ಅದರ ಪರಿಮಾಣದಿಂದ ನಿರ್ಧರಿಸಲ್ಪಡುತ್ತದೆ.

ಟೀಕೆಗಳು : ಫಿಷರ್ ಹಣದ ಪರಿಮಾಣ ತತ್ವದ ಸಮೀಕರಣವು ಟೀಕೆಗಳಿಂದ ವಿಮುಕ್ತವಾಗಿಲ್ಲ. ಈ ತತ್ವವನ್ನು ಕೆಲಸಕ್ಕೆಬಾರದ ತತ್ವ ಎಂದು ಕೆಲವರು ವಾದಿಸಿರುವರು. ಏಕೆಂದರೆ ಉತ್ಪಾದನೆಯ ವಿಧಾನ, ಜನರ ಸ್ವಭಾವ, ಜನಸಂಖ್ಯೆ, ಮಾರಲಿರುವ ವಸ್ತುಗಳ ಪ್ರಮಾಣ ಇವು ಅಲ್ಪ ಕಾಲದಲ್ಲಿ ಒಂದೇ ಸಮನಾಗಿರುವುದೆಂದು ಫಿಷರ್ ಭಾವಿಸಿದ್ದಾನೆ. ಆದರೆ ಇದು ಸರಿಯಲ್ಲ. ಅವು ಬದಲಾವಣೆ ಹೊಂದು ತ್ತಿರುತ್ತವೆ. ಆದಾಗ್ಯೂ ಈ ಊಹೆಗಳು ಸರಿಯಲ್ಲವೆಂದು ಫಿಷರ್ ಸಮೀಕರಣವನ್ನು ತಿರಸ್ಕರಿಸಬಾರದು. ಏಕೆಂದರೆ ವೈಜ್ಞಾನಿಕ ನಿಯಮಗಳೆಲ್ಲ ಕೆಲವು ಊಹೆಗಳ ಆಧಾರದ ಮೇಲೆ ರೂಪಿತಗೊಂಡಿರುತ್ತವೆ.

ಹಣದ ಪರಿಮಾಣತತ್ವದ ಪ್ರಕಾರ ಹಣದ ಪರಿಮಾಣದಲ್ಲಿ ಉಂಟಾಗುವ ಬದಲಾವಣೆಯು ಅಷ್ಟೇ ಪ್ರಮಾಣದ ಬದಲಾವಣೆಯನ್ನು ಬೆಲೆಗಳಲ್ಲಿ ತರುವುದು. ಆದರೆ ಈ ವಾದ ಸರಿಯಲ್ಲ. ಏಕೆಂದರೆ ಬೆಲೆಯು ಏರಿಕೆ ಕೇವಲ ಬದಲಾವಣೆಯು ಹಣದ ಗಾತ್ರದ ಏರಿಕೆಯಿಂದ ಆಗುವುದಿಲ್ಲ. ದೇಶದಲ್ಲಿರುವ ಹಣವನ್ನೆಲ್ಲ ಪದಾರ್ಥಗಳನ್ನು ಕೊಳ್ಳಲು ಉಪಯೋಗಿಸುವುದಿಲ್ಲ. ಜನರು ಗಳಿಸುವ ವರಮಾನವನ್ನೆಲ್ಲ ಪದಾರ್ಥಗಳ ಮೇಲೆ ವೆಚ್ಚ ಮಾಡುವುದಿಲ್ಲ. ವರಮಾನದ ಸ್ವಲ್ಪ ಭಾಗವನ್ನು ವಿಮೆ ಮಾಡಬಹುದು, ಉಳಿತಾಯ ಮಾಡಬಹುದು. ಈ ಬಗೆಯ ಹಣ ವಸ್ತುಗಳ ಬೆಲೆಗಳ ಮೇಲೆ ಯಾವ ಬಗೆಯ ಪರಿಣಾಮವನ್ನುಂಟುಮಾಡುವುದಿಲ್ಲ. ಆದ್ದರಿಂದ ವಸ್ತುಗಳ ಬೆಲೆಯು ಯಾವಾಗಲೂ ಹಣದ ಪರಿಮಾಣದಿಂದಲೇ ನಿರ್ಧಾರವಾಗುವುದು ಎಂದು ಹೇಳಲಾಗದು.

ಬೆಲೆಗಳ ಏರಿಕೆಗೆ ಅಥವಾ ಕುಗ್ಗುವಿಕೆಗೆ ಚಲಾವಣೆಯಲ್ಲಿನ ಹಣದ ಗಾತ್ರ ಮುಖ್ಯವಲ್ಲ. ಬೆಲೆಗಳು ಕೆಲವು ವೇಳೆ ತಮ್ಮಷ್ಟಕ್ಕೆ ತಾವೇ ಏರುತ್ತ ಹೋಗುತ್ತವೆ. ವ್ಯಾಪಾರಸ್ಥರು ಕೆಲವು ಸಲ ವ್ಯಾಪಾರಗಳನ್ನು ವಿಸ್ತರಿಸಿರುವರು. ಕೆಲವು ವೇಳೆ ಇದ್ದಕ್ಕಿದ್ದಂತೆ ಬೆಲೆಗಳು ಕುಗ್ಗಿ ಉತ್ಪಾದನೆಯು ಕುಂಠಿತಗೊಳ್ಳುವುದು. ಈ ಪರಿಸ್ಥಿತಿಯನ್ನು ವ್ಯಾಪಾರಿವರ್ತುಲ ಎಂದು ಕರೆಯಲಾಗಿದೆ.

ಫಿಷರ್ ತನ್ನ ಸಮೀಕರಣದಲ್ಲಿ ಬಳಸಿರುವ ಪ್ರತಿಯೊಂದು ಅಂಶವೂ ಸ್ವತಂತ್ರವಾಗಿದೆ ಎಂಬುದಾಗಿ ವಾದಿಸಿರುವನು. ಆದರೆ ಇದನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ನಾವು ಎಲ್ಲ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಫಿಷರ್ ಬಳಸಿರುವ ಪ್ರತಿಯೊಂದು ಅಂಶ ಮತ್ತೊಂದು ಅಂಶವನ್ನು ಅವಲಂಬಿಸಿರುವುದು ಕಾಣಬರುತ್ತದೆ. ಉದಾಹರಣೆಗೆ ಹಣದ ವೇಗವು (V), ವಸ್ತುಗಳ ಬೆಲೆಯನ್ನು (P) ಅನುಸರಿಸಿ ಬದಲಾವಣೆಯಾಗುತ್ತದೆ. ವಸ್ತುಗಳ ಬೆಲೆ ಏರಿದಾಗ ಹಣವು ವೇಗವಾಗಿ ಸಂಚರಿಸುತ್ತದೆ. ಹಣದ ಉಬ್ಬರವಿರುವಾಗ ಮುಂದೆ ವಸ್ತುಗಳ ಬೆಲೆ ಮತ್ತಷ್ಟು ಏರಬಹುದೆಂದು ಭಾವಿಸಿ ಜನರು ಅಧಿಕ ವಸ್ತುಗಳನ್ನು ಕೊಳ್ಳುವರು. ಆಗ ಸಂಚರಿಸುವ ವೇಗ ಹೆಚ್ಚಾಗುತ್ತದೆ. ಹಾಗೆಯೇ ವಸ್ತುಗಳ ಬೆಲೆ ಇಳಿಯಲು ಪ್ರಾರಂಭಿಸಿದಾಗ ಬೆಲೆಗಳು ಮತ್ತಷ್ಟು ಇಳಿಯುವುದೆಂದು ಭಾವಿಸಿ ಜನರು ಕೊಳ್ಳುವುದನ್ನು ಕಡಮೆಮಾಡುತ್ತಾರೆ. ಹಣದ ಸಂಚಾರ ಕಡಮೆಯಾಗುವುದು. ಆದರೆ ಫಿಷರನ ಸಮೀಕರಣದಲ್ಲಿ ಬರುವ ಎಲ್ಲ ಅಂಶಗಳು ಒಂದನ್ನೊಂದು ಅವಲಂಬಿಸಿ ವರ್ತಿಸುತ್ತವೆ. ಈ ವಿಷಯ ಫಿಷರ್‌ಗೆ ತಿಳಿದಿದ್ದಾಗ್ಯೂ ಅವು ದೀರ್ಘಾವಧಿಯಲ್ಲಿ ಸ್ವತಂತ್ರವಾಗಿ ವರ್ತಿಸುತ್ತವೆಂದು ಫಿಷರ್ ವಾದಿಸಿರುವನು. ಆದರೆ ಕೇನ್ಸ್ ಇವನ ವಾದಕ್ಕೆ ಉತ್ತರ ನೀಡಿ ದೀರ್ಘ ಕಾಲದಲ್ಲಿ ಈಗಿನವರು ಯಾರೂ ಬದುಕಿರಲು ಸಾಧ್ಯವಿಲ್ಲವೆಂದು ಮರುಉತ್ತರ ನೀಡಿದ್ದಾನೆ.

ಈ ರೀತಿ ಫಿಷರ್‌ನ ಸಮೀಕರಣವು ಹಲವಾರು ಟೀಕೆಗಳಿಗೆ ಗುರಿಯಾಗಿದ್ದರೂ ಕೆಲವು ಸತ್ಯಾಂಶಗಳಿಂದ ಕೂಡಿರುವುದರಿಂದ ಇದು ಮಹತ್ವವುಳ್ಳದ್ದಾಗಿದೆ ಎನ್ನಬಹುದು. ಜನರು ಆರ್ಥಿಕ ವ್ಯವಹಾರಗಳನ್ನು ಕೈಗೊಳ್ಳಲು ಹಣವನ್ನು ಬಯಸುವುದರಿಂದ ಹಣದ ಬೇಡಿಕೆಯು ಮಾರಾಟಕ್ಕಿರುವ ವಸ್ತುಗಳ ಪೂರೈಕೆಗೆ ಸಮನಾಗಿರುತ್ತದೆ ಎಂಬುದನ್ನು ಈ ತತ್ವದಿಂದ ಒಪ್ಪಬಹುದು.

ಕೇಂಬ್ರಿಜ್ ಸಮೀಕರಣ : ಕೇಂಬ್ರಿಜ್ ವಿಶ್ವವಿದ್ಯಾನಿಲಯಕ್ಕೆ ಸೇರಿದ ಅರ್ಥಶಾಸ್ತ್ರಜ್ಞರ ಒಂದು ಗುಂಪು ಮತ್ತೊಂದು ಪರಿಮಾಣತತ್ವದ ಸಮೀಕರಣವನ್ನು ನಿರೂಪಿಸಿತು. ಅಂತಹ ಅರ್ಥಶಾಸ್ತ್ರಜ್ಞರಲ್ಲಿ ಪ್ರಮುಖರು ಆಲ್‌ಫ್ರೆಡ್ ಮಾರ್ಷಲ್, ಎ. ಸಿ. ಪಿಗು, ಜೆ. ಎಂ. ಕೀನ್ಸ್ ಹಾಗೂ ಡಿ. ಎಚ್. ರಾಬರ್ಟ್‌ಸನ್. ಇವರು ಹಣದ ಮೌಲ್ಯಕ್ಕೆ ಕೊಟ್ಟಿರುವ ಸಮೀಕರಣಗಳನ್ನು 'ಕೇಂಬ್ರಿಜ್ ಸಮೀಕರಣ'ವೆಂದು ಕರೆಯಲಾಗಿದೆ. ಈ ಎಲ್ಲ ಅರ್ಥಶಾಸ್ತ್ರಜ್ಞರು ಜನರು ನಗದು ಹಣವನ್ನು ತಮ್ಮ ವಶದಲ್ಲಿಟ್ಟುಕೊಳ್ಳಲು ಪ್ರಾಮುಖ್ಯತೆ ಕೊಟ್ಟಿರುವುದರಿಂದ ಈ ಸಮೀಕರಣಕ್ಕೆ ನಗದು ಸಂದಾಯ ತತ್ವವೆಂದು ಕರೆಯುತ್ತಾರೆ. ಫಿಷರ್ ಸಮೀಕರಣವು ಅಮೆರಿಕದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದ್ದರೆ ಕೇಂಬ್ರಿಜ್ ಸಮೀಕರಣ ಇಂಗ್ಲೆಂಡ್ ಹಾಗೂ ಇತರ ರಾಷ್ಟ್ರಗಳಲ್ಲಿ ಪ್ರಸಿದ್ಧಿಯನ್ನು ಪಡೆದಿದೆ.

ಕೇಂಬ್ರಿಜ್ ಅರ್ಥಶಾಸ್ತ್ರಜ್ಞರ ಪ್ರಕಾರ ಹಣದ ಮೌಲ್ಯವು ಹಣಕ್ಕಿರುವ ಬೇಡಿಕೆಯನ್ನು ಅವಲಂಬಿಸಿರುತ್ತದೆ. ಜನರು ಹಣವನ್ನು ನಗದು ರೂಪದಲ್ಲಿ ಹೊಂದಿರಲು ಬಯಸುವರು. ಅವರು ತಮಗೆ ದೈನಿಕ ಜೀವನಕ್ಕೆ ಅವಶ್ಯವಾದ ವಸ್ತುಗಳನ್ನು ಕೊಳ್ಳಲು ನಗದು ಹಣವನ್ನು ತಮ್ಮ ಬಳಿ ಇಟ್ಟುಕೊಳ್ಳುತ್ತಾರೆ. ಇದಕ್ಕೆ ವ್ಯವಹಾರ ಉದ್ದೇಶವೆಂದು ಕರೆಯುತ್ತೇವೆ. ಅವಸರ ಪ್ರಸಂಗಗಳಲ್ಲಿ ಅನಿರೀಕ್ಷಿತವಾಗಿ ತಕ್ಷಣ ಹಣ ಬೇಕಾಗುತ್ತದೆ. ಇವಕ್ಕಾಗಿ ಸ್ವಲ್ಪ ಹಣವನ್ನಾದರೂ ಅವರು ನಗದು ರೂಪದಲ್ಲಿ ಹೊಂದಿರಬೇಕು. ಇದಕ್ಕೆ 'ಮುಂಜಾಗ್ರತೆಯ ಉದ್ದೇಶ'ವೆಂದು ಕರೆಯುವರು. ಹಾಗೆಯೇ ಸಟ್ಟಾ ವ್ಯಾಪಾರ ಮಾಡುವವರು ನಗದು ಹಣವನ್ನಿಟ್ಟುಕೊಂಡಿರಬೇಕಾಗುತ್ತದೆ. ಇದಕ್ಕೆ 'ಸಟ್ಟಾ ವ್ಯಾಪಾರ ಉದ್ದೇಶ' ಎಂದು ಕರೆಯುವರು. ಈ ಉದ್ದೇಶಗಳಿಗಾಗಿ ಚಲಾವಣೆಯಲ್ಲಿರುವ ಹಣದ ಸ್ವಲ್ಪ ಭಾಗವನ್ನು ಜನರು ನಗದು ರೂಪದಲ್ಲಿ ಹೊಂದಿರುವರು. ನಗದು ರೂಪದಲ್ಲಿ ಜನರು ಹೊಂದಿರುವ ಹಣದ ಪ್ರಮಾಣ ಹೆಚ್ಚಾದರೆ ವಸ್ತುಗಳನ್ನು ಕೊಳ್ಳಲು ಕಡಮೆ ಹಣ ಉಳಿಯುತ್ತದೆ. ಆಗ ವಸ್ತುಗಳಿಗೆ ಕಡಮೆ ಬೇಡಿಕೆಯಾಗಿ ಬೆಲೆಯ ಮಟ್ಟವು ಇಳಿಯುತ್ತದೆ. ಆದರೆ ಜನರು ನಗದು ರೂಪದಲ್ಲಿ ತಮ್ಮಲ್ಲಿ ಇಟ್ಟುಕೊಳ್ಳುವ ಹಣದ ಪ್ರಮಾಣವು ಕಡಮೆಯಾದರೆ ವಸ್ತುಗಳನ್ನು ಕೊಳ್ಳಲು ಹೆಚ್ಚು ಹಣ ಲಭ್ಯವಾಗುತ್ತದೆ. ವಸ್ತುಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ಬೆಲೆಗಳ ಮಟ್ಟ ಏರುತ್ತದೆ. ಹಣದ ಬೇಡಿಕೆಯನ್ನು ವಿವರಿಸಲು ಕೇಂಬ್ರಿಜ್ ಅರ್ಥಶಾಸ್ತ್ರಜ್ಞರು ಬೇರೆ ಬೇರೆ ಸಮೀಕರಣಗಳನ್ನು ಬಳಸಿರುವರು.

ಕೀನ್ಸ್ ಪ್ರಕಾರ ಜನರು ನಗದು ಹಣವನ್ನು ತಮ್ಮ ಬಳಿ ಹೊಂದಿರಲು ಬಯಸು ವುದು ಬಳಕೆಯ ವಸ್ತುಗಳನ್ನು ಕೊಳ್ಳುವುದಕ್ಕಾಗಿ. ಆದ್ದರಿಂದ ಅವರು ಈ ಕೆಳಗಿನ ಸಮೀಕರಣವನ್ನು ನೀಡಿರುವರು :

$$N = PK$$

$$P = \frac{N}{K + rK^1}$$

N= ಜನರಲ್ಲಿರುವ ಒಟ್ಟು ಹಣ

P= ಬಳಕೆ ವಸ್ತುಗಳ ಮತ್ತು ಸೇವೆಗಳ ಮಟ್ಟ

K= ಜನರು ವಸ್ತುಗಳನ್ನು, ಸೇವೆಗಳನ್ನು ಪಡೆಯಲು ವೆಚ್ಚ ಮಾಡುವ ಹಣ

r = ಠೇವಣಿಗಳ ಮೇಲೆ ಸಲ್ಲಿಸಬೇಕಾದ ಶೇಕಡಾ ಹಣ

K^1= ಬ್ಯಾಂಕ್ ಠೇವಣಿಗಳು – ಬ್ಯಾಂಕಿನಲ್ಲಿ ಜನರು ಠೇವಣಿಗಳ ರೂಪದಲ್ಲಿ ಇಟ್ಟಿರುವ ಹಣ

ಈ ಸಮೀಕರಣದಲ್ಲಿ r, K ಮತ್ತು K^1ಗಳು ಸ್ಥಿರವಾಗಿದ್ದರೆ, Nನಲ್ಲಿ ಬದಲಾವಣೆಯುಂಟಾದರೆ Pನಲ್ಲಿಯೂ ಬದಲಾವಣೆಗಳುಂಟಾಗುತ್ತವೆ.

ಈ ಸಮೀಕರಣದ ಪ್ರಕಾರ ಹಣದ ಮೌಲ್ಯವು ನಗದು ಸಂದಾಯವನ್ನವಲಂಬಿಸಿರುತ್ತದೆ. ಅಂದರೆ ಜನರು ಹೆಚ್ಚು ಹಣವನ್ನು ನಗದಿನ ರೂಪದಲ್ಲಿ ಹೊಂದಲು ಅಪೇಕ್ಷಿಸಿದರೆ ಬೆಲೆಯಮಟ್ಟವು ಇಳಿಯುತ್ತದೆ ಅಥವಾ ಹಣದ ಮೌಲ್ಯವು ಹೆಚ್ಚಾಗುತ್ತದೆ. ಜನರು ಕಡಮೆ ಹಣವನ್ನು ನಗದು ರೂಪದಲ್ಲಿ ಹೊಂದಿದ್ದರೆ ಬೆಲೆಯ ಮಟ್ಟ ಏರುತ್ತದೆ ಅಥವಾ ಹಣದ ಮೌಲ್ಯ ಕಡಮೆಯಾಗುತ್ತದೆ.

ಕೇಂಬ್ರಿಜ್ ಸಮೀಕರಣವು ಫಿಷರ್ ಸಮೀಕರಣಕ್ಕಿಂತ ಉತ್ತಮವಾದ ಸಮೀಕರಣವಾದರೂ ನ್ಯೂನತೆಗಳಿಂದ ವಿಮುಕ್ತವಾಗಿಲ್ಲ. ಅರ್ಥವ್ಯವಸ್ಥೆಯಲ್ಲಿ ಆಗಾಗ ಬೆಲೆಗಳಲ್ಲಿ ಕಂಡು ಬರುವ ವ್ಯತ್ಯಾಸವನ್ನು ಈ ಸಮೀಕರಣವು ವಿವರಿಸುವುದಿಲ್ಲ.

ಅತಿಪ್ರಸರಣ

ಇಂದಿನ ಆಧುನಿಕ ಹಣಕಾಸಿನ ಜಗತ್ತಿನಲ್ಲಿ ಅತಿಪ್ರಸರಣ ಅಥವಾ ಹಣದ ಉಬ್ಬರವು ವಿಶ್ವವ್ಯಾಪಕ ಘಟನೆಯಾಗಿದೆ. ಅತಿ ಪ್ರಸರಣಕ್ಕೆ ಸರ್ವಸಮ್ಮತವಾದ ವ್ಯಾಖ್ಯೆಯನ್ನು ಕೊಡುವುದು ಕಠಿಣ. ಬಹುಕೇಕ ವಸ್ತುಗಳ ಬೆಲೆಗಳು ಏರುವ ಪರಿಸ್ಥಿತಿಗೆ ಸಾಮಾನ್ಯವಾಗಿ 'ಅತಿಪ್ರಸರಣ' ಎಂದು ಕರೆಯುತ್ತಾರೆ. ಅಂದರೆ ಬೆಲೆಗಳಲ್ಲಿ ಏರಿಕೆ ಉಂಟಾಗಿ ಹಣದ ಬೆಲೆಯು ಕಡಮೆಯಾಗುತ್ತ ಹೋಗುವುದು. ಕೆಲವರು ಅತಿ

ಪ್ರಸರಣವನ್ನು 'ಬೆಲೆಗಳ ಮಟ್ಟ ತ್ವರಿತವೇಗದಲ್ಲಿ ಏರುತ್ತಿರುವ ಪರಿಸ್ಥಿತಿ' ಎಂದು ಕರೆದಿದ್ದಾರೆ. ಸಾಧಾರಣವಾಗಿ ಅತಿಪ್ರಸರಣವು ಬೆಲೆಗಳ ಏರುವಿಕೆಯೊಡನೆ ಸಂಬಂಧ ಹೊಂದಿದ್ದು, ಕೊಳ್ಳುವ ಶಕ್ತಿಯಲ್ಲಿ ಕಡಿತವನ್ನು ತಂದೊಡ್ಡುತ್ತದೆ. ಅಂದರೆ ಬೆಲೆಗಳಲ್ಲಿ ಏರುವಿಕೆ ಉಂಟಾಗುವುದರಿಂದ ಹಣದ ಮೌಲ್ಯವು ಕಡಮೆಯಾಗುತ್ತಹೋಗುತ್ತದೆ. ಬೆಲೆಯು ಏರಲು ಮುಖ್ಯಕಾರಣ ಹಣದ ಪ್ರಮಾಣದಲ್ಲಿನ ಹೆಚ್ಚಳ. ಅವಶ್ಯಕತೆಗಿಂತ ಹೆಚ್ಚಿನ ಹಣವು ಚಲಾವಣೆಗೆ ಬಂದಾಗ ಅತಿಪ್ರಸರಣ ಉಂಟಾಗುತ್ತದೆ. ಆದ್ದರಿಂದ ಆಧಿಕ್ಯದಿಂದ ಬೆಲೆಗಳು ಏರುವುದನ್ನು **ಅತಿಪ್ರಸರಣ** ಎಂದು ಕರೆಯಬಹುದು. ಹಣವು ಚಲಾವಣೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದಾಗ ಕಡಮೆ ವಸ್ತುಗಳನ್ನು ಕೊಳ್ಳುವುದು. ಅಂದರೆ ದೇಶದಲ್ಲಿ ಹಣದ ಚಲಾವಣೆ ಹೆಚ್ಚಾದರೆ ವಸ್ತುಗಳ ಬೆಲೆಗಳು ಮಿತಿಮೀರಿ ಏರುತ್ತವೆ. ಇದರಿಂದ ಹಣಕ್ಕೆ ಕೊಳ್ಳುವ ಶಕ್ತಿ ಕಡಮೆಯಾಗುತ್ತದೆ. ಆದರೆ ಬೆಲೆ ಏರಿಕೆಯು ಅತಿಪ್ರಸರಣದಿಂದಲೇ ಆಗುತ್ತದೆ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಉತ್ಪಾದನೆ ವೆಚ್ಚ ಹೆಚ್ಚಾದಾಗ, ಬೇಡಿಕೆ ಅಧಿಕಗೊಂಡಾಗ ವಸ್ತುಗಳ ಪೂರೈಕೆ ಕಡಮೆಯಾದಾಗಲೂ ಬೆಲೆಗಳು ಏರುತ್ತವೆ. ಆದ್ದರಿಂದ ಚಲಾವಣೆಯಲ್ಲಿ ಹಣದ ಪ್ರಮಾಣ ಹೆಚ್ಚಿದ್ದಾಗ, ಬೆಲೆಗಳು ಏರಿದರೆ ಮಾತ್ರ ಅದು ಅತಿಪ್ರಸರಣದಿಂದುಂಟಾಗಿರುವ ಹೆಚ್ಚಳ ಎನ್ನಬಹುದು. ಆದರೆ ಅತಿಪ್ರಸರಣದಿಂದ ಬೆಲೆಗಳು ಏರಿಯೇ ಏರುತ್ತವೆ ಎಂದು ಹೇಳಲಾಗುವುದಿಲ್ಲ. ಕೆಲವು ಬಾರಿ ಅತಿಪ್ರಸರಣವಿದ್ದರೂ ಬೆಲೆಗಳು ಏರದೇ ಇರಬಹುದು. ಬೆಲೆಗಳು ಹಾಗೆಯೇ ಇದ್ದು ಹಣದ ಪೂರೈಕೆ ಹೆಚ್ಚಾದರೂ ಅತಿಪ್ರಸರಣ ಉಂಟಾಗುವುದಿಲ್ಲ. ಅದೇರೀತಿ ಹಣದ ಪ್ರಮಾಣವು ಒಂದೇ ಸಮನಾಗಿದ್ದು ಬೆಲೆಗಳಲ್ಲಿ ಬೇರೆ ಕಾರಣಗಳಿಂದ ವ್ಯತ್ಯಾಸವಾಗಬಹುದು.

ಮುಖ್ಯವಾಗಿ (i) ಹಣದ ಪೂರೈಕೆಯು ಬೇಡಿಕೆಗಿಂತಲೂ ಬಹಳ ಹೆಚ್ಚಾದಾಗ ಹಾಗೂ (ii) ವಸ್ತುಗಳ ಬೆಲೆಗಳಲ್ಲಿ ಅಸಾಮಾನ್ಯ ಏರಿಕೆ ಉಂಟಾದಾಗ ಅತಿಪ್ರಸರಣ ಉಂಟಾಗಿದೆ ಎಂದು ಹೇಳಬಹುದು

ಹಣದ ವರಮಾನವು ದೇಶದಲ್ಲಿನ ವಸ್ತುಗಳ ಉತ್ಪಾದನೆಗಿಂತ ಹೆಚ್ಚಿದ್ದರೆ, ಅತಿಪ್ರಸರಣ ಪರಿಸ್ಥಿತಿ ಉಂಟಾಗುತ್ತವೆ. ದೇಶದಲ್ಲಿ ಅತಿ ಪ್ರಸರಣವಾದಾಗ ಜನರ ವರಮಾನವು ಹೆಚ್ಚುತ್ತದೆ. ಇದರಿಂದ ಜನರ ಬಳಿ ಹೆಚ್ಚು ಹಣ ಸಂಗ್ರಹವಾಗಿ, ಅವರ ಅಪೇಕ್ಷೆಗಳು ಮತ್ತಷ್ಟು ಹೆಚ್ಚಾಗಿ ಹೆಚ್ಚು ವಸ್ತುಗಳನ್ನು ಬೇಡುತ್ತಾರೆ. ಅತಿಪ್ರಸರಣ ಉಂಟಾದಾಗ ಬೆಲೆಗಳು ಏರಲು ಮುಖ್ಯ ಕಾರಣ ಜನರ ಕೈಯಲ್ಲಿ ಅಧಿಕ ಪ್ರಮಾಣದ ಹಣ ಸೇರುವುದೇ ಎನ್ನಬಹುದು. ಹಣವಿದ್ದಾಗ ಜನರು ಅನೇಕ ಬಗೆಯ ವಸ್ತುಗಳನ್ನು ಕೊಳ್ಳಲಾರಂಭಿಸುವರು. ಇದರಿಂದ ವಸ್ತುಗಳಿಗೆ ಬೇಡಿಕೆ ಹೆಚ್ಚುತ್ತದೆ. ಆದರೆ ಬೇಡಿಕೆಗೆ ತಕ್ಕಂತೆ ವಸ್ತುಗಳ ಪೂರೈಕೆ ಕಡಮೆ ಇರುವುದರಿಂದ ಸಹಜವಾಗಿಯೇ ಅವುಗಳ ಬೆಲೆ ಏರುತ್ತದೆ. ವಸ್ತುಗಳ ಉತ್ಪಾದನೆ ಪ್ರಮಾಣವು ಹಣದ ಪೂರೈಕೆಯ ಪ್ರಮಾಣದಲ್ಲಿಯೇ

ಅಧಿಕವಾಗುತ್ತಿದ್ದರೆ ವಸ್ತುಗಳ ಬೆಲೆಗಳು ಏರುವುದಿಲ್ಲ. ಆದರೆ ವಸ್ತುಗಳ ಉತ್ಪಾದನೆಯ ಪ್ರಮಾಣವು ಹಣದ ಪ್ರಮಾಣದಲ್ಲಿ ಬೆಳೆಯದಿದ್ದರೆ ವಸ್ತುಗಳ ಬೆಲೆಗಳು ಏರತೊಡಗುತ್ತವೆ. ಈ ರೀತಿಯ ಬೆಲೆ ಏರಿಕೆಯೇ ಅತಿಪ್ರಸರಣ.

ಅಮೆರಿಕಾದ ಇರ್ವಿಂಗ್ ಫಿಷರ್‌ನ ಸಮೀಕರಣದ ಪ್ರಕಾರ ಬಳಕೆಯಲ್ಲಿರುವ ಹಣದ ಮೊತ್ತ ಹೆಚ್ಚಾಗಿ ಮಾರಾಟಮಾಡಲು ಇರುವ ಪದಾರ್ಥಗಳ ಪ್ರಮಾಣ ಮೊದಲಿನಷ್ಟೇ ಇದ್ದರೆ ಬೆಲೆಗಳು ಏರಲಾರಂಭಿಸಿ ಅತಿಪ್ರಸರಣ ಉಂಟಾಗುತ್ತದೆ.

ಕಾರಣಗಳು : ಅತಿಪ್ರಸರಣದ ಪರಿಸ್ಥಿತಿ ಉಂಟಾಗಲು ನಾನಾ ಕಾರಣಗಳು ಇರಬಹುದು. ಕೆಲವು ಈ ಕೆಳಗಿನಂತಿವೆ :

(i) **ಯುದ್ಧ ಹಾಗೂ ಕೊರತೆಯ ಹಣ ತುಂಬುವಿಕೆ :** ಯುದ್ಧಕಾಲದಲ್ಲಿ ಹಾಗೂ ಯೋಜನೆಗಳಿಗೆ ಹಣವನ್ನು ಪೂರೈಸಲು ಸರಕಾರವು ವಿಶೇಷವಾಗಿ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತಂದರೆ ಅದು ಅತಿಪ್ರಸರಣವನ್ನುಂಟುಮಾಡುತ್ತದೆ. ಯುದ್ಧ ಕಾಲದಲ್ಲಿ ದೇಶಕ್ಕೆ ಹೆಚ್ಚಿನ ಹಣದ ಅವಶ್ಯಕತೆ ಇರುತ್ತದೆ. ಆಗ ಸರಕಾರವು ದೇಶವನ್ನು ರಕ್ಷಿಸುವ ದೃಷ್ಟಿಯಿಂದ ಹೆಚ್ಚು ಹಣವನ್ನು ಚಲಾವಣೆಗೆ ತರುತ್ತದೆ.

(ii) **ಯೋಜನೆಗಳನ್ನು ಅನುಷ್ಠಾನಗೊಳಿಸುವಿಕೆ :** ಯೋಜನೆಗಳನ್ನು ಅನುಷ್ಠಾನಕ್ಕೆ ತರುವಾಗ ಹಣದ ಕೊರತೆಯನ್ನು ತುಂಬಲು ಸರಕಾರ ಹೆಚ್ಚಿನ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುವುದುಂಟು. ಇದರಿಂದಲೂ ಹಣದ ಅತಿಪ್ರಸರಣವಾಗಿ ವಸ್ತುಗಳ ಬೆಲೆಗಳು ಮಿತಿಮೀರಿ ಏರತೊಡಗುತ್ತವೆ. ಹಣದ ಪೂರೈಕೆ ಅಧಿಕವಾಗುತ್ತದೆ. ಖಾಸಗಿ ಮತ್ತು ಸರ್ಕಾರಿರಂಗಗಳ ವೆಚ್ಚಗಳು ಏರುತ್ತವೆ.

(iii) **ಇತರ ಕಾರಣಗಳು :** ಇವುಗಳ ಜೊತೆಗೆ ಬ್ಯಾಂಕುಗಳು ಹೆಚ್ಚಾಗಿ ಸಾಲಕೊಡುವುದು, ವಿದೇಶೀಯರಿಂದ ದೇಶೀಯ ವಸ್ತುಗಳಿಗೆ ಬೇಡಿಕೆ ಹೆಚ್ಚಾಗುವುದು ಈ ಅಂಶಗಳೂ ಅತಿಪ್ರಸರಣಕ್ಕೆ ಕಾರಣವಾಗುತ್ತವೆ. ಬೆಲೆಗಳು ಏರುತ್ತಿದ್ದಾಗ ಬಳಕೆದಾರರು, ವ್ಯಾಪಾರಿಗಳು ಮತ್ತು ಉತ್ಪಾದಕರು ಬೆಲೆಗಳು ಮುಂದೆ ಮತ್ತಷ್ಟು ಏರಬಹುದೆಂಬ ಭಯದಿಂದ ವಸ್ತುಗಳನ್ನು ಹೆಚ್ಚಾಗಿಕೊಂಡು ದಾಸ್ತಾನುಮಾಡುವರು. ಇದರಿಂದಲೂ ಬೆಲೆಗಳು ಏರಿ ಅತಿಪ್ರಸರಣ ತಲೆದೋರುತ್ತದೆ. ಉತ್ಪಾದನಾ ಕಾರ್ಯಕ್ಕೆ ಮುಖ್ಯವಾಗಿ ಕಚ್ಚಾವಸ್ತುಗಳು, ಒಳ್ಳೆಯ ಯಂತ್ರಗಳು, ದಕ್ಷತೆ ಮತ್ತು ಪರಿಶ್ರಮ ಸಾಕಷ್ಟು ಪ್ರಮಾಣದಲ್ಲಿರಬೇಕು. ಇವುಗಳ ಕೊರತೆ ಇದ್ದಲ್ಲಿ ಹಣದ ಪೂರೈಕೆಗೆ ತಕ್ಕಂತೆ ಹೆಚ್ಚಿನ ವಸ್ತುಗಳನ್ನು ಉತ್ಪಾದಿಸಲಾಗುವುದಿಲ್ಲ. ಆಗ ವಸ್ತುಗಳ ಬೆಲೆ ಏರಿ ಅತಿಪ್ರಸರಣಕ್ಕೆ ಎಡೆಯಾಗುತ್ತದೆ.

ಲಕ್ಷಣಗಳು : ಬೆಲೆಗಳ ಏರಿಕೆಯಿಂದ ಉಂಟಾಗುವ ಅತಿಪ್ರಸರಣವು ಕೆಲವು ಮುಖ್ಯಲಕ್ಷಣಗಳನ್ನು ಹೊಂದಿರುವುದು. ಒಂದು ಬಾರಿ ಉಂಟಾದ ಅತಿಪ್ರಸರಣವು

ಬಹು ಕಾಲದವರೆಗೆ ಮುಂದುವರಿಯುತ್ತದೆ. ಮೊದಮೊದಲು ಕಡಮೆ ವೇಗದಲ್ಲಿರುವ ಅತಿ ಪ್ರಸರಣವು ಬರಬರುತ್ತ ತೀವ್ರಗತಿಯಿಂದ ಹೆಚ್ಚುತ್ತಹೋಗುತ್ತದೆ. ಕಡಮೆ ಪ್ರಮಾಣದಲ್ಲಿ ಏರಲಾರಂಭಿಸುವ ವಸ್ತುಗಳ ಬೆಲೆಗಳು ಕ್ರಮೇಣ ಗಗನವನ್ನು ಮುಟ್ಟಲಾರಂಭಿಸುತ್ತವೆ. ಬೆಲೆ ಏರಿಕೆಯಿಂದ ಉತ್ಪಾದಕರು ಅಧಿಕ ಲಾಭ ಪಡೆಯುವುದರಿಂದ ಅವರು ತಮ್ಮ ಉದ್ದಿಮೆಗಳನ್ನು ವಿಸ್ತರಿಸಲುತೊಡಗುತ್ತಾರೆ. ಹೆಚ್ಚು ಲಾಭಗಳಿಸುವ ಆಸೆಯಿಂದ ಹೊಸ ಉದ್ದಿಮೆಗಳನ್ನು ಸ್ಥಾಪಿಸುತ್ತಾರೆ. ಇದಕ್ಕೆಲ್ಲ ಅವರಿಗೆ ಹೆಚ್ಚಿನ ಪ್ರಮಾಣದ ಬಂಡವಾಳ ಬೇಕಾಗುತ್ತದೆ. ಬ್ಯಾಂಕುಗಳು ವ್ಯಾಪಾರ ಮತ್ತು ವಾಣಿಜ್ಯಗಳಿಗೆ ಅವಶ್ಯಕತೆಗಿಂತಲೂ ಹೆಚ್ಚಿನ ಸಾಲವನ್ನು ನೀಡಲು ಸಿದ್ಧರಿರುತ್ತಾರೆ. ಇವರಿಂದಾಗಿ ಉದ್ದಿಮೆದಾರರು ಹಾಗೂ ಇತರರು ಹೆಚ್ಚಿನ ಸಾಲಗಳನ್ನು ಪಡೆಯುತ್ತಾರೆ. ಬ್ಯಾಂಕ್ ಸಾಲಗಳು ಹೆಚ್ಚಾಗಲು ಮುಖ್ಯಕಾರಣ ಅವು ಕಡಮೆ ಬಡ್ಡಿದರಕ್ಕೆ ಸಾಲ ನೀಡುವುದು ಮತ್ತು ಕೇಂದ್ರಬ್ಯಾಂಕು ಅಗ್ಗದ ಹಣದ ನೀತಿಯನ್ನು ಕಾರ್ಯರೂಪಕ್ಕೆ ತರುವುದಾಗಿದೆ. ಈ ಬಗೆಯ ಕಾರ್ಯಕ್ರಮಗಳಿಂದ ಬಂಡವಾಳ ಹೂಡುವಿಕೆಯು ಅಧಿಕಗೊಂಡು ಜನರ ಕೈಯ್ಯಲ್ಲಿ ಹಣವು ಹೆಚ್ಚಾಗಿ ಸೇರುತ್ತದೆ. ಇದರಿಂದ ಅವರ ಕೊಳ್ಳುವ ಶಕ್ತಿಯು ಹೆಚ್ಚುತ್ತದೆ. ಹೀಗೆ ಹಣದ ಒಟ್ಟು ಪೂರೈಕೆ ಮತ್ತು ಬ್ಯಾಂಕಿನ ಸಾಲಗಳು ರಾಷ್ಟ್ರದಲ್ಲಿ ಒಟ್ಟು ಹಣದ ಉತ್ಪಾದನೆಯ ವೆಚ್ಚವನ್ನು ಹೆಚ್ಚಿಸುತ್ತವೆ. ಚಲಾವಣೆಯಲ್ಲಿರುವ ಹಣದ ಪ್ರಮಾಣ ಏರಿದಾಗ ವಸ್ತುಗಳ ಬೆಲೆಗಳು ಏರುತ್ತವೆ. ಬೆಲೆಗಳು ಏರಿದಂತೆ ಜೀವನ ವೆಚ್ಚ ಹೆಚ್ಚಾಗಿ ಉದ್ಯೋಗಮಾಡುವವರ ವೇತನ, ತುಟ್ಟಿಭತ್ಯ, ನಗರ ಭತ್ಯ ಇತ್ಯಾದಿಗಳನ್ನು ಹೆಚ್ಚಿಸಲೇಬೇಕಾಗುತ್ತದೆ. ಇದಕ್ಕಾಗಿ ಸರಕಾರ ಹೆಚ್ಚು ಹಣವನ್ನು ವೆಚ್ಚಮಾಡಬೇಕಾಗುತ್ತದೆ. ಆಗ ಸರಕಾರವು ಕೇಂದ್ರಬ್ಯಾಂಕಿನಿಂದ ಸಾಲ ಪಡೆದು, ಕೊರತೆ ಹಣ ವಿನಿಯೋಗವನ್ನು ಮಾಡಬೇಕಾಗುತ್ತದೆ. ಸರಕಾರದ ವೆಚ್ಚಗಳು ಚಲಾವಣೆಯಲ್ಲಿರುವ ಹಣವನ್ನು ಹೆಚ್ಚಿಸುತ್ತವೆ. ಇದರ ಫಲವಾಗಿ ಬೆಲೆಗಳು ಮತ್ತಷ್ಟು ಏರುತ್ತವೆ. ನೈಸರ್ಗಿಕ ಅಂಶಗಳಾದ ಪ್ರವಾಹಗಳು, ಭೂಕಂಪಗಳು, ಕ್ಷಾಮಗಳು ರಾಷ್ಟ್ರದಲ್ಲಿನ ಸಾಮಾನ್ಯ ಉತ್ಪಾದನಾಕ್ರಿಯೆಗೆ ಅಡ್ಡಿಯನ್ನುಂಟುಮಾಡುತ್ತವೆ. ಇದರಿಂದ ಕೆಲವು ವಸ್ತುಗಳ ಅಭಾವ ಉಂಟಾಗಿ ಅವುಗಳ ಬೆಲೆ ಏರುತ್ತವೆ. ಆ ವಸ್ತುಗಳು ಅತ್ಯವಶ್ಯಕವಾದ ಮೂಲವಸ್ತುಗಳಾದರೆ ಅಥವಾ ಕೈಗಾರಿಕಾ ಕಚ್ಚಾ ಪದಾರ್ಥಗಳಾದರೆ, ಅವುಗಳ ಬೆಲೆ ಮತ್ತಷ್ಟು ಏರುತ್ತದೆ. ಈ ಏರುವಿಕೆಯ ಪರಿಸ್ಥಿತಿಗೆ ಶ್ರೀಸಾಮಾನ್ಯರು ಹೆಚ್ಚಾಗಿ ಬಲಿಯಾಗುತ್ತಾರೆ. ಬೆಲೆಗಳ ಏರುವಿಕೆಯು ಅವರ ಬದುಕಿನಲ್ಲಿ ಕತ್ತಲೆಯನ್ನು ತಂದೊಡ್ಡಿ, ಅವರು ತೀವ್ರವಾಗಿ ಕಂಗೆಡುವಂತೆ ಮಾಡುತ್ತದೆ.

ಪರಿಣಾಮಗಳು : ಅತಿಪ್ರಸರಣವು ಕೆಲವು ಒಳ್ಳೆಯ ಪರಿಣಾಮಗಳನ್ನು ಹಾಗೂ ಕೆಲವು ದುಷ್ಪರಿಣಾಮಗಳನ್ನು ಉಂಟುಮಾಡುತ್ತದೆ. ಅತಿಪ್ರಸರಣದಿಂದಾಗಿ ಏರುವ ಬೆಲೆಗಳು ಸಮಾಜದ ಎಲ್ಲ ವರ್ಗದವರ ಮೇಲೂ ಒಂದೇ ರೀತಿಯ

ಪರಿಣಾಮವನ್ನುಂಟುಮಾಡುವುದಿಲ್ಲ. ಬೆಲೆಏರಿಕೆಯಿಂದ ಕೆಲವರಿಗೆ ಲಾಭವಾದರೆ, ಮತ್ತೆ ಕೆಲವರಿಗೆ ತೀವ್ರ ಹಾನಿಯಾಗಬಹುದು. ಆದ್ದರಿಂದ ಬೆಲೆ ಏರಿಕೆಯಿಂದಾಗುವ ಪರಿಣಾಮಗಳನ್ನು ತಿಳಿಯಬೇಕಾದರೆ ಜನರನ್ನು ಅನೇಕ ಹಂತಗಳಲ್ಲಿ ವಿಂಗಡಿಸಬೇಕಾಗುತ್ತದೆ. ರಾಷ್ಟ್ರದ ಅರ್ಥವ್ಯವಸ್ಥೆಯಲ್ಲಿ ಉತ್ಪಾದನೆ, ವಿತರಣೆ, ವಿದೇಶಿ ವ್ಯಾಪಾರಗಳು ಮಹತ್ತರ ಪಾತ್ರವನ್ನು ಹೊಂದಿರುತ್ತವೆ. ವಿವಿಧರಂಗಗಳಲ್ಲಿ ಆಗುವ ಪರಿಣಾಮ ಚರ್ಚಿಸೋಣ.

(i) **ಉತ್ಪಾದನೆಯ ಮೇಲಿನ ಪರಿಣಾಮ :** ಪ್ರಾರಂಭದಲ್ಲಿ ಅತಿಪ್ರಸರಣ ಉತ್ಪಾದನೆ ಹೆಚ್ಚಲು ನೆರವಾಗುತ್ತದೆ. ಮಿತವಾದ ಅತಿಪ್ರಸರಣ ಆರ್ಥಿಕಕ್ರಿಯೆಯ ಮಟ್ಟ, ಉದ್ಯೋಗಗಳು ಹಾಗೂ ವರಮಾನಗಳಿಗೆ ಉತ್ತೇಜಕವಾಗುತ್ತದೆ. ಅಂದರೆ ಹೆಚ್ಚು ಉದ್ಯೋಗಾವಕಾಶಗಳು ಕಲ್ಪಿತಗೊಳ್ಳುತ್ತವೆ. ಮುಂದೆ ಹೆಚ್ಚು ಉದ್ಯೋಗಗಳು ಹೆಚ್ಚು ಉತ್ಪಾದನೆಗೆ ನೆರವಾಗುತ್ತವೆ. ಇದರಿಂದ ರಾಷ್ಟ್ರಾದಾಯ ಹೆಚ್ಚುತ್ತದೆ. ಹೆಚ್ಚು ಹಣ ವಿತರಣೆಗೆ ಲಭ್ಯವಾಗುತ್ತದೆ.

ಅತಿಪ್ರಸರಣದ ವೇಗ ಹೆಚ್ಚಾದಂತೆ ಈ ಸೌಲಭ್ಯಗಳು ಅದೃಶ್ಯವಾಗುತ್ತವೆ. ಮಿತಿಮೀರಿದ ಅತಿಪ್ರಸರಣ ಉತ್ಪಾದನೆಗೆ ಧಕ್ಕೆಯನ್ನುಂಟುಮಾಡುತ್ತದೆ. ಅತಿ ಪ್ರಸರಣ ಹೆಚ್ಚಾದಂತೆ ಬೆಲೆಗಳು ಏರಲಾರಂಭಿಸುತ್ತವೆ. ಬೆಲೆಗಳು ಏರಿದಂತೆ ಉತ್ಪಾದನಾ ವೆಚ್ಚ ಏರುತ್ತದೆ. ಉತ್ಪಾದನೆಯ ವೆಚ್ಚವು ವಸ್ತುವಿನ ಬೆಲೆಗೆ ಸಮನಾದಾಗ ಉತ್ಪಾದಕರಿಗೆ ಹೆಚ್ಚು ಲಾಭ ದೊರೆಯುವ ಸಂಭವಕಡಮೆ. ಇದರಿಂದ ಉತ್ಪಾದಕರು ವಸ್ತುಗಳನ್ನು ಉತ್ಪಾದಿಸುವುದನ್ನು ನಿಲ್ಲಿಸಲು ಯತ್ನಿಸುತ್ತಾರೆ. ತಯಾರಿಸಲ್ಪಟ್ಟ ವಸ್ತುಗಳು ಹೆಚ್ಚು ಬೆಲೆಯಾದ್ದರಿಂದ ಮಾರಾಟವಾಗದೆ ಉಳಿಯುತ್ತವೆ. ಇದರಿಂದ ಉತ್ಪಾದಕರು ಕಡಮೆ ವಸ್ತುಗಳನ್ನು ಉತ್ಪಾದಿಸಲು ಯೋಚಿಸುತ್ತಾರೆ. ಉದ್ಯೋಗದಲ್ಲಿದ್ದ ಕೆಲವರನ್ನು ಸಾಕಷ್ಟು ಕೆಲಸವಿಲ್ಲವೆಂದು ಕಳುಹಿಸುತ್ತಾರೆ. ಇದರಿಂದ ನಿರುದ್ಯೋಗ ಹೆಚ್ಚುತ್ತದೆ. ಜನರು ನಿರುದ್ಯೋಗಿಗಳಾದಂತೆ ಅವರ ಆದಾಯ ಕಡಮೆಯಾಗುತ್ತದೆ. ಆದಾಯ ಕಡಮೆಯಾದಂತೆ ಅವರಿಗೆ ವಸ್ತುಗಳನ್ನು ಕೊಳ್ಳುವ ಶಕ್ತಿ ಇರುವುದಿಲ್ಲ. ವಸ್ತುಗಳಿಗೆ ಬೇಡಿಕೆ ಕಡಮೆಯಾಗುವುದು. ಅತಿಪ್ರಸರಣದಿಂದಾಗಿ ವಸ್ತುಗಳ ಉತ್ಪಾದನೆಯು ಕುಗ್ಗುವುದು. ಆದಕಾರಣ ಅತಿಪ್ರಸರಣ ಪ್ರಾರಂಭದಲ್ಲಿ ಹೆಚ್ಚು ಉತ್ಪಾದನೆಗೆ ನೆರವಾದರೂ ಕಾಲಕ್ರಮೇಣ ಒಂದು ಮಿತಿಯನ್ನು ದಾಟಿದ ನಂತರ ಅದರಿಂದ ಉತ್ಪಾದನೆಗೆ ಧಕ್ಕೆ ತಗಲುವುದು.

ಹಣದ ಉಬ್ಬರವು ಉತ್ಪಾದನೆಯ ಮೇಲೆ ಅನೇಕ ದುಷ್ಪರಿಣಾಮಗಳನ್ನುಂಟು ಮಾಡುತ್ತದೆ. ಹಣದ ಅತಿಪ್ರಸರಣದಿಂದ ಉತ್ಪಾದನೆಯಲ್ಲಿ ಹಣ ತೊಡಗಿಸುವ ಸಂಘಟನಾಕಾರರು ಉದ್ಯೋಗಿಗಳಿಗೆ ಕೂಲಿಯನ್ನು ಕಡಮೆಮಾಡುತ್ತಾರೆ. ಕಾರ್ಮಿಕರ

ಕೂಲಿಯು ವಸ್ತುಗಳ ಬೆಲೆಗಳು ಏರಿದಂತೆ ಏರುವುದಿಲ್ಲ. ಬೆಲೆಗಳು ಏರಿದಂತೆಲ್ಲ ಕಾರ್ಮಿಕರ ಹಾಗೂ ವೇತನಗಳನ್ನು ಪಡೆಯುವ ನೌಕರರ ನಿಜವಾದ ವರಮಾನ ಕಡಮೆಯಾಗಿ ಅವರಿಗೆ ಸಾಕಷ್ಟು ಆಹಾರಧಾನ್ಯಗಳು ಸಿಗದೆ ತೊಂದರೆ ಎದುರಿಸಬೇಕಾಗುತ್ತದೆ. ಇವರಿಂದ ಜೀವನಮಟ್ಟ ಕಡಮೆಯಾಗಿ ಅವರು ವಿಷಚಕ್ರದಲ್ಲಿ ಸಿಕ್ಕಿ ನರಳುವಂತಾಗುತ್ತದೆ.

(ii) **ವಿತರಣೆಯ ಮೇಲಾಗುವ ಪರಿಣಾಮ :** ಅತಿಪ್ರಸರಣದಿಂದ ಬೆಲೆಗಳು ಏರಲಾರಂಭಿಸುತ್ತವೆ. ಆದರೆ ಎಲ್ಲ ವಸ್ತುಗಳ ಬೆಲೆ ಒಂದೇ ಸಮನೆ ಏರುವುದಿಲ್ಲ. ಆದರೆ ಅವಶ್ಯ ವಸ್ತುಗಳ ಬೆಲೆಗಳು ಮಾತ್ರ ಮಿತಿ ಮೀರಿ ಏರಲಾರಂಭಿಸುತ್ತವೆ. ಇದರಿಂದ ಬಡ ಮತ್ತು ಮಧ್ಯಮವರ್ಗಕ್ಕೆ ಸೇರಿದವರ ಬಹುಭಾಗದ ಆದಾಯವು ಅವರ ಅತ್ಯವಶ್ಯಕ ವಸ್ತುಗಳನ್ನು ಪಡೆಯಲು ವೆಚ್ಚವಾಗುತ್ತದೆ. ಇದರಿಂದ ಬಡ ಮತ್ತು ಮಧ್ಯಮವರ್ಗದವರಿಗೆ ಬಹಳ ತೊಂದರೆಯಾಗುತ್ತದೆ. ಅತಿಪ್ರಸರಣದಿಂದ ಉತ್ಪಾದನೆಯ ವೆಚ್ಚಗಳು ಹೆಚ್ಚುತ್ತವೆ. ಯಂತ್ರ ಮತ್ತು ಕಚ್ಚಾ ಪದಾರ್ಥಗಳಿಗೆ ಹೆಚ್ಚು ಬೆಲೆಯನ್ನು ಕೊಡಬೇಕಾಗುತ್ತದೆ. ಉತ್ಪಾದನೆಯ ವೆಚ್ಚಗಳು ಹೆಚ್ಚಿದಂತೆಲ್ಲ ಉತ್ಪಾದಕರು ಕಡಮೆ ವಸ್ತುಗಳನ್ನು ಉತ್ಪಾದಿಸಿ, ಬೆಲೆಯನ್ನು ಏರಿಸುತ್ತಾರೆ. ವಸ್ತುಗಳ ಬೆಲೆಗಳು ಏರಲು ಪ್ರಾರಂಭವಾದ ಕೂಡಲೇ ನಿಗದಿಯಾದ ವರಮಾನ ಹೊಂದಿರುವವರು ಕಡಮೆ ವಸ್ತುಗಳನ್ನು ಕೊಂಡುಕೊಳ್ಳಬೇಕಾಗುತ್ತದೆ. ಆಗ ವಸ್ತುಗಳಿಗೆ ಬೇಡಿಕೆ ಕಡಮೆಯಾಗುತ್ತದೆ. ಇದರಿಂದ ಉತ್ಪಾದಕರು ಕಡಮೆ ಪ್ರಮಾಣದಲ್ಲಿ ವಸ್ತುಗಳನ್ನು ಉತ್ಪಾದಿಸಲು ನಿಶ್ಚಯಿಸಿ ಕೆಲವು ಕೆಲಸಗಾರರನ್ನು ಕೆಲಸದಿಂದ ಹೊರಹಾಕುವರು. ಅನೇಕರು ನಿರುದ್ಯೋಗಿಗಳಾಗುತ್ತಾರೆ.

(iii) **ವಿದೇಶಿ ವ್ಯಾಪಾರದ ಮೇಲೆ ಆಗುವ ಪರಿಣಾಮ :** ಯಾವುದೇ ಒಂದು ರಾಷ್ಟ್ರದಲ್ಲಿ ಉಂಟಾದ ಅತಿಪ್ರಸರಣ ವಿದೇಶಿ ರಾಷ್ಟ್ರಗಳೊಡನೆ ವ್ಯಾಪಾರಕ್ಕೆ ಆತಂಕವನ್ನು ತಂದೊಡ್ಡುತ್ತದೆ. ಹೇಗೆಂದರೆ ಅತಿಪ್ರಸರಣದಿಂದ ಬೆಲೆಗಳು ಏರುತ್ತವೆ. ವಸ್ತುಗಳ ಬೆಲೆಗಳು ಏರಿದಾಗ ಇತರ ರಾಷ್ಟ್ರಗಳು ನಮ್ಮ ವಸ್ತುಗಳನ್ನು ಬೇಡುವುದನ್ನು ಕಡಮೆಮಾಡುತ್ತವೆ. ಇದರಿಂದ ನಮ್ಮ ರಫ್ತು ಕುಗ್ಗುವುದು. ವಿದೇಶಿ ರಾಷ್ಟ್ರಗಳು ಹೆಚ್ಚಿನ ಲಾಭ ಪಡೆಯಲು ತಮ್ಮ ವಸ್ತುಗಳನ್ನು ಅತಿಪ್ರಸರಣವಿರುವ ರಾಷ್ಟ್ರಗಳಿಗೆ ರಫ್ತು ಮಾಡುತ್ತವೆ. ಅತಿಪ್ರಸರಣದ ರಾಷ್ಟ್ರಗಳಲ್ಲಿ ಆಮದು ಹೆಚ್ಚಾಗುವುದು. ರಫ್ತು ಕಡಮೆಯಾಗುವ ಪರಿಸ್ಥಿತಿಗಳು ವಿದೇಶಿ ವಿನಿಮಯದ ಸಮಸ್ಯೆಯನ್ನು ತಂದೊಡ್ಡುವವು. ಈ ರೀತಿ ವಿದೇಶಿ ವಿನಿಮಯದ ಕೊರತೆ ಉಂಟಾದರೆ ಅತಿಪ್ರಸರಣದ ರಾಷ್ಟ್ರಗಳು ಹಣದ ಮೌಲ್ಯ ವಿಚ್ಛೇದನವನ್ನು ಮಾಡಬೇಕಾಗುತ್ತದೆ.

(iv) **ರೈತರ ಮೇಲೆ ಉಂಟುಮಾಡುವ ಪರಿಣಾಮ :** ಅತಿಪ್ರಸರಣದ ಕಾಲದಲ್ಲಿ ರೈತರು ಹೆಚ್ಚು ಲಾಭ ಪಡೆಯುತ್ತಾರೆ. ಹೇಗೆಂದರೆ ಅತಿಪ್ರಸರಣದಿಂದ ಆಹಾರ

ಪದಾರ್ಥಗಳ ಹಾಗೂ ಇತರ ಕೃಷಿವಸ್ತುಗಳ ಬೆಲೆಗಳು ಏರುತ್ತಹೋಗುತ್ತವೆ. ಅವರು ಈ ಪರಿಸ್ಥಿತಿಯ ಲಾಭ ಪಡೆಯಲು ಹೆಚ್ಚು ವಸ್ತುಗಳನ್ನು ಉತ್ಪಾದಿಸಿ ಹೆಚ್ಚು ಲಾಭ ಗಳಿಸುತ್ತಾರೆ.

(v) **ವೇತನದಾರರ ಮೇಲೆ ಉಂಟುಮಾಡುವ ಪರಿಣಾಮ :** ವೇತನ ಪಡೆಯುವವರು ನಿರ್ದಿಷ್ಟ ವರಮಾನ ಪಡೆಯುವ ಗುಂಪಿಗೆ ಸೇರಿರುವುದರಿಂದ ಅತಿಪ್ರಸರಣದಿಂದ ತೊಂದರೆ ಅನುಭವಿಸಬೇಕಾಗುತ್ತದೆ. ಬೆಲೆಗಳು ಏರಿದಂತೆಲ್ಲ ಅವರು ನಿಶ್ಚಿತ ವರಮಾನದಿಂದ ಕಡಮೆ ವಸ್ತುಗಳನ್ನು ಕೊಳ್ಳಬೇಕಾಗುತ್ತದೆ. ಅವರ ವೇತನ ಸ್ಥಿರವಾಗಿದ್ದು, ಎಲ್ಲ ಬಗೆಯ ವೆಚ್ಚಗಳು ಹೆಚ್ಚುವುದರಿಂದ ಅವರಿಗೆ ಜೀವನಾವಶ್ಯಕ ವಸ್ತುಗಳನ್ನು ಒದಗಿಸಿಕೊಳ್ಳುವುದೂ ಕಷ್ಟವಾಗುತ್ತದೆ. ಬರುವ ಆದಾಯವು ವೆಚ್ಚಗಳನ್ನು ತೂಗಿಸಿಕೊಳ್ಳುವುದಕ್ಕೇ ಅಸಮರ್ಥವಾದಾಗ ಅವರ ಉಳಿತಾಯದ ಪ್ರಮಾಣವೂ ತಗ್ಗುತ್ತದೆ. ಇದು ನಿರಾಶಾವಾದಕ್ಕೆ ಎಡೆಮಾಡಿಕೊಡುವುದಲ್ಲದೆ ಅವರ ಜೀವನಮಟ್ಟವನ್ನು ದಿನೇ ದಿನೇ ಇಳಿಸುತ್ತದೆ.

ಅತಿಪ್ರಸರಣದಿಂದ ಬಡವರು ಮತ್ತಷ್ಟು ಬಡವರಾಗುತ್ತಾರೆ. ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಾರೆ. ಇದರಿಂದ ಬಡವರ ಮತ್ತು ಶ್ರೀಮಂತರ ನಡುವಣ ಅಂತರ ಹೆಚ್ಚುತ್ತದೆ. ಸಂಪತ್ತಿನ ಒಡೆತನ ಮತ್ತು ವರಮಾನದ ಹಂಚುವಿಕೆಯಲ್ಲಿ ಅಸಮಾನತೆ ಕಂಡುಬರುತ್ತದೆ. ವಸ್ತುಗಳ ಕಡಮೆ ಪೂರೈಕೆಯು ಕಳ್ಳಪೇಟೆಗಳಿಗೆ ಎಡೆಮಾಡಿಕೊಡುತ್ತದೆ. ಇದರಿಂದ ಉದ್ದಿಮೆದಾರರು ದುಂಡಗಾಗುತ್ತಾರೆ. ಜನರು ಕಂಗೆಟ್ಟು ದಂಗೆ ಎಬ್ಬಿಸಿ ಕ್ರಾಂತಿಗೆ ಮುನ್ನುಗ್ಗುತ್ತಾರೆ. ಹಣದುಬ್ಬರದಿಂದ ಕಾರ್ಮಿಕರಿಗೆ, ಮಧ್ಯಮವರ್ಗದವರಿಗೆ ಹಾನಿಯಾದರೂ ವರ್ತಕರಿಗೆ ಮಾತ್ರ ಹಣದುಬ್ಬರ ಲಾಭಕರವಾಗಿರುತ್ತದೆ. ಕಡಮೆಬೆಲೆ ಇದ್ದಾಗ ಕೊಂಡವಸ್ತುಗಳನ್ನು ಹಾಗೆಯೇ ಸಂಗ್ರಹಿಸಿಟ್ಟು ಹೆಚ್ಚಿನ ಬೆಲೆ ಬಂದಾಗ ಮಾರುವುದರಿಂದ ಅವರಿಗೆ ಹೆಚ್ಚು ಲಾಭ ಬರುತ್ತದೆ. ವಸ್ತುಗಳ ಕಡಮೆ ಪೂರೈಕೆಯಿಂದ ಕಳ್ಳಪೇಟೆ ನಿರ್ಮಿತವಾಗಿ ವ್ಯಾಪಾರಸ್ಥರು ಹೆಚ್ಚು ಲಾಭಪಡೆಯಲು ಅನುಕೂಲವಾಗುತ್ತದೆ. ಉತ್ಪಾದನೆಯಾಗುವ ವಸ್ತುಗಳ ಬೆಲೆ ಒಂದೇ ಸಮನೆ ಏರುತ್ತಿರುತ್ತದೆ. ಆದರೆ ಉತ್ಪಾದನೆ, ವಸ್ತುಗಳ ಬೆಲೆಯ ಏರುವಿಕೆಗೆ ತಕ್ಕಂತೆ ಹೆಚ್ಚುವುದಿಲ್ಲ. ಹೀಗಾಗಿ ಉತ್ಪಾದಕರಿಗೆ ಹೆಚ್ಚಿನ ಲಾಭಬರುತ್ತದೆ. ಕಚ್ಚಾವಸ್ತುಗಳ ಬೆಲೆ, ಕಟ್ಟಡದ ಬಾಡಿಗೆ, ಬಡ್ಡಿ ಮತ್ತು ಕೂಲಿಯ ದರಗಳು, ವಸ್ತುಗಳ ಬೆಲೆಗಳು ಏರುವ ವೇಗದಲ್ಲಿ ಏರದಿರುವುದರಿಂದ ಉತ್ಪಾದಕರಿಗೆ ಹೆಚ್ಚಿನ ಅನುಕೂಲ ಉಂಟಾಗಿ ಅವರ ಜೀವನಮಟ್ಟ ಏರುತ್ತದೆ.

ಹಣದುಬ್ಬರದಿಂದ ಸರಕಾರಕ್ಕೆ ಹಾನಿಯಾಗುತ್ತದೆ. ಸರಕಾರ ಅನೇಕ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಹೆಚ್ಚು ಬೆಲೆಕೊಟ್ಟು ಕೊಳ್ಳಬೇಕಾಗುತ್ತದೆ. ದೇಶದ ಅಭಿವೃದ್ಧಿಗಾಗಿ

ಹೆಚ್ಚು ಹಣವನ್ನು ವಿನಿಯೋಗಿಸಬೇಕಾಗುತ್ತದೆ. ಇದರಿಂದ ಸರಕಾರದ ವೆಚ್ಚ ಅಧಿಕಗೊಂಡು ಅದನ್ನು ತೆರಿಗೆಗಳ ಮೂಲಕ ವಸೂಲಿ ಮಾಡಬೇಕಾಗುತ್ತದೆ. ಹಣದ ಕೊರತೆ ತುಂಬಲು ಸಾಲ ಮಾಡಬೇಕಾಗುತ್ತದೆ. ಸಾಮಾಜಿಕವಾಗಿ ಬೆಲೆ ಏರಿಕೆಯಿಂದ ಕಷ್ಟನಷ್ಟಗಳು ಉಂಟಾಗುತ್ತವೆ. ಇದರಿಂದ ಶ್ರೀಸಾಮಾನ್ಯರು ಜೀವನ ಸಾಗಿಸುವುದು ಬಹಳ ಕಷ್ಟವಾಗುತ್ತದೆ. ಕಾರ್ಮಿಕರು ಹೆಚ್ಚಿನ ಕೂಲಿಗಾಗಿ ಮುಷ್ಕರಗಳನ್ನು ನಡೆಸುತ್ತಾರೆ. ಹೆಚ್ಚು ಕೂಲಿಯನ್ನು ಕೊಡಲು ಒಪ್ಪದ ಮಾಲೀಕರು ಕಾರ್ಖಾನೆಗಳನ್ನು ಮುಚ್ಚುತ್ತಾರೆ. ಕಾರ್ಮಿಕರ ಮತ್ತು ಮಾಲೀಕರ ನಡುವೆ ಮನಸ್ತಾಪ ಹೆಚ್ಚಲು ಕಾರಣವಾಗುತ್ತದೆ. ಮುಷ್ಕರಗಳಿಂದ ಕಾರ್ಮಿಕರ ಕೂಲಿಯು ನಿಂತುಹೋಗಿ ಅವರು ಮತ್ತಷ್ಟು ತೊಂದರೆಯನ್ನು ಅನುಭವಿಸ ಬೇಕಾಗುತ್ತದೆ. ಮಾಲೀಕರಿಗೂ ಇದರಿಂದ ನಷ್ಟ ಉಂಟಾಗುತ್ತದೆ. ರಾಷ್ಟ್ರದ ಸಂಪತ್ತಿನ ಬೆಳವಣಿಗೆಗೆ ಧಕ್ಕೆ ತಗಲುತ್ತದೆ. ಈ ರೀತಿ ಅತಿಪ್ರಸರಣದಿಂದ ಹಣದ ಮೌಲ್ಯ ಇಳಿಯುವುದಲ್ಲದೆ ಆದಾಯ ಮತ್ತು ವೆಚ್ಚಗಳ ಅಂತರ ಹೆಚ್ಚುತ್ತದೆ. ಸಾಮಾಜಿಕ ಜೀವನದಲ್ಲಿನ ಮೇಲುಕೀಳುಗಳ ಕಂದರ ದಿನ ದಿನಕ್ಕೂ ಅಳವಾಗುತ್ತದೆ.

ತಡೆಗಟ್ಟಲು ಕೈಗೊಳ್ಳಬೇಕಾದ ಪರಿಹಾರೋಪಾಯಗಳು : ಆದರೆ ಅತಿಪ್ರಸರಣದ ಪಿಡುಗಿಗೆ ತ್ವರಿತರೂಪದಲ್ಲಿ ಪರಿಹಾರಗಳನ್ನು ಒದಗಿಸುವುದು ಅಷ್ಟು ಸುಲಭದ ಕೆಲಸವಲ್ಲ. ಅದು ತೀರಪ್ರಯಾಸದ ಕೆಲಸವೆಂದೇ ಹೇಳಬಹುದು. ಏಕೆಂದರೆ, ಬೆಲೆಗಳನ್ನು ತಡೆಗಟ್ಟಿ ಒಂದು ಸಮಸ್ಥಿತಿಗೆ ತರಬೇಕಾದರೆ ಒಂದುಕಡೆ ಏರುತ್ತಿರುವ ಹಣದ ಪ್ರಮಾಣವನ್ನು ತಗ್ಗಿಸಬೇಕು. ಮತ್ತೊಂದುಕಡೆ ವಸ್ತುಗಳ ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸಬೇಕು. ಅತಿಪ್ರಸರಣವನ್ನು ಪರಿಹರಿಸಲು ಹಲವು ಬಗೆಯ ಕಾರ್ಯಕ್ರಮಗಳನ್ನು ಸರಕಾರವು ಕೂಡಲೇ ಕೈಗೊಳ್ಳಬೇಕಾಗುತ್ತದೆ.

(i) **ಹಣಕಾಸಿನ ಕಾರ್ಯಕ್ರಮಗಳು :** ಬೆಲೆಗಳು ಏರಲು ಮುಖ್ಯ ಕಾರಣ ಬೇಡಿಕೆಯ ಒತ್ತಡ. ಚಲಾವಣೆಯಲ್ಲಿರುವ ಹಣದ ಪೂರೈಕೆ ಹೆಚ್ಚಿದರೆ ಜನರ ಬಳಿ ಹೆಚ್ಚು ಹಣವಿದ್ದು ಅವರು ಆ ಹಣವನ್ನು ವಸ್ತುಗಳನ್ನು ಕೊಳ್ಳಲು ಬಳಸುತ್ತಾರೆ. ವಸ್ತುಗಳಿಗೆ ಬೇಡಿಕೆಯು ಹೆಚ್ಚಿ ಬೆಲೆಗಳು ಏರುತ್ತವೆ. ಆದ್ದರಿಂದ ಸರಕಾರ ಚಲಾವಣೆಯಲ್ಲಿರುವ ಹಣದ ಪೂರೈಕೆಯನ್ನು ಕಡಮೆಮಾಡಿ ಜನರಿಗೆ ಬರುವ ವರಮಾನ ಮತ್ತು ವಸ್ತುಗಳ ಬೆಲೆಗಳನ್ನು ಕಡಮೆಮಾಡಬಹುದು. ಈ ಗುರಿಯನ್ನು ಸಾಧಿಸಲು ಕೇಂದ್ರ ಬ್ಯಾಂಕ್ ತನ್ನ ಬ್ಯಾಂಕ್ ದರವನ್ನು ಏರಿಸಬೇಕು. ಬ್ಯಾಂಕ್‌ದರ ಹೆಚ್ಚಾದಾಗ ಬಡ್ಡಿಯ ದರವೂ ಏರುತ್ತದೆ. ಬಡ್ಡಿ ಹೆಚ್ಚಾದಾಗ ಸಾಲ ಪಡೆಯುವುದು ಕಡಮೆಯಾಗುತ್ತದೆ. ಆಗ ಜನರ ಬಳಿ ಹಣ ಕಡಮೆಯಾಗಿ ವಸ್ತುಗಳಿಗೆ ಬೇಡಿಕೆ ಕುಗ್ಗುತ್ತದೆ. ಇದರಿಂದ ಬೆಲೆಗಳ ಏರಿಕೆಗೆ ತಡೆಹಾಕಿದಂತಾಗುತ್ತದೆ. ಕೇಂದ್ರಬ್ಯಾಂಕ್ ಬಡ್ಡಿದರ ಏರಿಸಿದ ಕೊಡಲೇ ಇತರ ಬ್ಯಾಂಕ್‌ಗಳೂ ತಮ್ಮ ಬಡ್ಡಿ ದರವನ್ನು ಏರಿಸುತ್ತವೆ. ಹೆಚ್ಚಿನ ಬಡ್ಡಿ

ಕೊಟ್ಟು ಬ್ಯಾಂಕ್‌ಗಳಿಂದ ಸಾಲಪಡೆಯಲು ಜನರು ಮುಂದೆ ಬರುವುದಿಲ್ಲ. ಉದ್ದಿಮೆದಾರರು, ವ್ಯಾಪಾರಸ್ಥರು ಸಾಲಪಡೆಯುವುದನ್ನು ಮುಂದೂಡುತ್ತಾರೆ. ಆಗ ಬಂಡವಾಳ ಹೂಡುವಿಕೆಯು ಕಡಮೆಯಾಗುತ್ತದೆ. ಇದರಿಂದ ಜನರ ಆದಾಯ ಕಡಮೆಯಾಗುತ್ತದೆ. ಪರಿಣಾಮವಾಗಿ ವಸ್ತುಗಳಿಗೆ ಬೇಡಿಕೆ ಕಡಮೆಯಾಗುವುದು. ಬಡ್ಡಿಯದರ ಹೆಚ್ಚಿದಂತೆ ಹೆಚ್ಚು ಹಣ ಹೊಂದಿರುವವರು ಲಾಭ ಪಡೆಯಲು ತಮ್ಮ ಹಣವನ್ನು ಉಳಿತಾಯಮಾಡಲು ಮುಂದೆ ಬರುತ್ತಾರೆ. ಉಳಿತಾಯದ ಪ್ರಮಾಣ ಹೆಚ್ಚಿದಂತೆಲ್ಲ ವಸ್ತುಗಳಿಗಿರುವ ಬೇಡಿಕೆಯೂ ಕಡಮೆಯಾಗುತ್ತದೆ. ಬಂಡವಾಳಗಾರರು ಹೆಚ್ಚು ಬಡ್ಡಿದರವಿದ್ದಾಗ ಬಂಡವಾಳ ಹೂಡಲು ಹಿಂದೆಗೆಯುವರು.

(ii) **ತೆರಿಗೆಗಳನ್ನು ಹೇರುವುದು :** ಅತಿಪ್ರಸರಣದಿಂದ ಜನರು ಸಾಕಷ್ಟು ಹಣವನ್ನು ಪಡೆದಿರುವರು. ಇದರಿಂದ ಹೆಚ್ಚು ಸಾಮಾನುಗಳನ್ನು ಕೊಳ್ಳಲು ಅಂಗಡಿಗಳಿಗೆ ಹೋಗುತ್ತಾರೆ. ಇದರಿಂದ ಬೆಲೆಗಳು ಏರುತ್ತವೆ. ಈ ಪರಿಸ್ಥಿತಿಯನ್ನು ತಪ್ಪಿಸಲು ಸರಕಾರ ವಸ್ತುಗಳ ಮೇಲೆ ತೆರಿಗೆಗಳನ್ನು ಹೇರಬೇಕು. ಶ್ರೀಮಂತರು ಮಾತ್ರ ಹೆಚ್ಚು ವಸ್ತುಗಳನ್ನು ಕೊಳ್ಳಲು ಮುಂದೆ ಬರುವರು. ಸರಕಾರ ತೆರಿಗೆಗಳನ್ನು ಮತ್ತಷ್ಟು ಹೆಚ್ಚಿಸಿದಾಗ ಶ್ರೀಮಂತರು ಹೆಚ್ಚು ತೆರಿಗೆಗಳನ್ನು ಕೊಡುತ್ತಾರೆ. ಜನರ ಉಳಿತಾಯ ಕಡಮೆಯಾಗುತ್ತದೆ. ಪ್ರತ್ಯಕ್ಷ ತೆರಿಗೆ ದರವನ್ನು ವಿಪರೀತವಾಗಿ ಏರಿಸಿದರೆ ಆದಾಯ ಮತ್ತು ಲಾಭಗಳ ಮೇಲೆ ಹೆಚ್ಚಿನ ತೆರಿಗೆಯ ಭಾರ ಬೀಳುವುದು. ಜನರು ಹೆಚ್ಚು ತೆರಿಗೆಗಳನ್ನು ಕೊಡಬೇಕಾಗುವುದರಿಂದ ಬಳಕೆಯ ವಸ್ತುಗಳ ಮೇಲೆ ವೆಚ್ಚ ಮಾಡಲು ಅವರ ಬಳಿ ಹೆಚ್ಚು ಹಣವಿರುವುದಿಲ್ಲ. ಇದರಿಂದ ವಸ್ತುಗಳಿಗೆ ಬೇಡಿಕೆಯು ಕಡಮೆಯಾಗುವುದು. ಬೇಡಿಕೆಯು ಕಡಮೆಯಾದಂತೆಲ್ಲ ವಸ್ತುಗಳ ಬೆಲೆ ಇಳಿಮುಖವಾಗುತ್ತ ಹೋಗುವುದು. ಇದರಿಂದ ಅತಿಪ್ರಸರಣವು ಕಡಮೆಯಾಗುವುದು. ಸರಕಾರ ಪ್ರತ್ಯಕ್ಷ ಹಾಗೂ ಪರೋಕ್ಷ ತೆರಿಗೆಗಳನ್ನು ವಿಧಿಸುವುದರ ಮೂಲಕವೂ ಬೆಲೆ ಏರಿಕೆಯನ್ನು ಬಹುಮಟ್ಟಿಗೆ ತಡೆಗಟ್ಟಬಹುದು.

(iii) **ಸಾಲ ಪತ್ರಗಳ ಮಾರಾಟ :** ಜನರ ಬಳಿ ಇರುವ ಹೆಚ್ಚು ಹಣವನ್ನು ಹಿಂದಕ್ಕೆ ಪಡೆಯಲು ಕೇಂದ್ರಬ್ಯಾಂಕು ಸಾಲಪತ್ರಗಳನ್ನು ಮಾರಾಟಮಾಡುತ್ತದೆ. ಜನರು ಹಣವನ್ನು ಕೊಟ್ಟು ಸಾಲ ಪತ್ರಗಳನ್ನು ಪಡೆಯುವರು. ಈ ರೀತಿ ಸಂಗ್ರಹಿಸಿದ ಹಣವನ್ನು ಚಲಾವಣೆಗೆ ತರುವುದಿಲ್ಲ. ಜನರಲ್ಲಿ ಕೊಳ್ಳುವ ಶಕ್ತಿ ಕಡಮೆಯಾಗಿ ವಸ್ತುಗಳ ಬೆಲೆಗಳು ಇಳಿಯುತ್ತವೆ. ಕೇಂದ್ರಬ್ಯಾಂಕು ಆಯ್ದ ಸಾಲನಿಯಂತ್ರಣದ ಮೂಲಕ ಹಣದ ಚಲಾವಣೆಯನ್ನು ಕಡಮೆಮಾಡಬಹುದು. ಸಾಲವನ್ನು ಉತ್ಪಾದನೆಗೆ ಮಾತ್ರ ಕೊಡುವುದು, ಸಟ್ಟಾ ವ್ಯಾಪಾರಿಗಳಿಗೆ ಸಾಲಕೊಡುವುದನ್ನು ನಿಲ್ಲಿಸುವಂತೆ ಇತರ ಬ್ಯಾಂಕುಗಳಿಗೆ ಆದೇಶ ನೀಡುವುದು ಇತ್ಯಾದಿ ಕೈಗೊಳ್ಳಲಾಗುವುದು.

ಅತಿಪ್ರಸರಣಕ್ಕೆ ಮುಖ್ಯ ಕಾರಣ ವಸ್ತುಗಳಿಗೆ ಅಧಿಕ ಬೇಡಿಕೆ ಇದ್ದು, ಉತ್ಪಾದನೆ ಮಾತ್ರ ಕಡಮೆ ಇರುವುದೇ ಆಗಿದೆ. ಬೇಡಿಕೆ ಇರುವ ವಸ್ತುಗಳ ಪೂರೈಕೆ ಸಾಕಷ್ಟು ಇಲ್ಲದಿರುವುದೂ ಒಂದು ಕಾರಣ. ಸರಕಾರ ವಸ್ತುಗಳ ಪೂರೈಕೆಯನ್ನು ಹೆಚ್ಚಿಸುವುದರ ಮೂಲಕ ವಸ್ತುಗಳ ಬೆಲೆಯನ್ನು ತಗ್ಗಿಸಬೇಕು. ವಸ್ತುಗಳ ಬೆಲೆಯನ್ನು ನಿಗದಿಪಡಿಸಿ ಅದಕ್ಕಿಂತ ಹೆಚ್ಚು ಬೆಲೆಗೆ ಮಾರುವವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಕಳ್ಳಪೇಟೆ, ಅಕ್ರಮ ವ್ಯಾಪಾರ ಮುಂತಾದುವುಗಳನ್ನು ತಡೆಗಟ್ಟಬೇಕು. ಜನರಿಗೆ ಅತ್ಯಾವಶ್ಯಕ ವಸ್ತುಗಳಾದ ಅಕ್ಕಿ, ಸಕ್ಕರೆ, ಸೀಮೆಎಣ್ಣೆಗಳನ್ನು ಸುಲಭ ಬೆಲೆಯಲ್ಲಿ ಒದಗಿಸಲು ನ್ಯಾಯಬೆಲೆಯ ಅಂಗಡಿಗಳನ್ನು ತೆರೆಯಬೇಕು. ಈ ವಸ್ತುಗಳು ಎಲ್ಲರಿಗೂ ಸರಿಯಾಗಿ ಹಂಚಿಕೆಯಾಗುವಂತೆ ಮೇಲ್ವಿಚಾರಣೆಯನ್ನುವಹಿಸಬೇಕು. ಈ ರೀತಿಯ ಕ್ರಮಗಳಿಂದ ಅತಿಪ್ರಸರಣವನ್ನು ತಡೆಗಟ್ಟಬಹುದು.

ಅಪ್ರಸರಣ

ಹಣದ ಅತಿಪ್ರಸರಣಕ್ಕೆ ವ್ಯತಿರಿಕ್ತವಾದ ಮತ್ತೊಂದು ಪರಿಸ್ಥಿತಿಯೇ ಅಪ್ರಸರಣ. ಅಪ್ರಸರಣವನ್ನು ಕುಗ್ಗುಪ್ರಸರಣವೆಂತಲೂ ಕರೆಯುತ್ತಾರೆ. ಇದು ಅತಿಪ್ರಸರಣಕ್ಕಿಂತಲೂ ಅಪಾಯಕಾರಿಯಾದುದು. ದೇಶದಲ್ಲಿ ಅತಿಪ್ರಸರಣವಿದ್ದಾಗ ಬೆಲೆಗಳು ಒಂದೇ ಸಮನೆ ಏರಲು ಪ್ರಾರಂಭಿಸುತ್ತವೆ. ಇದಕ್ಕೆ ಕಾರಣ ಬೇಡಿಕೆಗಿಂತಲೂ ಹಣದ ಚಲಾವಣೆ ಹೆಚ್ಚಿಗಿರುವುದು. ಆದರೆ ಕುಗ್ಗು ಪ್ರಸರಣವಿದ್ದಾಗ ಬೆಲೆಗಳು ಇಳಿಯಲಾರಂಭಿಸುತ್ತವೆ. ಇದರಿಂದ ಹಣದ ಚಲಾವಣೆ ಅವಶ್ಯಕತೆಗಿಂತ ಕಡಮೆಯಾಗುತ್ತದೆ. ಕೇಂದ್ರ ಬ್ಯಾಂಕುಗಳು ಸಾಕಷ್ಟು ಹಣವನ್ನು ಚಲಾವಣೆಗೆ ಬಿಡುವುದಿಲ್ಲ. ಇದರಿಂದ ಉದ್ದಿಮೆದಾರರ ಬಳಿ ಸಾಕಷ್ಟು ಹಣವಿರುವುದಿಲ್ಲ. ಸಾಕಷ್ಟು ಹಣವನ್ನು ಉದ್ದಿಮೆಗಳಲ್ಲಿ ತೊಡಗಿಸುವುದಿಲ್ಲ. ಬೆಲೆಗಳು ಹೆಚ್ಚಿನ ಪ್ರಮಾಣದಲ್ಲಿ ಏರಿದಾಗ ಅವುಗಳನ್ನು ಹಲವು ವಿಧಗಳಿಂದ ಕಡಮೆಮಾಡಿದಲ್ಲಿ ಉತ್ಪಾದನೆಗಾಗಲೀ, ಉದ್ಯೋಗಾವಕಾಶಗಳಿಗಾಗಲೀ ತೊಂದರೆಯಾಗುವುದಿಲ್ಲ. ಅತಿಪ್ರಸರಣವನ್ನು ಕಡಮೆಮಾಡಲು ಚಲಾವಣೆಯಲ್ಲಿರುವ ಹಣವನ್ನು ಕಡಮೆಮಾಡಬೇಕಾಗುತ್ತದೆ. ಇಂತಹ ಕ್ರಮ ಕೈಕೊಂಡಾಗ ಅದನ್ನು ಪ್ರತಿಪ್ರಸರಣ ಎಂದು ಕರೆಯುತ್ತಾರೆ. ಪ್ರತಿಪ್ರಸರಣ ಒಂದು ನಿರ್ದಿಷ್ಟ ಘಟ್ಟ ತಲುಪಿದ ನಂತರ ಬೆಲೆಗಳು ಇಳಿಯುವ ಸಂಭವವಿರುತ್ತದೆ. ಬೆಲೆಗಳು ಇಳಿದಂತೆಲ್ಲ ಸಂಘಟನಾಕಾರರು ಉತ್ಪಾದನೆಯನ್ನು ಮೊಟಕುಗೊಳಿಸುತ್ತಾರೆ. ಇದರಿಂದ ಅನೇಕರು ನಿರುದ್ಯೋಗಿಗಳಾಗುತ್ತಾರೆ. ಅವರ ವರಮಾನ ಕಡಮೆಯಾಗುತ್ತದೆ. ಇದರ ಫಲವಾಗಿ ವಸ್ತುಗಳ ಬೆಲೆಗಳು ಇಳಿಯುವಂತಾಗಿ ಕುಗ್ಗುಪ್ರಸರಣ ತಲೆದೋರುತ್ತದೆ.

ಈ ರೀತಿ ಅಪ್ರಸರಣದಲ್ಲಿ ಬೆಲೆಗಳು ಇಳಿಯಲಾರಂಭಿಸುತ್ತವೆ. ಉತ್ಪಾದನೆ ಕುಗ್ಗುವುದಲ್ಲದೆ ನಿರುದ್ಯೋಗಕ್ಕೆ ಎಡೆಮಾಡಿಕೊಡುತ್ತದೆ. ವಸ್ತುಗಳ ಬೇಡಿಕೆಯೂ

ಸಹ ಕುಗ್ಗುತ್ತದೆ. ಅತಿಪ್ರಸರಣ ವರ್ತಕರಿಗೆ ಲಾಭದಾಯಕವಾಗಿ ಪರಿಣಮಿಸಿದರೆ ಅಪ್ರಸರಣವು ನಷ್ಟದಾಯಕವಾಗುತ್ತದೆ. ಅತಿಪ್ರಸರಣದಲ್ಲಿ ವಸ್ತುಗಳಿಗೆ ಬೇಡಿಕೆ ಹೆಚ್ಚಿ ಬೆಲೆಗಳು ಏರಲಾರಂಭಿಸುತ್ತವೆ. ಸಂಘಟನಾಕಾರರಿಗೆ ಹೆಚ್ಚು ಲಾಭ ಬಂದಂತೆ ಅವರು ಹೆಚ್ಚು ಬಂಡವಾಳವನ್ನು ಉದ್ದಿಮೆಯಲ್ಲಿ ತೊಡಗಿಸಿ ಉತ್ಪಾದನೆಯನ್ನು ಅಧಿಕಗೊಳಿಸುತ್ತಾರೆ. ಹೆಚ್ಚು ವಸ್ತುಗಳನ್ನು ಉತ್ಪಾದಿಸಲು ಹೆಚ್ಚು ಜನ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುತ್ತಾರೆ. ಅಂದರೆ ಉದ್ಯೋಗಾವಕಾಶಗಳು ವಿಸ್ತೃತಗೊಳ್ಳುತ್ತವೆ. ಕುಗ್ಗುಪ್ರಸರಣದಲ್ಲಿ ಜನರ ಕೈಯಲ್ಲಿ ಕಡಮೆ ಹಣವಿರುತ್ತದೆ. ಇದರಿಂದ ಹಣದ ಚಲಾವಣೆ ಅವಶ್ಯಕತೆಗಿಂತಲೂ ಕಡಮೆಯಾಗುತ್ತದೆ. ಇದರಿಂದ ವಸ್ತುಗಳ ಬೇಡಿಕೆ ಕಡಮೆಯಾಗಿ ಅವುಗಳ ಬೆಲೆಗಳು ಇಳಿಯಲಾರಂಭಿಸುತ್ತವೆ. ವಸ್ತುಗಳ ಬೆಲೆ ಇಳಿದಾಗ ವರ್ತಕರ ಲಾಭ ಕಡಮೆಯಾಗುತ್ತದೆ. ಬೆಲೆಗಳು ಕಡಮೆಯಾದ್ದರಿಂದ ಸಂಘಟನಾಕಾರರಿಗೆ ಹೆಚ್ಚು ಲಾಭ ಸಂದಾಯವಾಗದೆ ಬಂಡವಾಳ ಹೂಡಿಕೆ ಕಡಮೆಯಾಗಿ ಉತ್ಪಾದನೆ ಕುಂಠಿತಗೊಳ್ಳುತ್ತದೆ. ಉದ್ಯೋಗಗಳು ಕಡಮೆಯಾಗುತ್ತವೆ. ಜನರ ವರಮಾನ ಕಡಮೆಯಾಗುತ್ತದೆ. ಕೇಂದ್ರಬ್ಯಾಂಕು ಈ ಪರಿಸ್ಥಿತಿಯಲ್ಲಿ ಹೆಚ್ಚು ಹಣವನ್ನು ಚಲಾವಣೆಗೆ ಬಿಡುವುದಿಲ್ಲ. ಆದಕಾರಣ ಉದ್ದಿಮೆದಾರರ ಬಳಿ ಸಾಕಷ್ಟು ಹಣವಿರುವುದಿಲ್ಲ. ಸಾಕಷ್ಟು ಹಣವನ್ನು ಉದ್ದಿಮೆಗಳಲ್ಲಿ ತೊಡಗಿಸದಿದ್ದರೆ ಅನೇಕರು ಕೆಲಸಗಳನ್ನು ಕಳೆದುಕೊಂಡು ನಿರುದ್ಯೋಗಿಗಳಾಗುತ್ತಾರೆ. ನಿರುದ್ಯೋಗವು ಜನರ ಆದಾಯವನ್ನು ಮತ್ತಷ್ಟು ಕುಗ್ಗಿಸುತ್ತದೆ. ಇದರಿಂದ ವಸ್ತುಗಳಿಗೆ ಬೇಡಿಕೆ ಕಡಮೆಯಾಗುತ್ತದೆ. ಆಗ ವಸ್ತುಗಳ ಬೆಲೆಗಳು ಇನ್ನಷ್ಟು ಇಳಿಯುತ್ತವೆ. ಸ್ಥಿರವರಮಾನ ಹೊಂದಿರುವವರಿಗೆ ಅಪ್ರಸರಣವು ಬಹಳ ಲಾಭದಾಯಕವಾಗುತ್ತದೆ. ಕಡಮೆ ಹಣವು ಹೆಚ್ಚು ವಸ್ತುಗಳನ್ನುಕೊಳ್ಳುವ ಶಕ್ತಿಯನ್ನು ಹೊಂದಿರುತ್ತದೆ. ಇದರಿಂದ ಸ್ಥಿರ ವರಮಾನ ಹೊಂದಿದವರ ಜೀವನಮಟ್ಟ ಸುಧಾರಿಸುತ್ತದೆ.

ಪರಿಹಾರೋಪಾಯಗಳು : ಕುಗ್ಗಿದ ಪ್ರಸರಣವನ್ನು (i) ಹಣದ ಪೂರೈಕೆಯನ್ನು ಹೆಚ್ಚಿಸುವುದರಿಂದ, (ii) ಉದ್ದಿಮೆದಾರರಿಗೆ ಕಡಮೆ ಬಡ್ಡಿಗೆ ಹಣವನ್ನು ಒದಗಿಸಿ ಹೆಚ್ಚು ಉದ್ದಿಮೆಗಳನ್ನು ಸ್ಥಾಪಿಸುವುದರಿಂದ ಹಾಗೂ (iii) ಕೇಂದ್ರಬ್ಯಾಂಕು ಬಡ್ಡಿಯದರವನ್ನು ಕಡಮೆಮಾಡುವುದರಿಂದ ಪರಿಹರಿಸಬಹುದು.

ಕುಗ್ಗುಪ್ರಸರಣ ಪರಿಸ್ಥಿತಿಯಲ್ಲಿ ಮೊಟ್ಟಮೊದಲಿಗೆ ದೇಶದಲ್ಲಿ ಹಣದ ಚಲಾವಣೆಯನ್ನು ಹೆಚ್ಚಿಸಬೇಕು. ಉದ್ದಿಮೆದಾರರಿಗೆ ಕಡಮೆ ಬಡ್ಡಿಗೆ ಹಣವನ್ನು ಒದಗಿಸಿ ಹೆಚ್ಚು ಉದ್ದಿಮೆಗಳನ್ನು ಪ್ರಾರಂಭಿಸುವಂತೆ ಮಾಡಬೇಕು. ಇವುಗಳನ್ನು ಮಾಡಲು ಕೇಂದ್ರಬ್ಯಾಂಕು ಬ್ಯಾಂಕ್‌ದರವನ್ನು ಕಡಮೆಮಾಡಬೇಕು. ಬಡ್ಡಿಯದರ ಕಡಮೆಯಾದರೆ ಉಳಿದ ಬ್ಯಾಂಕುಗಳು ತಮ್ಮ ಬಡ್ಡಿಯದರವನ್ನು ಕಡಮೆ ಮಾಡುತ್ತವೆ. ಇದರಿಂದ ಹೆಚ್ಚು ಜನರು ಬ್ಯಾಂಕುಗಳಿಂದ ಕಡಮೆ ಬಡ್ಡಿಗೆ ಹಣವನ್ನು

ಪಡೆದು ಆ ಹಣವನ್ನು ಉದ್ದಿಮೆಗಳಲ್ಲಿ ತೊಡಗಿಸುತ್ತಾರೆ. ಇದರಿಂದ ವಸ್ತುಗಳನ್ನು ಉತ್ಪಾದಿಸಲು ಹೆಚ್ಚು ಜನರಿಗೆ ಉದ್ಯೋಗಗಳು ದೊರೆತು ಅವರ ಆದಾಯ ಹೆಚ್ಚುತ್ತದೆ. ಅವರ ಕೊಳ್ಳುವ ಶಕ್ತಿ ಹೆಚ್ಚುತ್ತದೆ. ವಸ್ತುಗಳಿಗೆ ಬೇಡಿಕೆ ಕಂಡುಬರುತ್ತದೆ. ಕೇಂದ್ರಬ್ಯಾಂಕು ತನ್ನ ಸಾಲಪತ್ರಗಳನ್ನು ಮಾರುಕಟ್ಟೆಯಲ್ಲಿ ಕೊಂಡುಕೊಳ್ಳಬೇಕು. ಈ ರೀತಿ ಕೊಂಡ ಸಾಲಪತ್ರಗಳಿಗೆ ಬ್ಯಾಂಕ್ ಹಣವನ್ನು ಕೊಡುವುದರಿಂದ ಜನರಲ್ಲಿ ಹಣ ಸಂಗ್ರಹವಾಗುತ್ತದೆ. ಬೇಡಿಕೆ ಹೆಚ್ಚಾಗುತ್ತದೆ. ಕೆಲವರು ತಮ್ಮ ಹಣವನ್ನು ಬ್ಯಾಂಕ್‌ನಲ್ಲಿ ಠೇವಣಿಗಳಾಗಿಡುವುದರಿಂದ ಆ ಹಣದ ಮೇಲೆ ಬ್ಯಾಂಕುಗಳು ಹೆಚ್ಚು ಸಾಲ ನೀಡುತ್ತವೆ.

ಸರಕಾರ ಕುಗ್ಗುಪ್ರಸರಣವನ್ನು ಪರಿಹರಿಸಲು ಸಾರ್ವಜನಿಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಅಂತಹ ಕ್ರಮಗಳಲ್ಲಿ ಮುಖ್ಯವಾದವುಗಳೆಂದರೆ ತೆರಿಗೆಗಳು. ಸರಕಾರವು ವಸ್ತುಗಳ ಮೇಲೆ ವಿಧಿಸುವ ತೆರಿಗೆಗಳನ್ನು ಕಡಮೆಮಾಡಬೇಕು. ಪ್ರತ್ಯಕ್ಷ ತೆರಿಗೆಗಳನ್ನು ಕಡಮೆ ಮಾಡಿದರೆ ಹೆಚ್ಚು ವರಮಾನ ಗಳಿಸುವವರು, ತಮ್ಮಲ್ಲಿ ಹೆಚ್ಚು ಹಣವನ್ನು ಹೊಂದಿಸಲು ನೆರವಾಗುವುದು. ಅವರಲ್ಲಿ ಹೆಚ್ಚು ಹಣ ಉಳಿದು, ಆ ಹಣವನ್ನು ವಸ್ತುಗಳನ್ನು ಕೊಳ್ಳಲು ಬಳಸಲಾಗುವುದು. ಇದರಿಂದ ವಸ್ತುಗಳಿಗೆ ಬೇಡಿಕೆಯುಂಟಾಗುತ್ತದೆ. ಸರಕಾರವು ಸಾರ್ವಜನಿಕ ಕಾರ್ಯಗಳನ್ನು ಕೈಗೊಳ್ಳಲು ಮುಂದೆ ಬಂದು ವೆಚ್ಚವನ್ನು ಹೆಚ್ಚುಮಾಡಬೇಕು. ಸಾರ್ವಜನಿಕ ಕಾರ್ಯಗಳಾದ ರಸ್ತೆಗಳ ನಿರ್ಮಾಣ, ರೈಲುಗಳ ನಿರ್ಮಾಣ, ನೀರಾವರಿಯೋಜನೆಗಳನ್ನು ನಿರ್ಮಿಸುವುದು, ಇತ್ಯಾದಿಗಳನ್ನು ಕೈಗೊಳ್ಳಬೇಕು. ಇಂತಹ ಕ್ರಮಗಳಿಂದ ನಿರುದ್ಯೋಗಿಗಳಿಗೆ ಉದ್ಯೋಗಗಳು ದೊರೆತು ಅವರ ಆದಾಯ ಹೆಚ್ಚುವುದು. ಹೆಚ್ಚಿದ ಆದಾಯವನ್ನು ವಸ್ತುಗಳನ್ನು ಕೊಳ್ಳಲು ಬಳಸುವರು. ವಸ್ತುಗಳಿಗೆ ಬೇಡಿಕೆಯು ಹೆಚ್ಚುವುದು.

ಸರಕಾರವು ವಸ್ತುಗಳಿಗೆ ಬೆಲೆಗಳನ್ನು ಒಂದು ಕನಿಷ್ಟ ದರದಲ್ಲಿ ನಿಗದಿಪಡಿಸಬೇಕು. ಸಾಧ್ಯವಾದಷ್ಟುಮಟ್ಟಿಗೆ ವಸ್ತುಗಳನ್ನು ಆಮದು ಮಾಡಿಕೊಳ್ಳುವುದನ್ನು ತಪ್ಪಿಸಿ ರಾಷ್ಟ್ರದಲ್ಲೇ ಆ ವಸ್ತುಗಳು ಉತ್ಪಾದನೆಯಾಗುವಂತೆ ಕಾರ್ಯಗಳನ್ನು ಕೈಗೊಳ್ಳಬೇಕು. ಯಾವುದೇ ಒಂದು ರಾಷ್ಟ್ರ ಆರ್ಥಿಕಪ್ರಗತಿಯನ್ನು ಹೊಂದಲು ಅತಿಪ್ರಸರಣ ಹಾಗೂ ಅಪ್ರಸರಣಗಳು ಹಾನಿಯನ್ನುಂಟುಮಾಡುತ್ತವೆ. ಆದ್ದರಿಂದ ಬೆಲೆಗಳು ಏರದಂತೆ ಮತ್ತು ಇಳಿಯದಂತೆ ಇರುವ ಸ್ಥಿರವಾದ ಬೆಲೆಗಳನ್ನು ಹೊಂದಿರುವುದು ಅವಶ್ಯಕ. ಬೆಲೆಗಳು ನಿಧಾನವಾಗಿ ಏರಿದರೆ ತ್ವರಿತ ವೇಗದಲ್ಲಿ ಆರ್ಥಿಕಾಭಿವೃದ್ಧಿಯನ್ನು ಹೊಂದಬಹುದು.

ಅಧ್ಯಾಯ 5

ವಿತರಣೆ

ಉತ್ಪಾದನಾಂಶಗಳಾದ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಗಳಿಗೆ ಅವು ಸೇವೆಸಲ್ಲಿಸಿ, ಉತ್ಪಾದಿಸಿದ ವಸ್ತುಗಳನ್ನು ಮಾರಾಟಮಾಡಿ ಗಳಿಸಿದ ಸಂಪತ್ತನ್ನು ಹಂಚಬೇಕಾಗುತ್ತದೆ. ರಾಷ್ಟ್ರದಲ್ಲಿನ ಕೊಡುಗೆಯಾದ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಗಳನ್ನು ಒಟ್ಟುಗೂಡಿಸಿ ವಸ್ತುಗಳ ಉತ್ಪಾದನೆಯನ್ನು ಮಾಡಲಾಗುತ್ತದೆ. ವಸ್ತುಗಳ ಮಾರಾಟದಿಂದ ಗಳಿಸಿದ ಸಂಪತ್ತನ್ನು ಆದಾಯ ಅಥವಾ ವರಮಾನ ಎಂದು ಕರೆಯುತ್ತಾರೆ. ಈ ಆದಾಯವನ್ನು ವಿವಿಧ ವರ್ಗಗಳಿಗೆ ಪಾಲುಮಾಡಿಕೊಡುವುದೇ ವಿತರಣೆ ಅಥವಾ ಹಂಚಿಕೆ. ಅಂದರೆ ಉತ್ಪಾದನೆಗೆ ನೆರವಾದವರಿಗೆ ಹಣವನ್ನು ವಿಭಾಗಿಸುವುದು.

ವಿತರಣೆಯು ವ್ಯಕ್ತಿಯನ್ನು ಅವಲಂಬಿಸಿರದೆ, ಅವನ ಕಾರ್ಯಗಳನ್ನು ಅವಲಂಬಿಸಿರುತ್ತವೆ. ಗೇಣಿ, ಕೂಲಿ, ಬಡ್ಡಿ ಮತ್ತು ಲಾಭಗಳು ವಿವಿಧ ಆದಾಯ ಅಂಶಗಳು. ಈ ನಾಲ್ಕು ಅಂಶಗಳು ರಾಷ್ಟ್ರೀಯ ಆದಾಯವನ್ನು ಸೂಚಿಸುತ್ತವೆ. ಇವು ಸಮಾಜದ ನಾಲ್ಕು ದೊಡ್ಡ ವರ್ಗಗಳಾದ ಭೂಮಿ, ಒಡೆಯ, ಕಾರ್ಮಿಕ, ಬಂಡವಾಳಗಾರ ಮತ್ತು ಸಂಘಟನಾಕಾರರಿಗೆ ಸೇರುವ ಆದಾಯಗಳು, ಭೂಮಿಯ ಒಡೆಯನಿಗೆ ಭೂಮಿಯ ಸೇವೆಯನ್ನು ಪಡೆಯಲು ಭೂಮಿಗೆ 'ಗೇಣಿ' ಯನ್ನು ಕೊಡಲಾಗುತ್ತದೆ. ಕಾರ್ಮಿಕರು ಅವರ ಶ್ರಮಕ್ಕೆ ಪ್ರತಿಫಲವನ್ನು 'ಕೂಲಿ'ಯ ರೂಪದಲ್ಲಿ ಪಡೆಯುತ್ತಾರೆ. ಬಂಡವಾಳಗಾರರಿಗೆ ಅವರ ಬಂಡವಾಳಕ್ಕೆ ಬಡ್ಡಿಯನ್ನು ಕೊಡಲಾಗುತ್ತದೆ. ಈ ಎಲ್ಲ ಉತ್ಪಾದನಾಂಶಗಳನ್ನು ಸಂಘಟಿಸಿ ವಸ್ತುಗಳನ್ನು ಉತ್ಪಾದಿಸಲು ಅವನ ಸಂಘಟನಾ ಶಕ್ತಿಗೆ 'ಲಾಭ'ದ ರೂಪದಲ್ಲಿ ಪ್ರತಿಫಲ ಸಂದಾಯವಾಗುತ್ತದೆ. ಈ ರೀತಿ ಗೇಣಿ, ಕೂಲಿ, ಬಡ್ಡಿ ಹಾಗೂ ಲಾಭದ ರೂಪದಲ್ಲಿ ಉತ್ಪಾದಿಸಲ್ಪಟ್ಟ ಸಂಪತ್ತನ್ನು ಹಂಚಲಾಗುವುದು. ಆದರೆ ಉತ್ಪಾದನೆಯ ವಿವಿಧ ಅಂಶಗಳು ಪಡೆಯುವ ಪ್ರತಿಫಲವು ಆ ಅಂಶಗಳಿಗಿರುವ ಬೇಡಿಕೆ ಹಾಗೂ ಪೂರೈಕೆಯನ್ನವಲಂಬಿಸಿರುತ್ತದೆ. ಉತ್ಪಾದನಾಂಶಗಳ ಬೆಲೆಯನ್ನು ವಿತರಣೆಯ ಮೂಲಕ ನಿರ್ಧರಿಸಲಾಗುತ್ತದೆ. ಆದ್ದರಿಂದ ಬೆಲೆಯ ನಿಯಮಕ್ಕನುಸಾರವಾಗಿ ವಿತರಣೆಯ ಪ್ರಮಾಣವನ್ನು ಕಂಡುಹಿಡಿಯಬೇಕಾಗುತ್ತದೆ. ಆದರೆ ವಿತರಣೆಯಲ್ಲಿ ಉತ್ಪಾದನಾಂಶಗಳ ಸೇವೆಯನ್ನು ಪಡೆಯುವುದರಿಂದ ಅವುಗಳ ಸೇವೆಗೆ ಮಾತ್ರ ಪ್ರತಿಫಲವನ್ನು ಕೊಡಲಾಗುವುದು. ಉದಾಹರಣೆಗೆ ಭೂಮಿ. ಭೂಮಿಯನ್ನು ಖರೀದಿಮಾಡಿಕೊಳ್ಳದೆ, ಉತ್ಪಾದನೆಯಲ್ಲಿ ಅದು ಸಲ್ಲಿಸಿದ ಸೇವೆಗೆ

ಗೇಣಿಯನ್ನು ಸಲ್ಲಿಸಲಾಗುವುದು. ಅದರಂತೆ ಕಾರ್ಮಿಕರನ್ನು ಕೊಂಡುಕೊಳ್ಳದೆ ಅವರು ಉತ್ಪಾದನೆಯಲ್ಲಿ ಭಾಗವಹಿಸಿ ಸಲ್ಲಿಸಿದ ಸೇವೆಗಾಗಿ ಕೂಲಿಯನ್ನು ಕೊಡಲಾಗುವುದು. ಬಂಡವಾಳಗಾರನಿಗೆ ಬಂಡವಾಳದ ಮಾರಾಟಕ್ಕಲ್ಲದೆ, ಬಂಡವಾಳವನ್ನು ಉತ್ಪಾದನೆಯಲ್ಲಿ ತೊಡಗಿಸಲು ಅವಕಾಶಮಾಡಿದ್ದಕ್ಕೆ ಬಡ್ಡಿಯನ್ನು ಕೊಡಲಾಗುವುದು. ಇದರಂತೆ ಸಂಘಟನಾಕಾರನಿಗೆ ಅವನು ಸಲ್ಲಿಸಿದ ಸೇವೆಗೆ ತಕ್ಕ ಪ್ರತಿಫಲವನ್ನು ಲಾಭದರೂಪದಲ್ಲಿ ಕೊಡಲಾಗುವುದು. ಹೀಗೆ ಗೇಣಿ, ಕೂಲಿ, ಬಡ್ಡಿ ಮತ್ತು ಲಾಭದರೂಪದಲ್ಲಿ ಈ ಅಂಶಗಳು ಸಲ್ಲಿಸಿದ ಸೇವೆಗನುಗುಣವಾಗಿ ನೀಡುವ ಪ್ರತಿಫಲವೇ ವಿತರಣೆ.

ಹೀಗೆ ಉತ್ಪಾದನಾಂಶಗಳ ಕಾರ್ಯಕ್ಕನುಗುಣವಾಗಿ ಪ್ರತಿಫಲದ ಪ್ರಮಾಣವನ್ನು ನಿರ್ಧರಿಸಲಾಗುತ್ತದೆ. ಒಂದು ದೃಷ್ಟಿಯಲ್ಲಿ ಉತ್ಪಾದನಾಂಶಗಳ ಉತ್ಪಾದನಾ ವೆಚ್ಚಗಳು, ಉತ್ಪಾದನಾಂಶಗಳಿಗೆ ವಿತರಣೆಯಾದ ಪ್ರತಿಫಲವಾಗಿರುತ್ತವೆ ಎನ್ನಬಹುದು. ಏಕೆಂದರೆ ಎಲ್ಲ ಅಂಶಗಳು ಉತ್ಪಾದನೆಯಲ್ಲಿ ಬಳಸಲಾದ ಭೂಮಿಗೆ ಗೇಣಿಯನ್ನು ಕೊಡುತ್ತವೆ. ಕಾರ್ಮಿಕರಿಗೆ ಕೂಲಿಕೊಡುತ್ತವೆ. ಬಂಡವಾಳಕ್ಕೆ ಬಡ್ಡಿ ಕೊಡುತ್ತವೆ ಮತ್ತು ಸಂಘಟನಾಕಾರರು ಲಾಭ ಪಡೆಯುತ್ತಾರೆ. ಇವೆಲ್ಲವೂ ಉತ್ಪಾದನಾಂಶಗಳ ಉತ್ಪಾದನಾವೆಚ್ಚಗಳೇ ಆಗಿವೆ. ಆದ್ದರಿಂದ ಸಂಘಟನಾಕಾರರು ಉತ್ಪಾದನಾಂಶಗಳಿಗೆ ಕೊಡುವ ಪ್ರತಿಫಲವು ವಿತರಣೆಯ ಪ್ರಮಾಣವಾಗಿರುತ್ತದೆ.

ವಿತರಣೆಯಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಉತ್ಪಾದನೆಯು ನಡೆಯುತ್ತಿರುವಾಗಲೇ ಸಂಪತ್ತಿನ ವಿತರಣೆಯಾಗುವುದು.

ಅಂಚಿನ (ಸೀಮಾಂತ) ಉತ್ಪಾದನೆಯ ವಿತರಣಾ ಸಿದ್ಧಾಂತ : ಎಲ್ಲ ಉತ್ಪಾದನಾಂಶಗಳು ಉತ್ಪಾದನೆಯಲ್ಲಿ ಪಾಲುಗೊಂಡಾಗ ಅವುಗಳು ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತವೆ. ಅವು ಸಲ್ಲಿಸಿದ ಸೇವೆಗೆ ಪ್ರತಿಫಲವನ್ನು ವಿತರಣೆ ಮಾಡಲಾಗುತ್ತದೆ. ಆದರೆ ಈಗ ಒಟ್ಟು ಉತ್ಪನ್ನದಲ್ಲಿ ಪ್ರತಿಯೊಂದು ಉತ್ಪಾದನಾಂಶಕ್ಕೆ ಎಷ್ಟು ಪ್ರತಿಫಲವನ್ನು ಸಂಘಟನಾಕಾರ ನೀಡಬೇಕು ಎಂಬ ಮುಖ್ಯ ಪ್ರಶ್ನೆ ಉದ್ಭವಿಸುತ್ತದೆ. ಉತ್ಪಾದನೆ ಮಾಡುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಲಾಭಕ್ಕಾಗಿಯೇ ಉದ್ದಿಮೆಯನ್ನು ಸಂಘಟಿಸುತ್ತಾನೆ. ಆದ್ದರಿಂದ ಅವನು ಉತ್ಪಾದನೆಯ ಪ್ರಮಾಣಕ್ಕನುಗುಣವಾಗಿ ಉತ್ಪಾದನೆಗಳಿಗೆ ಪ್ರತಿಫಲನೀಡುವನು. ಒಂದು ಉತ್ಪಾದನಾ ಅಂಶದಿಂದ ಉತ್ಪಾದನೆ ಹೆಚ್ಚುವಂತಿದ್ದರೆ ಅದಕ್ಕೆ ಅದರ ಉತ್ಪಾದನಾ ಪ್ರಮಾಣದಲ್ಲಿ ಹೆಚ್ಚಿನ ಪ್ರತಿಫಲವನ್ನು ಸಂಘಟನಾಕಾರನು ನೀಡುತ್ತಾನೆ. ಹೀಗೆ ಪ್ರತಿಫಲವು ಉತ್ಪತ್ತಿಯನ್ನು ಅವಲಂಬಿಸಿದೆ ಎನ್ನುವುದನ್ನು ಈ ನಿಯಮ ಹೇಳುತ್ತದೆ.

ಅರ್ಥಶಾಸ್ತ್ರಜ್ಞರು ಉತ್ಪಾದನಾಂಶಗಳಿಗೆ ಎಷ್ಟು ಪ್ರತಿಫಲ ಕೊಡಬೇಕು ಎನ್ನುವುದನ್ನು ಅಂಚಿನ ಅಥವಾ ಸೀಮಾಂತ ಉತ್ಪಾದನೆಯ ವಿತರಣಾ ನಿಯಮದ

ಮೂಲಕ ವಿವರಿಸಿದ್ದಾ[illegible]್ರೀಯ ಆದಾಯದಲ್ಲಿ ಉತ್ಪಾದನಾಂಶಗಳಿಗೆ ಅವುಗಳ ಸೇವಾಕಾರ್ಯಗಳಿಗೆ ತಕ್ಕಂತೆ ಪ್ರತಿಫಲವನ್ನು ಕೊಡುವುದೇ ವಿತರಣೆ; ಅಂದರೆ ಇಲ್ಲಿ ಮುಖ್ಯವಾದುದು ಒಟ್ಟು ಅವಶ್ಯಕತೆಯಲ್ಲ. ಸೀಮಾಂತ ಅವಶ್ಯಕತೆ. ಆದ್ದರಿಂದ ಅಂಚಿನ ಅಥವಾ ಸೀಮಾಂತ ಉತ್ಪಾದನೆಯ ವಿತರಣಾ ಸಿದ್ಧಾಂತವು ಅತಿಮಹತ್ವಉಳ್ಳದ್ದಾಗಿದೆ. ಸಮತೋಲನ ಪರಿಸ್ಥಿತಿಯಲ್ಲಿ ಉತ್ಪಾದನೆಯಲ್ಲಿ ಭಾಗವಹಿಸುವ ಪ್ರತಿಯೊಂದು ಘಟಕಕ್ಕೆ ಅದರ ಉತ್ಪಾದನೆಯ ಮಟ್ಟದಲ್ಲಿ ಸಂಭಾವನೆ ಕೊಡಬೇಕಾಗುತ್ತದೆ.

ಉತ್ಪಾದನೆ ಅಂಶದ ಅಂಚಿನ ಅಥವಾ ಸೀಮಾಂತ ಉತ್ಪಾದನೆ ಎಂದರೆ ಉತ್ಪಾದನೆಯಲ್ಲಿ ಯಾವುದೊಂದು ಘಟಕದ ಒಂದು ಯೂನಿಟ್ ಅನ್ನು ಹೆಚ್ಚಿಸುವುದರಿಂದ ಆಗುವ ಉತ್ಪಾದನೆ. ಈ ಉತ್ಪಾದನೆಯನ್ನು ಅಂಚಿನ ಉತ್ಪಾದನೆ ಎಂದು ಕರೆಯುತ್ತಾರೆ. ಆ ಘಟಕಕ್ಕೆ ಕೊಡುವ ಬೆಲೆ ಅಥವಾ ಪ್ರತಿಫಲ ಆ ಘಟಕದ ಅಂಚಿನ ಉತ್ಪಾದನೆಯ ಮೌಲ್ಯಕ್ಕೆ ಸಮವಿರುತ್ತದೆ. ಆಕಸ್ಮಾತ್ ಅಂಚಿನ ಉತ್ಪಾದನೆಯ ಮೌಲ್ಯ ಘಟಕಕ್ಕೆ ಕೊಡುವ ಪ್ರತಿಫಲದ ಮೊತ್ತಕ್ಕಿಂತ ಅಧಿಕವಾಗಿದ್ದರೆ ಉತ್ಪಾದಕನಿಗೆ ಹೆಚ್ಚು ಲಾಭ ಬರುತ್ತದೆ. ಇದೇ ರೀತಿ ಘಟಕಕ್ಕೆ ಕೊಡುವ ಪ್ರತಿಫಲ ಅಂಚಿನ ಉತ್ಪಾದನೆಯ ಮೌಲ್ಯಕ್ಕಿಂತ ಕಡಮೆ ಇದ್ದರೆ ಉತ್ಪಾದಕನಿಗೆ ಆ ಘಟಕದಿಂದ ನಷ್ಟವಾಗುತ್ತದೆ. ಆದ್ದರಿಂದ ಪ್ರತಿಯೊಂದು ಘಟಕದ ಅಂಚಿನ ಮೌಲ್ಯವು ಆ ಘಟಕದ ಸೇವೆಗೆ ಕೊಡುವ ಪ್ರತಿಫಲಕ್ಕೆ ಸಮನಾಗುವವರೆಗೆ ಉತ್ಪಾದಕನು ಘಟಕಗಳನ್ನು ಉತ್ಪಾದನೆಯಲ್ಲಿ ತೊಡಗಿಸುತ್ತಹೋಗುತ್ತಾನೆ. ಈ ಮಟ್ಟವನ್ನು ಸಮತೋಲನ ಮಟ್ಟ ಎಂದು ಕರೆಯುತ್ತಾರೆ. ಸಂಘಟನಾಕಾರನು ಪ್ರತಿಯೊಂದು ಉತ್ಪಾದನಾಂಶವನ್ನು ಅದು ಲಾಭದಾಯಕವಾಗಿರುವವರೆಗೆ ಉಪಯೋಗಿಸುತ್ತಾನೆ. ಈ ರೀತಿ ಎಲ್ಲ ಉದ್ದಿಮೆಗಳಲ್ಲಿ, ಪ್ರತಿಯೊಂದು ಉತ್ಪಾದನಾಂಶಕ್ಕೆ ಸೀಮಾಂತವು ಒಂದೇ ಬಗೆಯಾಗಿ ರೂಪುಗೊಳ್ಳುತ್ತದೆ. ಅಂದರೆ ಅದರ ಬೆಲೆಯು ಮಾರುಕಟ್ಟೆಯಲ್ಲಿ ಒಂದೇ ಬಗೆಯಾಗಿದ್ದು ಅದರ ಪೂರೈಕೆಯನ್ನೆಲ್ಲ ಬಳಸಲಾಗುತ್ತದೆ. ಆದ್ದರಿಂದ ಉತ್ಪಾದನಾಂಶದ ಬೆಲೆ ಅದರ ಒಟ್ಟು ನೀಡಿಕೆಯ ಸೀಮಾಂತ ಉತ್ಪಾದನೆ ಬೆಲೆಗೆ ಸಮವಾಗಿರುತ್ತದೆ ಎನ್ನಬಹುದು. ಪ್ರತಿಯೊಂದು ಅಂಶದ ಸೀಮಾಂತ ಉತ್ಪಾದನೆ ಅದರ ಬೆಲೆಯನ್ನು ನಿರ್ಧರಿಸುತ್ತದೆ ಹಾಗೂ ಆ ಬೆಲೆ ಆ ಅಂಶಕ್ಕೆ ಸೇರುವ ಉದ್ದಿಮೆಯ ಉತ್ಪಾದನಾ ಪ್ರಮಾಣವನ್ನು ನಿರ್ಧರಿಸುತ್ತದೆ. ಒಬ್ಬ ಉದ್ದಿಮೆದಾರ ಸಮತೋಲನ ಮಟ್ಟಕ್ಕಿಂತ ಕಡಮೆ ಪ್ರಮಾಣದಲ್ಲಿ ಅಥವಾ ಹೆಚ್ಚು ಪ್ರಮಾಣದಲ್ಲಿ ಘಟಕವನ್ನು ಉತ್ಪಾದನೆಯಲ್ಲಿ ತೊಡಗಿಸುವುದಿಲ್ಲ. ಅಂದರೆ ಉತ್ಪಾದನೆ ಘಟಕ ತನ್ನ ಸೇವೆಗೆ ಪಡೆಯುವ ಪ್ರತಿಫಲವನ್ನವಲಂಬಿಸಿದೆ. ಆ ಪ್ರತಿಫಲವೇ ಉತ್ಪಾದನೆಯ ಘಟಕದ ಸೀಮಾಂತ ಅಥವಾ ಅಂಚಿನ ಉತ್ಪಾದನೆ. ಉದ್ದಿಮೆದಾರನು ವಸ್ತುಗಳನ್ನು ಉತ್ಪಾದಿಸಲು ತನ್ನ

ಕಾರ್ಖಾನೆ ಮೊದಲು ಎಷ್ಟು ಜನ ಕಾರ್ಮಿಕರನ್ನು ನೇಮಿಸಿಕೊಳ್ಳಬೇಕು, ಅವರಿಗೆ ಎಷ್ಟು ಕೂಲಿ ನೀಡಬೇಕೆಂಬುದು ನಿರ್ಧರಿಸಬೇಕಾದ ಮೊದಲ ಅಂಶ. ಇವನ ಮುಖ್ಯ ಗುರಿ ಲಾಭ. ಲಾಭಕ್ಕಾಗಿಯೇ ಉದ್ದಿಮೆಯನ್ನು ಸಂಘಟಿಸುತ್ತಾನೆ. ಆದ್ದರಿಂದ ಪ್ರತಿಯೊಬ್ಬ ಕಾರ್ಮಿಕನನ್ನು ನೇಮಿಸಿಕೊಳ್ಳುವಾಗ ಕೂಲಿಯದರ ಹಾಗೂ ಕಾರ್ಮಿಕನಿಂದ ಬರುವ ಉತ್ಪತ್ತಿಯನ್ನು ಗಣನೆಗೆ ತೆಗೆದುಕೊಳ್ಳುತ್ತಾನೆ. ಉತ್ಪತ್ತಿಯ ಆಧಾರದ ಮೇಲೆ ಕಾರ್ಮಿಕನ ಕೂಲಿಯ ದರವನ್ನು ನಿಗದಿಪಡಿಸುವನು.

ಕೋಷ್ಟಕ 11

ಕೂಲಿಗಾರ ಮತ್ತು ಕೂಲಿದರದ ಸೀಮಾಂತ ಉತ್ಪಾದನೆ

ಕೂಲಿಕಾರರು	ಕೂಲಿಕಾರರ ಉತ್ಪತ್ತಿ (ರೂಪಾಯಿಗಳಲ್ಲಿ)	ಕೂಲಿಯ ದರ (ಒಂದು ದಿನಕ್ಕೆ)
1	10	5
2	10	6
3	10	7
4	10	8
5	10	9
6	10	10
7	10	11

ಮೊದಲನೆಯ ಕಾರ್ಮಿಕನು ಹತ್ತುರೂಪಾಯಿಗಳ ಬೆಲೆ ಬಾಳುವ ವಸ್ತುಗಳನ್ನು ಉತ್ಪತ್ತಿಮಾಡಲು ಸಂಘಟನಾಕಾರನಿಂದ 5 ರೂಪಾಯಿಗಳನ್ನು ಬೇಡುತ್ತಾನೆ. ಇವನನ್ನು ಸಂಘಟನಾಕಾರ ಸುಲಭವಾಗಿ ಕೆಲಸಕ್ಕೆ ನೇಮಕಮಾಡಿಕೊಳ್ಳುತ್ತಾನೆ. ಹೀಗೆಯೇ 2, 3. 4 ಹಾಗೂ 5ನೆಯ ಕೂಲಿಕಾರರ ಉತ್ಪತ್ತಿಯು 10ರೂಪಾಯಿಗಳಿದ್ದು ಅವರು ಬೇಡುವ 6, 7, 8 ಮತ್ತು 9 ರೂಪಾಯಿಗಳನ್ನು ಕೊಡಲು ಸಂಘಟನಾಕಾರ ಹಿಂಜರಿಯುವುದಿಲ್ಲ. ಆರನೆಯ ಕೂಲಿಕಾರನ ಉತ್ಪತ್ತಿಯೂ ಹತ್ತು ರೂಪಾಯಿಗಳಿದ್ದು, ಅವನು 10 ರೂಪಾಯಿಗಳು ಬೇಡುವುದರಿಂದ ಅವನನ್ನು ಸಹ ಕೆಲಸಕ್ಕೆ ತೆಗೆದುಕೊಳ್ಳುತ್ತಾನೆ. ಹೆಚ್ಚು ಹೆಚ್ಚು ಕೂಲಿಕಾರರನ್ನು ನೇಮಿಸಿಕೊಂಡಂತೆ ಅವರ ಅಂಚಿನ ಉತ್ಪಾದನೆಯ ಪ್ರಮಾಣವು, ಸಂಘಟನಾಕಾರ ಕೊಡುವ ಮೌಲ್ಯಕ್ಕಿಂತ ಕಡಮೆ ಇರುವುದರಿಂದ ಅವನಿಗೆ ಲಾಭದಾಯಕ. ಕೂಲಿ ಮತ್ತು ಅಂಚಿನ ಉತ್ಪಾದನೆ ಸಮವಾಗುವವರೆಗೆ ಮಾತ್ರ ಉದ್ದಿಮೆದಾರ ಕೂಲಿಕಾರರನ್ನು ನೇಮಿಸಿಕೊಳ್ಳುತ್ತಾನೆ. ಆದರೆ 7ನೆಯ ಕೂಲಿಕಾರ

11 ರೂಪಾಯಿಗಳ ಕೂಲಿಯನ್ನು ಬೇಡಿದಾಗ ಅವನ ಉತ್ಪತ್ತಿಯು 10 ರೂಪಾಯಿಗಳಿರುವುದರಿಂದ ಸಂಘಟನಾಕಾರ ಅವನನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ 6ನೆಯವನೇ ಕೊನೆಯ ಕೂಲಿಕಾರ. ಇವನೇ ಸೀಮಾಂತ ಕೂಲಿಕಾರ ಮತ್ತು ಕೂಲಿಯೂ ಸಹ 10 ರೂಪಾಯಿ ಉತ್ಪನ್ನದಷ್ಟೇ ಇದೆ. 6ನೆಯ ಕೂಲಿಕಾರನಿಂದ ಪಡೆಯುವ ಉತ್ಪತ್ತಿಯೇ ಅಂಚಿನ ಅಥವಾ ಸೀಮಾಂತ ಉತ್ಪತ್ತಿ. ಆದರೆ ಎಲ್ಲ ಕೂಲಿಕಾರರು ಒಂದೇ ದಕ್ಷತೆಯನ್ನು ಪಡೆದಿರುವುದರಿಂದ ಅವರೆಲ್ಲರ ಉತ್ಪತ್ತಿ ಸಮನಾಗಿದೆ (10 ರೂಪಾಯಿಗಳು). ಆದ್ದರಿಂದ ಕೂಲಿಯ ದರದಲ್ಲಿ ವ್ಯತ್ಯಾಸವಿರಬಾರದು. ಕೆಲಸಕ್ಕೆ ತಕ್ಕಂತೆ ಕೂಲಿ ಎಂಬಂತೆ ಇತರ ಕೂಲಿಯುವರಿಗೂ ಸಹ ಕೊನೆಯವನಿಗೆ ಕೊಡುವ ಕೂಲಿಯಷ್ಟೇ ಕೊಡಬೇಕು. ಆದ್ದರಿಂದ ಪ್ರತಿಯೊಂದು ಘಟಕಕ್ಕೆ ಎಷ್ಟು ಪ್ರತಿಫಲ ಕೊಡಬೇಕೆಂಬುದು ಆ ಘಟಕದ ಅಂಚಿನ ಉತ್ಪಾದನೆಯ ಮೌಲ್ಯವನ್ನು ಅವಲಂಬಿಸಿರುತ್ತದೆ. ಮೇಲಿನ ಉದಾಹರಣೆಯಲ್ಲಿ, ಪ್ರತಿ ಕೂಲಿಕಾರನು 10 ರೂಪಾಯಿಗಳನ್ನು ಪಡೆಯುತ್ತಾನೆ. ಕೂಲಿಯಂದರ ಕಾರ್ಮಿಕರ ಸೀಮಾಂತ ಉತ್ಪಾದನೆಯನ್ನು ಅವಲಂಬಿಸಿರುತ್ತದೆ. ಈ ನಿಯಮವನ್ನು ಉತ್ಪಾದನೆಯ ಇತರ ಅಂಶಗಳಾದ ಭೂಮಿ, ಬಂಡವಾಳ ಮತ್ತು ಸಂಘಟನೆಗಳಿಗೂ ಸಹ ಅನ್ವಯಿಸಲಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಉದ್ದಿಮೆದಾರನು ಉತ್ಪಾದನಾಂಶಗಳಿಗೆ ಕೊಡುವ ಪ್ರತಿಫಲ ಅದರ ಅಂಚಿನ ಅಥವಾ ಸೀಮಾಂತ ಉತ್ಪತ್ತಿಯನ್ನು ಅವಲಂಬಿಸಿರುತ್ತದೆ. ಉತ್ಪತ್ತಿಯು ಹೆಚ್ಚಾಗಿದ್ದು, ಪ್ರತಿಫಲ ಕಡಮೆ ಇರುವವರೆಗೆ ಅವನು ಆ ಉತ್ಪಾದನಾಂಶವನ್ನು ಹೆಚ್ಚಾಗಿ ಉಪಯೋಗಿಸುತ್ತಾನೆ. ಉತ್ಪತ್ತಿ ಮತ್ತು ಪ್ರತಿಫಲಗಳು ಸಮನಾದಾಗ ಆ ಅಂಶದ ಉಪಯೋಗವನ್ನು ನಿಲ್ಲಿಸುತ್ತಾನೆ. ಉತ್ಪತ್ತಿಗಿಂತಲೂ ಹೆಚ್ಚಿನ ಪ್ರತಿಫಲವನ್ನು ಉದ್ದಿಮೆದಾರನು ಕೊಡಲು ಸಿದ್ಧನಿರುವುದಿಲ್ಲ. ಈ ರೀತಿ ಉತ್ಪಾದನಾಂಶಗಳು ಪಡೆಯುವ ಪ್ರತಿಫಲವು ಅವುಗಳ ಸೀಮಾಂತ ಉತ್ಪತ್ತಿಯನ್ನು ಅವಲಂಬಿಸಿರುತ್ತದೆ.

ಕಲ್ಪನೆಗಳು : ಅಂಚಿನ ಉತ್ಪಾದನೆಯ ವಿತರಣೆಯ ಸಿದ್ಧಾಂತವು ಕೆಳಗಿನ ಕೆಲವು ಕಲ್ಪನೆಗಳ ಆಧಾರದ ಮೇಲೆ ರೂಪುಗೊಂಡಿದೆ.

(i) ವಸ್ತುಗಳ ಹಾಗೂ ಉತ್ಪಾದನಾಘಟಕಗಳ ಮಾರುಕಟ್ಟೆಯಲ್ಲಿ ಪರಿಪೂರ್ಣ ಪೈಪೋಟಿ ಇರುತ್ತದೆ.

(ii) ಪ್ರತಿಯೊಂದು ಉತ್ಪಾದನಾ ಅಂಶದ ಎಲ್ಲ ಘಟಕಗಳು ಒಂದೇ ಸಮವಾಗಿರುತ್ತವೆ.

(iii) ಲಾಭವನ್ನು ಹೆಚ್ಚುಗಳಿಸುವುದೇ ಉತ್ಪಾದಕನ ಹೆಗ್ಗುರಿ.

(iv) ಉತ್ಪಾದನೆಯನ್ನು ಉತ್ಪಾದನಾಕಾರನ ಇಷ್ಟಬಂದಂತೆ ಹೆಚ್ಚಿಸಲೂ ಬಹುದು, ಕಡಮೆಮಾಡಲೂಬಹುದು.

ಈ ಪರಿಸ್ಥಿತಿಗಳಲ್ಲಿ ಪ್ರತಿಯೊಂದು ಉತ್ಪಾದನೆ ಅಂಶ ತನ್ನ ಯೋಗ್ಯತೆಗೆ ತಕ್ಕಂತೆ ಅಂಚಿನ ಉತ್ಪಾದನೆಯ ಮೌಲ್ಯಕ್ಕೆ ಸಮನಾದ ಪ್ರತಿಫಲವನ್ನು ಕೊಡುತ್ತದೆ ಎಂಬುದನ್ನು ತಿಳಿಸುವುದೇ ಈ ಸಿದ್ಧಾಂತದ ತಿರುಳು.

ಟೀಕೆಗಳು : ಆಧುನಿಕ ಅರ್ಥಶಾಸ್ತ್ರಜ್ಞರು ಈ ಸಿದ್ಧಾಂತವನ್ನು ನಿಷ್ಪ್ರಯೋಜಕ ಸಿದ್ಧಾಂತವೆಂದು ತಿರಸ್ಕರಿಸಿ ಟೀಕಿಸಿದ್ದಾರೆ.

(i) ಈ ಸಿದ್ಧಾಂತ ಪರಿಪೂರ್ಣಪೈಪೋಟಿಯ ಮಾರುಕಟ್ಟೆಯಲ್ಲಿ ಮಾತ್ರ ನಿಜವಾಗಿರುತ್ತದೆ. ವಾಸ್ತವ ಪ್ರಪಂಚದಲ್ಲಿ ಪರಿಪೂರ್ಣಪೈಪೋಟಿ ಇರದೆ ಅಪರಿಪೂರ್ಣಪೈಪೋಟಿ ಕಂಡುಬರುತ್ತದೆ. ಆದ್ದರಿಂದ ಉತ್ಪಾದನೆಗೆ ತಕ್ಕ ಪ್ರತಿಫಲ ಸಿಗುವುದಿಲ್ಲ.

(ii) ಎಲ್ಲ ಘಟಕಗಳು ಒಂದೇ ಸಮನಾಗಿರುತ್ತವೆಂಬುದು ಈ ಸಿದ್ಧಾಂತದ ಮತ್ತೊಂದು ಕಲ್ಪನೆ. ಆದರೆ ನಿಜಪ್ರಪಂಚದಲ್ಲಿ ಈ ರೀತಿ ಇರುವುದಿಲ್ಲ. ಎಲ್ಲ ಕೆಲಸಗಾರರೂ ಒಂದೇ ಸಮನಾದ ದಕ್ಷತೆಯನ್ನು ಪಡೆದಿರುವುದಿಲ್ಲ. ಉದಾಹರಣೆಗೆ ಇಬ್ಬರು ಕೂಲಿಕಾರರು ಒಂದೇ ದಕ್ಷತೆಯನ್ನು ಪಡೆದಿರುವುದಿಲ್ಲ. ಎಲ್ಲ ಸಂಘಟನಾ ಕಾರರೂ ಸಮನಾದ ಲಾಭವನ್ನು ಗಳಿಸಲಾಗುವುದಿಲ್ಲ. ಅಂದರೆ ಉತ್ಪಾದನಾಂಶಗಳು ಭಿನ್ನತೆಯನ್ನು ಹೊಂದಿರುವುದರಿಂದ ಸೀಮಾಂತ ಉತ್ಪತ್ತಿಯ ಆಧಾರದ ಮೇಲೆ ಪ್ರತಿಫಲಕೊಡುವುದು ಸರಿಯಲ್ಲ. ನಿಜಪ್ರಪಂಚದಲ್ಲಿ ಈ ಸಿದ್ಧಾಂತಕ್ಕೆ ಹೆಚ್ಚು ಮಹತ್ವವನ್ನು ನೀಡಿಲ್ಲ.

(iii) ವಸ್ತುಗಳನ್ನು ಉತ್ಪಾದಿಸಲು ಉತ್ಪಾದನಾಂಶಗಳನ್ನು ಅದಲು ಬದಲು ಮಾಡುವಂತಿದ್ದಲ್ಲಿ ಅವುಗಳ ಸೀಮಾಂತಉತ್ಪನ್ನ ಸಮನಾಗಿರುತ್ತದೆ. ಆದರೆ ಈ ರೀತಿ ಉಪಯೋಗಿಸಲಾಗುವುದಿಲ್ಲ. ಏಕೆಂದರೆ ಉತ್ಪಾದನಾಂಶಗಳು ಒಂದಕ್ಕೊಂದು ಬದಲಿವಸ್ತುಗಳಾಗಿರುವುದಿಲ್ಲ. ವಸ್ತುವಿನ ಉತ್ಪಾದನೆಯಲ್ಲಿ ಎಲ್ಲ ಉತ್ಪಾದನಾಂಶಗಳ ಸಹಕಾರಬೇಕು. ಒಂದು ಅಂಶದ ಪ್ರಮಾಣವನ್ನು ಹೆಚ್ಚಿಸುತ್ತ ಹೋಗಲು ಸಾಧ್ಯವಿಲ್ಲ.

(iv) ಉತ್ಪಾದನಾಂಶಗಳು ಸುಲಭವಾಗಿ ಚಲಿಸಲಾಗುವುದಿಲ್ಲ. ಕಾರ್ಮಿಕರು ಹೆಚ್ಚಿನ ಕೂಲಿಗಾಗಿ ದೂರ ಪ್ರದೇಶಗಳಿಗೆ ವಲಸೆಹೋಗಲು ಇಚ್ಛಿಸುವುದಿಲ್ಲ. ಕಡಮೆ ಕೂಲಿಪಡೆದು ತಾವಿರುವ ಪ್ರದೇಶಗಳಲ್ಲೇ ಇರಲು ಆಸೆಪಡುವರು. ಅವರಿಗೆ ಸಿಗುವ ಕೂಲಿಯು ತಾವು ಸಲ್ಲಿಸುವ ಉತ್ಪತ್ತಿಗಿಂತ ಕಡಮೆ ಇದ್ದರೂ ಅದರ ಬಗ್ಗೆ ಅವರು ತಕರಾರೆತ್ತುವುದಿಲ್ಲ. ಅಂಚಿನ ಉತ್ಪಾದನೆಯ ವಿತರಣಾಸಿದ್ಧಾಂತದ ಪ್ರಕಾರ ಒಂದು ಉತ್ಪಾದನಾಂಶವು ಪಡೆಯುವ ಪ್ರತಿಫಲವು ಅದರ ಉತ್ಪತ್ತಿಯನ್ನು ಅವಲಂಬಿಸಿರುತ್ತದೆ.

ಆದರೆ ಇದು ಸರಿಯಲ್ಲ. ಏಕೆಂದರೆ ಕೂಲಿಯನ್ನು ಹೆಚ್ಚುಕೊಟ್ಟಾಗ ಉತ್ಪಾದನೆ ಹೆಚ್ಚ ಬಹುದು. ಹಾಗೆಯೇ ಕಡಮೆ ಕೂಲಿಕೊಟ್ಟಾಗ ಉತ್ಪಾದನೆ ಕಡಮೆಯಾಗಬಹುದು. ಈ ರೀತಿಯಿಂದ ವಿಚಾರಮಾಡಿದ್ದಾದರೆ ಉತ್ಪತ್ತಿಯು ಪ್ರತಿಫಲವನ್ನು ಅವಲಂಬಿಸಿದೆ ಎನ್ನಬಹುದು.

(v) ವಸ್ತುಗಳ ಉತ್ಪಾದನೆಯಲ್ಲಿ ಎಲ್ಲ ಉತ್ಪಾದನಾಂಶಗಳೂ ಒಟ್ಟಿಗೆಸೇರಿ ಕಾರ್ಯಗಳನ್ನು ನಿರ್ವಹಿಸುವುದರಿಂದ ಯಾವುದೇ ಒಂದು ಉತ್ಪಾದನಾಂಶ ಉತ್ಪತ್ತಿಯನ್ನು ಕಂಡು ಹಿಡಿಯುವುದು ಸಾಧ್ಯವಿಲ್ಲ.

(vi) ಈ ನಿಯಮವು ಉತ್ಪಾದನಾಂಶದ ಬೇಡಿಕೆಯ ಸಾಮಾನ್ಯ ಸೂತ್ರವನ್ನು ನಿರೂಪಿಸುತ್ತದೆ. ಆದರೆ ಪೂರೈಕೆಯ ಬಗ್ಗೆ ಏನನ್ನೂ ಹೇಳುವುದಿಲ್ಲ.

(vii) ಪ್ರತಿಫಲ ಮತ್ತು ಉತ್ಪತ್ತಿಗಳು ಪೂರ್ಣಪೈಪೋಟಿ ಇದ್ದಾಗ ಮಾತ್ರ ಸಮನಾಗಿರಬಹುದು. ಆದರೆ ಏಕಸ್ವಾಮ್ಯ ಮತ್ತು ಏಕಸಾಮ್ಯ ಪೈಪೋಟಿಗಳಿದ್ದಾಗ ಉತ್ಪಾದನಾಂಶಗಳು ಪಡೆಯುವ ಪ್ರತಿಫಲವು ಅವುಗಳ ಉತ್ಪತ್ತಿಗಿಂತಲೂ ಕಡಮೆ ಇರುತ್ತದೆ.

ಈ ರೀತಿ ಅನೇಕ ಟೀಕೆಗಳಿಗೆ ಒಳಗಾಗಿದ್ದರೂ ಸಹ ಸಿದ್ಧಾಂತವು ಸತ್ಯಾಂಶಗಳಿಂದ ಕೂಡಿದ ಸಿದ್ಧಾಂತವಾಗಿದೆ. ಉತ್ಪಾದನೆಗೆ ತಕ್ಕ ಪ್ರತಿಫಲವನ್ನು ಉತ್ಪಾದನಾಂಶಗಳಿಗೆ ಕೊಡಬೇಕೆಂದು ಸಾರುವುದರಿಂದ ಈ ನಿಯಮವನ್ನು ಎಲ್ಲರೂ ಒಪ್ಪುತ್ತಾರೆ.

ಗೇಣಿ

ಅರ್ಥಶಾಸ್ತ್ರವಲ್ಲಿ 'ಗೇಣಿ' ಎಂದರೆ ಗೇಣಿದಾರರು ಭೂಮಿಯ ಒಡೆಯನಿಗೆ ಭೂಮಿಯ ಉಪಯೋಗಕ್ಕಾಗಿ ಕೊಡುವ ಸಂಭಾವನೆ. ಭೂಮಿಯ ಉಪಯೋಗಕ್ಕಾಗಿ ರೈತನು ಭೂಮಿಯ ಒಡೆಯನಿಗೆ ಕೊಡುವ ಬಾಡಿಗೆಗೆ 'ಭೂಗೇಣಿ' ಅಥವಾ 'ಆರ್ಥಿಕ ಗೇಣಿ' ಎಂದು ಕರೆಯುತ್ತಾರೆ. ಅರ್ಥಶಾಸ್ತ್ರಜ್ಞನಿಗೆ ಗೇಣಿ ಎಂದರೆ ಭೂಮಿಗೆ ಸಂದಾಯವಾಗುವ ಹಣ. ಅದರೊಳಗಿರುವ ಅಥವಾ ಮೇಲಿರುವುದಕ್ಕಲ್ಲ. ಅಂದರೆ ಗೇಣಿಯು ಭೂಮಿಯ ಉಪಯೋಗಕ್ಕಾಗಿ ಸಂಭಾವನೆಯ ರೂಪದಲ್ಲಿ ಕೊಡುವ ಹಣ. ಅರ್ಥಶಾಸ್ತ್ರಜ್ಞರ ಪ್ರಕಾರ ಉತ್ಪಾದನೆ ಇತರ ಅಂಶಗಳಿಗೂ ಗೇಣಿ ಇರುವ ಸಾಧ್ಯತೆ ಉಂಟು. ಒಂದು ವಸ್ತುವು ಹೇರಳವಾಗಿ ಲಭಿಸುವ ಸಂಭವವಿದ್ದರೆ ಆದಕ್ಕೆ ಗೇಣಿಯ ಪ್ರಶ್ನೆ ಏಳುವುದಿಲ್ಲ. ಈ ರೀತಿ ಪೂರೈಕೆಗೆ ಸಂಬಂಧಪಟ್ಟಂತೆ ಅಪರಿಪೂರ್ಣ ಸ್ಥಿತಿಸ್ಥಾಪಕತ್ವ ವಿರುವ ಉತ್ಪಾದಕ ಅಂಶಗಳೆಲ್ಲಕ್ಕೂ ಗೇಣಿ ಕೊಡಬೇಕಾಗಿ ಬರಬಹುದು. ವಿರಳತೆಯಿಂದಾಗಿ ಉದ್ಭವಿಸುವ ಇಂತಹ ಗೇಣಿಗೆ 'ವಿರಳತೆಯ ಪರಿಣಾಮ ಗೇಣಿ' ಎಂದು ಕರೆಯುತ್ತಾರೆ.

ಪೂರೈಕೆಯ ವೃಷ್ಟಿಯಿಂದ ಭೂಮಿಯು ಸ್ಥಾಯಿಯಾಗಿದೆ ಮತ್ತು ಅದರ ಪೂರೈಕೆಗೆ ಪ್ರತಿಯಾಗಿ ಬೆಲೆಯನ್ನು ಕೊಡುವುದಿಲ್ಲ. ಆದ್ದರಿಂದ ಭೂಮಿಯಿಂದ ಬರುವ ಉತ್ಪನ್ನವನ್ನು ಆರ್ಥಿಕ ವೃಷ್ಟಿಯಿಂದ ಗೇಣಿ ಎನ್ನಬಹುದು. ಭೂಮಿಯಿಂದ ಲಭ್ಯವಾಗುವ ಇಡೀ ಉತ್ಪನ್ನವನ್ನು ಗೇಣಿ ಎನ್ನುವುದಾದರೆ ಅದರ ಉಪಯೋಗಕ್ಕೆ ಯಾವಾಗಲೂ ಬೆಲೆಯನ್ನು ಏಕೆ ಕೊಡಬೇಕು ಎನ್ನುವ ಪ್ರಶ್ನೆ ಇಲ್ಲಿ ಬರಬಹುದು. ಬೇಡಿಕೆಗೆ ತಕ್ಕಂತೆ ಭೂಮಿಯ ಪೂರೈಕೆ ಕಡಮೆ ಅಥವಾ ವಿರಳವಾಗಿರುವುದರಿಂದ ಅದರ ಉಪಯೋಗಕ್ಕೆ ಬೆಲೆ ಕೊಡಬೇಕಾಗುತ್ತದೆ ಎಂಬುದು ಇದಕ್ಕೆ ಉತ್ತರವಾಗುತ್ತದೆ. ಇತರ ವಸ್ತುಗಳಿಂದ ಬರುವ ಇಡೀ ಪ್ರತಿಫಲವೂ ಹಾಗೆಯೇ. ಅವುಗಳ ಬೇಡಿಕೆ ಸ್ಥಾಯಿಯಾಗಿದ್ದರೆ ಮತ್ತು ಬೇಡಿಕೆಯ ಬೆಲೆಯು ಶೂನ್ಯವಾಗಿದ್ದರೆ ಗೇಣಿಯಾಗಬಹುದು.

ಭೂಮಿಯ ಪೂರೈಕೆಯನ್ನು ಬೇಡಿಕೆ ಹೆಚ್ಚಾದಂತೆ ಅಧಿಕಗೊಳಿಸಲು ಸಾಧ್ಯವಿಲ್ಲ. ಉತ್ಪಾದನಾ ವಸ್ತುಗಳನ್ನು ಬೇಡಿಕೆ ಹೆಚ್ಚಿದಂತೆ, ಹೆಚ್ಚು ಹೆಚ್ಚು ಉತ್ಪಾದಿಸಲು ಸಾಧ್ಯ. ಆದರೆ ಅವುಗಳ ಪೂರೈಕೆಯನ್ನು ಸ್ವಲ್ಪ ಕಾಲದಲ್ಲೇ ವೃದ್ಧಿಗೊಳಿಸುವುದು ಸಾಧ್ಯವಿಲ್ಲ. ಇಂತಹ ಸ್ಥಿತಿಯಲ್ಲಿ ಆ ವಸ್ತುಗಳ ಬೇಡಿಕೆ ಹೆಚ್ಚಿದರೆ ಬೆಲೆ ಏರಿಕೆ ಉಂಟಾಗುತ್ತದೆ. ಹೊಸ ಉತ್ಪಾದನಾ ಸಾಧನಗಳು ಮತ್ತೆ ನಿರ್ಮಾಣಗೊಳ್ಳುವವರೆಗೆ ಈ ಬೆಲೆ ಏರಿಕೆ ಹಾಗೆಯೇ ಮುಂದುವರಿಯುತ್ತದೆ. ಈ ಅವಧಿಯಲ್ಲಿ ಇವುಗಳಿಂದ ಬರುವ ಉತ್ಪನ್ನವನ್ನು 'ಅರೆಗೇಣಿ' ಎಂದು ಕರೆಯಬಹುದು. ಮಾರ್ಷಲ್, ಪೂರೈಕೆಯ ಪ್ರಮಾಣದಲ್ಲಿ ಶಾಶ್ವತವಾಗಿ ಸ್ಥಾಯಿಯಾಗಿರುವ ಅಂಶಗಳ ಆದಾಯವನ್ನು ಗೇಣಿ ಎಂದೂ, ತಾತ್ಕಾಲಿಕವಾಗಿ ಪೂರೈಕೆಯ ಪ್ರಮಾಣದಲ್ಲಿ ನಿಶ್ಚಲವಾಗಿರುವ ಅಂಶಗಳಿಂದ ಬರುವ ಉತ್ಪನ್ನವನ್ನು ಅರೆಗೇಣಿ ಎಂದೂ ಕರೆದಿದ್ದಾನೆ. ಅರೆಗೇಣಿಯು ಶಾಶ್ವತವಾದುದಲ್ಲ. ಸುಧಾರಿಸಿದ ಸಾಧನಗಳನ್ನು ಉಪಯೋಗಿಸಿ, ಹಳೆಯ ಸಾಧನಗಳನ್ನು ತೆಗೆದುಹಾಕುವುದರಿಂದ, ಅರೆಗೇಣಿ ಇಲ್ಲವಾಗುತ್ತದೆ.

ಗೇಣಿಯನ್ನು ಏಕೆ ಕೊಡಬೇಕು ? : ಭೂಮಿ ಮಾನವನಿಗೆ ನಿಸರ್ಗವು ಕೊಟ್ಟ ಒಂದು ಬಳುವಳಿ. ಭೂಮಿಯನ್ನು ಪುಕ್ಕಟೆಯಾಗಿ ಪಡೆಯುತ್ತೇವೆ. ಭೂಮಿಗೆ ಉತ್ಪಾದನೆಯ ವೆಚ್ಚ ಇರುವುದಿಲ್ಲ. ಆದರೂ ಗೇಣಿಯನ್ನು ಏಕೆ ಕೊಡಬೇಕು ಎಂಬ ಪ್ರಶ್ನೆಯು ಮೂಡುವುದು ಸಹಜ. ಭೂಮಿಯು ಹೇರಳವಾಗಿಲ್ಲ. ಶ್ರಮದಿಂದ ದುಡಿದು ಭೂಮಿಯ ವಿಸ್ತೀರ್ಣವನ್ನು ಹೆಚ್ಚಿಸಲಾಗುವುದಿಲ್ಲ. ಭೂಮಿಯು ಮಿತಿಯಾಗಿರುವುದರಿಂದ ಬೇಡಿಕೆ ಹೆಚ್ಚು. ಕಡಮೆ ಪೂರೈಕೆ ಹಾಗೂ ಹೆಚ್ಚು ಬೇಡಿಕೆಯನ್ನು ಹೊಂದಿರುವುದರಿಂದ ಅದನ್ನು ಉತ್ಪಾದನೆಯ ಕಾರ್ಯದಲ್ಲಿ ಬಳಸಲು ತಕ್ಕ ಪ್ರತಿಫಲವನ್ನು ಸಂದಾಯಮಾಡಬೇಕು. ಮುಂದೆ, ಎಲ್ಲ ಭೂಮಿಯು ಒಂದೇ ಸಮನಾದ ಫಲವತ್ತೆಯನ್ನು ಹೊಂದಿರುವುದಿಲ್ಲ. ಆದ್ದರಿಂದ ಆರ್ಥಿಕ ವ್ಯವಸ್ಥೆಯಲ್ಲಿ ಗೇಣಿಯನ್ನು ಕೆಲವು ದರ್ಜೆಯ ಭೂಮಿಗಳನ್ನು ಉಪಯೋಗಿಸಲು ಕೊಡಲಾಗುವುದು. ಗೇಣಿಯನ್ನು

ಕೊಡುವ ರೈತರೆಲ್ಲರೂ ಗೇಣಿದಾರರಲ್ಲ. ಅಂದರೆ ರೈತರೆಲ್ಲರೂ ಗೇಣಿದಾರರಾಗಿರುವುದಿಲ್ಲ. ಹಲವು ರೈತರು ಸ್ವಂತ ಹೊಲವನ್ನು ಪಡೆದಿರುತ್ತಾರೆ. ಆಗಲೂ ಭೂಗೇಣಿ ಹುಟ್ಟುತ್ತದೆ. ರೈತ ಉತ್ಪಾದನೆಯ ವೆಚ್ಚವನ್ನೆಲ್ಲ ಕೊಟ್ಟು, ಲಾಭ ಪಡೆದು ನಂತರ ಉಳಿಯುವ ಹಣವೇ ಗೇಣಿ. ಭೂಗೇಣಿ ಮಿಗತೆಯನ್ನು ತೋರಿಸುತ್ತದೆ. ಭೂಮಿಯ ಬೇಡಿಕೆ ಮತ್ತು ಪೂರೈಕೆಗಳಿಂದ ಒಂದು ಭೂಮಿಯ ಕ್ಷೇತ್ರಕ್ಕೆ ಕೊಡಲಾಗುವ ವಾರ್ಷಿಕ ಗೇಣಿಯನ್ನು ನಿರ್ಧರಿಸಲಾಗುತ್ತದೆ. ಭೂಮಿಯ ವಿವಿಧ ಫಲಗುಣದ ಸ್ವಭಾವದಿಂದಾಗಿ ಗೇಣಿ ಉದ್ಭವಿಸುತ್ತದೆ. ಅಂದರೆ ಭೂಮಿಯ ಗುಣ, ಸ್ಥಾನ, ಫಲವತ್ತತೆ, ಅದರಲ್ಲಿ ಬೆಳೆಯುವ ಪದಾರ್ಥಗಳು, ಅವುಗಳ ಬೆಲೆ ಮತ್ತು ಒಂದು ಗುಣದ ಭೂಮಿಯ ಪ್ರಮಾಣ, ಇವುಗಳ ಮೇಲೆ ಗೇಣಿಯ ನಿರ್ಧಾರವಾಗುತ್ತದೆ. ಭೂಮಿಯ ಸ್ಥಾನಕ್ಕಿಂತಲೂ ಭೂಮಿಯ ಫಲವತ್ತತೆಯು ಗೇಣಿಯ ನಿರ್ಧಾರದಲ್ಲಿ ಹೆಚ್ಚು ಪಾತ್ರ ವಹಿಸುತ್ತದೆ.

ರಿಕಾರ್ಡೋವಿನ ಗೇಣಿಯ ಸಿದ್ಧಾಂತ

ಗೇಣಿಯ ಸಿದ್ಧಾಂತವನ್ನು ಮೊಟ್ಟ ಮೊದಲಿಗೆ ಪ್ರತಿಪಾದಿಸಿ ಬೆಳಕಿಗೆ ತಂದ ಮಹಾವ್ಯಕ್ತಿ ಎಂದರೆ ಆಂಗ್ಲ ಅರ್ಥಶಾಸ್ತ್ರಜ್ಞನೂ, ಆಡಂ ಸ್ಮಿತ್‌ನ ಅನುಯಾಯಿಯೂ ಆದ ಡೇವಿಡ್ ರಿಕಾರ್ಡೋ. ಈತನು ಆಡಂ ಸ್ಮಿತ್‌ನ ಅನುಯಾಯಿ. 1817 ರಲ್ಲಿ ಈತ ಪ್ರಕಟಿಸಿದ 'ಪ್ರಿನ್ಸಿಪಲ್ಸ್ ಆಫ್ ಪೊಲಿಟಿಕಲ್ ಎಕೋನಮಿ ಅಂಡ್ ಟ್ಯಾಕ್ಸೇಷನ್' ಎಂಬ ಪುಸ್ತಕದಲ್ಲಿ ಗೇಣಿಸಿದ್ಧಾಂತದ ನಿರೂಪಣೆ ಇದೆ. ಇದು ಅರ್ಥಶಾಸ್ತ್ರದ ಬೆಳವಣಿಗೆಗೆ ರಿಕಾರ್ಡೋ ನೀಡಿದ ಕಾಣಿಕೆಗಳಲ್ಲೆಲ್ಲ ಪ್ರಮುಖವಾದುದು ಎನ್ನಬಹುದು. ಆರ್ಥಿಕ ಗೇಣಿಯು ಹೇಗೆ ಉದ್ಭವಿಸುತ್ತದೆ ಎಂಬುದನ್ನು ಇವನು ವಿವರಿಸಿದ್ದಾನೆ. ಭೂಮಿಯ ಫಲವತ್ತತೆಯಲ್ಲಿ ಕಂಡುಬರುವ ವ್ಯತ್ಯಾಸವೇ ಗೇಣಿಗೆ ಮೂಲ. ಮೂಲ ಹಾಗೂ ಅವಿನಾಶಿ ಭೂಮಿಯ ಉಪಯೋಗಕ್ಕಾಗಿ ಜಮೀನಿನ ಒಡೆಯನಿಗೆ ಕೊಡಲಾಗುವ ಭಾಗವೇ ಗೇಣಿ. ಭೂಮಿಗಳು ವಿವಿಧ ಫಲಶಕ್ತಿಯನ್ನು ಹೊಂದಿವೆ. ಅಂದರೆ ಎಲ್ಲ ಭೂಮಿಗಳು ಒಂದೇ ಬಗೆಯ ಫಲವತ್ತತೆಯನ್ನು ಹೊಂದಿರುವುದಿಲ್ಲ. ಕೆಲವು ಹೆಚ್ಚು ಫಲವತ್ತಾಗಿಯೂ ಕೆಲವು ಕಡಮೆ ಫಲವತ್ತಾಗಿಯೂ ಇರುತ್ತವೆ. ಹೆಚ್ಚು ಫಲವತ್ತಾಗಿರುವ ಭೂಮಿಯು ಕಡಮೆ ಫಲವತ್ತಾದ ಭೂಮಿಗಿಂತ ಹೆಚ್ಚು ಉತ್ಪನ್ನವನ್ನು ಕೊಡುತ್ತದೆ. ಆ ಹೆಚ್ಚು ಉತ್ಪನ್ನವೇ ಗೇಣಿ. ಅಂದರೆ ವಿವಿಧ ಭೂಮಿಗಳ ಫಲಶಕ್ತಿಯಲ್ಲಿರುವ ವ್ಯತ್ಯಾಸಗಳಿಂದ ಗೇಣಿಯು ಉದ್ಭವಿಸುತ್ತದೆ.

ಆಡಂ ಸ್ಮಿತ್‌ರವರ ಪ್ರಕಾರ ಕಂದಾಯವು ಏಕಸ್ವಾಮ್ಯಕ್ರಿಯ. ಅಂದರೆ ಡೇವಿಡ್ ರಿಕಾರ್ಡೋರವರ ಪ್ರಕಾರ ಜಮೀನುಗಳ ಪರಸ್ಪರ ಸಾರವಿಭಿನ್ನತೆಯೇ ಕಂದಾಯದ ಮೂಲ ಕಾರಣ. ಅವನ ಸಿದ್ಧಾಂತವು ಕೆಳಗಿನ ಕಲ್ಪನೆಗಳನ್ನು ಹೊಂದಿದೆ.

(i) ಭೂಮಿಯ ಫಲವತ್ತತೆ ವಿಭಿನ್ನವಾಗಿರುತ್ತದೆ. ಭೂಮಿಯನ್ನು ಪ್ರಥಮ ವರ್ಗ, ದ್ವಿತೀಯವರ್ಗ ಹಾಗೂ ತೃತೀಯವರ್ಗವೆಂದು ವಿಂಗಡಿಸಬಹುದು.

(ii) ಜನರು ಮೊದಲು ಪ್ರಥಮದರ್ಜೆ ಭೂಮಿಯನ್ನು ಕೃಷಿಗಾಗಿ ಬಳಸುತ್ತಾರೆ. ಪ್ರಥಮದರ್ಜೆ ಭೂಮಿ ಪೂರ್ಣವಾಗಿ ಮುಗಿದನಂತರ ದ್ವಿತೀಯ ದರ್ಜೆಯ ಭೂಮಿಯನ್ನು ಬಳಸುವರು. ಆಹಾರಧಾನ್ಯಗಳಿಗೆ ಬೇಡಿಕೆ ಹೆಚ್ಚಾದಂತೆಲ್ಲ ಕ್ರಮೇಣವಾಗಿ ಕಡಮೆ ದರ್ಜೆಯ ಭೂಮಿಗಳನ್ನು ಬಳಸಬೇಕಾಗುತ್ತದೆ.

(iii) ಕಡಮೆದರ್ಜೆಯದನ್ನು ಕೃಷಿಗೆ ಬಳಸಿದಾಗ ಉತ್ತಮ ದರ್ಜೆಯ ಭೂಮಿಯು ಆರ್ಥಿಕಗೇಣಿಯನ್ನು ಗಳಿಸುತ್ತದೆ.

(iv) ಕಡಮೆದರ್ಜೆ ಭೂಮಿಯ (ಅಂಚಿನ ದರ್ಜೆ ಭೂಮಿ) ಅದಕ್ಕಿಂತಲೂ ಉತ್ತಮವಾಗಿರುವ ಭೂಮಿಯ ಉತ್ಪಾದನೆಯಲ್ಲಿ ಇರುವ ವ್ಯತ್ಯಾಸವೇ ಗೇಣಿ.

(v) ಭೂಮಿಯ ಉತ್ಪಾದನೆಯು ಇಳಿಮುಖ ಅಂಚಿನ ಪ್ರತಿಫಲದ ಸಿದ್ಧಾಂತಕ್ಕೆ ಅನುಗುಣವಾಗಿದೆ.

(vi) ವಸ್ತುಗಳ ಬೆಲೆಯಲ್ಲಿ ಗೇಣಿಯು ಸೇರುವುದಿಲ್ಲ. ರಿಕಾರ್ಡೋ ಗೇಣಿಯ ಸಿದ್ಧಾಂತವನ್ನು ಈ ಕೆಳಗಿನಂತೆ ವಿವರಿಸಬಹುದು :

ಒಂದು ದೇಶವನ್ನು ಹೊಸದಾಗಿ ಕಂಡುಹಿಡಿದರೆಂದು ಭಾವಿಸೋಣ. ಆ ದೇಶಕ್ಕೆ ಇತರ ರಾಷ್ಟ್ರಗಳಿಂದ ಜನರು ವಲಸೆ ಹೋಗಿ ನೆಲಸುತ್ತಾರೆ. ಅದು ನಿರ್ಜನ ಪ್ರದೇಶವಾಗಿದ್ದು ಹೊಸದಾಗಿ ಜನರು ಅಲ್ಲಿಗೆ ಹೋಗಿ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಬೇಕಾದ್ದರಿಂದ ಪ್ರಾರಂಭದಲ್ಲಿ ಅಲ್ಲಿಗೆ ಬಂದು ನೆಲಸುವವರು ಬಹಳ ಕಡಮೆ. ಆ ದೇಶದಲ್ಲಿ ಭೂಮಿಯು ಹೇರಳವಾಗಿ ದೊರೆಯುವುದರಿಂದ, ಹೊಸದಾಗಿ ನೆಲಸಲು ಬಂದ ಜನರು ಅತ್ಯುತ್ತಮವೆನಿಸುವ ಜಮೀನುಗಳನ್ನೇ ಕೃಷಿಗೆ ಬಳಸಿಕೊಳ್ಳುತ್ತಾರೆ ಮತ್ತು ಭೂಮಿಗೆ ಬೆಲೆಯನ್ನು ಕೊಡಬೇಕಾದ ಪ್ರಮೇಯವೂ ಇಲ್ಲ. ಅಲ್ಲಿ ಭೂಮಿಯು ಉಚಿತವಾಗಿ ದೊರೆಯುತ್ತದೆ. ಪ್ರಾರಂಭದಲ್ಲಿ ಅತ್ಯುತ್ತಮ ಜಮೀನಿನ ಪೂರೈಕೆ (ಪ್ರಥಮ ದರ್ಜೆಯ ಭೂಮಿ) ಅದರ ಬೇಡಿಕೆಗಿಂತ ಅಧಿಕವಾಗಿರುತ್ತದೆ. ಆದ್ದರಿಂದ ಅದಕ್ಕೆ ಯಾವ ಮೌಲ್ಯವೂ ಇರುವುದಿಲ್ಲ. ಉತ್ಪಾದನಾ ವೆಚ್ಚದಲ್ಲಿ ಕೂಲಿಯವನಿಗೆ ಕೊಡುವ 'ಕೂಲಿ' ಉತ್ಪಾದನೆಯಲ್ಲಿ ತೊಡಗಿಸಿದ ಬಂಡವಾಳದ ಮೇಲಿನ 'ಬಡ್ಡಿ' ಹಾಗೂ ರೈತರು ಕೃಷಿಯ ಕಾರ್ಯಾಚರಣೆಗೆ ವಹಿಸಿದ ಶ್ರಮಕ್ಕೆ ತಕ್ಕ ಲಾಭಗಳು ಸೇರಿರುತ್ತವೆ. ಭೂಮಿಯು ಉಚಿತವಾಗಿ ದೊರೆತಿರುವುದರಿಂದ ಅದಕ್ಕೆ ಸಂಭಾವನೆಯನ್ನು(ಗೇಣಿ)ಕೊಡುವ ಅವಶ್ಯಕತೆ ಇಲ್ಲ. ಆದರೆ ಕಾಲಕ್ರಮೇಣ ವರ್ಷಗಳು ಉರುಳಿದಂತೆಲ್ಲ ಜನಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದು ಇತರ ರಾಷ್ಟ್ರ

ಗಳಿಂದ ಮತ್ತಷ್ಟು ಜನರು ಬಂದು ನೆಲಸುವರೆನ್ನಿ. ನೈಸರ್ಗಿಕ ಕಾರಣದಿಂದ ಜನಸಂಖ್ಯೆಯಲ್ಲಿ ಕಂಡುಬಂದ ಹೆಚ್ಚಳ, ಇತರ ಜನರು ವಲಸೆ ಬಂದು ನೆಲಸಿದ್ದು, ಆಹಾರಕ್ಕೆ ಹೆಚ್ಚಿನ ಬೇಡಿಕೆಯುಂಟಾಗುವಂತೆ ಮಾಡುವುದು. ಆಹಾರದ ಬೇಡಿಕೆಯನ್ನು ಪೂರೈಸಲು ಉತ್ತಮ ದರ್ಜೆಯ ಭೂಮಿಯನ್ನೆಲ್ಲ ಕೃಷಿಮಾಡಲು ಬಳಸುವರು. ಉತ್ತಮ ದರ್ಜೆಯ ಜಮೀನಿನ ಅಭಾವ ಉಂಟಾದಾಗ ಸಹಜವಾಗಿ ಅದಕ್ಕಿಂತ ಕಡಮೆ ದರ್ಜೆಯ (ದ್ವಿತೀಯ ದರ್ಜೆ) ಭೂಮಿಯನ್ನು ಕೃಷಿಗೆ ಬಳಸಬೇಕಾಗುತ್ತದೆ. ಇಂತಹ ಭೂಮಿಯ ಫಲವತ್ತತೆಯಲ್ಲಿ ಪ್ರಥಮವರ್ಗದ ಭೂಮಿಗಿಂತ ಕಡಮೆ ಫಲವತ್ತಾಗಿರುವುದರಿಂದ ಅದರ ಸಾಗುವಳಿಯ ವೆಚ್ಚವು ಹೆಚ್ಚಾಗಿದ್ದು, ಉತ್ಪನ್ನವೂ ಸಹ ಕಡಮೆ ಇರುತ್ತದೆ. ಈ ವ್ಯತ್ಯಾಸವು ಪ್ರಥಮ ದರ್ಜೆ ಭೂಮಿಗೆ ಗೇಣಿಯನ್ನು ಕೊಡುವಂತೆ ಮಾಡುತ್ತದೆ. ಎರಡನೆ ದರ್ಜೆ ಭೂಮಿಯು ಭೂಗೇಣಿಯನ್ನು ಕೊಡುವುದಿಲ್ಲ. ಇದೇ ರೀತಿ ಜನ ಸಂಖ್ಯೆಯು ಏರಿದಂತೆಲ್ಲ ತೃತೀಯ ದರ್ಜೆಯ ಭೂಮಿಯನ್ನೂ ಬಳಸಬೇಕಾಗುತ್ತದೆ. ಮಾರುಕಟ್ಟೆ ಕ್ರಯ ಎರಡನೆಯ ದರ್ಜೆಯ ಜಮೀನಿನ ಸಾಗುವಳಿ ವೆಚ್ಚಕ್ಕೆ ಮಾತ್ರ ಸಮನಾಗಿರುತ್ತದೆ. ಎರಡನೆ ದರ್ಜೆ ಜಮೀನಿನ ಸಾಗುವಳಿ ಪ್ರಾರಂಭಗೊಂಡಾಗ ಪ್ರಥಮ ದರ್ಜೆ ಜಮೀನುಗಳು ಹೆಚ್ಚು ಉತ್ಪನ್ನವನ್ನು ಕೊಡುತ್ತವೆ. ಈ ಹೆಚ್ಚುವರಿ ಉತ್ಪನ್ನವನ್ನು ರಿಕಾರ್ಡೋ ಗೇಣಿ ಅಥವಾ ಬಾಡಿಗೆ ಅಥವಾ ಕಂದಾಯ ಎಂದು ಕರೆದಿರುತ್ತಾರೆ. ಆಹಾರಕ್ಕೆ ಬೇಡಿಕೆ ಅಧಿಕಗೊಂಡಂತೆಲ್ಲ ತೃತೀಯ ದರ್ಜೆಯ ಭೂಮಿಯ ಸಾಗುವಳಿ ಮಾಡಬೇಕಾಗುತ್ತದೆ. ಏಕೆಂದರೆ ದ್ವಿತೀಯ ದರ್ಜೆಯ ಭೂಮಿಯ ಪೂರೈಕೆಯು ಅಂತ್ಯಗೊಂಡಿರುತ್ತದೆ. ಆಗ ದ್ವಿತೀಯ ದರ್ಜೆಯ ಜಮೀನುಗಳು ತೃತೀಯ ದರ್ಜೆಯ ಜಮೀನುಗಳಿಗಿಂತ ಹೆಚ್ಚುವರಿ ಉತ್ಪನ್ನವನ್ನು ಕೊಡುತ್ತವೆ. ಇಲ್ಲಿ ತೃತೀಯ ದರ್ಜೆಯ ಜಮೀನು ಗೇಣಿಯನ್ನು ಕೊಡಬೇಕಾಗಿಲ್ಲ. ಆಗ ಪ್ರಥಮ ದರ್ಜೆಯ ಭೂಗೇಣಿಯು ಹೆಚ್ಚಾಗುತ್ತದೆ. ಎರಡನೆಯ ದರ್ಜೆಯ ಭೂಮಿಗೆ ಸ್ವಲ್ಪ ಭೂಗೇಣಿ ಕಡಮೆ. ಆದರೆ ತೃತೀಯ ದರ್ಜೆಯ ಭೂಮಿಯು ಗೇಣಿಯನ್ನು ಕೊಡಬೇಕಾಗಿಲ್ಲ. ಜನಸಂಖ್ಯೆಯು ಹೆಚ್ಚಾದಂತೆಲ್ಲ ಆಹಾರಕ್ಕೆ ಬೇಡಿಕೆ ಉಂಟಾಗಿ ಕಡಮೆ ಫಲವತ್ತಾದ ಭೂಮಿಗಳನ್ನು ಕೃಷಿಯಲ್ಲಿ ಉಪಯೋಗಿಸುವುದರಿಂದ ಹೆಚ್ಚು ಫಲವತ್ತಾದ ಭೂಮಿಯು ಗೇಣಿಯನ್ನು ಕೊಡಬೇಕಾಗುತ್ತದೆ. ಅಂತಿಮವಾಗಿ ಬಳಸಲ್ಪಡುವ ಭೂಮಿಗಳನ್ನು ಗೇಣಿರಹಿತ ಭೂಮಿಗಳೆಂದೂ, ಅಥವಾ ಪರಿಸರದ ಜಮೀನುಗಳೆಂದೂ ರಿಕಾರ್ಡೋ ಕರೆದಿರುತ್ತಾನೆ. ಆದ್ದರಿಂದ ಪರಿಸರದ ಜಮೀನುಗಳು ಗೇಣಿಯನ್ನು ಕೊಡುವುದಿಲ್ಲ. ಏಕೆಂದರೆ, ಈ ಭೂಮಿಯಲ್ಲಿ ಬೆಳೆಯಲಾಗುವ ಬೆಳೆಯ ಉತ್ಪಾದನಾ ವೆಚ್ಚವು ಆ ಬೆಳೆಯ ಮಾರುಕಟ್ಟೆಯ ಬೆಲೆಗೆ ಸಮನಾಗಿರುತ್ತದೆ. ಆದ್ದರಿಂದ ಸೀಮಾಂತ ಭೂಮಿಯ (ಕೊನೆಗೆ ಕೃಷಿ ಮಾಡಿದ) ಬೆಳೆ ಮತ್ತು ಅದರ ಉತ್ಪಾದನಾ ವೆಚ್ಚವು ಉಳಿದ ಭೂಮಿಗಳಲ್ಲಿ ಉದ್ಭವಿಸಬಹುದಾದ ಗೇಣಿಗೆ ಒಂದು ಅಳತೆಗೋಲಾಗುತ್ತದೆ ಎಂದು ಹೇಳಬಹುದು. ಆದ್ದರಿಂದ ಗೇಣಿ ಎಂಬುದು ಮೇಲು

ದರ್ಜೆಯ ಜಮೀನುಗಳು ತಮಗಿಂತ ಕೆಳದರ್ಜೆಯ (ಫಲವತ್ತತೆಯಲ್ಲಿ) ಜಮೀನುಗಳ ಸಾಗುವಳಿಯಿಂದ ಗಳಿಸುವ ಹೆಚ್ಚುವರಿ ಉತ್ಪನ್ನ. ಅಂದರೆ ಉತ್ಕೃಷ್ಟ ಭೂಮಿಗೂ ಬಂಜರು ಭೂಮಿಗೂ ಮಧ್ಯೆ ಹುಟ್ಟುವಳಿಯಲ್ಲಿ ಕಂಡುಬರುವ ವ್ಯತ್ಯಾಸವೇ ಭೂಗೇಣಿ.

ಭೂ ಒಡೆಯನೊಬ್ಬನ ಭೂಮಿಯ ಫಲವತ್ತು ಮತ್ತು ಅವಿನಾಶಿ ಶಕ್ತಿಗಳಿಂದ ಉತ್ಪನ್ನವಾಗುವ ಒಟ್ಟು ಧಾನ್ಯದಲ್ಲಿ ವೆಚ್ಚ ಹೋಗಿ ಉಳಿಯುವ ಮೊತ್ತವನ್ನು ಗೇಣಿದಾರ ಭೂಮಾಲೀಕನಿಗೆ ಕೊಡುವ ಪ್ರತಿಫಲವನ್ನು ಗೇಣಿ ಎಂದು ಕರೆಯುತ್ತಾರೆ. ಒಂದು ರಾಷ್ಟ್ರದಲ್ಲಿ A, B, C ಹಾಗೂ D ಎಂಬ ಪ್ರಥಮ, ದ್ವಿತೀಯ, ತೃತೀಯ ಹಾಗೂ ಚತುರ್ಥ ದರ್ಜೆಯ ಭೂಮಿಯನ್ನು ಕೃಷಿಗೆ ಬಳಸಲಾಗುವುದು ಎಂದು ಊಹಿಸಿಕೊಳ್ಳೋಣ. A ಭೂಮಿಯು ಅತಿ ಫಲವತ್ತಾದ ಭಾಗವಾಗಿದ್ದು ಅದರಿಂದ ಬರುವ ಉತ್ಪನ್ನ 100 ಕ್ವಿಂಟಾಲ್ ಗೋಧಿ. C ಯು B ಭೂಮಿಗಿಂತ ಕಡಮೆ ಫಲವತ್ತತೆಯನ್ನು ಪಡೆದಿದ್ದು, ಅದರಿಂದ ಬರುವ ಉತ್ಪನ್ನ 60 ಕ್ವಿಂಟಾಲ್ ಹಾಗೂ ಕನಿಷ್ಟ ಫಲವತ್ತತೆಯನ್ನು ಪಡೆದಿರುವ D ದರ್ಜೆಯ ಭೂಮಿಯು 40 ಕ್ವಿಂಟಾಲ್ ಉತ್ಪನ್ನ ನೀಡುತ್ತದೆ. ಪ್ರತಿಯೊಂದು ದರ್ಜೆಯೂ ಪಡೆಯುವ ಭೂಗೇಣಿ ಈ ರೀತಿ ಇರುವುದು :


ಕೋಷ್ಟಕ 12

ವಿವಿಧ ದರ್ಜೆಯ ಭೂಮಿಗಳಲ್ಲಿನ ಗೋಧಿಯ ಸೀಮಾಂತ ಉತ್ಪನ್ನ

ಭೂಮಿಯ ದರ್ಜೆ	ಒಟ್ಟುಗೂಡಿದ ಉತ್ಪನ್ನ (ಕ್ವಿಂಟಾಲ್‌ಗಳಲ್ಲಿ)	ಸೀಮಾಂತ ಉತ್ಪನ್ನ (ಕ್ವಿಂಟಾಲ್‌ಗಳಲ್ಲಿ)
A	100	100
B	180	80
C	240	60
D	280	40

A B C D ಎಂಬ ನಾಲ್ಕು ಭೂಮಿಗಳನ್ನು ಕೃಷಿಮಾಡಿದಾಗ A ದರ್ಜೆಯ ಭೂಮಿಯಿಂದ ಬರುವ ಉತ್ಪನ್ನ 100 ಕ್ವಿಂಟಾಲ್ ಗೋಧಿ. B ದರ್ಜೆಯ ಭೂಮಿಯಿಂದ 80 ಕ್ವಿಂಟಾಲ್ ಗೋಧಿ, C ದರ್ಜೆಯ ಭೂಮಿಯಿಂದ 60 ಕ್ವಿಂಟಾಲ್

ಗೋಧಿ ಹಾಗೂ D ದರ್ಜೆಯ ಭೂಮಿಯಿಂದ 40 ಕ್ವಿಂಟಾಲ್ ಗೋಧಿಯನ್ನು ಉತ್ಪಾದಿಸಬಹುದು. D ದರ್ಜೆಯ ಭೂಮಿ ಸೀಮಾಂತ ಅಥವಾ ಅಂಚಿನ ಭೂಮಿ.



ಆಲೇಖನ 9 : ವಿವಿಧ ದರ್ಜೆಯ ಭೂಮಿಯ ಗೇಣಿ ಮೊತ್ತ

ಈ ಭೂಮಿಯು ಗೇಣಿರಹಿತ ಭೂಮಿ, C ದರ್ಜೆಯ ಭೂಮಿ 20 ಕ್ವಿಂಟಾಲ್ ಭೂಗೇಣಿ ಕೊಟ್ಟರೆ, 60 − 40 = 20, B ದರ್ಜೆಯದು 40 ಕ್ವಿಂಟಾಲ್, 80 − 40 = 40 ಮತ್ತು A ದರ್ಜೆಯದು 60 ಕ್ವಿಂಟಾಲ್ 100 − 40 = 60. ಒಂದು ಭೂಮಿಯು ಮತ್ತೊಂದು ಭೂಮಿಗಿಂತ ಹೆಚ್ಚು ಉತ್ಪನ್ನ ಪಡೆದುದರ ಫಲವೇ ಹೆಚ್ಚಿನ ಗೇಣಿ.

ಭೂಗೇಣಿಯು ಈ ರೀತಿ ಭೂಮಿಯಿಂದ ದೊರೆತ ಉತ್ಪನ್ನದ ವ್ಯತ್ಯಾಸದಿಂದ ಉಂಟಾಗುತ್ತದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಉತ್ಪನ್ನದ ಬೆಲೆ ಸೀಮಾಂತ ಭೂಮಿಯ ಉತ್ಪಾದನೆ ವೆಚ್ಚಕ್ಕೆ ಸಮನಾಗಿದ್ದು ಅಂತಹ ಭೂಮಿಯು ಭೂಗೇಣಿಯನ್ನು ಪಡೆಯುವುದಿಲ್ಲ. ಸೀಮಾಂತ ಉತ್ಪಾದನೆಯ ವೆಚ್ಚವು ಆದ್ದರಿಂದ ಪಡೆದ ಉತ್ಪನ್ನದ ಬೆಲೆಗೆ ಸಮನಾಗಿರುವುದರಿಂದ ಉಳಿತಾಯವಾಗುವುದಿಲ್ಲ. ಆದ್ದರಿಂದ ಅಂತಹ ಭೂಮಿ ಗೇಣಿಯನ್ನು ಪಡೆಯುವುದಿಲ್ಲ, ಗೇಣಿಯು ಬೆಲೆಯಲ್ಲಿ ಸೇರುವುದಿಲ್ಲ. ಅಂದರೆ ಬೆಲೆಯು ಗೇಣಿಯನ್ನು ಹೆಚ್ಚಿಸಬಹುದು. ಆದರೆ ಗೇಣಿ ಹೆಚ್ಚಾದಂತೆ ಬೆಲೆ ಹೆಚ್ಚಾಗುವುದಿಲ್ಲ.

ಮೇಲಿನ ಸಿದ್ಧಾಂತದಲ್ಲಿ ಅಡಕವಾಗಿರುವ ಮುಖ್ಯವಾದ ಅಂಶಗಳು :

(i) ಭೂಮಿಯ ಫಲವತ್ತತೆಯಲ್ಲಿ ಕಂಡುಬಂದ ವ್ಯತ್ಯಾಸಗಳಿಂದ ಗೇಣಿಯು ರೂಪತಾಳಿತು.

(ii) ಅಂಚಿನ ಅಥವಾ ಸೀಮಾಂತ ಭೂಮಿಯು ಕಡಮೆ ಫಲವತ್ತತೆಯನ್ನು ಹೊಂದಿದ ಭೂಮಿ, ಆದ್ದರಿಂದ ಅದು ಗೇಣಿರಹಿತ ಭೂಮಿ ಆಗಿರುತ್ತದೆ.

(iii) ಸೀಮಾಂತ ಭೂಮಿಯ ಸಾಗುವಳಿಗೆ ಖರ್ಚುಮಾಡುವ ಹಣವು ಪೇಟೆಯ ಬೆಲೆಗೆ ಸಮವಾಗಿರುತ್ತದೆ, ಆದರಿಂದ ಉಳಿತಾಯವಾಗುವುದಿಲ್ಲ.

(iv) ಅಂಚಿನ ಅಥವಾ ಸೀಮಾಂತ ಭೂಮಿಯ ಉತ್ಪಾದನೆ ಮತ್ತು ಉತ್ತಮ ಭೂಮಿಯ ಉತ್ಪಾದನೆಗೆ ಇರುವ ವ್ಯತ್ಯಾಸವೇ ಗೇಣಿ.

ಗೇಣಿಯು ಬೆಲೆಯ ಏರಿಕೆಗೆ ಕಾರಣವಾಗಿರದೆ ಬೆಲೆಯ ಏರಿಕೆಯೇ ಗೇಣಿಗೆ ಕಾರಣ ಎಂಬುದಾಗಿ ರಿಕಾರ್ಡೋ ತಿಳಿಸಿಕೊಟ್ಟಿರುವನು. ಅವನ ದೃಷ್ಟಿಯಲ್ಲಿ ಗೇಣಿಯು ಬೆಲೆಯ ಫಲಿತಾಂಶ. ಅದು ಕೃಷಿ ಉತ್ಪನ್ನಗಳ ಬೆಲೆಯ ಮೇಲೆ ಪರಿಣಾಮವನ್ನುಂಟು ಮಾಡುವುದಿಲ್ಲ. ರಿಕಾರ್ಡೋ ಕಾಲದಲ್ಲಿ ಭೂಮಿಯ ಗೇಣಿ ಹೆಚ್ಚಾಗಿದ್ದುದರಿಂದ ಜನರು ಧಾನ್ಯದ ಬೆಲೆ ಏರುತ್ತಿದೆಯೆಂದು ನಂಬಿದ್ದರು. ಈ ಭಾವನೆಯನ್ನು ತಪ್ಪೆಂದು ಸಾರಿದವನು ರಿಕಾರ್ಡೋ, ಗೇಣಿಕೊಡುವುದರಿಂದ ಧಾನ್ಯದ ಬೆಲೆ ಹೆಚ್ಚಾಗಿಲ್ಲ. ಧಾನ್ಯದ ಬೆಲೆ ಹೆಚ್ಚಾಗಿರುವುದರಿಂದ ಗೇಣಿ ಹೆಚ್ಚಿದೆಯೆಂದೂ, ಧಾನ್ಯದ ಬೆಲೆ ಕಡಮೆಯಾದರೆ ಗೇಣಿಯೂ ಕಡಮೆಯಾಗುವುದೆಂದು ರಿಕಾರ್ಡೋ ತಿಳಿಸಿದ್ದಾನೆ. ಧಾನ್ಯದ ಬೆಲೆ ಅಂಚಿನ ಭೂಮಿಯ ಉತ್ಪಾದನೆಯ ವೆಚ್ಚಕ್ಕೆ ಸಮವಿರುವುದರಿಂದ, ಆ ಭೂಮಿ ಬಾಡಿಗೆರಹಿತ ಭೂಮಿಯಾಗಿರುತ್ತದೆ. ಆದಕಾರಣ ಗೇಣಿ ಉತ್ಪಾದನಾವೆಚ್ಚದಲ್ಲಿ ಕೂಡಿರುವುದಿಲ್ಲ ವೆಂದು ಹೇಳಿದನು. ಮುಂದೆ ಅವನ ಪ್ರಕಾರ ಗೇಣಿ ಬೆಲೆಯನ್ನು ನಿರ್ಧರಿಸದು. ಬೆಲೆಯು ಏರಿದಂತೆಲ್ಲ ಉತ್ತಮ ದರ್ಜೆಯ ಭೂಮಿಗಳನ್ನು ಸಾಗುವಳಿ ಮಾಡುವ ಗೇಣಿದಾರರು ಹೆಚ್ಚು ಗೇಣಿಗೆ ಕೊಡಲು ಮುಂದೆ ಬರುತ್ತಾರೆ. ಬೆಲೆ ಇಳಿದಾಗ ಅವರು ಗೇಣಿಯನ್ನು ಇಳಿಸುವರು.

ಟೀಕೆಗಳು : ಡೇವಿಡ್ ರಿಕಾರ್ಡೋ ನೀಡಿರುವ ಗೇಣಿಯ ಸಿದ್ಧಾಂತವು ಆಡಂ ಸ್ಮಿಥ್ ಹಾಗೂ ಫಿಜಿಯೋ ಕ್ರಾಟ್ಸರ ಅಭಿಪ್ರಾಯಗಳಿಗೆ ವಿರುದ್ಧವಾಗಿದೆ. ಅವರ ಪ್ರಕಾರ ಪ್ರಕೃತಿಯು ಮನುಷ್ಯನ ಶ್ರಮದೊಂದಿಗೆ ಸಹಕರಿಸುವುದು. ಆದರೆ ರಿಕಾರ್ಡೋ ಪ್ರಕಾರ ಗೇಣಿಯು ನಿಸರ್ಗದ ಧಾರಾಳತನದಿಂದ ಬಂದ ಫಲಿತಾಂಶವಲ್ಲ. ಭೂಮಿಯು ಹೇರಳವಾಗಿದ್ದರೆ ಗೇಣಿಯು ಇರುವುದಿಲ್ಲ. ಭೂಮಿಯ ಅಭಾವ ಇರುವುದರಿಂದ ಹಾಗೂ ಭೂಮಿಯು ಇಳಿಮುಖ ಪ್ರತಿಫಲ ಸಿದ್ಧಾಂತದೊಂದಿಗೆ ನಿಕಟಸಂಪರ್ಕ ಹೊಂದಿರುವುದರಿಂದ ಗೇಣಿಯು ರೂಪತಾಳಿದೆ. ಗೇಣಿಯ ಮೌಲ್ಯ

ದಿಂದ ಉಂಟಾಯಿತೇ ಹೊರತು ಸಂಪತ್ತಿನಿಂದಲ್ಲ ಎಂಬುದಾಗಿ ರಿಕಾರ್ಡೋ ಅಭಿಪ್ರಾಯ ಪಟ್ಟಿದ್ದಾನೆ. ಆದಾಗ್ಯೂ ರಿಕಾರ್ಡೋರವರ ಗೇಣಿಯ ಸಿದ್ಧಾಂತವು ಟೀಕೆಗಳ ಹೊರತಾಗಿಲ್ಲ.

(i) ರಿಕಾರ್ಡೋ ಹೇಳಿದಂತೆ ಜನರು ಪ್ರಥಮವರ್ಗದ, ದ್ವಿತೀಯವರ್ಗದ, ತೃತೀಯವರ್ಗದ ಭೂಮಿಯನ್ನು ಸಾಗುವಳಿಮಾಡುವುದಿಲ್ಲ. ಸಾಮಾನ್ಯವಾಗಿ ಸುಲಭವಾಗಿ ಸಿಗುವ ಹಾಗೂ ಹತ್ತಿರದಲ್ಲಿರುವ ಭೂಮಿಯನ್ನು ಸಾಗುವಳಿ ಮಾಡುತ್ತಾರೆ. ಅಂತಹ ಭೂಮಿಯು ಹೆಚ್ಚು ಫಲವತ್ತಾಗಿರಬಹುದು, ಫಲವತ್ತಾಗಿಲ್ಲದೆ ಇರಬಹುದು. ಆ ಭೂಮಿ ಮುಗಿದಂತೆ ಉಳಿದ ಭೂಮಿಯನ್ನು ಉಪಯೋಗಿಸುತ್ತಾರೆ. ಆದ್ದರಿಂದ ರಿಕಾರ್ಡೋ ಪ್ರಕಾರ ಯಾರೂ ಪ್ರಥಮವರ್ಗದ ಭೂಮಿಯನ್ನು ಉಳುಮೆ ಮಾಡಲು ಬಯಸುವುದಿಲ್ಲ.

(ii) ಭೂಮಿಯ ಫಲವತ್ತತೆಯು ನೈಸರ್ಗಿಕವಾಗಿರುವುದರಿಂದ ಫಲವತ್ತತೆಯನ್ನು ಕಡಮೆ ಮಾಡಲಾಗುವುದಿಲ್ಲವೆಂದು ರಿಕಾರ್ಡೋ ಅಭಿಪ್ರಾಯ ಪಟ್ಟಿರುವರು. ಆದರೆ ಇದು ಸರಿಯಲ್ಲ. ಹೆಚ್ಚುಹೆಚ್ಚಾಗಿ ಉತ್ಪಾದಿಸಿದಂತೆಲ್ಲ ಭೂಮಿಯ ಫಲವತ್ತತೆ ಕಡಮೆಯಾಗುತ್ತದೆ. ಎಷ್ಟೇ ಫಲವತ್ತಾದ ಭೂಮಿಯಾದರೂ ಬಳಸಿದಂತೆಲ್ಲ ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತದೆ. ಆದರೆ ಕೃತಕ ಗೊಬ್ಬರಗಳನ್ನು ಬಳಸಿ ಫಲವತ್ತನ್ನು ಹೆಚ್ಚಿಸಿಕೊಳ್ಳಬಹುದು. ಭೂಮಿಯ ಉತ್ಪಾದನೆಯು ಅದರ ಫಲವತ್ತನ್ನಲ್ಲದೆ ರೈತನ ಶ್ರಮ, ಉತ್ಪಾದನೆಯ ವಿಧಾನಗಳನ್ನು ಅವಲಂಬಿಸಿರುತ್ತದೆ. ಸೋಮಾರಿಯಾದ ರೈತ ಶ್ರದ್ಧೆವಹಿಸಿ ದುಡಿಯದಿದ್ದರೆ ಎಂತಹ ಫಲವತ್ತಾದ ಭೂಮಿಯಾದರೂ ಹೆಚ್ಚು ಉತ್ಪಾದನೆ ಕೊಡಲಾರದು. ಯಂತ್ರೋಪಕರಣಗಳು, ಗೊಬ್ಬರ, ಉತ್ಕೃಷ್ಟಬೀಜಗಳು, ನೀರು ಇತ್ಯಾದಿ ಉತ್ಪಾದನಾಂಶಗಳು ಉತ್ಪಾದನೆಯ ಹೆಚ್ಚಳದಲ್ಲಿ ಸಹಾಯಕವಾಗಿವೆ.

(iii) ಭೂಮಿಯ ಭಾಗಗಳು ಫಲವತ್ತತೆ ಹೊಂದಿರುವುದರಿಂದ ಹೆಚ್ಚು ಫಲವತ್ತಾದ ಭೂಮಿಗಳು ಹೆಚ್ಚು ಉತ್ಪನ್ನ ಪಡೆಯುತ್ತವೆಂದು ರಿಕಾರ್ಡೋ ಅಭಿಪ್ರಾಯ ಪಟ್ಟಿರುವನು. ಅವು ಗೇಣಿಯನ್ನು ಕೊಡಬೇಕಾಗುತ್ತದೆ. ಇಂತಹ ಗೇಣಿ ಇಲ್ಲದ ಅಂಚಿನ ಭೂಮಿಯ ಉತ್ಪಾದನೆಗೂ ಮತ್ತು ಆ ಭೂಮಿಗಿಂತ ಉತ್ತಮವಾಗಿರುವ ಭೂಮಿಯ ಉತ್ಪಾದನೆಗೆ ಇರುವ ವ್ಯತ್ಯಾಸಕ್ಕೆ ಸಮ ಎಂದು ವಾದಿಸಿರುವನು. ಉತ್ತಮ ಭೂಮಿಯನ್ನು ಸಾಗುವಳಿ ಮಾಡುವವರು ಮಾಲೀಕರಿಗೆ ಗೇಣಿಯನ್ನು ಕೊಡಬೇಕಾಗುತ್ತದೆ. ಆದರೆ ಇದು ಸರಿಯಲ್ಲವೆಂಬುದು ಟೀಕಾಕಾರರ ಅಭಿಪ್ರಾಯ. ಎಲ್ಲ ಭೂಮಿಗಳು ಸಮನಾದ ಫಲವತ್ತತೆಯನ್ನು ಹೊಂದಿದ್ದರೂ ಸಹ ಗೇಣಿಯು ಉದ್ಭವಿಸಬಹುದು. ಗೇಣಿ ಇಲ್ಲದ ಭೂಮಿಯೇ ಇಲ್ಲ. ಭೂಮಿಯು

ಕೊರತೆಯ ವಸ್ತು. ಆದರ ವಿಸ್ತೀರ್ಣವನ್ನು ಹೆಚ್ಚಿಸಲಾಗುವುದಿಲ್ಲ. ಭೂಮಿಗೆ ಗೇಣಿ ಕೊಡಲು ಮುಖ್ಯ ಕಾರಣ ಭೂಮಿಯ ಪೂರೈಕೆಯು ಅದಕ್ಕಿರುವ ಬೇಡಿಕೆಗಿಂತ ಕಡಮೆ ಇರುವುದು (ಬೇಡಿಕೆ < ಪೂರೈಕೆ).

ಆದ್ದರಿಂದ ಭೂಮಿಯ ಫಲವತ್ತತೆಗೆ ಗೇಣಿಯನ್ನು ಕೊಡದಿದ್ದರೂ ಅದು ಕೊರತೆಯಲ್ಲಿರುವುದರಿಂದ ಗೇಣಿ ಕೊಡಬೇಕಾಗುತ್ತದೆ.

(iv) ರಿಕಾರ್ಡೋ ಪ್ರಕಾರ ಗೇಣಿಯು ಬೆಲೆಯಲ್ಲಿ ಸೇರುವುದಿಲ್ಲ. ಆದರೆ ಇದು ತಪ್ಪು ಎಂಬುದು ಕೆಲವರ ಅಭಿಮತ. ಉತ್ಪಾದಕನು ಗೇಣಿಯನ್ನು ತನ್ನ ಉತ್ಪಾದನೆಯ ವೆಚ್ಚದಲ್ಲಿ ಸೇರಿಸಿ ಗೇಣಿಯನ್ನು ನಿರ್ಧರಿಸುತ್ತಾನೆ. ಆಧುನಿಕ ಅರ್ಥ ಶಾಸ್ತ್ರಜ್ಞರ ಪ್ರಕಾರ ಗೇಣಿ ಉತ್ಪಾದನಾ ವೆಚ್ಚದ ಒಂದು ಭಾಗ. ಉತ್ಪಾದಕ ತಾನು ಕೊಟ್ಟ ಗೇಣಿಯನ್ನು ಇತರ ವೆಚ್ಚಗಳಿಂದ ಬಂಡವಾಳದ ಮೇಲಿನ ಬಡ್ಡಿ, ಕೂಲಿಗಳನ್ನು ಹಾಗೂ ಲಾಭವನ್ನು ಗಣನೆಯಲ್ಲಿಟ್ಟುಕೊಂಡು ಬೆಲೆಯನ್ನು ನಿರ್ಧರಿಸುತ್ತಾನೆ. ಆದ್ದರಿಂದ ಬೆಲೆಯಲ್ಲಿ ಗೇಣಿಯೂ ಸೇರುತ್ತದೆ.

ಆಧುನಿಕ ಅರ್ಥಶಾಸ್ತ್ರಜ್ಞನ ಪ್ರಕಾರ ಗೇಣಿಯ ಮೂಲವು ಭೂಮಿಯ ಅಭಾವ ದಿಂದಾದರೆ, ರಿಕಾರ್ಡೋ ಪ್ರಕಾರ ಭೂಮಿಯ ಫಲವತ್ತತೆಯಿಂದ ಭೂಗೇಣಿ ಉದ್ಭವ ವಾಗುತ್ತದೆ.

ಕೂಲಿ

ವಸ್ತುಗಳನ್ನು ಉತ್ಪಾದಿಸಲು ಉತ್ಪಾದನೆಯ ಎರಡನೆಯ ಅಂಶವಾದ ಶ್ರಮಕ್ಕೆ ಕೊಡುವ ಪ್ರತಿಫಲವೇ ಕೂಲಿ. ಅಂದರೆ ಉತ್ಪಾದನೆಯಲ್ಲಿ ಪರಿಶ್ರಮ ಶಕ್ತಿಗಾಗಿ ಕೂಲಿಯನ್ನು ಕೊಡಲಾಗುತ್ತದೆ. ಕಾರ್ಮಿಕರು ತಮ್ಮ ಶಕ್ತಿ, ಸಾಮರ್ಥ್ಯ ಮತ್ತು ಕೌಶಲಗಳನ್ನು ಒಡೆಯನ ಅಥವಾ ಮಾಲೀಕನ ವಶಕ್ಕೆ ಒಪ್ಪಿಸಿ ಅದಕ್ಕೆ ಪ್ರತಿಯಾಗಿ ಸಂಭಾವನೆಯನ್ನು ಪಡೆಯುತ್ತಾರೆ. ಕಾರ್ಮಿಕರ ದುಡಿಮೆಯಿಂದ ಲಭ್ಯವಾದ ಉತ್ಪನ್ನದ ಮೊತ್ತಕ್ಕೆ ಅನುಗುಣವಾಗಿ ಅವರಿಗೆ ಕೂಲಿಯನ್ನು ನಿರ್ಧರಿಸಲಾಗುತ್ತದೆ. ಕಾರ್ಮಿಕರ ಕೌಶಲ ಮತ್ತು ಶಕ್ತಿ ಸಾಮರ್ಥ್ಯಗಳ ಬಳಕೆಯ ವಿಧಾನವು ಒಡೆಯರಿಗೆ ಬಿಟ್ಟದ್ದು. ಶ್ರಮಿಕನು ತನ್ನ ಶ್ರಮವನ್ನು ಸಲ್ಲಿಸಿದ್ದಕ್ಕಾಗಿ ಅವನಿಗೆ ವಿತರಣೆಯಲ್ಲಿ ಕೊಡುವ ಸಂಭಾವನೆಯೇ ಕೂಲಿ. ಕೂಲಿಯನ್ನು ಜೀತ, ವೇತನ, ಮಜೂರಿ ಎಂದೂ ಕರೆಯುತ್ತಾರೆ. ಒಡೆಯ ಅಥವಾ ಮಾಲೀಕನು ನೌಕರನಿಗೆ ಅವನ ದೈಹಿಕ ಸೇವೆಗೆ ಕೊಡುವ ಹಣವನ್ನು ಕೂಲಿ ಎಂಬುದಾಗಿ ಕರೆಯುವರು. ಸಾಮಾನ್ಯವಾಗಿ 'ಕೂಲಿ' ಎಂದರೆ ಆ ದಿನದ ಕೊನೆಯಲ್ಲಿ ಅಥವಾ ವಾರದ ಕೊನೆಯಲ್ಲಿ ನೌಕರನಿಗೆ ಕೊಡುವ ಸಂಭಾವನೆ. ತಿಂಗಳಿಗೊಮ್ಮೆ ಕೊಡುವ ಸಂಭಾವನೆಗೆ ವೇತನ, ಸಂಬಳ, ಪಗಾರ

ಎಂಬುದಾಗಿ ಕರೆಯುವರು. ಅರ್ಥಶಾಸ್ತ್ರದಲ್ಲಿ 'ಕೂಲಿ'ಯು ಸಾಮಾನ್ಯ ದರ್ಜೆಯ ಕೆಲಸಗಾರನಿಗೂ, ಇಂಜಿನಿಯರ್‌ಗೂ ಅವರವರ ಶ್ರಮಕ್ಕೆ ಕೊಡುವ ಸಂಭಾವನೆಗಳಿಗೂ ಅನ್ವಯಿಸುವುದು.

ಕೂಲಿಯನ್ನು ಕೊಡುವ ಪದ್ಧತಿಗಳು : ಸಾಮಾನ್ಯವಾಗಿ ಎಲ್ಲ ರಾಷ್ಟ್ರಗಳಲ್ಲೂ ಕೂಲಿಯನ್ನು ಹಣದ ರೂಪದಲ್ಲಿ ಕೊಡಲಾಗುತ್ತದೆ. ಆದರೂ ದವಸಧಾನ್ಯಗಳನ್ನಾಗಲೀ ಅಥವಾ ಇತರ ವಸ್ತುಗಳನ್ನಾಗಲೀ ಕೂಲಿಗೆ ಬದಲಾಗಿ ಕೊಡುವುದುಂಟು. ಅಂದರೆ ಕೂಲಿಯನ್ನು ಹಣದ ರೂಪದಲ್ಲಿ ಕೊಡಬಹುದು ಅಥವಾ ವಸ್ತುಗಳ ರೂಪದಲ್ಲಾದರೂ ಕೊಡಬಹುದು. ಒಬ್ಬ ಕೂಲಿಯವನಿಗೆ ಒಂದು ದಿನಕ್ಕೆ 4 ರೂಪಾಯಿ ಕೊಡಬಹುದು ಅಥವಾ ಹಣದ ಬದಲು ಎರಡು ಕೆಜಿ ಜೋಳವನ್ನು ಕೊಡಬಹುದು.

ಕೂಲಿಯನ್ನು ವೇಳೆಗೆ ತಕ್ಕಂತೆ ಅಥವಾ ಕೆಲಸಕ್ಕೆ ತಕ್ಕಂತೆ ಕೊಡಬಹುದು. ಕಾರ್ಮಿಕನಿಗೆ ಒಂದು ಗಂಟೆಗೆ ಇಷ್ಟು ಎಂಬುದಾಗಿ ಕೂಲಿ ಕೊಡಬಹುದು. ಒಂದು ದಿನಕ್ಕೆ, ಒಂದು ವಾರಕ್ಕೆ, ಒಂದು ತಿಂಗಳಿಗೆ ಇಷ್ಟು ಎಂದು ನಿರ್ಧರಿಸಿ ಕೂಲಿಯನ್ನು ಕೊಟ್ಟರೆ ಅದು ವೇಳೆಗೆ ತಕ್ಕ ಕೂಲಿಯಾಗುತ್ತದೆ. ಅದೇ ರೀತಿ ಕೆಲಸದ ಪ್ರಮಾಣವನ್ನು ಲೆಕ್ಕಕ್ಕೆ ತೆಗೆದುಕೊಂಡು ಇಷ್ಟು ಕೂಲಿ ಎಂದು ನೀಡಿದರೆ ಅದು ಕೆಲಸಕ್ಕೆ ತಕ್ಕ ಕೂಲಿಯಾಗುವುದು. ತಯಾರಾದ ವಸ್ತುಗಳು ಮಾರುಕಟ್ಟೆಯನ್ನು ಸೇರುವುದಕ್ಕೆ ಮೊದಲೇ ಶ್ರಮದ ಉತ್ಪಾದನಾ ಸೇವೆಗಾಗಿ ಪಾವತಿಯಾಗುವುದು, ಕೂಲಿಯ ಒಂದು ವಿಶಿಷ್ಟ ಗುಣ ಎನ್ನಬಹುದು. ವಿವಿಧ ಪ್ರದೇಶಗಳಲ್ಲಿಯ ಕಾರ್ಮಿಕರಿಗೂ, ಕುಶಲ, ಅರೆಕುಶಲ ಕಾರ್ಮಿಕರಿಗೆ ಕೊಡಲಾಗುವ ಕೂಲಿ ದರಗಳು ಬೇರೆ ಬೇರೆಯಾಗಿರುತ್ತವೆ. ಏಕೆಂದರೆ ಕಾರ್ಮಿಕರ ಕೆಲಸಗಳು ಹಲವಾರು ಬಗೆ. ಪ್ರಾವೀಣ್ಯತೆ, ತರಬೇತಿ, ವಿದ್ಯೆಗಳಿಂದ ಕೂಡಿದ್ದು ಅತಿದಕ್ಷತೆಯ ಅವಶ್ಯಕತೆ ಉಳ್ಳ ಕೆಲಸಗಳು ಕೆಲವಾದರೆ ಮತ್ತೆ ಕೆಲವು ಯಾವು ಬೇಕಾದರೂ ಮಾಡಬಹುದಾದಂತಹ ಕೆಲಸಗಳೂ ಇರುತ್ತವೆ. ವೈವಿಧ್ಯಮಯ ಕೆಲಸಗಳಿಗೆ ತಕ್ಕಂತೆ ಕೂಲಿಯ ದರಗಳೂ ಭಿನ್ನವಾಗಿರುತ್ತವೆ.

ಕೂಲಿಯು ಕೃಷಿ ಅಥವಾ ಉದ್ದಿಮೆಗಳ ಉತ್ಪಾದನಾ ವೆಚ್ಚದ ಬಹು ಮುಖ್ಯ ಅಂಗವಾಗಿದೆ. ಇವೆರಡರ ಉತ್ಪನ್ನವು ಬಹುಮಟ್ಟಿಗೆ ಕೂಲಿಯನ್ನೇ ಅವಲಂಬಿಸಿದೆ. ಕೂಲಿಯು ಅನೇಕ ಲಕ್ಷಣಗಳನ್ನು ಹೊಂದಿದೆ. ಅವು ಒಂದನ್ನೊಂದು ಅನುಸರಿಸುವುದಿಲ್ಲ. ಮಾಲೀಕ ಮತ್ತು ಕಾರ್ಮಿಕರ ನಡುವೆ ಆಗಿರುವ ಒಪ್ಪಂದಕ್ಕೆ ಅನುಸಾರವಾಗಿ ಕೂಲಿದರಗಳು ಹುಟ್ಟಿಕೊಳ್ಳುತ್ತವೆ. ಕೂಲಿಯ ದರಗಳು, ಕಾರ್ಮಿಕರ ಜೀವನ ಮಟ್ಟವನ್ನು ನಿರ್ಧರಿಸುವ ಮುಖ್ಯ ಅಂಶಗಳಾಗಿವೆ. ಇವು ಒಂದೇ ರೀತಿ ಇರುವುದಿಲ್ಲ ಹಾಗೂ ಬೇಗ ಬೇಗ ಬದಲಾವಣೆಯನ್ನು ಹೊಂದುವುದಿಲ್ಲ.

ಮಾರುಕಟ್ಟೆಯಲ್ಲಿ ವಸ್ತುಗಳ ಹಾಗೂ ಸೇವೆಗಳ ಬೆಲೆಗಳು ಹೆಚ್ಚು ಕಡಮೆಯಾದಂತೆ ಕೂಲಿಯಲ್ಲಿನ ಮೌಲ್ಯಗಳೂ ವ್ಯತ್ಯಾಸವಾಗುತ್ತವೆ. ಕೂಲಿಯ ಯೋಗ್ಯತೆ ವಸ್ತುಗಳ ಬೆಲೆಗಳಿಂದ ನಿರ್ಧಾರವಾಗುತ್ತದೆ. ವಸ್ತುಗಳ ಬೆಲೆಗಳು ಏರಿದರೆ ಕೂಲಿಯ ಮೌಲ್ಯ ಕಡಮೆಯಾಗುತ್ತದೆ. ಆದ್ದರಿಂದ ಬೆಲೆ ಏರಿಕೆಯಿಂದ ಉಂಟಾಗುವ ನಷ್ಟವನ್ನು ಸರಿತೂಗಿಸಲು ಕಾರ್ಮಿಕರಿಗೆ ಭತ್ಯಗಳನ್ನು ಕೊಡಬೇಕಾಗುತ್ತದೆ. ಇದೂ ಕೂಲಿಗೇ ಸೇರುತ್ತದೆ. ಹಾಗೆಯೇ ಉದ್ದಿಮೆಯು ಲಾಭ ಪಡೆದಾಗ, ಆ ಲಾಭಕ್ಕೆ ಕಾರ್ಮಿಕರ ದಕ್ಷತೆಯೂ ಕಾರಣವಾಗಿರುವುದರಿಂದ ಬಂದ ಲಾಭದಲ್ಲಿ ಸ್ವಲ್ಪ ಭಾಗವನ್ನು ಕಾರ್ಮಿಕರಲ್ಲಿ ಹಂಚಲಾಗುತ್ತದೆ. ಈ ಸಂಪಾದನೆ ಹಣದ ರೂಪದಲ್ಲಿ ಕಾರ್ಮಿಕರಿಗೆ ದೊರೆಯುತ್ತದೆ.

ಕೂಲಿಯು ರಾಷ್ಟ್ರದ ಆರ್ಥಿಕ ಹಿತದೃಷ್ಟಿಯಿಂದ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಅತ್ಯಂತ ಹಿರಿದಾದುದಾಗಿದೆ. ಒಂದು ದೃಷ್ಟಿಯಲ್ಲಿ ಕೂಲಿಯು ವರಮಾನವಾದರೆ, ಇನ್ನೊಂದು ದೃಷ್ಟಿಯಲ್ಲಿ ಉತ್ಪಾದನಾ ವೆಚ್ಚ. ಈ ಎರಡು ದೃಷ್ಟಿಯಿಂದಲೂ ಕೂಲಿಯು ರಾಷ್ಟ್ರದ ಸಂಪತ್ತಿನ ಹಂಚಿಕೆಯನ್ನು ಮತ್ತು ಜನರ ಜೀವನ ಮಟ್ಟವನ್ನು ರೂಪಿಸುತ್ತದೆ.

ವಾಸ್ತವಿಕಕೂಲಿ ಹಾಗೂ ಹಣದಕೂಲಿ : ಕೂಲಿಯನ್ನು ಹಣದ ರೂಪದಲ್ಲಿ ಕೊಟ್ಟರೆ ಅಂತಹ ಕೂಲಿಗೆ ನಾಮಮಾತ್ರ ಕೂಲಿ ಅಥವಾ ಹಣದರೂಪದ ಕೂಲಿ ಎಂದು ಕರೆಯುತ್ತಾರೆ. ಈ ಕೂಲಿಯು ಕೂಲಿಕಾರರ ನಿಜವಾದ ಆರ್ಥಿಕಸ್ಥಿತಿಯನ್ನು ಸೂಚಿಸುವುದಿಲ್ಲ. ಉದಾಹರಣೆಗೆ ಒಬ್ಬನಿಗೆ ತಿಂಗಳಿಗೆ 400 ರೂಪಾಯಿಗಳ ಸಂಬಳ ದೊರೆತರೆ ಅದು ಹಣದ ರೂಪದ ಕೂಲಿ ಅಥವಾ ನಾಮಮಾತ್ರ ಕೂಲಿಯಾಗಿರುತ್ತದೆ. ವಾಸ್ತವಿಕ ಕೂಲಿ ಎಂದರೆ ಹಣದರೂಪದ ಕೂಲಿಯಿಂದ ಕೊಳ್ಳಬಹುದಾದ ವಸ್ತುಗಳ ಸೇವೆಗಳ ಪ್ರಮಾಣವನ್ನು ಸೂಚಿಸುವ ಕೂಲಿ. ಈ ಕೂಲಿ ಕೂಲಿಯವನ ನಿಜವಾದ ಆರ್ಥಿಕ ಸ್ಥಿತಿಯನ್ನು ಸೂಚಿಸುತ್ತದೆ. 400 ರೂಪಾಯಿಗಳ ಕೂಲಿಯಿಂದ ಎಷ್ಟು ವಸ್ತುಗಳನ್ನು, ಸೇವೆಗಳನ್ನು ಕೊಳ್ಳಬಹುದೆಂಬುದನ್ನು ವಾಸ್ತವಿಕ ಕೂಲಿಯು ತೋರಿಸುತ್ತದೆ. ಆದ್ದರಿಂದ ಹಣದರೂಪದ ಕೂಲಿಗಿಂತಲೂ ವಾಸ್ತವಿಕ ಕೂಲಿಯೇ ಬಹಳ ಮುಖ್ಯವಾದುದು. ಹಣವು ವಸ್ತುಗಳನ್ನು ಕೊಳ್ಳುವ ಒಂದು ಸಾಧನ.

ವಾಸ್ತವಿಕ ಹಾಗೂ ಹಣದ ರೂಪದ ಕೂಲಿಗಳು ಯಾವಾಗಲೂ ಒಂದೇ ಆಗಿರುವುದಿಲ್ಲ. ಹಣದ ಕೊಳ್ಳುವಶಕ್ತಿಯು ಬದಲಾಗುತ್ತಿರುತ್ತದೆ. ಬೆಲೆಗಳು ಹೆಚ್ಚಿರುವಾಗ ಹಣದ ಕೊಳ್ಳುವ ಶಕ್ತಿ ಕಡಮೆ ಇರುತ್ತದೆ. ಬೆಲೆಗಳು ಕಡಮೆ ಇರುವಾಗ ಹಣದ ಕೊಳ್ಳುವಶಕ್ತಿಯು ಹೆಚ್ಚು. 1960 ರಲ್ಲಿ ಒಬ್ಬನ ಕೂಲಿ ತಿಂಗಳಿಗೆ 100 ರೂಪಾಯಿಗಳಿದ್ದು, 1975 ರಲ್ಲಿ 200 ರೂಪಾಯಿಗಳಾಗಿವೆ. ಅಂದರೆ ಅವನ ಹಣದ ಕೂಲಿಯು

100 ರೂಪಾಯಿಗಳಿಂದ 200 ರೂಪಾಯಿಗಳಿಗೆ, ಶಕ್ತಿಗಿಂತ ಹೆಚ್ಚಿದೆ. 100 ರೂಪಾಯಿಗಳ ಸಂಬಳವಿದ್ದಾಗ ಅವನಿಗೆ ಒಂದು ಚೀಲ ಗೋಧಿ ಬಂದರೆ ಈಗ ಅವನಿಗೆ 200 ರೂಪಾಯಿ ಕೊಟ್ಟರೂ ಅಷ್ಟೇ ಗೋಧಿ ಬರುತ್ತದೆ. ಹಣದ ರೂಪದ ಕೂಲಿಯು ದ್ವಿಗುಣಗೊಂಡರೂ ವಾಸ್ತವಿಕ ಕೂಲಿಯೂ ಹೆಚ್ಚದೆ ಅದೇ ಮಟ್ಟದಲ್ಲಿದೆ. ಅಂದರೆ ಕೂಲಿಕಾರರ ನಾಮಮಾತ್ರ ಕೂಲಿಯು ಹೆಚ್ಚಾಗಿದ್ದಾಗ್ಯೂ ಬೆಲೆಗಳ ಏರಿಕೆಯಿಂದ ವಾಸ್ತವಿಕ ಕೂಲಿ ಕಡಮೆಯಾಗಿದೆ. ಆದರೆ ಕೂಲಿಕಾರರು ಕಾಲಕ್ಕೆತಕ್ಕಂತೆ ಹೆಚ್ಚಿನ ಕೂಲಿಯನ್ನು ಹಣದ ರೂಪದಲ್ಲಿ ಬೇಡುವರು. ಕೂಲಿಯು ಕಡಮೆಯಾಗುವುದನ್ನು ಅವರು ಬಯಸುವುದಿಲ್ಲ. ಆದರೆ ಅವರು ವಾಸ್ತವಿಕ ಕೂಲಿಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಇದರಿಂದ ಕೂಲಿಕಾರರಿಗೆ ವಸ್ತುಗಳು ಕಡಮೆ ಪ್ರಮಾಣದಲ್ಲಿ ದೊರೆತು ಹಾನಿಯಾಗುವುದೇ ಹೊರತು ಲಾಭವಾಗುವುದಿಲ್ಲ.

ಕೂಲಿಯನ್ನು ನಿರ್ಧರಿಸುವ ಬಗ್ಗೆ ಅರ್ಥಶಾಸ್ತ್ರಜ್ಞರು ಅನೇಕ ಸಿದ್ಧಾಂತಗಳನ್ನು ರಚಿಸಿದ್ದಾರೆ. ಅಂತಹವುಗಳಲ್ಲಿ (i) ಜೀವನಾಧಾರ ಕೂಲಿಯಸಿದ್ಧಾಂತ (ii) ಕೂಲಿಯ ನಿಧಿಯಸಿದ್ಧಾಂತ (iii) ಸೀಮಾಂತ ಉತ್ಪಾದನೆಯ ಸಿದ್ಧಾಂತ ಹಾಗೂ (iv) ಆಧುನಿಕ ಸಿದ್ಧಾಂತಗಳು ಮುಖ್ಯವಾಗಿವೆ.

(i) **ಜೀವನಾಧಾರ ಕೂಲಿಯ ಸಿದ್ಧಾಂತ :** ಜೀವನಾಧಾರ ಕೂಲಿಯ ಸಿದ್ಧಾಂತವನ್ನು ಕಠಿಣ ಕೂಲಿಯ ಸಿದ್ಧಾಂತ ಎಂಬುದಾಗಿ ಕರೆಯುತ್ತಾರೆ. ಮೊದಲಿಗೆ ಈ ತತ್ವವನ್ನು ಫ್ರಾನ್ಸಿನ ಫಿಸಿಯೋಕ್ರಾಟಿಕ್ ಬರಹಗಾರರು ಪ್ರತಿಪಾದಿಸಿದರು. ಈ ತತ್ವವು ಬಹಳ ಸರಳವಾದ ತತ್ವ. ಆಡಂ ಸ್ಮಿತ್‌ರವರು ಇದನ್ನು ತಮ್ಮ ವಿವರಣೆಯೊಂದಿಗೆ ಪ್ರಚಾರದಲ್ಲಿ ತಂದರು. ಜೀವನಾಧಾರ ಕೂಲಿಯ ಸಿದ್ಧಾಂತವು ಟಿ. ಆರ್. ಮಾಲ್ಥಸ್‌ನ ಜನಸಂಖ್ಯಾತತ್ವದ ಪ್ರಕಾರ ಕಾರ್ಮಿಕರ ಪರಿಶ್ರಮದ ಮತ್ತು ಅವನ ಕುಟುಂಬದವರ ಜೀವನವನ್ನು ಸಾಗಿಸಲು ಅವಶ್ಯಕವಾಗಿ ಬೇಕಾಗುವ ಆಹಾರ, ಬಟ್ಟೆ, ವಸತಿಗಳಿಗೆ ಸಾಕಾಗುವಷ್ಟು ಕೂಲಿ ಇರಬೇಕು. ಕಾರ್ಮಿಕನಿಗೆ ದೊರೆಯುವ ವೇತನ ಅವನಿಗೆ ಹಾಗೂ ಕುಟುಂಬದವರಿಗೆ ಹೊಟ್ಟೆಪಾಡನ್ನು ನೀಗಲು ಮಾತ್ರ ಸಾಕಾಗುತ್ತದೆ. ಅಂದರೆ ಇದು ಕನಿಷ್ಠವೇತನ. ಈ ವೇತನದಿಂದ ಕಾರ್ಮಿಕನು ಜೀವಿಸಬಹುದು. ಆದ್ದರಿಂದ ಜೀವನಾವಶ್ಯಕತೆಗಿಂತಲೂ ಹೆಚ್ಚು ಅಥವಾ ಕಡಮೆ ಕೂಲಿಯನ್ನು ಕೊಡಬಾರದು. ಜೀವನದ ವೆಚ್ಚದಲ್ಲಿ ಬದಲಾವಣೆಗಳಾದಂತೆ, ಕಾರ್ಮಿಕರ ಹಣದಿಂದ ಕೊಳ್ಳಲಾಗುವ ಪದಾರ್ಥಗಳ ಮತ್ತು ಸೇವಾಕ್ರಿಯೆಗಳ ಒಟ್ಟು ಪ್ರಮಾಣವು ಸದಾಕಾಲ ಒಂದೇರೀತಿ ಇರಬೇಕು. ಈ ಜೀವನಾಧಾರಮಟ್ಟದ ಮೇಲೆ ಕೂಲಿಯು ಏರಬಾರದು. ಇದು ಮುಖ್ಯವಾಗಿ ಶ್ರಮದ ಪೂರೈಕೆಯ ಸಿದ್ಧಾಂತ. ಈ ಸಿದ್ಧಾಂತದ ಪ್ರಕಾರ ಕಾರ್ಮಿಕ ಮತ್ತು ಅವನ ಕುಟುಂಬದ ಕನಿಷ್ಠ ಜೀವನ ನಿರ್ವಹಣೆಗೆ ಅಗತ್ಯವಾದ ಮಟ್ಟದಲ್ಲಿ ಕೂಲಿ ನೆಲೆಗೊಳ್ಳುತ್ತದೆ. ಕೂಲಿಯು ಜೀವನಾಧಾರ ಮಟ್ಟಕ್ಕಿಂತ ಹೆಚ್ಚಿದ್ದರೆ ಅಂದರೆ

ಯೋಗ್ಯವೇತನ ನೀಡಿದಲ್ಲಿ ಕಾರ್ಮಿಕರು ಹೆಚ್ಚು ಮಕ್ಕಳನ್ನು ಪಡೆಯುತ್ತಾರೆ. ಇದರಿಂದ ಜನಸಂಖ್ಯೆ ಹೆಚ್ಚಾಗಿ ಕಾರ್ಮಿಕರ ಪೂರೈಕೆಯು ಹೆಚ್ಚಾಗುತ್ತದೆ. ಕಾರ್ಮಿಕರ ಪೂರೈಕೆ ಬೇಡಿಕೆಗಿಂತ ಹೆಚ್ಚಾದರೆ ಕೆಲಸಕ್ಕಾಗಿ ಸ್ಪರ್ಧೆ ಉಂಟಾಗಿ ಕೂಲಿಯ ದರ ಕಡಮೆಯಾಗುತ್ತದೆ. ಅಂದರೆ ಕೂಲಿಯದರವು ಮತ್ತೆ ಜೀವನಾಧಾರ ಮಟ್ಟಕ್ಕೆ ಇಳಿಯುತ್ತದೆ. ಜೀವನಾಧಾರ ಮಟ್ಟಕ್ಕಿಂತ ಕಡಮೆ ಕೂಲಿಯನ್ನು ಕೊಟ್ಟರೆ ಕಾರ್ಮಿಕರು ಕಡಮೆ ಮಕ್ಕಳನ್ನು ಪಡೆಯುತ್ತಾರೆ. ಅನೇಕರು ಮದುವೆಯಾಗುವುದರಿಂದ ಜನಸಂಖ್ಯೆಯ ಪ್ರಮಾಣ ಕಡಮೆಯಾಗುತ್ತದೆ. ಏಕೆಂದರೆ ಮಕ್ಕಳನ್ನು ಆರೈಕೆ ಮಾಡುವ ಶಕ್ತಿ ಇಲ್ಲದಿರುವುದರಿಂದ ಹೆಚ್ಚು ಮಕ್ಕಳನ್ನು ಪಡೆಯಲು ಇಚ್ಛಿಸುವುದಿಲ್ಲ. ಕಡಮೆ ಕೂಲಿಯಿಂದಾಗಿ ಕಾರ್ಮಿಕರ ಪೋಷಣೆಯು ಸಮರ್ಪಕವಾಗಿ ಆಗುವುದಿಲ್ಲ. ಇದರಿಂದ ಮರಣದ ಸಂಖ್ಯೆ ಏರುತ್ತದೆ. ಆಗ ಕಾರ್ಮಿಕರ ಪೂರೈಕೆಯು ಕಡಮೆಯಾಗಿ ಕೂಲಿಯ ದರವು ಜೀವನಾಧಾರ ಕೂಲಿಗೆ ಸಮನಾಗುತ್ತದೆ.

ಟೀಕೆಗಳು : ಜೀವನಾಧಾರ ಸಿದ್ಧಾಂತವನ್ನು ಅತ್ಯಂತ ನಿರಾಶಾದಾಯಕ ಸಿದ್ಧಾಂತವೆಂದು ಅನೇಕರು ಟೀಕಿಸಿದ್ದಾರೆ. ಜೀವನಾಧಾರ ಕೂಲಿಯ ನಿಯಮವು ಥಾಮಸ್‌ಮಾಲ್ಥಸ್‌ನ ಜನಸಂಖ್ಯೆಯ ಸಿದ್ಧಾಂತವನ್ನು ಅವಲಂಬಿಸಿದೆ. ಈ ನಿಯಮದ ಪ್ರಕಾರ ಕೂಲಿಯದರ ಹೆಚ್ಚಾದಂತೆ ಜನಸಂಖ್ಯೆ ಹೆಚ್ಚಾಗುತ್ತದೆ. ಆದರೆ ಈ ಅಂಶ ನಿಜವಲ್ಲ. ಏಕೆಂದರೆ ಕೂಲಿ ಹೆಚ್ಚುವುದರಿಂದ ಕಾರ್ಮಿಕವರ್ಗದ ಸಂಖ್ಯೆ ಹೆಚ್ಚಾಗುವುದೆಂಬ ಭಾವನೆ ಸರಿಯಲ್ಲ. ಕೂಲಿ ಹೆಚ್ಚಾದಾಗ ಕೂಲಿಕಾರರು ತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಜೀವನಮಟ್ಟ ಏರಿದಂತೆ ಕಾರ್ಮಿಕರು ತಮ್ಮ ಕುಟುಂಬಗಳ ಸಂಖ್ಯೆಯನ್ನು ಅಂದರೆ ಮಕ್ಕಳ ಸಂಖ್ಯೆಯನ್ನು ಕಡಮೆಮಾಡುತ್ತಾರೆ. ದಂಪತಿಗಳು ಹೆಚ್ಚು ಮಕ್ಕಳನ್ನು ಪಡೆಯಲು ಇಚ್ಛಿಸದೆ ಕುಟುಂಬಯೋಜನೆಯನ್ನು ಪಾಲಿಸುತ್ತಾರೆ. ಮುಂದೆ ಹೆಚ್ಚು ಕೂಲಿಯನ್ನು ಕೊಡುವುದರಿಂದ ಕಾರ್ಮಿಕರ ಕಾರ್ಯದಕ್ಷತೆಯು ಹೆಚ್ಚಿ ಅಧಿಕ ಉತ್ಪಾದನೆಯನ್ನು ಪಡೆಯಬಹುದು. ಹೆಚ್ಚು ಉತ್ಪಾದನೆಯಾಗುವುದರಿಂದ ಮಾಲೀಕನಿಗೆ ಲಾಭ ಸಿಗುತ್ತದೆ. ಕಳೆದ ಒಂದು ಶತಮಾನದಲ್ಲಿ ಎಲ್ಲ ದೇಶಗಳಲ್ಲಿ ಕಾರ್ಮಿಕ ವರ್ಗಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಕೂಲಿ ಹೆಚ್ಚಾಗುತ್ತಿದೆ. ಆದ್ದರಿಂದ ಈ ತತ್ತ್ವವು ದೋಷಪೂರಿತವಾಗಿದೆ.

ಇಡೀ ಕಾರ್ಮಿಕವರ್ಗದ ಜೀವನಾಧಾರಮಟ್ಟವು ಒಂದೇ ಆಗಿರುತ್ತದೆ ಎನ್ನುವುದು ಸರಿಯಲ್ಲ. ಏಕೆಂದರೆ ಬೇರೆ ಬೇರೆ ಉದ್ಯೋಗಗಳಲ್ಲಿ ಇದು ವ್ಯತ್ಯಾಸವಾಗುತ್ತಿರುತ್ತದೆ. ಈ ಸಿದ್ಧಾಂತದಲ್ಲಿ ಕಾರ್ಮಿಕರ ಪೂರೈಕೆಗೆ ಅನುಗುಣವಾಗಿ ಕೂಲಿಯು ವ್ಯತ್ಯಾಸಗೊಳ್ಳುತ್ತದೆ ಎಂದು ಹೇಳಲಾಗಿದೆ. ಆದರೆ ಬೇಡಿಕೆಯ ಬಗ್ಗೆ ಈ ಸಿದ್ಧಾಂತವು ಏನನ್ನೂ ಹೇಳುವುದಿಲ್ಲ. ಕಾರ್ಮಿಕರನ್ನು ನೇಮಿಸಿಕೊಳ್ಳುವ ಮಾಲೀಕರು ಅವರ ಶ್ರಮದಿಂದ ತಮಗೆ ದೊರಕುವ ಲಾಭದ ಬಗ್ಗೆ ಹೆಚ್ಚು ಗಮನ ಕೊಡುತ್ತಾರೆ. ಆದ್ದರಿಂದ

ಈ ಸಿದ್ಧಾಂತವು ಹೇಳುವಂತೆ ಮಾಲೀಕರು ಕಾರ್ಮಿಕರ ಜೀವನಾಧಾರವನ್ನೇ ಪರಿಗಣಿಸಿ ಕೂಲಿಯನ್ನು ಕೊಡುತ್ತಾರೆನ್ನುವುದು ಸಮಂಜಸವಲ್ಲ.

ಈ ಸಿದ್ಧಾಂತ ದೀರ್ಘಕಾಲಿಕ ಬದಲಾವಣೆಗಳನ್ನು ವಿವೇಚಿಸುತ್ತದೆ. ಆದರೆ ಪ್ರತಿವರ್ಷವೂ ಸಂಭವಿಸುವ ಬದಲಾವಣೆಗಳನ್ನು ಇದು ವಿವೇಚಿಸುವುದಿಲ್ಲ. ಈ ರೀತಿ ಈ ಸಿದ್ಧಾಂತವು ಅನೇಕ ದೋಷಗಳನ್ನು ಹೊಂದಿದ್ದರೂ, ಈ ನಿಯಮದಲ್ಲಿ ನಿಜಾಂಶವಿದೆ. ಕೂಲಿಯು ಜೀವನಾಧಾರಕ್ಕಿಂತ ಕಡಮೆಯಾಗಬಾರದು. ಕನಿಷ್ಟ ಕೂಲಿ ಕಾರ್ಮಿಕರ ಹಕ್ಕು. ಈ ಕನಿಷ್ಟ ಕೂಲಿಯು ಜೀವನ ವೆಚ್ಚ ಏರಿದಂತೆ ಬದಲಾಯಿಸಬೇಕು.

(ii) ಕೂಲಿಯ ನಿಧಿಯ ಸಿದ್ಧಾಂತ : ಜೆ. ಎಸ್. ಮಿಲ್‌ನು ಕೂಲಿಯ ನಿಧಿಯ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ. ಈ ತತ್ವವು ಜೀವನಾಧಾರ ಕೂಲಿಯ ತತ್ವದಿಂದ ವಿಕಾಸಗೊಂಡಿದ್ದು ಅದಕ್ಕಿಂತಲೂ ಉತ್ತಮವಾಗಿದೆ. ಮಿಲ್‌ರವರ ಪ್ರಕಾರ ಕೂಲಿಯದರ ಕೂಲಿಕಾರರಿಗಿರುವ ಬೇಡಿಕೆ ಮತ್ತು ಅವರ ಪೂರೈಕೆಯನ್ನವಲಂಬಿಸಿರುತ್ತದೆ. ಈ ಸಿದ್ಧಾಂತದ ಪ್ರಕಾರ ಕಾರ್ಮಿಕರಿಗೆ ಕೂಲಿಯನ್ನು ಕೊಡಲೋಸುಗ ಪ್ರತಿಯೊಂದು ರಾಷ್ಟ್ರದಲ್ಲಿ ಒಂದು ನಿಧಿ ಯನ್ನು ಮೀಸಲಿಡಲಾಗಿರುತ್ತದೆ. ಈ ನಿಧಿಯನ್ನು ರಾಷ್ಟ್ರದ ಆದಾಯದೊಳಗಿಂದ ನಿಗದಿ ಮಾಡಲಾಗಿರುತ್ತದೆ. ಈ ನಿಧಿಯೇ 'ಕೂಲಿಯ ನಿಧಿ'. ಅಂದರೆ ಕೂಲಿಯನ್ನು ಕೊಡಲು ನಿರ್ದಿಷ್ಟ ಬಂಡವಾಳವನ್ನು ಮೀಸಲಾಗಿಟ್ಟಿರಲಾಗುತ್ತದೆ. ಈ ಬಂಡವಾಳವೇ ಕೂಲಿಯ ನಿಧಿ. ಈ ಬಂಡವಾಳವನ್ನು ಹೆಚ್ಚು ಮಾಡಲೂ, ಕಡಮೆ ಮಾಡಲೂ ಬರುವುದಲ್ಲ. ಈ ನಿಧಿಯನ್ನು ಕಾರ್ಮಿಕರ ಸಂಖ್ಯೆಯಿಂದ ಭಾಗಿಸಿದರೆ ಕೂಲಿಯ ದರವನ್ನು ಕಂಡುಹಿಡಿಯಬಹುದು. ಕೂಲಿಯ ದರವನ್ನು ಕಂಡುಹಿಡಿಯಬಹುದು. ಕೂಲಿಯ ದರವು ಈ ನಿಧಿಯ ಪ್ರಮಾಣ ಮತ್ತು ಜನಸಂಖ್ಯೆ ಇವುಗಳಿಗೆ ಅಧೀನವಾಗಿವೆ. ಈ ಎರಡೂ ಅಂಶಗಳು ಕೂಲಿಯನ್ನು ನಿರ್ಧರಿಸುತ್ತವೆ. ಇಲ್ಲಿ ಜನಸಂಖ್ಯೆ ಎಂದರೆ ಕಾರ್ಮಿಕ ಜನಸಂಖ್ಯೆ. ಬಂಡವಾಳ ಎಂದರೆ ಶ್ರಮವನ್ನು ಕೊಳ್ಳಲು ಮಾಡಿದ ವೆಚ್ಚದ ಭಾಗ. ಇದೇ ಕೂಲಿನಿಧಿ. ಕೂಲಿಕಾರರ ಪೂರೈಕೆ ರಾಷ್ಟ್ರದ ಜನಸಂಖ್ಯೆಯನ್ನಾಧರಿಸಿರುತ್ತದೆ. ಕೂಲಿಯ ನಿಧಿ ಹೆಚ್ಚಾಗಿ ಇದ್ದು ಕಾರ್ಮಿಕರ ಪೂರೈಕೆ ಕಡಮೆ ಇದ್ದರೆ ಕೂಲಿಯದರ ಹೆಚ್ಚಾಗುತ್ತದೆ. ಕೂಲಿಯ ನಿಧಿ ಕಡಮೆ ಇದ್ದು ಕಾರ್ಮಿಕರ ಪೂರೈಕೆ ಹೆಚ್ಚಾಗಿ ಇದ್ದರೆ ಕೂಲಿಯದರ ಕಡಮೆಯಾಗುತ್ತದೆ. ಕಾರ್ಮಿಕರಿಗೆ ಹೆಚ್ಚಿನ ಕೂಲಿಬೇಕಾಗಿದ್ದರೆ ಅವರು ತಮ್ಮ ಸಂಖ್ಯೆಯನ್ನು ಕಡಮೆ ಮಾಡಿಕೊಳ್ಳಬೇಕು. ಕಾರ್ಮಿಕರ ಸಂಖ್ಯೆ ಕಡಮೆ ಇದ್ದರೆ ಅವರ ಕೂಲಿಯ ದರ ಹೆಚ್ಚಿರುತ್ತದೆ. ಕಾರ್ಮಿಕರ ಸಂಖ್ಯೆ ಹೆಚ್ಚಿದಾಗ ಅವರ ಕೂಲಿಯದರ ಕಡಮೆ ಇರುವುದು.

ಟೀಕೆಗಳು : 'ಕೂಲಿಯ ನಿಧಿ' ಎಂಬುದು ಯಾವ ದೇಶದಲ್ಲಿಯೂ ಇರುವುದಿಲ್ಲ. ವ್ಯಾಪಾರದಲ್ಲಿ ಪರಿಳಿತಗಳಾದಂತೆ ಕೂಲಿಯ ದರವೂ ಬದಲಾಯಿಸುತ್ತದೆ. ಮುಂದೆ ಯಾವ ಉತ್ಪಾದಕನೂ 'ಕೂಲಿಯ ನಿಧಿ' ಎಂದು ಹಣವನ್ನು ಪ್ರತ್ಯೇಕವಾಗಿ ತೆಗೆದಿಡುವುದಿಲ್ಲ. ಬಂಡವಾಳದಿಂದಲೇ ಕೂಲಿಯನ್ನು ಕೊಡುತ್ತಾನೆ. ಬಂಡವಾಳವನ್ನು ಹೆಚ್ಚು ಕಡಮೆ ಮಾಡಲು ಬರುತ್ತದೆ. ಲಾಭವು ಹೆಚ್ಚಾದಂತೆ ಉತ್ಪಾದಕನು ಹೆಚ್ಚು ಬಂಡವಾಳ ಕೂಡಿಸುತ್ತಾನೆ ಹಾಗೂ ಹೆಚ್ಚು ಕೂಲಿಯನ್ನು ಕೊಡುತ್ತಾನೆ. ಈ ನಿಯಮದ ಪ್ರಕಾರ ಬೆಳೆಯುವ ಜನಸಂಖ್ಯೆ ಕಾರ್ಮಿಕರ ಪೂರೈಕೆಯನ್ನು ಹೆಚ್ಚಿಸಿ ಅವರ ಕೂಲಿಯ ದರವನ್ನು ಕಡಮೆ ಮಾಡುವುದು. ಆದರೆ ಇದು ನಿಜವಲ್ಲ. ಎಲ್ಲ ದೇಶಗಳಲ್ಲಿ ಜನಸಂಖ್ಯೆ ಹಾಗೂ ಕೂಲಿಯ ದರ ಹೆಚ್ಚಾಗುತ್ತಲೇ ಇರುತ್ತದೆ. ಈ ಸಿದ್ಧಾಂತ ಸಂಕುಚಿತ ತಳಹದಿಯ ಮೇಲೆ ರಚಿತವಾಗಿದ್ದು ಆಧುನಿಕ ಉದ್ದಿಮೆಗಳ ಕ್ಷೇತ್ರದಲ್ಲಿ ಕಂಡುಬರುವ ಕೂಲಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ವಿವರಿಸಲು ಅಸಮರ್ಥವಾಗಿದೆ. ಶ್ರಮದ ಬೇಡಿಕೆಯು ಆರ್ಥಿಕತೆ ಬೆಳೆದಂತೆಲ್ಲ ಹೆಚ್ಚಲೇಬೇಕು. ಆದರೆ ಈ ಬಗ್ಗೆ ಕೂಲಿಯ ನಿಧಿ ಸಿದ್ಧಾಂತ ಏನೂ ಹೇಳುವುದಿಲ್ಲ. ಆದ್ದರಿಂದ ಇದು ಒಂದು ಜಡ ಸಿದ್ಧಾಂತ.

(iii) **ಸೀಮಾಂತ ಉತ್ಪಾದನಾ ಕೂಲಿಯ ಸಿದ್ಧಾಂತ :** ಈ ಸಿದ್ಧಾಂತ ಜೀವನಾಧಾರ ಕೂಲಿಯ ಸಿದ್ಧಾಂತ ಮತ್ತು ಕೂಲಿಯ ಸಿದ್ಧಾಂತಗಳಿಗೆ ಪ್ರತಿಕ್ರಿಯೆಯಾಗಿ ಮೂಡಿಬಂದಿತು. ಈ ಸಿದ್ಧಾಂತವು ಪರಿಪೂರ್ಣ ಪೈಪೋಟಿ ಇದ್ದಾಗ ಒಂದೇ ರೀತಿಯ ಶಕ್ತಿ ಸಾಮರ್ಥ್ಯಗಳನ್ನು ಹೊಂದಿರುವ ಪ್ರತಿಯೊಬ್ಬ ಕಾರ್ಮಿಕನಿಗೂ ಅವನ ಶ್ರಮದಿಂದ ಲಭ್ಯವಾಗುವ ಸೀಮಾಂತ ಉತ್ಪನ್ನದ ಮೌಲ್ಯಕ್ಕೆ ಸಮನಾಗಿ ಕೂಲಿಯು ನೆಲೆಗೊಳ್ಳುತ್ತದೆ ಎಂದು ಹೇಳುತ್ತದೆ. ಸೀಮಾಂತ ಉತ್ಪನ್ನವೆಂದರೆ ಉತ್ಪಾದನೆಯಲ್ಲಿ ಪಾಲುಗೊಳ್ಳುವ ಇತರ ಉತ್ಪಾದನಾಂಶಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲದಿದ್ದು, ಕಾರ್ಮಿಕರ ಸಂಖ್ಯೆಯನ್ನು ಇನ್ನೊಬ್ಬನಿಂದ ಅಧಿಕಗೊಳಿಸಿದಾಗ ಒಟ್ಟು ಉತ್ಪತ್ತಿಯಲ್ಲಾಗುವ ಹೆಚ್ಚಳ. ಸೀಮಾಂತ ಉತ್ಪನ್ನವನ್ನು ಮಾರುಕಟ್ಟೆಯಲ್ಲಿ ವಿಕ್ರಯಿಸಲಾಗುವ ಬೆಲೆಯು ಶ್ರಮದ ಸೀಮಾಂತ ಮೌಲ್ಯ ಎನ್ನಿಸಿಕೊಳ್ಳುತ್ತದೆ. ಅಂದರೆ ಕೂಲಿಯ ಬೆಲೆ ಅಥವಾ ಕಾರ್ಮಿಕನ ಕೂಲಿ ಅವರ ಸೀಮಾಂತ ಉತ್ಪಾದನೆಯನ್ನವಲಂಬಿಸಿರುತ್ತದೆ. ಒಂದು ಪದಾರ್ಥದ ಮೌಲ್ಯವು ಅದರ ಸೀಮಾಂತ ತುಷ್ಟಿಗುಣಕ್ಕೆ ಹೊಂದಿಕೊಳ್ಳುವಂತೆ ಕೂಲಿಯು ಕಾರ್ಮಿಕರ ಉತ್ಪಾದನಾ ಮಟ್ಟಕ್ಕೆ ಸಮನಾಗಿರುತ್ತದೆ. ಕಾರ್ಮಿಕರ ಉತ್ಪಾದನೆ ಹೆಚ್ಚಿದರೆ ಹೆಚ್ಚು ಕೂಲಿಯನ್ನೂ, ಉತ್ಪಾದನಾಶಕ್ತಿ ಕಡಮೆ ಇದ್ದರೆ ಕಡಮೆ ಕೂಲಿಯನ್ನೂ ಪಡೆಯುತ್ತಾರೆ. ಅಂದರೆ ಕೂಲಿಯದರ ಯಾವಾಗಲೂ ಅಂಚಿನ ಉತ್ಪಾದನೆಯ ಬೆಲೆಗೆ ಸಮನಾಗಿರುತ್ತದೆ.

ಪ್ರತಿಯೊಬ್ಬ ಮಾಲೀಕನು ಪರಮಾವಧಿ ಲಾಭ ಹೊಂದಲು ಉತ್ಪಾದನೆಯನ್ನು ಕೈಗೊಳ್ಳುತ್ತಾನೆ. ಕಾರ್ಮಿಕರನ್ನು ಕಾರ್ಖಾನೆಯಲ್ಲಿ ದುಡಿಯಲು ನೇಮಿಸಿಕೊಳ್ಳು

ತ್ತಾನೆ. ಆವರಿಗೆ ಅವರ ಉತ್ಪಾದನೆಗೆ ತಕ್ಕಂತೆ ಸಂಭಾವನೆ(ಕೂಲಿ)ಕೊಡುತ್ತಾನೆ. ಅವರು ಉತ್ಪಾದಿಸಿದ ವಸ್ತುಗಳ ಅಂಚಿನ ಅಥವಾ ಸೀಮಾಂತ ಉತ್ಪಾದನೆಯ ಮೌಲ್ಯವು ಅವನು ನೀಡುವ ಕೂಲಿಯದಕ್ಕಿಂತ ಹೆಚ್ಚಾಗಿದ್ದರೆ ಹೆಚ್ಚು ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಾನೆ. ಇದೇ ರೀತಿ ಹೆಚ್ಚು ಹೆಚ್ಚು ಕಾರ್ಮಿಕರನ್ನು ನೇಮಿಸಿಕೊಂಡು ಹೋದಂತೆಲ್ಲ ಅವರ ಸೀಮಾಂತ ಉತ್ಪಾದನಾಮೌಲ್ಯವು ಕಡಮೆಯಾಗುತ್ತ ಹೋಗುತ್ತದೆ. ಏಕೆಂದರೆ ಪ್ರತಿಯೊಂದು ಉದ್ದಿಮೆಯೂ ಯಾವುದಾದರೂ ಒಂದು ಘಟ್ಟದಲ್ಲಿ ಇಳಿಮುಖ ಪ್ರತಿಫಲ ನಿಯಮಕ್ಕೆ ಒಳಪಡುತ್ತದೆ. ಶ್ರಮದ ಸೀಮಾಂತ ಉತ್ಪನ್ನ ಇದಕ್ಕೆ ಹೊರತಲ್ಲ. ಈ ಘಟ್ಟಕ್ಕೆ ಬಂದಾಗ ಕಾರ್ಮಿಕರಿಗೆ ಬೇಡಿಕೆ ಹೆಚ್ಚಾಗುವುದರಿಂದ ಕೂಲಿಯದರ ಏರುತ್ತದೆ. ಇದರಿಂದ ಮಾಲೀಕನು ಸೀಮಾಂತ ಉತ್ಪಾದನೆಗಿಂತ ಹೆಚ್ಚು ಕೂಲಿ ಕೊಡಲು ಸಿದ್ಧನಿರುವುದಿಲ್ಲ. ಆದ್ದರಿಂದ ಉತ್ಪಾದಕನು ಕಾರ್ಮಿಕರ ನೇಮಕವನ್ನು ನಿಲ್ಲಿಸುವನು. ಕೂಲಿಕಾರರೆಲ್ಲ ಒಂದೇ ಸಮನಾದ ಉತ್ಪಾದನಾ ಶಕ್ತಿಯನ್ನು ಹೊಂದಿರುವುದರಿಂದ ಅವರೆಲ್ಲರಿಗೆ ಸೀಮಾಂತ ಉತ್ಪಾದನೆಗೆ ತಕ್ಕಂತೆ ಕೂಲಿ ದೊರೆಯುತ್ತದೆ. ಈ ಘಟ್ಟದಲ್ಲಿ ಕಾರ್ಮಿಕರ ಉತ್ಪನ್ನದ ಮೌಲ್ಯವೂ ಅವರಿಗೆ ಕೊಡುವ ಕೂಲಿಯ ದರವೂ ಸಮನಾಗಿರುತ್ತದೆ. ಕಾರ್ಮಿಕರ ಸೀಮಾಂತ ಉತ್ಪಾದನೆಯನ್ನು ನಿರ್ಧರಿಸುವುದು ಬಹಳ ಸರಳ. ಉದಾಹರಣೆಗೆ ಒಬ್ಬ ಉದ್ದಿಮೆದಾರ 10 ಜನ ಕಾರ್ಮಿಕರನ್ನು ನೇಮಕಮಾಡಿಕೊಳ್ಳುವನೆಂದು ಭಾವಿಸೋಣ. 10ನೆಯ ಕಾರ್ಮಿಕ 10 ರೂಪಾಯಿ ಬೆಲೆಯ ವಸ್ತುಗಳನ್ನು ಉತ್ಪಾದಿಸಿದರೆ ಅವನ ಕೂಲಿಯ ದರ 10 ರೂಪಾಯಿಗಳೆಂದು ನಿರ್ಧರಿಸಲ್ಪಡುತ್ತದೆ. ಕೂಲಿಯದರ ಕಡಮೆ ಇದ್ದರೆ ಉದ್ದಿಮೆದಾರ ಮತ್ತಷ್ಟು ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಾನೆ. ಕೂಲಿಯದರ ಅಂಚಿನ ಅಥವಾ ಸೀಮಾಂತ ಕಾರ್ಮಿಕನ ಉತ್ಪಾದನೆಯ ಮೌಲ್ಯಕ್ಕಿಂತ ಹೆಚ್ಚಾಗಲಾರದು. ಆದರೆ 11ನೆಯ ಕಾರ್ಮಿಕನನ್ನು ನೇಮಕ ಮಾಡಿಕೊಂಡಾಗ 11ನೆಯವನು ಅಂಚಿನ ಕಾರ್ಮಿಕನಾಗುವನು. ಅವನ ಉತ್ಪಾದನೆಯು 8 ರೂಪಾಯಿಗಳು. ಅದರಿಂದ ಅವನನ್ನು ನೇಮಕಮಾಡಿಕೊಳ್ಳುವುದಿಲ್ಲ. ಕೂಲಿಯದರ 10 ರೂಪಾಯಿಗಳಿದ್ದು ಅವನು ಉತ್ಪಾದಿಸುವ ವಸ್ತುಗಳ ಮೌಲ್ಯ 8 ರೂಪಾಯಿಗಳಾಗಿರುವುದರಿಂದ ಕಾರ್ಖಾನೆಯ ಒಡೆಯನಿಗೆ 2 ರೂಪಾಯಿಗಳ ನಷ್ಟವಾಗುತ್ತದೆ. ಆದ್ದರಿಂದ ಈ ನಿಯಮ ಕೂಲಿಯದರ ಕಾರ್ಮಿಕರ ಅಂಚಿನ ಉತ್ಪಾದನೆಯ ಮೌಲ್ಯಕ್ಕೆ ಸಮವಾಗಿರುವುದೆಂದು ಪ್ರತಿಪಾದಿಸುತ್ತದೆ.

ಒಂದು ಉದ್ದಿಮೆಯಲ್ಲಿ ಕಾರ್ಮಿಕರನ್ನು ಹೆಚ್ಚಾಗಿ ನೇಮಿಸಿಕೊಂಡಂತೆಲ್ಲ ಶ್ರಮದ ವೆಚ್ಚ ಹಾಗೂ ಅದರ ಜೊತೆಗೆ ಇನ್ನಿತರ ವೆಚ್ಚಗಳೂ ಹೆಚ್ಚಾಗುತ್ತವೆ. ಈ ಕಾರಣದಿಂದಾಗಿ ಕಾರ್ಮಿಕರಿಗೆ ಕೂಲಿದರವನ್ನು ನಿಷ್ಕರ್ಷೆ ಮಾಡುವಾಗ ಇತರ ವೆಚ್ಚಗಳನ್ನೂ ಪರಿಗಣಿಸಬೇಕಾಗುತ್ತದೆ. ಹೆಚ್ಚು ಹೆಚ್ಚಾಗಿ ನೇಮಿಸಿಕೊಂಡ ಶ್ರಮದ ಒಂದೊಂದು

ಅಂಶದಿಂದಲೂ ಲಭ್ಯವಾಗುವ ಉತ್ಪತ್ತಿಯ ಮೌಲ್ಯದಿಂದ ಅದರ ಉತ್ಪಾದನೆ ಆಗಿರುವ ಇತರ ವೆಚ್ಚಗಳನ್ನು ಕಳೆದರೆ, ಶ್ರಮದ ಸೀಮಾಂತ ನಿವ್ವಳ ಉತ್ಪನ್ನ ಬರುತ್ತದೆ. ಕಾರ್ಮಿಕರ ಕೂಲಿದರವು ಇದಕ್ಕೆ ಸಮನಾಗಿರುತ್ತದೆ. ಈ ಸಿದ್ಧಾಂತವು ಹತ್ತೊಂಬತ್ತನೆಯ ಶತಮಾನದಲ್ಲಿ ಬಹಳ ಸಮರ್ಪಕವಾದ ಸಿದ್ಧಾಂತವಾಗಿತ್ತು. ಆದರೆ ಇಂದು ಈ ಸಿದ್ಧಾಂತಕ್ಕೆ ಅಷ್ಟು ಮಹತ್ವವಿಲ್ಲವೆಂದು ಆಧುನಿಕ ಅರ್ಥಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿರುವರು. ಅವರ ಪ್ರಕಾರ ಸೀಮಾಂತ ಉತ್ಪಾದನಾಕೂಲಿಯ ನಿಯಮವು ಕೂಲಿಯನ್ನು ನಿರ್ಧರಿಸಲು ಪರಿಪೂರ್ಣ ತತ್ವವಲ್ಲ.

ಟೀಕೆಗಳು : ಈ ಸಿದ್ಧಾಂತ ಪರಿಪೂರ್ಣ ಪೈಪೋಟಿ ಇದ್ದಾಗ ಮಾತ್ರ ಕೂಲಿಯನ್ನು ನಿರ್ಧರಿಸಲು ನೆರವಾಗುತ್ತದೆ. ಆದರೆ ವಾಸ್ತವ ಪ್ರಪಂಚದಲ್ಲಿ ಪೈಪೋಟಿ ಪರಿಪೂರ್ಣವಾಗಿರದೆ ಅಪರಿಪೂರ್ಣವಾಗಿರುತ್ತದೆ. ಕಾರ್ಮಿಕರು ಸುಲಭವಾಗಿ ತಮ್ಮ ಸ್ಥಳದಿಂದ ಹೆಚ್ಚು ಕೂಲಿ ಸಿಗುವ ಸ್ಥಳಗಳಿಗೆ ಹೋಗುವುದಿಲ್ಲ. ಇದ್ದ ಸ್ಥಳಗಳಲ್ಲೇ ಕಡಮೆ ಕೂಲಿಯನ್ನು ಪಡೆದು ಜೀವಿಸಲು ಸಿದ್ಧರಿರುತ್ತಾರೆ. ದಕ್ಷತೆ ಪಡೆದಿದ್ದರೂ ಅವರು ಪಡೆಯುವ ಕೂಲಿಯಲ್ಲಿ ಅಂತರವಿರುತ್ತದೆ. ಈ ಸಿದ್ಧಾಂತ ಕಾರ್ಮಿಕರಿಗೆ ಇರುವ ಬೇಡಿಕೆಯನ್ನು ಮಾತ್ರ ಗಣನೆಗೆ ತೆಗೆದುಕೊಂಡಿದೆ. ಪೂರೈಕೆಯ ಕಡೆ ಗಮನವನ್ನು ಕೊಟ್ಟಿಲ್ಲ. ಸಾಮಾನ್ಯವಾಗಿ ಉದ್ದಿಮೆದಾರರು ಕಡಮೆ ಇದ್ದು ಕಾರ್ಮಿಕರ ಸಂಖ್ಯೆ ದೊಡ್ಡದಾಗಿರುತ್ತದೆ. ಅವರು ಕೊಡುವ ವೇತನವನ್ನೇ ಕೂಲಿಕಾರರು ತೆಗೆದುಕೊಳ್ಳಬೇಕಾಗುತ್ತದೆ. ಇಂತಹವರು ಸಾಮಾನ್ಯವಾಗಿ ಅವರ ಉತ್ಪಾದನೆಗಿಂತ ಕಡಮೆ ಕೂಲಿ ಕೊಡುತ್ತಾರೆ. ಯಾವುದೇ ಒಂದು ವಸ್ತುವಿನ ಉತ್ಪಾದನೆಯಾಗಬೇಕಾದರೆ ಉತ್ಪಾದನಾಂಶಗಳಾದ ಭೂಮಿ, ಶ್ರಮ, ಬಂಡವಾಳ, ಸಂಘಟನೆಗಳ ಸಹಕಾರ ಅತ್ಯಾವಶ್ಯಕ. ಉತ್ಪಾದನೆಯಲ್ಲಿ ಯಾವುದೊಂದು ಅಂಶದ ಪ್ರಮಾಣವನ್ನು ಹೆಚ್ಚಿಸಿದಾಗ ಉತ್ಪಾದನೆಯಲ್ಲಾಗುವ ಹೆಚ್ಚಳ ಆ ಅಂಶದಿಂದಲೇ ಆಗಿದ್ದೆಂದು ನಿರ್ಣಯಿಸುವುದು ಅಷ್ಟು ಸಮರ್ಪಕವಲ್ಲ.

ಉತ್ಪಾದನೆಯಲ್ಲಿ ನಿರತರಾದ ಕಾರ್ಮಿಕರ ದಕ್ಷತೆ, ಯಂತ್ರೋಪಕರಣಗಳು, ಕಚ್ಚಾ ಮಾಲು, ದುಡಿಯುವ ಅವಧಿಗಳನ್ನು ಅವಲಂಬಿಸಿರುತ್ತದೆ. ಸಲಕರಣೆಗಳು ಸಮರ್ಪಕವಾಗಿಲ್ಲದಿದ್ದರೆ ಅವರ ಉತ್ಪಾದನಾಸಾಮರ್ಥ್ಯ ಕುಗ್ಗಿ ದಕ್ಷತೆಯು ಕುಂದುತ್ತದೆ. ಉದಾಹರಣೆಗೆ ಹಳೆಯ ಯಂತ್ರಗಳು, ಹೆಚ್ಚು ಕಾಲ ದುಡಿಮೆ, ಕಡಮೆ ಗುಣಮಟ್ಟದ ಪದಾರ್ಥಗಳು ಇದ್ದಾಗ ನುರಿತ ಹಾಗೂ ಸಮರ್ಥರಾದ ಕಾರ್ಮಿಕರ ಉತ್ಪಾದನೆಯ ಮೌಲ್ಯ ಕಡಮೆಯಾಗುತ್ತದೆ. ಈ ನಿಯಮ ಉದ್ದಿಮೆಯ ಮಾಲೀಕರ ದೃಷ್ಟಿಯನ್ನು ಮಾತ್ರ ಗಣನೆಗೆ ತೆಗೆದುಕೊಂಡಿದೆ. ಕಾರ್ಮಿಕರ ಪೂರೈಕೆಯಲ್ಲಿ ವ್ಯತ್ಯಾಸ, ಕಾರ್ಮಿಕ ಸಂಘಗಳ ಪಾತ್ರಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಕಾರ್ಮಿಕ ಸಂಘಗಳು ಅವರ ಶ್ರಮಕ್ಕೆ ತಕ್ಕಂತೆ ಹೆಚ್ಚು ಕೂಲಿಯನ್ನು ಪಡೆಯಲು ಸಂಪು ಹೂಡುತ್ತಾರೆ. ಈ

ನಿಯಮವು ಇವುಗಳನ್ನು ವಿವರಿಸುವುದಿಲ್ಲ. ಆದಾಗ್ಯೂ ಈ ಸಿದ್ಧಾಂತ ತರ್ಕಬದ್ಧವಾಗಿದ್ದು, ಕೂಲಿಯ ವಿತರಣೆಯನ್ನು ಸೂಕ್ತವಾಗಿ ಕೊಡುತ್ತದೆ. ಬೇರೆ ಬೇರೆ ದೇಶಗಳಲ್ಲಿರುವ ಕೂಲಿಯ ವ್ಯತ್ಯಾಸಗಳನ್ನು ಈ ಸಿದ್ಧಾಂತವು ವಿವರಿಸುತ್ತದೆ. ಶ್ರಮದ ಹೆಚ್ಚಳದಿಂದ ಹಾಗೂ ವಿರಳತೆಯಿಂದ ಕೂಲಿಯ ಮೇಲೆ ಆಗುವ ಪರಿಣಾಮಗಳನ್ನು ಇದರಿಂದ ತಿಳಿಯಬಹುದು.

(iv) **ಕೂಲಿಯ ಆಧುನಿಕ ಸಿದ್ಧಾಂತ :** ಆಧುನಿಕ ಅರ್ಥಶಾಸ್ತ್ರಜ್ಞರು ಕೂಲಿಯ ವಿವಿಧ ತತ್ವಗಳನ್ನು ಸಮರ್ಪಕವಾಗಿಲ್ಲವೆಂದು ತಿರಸ್ಕರಿಸಿ ತಮ್ಮದೇ ಆದ ಹೊಸ ಸಿದ್ಧಾಂತವನ್ನು ರೂಪಿಸಿರುವರು. ಕೂಲಿಯದರವನ್ನು ಕೂಲಿಕಾರರಿಗಿರುವ ಬೇಡಿಕೆ ಮತ್ತು ಪೂರೈಕೆಗಳ ಮೂಲಕ ನಿರ್ಧರಿಸಬಹುದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಶ್ರಮವನ್ನು ಒಂದು ವಸ್ತುವೆಂದು ಪರಿಗಣಿಸಲು ಆಗುವುದಿಲ್ಲ. ಏಕೆಂದರೆ, ವಸ್ತುಗಳು ಹೊಂದಿರದ ಕೆಲವು ವಿಶಿಷ್ಟ ಲಕ್ಷಣಗಳನ್ನು ಶ್ರಮವು ಹೊಂದಿದೆ. ಆದರೂ ವಸ್ತುಗಳ ಬೆಲೆಯನ್ನು ಆ ವಸ್ತುಗಳಿಗಿರುವ ಬೇಡಿಕೆ ಮತ್ತು ಪೂರೈಕೆಗಳ ಆಧಾರದ ಮೇಲೆ ನಿರ್ಧರಿಸುವಂತೆ ಅವುಗಳನ್ನು ಆಧರಿಸಿದ ಕೂಲಿಯ ದರವನ್ನೂ ಸಹ ಬೇಡಿಕೆ ಮತ್ತು ಪೂರೈಕೆಗಳ ಆಧಾರದ ಮೇಲೆ ನಿರ್ಧರಿಸಬಹುದು ಎಂಬ ನಿರ್ಣಯದ ಮೇರೆಗೆ ಈ ಸಿದ್ಧಾಂತವನ್ನು ರಚಿಸಲಾಗಿದೆ.

ಬೇಡಿಕೆ : ಕೂಲಿಯು ಕಾರ್ಮಿಕನ ಶ್ರಮಕ್ಕೆ ಕೊಡುವ ಪ್ರತಿಫಲ. ಆದರೆ ಕಾರ್ಮಿಕರಿಗೆ ಪ್ರತ್ಯಕ್ಷವಾದ ಬೇಡಿಕೆ ಇರುವುದಿಲ್ಲ. ಉತ್ಪಾದಿತ ವಸ್ತುಗಳಿಗೆ ಬಳಕೆದಾರರಿಂದ ಬರುವ ಬೇಡಿಕೆಗೆ ಅನುಗುಣವಾಗಿ ಉತ್ಪಾದಕರಿಂದ ಕಾರ್ಮಿಕರಿಗೆ ಬೇಡಿಕೆ ಇರುತ್ತದೆ. ಅವರು ಉತ್ಪಾದಿಸುವ ವಸ್ತುಗಳಿಗೆ ಬಳಕೆದಾರರಿಂದ ಬೇಡಿಕೆ ಹೆಚ್ಚಾದರೆ ಆಗ ಕೂಲಿಕಾರರಿಗೆ ಬೇಡಿಕೆ ಹೆಚ್ಚಾಗುತ್ತದೆ. ಅದರಂತೆ ಅವರು ಉತ್ಪಾದಿಸಿದ ವಸ್ತುಗಳಿಗೆ ಬೇಡಿಕೆ ಕಡಮೆಯಾಗುತ್ತದೆ. ಅಂದರೆ ಕಾರ್ಮಿಕರಿಗಿರುವ ಬೇಡಿಕೆಯ ಪ್ರಮಾಣ ಅವರು ಉತ್ಪಾದಿಸುವ ವಸ್ತುಗಳಿಗಿರುವ ಬೇಡಿಕೆಯ ಪ್ರಮಾಣವನ್ನು ಮತ್ತು ಇತರ ಉತ್ಪಾದನಾಂಶಗಳ ಬೆಲೆಗಳನ್ನು ಅವಲಂಬಿಸಿರುತ್ತದೆ. ಇದಲ್ಲದೆ ತಾಂತ್ರಿಕ ಪ್ರಗತಿಯು ಅತಿ ಮುಖ್ಯ ಅಂಶ. ಉತ್ಪಾದನೆಯಲ್ಲಿ ಯಂತ್ರೋಪಕರಣಗಳನ್ನು ಬಳಸಿದರೆ ಬೇಡಿಕೆ ಕಡಮೆಯಾಗುವುದು. ಆದ್ದರಿಂದ ಕಾರ್ಮಿಕರ ಬೇಡಿಕೆಯನ್ನು ನಿರ್ಧರಿಸುವಾಗ ಈ ಅಂಶಗಳು ತಮ್ಮ ಪ್ರಭಾವ ಬೀರುತ್ತವೆ. ಉದಾಹರಣೆಗೆ ವಾಸದ ಮನೆಗಳಿಗೆ ಬೇಡಿಕೆ ಹೆಚ್ಚಾಯಿತು ಎಂದು ಭಾವಿಸಬೇಕು. ಆಗ ಹೊಸ ಮನೆಗಳನ್ನು ನಿರ್ಮಿಸಲು ಹೆಚ್ಚು ಕೂಲಿಯವರು ಬೇಕು. ಕೂಲಿಯವರಿಗೆ ಬೇಡಿಕೆ ಹೆಚ್ಚಾಗುತ್ತದೆ. ಕೂಲಿಯವರ ಕಡಮೆ ಇದ್ದರೆ ಕೂಲಿಕಾರರಿಗೆ ಬೇಡಿಕೆ ಹೆಚ್ಚುತ್ತದೆ. ಆದ್ದರಿಂದ ಕೂಲಿಕಾರರ ಬೇಡಿಕೆ ಅವರು ಉತ್ಪಾದಿಸುವ ವಸ್ತುವಿನ ಬೇಡಿಕೆಯನ್ನವಲಂಬಿಸಿರುತ್ತದೆ. ಉತ್ಪಾದನೆಯಲ್ಲಿ ಸಹಕರಿಸುವ ಅಂಶಗಳನ್ನೂ ಶ್ರಮದ ಬೇಡಿಕೆಯು ಅವಲಂಬಿಸಿದೆ.

ಉದಾಹರಣೆಗೆ ಯಂತ್ರಗಳ ಬೆಲೆ ತುಟ್ಟಿಯಾಗಿದ್ದಾಗ ಕಾರ್ಮಿಕರ ಬೇಡಿಕೆಯು ಹೆಚ್ಚುತ್ತದೆ. ಹೀಗೆ ತಾಂತ್ರಿಕ ಪರಿಸ್ಥಿತಿ, ಉತ್ಪಾದನೆಯಲ್ಲಿ ಸಹಕರಿಸುವ ಅಂಶಗಳ ಬೆಲೆಗಳು, ಉತ್ಪನ್ನಕ್ಕೆ ಬೇಡಿಕೆ ಇವುಗಳ ಜೊತೆಗೆ ಶ್ರಮದ ಸೀಮಾಂತ ಉತ್ಪಾದಕತೆ ಇದೆಲ್ಲವೂ ಕಾರ್ಮಿಕನ ಬೇಡಿಕೆಯನ್ನು ನಿರ್ಣಯಿಸುತ್ತವೆ.

ಪೂರೈಕೆ : ಕೂಲಿಯ ಅನೇಕ ದರಗಳಲ್ಲಿ ಯಾವ ರೂಪದ ಶ್ರಮವನ್ನಾದರೂ ಒದಗಿಸಲು ಸಿದ್ಧವಾಗಿರುವ ಕಾರ್ಮಿಕರ ಒಟ್ಟು ಸಂಖ್ಯೆಯನ್ನು ಶ್ರಮದ ಪೂರೈಕೆ ಎನ್ನಬಹುದು. ಈ ಪೂರೈಕೆಯು ಕೆಲವು ಲಕ್ಷಣಗಳನ್ನು ಹೊಂದಿದೆ. ಒಂದು ಉದ್ಯಮ ಸಂಸ್ಥೆಯ ದೃಷ್ಟಿಯಲ್ಲಿ ಕಾರ್ಮಿಕರ ಪೂರೈಕೆಗೆ ಪುಟಿತತೆ ಇರುತ್ತದೆ. ಅಂದರೆ ಆ ಸಂಸ್ಥೆಯು ಎಷ್ಟು ಕಾರ್ಮಿಕರನ್ನು ಬೇಕಾದರೂ ನೇಮಿಸಿಕೊಳ್ಳಬಹುದು. ಆದರೆ ಒಂದು ಉದ್ದಿಮೆಯ ದೃಷ್ಟಿಯಲ್ಲಿ ಕಾರ್ಮಿಕರ ಪೂರೈಕೆಯ ಪುಟಿತತೆ ಮಿತವಾದುದು. ಅಂದರೆ ಕಾರ್ಮಿಕರ ಒಟ್ಟು ಪೂರೈಕೆಯಲ್ಲಿ ಕೇವಲ ಒಂದು ಉದ್ದಿಮೆಯ ಬೇಡಿಕೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಈ ಸಂದರ್ಭದಲ್ಲಿ ಹೆಚ್ಚು ಕಾರ್ಮಿಕರು ಬೇಕಿದ್ದಲ್ಲಿ, ಆ ಉದ್ದಿಮೆಯು ಹೆಚ್ಚಿನ ಕೂಲಿಯ ಆಸೆಯನ್ನು ತೋರಿಸಿ ಕಾರ್ಮಿಕರನ್ನು ಇತರ ಉದ್ದಿಮೆಗಳಿಂದ ತನ್ನೆಡೆಗೆ ಎಳೆದುಕೊಳ್ಳಬೇಕಾಗುತ್ತದೆ.

ಕಾರ್ಮಿಕರ ಪೂರೈಕೆಯು ವಸ್ತುಗಳ ಪೂರೈಕೆಯಂತಲ್ಲ. ವಸ್ತುಗಳಿಗೆ ಅಧಿಕ ಬೇಡಿಕೆ ಉಂಟಾದಾಗ ಲಾಭ ಪಡೆಯುವ ಆಸೆಯಿಂದ ಹೆಚ್ಚು ವಸ್ತುಗಳನ್ನು ಉತ್ಪಾದಿಸಬಹುದು. ಆದರೆ ಕಾರ್ಮಿಕರಿಗೆ ಹೆಚ್ಚು ಬೇಡಿಕೆಯುಂಟಾದರೆ ಹೆಚ್ಚು ಕಾರ್ಮಿಕರನ್ನು ಪೂರೈಸಲಾಗುವುದಿಲ್ಲ. ಕಾರ್ಮಿಕರ ಪೂರೈಕೆ ಆ ದೇಶದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಂಶಗಳನ್ನು ಅವಲಂಬಿಸಿರುತ್ತದೆ. ಆ ದೇಶದಲ್ಲಿ ಜನಸಂಖ್ಯೆ ಹೆಚ್ಚಿದ್ದರೆ ಕಾರ್ಮಿಕರ ಪೂರೈಕೆಯೂ ಸಹ ಹೆಚ್ಚಿರುತ್ತದೆ. ಕಾರ್ಮಿಕರ ಸಂಖ್ಯೆಗಿಂತ ಅವರು ಪಡೆದಿರುವ ದಕ್ಷತೆ ಮುಖ್ಯ. ಹೆಚ್ಚು ದಕ್ಷರಾಗಿದ್ದರೆ ಬೇಡಿಕೆ ಹೆಚ್ಚು. ಕೂಲಿಯದರ ಹೆಚ್ಚಿದ್ದರೆ ಕಾರ್ಮಿಕರ ಪೂರೈಕೆಯು ದೀರ್ಘಾವಧಿಯಲ್ಲಿ ಹೆಚ್ಚಾಗುತ್ತದೆ.

ಕೆಲವು ಸಂದರ್ಭಗಳಲ್ಲಿ ಕಾರ್ಮಿಕರ ಪೂರೈಕೆ ಸ್ಥಿರವಾಗಿದ್ದಾಗ, ಅವರಿಗಿರುವ ಬೇಡಿಕೆ ಹೆಚ್ಚಾದರೆ ಕೂಲಿಯ ದರ ಹೆಚ್ಚಾಗುತ್ತದೆ. ಹಾಗೆಯೇ ಅವರಿಗಿರುವ ಬೇಡಿಕೆ ಕಡಮೆಯಾದರೆ ಕೂಲಿಯ ದರವೂ ಕಡಮೆಯಾಗುತ್ತದೆ. ಬೇಡಿಕೆ ಸ್ಥಿರವಾಗಿದ್ದಾಗ ಕಾರ್ಮಿಕರ ಪೂರೈಕೆ ಹೆಚ್ಚಿದರೆ ಕೂಲಿಯ ದರ ಕಡಮೆಯಾಗುತ್ತದೆ. ಇದರಂತೆಯೇ ಪೂರೈಕೆ ಕಡಮೆಯಾದರೆ ಕೂಲಿಯ ದರ ಹೆಚ್ಚಾಗುವುದು. ಆದರೆ ಪರಿಪೂರ್ಣ ಮಾರುಕಟ್ಟೆಗಳಲ್ಲಿ ಕೂಲಿಯದರ ಅಂಚಿನ ಉತ್ಪಾದನಾ ಮೌಲ್ಯದವರೆಗೂ ಏರುವುದು ಹಾಗೂ ಕನಿಷ್ಠ ಜೀವನ ಮಟ್ಟದ ಕೆಳಗೆ ಇಳಿಯುವುದಿಲ್ಲ. ಇವೆರಡರ ಮಧ್ಯೆ ಕೂಲಿಯ ದರವು ನಿರ್ಧರಿಸಲ್ಪಟ್ಟಿರುತ್ತದೆ ಎನ್ನಬಹುದು. ಪರಿಪೂರ್ಣ ಪೈಪೋಟಿ ಇದ್ದಾಗ

ಕಾರ್ಮಿಕರ ಪೂರೈಕೆ ಅನೇಕ ಉದ್ಯೋಗಗಳಲ್ಲಿ ಹಂಚಲ್ಪಟ್ಟಿರುತ್ತದೆ. ಆದರೆ ಎಲ್ಲ ಉದ್ಯೋಗಗಳಲ್ಲಿ ಶ್ರಮದ ಸೀಮಾಂತ ಉತ್ಪಾದಕತೆ ಒಂದೇ ಆಗಿರುತ್ತದೆ. ಆದರೆ ಒಂದು ವೇಳೆ ಕಾರ್ಮಿಕರು ಒಂದು ಉದ್ಯೋಗದಿಂದ ಮತ್ತೊಂದು ಉದ್ಯೋಗಕ್ಕೆ ಸಂಲಭವಾಗಿ ಚಲಿಸದಿದ್ದರೆ ಆಗ ಶ್ರಮದ ಸೀಮಾಂತ ಉತ್ಪಾದಕತೆ ಬೇರೆ ಉದ್ಯೋಗಗಳಲ್ಲಿ ಬೇರೆ ಬೇರೆ ಇರುತ್ತದೆ. ಮುಷ್ಕರಗಳಿಂದಾಗಿ ಕಾರ್ಮಿಕರು ಕೆಲಸ ಮಾಡಲು ನಿರಾಕರಿಸಿದರೆ ಅವರ ಪೂರೈಕೆ ತಗ್ಗಬಹುದು. ಶ್ರಮದ ಪೂರೈಕೆಯನ್ನು (i) ವಿವಿಧ ಕೂಲಿ ದರಗಳಲ್ಲಿ ಕೆಲಸ ಮಾಡುವ ಬಯಕೆಯನ್ನೂ, ಶಕ್ತಿಯನ್ನೂ ಹೊಂದಿರುವ ಕಾರ್ಮಿಕರ ಸಂಖ್ಯೆ ಹಾಗೂ (ii) ಪ್ರತಿ ಕಾರ್ಮಿಕನೂ ದುಡಿಯಲು ಬಯಸುವ ಮತ್ತು ಶಕ್ಯನಾಗಿರುವ ಗಂಟೆಗಳ ಸಂಖ್ಯೆ ಈ ಎರಡು ಅಂಶಗಳ ಆಧಾರದ ಮೇಲೆ ಅಳೆಯಬಹುದು.

ಬಡ್ಡಿ

ಉತ್ಪಾದನೆಯ ಮೂರನೆಯ ಕರ್ತೃವಾದ ಬಂಡವಾಳಕ್ಕೆ ನೀಡುವ ಪ್ರತಿಫಲವೇ ಬಡ್ಡಿ. ಯಾವುದೇ ವಸ್ತುವಿನ ಉತ್ಪಾದನೆ ಬಂಡವಾಳವಿಲ್ಲದೆ ಸಾಧ್ಯವಾಗದು. ಬೃಹತ್ ಪ್ರಮಾಣದ ಉದ್ದಿಮೆಗಳಲ್ಲಿ ಹೆಚ್ಚು ಬಂಡವಾಳದ ಅವಶ್ಯಕತೆ ಇದ್ದರೆ ಸಣ್ಣ ಪ್ರಮಾಣದ ಉದ್ದಿಮೆಗಳಲ್ಲಿ ಕಡಮೆ ಬಂಡವಾಳ ಬೇಕಾಗುತ್ತದೆ. ಅದನ್ನು ತೊಡಗಿಸಿ ಉತ್ಪಾದನೆ ಮಾಡುವುದರಿಂದ ಅದರ ಸೇವೆಗೆ ತಕ್ಕ ಪ್ರತಿಫಲವನ್ನು 'ಬಡ್ಡಿ' ಯ ರೂಪದಲ್ಲಿ ಕೊಡಲಾಗುತ್ತದೆ.

ಬಡ್ಡಿಯ ಬಗೆಗಳು : ಬಡ್ಡಿಯಲ್ಲಿ ಒಟ್ಟು ಅಥವಾ ಸಾಂದ್ರಬಡ್ಡಿ ಮತ್ತು ನಿವ್ವಳ ಬಡ್ಡಿ ಎಂಬ ಎರಡು ಬಗೆಗಳುಂಟು. ಸಾಮಾನ್ಯವಾಗಿ ಬಡ್ಡಿ ಎಂದರೆ ಒಟ್ಟು ಬಡ್ಡಿ. ಅಂದರೆ ಸಾಲ ಪಡೆದವನು ಸಾಲ ಕೊಟ್ಟವನಿಗೆ ಕೊಡುವ ಬಡ್ಡಿ ಎಂದರ್ಥ. ಬಂಡವಾಳದ ಉತ್ಪಾದನೆಗೆ ಸಂಬಂಧಿಸಿದ ಒಟ್ಟು ಬಡ್ಡಿಯ ಸ್ವಲ್ಪಭಾಗ ಮಾತ್ರ ನಿವ್ವಳ ಬಡ್ಡಿಯಾಗುತ್ತದೆ. ನಿವ್ವಳ ಬಡ್ಡಿ ಎಂದರೆ ಬಂಡವಾಳವು ಉತ್ಪಾದನೆಯಲ್ಲಿ ವಹಿಸಿದ ಪಾತ್ರಕ್ಕೆ ಅನುಸಾರವಾಗಿ ಕೊಡುವ ಬಡ್ಡಿ. ಒಟ್ಟು ಅಥವಾ ಸಾಂದ್ರ ಬಡ್ಡಿ ನಿವ್ವಳ ಬಡ್ಡಿಯನ್ನಲ್ಲದೆ ಇತರ ಕೆಲವು ಅಂಶಗಳನ್ನು ಒಳಗೊಂಡಿರುತ್ತದೆ. ಗಂಡಾಂತರ ರಕ್ಷಣೆ– ಸಾಲ ಕೊಟ್ಟವನಿಗೆ ತನ್ನ ಹಣ ಹಿಂದಕ್ಕೆ ಬರುವುದೋ ಇಲ್ಲವೋ ಎಂಬ ಹೆದರಿಕೆ ಇರುತ್ತದೆ. ಸಾಲ ಪಡೆದ ಕೆಲವರು ಹಿಂತಿರುಗಿ ಕೊಡದಿರುವ ಸಂದರ್ಭಗಳೂ ಉಂಟು. ಸಾಲಗಾರ ನಂಬಿಕಸ್ತನಲ್ಲದಿರಬಹುದು ಅಥವಾ ವ್ಯಾಪಾರದಲ್ಲಿ ಅವನಿಗೆ ನಷ್ಟವಾಗಬಹುದು. ಈ ಬಗೆಯ ಗಂಡಾಂತರಗಳಿದ್ದಾಗ ಹೆಚ್ಚು ಬಡ್ಡಿಗೆ ಹಣ ಕೊಡುವನು. ಸಾಲ ಕೊಡುವವನು ಸಾಲಗಳ ಬಗ್ಗೆ ಸರಿಯಾದ ಮಾಹಿತಿಯನ್ನಿಡಬೇಕು. ದೊಡ್ಡ ಪ್ರಮಾಣದಲ್ಲಿ ಸಾಲ ಕೊಡುವವರು ಬ್ಯಾಂಕುಗಳು ಆಡಳಿತ ವೆಚ್ಚವನ್ನು ಬಡ್ಡಿಯ

ಮೂಲಕ ತುಂಬಿಸುತ್ತಾರೆ. ಆಡಳಿತ ಸಿಬ್ಬಂದಿಯ ವೆಚ್ಚ ನಿರ್ವಹಿಸಲು ಬಡ್ಡಿಯನ್ನು ಏರಿಸಲಾಗುತ್ತದೆ. ಸಾಲ ಪಡೆದವರು ಕರಾರಿನಂತೆ ವಾಯಿದೆಯ ದಿನ ಸಾಲ ಹಿಂತಿರು ಗಿಸದಿದ್ದರೆ, ಬಡ್ಡಿಯನ್ನು ಕೊಡದೆ ಸತಾಯಿಸದಿದ್ದರೆ, ಬಂಡವಾಳಗಾರ ಕೋರ್ಟ್ ಕಛೇರಿಗಳಲ್ಲಿ ಮೊಕದ್ದಮೆ ಹೂಡಬೇಕಾಗುತ್ತದೆ. ಇಂತಹ ನಷ್ಟಗಳನ್ನು ಎದುರಿಸಲು ಕೆಲವೊಂದು ಸಂಭಾವನೆಯನ್ನು ಸಾಲ ನೀಡಿದವನಿಗೆ ಕೊಡಬೇಕಾಗುತ್ತದೆ. ಇಂತಹ ಸಂಭಾವನೆಯನ್ನು ಬಡ್ಡಿಯಲ್ಲಿ ಕೂಡಿಸಲಾಗಿರುವುದು. ಈ ಅಂಶಗಳೆಲ್ಲವೂ ಒಟ್ಟು (ಸಾಂದ್ರ) ಬಡ್ಡಿಯಲ್ಲಿ ಸೇರಿದ್ದು. ಅದರಲ್ಲಿ ಇವುಗಳಿಗೆ ಕೊಡುವ ಪ್ರತಿಫಲವನ್ನು ಕಳೆದಾಗ ಉಳಿಯುವ ಶೇಷವೇ ನಿವ್ವಳ ಬಡ್ಡಿ. ಇವನ್ನು ಆರ್ಥಿಕ ಬಡ್ಡಿ ಎಂಬು ದಾಗಿಯೂ, ಶುದ್ಧ ಬಡ್ಡಿ ಎಂಬುದಾಗಿಯೂ ಕರೆಯುತ್ತಾರೆ. ಇಂತಹ ಬಡ್ಡಿಯು ಎಲ್ಲ ಕಡೆಗಳಲ್ಲೂ ಒಂದೇ ಸಮನಾಗಿರುತ್ತದೆ. ಆದರೆ ಒಟ್ಟು ಬಡ್ಡಿ ಸಾಲ ಕೊಡುವ ವ್ಯಕ್ತಿ ಮತ್ತು ಅವಧಿಗಳನ್ನು ಅವಲಂಬಿಸಿರುತ್ತದೆ. ಆದಕಾರಣ ಒಟ್ಟು ಬಡ್ಡಿ ವ್ಯಕ್ತಿಯಿಂದ ವ್ಯಕ್ತಿಗೆ, ಸ್ಥಳದಿಂದ ಸ್ಥಳಕ್ಕೆ ಹಾಗೂ ಕಾಲ ಕಾಲಕ್ಕೆ ಬದಲಾಗುತ್ತ ಹೋಗುತ್ತದೆ. ಸರಕಾರದ ಸಾಲಪತ್ರಗಳ ಮೇಲಿನ ಬಡ್ಡಿಯ ದರ ನಿವ್ವಳ ಬಡ್ಡಿಗೆ ಬಹಳ ಸಮೀಪವಿರುತ್ತದೆ. ಸರಕಾರಕ್ಕೆ ಸಾಲ ಕೊಡುವುದರಿಂದ ಕಷ್ಟನಷ್ಟಗಳಾಗಲೀ, ಆಡಳಿತ ವೆಚ್ಚವಾಗಲೀ ಉಂಟಾಗುವುದಿಲ್ಲ. ಸರಕಾರ ಯಾವುದೇ ಆಗಲಿ, ಪಡೆದ ಹಣವನ್ನು ಹಿಂದಕ್ಕೆ ಕೊಡುವುದು.

ಈ ರೀತಿ ನಿವ್ವಳ ಬಡ್ಡಿಯು ಬಂಡವಾಳವನ್ನು ಉಪಯೋಗಿಸಲು ಮಾತ್ರ ಕೊಟ್ಟ ಪ್ರತಿಫಲವಾದರೆ, ಒಟ್ಟು ಬಡ್ಡಿಯ ಮೇಲೆ ತಿಳಿಸಿದ ಅಂಶಗಳನ್ನು ಎದುರಿಸಲು ಕೊಡುವ ಸಂಭಾವನೆ ಎಂಬುದು ಸ್ಪಷ್ಟವಾಗುವುದು.

ಬಡ್ಡಿಯ ದರದ ಸಿದ್ಧಾಂತಗಳು

ಅರ್ಥಶಾಸ್ತ್ರಜ್ಞರು ಹಲವಾರು ಬಡ್ಡಿದರ ನಿರ್ಧಾರದ ಬಗೆಗೆ ಹಲವು ಸಿದ್ಧಾಂತ ಗಳನ್ನು ರೂಪಿಸಿದ್ದಾರೆ. ಅವುಗಳಲ್ಲಿ (i) ಉತ್ಪಾದನೆಯ ನಿಯಮ (ii) ತ್ಯಾಗದ ಬೆಲೆ ಬಡ್ಡಿಯ ಸಿದ್ಧಾಂತ (iii) ಅಧಿಕಮಾನದ ಬಡ್ಡಿಯ ನಿಯಮ (iv) ಸಾಲ ನಿಧಿಯ ಸಿದ್ಧಾಂತ ಹಾಗೂ ಹಣದ ಒಲವಿನ ಸಿದ್ಧಾಂತ ಗಮನಾರ್ಹವಾಗಿದೆ.

(i) **ಉತ್ಪಾದನೆಯ ನಿಯಮ :** ಒಂದು ಗುಂಪು ಬಂಡವಾಳ ಬಡ್ಡಿಯನ್ನು ಉತ್ಪಾದಿಸುತ್ತದೆ. ಉತ್ಪಾದನಾ ಶಕ್ತಿ ಬಂಡವಾಳದಲ್ಲಿ ಅಡಕವಾಗಿರುವುದು ಬಡ್ಡಿಗೆ ಕಾರಣ. ಇದು ಅರ್ಥಶಾಸ್ತ್ರಜ್ಞರ ಅಭಿಪ್ರಾಯ. ಈ ಉತ್ಪಾದನೆ ಬಂಡವಾಳದ ವಸ್ತುಗಳಿಂದ ಬರುವ ಪ್ರತಿಫಲವನ್ನು ವಿವರಿಸುವುದಲ್ಲದೆ ಬಡ್ಡಿಯ ದರವನ್ನು ವಿವರಿಸುತ್ತದೆ. ಆದ್ದರಿಂದ ಬಡ್ಡಿಯ ಈ ವಿವರಣೆಗೆ ಉತ್ಪಾದನಾ ಬಡ್ಡಿ ಸಿದ್ಧಾಂತ ವೆಂದು ಕರೆಯಲಾಗಿದೆ. ಉತ್ಪಾದನೆಯಲ್ಲಿ ಬಂಡವಾಳ ಅತ್ಯಾವಶ್ಯಕ. ಬಂಡವಾಳ

ವಿಲ್ಲದೆ ಉತ್ಪಾದನೆಯನ್ನು ಕೈಗೊಳ್ಳಲಾಗುವುದಿಲ್ಲ. ಬಂಡವಾಳವನ್ನು ಉಪಯೋಗಿಸು ವುದರಿಂದ ಉತ್ಪಾದನೆ ಅಧಿಕಗೊಳ್ಳುತ್ತದೆ. ಶ್ರಮವೊಂದೇ ಉತ್ಪಾದಿಸುವುದಕ್ಕಿಂತಲೂ ಹೆಚ್ಚಿನ ಉತ್ಪಾದನೆಯನ್ನು ಶ್ರಮವು ಬಂಡವಾಳದ ಸಹಾಯದಿಂದ ಉತ್ಪಾದಿಸುತ್ತದೆ. ಹೀಗೆ ಬಂಡವಾಳವು ಉತ್ಪಾದನಾ ಕಾರ್ಯದಲ್ಲಿ ನೆರವಾಗುವುದಲ್ಲದೆ ಉತ್ಪಾದನೆಯಲ್ಲಿ ಹೆಚ್ಚಳವನ್ನುಂಟುಮಾಡುತ್ತದೆ. ಆದುದರಿಂದ ಬಂಡವಾಳಕ್ಕೆ ಸೂಕ್ತ ಪ್ರತಿಫಲ ಕೊಡ ಬೇಕಾಗುತ್ತದೆ. ಬಂಡವಾಳದ ಉತ್ಪಾದನಾ ಶಕ್ತಿ ಹೆಚ್ಚಿಗೆ ಇದ್ದರೆ ಅದು ಹೆಚ್ಚು ಪ್ರತಿಫಲವನ್ನೂ, ಕಡಮೆ ಇದ್ದರೆ ಕಡಮೆ ಪ್ರತಿಫಲವನ್ನೂ ಪಡೆಯುತ್ತದೆ. ಆದರೆ ಭೂಮಿ ಹಾಗೂ ಕಾರ್ಮಿಕರಿಂದ ಬಂದ ಉತ್ಪಾದನೆಯನ್ನು ತೋರಿಸುವಂತೆ ಬಂಡವಾಳ ದಿಂದ ಗಳಿಸಿದ ಉತ್ಪಾದನೆಯನ್ನು ತೋರಿಸಲಾಗುವುದಿಲ್ಲ. ಏಕೆಂದರೆ ಕಾರ್ಮಿಕರ ನೆರವಿಲ್ಲದೆ ಬಂಡವಾಳವು ಏನನ್ನೂ ಉತ್ಪಾದನೆ ಮಾಡಲಾರದು. ರೈತ ಆಧುನಿಕ ಯಂತ್ರದಿಂದ ಹೆಚ್ಚು ಬೆಳೆ ಬೆಳೆಯಬಹುದು. ಯಂತ್ರದಲ್ಲಿ ಬಂಡವಾಳ ತೊಡಗಿಸಿ ಉತ್ಪಾದನೆ ಪಡೆಯಬಹುದು. ಆದರೆ ಬಂಡವಾಳಕ್ಕೆ ತಕ್ಕಂತೆ ಬಡ್ಡಿ ಕೊಡಬೇಕಾಗು ತ್ತದೆ ಎಂಬುದು ಸರಿಯಲ್ಲ. ಯಾವುದೇ ಉದ್ದಿಮೆಯಲ್ಲಿ ಬಂಡವಾಳವನ್ನು ತೊಡಗಿಸಿ ದರೂ ಕೊಡುವ ಬಡ್ಡಿದರ ಒಂದೇ, ಬಡ್ಡಿಯು ಬಂಡವಾಳದ ಉತ್ಪಾದನಾ ಶಕ್ತಿಗೆ ತಕ್ಕಂತೆ ಇರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದರೆ ಈ ಸಿದ್ಧಾಂತ ಬಡ್ಡಿಯ ಕಾರಣವನ್ನು ಸಂಪೂರ್ಣವಾಗಿ ವಿವರಿಸುವುದಿಲ್ಲ. ಬಡ್ಡಿಯು ಒಂದೇ ಕಾರಣ ಉತ್ಪಾದನೆ ಯಾಗಿದ್ದಲ್ಲಿ, ನಿವ್ವಳ ಬಡ್ಡಿಯು ಒಂದು ಪ್ರದೇಶದಲ್ಲಿ ಸಮವಾಗಿರುತ್ತದೆ. ಶ್ರಮವು ಬಂಡವಾಳದ ನೆರವಿನಿಂದ ಹೆಚ್ಚು ಉತ್ಪತ್ತಿಗೆ ಕಾರಣವಾಗುತ್ತದೆ. ಎಂದರೆ ಇಲ್ಲಿ ಹೆಚ್ಚಿನ ಉತ್ಪತ್ತಿಗೆ ಶ್ರಮ ಕಾರಣವೋ ಅಥವಾ ಬಂಡವಾಳ ಕಾರಣವೋ ಎಂಬುದನ್ನು ಈ ಸಿದ್ಧಾಂತವು ನಿರ್ದಿಷ್ಟವಾಗಿ ವಿವರಿಸುವುದಿಲ್ಲ.

(ii) **ತ್ಯಾಗದ ಬೆಲೆ ಬಡ್ಡಿ ಸಿದ್ಧಾಂತ :** ಈ ಸಿದ್ಧಾಂತವನ್ನು ಸೀನಿಯರ್ ಎಂಬ ಅರ್ಥಶಾಸ್ತ್ರಜ್ಞನು ಪ್ರತಿಪಾದಿಸಿದನು. ಈ ಸಿದ್ಧಾಂತದ ಪ್ರಕಾರ ಜನರು ತಮ್ಮ ಬಂಡವಾಳವನ್ನು ಸಂಗ್ರಹಿಸಿ ಇತರರಿಗೆ ಒದಗಿಸಲು ಅವರು ಸದ್ಯದ ಉಪಯೋಗವನ್ನು ತ್ಯಜಿಸಬೇಕು. ಅಂದರೆ ಅವರು ಸಂಗ್ರಹಿಸಿದ ಹಣವನ್ನು ಉಪಭೋಗ ಮಾಡಲು ಬರುವುದಿಲ್ಲ. ತಮ್ಮ ಉಪಭೋಗವನ್ನು ಮುಂದೂಡಬೇಕಾಗುತ್ತದೆ. ಇಂತಹ ಮುಂದೂಡುವಿಕೆ ಮನಸ್ಸಿಗೆ ಅಸಮಾಧಾನವನ್ನುಂಟುಮಾಡುತ್ತದೆ. ಅಂದರೆ ಇಂತಹ ನೋವನ್ನು ಸಂಯಮದಿಂದ ಕಾದು ನೋಡಲು ಅವನಿಗೆ ಪ್ರತಿಫಲವನ್ನು ಬಡ್ಡಿಯ ರೂಪದಲ್ಲಿ ನೀಡಬೇಕು. ಸೀನಿಯರ್ ಪ್ರಕಾರ ಬಡ್ಡಿಯು ಬಂಡವಾಳಗಾರನ ಭೋಗ ವರ್ಜನೆ ಅಥವಾ ಉಪಭೋಗವನ್ನು ಮುಂದೂಡಲು ನೀಡುವ ಪ್ರತಿಫಲ. ಇಂತಹ ಸಂಭಾವನೆಯಿಲ್ಲದಿದ್ದರೆ ಇತರರಿಗೆ ಯಾರೂ ಸಾಲಕೊಡುವುದಿಲ್ಲ. ಈ ನಿಯಮದ ಪ್ರಕಾರ ಬಂಡವಾಳ ಒದಗಿಸಲು ಉಪಭೋಗವನ್ನು ತ್ಯಾಗಮಾಡುವುದು ಅವಶ್ಯಕ.

ಉಪಭೋಗವನ್ನು ತ್ಯಜಿಸುವ ನೋವನ್ನು ಅನುಭವಿಸಬೇಕಾಗುತ್ತದೆ. ಆದರೆ ಈ ನಿಯಮವು ಕೆಲವು ಟೀಕೆಗಳಿಗೆ ಗುರಿಯಾಗಿದೆ. ಶ್ರೀಮಂತರು ಈ ಬಗೆಯ ನೋವಿನಿಂದ ದೂರವಾಗಿರುವರು. ಅವರಲ್ಲಿ ಹಣ ತನ್ನಷ್ಟಕ್ಕೆ ತಾನೇ ಸಂಗ್ರಹವಾಗುವುದು. ಬಡವರಿಗೆ ಉಳಿತಾಯ ಮಾಡಲು ಸಾಧ್ಯವಿಲ್ಲ. ಆದರೆ ಶ್ರೀಮಂತರಿಗೆ ಉಳಿತಾಯ ಮಾಡುವುದು ಬಹು ಸುಲಭ. ಅವರಿಗೆ ಬಡ್ಡಿಯನ್ನು ಕೊಟ್ಟಾಗ ಅದು ನೋವಿಗೆ ನೀಡಿದ ಅಥವಾ ತ್ಯಾಗಕ್ಕೆ ನೀಡಿದ ಪ್ರತಿಫಲವಲ್ಲ. ಆದ್ದರಿಂದ ಮಾರ್ಷಲ್‌ರವರು ತಾಳುವ (ಕಾಯುವಿಕೆ) ಸಿದ್ಧಾಂತವನ್ನು ರೂಪಿಸಿದರು. ಅವರ ಪ್ರಕಾರ ಬಡವರಾಗಲೀ ಶ್ರೀಮಂತರಾಗಲೀ ತಮ್ಮ ಉಳಿತಾಯವನ್ನು ಇತರರಿಗೆ ಕೊಟ್ಟಾಗ ಅದು ಹಿಂತಿರುಗಿ ಬರುವವರೆಗೂ ಸಂಯಮದಿಂದ ಕಾಯಬೇಕಾಗುವುದು. ಅವರಿಗೆ ಕಾಯಲು ಕೊಡುವ ಸಂಭಾವನೆಯೇ ಬಡ್ಡಿ. ಈ ಸಿದ್ಧಾಂತವು ಕೇವಲ ನೀಡಿಕೆಯನ್ನು ಮಾತ್ರ ಗಣನೆಗೆ ತೆಗೆದುಕೊಂಡು, ಅದರ ಬಗ್ಗೆ ವಿವರಿಸುತ್ತದೆ. ಆದರೆ ಬೇಡಿಕೆಯ ಕಡೆಯ ಪ್ರಭಾವ ವನ್ನು ವಿವರಿಸುವುದಿಲ್ಲ. ಸಾಲ ಕೊಡುವವನು ತನ್ನ ಬಂಡವಾಳದ ಉಪಯೋಗಕ್ಕೆ ಎಷ್ಟು ಬಡ್ಡಿ ಕೇಳುತ್ತಾನೆ ಎನ್ನುವುದಲ್ಲದೆ ಸಾಲ ತೆಗೆದುಕೊಳ್ಳುವವನು ಎಷ್ಟು ಬಡ್ಡಿ ಯನ್ನು ಕೊಡಲು ಸಿದ್ಧನಾಗಿದ್ದನೆಂಬುದನ್ನೂ ಅರಿಯುವುದು ಅಗತ್ಯ. ಏಕೆಂದರೆ ಇವನು ಕೊಡುವ ಬಡ್ಡಿಯು ಬಂಡವಾಳದ ಉತ್ಪಾದನಾ ಶಕ್ತಿಗೆ ಅಧೀನವಾಗಿದೆ. ಹೀಗೆ ಈ ಸಿದ್ಧಾಂತವು ಅನೇಕ ಟೀಕೆಗಳಿಂದ ತುಂಬಿದ್ದರೂ ಸಾಕಷ್ಟು ಬಂಡವಾಳದ ಪೂರೈಕೆಯನ್ನು ಹೊಂದಲು ಬಡ್ಡಿಯನ್ನು ಕೊಡಬೇಕಾಗಿರುವ ಕಾರಣವನ್ನು ಇದು ಸೂಚಿಸುತ್ತದೆ. ಆದ್ದರಿಂದ ಈ ಸಿದ್ಧಾಂತವು ತೀರ ಅಸಮರ್ಪಕವೇನೂ ಅಲ್ಲ ಎನ್ನಬಹುದು.

(iii) **ಅಧಿಕ ಮಾನದ ಬಡ್ಡಿಯ ನಿಯಮ :** ಈ ತತ್ವವನ್ನು ಆಸ್ಟ್ರಿಯನ್ ಅರ್ಥಶಾಸ್ತ್ರಜ್ಞನಾದ ಬೋಮ್ ಬಾವರ್ಕ್ ಎಂಬುವನು ಪ್ರತಿಪಾದಿಸಿದನು. ಈತನ ನಿಯಮವನ್ನು 'ಏಜಿಯೊ' ನಿಯಮವೆಂದು ಕರೆಯಲಾಗಿದೆ. ಈ ಸಿದ್ಧಾಂತದ ಪ್ರಕಾರ ಮನುಷ್ಯನು ಭವಿಷ್ಯತ್ತಿಗಿಂತಲೂ ವರ್ತಮಾನಕ್ಕೆ ಹೆಚ್ಚು ಮಹತ್ವ ಕೊಡುವನು. ಅಂದರೆ ಭವಿಷ್ಯತ್ ಕಾಲದ ಅಗತ್ಯಗಳಿಗಿಂತಲೂ ವರ್ತಮಾನ ಕಾಲದ ಅಗತ್ಯಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುವನು. 'ಕನ್ನಡಿಯೊಳಗಿನ ಗಂಟಿಗಿಂತ ಕೈಯಲ್ಲಿನ ದಂಟೇ ಲೇಸು' ಎಂಬ ನಾಣ್ಣುಡಿಯಂತೆ ಭವಿಷ್ಯತ್ ಕಾಲದಲ್ಲಿ (ಮುಂದೆ) ಸಿಗುವ ತೃಪ್ತಿಗಿಂತಲೂ ಇಂದು ಸಿಗುವ ತೃಪ್ತಿ ಕಡಮೆ ಇದ್ದರೂ ಇಂದಿನ ಸಂತೃಪ್ತಿ ಹೆಚ್ಚಿನ ದಾಗಿರುವುದು. ಭವಿಷ್ಯ ಕಾಲದ ವಸ್ತುಗಳ ತೃಪ್ತಿಯು ವರ್ತಮಾನಕಾಲದ ವಸ್ತುಗಳ ತೃಪ್ತಿಗಿಂತಲೂ ಕಡಮೆ. ಬೋಮ್ ಬಾವರ್ಕ್‌ರವರ ಪ್ರಕಾರ 'ಕೈಯಲ್ಲಿರುವ ಒಂದು ಪಕ್ಷಿಯು ಗಿಡದಲ್ಲಿರುವ ಎರಡು ಪಕ್ಷಿಗಳಿಗಿಂತ ಮೇಲು'. ಅಂದರೆ ಯಾವಾ ಗಲೂ ಮನುಷ್ಯ ಕಂಡ ಕೂಡಲೇ ಸಿಗುವ ತೃಪ್ತಿಗೆ ಆಸೆಪಟ್ಟಷ್ಟು ಭಾವೀತೃಪ್ತಿಗೆ

ಅಂದರೆ ಮುಂದೆ ಪಡೆಯಬಹುದಾದಂತಹ ತೃಪ್ತಿಗೆ ಅಷ್ಟು ಆಸೆಪಡುವುದಿಲ್ಲ. ಇದರಿಂದ ಹಣವನ್ನು ಉಳಿಸಿ ಮುಂದೆ ಅದನ್ನು ಬಳಸಿಕೊಳ್ಳುವಂತೆ ಮಾನವನನ್ನು ಬಳಸಲು ಅವನಿಗೆ ಏನಾದರೂ ಪ್ರತಿಫಲವನ್ನು ಕೊಡಬೇಕು. ಅಂದರೆ ಭಾವೀ ಬೆಲೆಯನ್ನು ಈಗಿನ ಬೆಲೆಗೆ ಸಮಗೊಳಿಸಲು ಬಡ್ಡಿಯನ್ನು ಕೊಡಬೇಕಾಗುತ್ತದೆ. 'ಇರ್ವಿಂಗ್ ಫಿಷರ್' ಇದನ್ನು ಕಾಲದೊಲವಿನ ಬೆಲೆ ಎಂದು ಕರೆದಿದ್ದಾನೆ. ಉದಾಹರಣೆಗೆ 1000 ರೂಪಾಯಿಗಳ ಸಾಲವನ್ನು ಮತ್ತೊಬ್ಬನಿಗೆ ಒಂದು ವರ್ಷದ ಅವಧಿಗೆ ಕೊಟ್ಟಾಗ ಅವನಿಗೆ 1050 ರೂಪಾಯಿಗಳು ಬರುವುದಿದ್ದರೆ ಮಾತ್ರ ಸಾಲಕೊಡಲು ತಯಾರಿರುವನು. ಈ ಹೆಚ್ಚಿನ ಹಣವಾದ 50 ರೂಪಾಯಿಗಳು ಬಡ್ಡಿಯಾಗುತ್ತದೆ. 50 ರೂಪಾಯಿಗಳು ಬಡ್ಡಿ ಬರುವಂತಿದ್ದರೆ ಶೇಕಡಾ 5ರಷ್ಟು ಸಾಲಕೊಡುವನು. ಬಡ್ಡಿಯು ಶೇಕಡಾ 2 ರಷ್ಟಾಗಿದ್ದರೆ ಸಾಲ ಕೊಡಲು ಮುಂದೆ ಬರುವುದಿಲ್ಲ. ಭಾವೀ ವಸ್ತುಗಳಿಗಿಂತಲೂ ಈಗಿನ ವಸ್ತುಗಳ ಮೇಲಿರುವ ಮನುಷ್ಯನ ಒಲವಿಗೆ ಬೋಹಮ್ ಬಾವರ್ಕ್ ಅನೇಕ ಕಾರಣಗಳನ್ನು ಕೊಟ್ಟಿರುವನು. ಉದಾಹರಣೆಗೆ ಯೋಚನಾಶಕ್ತಿ ಇಲ್ಲದಿರುವುದು, ಜೀವನದ ಅನಿಶ್ಚಿತತೆ, ಮನಸ್ಸಿನ ನಿರ್ಧಾರದಲ್ಲಿ ಸ್ಥಿರತೆ ಇಲ್ಲದಿರುವುದು, ಜನರು ಆಶಾವಾದಿಗಳಾದ್ದರಿಂದ, ಮುಂದೆ ಹೆಚ್ಚು ವಸ್ತುಗಳು ಸಿಗಬಹುದೆಂಬ ಭ್ರಮೆಯಿಂದ ಭಾವೀಆದಾಯದ ಬೆಲೆಯನ್ನು ಕಳೆಯುವುದು, ಈಗಿನ ವಸ್ತುಗಳು ಮುಂದೆ ದೊರಕುವ ವಸ್ತುಗಳಿಗಿಂತ ಉತ್ತಮವಾದುದೆಂಬ ಭಾವನೆಯನ್ನು ತಳೆದಿರುವುದು. ಈ ಕಾರಣಗಳಿಂದ ಈಗಿನ ವಸ್ತುಗಳ ತುಷ್ಟಿಗುಣವು ಭಾವೀವಸ್ತುಗಳ ತುಷ್ಟಿಗುಣಕ್ಕಿಂತಲೂ ಹೆಚ್ಚಿರುತ್ತದೆ. ಈ ನಿಯಮವು ವ್ಯೆಯುಕ್ತಿಕಗುಣಕ್ಕೆ ಹೆಚ್ಚು ಮಹತ್ವ ಕೊಟ್ಟಿದೆ ಎಂಬುದಾಗಿ ಟೀಕಿಸಲಾಗಿದೆ. ಏಕೆಂದರೆ ಕೆಲವು ಜನ, ಸದ್ಯದ ತೃಪ್ತಿಗೆ ಮಹತ್ವ ಕೊಟ್ಟರೆ ಮತ್ತೆ ಕೆಲವರು ಭವಿಷ್ಯದ ತೃಪ್ತಿಗೆ ಮಹತ್ವಕೊಡುವರು. ಅನೇಕ ಜನರು ಭವಿಷ್ಯದ ಸುಖಕ್ಕೆ ಇಂದಿನ ಸುಖವನ್ನು ತ್ಯಾಗಮಾಡುವುದೂ ಉಂಟು. ಮುಪ್ಪಿನ ಸಮಯದಲ್ಲಿ ನೆರವಾಗಲು, ಮಕ್ಕಳ ವಿದ್ಯಾಭ್ಯಾಸ, ಮಗಳ ಮದುವೆ ಮುಂತಾದ ಕಾರ್ಯಗಳಿಗೆ ಸದ್ಯದ ಸುಖವನ್ನು ತ್ಯಾಗಮಾಡಿ ಉಳಿತಾಯ ಮಾಡುವರು. ಆದ್ದರಿಂದ ಈ ನಿಯಮದ ಪ್ರಕಾರ ಎಲ್ಲರೂ ಇಂದಿನ ಸುಖವನ್ನು ಬಯಸುವರು ಎಂಬುದು ವಾಸ್ತವಾಂಶವಲ್ಲ.

(iv) **ಸಾಲ ನಿಧಿಯ ಸಿದ್ಧಾಂತ :** ಈ ಸಿದ್ಧಾಂತದ ಪ್ರಕಾರ ಬಡ್ಡಿಯ ದರವನ್ನು ಬಂಡವಾಳಕ್ಕಿರುವ ಬೇಡಿಕೆ ಮತ್ತು ಪೂರೈಕೆಗಳಿಂದ ನಿರ್ಧರಿಸಲಾಗುತ್ತದೆ. ಅಂದರೆ ಬೇಡಿಕೆ ಮತ್ತು ಪೂರೈಕೆಗಳ ಸಮತೋಲನದಿಂದ ಬಡ್ಡಿಯ ದರವನ್ನು ನಿರ್ಧರಿಸಲಾಗುವುದು. ಬಂಡವಾಳಕ್ಕೆ ಬೇಡಿಕೆಯು ಉತ್ಪಾದಕರಿಂದ ಉಂಟಾಗುವುದು. ವಸ್ತುಗಳನ್ನು ಉತ್ಪಾದಿಸಲು ಉತ್ಪಾದಕರು ಬಂಡವಾಳವನ್ನು ಸಾಲವಾಗಿ ಪಡೆಯುವರು. ಈ ರೀತಿ ಪಡೆದ ಹಣದಿಂದ ಯಂತ್ರಗಳನ್ನು, ಕಚ್ಚಾ ಪದಾರ್ಥಗಳನ್ನು ಕೊಂಡು

ಕೊಳ್ಳುವರು. ಬಂಡವಾಳ ಹೆಚ್ಚು ಉತ್ಪಾದನೆಯನ್ನು ಕೊಡುವಂತಿದ್ದರೆ ಹೆಚ್ಚು ಬಡ್ಡಿ ಕೊಟ್ಟು ಸಾಲ ಪಡೆಯುವರು. ಬಂಡವಾಳದ ಉತ್ಪಾದನೆ ಕಡಮೆಯಿದ್ದಲ್ಲಿ ಹೆಚ್ಚು ಬಡ್ಡಿ ಕೊಡಲು ತಯಾರಿರುವುದಿಲ್ಲ. ಸಾಮಾನ್ಯವಾಗಿ ಬಡ್ಡಿಯ ದರ ಹೆಚ್ಚಿದ್ದಾಗ ಸಾಲಕ್ಕೆ ಕಡಮೆ ಬೇಡಿಕೆ ಇರುತ್ತದೆ. ಕಡಮೆ ಬಡ್ಡಿ ಇದ್ದಾಗ ಸಾಲಕ್ಕೆ ಹೆಚ್ಚು ಬೇಡಿಕೆ ಇರುವುದು. ಆದರೆ ಬಂಡವಾಳಕ್ಕೆ ಕೊಡುವ ಬಡ್ಡಿ ಅಂಚಿನ ಅಥವಾ ಸೀಮಾಂತ ಉತ್ಪಾದನೆಗಿಂತ ಕಡಮೆ ಇರುವವರೆಗೆ ಉತ್ಪಾದಕರು ಹೆಚ್ಚು ಬಂಡವಾಳವನ್ನು ಸಾಲವಾಗಿ ಪಡೆದು ಉತ್ಪಾದನೆಯಲ್ಲಿ ತೊಡಗಿಸುತ್ತಾರೆ.


ಕೆಲವರು ಬಳಕೆಯ ವಸ್ತುಗಳಾದ ಕಾರು, ರೇಡಿಯೋ, ಸ್ಕೂಟರ್, ಮನೆಗಳನ್ನು ಕಟ್ಟಿಸಲು, ರೆಫ್ರಿಜರೇಟರ್ ಮುಂತಾದ ವಸ್ತುಗಳನ್ನು ಕೊಳ್ಳಲು ಹಣವನ್ನು ಸಾಲವಾಗಿ ಪಡೆಯುವರು. ಇವು ಬಹುಕಾಲ ಬಾಳಿಕೆ ಬರುವಂತಹ ವಸ್ತುಗಳು. ಇಂತಹ ವಸ್ತುಗಳನ್ನು ಕೊಳ್ಳಬಯಸುವವರು ಬಡ್ಡಿಯ ದರ ಕಡಮೆ ಇದ್ದಾಗ ಸಾಲ ಪಡೆದು ಶೇಖರಿಸಿಡುವರು. ಅನಂತರ ಅದನ್ನು ಬಳಸುವರು. ಅಂದರೆ ಬಡ್ಡಿಯ ದರ ಕಡಮೆ ಇದ್ದಾಗ ಇಂತಹ ಸಾಲಕ್ಕೆ ಬೇಡಿಕೆ ಹೆಚ್ಚು. ಬಡ್ಡಿಯ ದರ ಹೆಚ್ಚಿದ್ದಾಗ ಸಾಲದ ಬೇಡಿಕೆ ಕಡಮೆ ಇರುತ್ತದೆ. ಬಂಡವಾಳದ ಪೂರೈಕೆಯು ಅನೇಕ ಅಂಶಗಳನ್ನು ಅವಲಂಬಿಸಿರುವುದು. ಅವುಗಳಲ್ಲಿ ಮುಖ್ಯವಾದವು ಉಳಿತಾಯ, ಬ್ಯಾಂಕುಗಳು ಕೊಡುವ ಸಾಲ.

ಸಾಲವಾಗಿ ಕೊಡಬಲ್ಲ ಹಣದ ಪೂರೈಕೆಯಲ್ಲಿ ಉಳಿತಾಯ ಬಹಳ ಮುಖ್ಯವಾದುದು. ಉಳಿತಾಯ ಜನರ ಆದಾಯವನ್ನವಲಂಬಿಸಿರುತ್ತದೆ. ಆದಾಯ ಹೆಚ್ಚಾಗಿದ್ದಾಗ ಉಳಿತಾಯ ಹೆಚ್ಚಿರುತ್ತದೆ. ಆದಾಯ ಕಡಮೆ ಇದ್ದಾಗ ಉಳಿತಾಯ ಕಡಮೆ ಇರುತ್ತದೆ. ಉಳಿತಾಯ ಬಡ್ಡಿಯ ದರವನ್ನವಲಂಬಿಸಿರುತ್ತದೆ. ಬಡ್ಡಿಯದರ ಹೆಚ್ಚಿದ್ದಾಗ ಉಳಿತಾಯ ಹೆಚ್ಚಿರುತ್ತದೆ. ಬಡ್ಡಿಯ ದರವು ಕಡಮೆ ಇದ್ದಾಗ ಉಳಿತಾಯ ಕಡಮೆ ಇರುತ್ತದೆ. ವ್ಯಾಪಾರಸ್ಥರು ಉಳಿತಾಯ ಮಾಡಿದ ಹಣವನ್ನು ತಮ್ಮ ಉದ್ದಿಮೆಯ ಬಂಡವಾಳದೊಂದಿಗೆ ತೊಡಗಿಸುತ್ತಾರೆ.

ವಾಣಿಜ್ಯ ಬ್ಯಾಂಕುಗಳು ಉದ್ದಿಮೆದಾರರಿಗೆ, ವ್ಯಾಪಾರಸ್ಥರಿಗೆ ಸಾಲ ಕೊಡುತ್ತವೆ. ಲಾಭವೇ ಅವುಗಳ ಮುಖ್ಯ ಗುರಿ. ವಾಣಿಜ್ಯ ಬ್ಯಾಂಕುಗಳು ಸಾಲದ ಪ್ರಮಾಣವನ್ನು ಹೆಚ್ಚಿಸಿದಾಗ ಹಣದ ಪೂರೈಕೆಯು ಹೆಚ್ಚಾಗುವುದು. ಸಾಲದ ಪ್ರಮಾಣವನ್ನು ಕಡಮೆ ಮಾಡಿದಾಗ ಹಣದ ಪೂರೈಕೆಯು ಕಡಮೆಯಾಗುತ್ತದೆ. ಬಡ್ಡಿಯು ಹೆಚ್ಚಿದ್ದಾಗ ಸಾಲದ ಪ್ರಮಾಣವನ್ನು ವಿಸ್ತರಿಸುತ್ತವೆ. ಬಡ್ಡಿ ದರ ಕಡಮೆ ಇದ್ದಾಗ ಸಾಲದ ಪ್ರಮಾಣವನ್ನು ಸಂಕುಚಿತಗೊಳಿಸುತ್ತವೆ. ವ್ಯಕ್ತಿಗಳಲ್ಲಿ, ಹಣವನ್ನು ಸ್ವಲ್ಪ ಕಾಲದವರೆಗೆ ಕೂಡಿಡುವ ಸ್ವಭಾವ ಇರುವುದುಂಟು. ಈ ರೀತಿ ಹಣವನ್ನು ಒಂದು ಕಡೆ ಕೂಡಿಟ್ಟಾಗ

ಆದರಿಂದ ಉತ್ಪಾದನೆಗೆ ಯಾವ ಸಹಾಯವೂ ಆಗುವುದಿಲ್ಲ. ಆದರೆ ಬಡ್ಡಿ ದರ ಹೆಚ್ಚಿದ್ದಾಗ ಕೂಡಿಟ್ಟ ಹಣವನ್ನು ಬಳಸಲಾಗುತ್ತದೆ. ಇದರಿಂದ ಸಾಲವಾಗಿ ಕೊಡಬಲ್ಲ ಹಣದ ಪೂರೈಕೆಯು ಹೆಚ್ಚುತ್ತದೆ.

ಬಂಡವಾಳದ ಬೇಡಿಕೆ ಮತ್ತು ಪೂರೈಕೆಗಳ ಆಧಾರ ಮೇಲೆ ಬಡ್ಡಿಯು ದರವನ್ನು ಕೆಳಗಿನ ರೇಖಾ ಚಿತ್ರದ ಮೂಲಕ ವಿವರಿಸಬಹುದು,



ಆಲೇಖನ 10: ಬಂಡವಾಳದ ಬೇಡಿಕೆ ಮತ್ತು ಪೂರೈಕೆಗಳಿಗೆ ಅನುಗುಣವಾಗಿ ಬಡ್ಡಿದರ ನಿರ್ಧರಿಸುವಿಕೆ

ಆಧಾರ : ಡಿವೆಟ್ ಕೆ. ಕೆ. ಮಾಡರ್ನ್ ಎಕನಾಮಿಕ್ ಥಿಯರಿ, ಪುಟ 375

ಬಡ್ಡಿಯು ದರ ಏರಿದಂತೆ ಬಂಡವಾಳದ ಪೂರೈಕೆ ಹೆಚ್ಚಾಗುತ್ತದೆ. ಇಲ್ಲಿ AB ರೇಖೆಯಲ್ಲಿ ಬೇಡಿಕೆ ಮತ್ತು ಪೂರೈಕೆಯನ್ನೂ, AK ರೇಖೆಯಲ್ಲಿ ಬಡ್ಡಿಯು ದರವನ್ನೂ ತೋರಿಸಲಾಗಿದೆ. SS ಇದು ಬಂಡವಾಳದ ಪೂರೈಕೆಯ ರೇಖೆ. ಬಂಡವಾಳಕ್ಕಿರುವ ಬೇಡಿಕೆಯು ರೇಖೆಯನ್ನು DD^1 ರೇಖೆಯು ತೋರಿಸುತ್ತದೆ. ಬಡ್ಡಿಯು ದರ ಕಡಮೆ ಇದ್ದಾಗ ಬೇಡಿಕೆ ಹೆಚ್ಚಿರುತ್ತದೆ. ಬಡ್ಡಿಯ ದರ ಹೆಚ್ಚು ಇದ್ದಾಗ ಬೇಡಿಕೆ ಕಡಮೆ ಇರುತ್ತದೆ. ಬಡ್ಡಿಯು ದರ AB ಇದ್ದಾಗ ಹಣದ ಪೂರೈಕೆ ಇರುವುದಿಲ್ಲ. ಆದರೆ ಬೇಡಿಕೆ ಮತ್ತು ಪೂರೈಕೆಗಳು AN ಗೆ ಸಮನಾದಾಗ ಬಡ್ಡಿಯು ದರ ನಿರ್ಧರಿಸಲ್ಪಡುತ್ತದೆ. ಬೇಡಿಕೆ ರೇಖೆ DD^1 ಹಾಗೂ ಪೂರೈಕೆ ರೇಖೆ SS ಗಳು R^1 ನಲ್ಲಿ ಸಂಧಿಸು

ತ್ರವೆ. ಆದ್ದರಿಂದ R^1 ಬಿಂದುವು ಸಮತೋಲನ ಬಿಂದು. ಬಡ್ಡಿಯ ದರ AR ಅಥವಾ R^1N ಎಂಬುದು ನಿರ್ಧಾರವಾಗುತ್ತದೆ.

ಹಣದ ಒಲವಿನ ಸಿದ್ಧಾಂತ : ಹಣದ ಒಲವಿನ ಸಿದ್ಧಾಂತವನ್ನು ಪ್ರಸಿದ್ಧ ಅರ್ಥಶಾಸ್ತ್ರಜ್ಞನಾದ ಜೆ. ಎಂ. ಕೀನ್ಸ್ 'ಜನರಲ್ ಥಿಯರಿ' ಎಂಬ ಪುಸ್ತಕದಲ್ಲಿ ಪ್ರತಿಪಾದಿಸಿದ್ದಾನೆ. ಬಡ್ಡಿಯ ಬಗ್ಗೆ ಕೀನ್ಸ್ ನೀಡಿರುವ ಸಿದ್ಧಾಂತವು ಬೇರೆಯದಾಗಿದೆ ಎಂದು ಹೇಳಬಹುದು. ಕೀನ್ಸ್ ಹಣದ ಒಲವನ್ನು ತ್ಯಜಿಸಲು ಕೊಡಬೇಕಾದ ಬೆಲೆಯೇ 'ಬಡ್ಡಿ' ಎಂಬುದಾಗಿ ವಿವರಿಸಿದ್ದಾನೆ. ಕೀನ್ಸ್‌ನ ತತ್ವದಲ್ಲಿ ಹಣದೊಲವಿಗೆ ಬಹು ಪ್ರಾಧಾನ್ಯತೆ ಕೊಡಲಾಗಿದೆ. ಬಡ್ಡಿಯು ಹಣವನ್ನು ಇತರರಿಗೆ ನಿರ್ದಿಷ್ಟ ಅವಧಿಯವರೆಗೆ ಸಾಲದ ರೂಪದಲ್ಲಿ ಕೊಟ್ಟು ಅವರು ಕೊಡುವವರೆಗೆ ಕಾಯುವುದಕ್ಕೆ ಕೊಡುವ ಪ್ರತಿಫಲವಲ್ಲ. ಹಣವನ್ನು ಉಳಿತಾಯ ಮಾಡಲು ಕೊಡುವ ಬೆಲೆಯೂ ಅಲ್ಲ. ಮನುಷ್ಯ ಹಣವನ್ನು ಕೂಡಿಸಬಹುದು. ಕೇವಲ ಹಣವನ್ನು ಕೂಡಿಡುವುದರಿಂದ ಯಾವ ಪ್ರತಿಫಲವೂ ಸಿಗುವುದಿಲ್ಲ. ಅವನು ಹಣವನ್ನು ಬೇರೆಯವರಿಗೆ ಸಾಲ ರೂಪದಲ್ಲಿ ಕೊಟ್ಟಾಗ, ಹಣ ಅವನ ಕೈಬಿಟ್ಟು ಹೋದಾಗ ಮಾತ್ರ ಅವನಿಗೆ ಸಂಭಾವನೆ ಸಿಗುವುದು. ಆದಕಾರಣ ಬಡ್ಡಿಯು ಹಣದೊಲವನ್ನು ತ್ಯಜಿಸಲು ಕೊಡಬೇಕಾದ ಬೆಲೆ ಎಂದು ಕೀನ್ಸ್ ಅಭಿಪ್ರಾಯ ಪಟ್ಟಿರುವನು.

ಪ್ರತಿಯೊಬ್ಬ ಮನುಷ್ಯನೂ ತನ್ನ ಆದಾಯದ ಒಂದು ಭಾಗವನ್ನು ಸುಲಭವಾಗಿ ವಿನಿಮಯವಾಗಬಲ್ಲ ನಗದಿನ ರೂಪದಲ್ಲಿ ಇಡಬಯಸುವನು. ಇದನ್ನು 'ಕೀನ್ಸ್ ದ್ರವ್ಯ ಮಾನ್ಯತೆ' ಎಂದು ಕರೆಯುತ್ತಾನೆ. ಎಲ್ಲರೂ ಹಣದ ರೂಪದಲ್ಲಿ ತಮ್ಮ ಬಳಿ ಇಟ್ಟುಕೊಳ್ಳಲು ಅಪೇಕ್ಷೆ ಪಡುವರು. ಹಣದ ಒಲವನ್ನು ಅಥವಾ ದ್ರವ್ಯ ಮಾನ್ಯತೆಯನ್ನು ರೂಪಿಸುವ ಪ್ರೇರಕ ಶಕ್ತಿಗಳು (i) ವ್ಯವಹಾರ ಪ್ರೇರಕ ಶಕ್ತಿ (ii) ಮುಂಜಾಗ್ರತೆಯ ಪ್ರೇರಕ ಶಕ್ತಿ ಹಾಗೂ (iii) ಸಟ್ಟಾ ವ್ಯಾಪಾರದ ಪ್ರೇರಕಶಕ್ತಿ. ಹೀಗೆ ಮೂರು ಬಗೆಯವಾಗಿವೆ. ಈ ಮೂರು ಪ್ರೇರಕ ಶಕ್ತಿಗಳಲ್ಲಿ ವ್ಯಕ್ತಿಯು ಯಾವ ರೀತಿ ತನ್ನ ಆದಾಯವನ್ನು ಹಂಚುವನು ಎಂಬುದನ್ನು ತಿಳಿಸುವುದೇ 'ಹಣದೊಲವು'.

(i) **ವ್ಯವಹಾರ ಪ್ರೇರಕಶಕ್ತಿ :** ಪ್ರತಿಯೊಬ್ಬ ವ್ಯಕ್ತಿಯು ಆದಾಯವನ್ನು ಸಾಮಾನ್ಯವಾಗಿ ತಿಂಗಳಿಗೊಂದುಬಾರಿ ಅಥವಾ ವಾರಕ್ಕೊಂದುಬಾರಿ ಪಡೆಯುವನು. ಆದರೆ ಅವನ ವೆಚ್ಚವು ಪ್ರತಿದಿನವೂ ತಿಂಗಳ ಪೂರ್ತಿ ಹರಡಿರುತ್ತದೆ. ಆದ್ದರಿಂದ ಮುಂದಿನ ತಿಂಗಳ ವೇತನ ಬರುವವರೆಗೆ ದೈನಂದಿನ ವೆಚ್ಚಗಳನ್ನು ನಿರ್ವಹಿಸಲು ಅವನು ಹಣವನ್ನಿಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಆದಾಯದ ಸ್ವಲ್ಪ ಭಾಗವನ್ನು ಹಣದ ರೂಪದಲ್ಲಿಟ್ಟುಕೊಳ್ಳುವನು.

(ii) **ಮುಂಜಾಗ್ರತೆಯ ಪ್ರೇರಕಶಕ್ತಿ :** ಆದಾಯದ ಸ್ವಲ್ಪ ಭಾಗವನ್ನು ಪ್ರತಿಯೊಬ್ಬರೂ ಹಣದ ರೂಪದಲ್ಲಿಡುವರು. ಮುಂದೆ ಸಂಭವಿಸಬಹುದಾದ

ಆಪತ್ತುಗಳನ್ನು ಎದುರಿಸುವ ಸಲುವಾಗಿ ಅಂದರೆ ದುರ್ಘಟನೆಗಳು, ನಿರುದ್ಯೋಗಗಳು ಇತ್ಯಾದಿಗಳಿಗಾಗಿ ಹಣವನ್ನು ಕಾಯ್ದಿಡಬೇಕು. ಅಕಸ್ಮಾತ್ ತಿಂಗಳ ಮಧ್ಯೆ ಅಸ್ವಸ್ಥತೆಯಾಗಬಹುದು. ಆಗ ವೈದ್ಯಕೀಯ ಉಪಚಾರಕ್ಕೆ ಹಣವನ್ನು ವೆಚ್ಚಮಾಡಲೇಬೇಕಾದ ಪ್ರಸಂಗ ಒದಗುತ್ತದೆ. ಶಕ್ತಿಇದ್ದು ದುಡಿಯುವವರೆಗೂ ನಮ್ಮ ಸಮಾನರಿಲ್ಲ. ಆದರೆ ಮುಪ್ಪಿನಲ್ಲಿ, ಆಪತ್ತಿನಲ್ಲಿ ಯಾರೂ ನೆರವಾಗಲಾರರು. ದುಡಿಯುವ ಶಕ್ತಿ ಇದ್ದಾಗಲೂ ಕೆಲವು ಅಪಘಾತಗಳು ಸಂಭವಿಸಬಹುದು. ಹೀಗೆ ಕಷ್ಟದ ಸಮಯದಲ್ಲಿ ನಮ್ಮನ್ನು ಕಾಯಲು ಹಣಬೇಕಾಗುತ್ತದೆ. ಆದ್ದರಿಂದ ಮುಂದಿನ ಅನಿರೀಕ್ಷಿತ ದುರ್ಘಟನೆಗಳನ್ನು ಎದುರಿಸಲು ಹಣವನ್ನು ಕಾಯ್ದಿಡಬೇಕು. ಹೀಗೆ ಮುಂಜಾಗ್ರತೆಯಾಗಿ ಕಾಯ್ದಿಡುವ ಹಣವೇ ಮುಂಜಾಗ್ರತೆಯ ಪ್ರೇರಕಶಕ್ತಿ.

(iii) **ಸಟ್ಟಾ ವ್ಯಾಪಾರದ ಪ್ರೇರಕಶಕ್ತಿ :** ಕೆಲವರು ತಮ್ಮ ಆದಾಯದಲ್ಲಿ ಸ್ವಲ್ಪ ಭಾಗವನ್ನು ಸಟ್ಟಾ ವ್ಯಾಪಾರಮಾಡಲು ತೆಗೆದಿಡುವರು. ಅವರ ಮುಖ್ಯ ಗುರಿಯೇ ಸಟ್ಟಾವ್ಯಾಪಾರ. ಬೆಲೆಗಳು ಕಡಮೆ ಇದ್ದಾಗ ವಸ್ತುಗಳನ್ನು ಖರೀದಿಮಾಡಿ ಬೆಲೆಗಳು ಏರಿದಾಗ ಮಾರಾಟಮಾಡಿ ಲಾಭಗಳಿಸುವುದೇ ಸಟ್ಟಾವ್ಯಾಪಾರದ ಮುಖ್ಯ ಗುರಿ. ಸಾಮಾನ್ಯವಾಗಿ ವ್ಯಾಪಾರಸ್ಥರು ವಸ್ತುಗಳನ್ನು ಕಡಮೆ ಬೆಲೆಗೆ ಕೊಂಡು, ಸಂಗ್ರಹಿಸಿಟ್ಟು ಮಾರಾಟಮಾಡುವರು. ಬೆಳ್ಳಿ, ಬಂಗಾರ, ಷೇರು ಮತ್ತು ಹತ್ತಿಯ ಪೇಟೆಗಳಲ್ಲಿ ವ್ಯಾಪಾರಸ್ಥರು ಲಕ್ಷಾಂತರ ರೂಪಾಯಿಗಳನ್ನು ತೊಡಗಿಸುವರು. ಇಂತಹ ವ್ಯಾಪಾರ ಮಾಡುವವರಿಗೆ ಹಣವು ಹಣದ ರೂಪದಲ್ಲಿ ಇರಬೇಕು. ಏಕೆಂದರೆ ಆ ವಸ್ತುಗಳ ಬೆಲೆ ಕಡಮೆಯಾದ ಕೂಡಲೇ ಅಧಿಕ ಪ್ರಮಾಣದಲ್ಲಿ ಕೊಳ್ಳಲು ನಗದು ಹಣವು ಬೇಕು. ಬೆಲೆಗಳು ಮುಂದೆ ಇಳಿಯುವವೆಂದು ಕಂಡುಬಂದರೆ ಹೆಚ್ಚು ಹಣವನ್ನು ಅವರು ತಮ್ಮ ಬಳಿ ಇಟ್ಟುಕೊಳ್ಳುವರು. ಬೆಲೆಗಳು ಇಳಿದ ನಂತರ ವಸ್ತುಗಳನ್ನು ಖರೀದಿಮಾಡುತ್ತಾರೆ. ಬೆಲೆಗಳು ಏರಿದಾಗ ಮಾರಾಟಮಾಡುತ್ತಾರೆ. ಇದರಂತೆಯೇ ಬಡ್ಡಿಯದರ ಕಡಮೆ ಇದ್ದಾಗ ಜನರು ತಮ್ಮ ಬಳಿ ಹೆಚ್ಚು ಹಣವನ್ನಿಟ್ಟುಕೊಳ್ಳಲು ಬಯಸುತ್ತಾರೆ. ಬಡ್ಡಿಯದರ ಹೆಚ್ಚಾದಾಗ, ಹೆಚ್ಚು ಬಡ್ಡಿಯನ್ನು ಗಳಿಸುವ ದೃಷ್ಟಿಯಿಂದ ಸಾಲಕೊಡಲು ಮುಂದೆ ಬರುವರು. ಇಂತಹ ಪ್ರವೃತ್ತಿಗೆ ಹಣದ ಒಲವು ಎಂದು ಕರೆಯುವರು. ಇಂತಹ ನಗದು ಹಣವನ್ನು ಇತರರಿಗೆ ಕೊಡಬೇಕಾದರೆ ಪ್ರತಿಫಲ ಕೊಡಬೇಕು. ಉಳಿತಾಯಗಾರರು ನಗದನ್ನು ಬಿಟ್ಟುಕೊಡುವುದಕ್ಕೆ ಪ್ರತಿಯಾಗಿ ಕೊಡುವ ಈ ಪ್ರತಿಫಲವೇ ಬಡ್ಡಿ ಎಂಬುದಾಗಿ ಕೀನ್ಸ್ ಹೇಳಿರುವನು. ಬಡ್ಡಿಯದರ ನಗದಿನ ಪೂರೈಕೆ ಮತ್ತು ಬೇಡಿಕೆಯಿಂದ ನಿರ್ಧರಿಸಲ್ಪಡುತ್ತದೆ. ಹಣವನ್ನು ನಗದುರೂಪದಲ್ಲಿಡುವ ಅಭಿಲಾಷೆಯನ್ನು ಹಣದ ಪ್ರಮಾಣದೊಂದಿಗೆ ಹೊಂದಿಸುವ ಬೆಲೆಯೇ ಬಡ್ಡಿಯದರ. ಹಣದೊಲವನ್ನು ವೃದ್ಧಿಗೊಳಿಸುವ ಆಸಕ್ತಿಗಳಲ್ಲಿ ಸಟ್ಟಾವ್ಯಾಪಾರದ ಆಸಕ್ತಿಯು ಬಡ್ಡಿಯದರದ ನಿರ್ಧಾರದಲ್ಲಿ ಬಹುಮುಖ್ಯವಾದುದು.

ಸಾಮಾನ್ಯ ವ್ಯವಹಾರ ಹಾಗೂ ಮುಂಜಾಗ್ರತೆಯ ಆಸಕ್ತಿಗಳು ಅಷ್ಟು ಮುಖ್ಯವಲ್ಲ ಎಂಬುದು ಕೀನ್ಸ್‌ವಾದ. ಸಟ್ಟಾವ್ಯಾಪಾರದ ಪ್ರೇರಕಶಕ್ತಿ ಅಂದರೆ ಹಣದೊಲವು ಬಡ್ಡಿಯದರದ ಬದಲಾವಣೆಗೆ ಹೆಚ್ಚಿನ ಪ್ರತಿಕ್ರಿಯೆಯನ್ನು ತೋರಿಸುತ್ತದೆ. ಅದು ಹೇಗೆಂಬುದನ್ನು ಪರಿಶೀಲಿಸೋಣ.

ಒಟ್ಟು ಹಣದ ನೀಡಿಕೆಯನ್ನು M ಎಂಬುದಾಗಿ ಕರೆದರೆ ವ್ಯವಹಾರ ಹಾಗೂ ಮುಂಜಾಗ್ರತೆಯ ಉದ್ದೇಶದಿಂದ ಇಟ್ಟುಕೊಳ್ಳುವ ನಗದು ಹಣ M_1, ಸಟ್ಟಾ ವ್ಯಾಪಾರದ ಉದ್ದೇಶದಿಂದ ಇಟ್ಟುಕೊಳ್ಳುವ ಹಣ M_2. $(M=M_1+M_2)$. M_2 ಹಣದ ಪ್ರಮಾಣವು ಬಡ್ಡಿಯ ದರದ (r) ಒಂದು ಕ್ರಿಯೆ (L_2) $M_2+(L_2)$. ಸಟ್ಟಾವ್ಯಾಪಾರದ ಪ್ರೇರಣೆಯಿಂದ ಇರಿಸಿದ ಹಣಕ್ಕೂ ಬಡ್ಡಿಯದರಕ್ಕೂ ನಡುವೆ ಕಂಡುಬರುವ ವ್ಯತ್ಯಾಸ $M=L_2(r)$ ವ್ಯವಹಾರ ಹಾಗೂ ಮುಂಜಾಗ್ರತೆಯ ದೃಷ್ಟಿಯಿಂದ ಇರಿಸಿದ ಹಣ (M_1). ಇದನ್ನು ವರಮಾನದಿಂದ (Y) ಅಳೆಯಲು ಸಾಧ್ಯವಾಗುವುದು. ಆದ ಕಾರಣ ಈ ರೀತಿ ವ್ಯಕ್ತಪಡಿಸಬಹುದು.

$$M=L_1(y)+L_2(r)$$

ಒಟ್ಟು ಹಣದ ಪ್ರಮಾಣದಲ್ಲಿ (M) ಎರಡು ಭಾಗಗಳಿವೆ.

ಒಂದನೆಯದು, ವ್ಯವಹಾರ ಮತ್ತು ಮುಂಜಾಗ್ರತೆಯ ಪ್ರೇರಕಶಕ್ತಿಯಿಂದಿರಿಸಿದ ಹಣ (M_1),

ಎರಡನೆಯದು ಸಟ್ಟಾವ್ಯಾಪಾರದ ಪ್ರೇರಕಶಕ್ತಿಯ ಧ್ಯೇಯದಿಂದಿರಿಸಿದ ಹಣ (M_2).


ಮೊದಲನೆಯದರ ಬೇಡಿಕೆ ವರಮಾನದ ಬದಲಾವಣೆಗಳಿಂದ ಮಾರ್ಪಾಡಾಗುತ್ತದೆ. $M_1=[L_1(y)]$

ಎರಡನೆಯದರ ಬೇಡಿಕೆ (M_2) ಬಡ್ಡಿಯದರದ ಬದಲಾವಣೆಗಳಿಂದ ಮಾರ್ಪಾಡಾಗುವುದು.

ಆದ್ದರಿಂದಲೇ $M_2=L_2(r)$ ಸಮೀಕರಣರೂಪುಗೊಂಡಿದೆ.

ವರಮಾನ ಏರುತ್ತಿದ್ದರೆ $(r)M_1$ ಬೇಡಿಕೆಯೂ ಏರುತ್ತದೆ. ಹಣದ ಒಟ್ಟು ಪ್ರಮಾಣ (M) ಹೆಚ್ಚಾದರೆ M_2 ನಿಂದ ಹಣದ ವರ್ಗಾವಣೆಯಾಗಿ M_1 ನಲ್ಲಿ ಹಣ ಹೆಚ್ಚಾಗುವುದು. ಸಟ್ಟಾಧ್ಯೇಯವನ್ನು ಪೂರ್ತಿಗೊಳಿಸಲು ಹಣದ ಪ್ರಮಾಣ ಕಡಮೆಯಾಗುವುದು, ಬಡ್ಡಿಯದರ ಹೆಚ್ಚಾಗುವುದು. ಆದಾಯದ ಮೇಲೆ ಪ್ರತಿಕೂಲ ವಾತಾವರಣವನ್ನು ಬೀರುವುದು. ಇದರಿಂದ M_2ಗೆ ಬೇಕಾದ ಹಣವನ್ನು ಕಡಮೆ ಮಾಡದೆ ವ್ಯವಹಾರಕ್ಕೆ ಬೇಕಾಗುವಷ್ಟು ಹಣ ಒದಗಿಸಬಹುದು. ಬ್ಯಾಂಕುಗಳ ಸುಲಭ

ಹಣನೀತಿಯು ಇಂತಹ ಹಣದ ವಿಸ್ತರಣೆಗೆ ನೆರವಾಗುವುದು. ಆದ್ದರಿಂದ ಹಣದ ಒಲವು ಹೆಚ್ಚಿಗಿದ್ದಾಗ ಹೆಚ್ಚು ಬಡ್ಡಿದರವೂ ಮತ್ತು ಹಣದ ಒಲವು ಕಡಮೆ ಇದ್ದಾಗ ಕಡಮೆ ಬಡ್ಡಿದರವೂ ಇರುವುದೆಂದೂ ಕೀನ್ಸ್ ಅಭಿಪ್ರಾಯಪಟ್ಟಿರುವರು. ಇದನ್ನು ರೇಖಾ ಚಿತ್ರದ ಮೂಲಕವೂ ಸಹ ತೋರಿಸಬಹುದು.



ಆಲೇಖನ 11. ಹಣದ ಒಲವು

ಆಧಾರ : ಡಿವೆಟ್ ಕೆ. ಕೆ. ಮಾಡರ್ನ್ ಎಕನಾಮಿಕ್ ಥಿಯರಿ, ಪುಟ 382

OX ರೇಖೆ ಹಣದ ಪೂರೈಕೆಯನ್ನು, OY ರೇಖೆ ಬಡ್ಡಿಯನ್ನು ತೋರಿಸುತ್ತದೆ. ಹಣದ ಒಲವು ಹೆಚ್ಚಿಗೆ ಇದ್ದಾಗ ಹಣದ ಪೂರೈಕೆ OM ಇರುವುದು. ಹಣದ ಪೂರೈಕೆ ಕಡಮೆ ಇರುವುದರಿಂದ ಬಡ್ಡಿಯ ದರ OK ಇದೆ. ಹಣದ ಒಲವು ಕಡಮೆಯಾದಾಗ ಹಣದ ಪೂರೈಕೆ OM^1ಗೆ ಏರುವುದು ಮತ್ತು ಬಡ್ಡಿದರ OK ನಿಂದ OK_1 ಗೆ ಇಳಿಯುವುದು.

ಬಡ್ಡಿಯದರ ಏರಿದಂತೆ ಒಟ್ಟು ಹಣದ ಪ್ರಮಾಣ ಕುಗ್ಗುವುದು. ಇದನ್ನು ತಡೆಗಟ್ಟಲು ಒಟ್ಟು ಹಣದ ಪ್ರಮಾಣವನ್ನು ಹೆಚ್ಚಿಸಬೇಕು. ಅಂದರೆ ಸಟ್ಟಾ

ವ್ಯಾಪಾರಕ್ಕೆ ಬೇಕಾದ ನಗದು ಹಣವನ್ನು ಕಡಮೆಮಾಡದೆ, ವ್ಯವಹಾರಕ್ಕೆ ಬೇಕಾಗುವ ಹಣವನ್ನು ಒದಗಿಸಬೇಕು. ಬ್ಯಾಂಕುಗಳು ಮುಂದೆ ಬಂದು ಹಣದ ಅಭಾವಕ್ಕೆ ಅವಕಾಶ ಕೊಡದೆ ಸೂಕ್ತ ರೀತಿಯಲ್ಲಿ ಸಾಲಕೊಡುವ ಕ್ರಮಗಳನ್ನು ಕೈಗೊಳ್ಳಬೇಕು. ಬಡ್ಡಿಯ ದರವನ್ನು ತೀರ ಕಡಮೆ ಮಟ್ಟಕ್ಕೆ ಇಳಿಸಬಾರದು.

ಲಾಭ

ಲಾಭವು ಉತ್ಪಾದಕನಾದವನು ಉದ್ದಿಮೆಯಲ್ಲಿ ತಾನು ಸಲ್ಲಿಸಿದ ಸೇವೆಗಾಗಿ ಪಡೆಯುವ ಪ್ರತಿಫಲ. ಸಂಘಟನಾಕಾರನು ವಸ್ತುಗಳನ್ನು ಉತ್ಪಾದಿಸಲು ಉತ್ಪಾದನಾಂಶಗಳಾದ ಭೂಮಿ, ಶ್ರಮ ಮತ್ತು ಬಂಡವಾಳಗಳನ್ನು ಸಂಘಟಿಸಿ, ವಸ್ತುಗಳನ್ನು ಉತ್ಪಾದಿಸಿ, ಮಾರಾಟಮಾಡಿ ಅವರವರ ಸೇವೆಗೆ ತಕ್ಕ ಪ್ರತಿಫಲವನ್ನು (ಆದಾಯ) ಗೇಣಿ, ಕೂಲಿ ಹಾಗೂ ಬಡ್ಡಿಯ ರೂಪದಲ್ಲಿ ವಿತರಣೆ ಮಾಡಿದ ನಂತರ ಪಡೆಯುವ ಅದಾಯವೇ ಲಾಭ. ಈ ಲಾಭ ಯಾವಾಗಲೂ ನಿಶ್ಚಿತವಾದ ಅದಾಯವಲ್ಲ. ಅದು ಅನಿಶ್ಚಿತವಾದ ಲಾಭ. ಮುಂದೆ ಲಾಭವು ಉದ್ದಿಮೆಯಿಂದ ಉದ್ದಿಮೆಗೆ, ಉದ್ದಿಮೆದಾರನಿಂದ ಉದ್ದಿಮೆದಾರನಿಗೆ ಬದಲಾಗುತ್ತ ಹೋಗುತ್ತದೆ. ಒಬ್ಬ ಉದ್ದಿಮೆದಾರನು ಪಡೆಯುವ ಲಾಭಕ್ಕೂ ಮತ್ತೊಬ್ಬ ಉದ್ದಿಮೆದಾರ ಪಡೆಯುವ ಲಾಭಕ್ಕೂ ವ್ಯತ್ಯಾಸ ಕಂಡುಬರುತ್ತದೆ. ಆದ್ದರಿಂದ ಲಾಭವನ್ನು ಶೇಷಾದಾಯವೆಂದು ಕರೆಯಬಹುದು. ಆದಾಯದಲ್ಲಿ ಉಳಿದ ಮೊತ್ತವೇ (ಶೇಷ) ಲಾಭ. ಆದರೆ ಉಳಿದ ಉತ್ಪಾದನಾಂಶಗಳಿಗೆ ಕರಾರಿಗೆ ತಕ್ಕ ಪ್ರತಿಫಲ ದೊರೆಯುತ್ತದೆ. ಅವು ಸ್ಥಿರವಾಗಿರುತ್ತವೆ. ಅಂದರೆ ಒಂದು ವಸ್ತುವಿನ ಒಟ್ಟು ಉತ್ಪಾದನಾ ವೆಚ್ಚಕ್ಕೆ ಮತ್ತು ಅದರ ಮಾರಾಟದಿಂದ ಬರುವ ಒಟ್ಟು ಆದಾಯಕ್ಕೆ ಇರುವ ವ್ಯತ್ಯಾಸವೇ ಲಾಭ. ಉದ್ದಿಮೆಯು ಬಂಡವಾಳಕ್ಕೆ ಬಡ್ಡಿಯನ್ನು, ಕಾರ್ಮಿಕರಿಗೆ ಕೂಲಿಯನ್ನು ಮತ್ತು ಭೂಮಿಯ ಒಡೆಯನಿಗೆ ಗೇಣಿಯನ್ನು ಕೊಟ್ಟಮೇಲೆ, ಸ್ವಲ್ಪ ಭಾಗ ಉಳಿದರೆ ಅದು ಲಾಭವಾಗುತ್ತದೆ. ಲಾಭದ ಬಗ್ಗೆ ಯಾವ ಬಗೆಯ ಕರಾರುಗಳು ಇರುವುದಿಲ್ಲ. ಕೆಲವು ಬಾರಿ ಹೆಚ್ಚು ಲಾಭ ಬಂದರೆ ಮತ್ತೆ ಕೆಲವು ವೇಳೆ ನಷ್ಟವಾಗುವುದೂ ಉಂಟು. ಆಗ ಎಲ್ಲ ನಷ್ಟವನ್ನೂ ಸಂಘಟನಾಕಾರನು ಹೊರಬೇಕಾಗುತ್ತದೆ.

ಲಾಭಗಳಲ್ಲಿ ಎರಡು ವಿಧ. ಒಟ್ಟು ಲಾಭ (ಸಾಂದ್ರ ಲಾಭ) ಮತ್ತು ನಿವ್ವಳ ಲಾಭ. ಉದ್ದಿಮೆಯ ವ್ಯವಹಾರದ ಒಟ್ಟು ಆದಾಯದಲ್ಲಿ ಒಟ್ಟು ವೆಚ್ಚವನ್ನು ಕಳೆದಾಗ ಬರುವ ಶೇಷವೇ ಒಟ್ಟು ಲಾಭ. ಒಬ್ಬ ಉತ್ಪಾದಕನ ಒಟ್ಟು ವೆಚ್ಚ 15,000 ರೂಪಾಯಿಗಳು. ಆ ವಸ್ತುಗಳನ್ನು ಮಾರಾಟ ಮಾಡಿದ್ದರಿಂದ 25,000 ರೂಪಾಯಿಗಳ ಆದಾಯ ಸಂದಾಯವಾಗುತ್ತದೆ. ಅವನ ಒಟ್ಟು ಲಾಭ 25,000-10,000 ರೂಪಾಯಿಗಳು. ಇವೆಲ್ಲ ಲಾಭವಾಗುವುದಿಲ್ಲ. ಅರ್ಥಶಾಸ್ತ್ರದಲ್ಲಿ ಉದ್ದಿಮೆ ಒಂದು

ಭಾಗ ಮಾತ್ರ. ಒಟ್ಟು ಲಾಭದಲ್ಲಿ ಹಲವು ಪ್ರತಿಫಲಗಳು ಕೂಡಿರುತ್ತವೆ. ಉದ್ದಿಮೆದಾರ ಕಾರ್ಖಾನೆಯ ಸಲುವಾಗಿ ತನ್ನ ಸ್ವಂತ ಕಟ್ಟಡ ಬಳಸುತ್ತಾನೆ. ತನ್ನ ವ್ಯವಹಾರದಲ್ಲಿ ತಾನೇ ಉದ್ದಿಮೆದಾರನಾಗಿ ಮತ್ತು ಲೆಕ್ಕ ಪತ್ರಗಳನ್ನಿಡುವ ಅಧಿಕಾರಿಯಾಗಿ ಸೇವೆ ಸಲ್ಲಿಸಿರುತ್ತಾನೆ. ತನ್ನ ಬಂಡವಾಳವನ್ನು ಉದ್ದಿಮೆಯಲ್ಲಿ ತೊಡಗಿಸಿದ್ದಾನೆ. ಇಂತಹ ಪರಿಸ್ಥಿತಿಯಲ್ಲಿ ಉದ್ದಿಮೆದಾರನಿಗೆ ಸಂಬಂಧಪಟ್ಟ ಭೂಮಿ, ಕೂಲಿ, ಬಂಡವಾಳಗಳಿಗೆ ತಕ್ಕ ಪ್ರತಿಫಲವನ್ನು ಒಟ್ಟು ಲಾಭದಲ್ಲಿ ಕಳೆಯಬೇಕಾಗುತ್ತದೆ. ಆದ್ದರಿಂದ ಒಟ್ಟು ಲಾಭದಲ್ಲಿ ಉತ್ಪಾದನಾಂಶಗಳಿಗೆ ಕೊಡಬೇಕಾದ ಪ್ರತಿಫಲಗಳನ್ನು ಸೇರಿಸಲಾಗಿರುತ್ತದೆ. ಅವುಗಳನ್ನು ಕಳೆದ ನಂತರ ಉಳಿಯುವ ಲಾಭವೇ ನಿವ್ವಳ ಲಾಭ. ನಿವ್ವಳ ಲಾಭವನ್ನು ಶುದ್ಧ ಲಾಭವೆಂದು ಕರೆಯುತ್ತಾರೆ.

ನಿವ್ವಳ ಲಾಭವನ್ನು ಸಂಘಟನಾಕಾರನಿಗೆ ಏಕೆ ಕೊಡಬೇಕು ಎನ್ನುವ ಪ್ರಶ್ನೆ ಏಳುವುದು. ವ್ಯವಹಾರದಲ್ಲಿ ಸಂಘಟನಾಕಾರನಿಗೆ ಲಾಭ ಅಥವಾ ನಷ್ಟವಾಗುತ್ತದೆ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಅದು ಅನಿಶ್ಚಿತ. ಸಂಘಟನಾಕಾರನಾದವನು ಜಾಣ್ಮೆಯಿಂದ ವ್ಯವಹಾರಗಳನ್ನೆಲ್ಲ ಕಾರ್ಯರೂಪಕ್ಕೆ ತಂದು ಉತ್ಪಾದಿಸಿದ ವಸ್ತುಗಳನ್ನು ಮಾರಾಟಮಾಡಿದರೆ ಅವನಿಗೆ ಲಾಭವಾಗುತ್ತದೆ. ಕೆಲವು ವೇಳೆ ಬಳಕೆದಾರರ ನಡತೆಯಲ್ಲಿ ಬದಲಾವಣೆಯಾದಾಗ, ವಸ್ತುಗಳ ಬೇಡಿಕೆಯಲ್ಲಾಗುವ ಬದಲಾವಣೆಗಳಿಂದ ಉತ್ಪಾದಿಸಿದ ವಸ್ತುಗಳ ಮಾರಾಟವಾಗದಿರಬಹುದು. ಇಂತಹ ಪರಿಸ್ಥಿತಿಗಳಲ್ಲಿ ಲಾಭದ ಬದಲು ನಷ್ಟ ಸಂಭವಿಸುತ್ತದೆ. ಈ ರೀತಿಯ ಗಂಡಾಂತರಗಳನ್ನು ಎದುರಿಸಲು ಸಂಘಟನಾಕಾರನಿಗೆ ತಕ್ಕ ಪ್ರತಿಫಲಕೊಡಬೇಕಾಗುತ್ತದೆ. ಅಂತಹ ಪ್ರತಿಫಲವೇ ನಿವ್ವಳಲಾಭ. ಆದ್ದರಿಂದ ನಿವ್ವಳ ಲಾಭ ಉದ್ಯಮವನ್ನು ಸ್ಥಾಪಿಸುವ ಸಂಘಟನಾಕಾರನ ನೈಜವಾದ ಪ್ರತಿಫಲ. ಸಂಘಟನಾಕಾರನು ನಿರ್ವಹಿಸುವ ವಿಶೇಷ ಕರ್ತವ್ಯಕ್ಕೆ ಈ ಪ್ರತಿಫಲ ಬರುತ್ತದೆ.

ನಿವ್ವಳ ಲಾಭ ಒಟ್ಟು ಲಾಭಕ್ಕಿಂತಲೂ ಕಡಿಮೆಯಾಗುತ್ತಿರುತ್ತದೆ. ಏಕೆಂದರೆ ಒಟ್ಟು ಲಾಭದಲ್ಲಿ ಬಾಡಿಗೆ, ಕೂಲಿ, ಬಡ್ಡಿಗಳನ್ನು ಕಳೆದ ನಂತರ ಬರುವ ಶೇಷವೇ ನಿವ್ವಳ ಲಾಭ. ಕೂಲಿ, ಬಡ್ಡಿ ಮತ್ತು ಗೇಣಿಯನ್ನು ಕಳೆಯುವುದರಿಂದ ಈ ರೀತಿ ವ್ಯತ್ಯಾಸ ಉಂಟಾಗುತ್ತದೆ. ಉದ್ಯಮದ ದಕ್ಷತೆ, ಪೈಪೋಟಿ ಸ್ಥಾನಗಳಿಂದ ಒಟ್ಟು ಆದಾಯದಲ್ಲಿ ಮಾರ್ಪಾಡಾಗುವುದಿಲ್ಲ. ಆದರೆ ಶುದ್ಧ ಲಾಭದಲ್ಲಿ ಇವುಗಳಿಂದ ಮಾರ್ಪಾಡಾಗುತ್ತದೆ. ಶುದ್ಧ ಲಾಭವು ಯಾವಾಗಲೂ ಸಾಮಾನ್ಯವಾಗಿ ಒಂದೇ ಬರುವುದರಿಂದ ಆ ಉದ್ಯಮ ದಕ್ಷರಾದ ಸಂಘಟನಾಕಾರರನ್ನು ಪಡೆದಿದೆ ಎಂಬುದನ್ನು ಸೂಚಿಸುತ್ತದೆ.

ಲಾಭದ ಸಿದ್ಧಾಂತಗಳು : ಲಾಭದ ಬಗ್ಗೆ ಅನೇಕ ಸಿದ್ಧಾಂತಗಳು ರೂಪಿತವಾಗಿವೆ. ಇವುಗಳಲ್ಲಿ (i) ಗೇಣಿಯ ಸಿದ್ಧಾಂತ (ii) ಟಾಸಿಗ್‌ರವರ ಕೂಲಿಯ

ಲಾಭದ ಸಿದ್ಧಾಂತ (iii) ಸೀಮಾಂತ ಉತ್ಪಾದನೆಯ ಲಾಭದ ಸಿದ್ಧಾಂತ (iv) ಪ್ರಗತಿಯ ಲಾಭದ ಸಿದ್ಧಾಂತ (v) ಗಂಡಾಂತರಗಳನ್ನು ಹೊರಲು ಕೊಡುವ ಲಾಭದ ಸಿದ್ಧಾಂತ ಹಾಗೂ (vi) ಅನಿಶ್ಚಿತತೆಯ ಸಿದ್ಧಾಂತಗಳು ಮುಖ್ಯವಾಗಿವೆ.

(i) **ಗೇಣಿಯ ಸಿದ್ಧಾಂತ :** ಅಮೆರಿಕಾದ ಅರ್ಥಶಾಸ್ತ್ರಜ್ಞನಾದ ವಾಕರ್ ಎಂಬಾತನು ಗೇಣಿಸ್ವರೂಪದ ಲಾಭದ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ. ಅವನ ದೃಷ್ಟಿಯಲ್ಲಿ ಲಾಭವು ಉದ್ದಿಮೆಯಲ್ಲಿ ಹಾಕಿರುವ ಬಂಡವಾಳದ ಪ್ರತಿಫಲವಲ್ಲ ಮತ್ತು ಸಂಘಟನಾಕಾರನ ಶ್ರಮದ ವಿಶೇಷ ಕೂಲಿಯಲ್ಲ. ಯಾವ ಉದ್ದಿಮೆಯಲ್ಲಾಗಲೀ, ಭೂಮಿಯ ಗೇಣಿ, ಬಂಡವಾಳದ ಬಡ್ಡಿ ಮತ್ತು ಶ್ರಮದ ಕೂಲಿ ಕೊಟ್ಟಮೇಲೆ ಉಳಿಯುವ ಲಾಭ ಸಂಘಟನಾಕಾರನಿಗೆ ಅವನ ಉದ್ದಿಮೆಯ ಆಡಳಿತಕ್ಕಾಗಿ ಮತ್ತು ಉದ್ದಿಮೆಯ ಗಂಡಾಂತರಗಳ ಹೊಣೆಗಾಗಿ ಸೇರುತ್ತದೆಂದು ವಾಕರ್ ಹೇಳಿದನು. ಸಂಘಟನಾಕಾರನ ಶಕ್ತಿ ಸಾಮರ್ಥ್ಯ, ಧೈರ್ಯ ಹಾಗೂ ಮುಂದಾಲೋಚನೆಯಿಂದ ಲಾಭದ ಪ್ರಮಾಣವು ನಿರ್ಧಾರವಾಗುತ್ತದೆ. ಆದ್ದರಿಂದ ಸಂಘಟನಾಕಾರನ ಬುದ್ಧಿ ಶಕ್ತಿಗಳ ಅನ್ವಯ ಸೃಷ್ಟಿಯಾಗುವ ಹೆಚ್ಚಿನ ಹಣವೇ ಲಾಭ. ಇದು ಸಂಘಟನಾಕಾರ ನಿಗಲ್ಲದೆ ಬೇರೆ ಯಾರಿಗೂ ಸೇರತಕ್ಕದ್ದಲ್ಲ ಎಂದು ವಾಕರ್ ಅಭಿಪ್ರಾಯಪಟ್ಟಿದ್ದಾನೆ. ಅವನ ಪ್ರಕಾರ ಲಾಭ ಗೇಣಿಯ ಸ್ವರೂಪವನ್ನೇ ಹೊಂದಿದೆ. ಹೇಗೆಂದರೆ ಭೂಮಿಯ ಫಲವತ್ತತೆಯಲ್ಲಿ ವ್ಯತ್ಯಾಸವಿರುವಂತೆ ಸಂಘಟನಾಕಾರನ ದಕ್ಷತೆಯಲ್ಲಿ ವ್ಯತ್ಯಾಸಗಳಿರು ತ್ತವೆ. ಭೂಮಿಯಲ್ಲಿ ಹಲವು ದರ್ಜೆಯ ಭೂಮಿಗಳಿವೆ. ಹಾಗೆಯೇ ಸಂಘಟನಾ ಕಾರರಲ್ಲಿ ಕೆಲವರು ಹೆಚ್ಚು ದಕ್ಷರಾಗಿಯೂ ಮತ್ತೆ ಕೆಲವರು ದಕ್ಷತೆಯಿಂದ ಕೂಡಿದವರೂ ಆಗಿರುತ್ತಾರೆ. ಹೆಚ್ಚು ದಕ್ಷತೆಯುಳ್ಳವರು ಹೆಚ್ಚು ಲಾಭ ಪಡೆಯುತ್ತಾರೆ. ಕಡಮೆ ದಕ್ಷತೆಯುಳ್ಳವರು ಕಡಮೆ ಲಾಭ ಪಡೆಯುತ್ತಾರೆ. ಸೀಮಾಂತ ಸಂಘಟನಾಕಾರರು ಅತ್ಯಂತ ಕನಿಷ್ಠ ದಕ್ಷತೆಯನ್ನು ಪಡೆದಿದ್ದು ಲಾಭ ಪಡೆಯುವುದಿಲ್ಲ. ರಿಕಾರ್ಡೋರವರ ಗೇಣಿಯ ಸಿದ್ಧಾಂತದಲ್ಲಿ ಸೀಮಾಂತ ಭೂಮಿಯು ಪರಿಸರದ ಭೂಮಿಯಾಗಿದ್ದು ಗೇಣಿಯನ್ನು ಪಡೆಯುವುದಿಲ್ಲ. ಅದರಂತೆಯೇ ಸಂಘಟನಾಕಾರರಲ್ಲಿ ಕಂಡುಬಂದ ವಿವಿಧ ಶಕ್ತಿಗಳಿಂದ ಲಾಭ ಹುಟ್ಟುತ್ತದೆ. ಭೂಮಿಗಳು ಅವುಗಳ ಫಲವತ್ತತೆಗೆ ತಕ್ಕಂತೆ ಗೇಣಿಯನ್ನು ಪಡೆಯುವಂತೆ ಸಂಘಟನಾಕಾರರು ಅವರವರ ದಕ್ಷತೆಗೆ ತಕ್ಕಂತೆ ಲಾಭ ಪಡೆಯುತ್ತಾರೆ. ಆದ್ದರಿಂದ ವಾಕರ್ ಲಾಭವೂ ಭೂಗೇಣಿಯಂತೆ ದಕ್ಷತೆಯ ವ್ಯತ್ಯಾಸ ದಿಂದ ಲಭ್ಯವಾಗುವುದರಿಂದ ಲಾಭವೂ ಗೇಣಿಯ ಸ್ವರೂಪವನ್ನೇ ಹೊಂದಿದೆ ಎಂಬು ದಾಗಿ ವಾದಿಸಿದ್ದಾರೆ. ಲಾಭ ನಿಜವಾದ ಶಕ್ತಿ ಸಾಮರ್ಥ್ಯಗಳ ಗೇಣಿ. ಇದು ಸಂಘಟನಾ ಕಾರನಿಗೆ ಸೇರತಕ್ಕದ್ದು. ಅಂದರೆ ವಾಕರ್ ಪ್ರಕಾರ ಲಾಭವು ಸಂಘಟನಾಕಾರನ ಸಂಪಾದನೆಯಲ್ಲಿ ಗೇಣಿಯ ಅಂಶ. ಇದು ವ್ಯವಸ್ಥಾಶಕ್ತಿಯ ಗೇಣಿ.

ವಾಕರ್‌ಪ್ರಕಾರ, ಲಾಭ ವಸ್ತುವಿನ ಬೆಲೆಯು ನಿರ್ಧಾರದಲ್ಲಿ ಪ್ರವೇಶಿಸುವುದಿಲ್ಲ. ಏಕೆಂದರೆ, ಬೆಲೆಯು ಸೀಮಾಂತ ಉತ್ಪಾದಕರ ಪೂರೈಕೆ ಉತ್ಪಾದನಾ ವೆಚ್ಚದಿಂದ ನಿರ್ಧಾರವಾಗುತ್ತದೆ. ಬೆಲೆ ವೆಚ್ಚಕ್ಕಿಂತಲೂ ಕಡಮೆಯಾದರೆ, ಸೀಮಾಂತ ಉತ್ಪಾದಕನು ಲಾಭಗಳಿಸುತ್ತಾನೆ. ಈ ಸ್ಥಿತಿಯಲ್ಲಿ ಇನ್ನೂ ಕೆಳದರ್ಜೆಯ ಉತ್ಪಾದಕನು ಮುಂದೆ ಬಂದು ವಸ್ತುಗಳನ್ನು ಉತ್ಪಾದಿಸಿ ಲಾಭಗಳಿಸಲು ಪ್ರಯತ್ನಿಸುತ್ತಾನೆ. ಉತ್ತಮ ದರ್ಜೆಯ ಉತ್ಪಾದಕರು ಪಡೆಯುವ ಬೆಲೆಯನ್ನೇ ಸೀಮಾಂತ ಉತ್ಪಾದಕರೂ ಪಡೆಯುತ್ತಾರೆ. ಆದ್ದರಿಂದ ಉತ್ತಮದರ್ಜೆಯ ಉತ್ಪಾದಕರ ಲಾಭ ಬೆಲೆಯಲ್ಲಿ ಸೇರುವುದಿಲ್ಲ.

ರಿಕಾರ್ಡೋರ್ ಗೇಣಿಯ ಸಿದ್ಧಾಂತವನ್ನು ಟೀಕಿಸಿದಂತೆಯೇ ವಾಕರ್‌ನ ಗೇಣಿ ಸ್ವರೂಪದ ಲಾಭದ ಸಿದ್ಧಾಂತವನ್ನು ಟೀಕಿಸಲಾಗಿದೆ. ಈ ಸಿದ್ಧಾಂತ ಲಾಭದ ನಿಜವಾದ ಸ್ವರೂಪವನ್ನು ವಿವರಿಸುವುದಿಲ್ಲ ಎಂದು ಟೀಕಿಸಲಾಗಿದೆ. ಅಲ್ಲದೆ ಈ ಸಿದ್ಧಾಂತವು ತಿಳಿಸುವಂತೆ ಲಾಭ ಬೆಲೆಯಲ್ಲಿ ಸೇರುವುದಿಲ್ಲ ಎನ್ನುವುದು ಸರಿಯಲ್ಲ. ಪ್ರತಿಯೊಬ್ಬ ಸಂಘಟನಾಕಾರನೂ ಲಾಭ ಪಡೆಯುವ ಉದ್ದೇಶದಿಂದಲೇ ಉದ್ದಿಮೆಯಲ್ಲಿ ತೊಡಗುತ್ತಾನೆ. ಆದ್ದರಿಂದ ಸೂಕ್ತ ಲಾಭ ದೊರಕದ ಹೊರತು ಅವನು ಉದ್ದಿಮೆಯನ್ನು ಮುಂದುವರಿಸುವುದಿಲ್ಲ. ಲಾಭವನ್ನೇ ಪಡೆಯದ ಉತ್ಪಾದಕರು ಇರುವುದಿಲ್ಲ. ಲಾಭವು ಉತ್ಪಾದನೆಯ ವೆಚ್ಚದಲ್ಲೇ ಸೇರಿರುವುದರಿಂದ ಬೆಲೆಯ ಒಂದುಭಾಗ ಲಾಭವಾಗಿರುತ್ತದೆ. ಈ ಕಾರಣಗಳಿಂದಾಗಿ ಈ ತತ್ವವನ್ನು ಅಲ್ಲಗಳೆಯಲಾಗಿದೆ.

(ii) **ಕೂಲಿಯ ಸ್ವರೂಪದ ಲಾಭದ ಸಿದ್ಧಾಂತ:** ಈ ಸಿದ್ಧಾಂತವನ್ನು ಪ್ರಾಧ್ಯಾಪಕ ಟೌಸಿಗ್‌ರವರು ಪ್ರತಿಪಾದಿಸಿದ್ದಾರೆ. ಅವರ ಪ್ರಕಾರ ಲಾಭವು ಕೂಲಿಯ ಸ್ವರೂಪವಾಗಿದೆ. ಉತ್ಪಾದನಾಂಶಗಳನ್ನು ಸಂಘಟಿಸುವವನು ಸಂಘಟನಾಕಾರ. ಉತ್ಪಾದನಾಂಶಗಳನ್ನು ಸಂಘಟಿಸುವುದು ಒಂದು ಬಗೆಯ ಶ್ರಮ. ಅವನಿಗೆ ಕೊಡುವ ಕೂಲಿ, ಕೂಲಿಯ ಸ್ವರೂಪದಲಾಭ. ಶ್ರಮಿಕನಿಗೆ ಕೂಲಿಯನ್ನು ಕೊಡುವಂತೆಯೇ ಸಂಘಟನಾಕಾರನಿಗೂ ಉತ್ಪಾದನಾಂಶಗಳನ್ನು ಸಂಘಟಿಸುವ ಕಾರ್ಯಗಳನ್ನು ಕೈಗೊಳ್ಳಲು ಸಂಭಾವನೆಯನ್ನು ಕೂಲಿಯ (ಲಾಭ) ರೂಪದಲ್ಲಿ ಕೊಡಲಾಗುವುದು. ಈ ಬಗೆಯ ಲಾಭ ಸಂಘಟನಾಕಾರನ ವಿಶಿಷ್ಟ ಬಗೆಯ ಶ್ರಮಕ್ಕೆ ಕೊಡುವ ಪ್ರತಿಫಲ ಎಂದು ಟಾಸಿಗ್ ಹೇಳಿದರು. ಈ ಸಿದ್ಧಾಂತ ಕೆಲವು ದೋಷಗಳನ್ನು ಹೊಂದಿದೆ. ಕೂಲಿಕಾರರು ಗಂಡಾಂತರವನ್ನು ಎದುರಿಸುವುದಿಲ್ಲ, ಏಕೆಂದರೆ ಕರಾರುಪ್ರಕಾರ ಅವರಿಗೆ ಕೂಲಿಯು ಸಂದಾಯವಾಗುತ್ತದೆ. ಆದರೆ ಉದ್ದಿಮೆಯ ಸಂಘಟನಾಕಾರನು ಉತ್ಪಾದನೆಯಲ್ಲಿ ಎಲ್ಲ ಬಗೆಯ ಗಂಡಾಂತರಗಳನ್ನು ಎದುರಿಸಬೇಕಾಗುತ್ತದೆ. ಈ ಗಂಡಾಂತರಗಳನ್ನು ಹೊರಲು ಅವನಿಗೆ ಪ್ರತಿಫಲ ಸಿಗಬೇಕು. ಇದಕ್ಕಾಗಿ ಅವನು ಲಾಭ ಪಡೆಯುತ್ತಾನೆ. ಲಾಭವನ್ನು ಕೆಲಸಮಾಡದೆ ಪಡೆಯಬಹುದು. ಕೂಲಿಯನ್ನು ಪಡೆಯಲು ಮೈ ಬೆವರು ಸುರಿಸಿ ಕೆಲಸ ಮಾಡಬೇಕು. ಈ ರೀತಿ ಸಾಮಾನ್ಯ ಕೂಲಿಕಾರ

ಪಡೆಯುವ ಕೂಲಿಗೂ ತಾಂತ್ರಿಕ ನೈಪುಣ್ಯತೆ ಪಡೆದಿರುವ ಸಂಘಟನಾಕಾರ ಪಡೆಯುವ ಲಾಭಕ್ಕೆ ಭಿನ್ನತೆಗಳು ಇರುವುದರಿಂದ ಈ ಸಿದ್ಧಾಂತವನ್ನು ತಿರಸ್ಕರಿಸಲಾಗಿದೆ.

(iii) **ಸೀಮಾಂತ ಉತ್ಪಾದನೆಯ ಲಾಭದ ಸಿದ್ಧಾಂತ :** ಸೀಮಾಂತ ಉತ್ಪಾದನೆಯ ಲಾಭದ ನಿಯಮವನ್ನು ಅಂಚಿನ ಉತ್ಪಾದನೆಯ ಲಾಭದ ನಿಯಮ ವೆಂದು ಕರೆಯುವುದೂ ರೂಢಿ. ಈ ನಿಯಮದ ಪ್ರಕಾರ ಲಾಭವು ಅಂಚಿನ ಉತ್ಪಾದ ಕನು ಉತ್ಪಾದಿಸುವ ಮೌಲ್ಯಕ್ಕೆ ಸಮವಾಗಿರುತ್ತದೆ. ಲಾಭ ಅಂಚಿನ ಉತ್ಪಾದನೆಯ ಮೌಲ್ಯಕ್ಕಿಂತ ಹೆಚ್ಚಾಗಿದ್ದರೆ ಹೊಸ ಉದ್ದಿಮೆದಾರರು ಉದ್ದಿಮೆಗಳನ್ನು ಸ್ಥಾಪಿಸಲು ಮುಂದೆ ಬರುತ್ತಾರೆ. ಇದರಿಂದ ವಸ್ತುಗಳ ಪೂರೈಕೆ ಹೆಚ್ಚಿ, ಬೇಡಿಕೆ ಕಡಮೆಯಾಗಿ ಬೆಲೆ ಕಡಮೆಯಾಗುತ್ತದೆ. ಲಾಭದ ಪ್ರಮಾಣ ಕಡಮೆಯಾಗುತ್ತದೆ ಮತ್ತು ಆ ಲಾಭ ಅಂಚಿನ ಉತ್ಪಾದಕನ ಉತ್ಪಾದನೆಯ ಮೌಲ್ಯಕ್ಕೆ ಸಮವಾಗುತ್ತದೆ. ಲಾಭ ಅಂಚಿನ ಉತ್ಪಾದನೆಯ ಮೌಲ್ಯಕ್ಕಿಂತ ಕಡಮೆ ಇದ್ದರೆ ಅಂಚಿನ ಉತ್ಪಾದಕನು ನಷ್ಟವನ್ನನು ಭವಿಸಬೇಕಾಗುತ್ತದೆ. ಇದರಿಂದ ಅವನು ಉದ್ದಿಮೆಯನ್ನು ಮುಚ್ಚಬಹುದು. ಇದ ರಿಂದ ವಸ್ತುಗಳ ಪೂರೈಕೆ ಕಡಮೆಯಾಗಿ ಬೆಲೆಗಳು ಏರುತ್ತವೆ. ಲಾಭದ ಪ್ರಮಾಣ ಏರುತ್ತದೆ. ಈ ರೀತಿ ಏರಿದ ಲಾಭ ಅಂಚಿನ ಉತ್ಪಾದನೆಯ ಮೌಲ್ಯಕ್ಕೆ ಸಮವಾಗಿರು ತ್ತದೆ. ಈ ಸಿದ್ಧಾಂತವು ಟೀಕೆಗಳಿಂದ ವಿಮುಕ್ತವಾಗಿಲ್ಲ. ಈ ಸಿದ್ಧಾಂತದ ಪ್ರಕಾರ ಭೂಮಿ, ಶ್ರಮಗಳ ಅಂಚಿನ ಅಥವಾ ಸೀಮಾಂತ ಉತ್ಪಾದನೆಯ ಮೌಲ್ಯವನ್ನು ಕಂಡು ಹಿಡಿಯಲು ಉದ್ದಿಮೆದಾರನಿಗೆ ಸಾಧ್ಯ. ಆದರೆ ಉತ್ಪಾದನೆ ಅಂಶಗಳಿಗೆ ಉಪಯೋಗಿಸಿ ದಂತೆ ಉದ್ದಿಮೆದಾರನ ಸೀಮಾಂತ ಉತ್ಪಾದನೆಯನ್ನು ಕಂಡು ಹಿಡಿಯಲಾಗುತ್ತದೆ. ಹೇಗೆಂದರೆ ಉದ್ದಿಮೆಯಲ್ಲಿ ಒಬ್ಬನೇ ಸಂಘಟನಾಕಾರ ಇರುತ್ತಾನೆ. ಅವನ ಉತ್ಪಾದ ನೆಯ ಹಲವಾರು ಕಾರ್ಯ ಕುಸಿದು ಬೀಳುತ್ತದೆ. ಮತ್ತೊಬ್ಬ ಸಂಘಟನಾಕಾರನನ್ನು ನೇಮಿಸಿಕೊಂಡಿದ್ದೇ ಆದರೆ ಎಲ್ಲವೂ ಅವ್ಯವಸ್ಥೆಯಾಗುತ್ತದೆ. ಒಂದು ಉದ್ದಿಮೆಗೆ ಒಬ್ಬನೇ ಸಂಘಟನಾಕಾರನಿದ್ದು, ಅವನನ್ನು ಹೆಚ್ಚು ಕಡಮೆ ಮಾಡಲು ಸಾಧ್ಯವಿಲ್ಲದ ಕಾರಣ ಉದ್ದಿಮೆದಾರನ ಅಂಚಿನ ಉತ್ಪಾದನೆಯನ್ನು ಕಂಡುಹಿಡಿಯಲು ಬರುವುದಿಲ್ಲ. ಆದ್ದರಿಂದ ಸೀಮಾಂತ ಉತ್ಪಾದನೆಯ ತತ್ವವನ್ನು ಸಂಘಟನೆಗೆ ಬಳಸಲಾಗುವುದಿಲ್ಲ. ಆದರೂ, ಈ ಸಿದ್ಧಾಂತವು ಈ ಅಂಶಕ್ಕೆ ಅಪ್ರತ್ಯಕ್ಷವಾಗಿ ಹೊಂದಿರುತ್ತದೆಂದು ಮಾರ್ಷಲ್ ಹೇಳಿದ್ದಾನೆ. ಸಾಮಾನ್ಯವಾಗಿ, ಉದ್ದಿಮೆಯ ಪ್ರಪಂಚದಲ್ಲಿ ಆ ಸನ್ನಿವೇಶಗಳಿಗೆ ಹೊಂದದವರು ಹೊರಹೋಗಬೇಕಾಗುತ್ತದೆ. ಆದ್ದರಿಂದ ಉದ್ದಿಮೆಗೆ ಬೇಕಾಗುವ ಉತ್ಪಾದನಾ ಅಂಶಗಳನ್ನು ಸಂಘಟನಾಕಾರನು ಆರಿಸಿಕೊಂಡರೂ, ಪ್ರಕೃತಿ ಅಥವಾ ಪೈಪೋಟಿಯ ಸ್ವಚ್ಛಂದ ಶಕ್ತಿಗಳು ತಕ್ಕ ಉದ್ದಿಮೆದಾರನನ್ನು ಆರಿಸುತ್ತವೆ.

(iv) **ಪ್ರಗತಿಯ ಲಾಭದ ಸಿದ್ಧಾಂತ :** ಅಮೆರಿಕಾದ ಜೆ. ಬಿ. ಕ್ಲಾರ್ಕ್ ಎಂಬುವರು ಈ ನಿಯಮವನ್ನು ಪ್ರತಿಪಾದಿಸಿರುವರು. ಕ್ಲಾರ್ಕ್‌ನ ದೃಷ್ಟಿಯಲ್ಲಿ

ಲಾಭವು ಚಲನ ಶಕ್ತಿಯುಳ್ಳ ಅಥವಾ ಪ್ರಗತಿಪರ ಸಮಾಜದಲ್ಲಿ ಉದ್ಭವಿಸುತ್ತದೆ. ಜಡ ಸಮಾಜದಲ್ಲಿ ಗಂಡಾಂತರಗಳಿರುವುದಿಲ್ಲ ಆದ್ದರಿಂದ ಲಾಭವು ಹುಟ್ಟುವುದಿಲ್ಲ. ಇಂತಹ ಸಮಾಜದಲ್ಲಿ ಉದ್ಯಮದ ಕಾರ್ಯ ನಿರ್ವಹಣೆಯ ಪ್ರತಿಫಲ ಮಾತ್ರವಿರುತ್ತದೆ. ಚಲನಶಕ್ತಿ ಇರುವ ಸಮಾಜದಲ್ಲಿ ಬೇಡಿಕೆ ಮತ್ತು ನೀಡಿಕೆಗಳಿಗೆ ಸಮತೂಕ ಇಲ್ಲದಿರುವುದರಿಂದ ಲಾಭವು ಈ ರೀತಿಯ ಸ್ಥಿತಿಯ ಉತ್ಪನ್ನವಾಗುತ್ತದೆ. ಸಂಘಟನಾಕಾರನಿಂದ ಉಂಟಾದ ಕ್ರಿಯಾತ್ಮಕ ಅವ್ಯವಸ್ಥೆಯಿಂದ ಲಾಭವು ಉತ್ಪನ್ನವಾಗುತ್ತದೆ. ಜಗತ್ತು ಬದಲಾವಣೆ ಹೊಂದುತ್ತಿರುವುದು, ಜನಸಂಖ್ಯೆ, ಬಂಡವಾಳ, ತಾಂತ್ರಿಕಜ್ಞಾನ, ಜನರ ಅಭಿರುಚಿ, ಉತ್ಪಾದನೆಯ ವಿಧಾನಗಳಲ್ಲಿ ಬದಲಾವಣೆಯುಂಟಾಗಿ ಲಾಭಕ್ಕೆ ಎಡೆ ಮಾಡಿ ಕೊಟ್ಟಿವೆ. ಹೊಸ ಹೊಸ ಬದಲಾವಣೆಗಳಿಂದ ಅನೇಕ ಹೊಸ ನಮೂನೆಯ ವಸ್ತುಗಳು ಮಾರುಕಟ್ಟೆಗೆ ಬರುತ್ತವೆ. ಚಾಣಾಕ್ಷನಾದ ಸಂಘಟನಾಕಾರನು ಉತ್ಪಾದನಾ ವೆಚ್ಚವನ್ನು ತಗ್ಗಿಸಿ ಹೊಸ ವಿಧಾನಗಳನ್ನು ಸೃಷ್ಟಿಸಿ ಹೆಚ್ಚು ಲಾಭ ಪಡೆಯಲು ಪ್ರಯತ್ನಿಸುತ್ತಾನೆ. ಆದ್ದರಿಂದ ಲಾಭವನ್ನು ಪ್ರಗತಿಯ ಪ್ರತಿಫಲ ಎನ್ನಬಹುದು. ಬದಲಾವಣೆಗೆ ತಕ್ಕಂತೆ ಉತ್ಪಾದನೆಯಲ್ಲಿ ಮಾರ್ಪಾಡು ಮಾಡದಿದ್ದರೆ ನಷ್ಟವನ್ನು ಅನುಭವಿಸುವನು. ಏಕೆಂದರೆ ಪೈಪೋಟಿ ಉಂಟಾಗಿ ಲಾಭಗಳನ್ನು ನಾಶ ಪಡಿಸುತ್ತದೆ, ಹೇಗೆಂದರೆ, ಒಂದು ಹೊಸದಾಗಿ ಉತ್ಪಾದಿತವಾಗಿದ್ದ ವಸ್ತು ಜನರನ್ನು ಹೆಚ್ಚು ಆಕರ್ಷಿಸಿ ಅವರ ಬೇಡಿಕೆ ಹೆಚ್ಚಿದರೆ ಇತರ ಉದ್ಯಮಿಗಳ ಉತ್ಪಾದಕನ ಹೆಚ್ಚು ಲಾಭದಿಂದ ಆಕರ್ಷಿತರಾಗಿ ಅವನನ್ನು ಅನುಸರಿಸಬಹುದು. ಆಗ ಆ ವಸ್ತು ಅಧಿಕ ಪ್ರಮಾಣದಲ್ಲಿ ಉತ್ಪಾದಿತವಾಗುವುದರಿಂದ ಲಾಭ ಇಳಿಯುತ್ತದೆ. ಲಾಭವು ಈ ರೀತಿ ಸ್ಥಿರವಿಲ್ಲ. ಅದು ಅಸ್ಥಿರ ಮತ್ತು ತೂಗಾಡುವ ಸ್ವಭಾವ ಉಳ್ಳದ್ದು. ಈ ನಿಯಮ ಪ್ರಗತಿಯಿಂದ ಅಥವಾ ಚಲನಶಕ್ತಿಯ ಬದಲಾವಣೆಯಿಂದ ಲಾಭ ಉತ್ಪನ್ನವಾಯಿತೆಂದು ತಿಳಿಸುತ್ತದೆ. ಆದರೆ ಮುಂದಾಗಬಹುದಾದ ಬದಲಾವಣೆಗಳನ್ನು ಎಲ್ಲ ಸಂಘಟನಾಕಾರರು ಊಹಿಸಿ ತಕ್ಕ ವ್ಯವಸ್ಥೆ ಮಾಡುವುದರಿಂದ ಬದಲಾವಣೆಯೇ ಲಾಭದ ಮೂಲವೆಂದು ಹೇಳುವುದು ಸರಿಯಲ್ಲ. ಲಾಭವಿಲ್ಲದೆಯೇ ಬದಲಾವಣೆಯಾಗಬಹುದು ಅಥವಾ ಯಾವ ಬದಲಾವಣೆಯೂ ಇಲ್ಲದೆಯೇ ಲಾಭ ಉಂಟಾಗಬಹುದು. ನೈಟ್‌ರವರ ಪ್ರಕಾರ ಊಹಿಸಲು ಸಾಧ್ಯವಿಲ್ಲದ ಬದಲಾವಣೆಗಳಿಂದಲ್ಲ. 'ಅನಿಶ್ಚಿತತೆಯೇ ಲಾಭದ ಮೂಲ' ಎಂದು ನೈಟ್‌ರ ಅಭಿಪ್ರಾಯ. ಅಂದರೆ ಯಾವ ಬದಲಾವಣೆಯೂ ಲಾಭಕ್ಕೆ ಕಾರಣವಾಗುವುದಿಲ್ಲ. ಆದರೆ ನಿರೀಕ್ಷಿಸಿದ ಸ್ಥಿತಿಗೂ ಮತ್ತು ವಾಸ್ತವಿಕ ಸ್ಥಿತಿಗೂ ಇರುವ ವ್ಯತ್ಯಾಸವೇ ಲಾಭಕ್ಕೆ ಕಾರಣವಾಗುತ್ತದೆ.

(v) **ಗಂಡಾಂತರದ ಲಾಭದ ನಿಯಮ :** ಈ ಸಿದ್ಧಾಂತವನ್ನು ಪ್ರತಿಪಾದಿಸಿದವನು ಎಸ್.ಬಿ. ಹಾಲೀ. ಲಾಭವು ಉದ್ದಿಮೆಯಲ್ಲಿನ ಗಂಡಾಂತರಗಳನ್ನು ನಿರ್ವಹಿಸಲು ಸಂಘಟನಾಕಾರನಿಗೆ ಕೊಡುವ ಪ್ರತಿಫಲವೆಂದು ಈ ನಿಯಮವು ತಿಳಿಸುತ್ತದೆ. ಯಾವುದೇ

ಉದ್ದಿಮೆಯನ್ನು ಸಂಘಟಿಸುವುದು ಸಂಘಟನಾಕಾರನ ಸಾಹಸ ಹಾಗೂ ಕುಶಲತೆಯನ್ನವಲಂಬಿಸಿರುತ್ತದೆ. ಇದು ಸಂಘಟನಾಕಾರನಿಂದ ಮಾತ್ರ ಆಗುವ ಕೆಲಸವಾಗಿದ್ದು, ಬೇರಾರಿಗೂ ವರ್ಗಾಯಿಸಲು ಸಾಧ್ಯವಿಲ್ಲ. ಯಾವುದೇ ವಸ್ತುವಿನ ಉತ್ಪಾದನೆಯಾದರೂ ಹಲವು ಗಂಡಾಂತರಗಳನ್ನು ಎದುರಿಸಬೇಕಾಗುತ್ತದೆ. ಇಂತಹ ತೊಂದರೆಗಳನ್ನು ಎದುರಿಸಲು ಸಾಹಸಿಯಾದ ಸಂಘಟನಾಕಾರ ಮಾತ್ರ ಮುಂದೆ ಬರುತ್ತಾನೆ. ಎಲ್ಲರೂ ಇಂತಹ ಗಂಡಾಂತರಗಳನ್ನು ಎದುರಿಸಲು ಇಷ್ಟಪಡುವುದಿಲ್ಲ. ಸಾಹಸಿಯಾದವನು ಇವುಗಳನ್ನು ಎದುರಿಸಲು ನಿಶ್ಚಯಿಸಿ ಉದ್ದಿಮೆಗಳನ್ನು ಸ್ಥಾಪಿಸಲು ಮುಂದೆ ಬರುತ್ತಾನೆ. ಅಂತಹವರಿಗೆ ಅವರ ಸೇವೆಗೆ ಅಂದರೆ ಗಂಡಾಂತರಗಳನ್ನು ನಿರ್ವಹಿಸಲು ನೀಡುವ ಪ್ರತಿಫಲವೇ ಲಾಭ. ಅವನು ಎದುರಿಸುವ ಗಂಡಾಂತರ ತಾನು ಉತ್ಪಾದಿಸಿದ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ದೊರೆತು ಮಾರಾಟವಾಗುವುದೋ ಇಲ್ಲವೋ ಎಂಬುದು. ಲಾಭಬಂದರೂ ನಷ್ಟವಾದರೂ ಅದನ್ನು ಎದುರಿಸುವ ಸಾಹಸ ಅವನಲ್ಲಿರಬೇಕು. ಸಂಘಟನಾಕಾರನಾದವನು ಇಂತಹ ಭಾವವನ್ನು ಹೊಂದುತ್ತಾನೆ. ಹಣದ ಬಂಡವಾಳದ ನೆರವಿನಿಂದ ಅವನು ಅದನ್ನು ವಸ್ತುಗಳಾಗಿ ರೂಪುಗೊಳಿಸುತ್ತಾನೆ. ವಸ್ತುಗಳನ್ನು ಉತ್ಪಾದಿಸಲು ಯಂತ್ರಗಳನ್ನು, ಶ್ರಮವನ್ನು ಮತ್ತು ಕಚ್ಚಾಮಾಲುಗಳನ್ನು ಕೊಂಡು ಉಪಯೋಗಿಸುತ್ತಾನೆ. ನಂತರ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಮಾರಿ ಲಾಭ ಗಳಿಸುತ್ತಾನೆ. ಲಾಭಗಳಿಸಲಿ ಅಥವಾ ಗಳಿಸದಿರಲಿ, ಅವನ ವಸ್ತು ಮಾರಾಟವಾಗಲೀ ಬಿಡಲೀ ಆ ವರ್ಷದ ಉತ್ಪಾದನಾ ಫಲಿತಾಂಶವು ತಿಳಿಯುವುದಕ್ಕಿಂತ ಮೊದಲೇ ತಾನು ಉಪಯೋಗಿಸಿಕೊಂಡಿರುವ ಉತ್ಪಾದನಾಂಶಗಳಿಗೆ ಅವನು ನಗದು ಹಣ ಕೊಡಬೇಕಾಗುತ್ತದೆ. ವರ್ಷದ ಕೊನೆಗೆ ಅವನ ಬಂಡವಾಳ ಮೊದಲಿಗಿಂತಲೂ ಕಡಮೆಯಾಗಬಹುದು. ಅವನಿಗೆ ಬರುವ ಮಾರಾಟದ ಬೆಲೆ ಅವನ ಒಟ್ಟು ಉತ್ಪಾದನಾ ವೆಚ್ಚಕ್ಕೆ ಸಮನಾಗಿಲ್ಲದಿರಬಹುದು. ಬೇರೊಬ್ಬ ಸಂಘಟನಾಕಾರ ಹೊಸ ಉತ್ಪಾದನಾ ವಿಧಾನವನ್ನು ಅನುಸರಿಸುವುದರಿಂದ ಈಗಾಗಲೇ ಬಂಡವಾಳವನ್ನು ಅಧಿಕ ಪ್ರಮಾಣದಲ್ಲಿ ಹಾಕಿರುವ ಸಂಘಟನಾಕಾರನಿಗೆ ನಷ್ಟ ಅನಿವಾರ್ಯವಾಗುತ್ತದೆ. ಈ ರೀತಿ ಇಂತಹ ಅನೇಕ ಗಂಡಾಂತರಗಳನ್ನು ಸಂಘಟನಾಕಾರನು ಎದುರಿಸಬೇಕಾಗುತ್ತದೆ. ಇವುಗಳನ್ನು ಮೊದಲೇ ನಿರೀಕ್ಷಿಸಲಾಗುವುದಿಲ್ಲ. ಚಾಣಾಕ್ಷನಾದವನು ಚಾತುರ್ಯದಿಂದ ಇವುಗಳನ್ನು ನಿವಾರಿಸುತ್ತಾನೆ. ಈ ರೀತಿ ಸಂಘಟನಾಕಾರ ಉದ್ದಿಮೆಯಲ್ಲಿನ ಗಂಡಾಂತರಗಳನ್ನು ನಿರ್ವಹಿಸಲು ಲಾಭ ಪಡೆಯುತ್ತಾನೆ. ಇತರರಿಗೆ ವರ್ಗಾಯಿಸಲಾಗದ ಮತ್ತು ತಗ್ಗಿಸಲಾಗದ ಈ ಗಂಡಾಂತರಗಳ ಹೊಣೆಯ ಕರ್ತವ್ಯಕ್ಕಾಗಿ ಸಂಘಟನಾಕಾರನಿಗೆ ಪ್ರತಿಫಲದ ರೂಪದಲ್ಲಿ ಲಾಭ ಸಲ್ಲುತ್ತದೆ. ಸಂಘಟನಾಕಾರನು ಉದ್ದಿಮೆಯಲ್ಲಿ ಮುಂದುವರಿಯಲು ಲಾಭವು ಉತ್ತೇಜಕವಾಗಿ ಪರಿಣಮಿಸುತ್ತದೆ. ಈ ರೀತಿಯ ಉತ್ತೇಜನವಿಲ್ಲದಿದ್ದರೆ ಭೂಮಿ, ಶ್ರಮ, ಬಂಡವಾಳಗಳು ಉಪಯೋಗವಾಗುವುದಿಲ್ಲ. ಈ ನಿಯಮವು ಟೀಕೆಗಳಿಂದ ವಿಮುಕ್ತವಾಗಿಲ್ಲ. ಈ ನಿಯಮವು ಲಾಭ ಯಾವ ರೀತಿ ಉಂಟಾಯಿತು

ಎಂಬುದನ್ನು ವಿವರಿಸುವುದಿಲ್ಲ. ಲಾಭವು ಇತರ ಅಂಶಗಳಿಂದ ಹುಟ್ಟುತ್ತದೆ ಎಂಬುದನ್ನು ಈ ನಿಯಮವು ಗಣನೆಗೆ ತೆಗೆದುಕೊಂಡಿಲ್ಲ. ಗಂಡಾಂತರಗಳನ್ನು ನಿರ್ವಹಿಸಲು ಕೊಡುವ ಪ್ರತಿಫಲವೇ ಲಾಭವಾಗಲಾರದು. ಸಂಘಟನಾಕಾರನ ಜಾಣ್ಮೆ, ಶಕ್ತಿ, ಸಾಮರ್ಥ್ಯ, ದೂರದರ್ಶಿತ್ವಗಳಿಂದ ಲಾಭ ಉಂಟಾಗುತ್ತದೆ. ಈ ಅಂಶಗಳನ್ನು ನಿಯಮಗಣನೆಗೆ ತೆಗೆದುಕೊಂಡಿಲ್ಲ. ಈ ನಿಯಮದ ಪ್ರಕಾರ ಲಾಭ ಗಂಡಾಂತರಗಳನ್ನು ನಿರ್ವಹಿಸಲು ಕೊಡುವ ಪ್ರತಿಫಲ. ಕೆಲವು ಅರ್ಥಶಾಸ್ತ್ರಜ್ಞರ ಪ್ರಕಾರ ಲಾಭವು ಗಂಡಾಂತರಗಳನ್ನು ಕಡಮೆ ಮಾಡಲು ಕೊಡುವ ಪ್ರತಿಫಲ. ಅಂದರೆ ಲಾಭ ಸಂಘಟನಾಕಾರನಿಗೆ ಗಂಡಾಂತರಗಳನ್ನು ನಿರ್ವಹಿಸಲು ಕೊಡುವ ಪ್ರತಿಫಲವಾಗಿರದೆ ಗಂಡಾಂತರಗಳನ್ನು ಕಡಮೆಮಾಡಲು ಕೊಡುವ ಪ್ರತಿಫಲವಾಗಿದೆ.

(vi) **ಅನಿಶ್ಚಿತತೆಯ ಲಾಭದ ನಿಯಮ :** ಈ ನಿಯಮವನ್ನು ನೈಟ್ ಪ್ರತಿಪಾದಿಸಿದನು. ನೈಟ್ ನಿಯಮದ ಪ್ರಕಾರ ಸಂಘಟನಾಕಾರನಿಗೆ ಕೊಡುವ ಲಾಭ ಉದ್ದಿಮೆಯಲ್ಲಿ ಗಂಡಾಂತರಗಳನ್ನು ನಿರ್ವಹಿಸಲು ಕೊಡುವ ಪ್ರತಿಫಲವಾಗಿರದೆ, ಉದ್ದಿಮೆಯಲ್ಲಿನ ಅನಿಶ್ಚಿತತೆಗಳನ್ನು ನಿರ್ವಹಿಸಲು ಕೊಡುವ ಪ್ರತಿಫಲ. ಅಂದರೆ ಗಂಡಾಂತರಗಳನ್ನು ಹೊರುವುದಕ್ಕಿಂತ ಅನಿಶ್ಚಿತತೆಯ ಭಾರವನ್ನು ಹೊರುವುದೇ ಸಂಘಟನಾಕಾರನ ಮುಖ್ಯ ಕರ್ತವ್ಯ. ಪ್ರತಿಯೊಂದು ಆರ್ಥಿಕ ರಚನೆಯಲ್ಲಿ ಅನೇಕ ಬದಲಾವಣೆಗಳುಂಟಾಗುತ್ತವೆ. ಸಂಘಟನಾಕಾರನು ರಕ್ಷಿಸಿಕೊಳ್ಳಲು ಅಸಾಧ್ಯವಾದ ಬದಲಾವಣೆಯುಂಟಾಗುವುದರಿಂದ ಹೊಸ ವಸ್ತುಗಳು ಪೇಟೆಗೆ ಬರುತ್ತವೆ. ಹಳೆಯ ವಸ್ತುಗಳು ಇಲ್ಲವಾಗುತ್ತವೆ. ಜನಸಂಖ್ಯೆ ಹೆಚ್ಚಾಗುತ್ತದೆ. ಸಂಘಟನಾಕಾರನ ನಿರೀಕ್ಷಣೆಗಳು ಸುಳ್ಳಾಗುತ್ತವೆ. ಇಂತಹ ಅನಿಶ್ಚಿತತೆಗಳ ಹೊರೆಯನ್ನು ನಿರ್ವಹಿಸಲು ಸಂಘಟನಾಕಾರನು ಪ್ರತಿಫಲದ ರೂಪದಲ್ಲಿ ಲಾಭ ಪಡೆಯುತ್ತಾನೆ. ಉದ್ದಿಮೆಯಲ್ಲಿ ಅನಿಶ್ಚಿತತೆಗಳು ಕೆಲವು ಗಂಡಾಂತರಗಳ ಮೂಲಕ ಉದ್ಭವವಾಗುತ್ತವೆ. ಅವುಗಳನ್ನು ನಿರೀಕ್ಷಿಸಿ ತಕ್ಕವ್ಯವಸ್ಥೆ ಮಾಡಬಹುದು. ಬೆಂಕಿಯ ಅಪಘಾತ, ಕಳ್ಳತನದಿಂದ ಹಾನಿ, ಭೂಕಂಪ ಇವುಗಳಿಗೆ ವಿಮೆಮಾಡಿ ರಕ್ಷಣೆ ಪಡೆಯಬಹುದು. ಇಲ್ಲಿ ಗಂಡಾಂತರಗಳನ್ನು ನಿರ್ವಹಿಸುವುದು ಜೀವವಿಮಾ ಸಂಸ್ಥೆಯ ಕೆಲಸ. ಆದರೆ ಪೇಟೆಯ ಬಗೆಗಿನ ಅನಿಶ್ಚಿತತೆಯನ್ನು ಸಂಘಟನಾಕಾರ ವಿಮೆಯಿಂದ ರಕ್ಷಿಸಲಾರ. ಉತ್ಪಾದಿಸಿದ ವಸ್ತುಗಳು ಮಾರಾಟವಾಗುವುದು ಅನಿಶ್ಚಿತ. ಆದ್ದರಿಂದ ಲಾಭವು ಇಂತಹ ಅನಿಶ್ಚಿತತೆಗಳನ್ನು ನಿರ್ವಹಿಸಲು ಕೊಡುವ ಪ್ರತಿಫಲ ಎಂಬುದು ನೈಟ್‌ನ ವಾದ. ಈ ನಿಯಮವು ಸಹ ಟೀಕೆಗಳಿಗೆ ಗುರಿಯಾಗಿದೆ. ಸಂಘಟನಾಕಾರನ ಮುಖ್ಯ ಕರ್ತವ್ಯ ಅನಿಶ್ಚಿತತೆಗಳನ್ನು ಹೊರುವುದೊಂದೇ ಅಲ್ಲ. ಇದರೊಂದಿಗೆ ಇತರ ಕಾರ್ಯಗಳಾದ ಉತ್ಪಾದನಾಂಶಗಳನ್ನು ಸಂಘಟಿಸುತ್ತದೆ. ಸಂಶೋಧನೆ, ಯೋಗ್ಯಪ್ರಮಾಣದಲ್ಲಿ ಉತ್ಪಾದನಾಂಶಗಳನ್ನು ಸಂಯೋಜಿಸುವುದು ಮುಂತಾದ ಕಾರ್ಯಗಳನ್ನು ಕೈಗೊಳ್ಳುವುದರಿಂದ 'ಲಾಭ'.

ಈ ಕಾರ್ಯಗಳಿಗೆಲ್ಲ ಕೊಡಬೇಕಾದ ಪ್ರತಿಫಲವನ್ನು ಒಳಗೊಂಡಿರುತ್ತದೆ. ಅನಿಶ್ಚಿತತೆ ಉತ್ಪಾದನೆಯ ಅಂಶವಲ್ಲ. ಅದನ್ನು ಹಣದ ರೂಪದಲ್ಲಿ ಅಳೆಯಲಾಗುವುದಿಲ್ಲವೆಂದು ಕೆಲವರ ಅಭಿಪ್ರಾಯ. ಈ ಕಾರಣಗಳಿಂದ ನೈಟ್ ಪ್ರತಿಪಾದಿಸಿದ ಅನಿಶ್ಚಿತತೆಯ ಲಾಭದ ನಿಯಮವನ್ನು ತಿರಸ್ಕರಿಸಲಾಗಿದೆ.

ಮೇಲಿನ ನಿಯಮಗಳಿಂದ (i) ಲಾಭ ಉದ್ಯಮ ಗಂಡಾಂತರಗಳ ಹೊಣೆಯ ಫಲ (ii) ಲಾಭ ಶೇಷಾದಾಯ ಇದು ಉದ್ಯಮದಿಂದ ಉದ್ಯಮಕ್ಕೆ ಬದಲಾಗುತ್ತ ಹೋಗುತ್ತದೆ. (iii) ಇತರ ಆದಾಯದಂತೆ ಲಾಭದ ಪ್ರಮಾಣವನ್ನು ಮೊದಲೇ ನಿಷ್ಕರ್ಷಿಸಲಾಗುವುದಿಲ್ಲ ಹಾಗೂ (vi) ಒಂದು ಉದ್ದಿಮೆಯ ಲಾಭದ ಹಂಚಿಕೆಯ ದರದಿಂದ ಅದರ ಆರ್ಥಿಕ ಸ್ಥಿತಿಯನ್ನು ಕಂಡುಹಿಡಿಯಲಾಗದು.

ಅಧ್ಯಾಯ 6

ಉದ್ದಿಮೆಗಳ ಸಂಘಟನೆ

ಪುರಾತನ ಕಾಲದಿಂದಲೂ ಉದ್ದಿಮೆಗಳ ಸಂಘಟನೆಯು ಒಂದಲ್ಲ ಒಂದು ರೀತಿಯಲ್ಲಿ ರೂಢಿಯಲ್ಲಿತ್ತು. ಆಗ ಮನುಷ್ಯನ ಬಯಕೆಗಳು ಪರಿಮಿತವಾಗಿದ್ದರಿಂದ ಹೆಚ್ಚು ವಸ್ತುಗಳನ್ನು ಉತ್ಪಾದಿಸುವ ಅವಶ್ಯಕತೆ ಇರಲಿಲ್ಲ. ಇದರಿಂದ ಒಬ್ಬ ಮಾಲೀಕನ ಆಡಳಿತದಲ್ಲಿ ಉದ್ದಿಮೆಗಳ ವ್ಯಾಪಾರ ನಡೆಯುತ್ತಿದ್ದಿತು. ಕಾಲಕ್ರಮೇಣ ಪಾಲುಗಾರಿಕೆ ಸಂಸ್ಥೆಗಳು ರೂಪುಗೊಂಡವು. ಯೂರೋಪಿನಲ್ಲಿ ತಲೆದೋರಿದ ಕೈಗಾರಿಕಾಕ್ರಾಂತಿಯ ನಂತರ ಕೂಡುಬಂಡವಾಳ ಸಂಸ್ಥೆಯು ರೂಪುಗೊಂಡಿತು.

ಸಾಮಾನ್ಯವಾಗಿ ಉದ್ದಿಮೆಗಳು (i) ಬಂಡವಾಳಶಾಹಿ ಪದ್ಧತಿ (ii) ಸಮಾಜವಾದಿ ಉದ್ದಿಮೆಗಳು (ಪದ್ಧತಿ) ಹಾಗೂ (iii) ಸಹಕಾರಿ ಪದ್ಧತಿ ಎಂದು ಮೂರು ವಿಭಾಗಗಳಾಗಿ ವಿಂಗಡಿಸಬಹುದು.

(i) **ಬಂಡವಾಳಶಾಹಿ ಪದ್ಧತಿ :** ಇದು (ಅ) ವೈಯಕ್ತಿಕ ಒಡೆತನ, (ಆ) ಪಾಲುಗಾರಿಕೆ ಹಾಗೂ (ಇ) ಕೂಡುಬಂಡವಾಳ ಸಂಸ್ಥೆಗಳು ಈ ಮೂರು ಬಗೆಯವಾಗಿವೆ. ಇವು ಖಾಸಗೀ ವ್ಯವಹಾರ ಪದ್ಧತಿಗಳಾಗಿ ರೂಪುಗೊಂಡು ಬಹಳ ಹಿಂದಿನಿಂದಲೂ ರೂಢಿಯಲ್ಲಿವೆ.

(ಅ) **ವೈಯಕ್ತಿಕ ಒಡೆತನ :** ವೈಯಕ್ತಿಕ ಒಡೆತನ ಪದ್ಧತಿ ಬಹಳ ಹಳೆಯ ಪದ್ಧತಿ. ಈ ಪದ್ಧತಿಯಲ್ಲಿ ವ್ಯವಹಾರವನ್ನು ಒಬ್ಬನೇ ಸಂಘಟಿಸುತ್ತಾನೆ. ವ್ಯಾಪಾರಕ್ಕೆ ಬೇಕಾಗುವ ಬಂಡವಾಳವನ್ನು ತಾನೇ ಕೂಡಿಸುತ್ತಾನೆ. ಎಲ್ಲ ವ್ಯವಹಾರಗಳನ್ನೂ ತಾನೇ ನಿರ್ವಹಿಸುತ್ತಾನೆ. ಹೆಚ್ಚು ಬಂಡವಾಳ ಬೇಕಾದಲ್ಲಿ ವೈಯಕ್ತಿಕ ಸಾಲಪತ್ರಗಳ ಮೇಲೆ ಬ್ಯಾಂಕುಗಳಿಂದ ಹಣ ಪಡೆಯುತ್ತಾನೆ. ಲಾಭದ ದೃಷ್ಟಿಯಿಂದ ವ್ಯಾಪಾರ ನಡೆಸುತ್ತಾನೆ. ಈ ಬಗೆಯ ಉದ್ದಿಮೆಯಲ್ಲಿ, ಮಾಲೀಕನು ಯಾವ ಯಾವ ವಸ್ತುಗಳನ್ನು ಉತ್ಪಾದಿಸಬೇಕು, ಎಷ್ಟು ಜನ ಕಾರ್ಮಿಕರನ್ನು ನೇಮಕಮಾಡಿಕೊಳ್ಳಬೇಕು, ಯಾವ ಯಂತ್ರಗಳನ್ನು ಕೊಳ್ಳಬೇಕು, ವಸ್ತುವಿನ ಬೆಲೆಯನ್ನು ಯಾವ ಮಟ್ಟದಲ್ಲಿ ನಿಗದಿಪಡಿಸಬೇಕು, ಎಂಬ ವಿಷಯಗಳ ಬಗ್ಗೆ ಅಂತಿಮ ನಿರ್ಧಾರವನ್ನು ಕೈಗೊಳ್ಳುತ್ತಾನೆ. ಉದ್ದಿಮೆಯ ಮೇಲೆ ಸಂಪೂರ್ಣ ಹಕ್ಕು ಇವನದೇ ಆಗಿರುತ್ತದೆ. ವ್ಯವಹಾರವಲ್ಲಿ ಉಂಟಾಗುವ ಎಲ್ಲ ಆಗುಹೋಗುಗಳಿಗೆ ಅವನೇ ಜವಾಬ್ದಾರನಾಗಿರುತ್ತಾನೆ. ತನಗೆ ನೆರ

ವಾಗಲು ಉಳಿದ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುತ್ತಾನೆ. ಆದರೆ ಅಂತಿಮ ತೀರ್ಮಾನ ಮತ್ತು ಹೊಣೆಗಾರಿಕೆ ಇವನದೇ. ಉದ್ದಿಮೆಯನ್ನು ನಡೆಸುವುದು ಬೇಡವಾದಾಗ ಅದನ್ನು ಬಿಟ್ಟುಬಿಡಬಹುದು ಇಲ್ಲವೇ ಮುಚ್ಚಬಹುದು. ಈ ವಿಧವಾದ ವೈಯಕ್ತಿಕ ಒಡೆತನದ ವಾಣಿಜ್ಯಸಂಸ್ಥೆಗಳು ಈಗಲೂ ಸಣ್ಣ ಸಣ್ಣ ವ್ಯವಹಾರಗಳಲ್ಲಿ ರೂಢಿಯಲ್ಲಿವೆ. ಉದಾಹರಣೆಗೆ ಕಿರಾಣಿಅಂಗಡಿ, ಬೀಡಿಅಂಗಡಿ, ಹೋಟೆಲ್, ಹೇರ್ ಕಟಿಂಗ್ ಸೆಲೂನ್, ಮುದ್ರಣಾಲಯ ಇತ್ಯಾದಿ.

ಅನುಕೂಲತೆಗಳು : ಈ ಪದ್ಧತಿಯು ಕೆಲವು ಅನುಕೂಲಗಳನ್ನು ಹೊಂದಿದೆ.

(i) **ಪ್ರಾರಂಭ ಸುಲಭ :** ಸಾಮಾನ್ಯವಾಗಿ ವೈಯಕ್ತಿಕ ಒಡೆತನದಲ್ಲಿ ಉದ್ದಿಮೆಯು ಸಣ್ಣದಾಗಿರುತ್ತದೆ. ಇದಕ್ಕೆ ಹೆಚ್ಚು ಬಂಡವಾಳದ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಈ ಪದ್ಧತಿಯನ್ನು ಬಹಳ ಸುಲಭ ರೀತಿಯಲ್ಲಿ ಪ್ರಾರಂಭಿಸಬಹುದು. ಯಾವೊಬ್ಬ ವ್ಯಕ್ತಿಯೇ ಆಗಲಿ ತನಗೆ ಇಚ್ಛೆ ಬಂದಾಗ ತನ್ನ ಸ್ವಂತ ಶ್ರಮ ಮತ್ತು ಬಂಡವಾಳದಿಂದ ವ್ಯವಹಾರವನ್ನು ಪ್ರಾರಂಭಿಸಬಹುದು. ಉದಾಹರಣೆಗೆ ಜವಳಿ ಅಂಗಡಿ, ಬೀಡಿಅಂಗಡಿ, ಹೋಟೆಲ್‌ಗಳು ಇತ್ಯಾದಿ.

(ii) **ಹುರುಪಿನ ಕೆಲಸ :** ಈ ಪದ್ಧತಿಯಲ್ಲಿ ಮಾಲೀಕನು ಒಬ್ಬನೇ ಆದುದರಿಂದ ಹೆಚ್ಚು ಲಾಭಪಡೆಯುವ ಅವಕಾಶ ಉಂಟು. ಲಾಭದ ಆಸೆಗಾಗಿ ಹುರುಪಿನಿಂದ ದುಡಿಯುತ್ತಾನೆ. ಒಬ್ಬ ವ್ಯಕ್ತಿಯು ಎಲ್ಲ ವ್ಯವಹಾರವನ್ನು ಸ್ವತಃ ನಿರ್ವಹಿಸುವುದರಿಂದ ಲಾಭಗಳಿಸಲು ಆಸಕ್ತಿವಹಿಸಿ ಕೆಲಸಮಾಡುತ್ತಾನೆ. ಬೆಳಗಿನಿಂದ ಸಂಜೆಯವರೆಗೆ ಕಷ್ಟಪಟ್ಟು ದುಡಿಯುತ್ತಾನೆ. ಈ ರೀತಿ ಕೆಲಸಮಾಡುವ ಹುರುಪು ಇತರ ವ್ಯಾಪಾರೀ ಸಂಸ್ಥೆಗಳ ಮಾಲೀಕರಲ್ಲಿ ಕಂಡುಬರುವುದಿಲ್ಲ. ಹುರುಪಿನಿಂದ ಕೆಲಸ ಮಾಡುವುದರಿಂದ ಮಾಲೀಕನ ಕಾರ್ಯದಕ್ಷತೆಯು ಹೆಚ್ಚುತ್ತದೆ.

(iii) **ಲಗುಬಗೆಯ ತೀರ್ಪುಗಳು :** ವ್ಯಾಪಾರದಲ್ಲಿ ಮಾಲೀಕರು ಶೀಘ್ರ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ವ್ಯಾಪಾರದಲ್ಲಿ ನಷ್ಟ ಹೊಂದುವ ಸಂಭವ ಉಂಟು. ವೈಯಕ್ತಿಕ ಒಡೆತನ ಪದ್ಧತಿಯಲ್ಲಿ ಮಾಲೀಕನು ಶೀಘ್ರ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾನೆ. ಯಾವ ವಸ್ತುಗಳನ್ನು ಉತ್ಪಾದಿಸಬೇಕು ಎಷ್ಟು ಉತ್ಪಾದಿಸಬೇಕು ಎಂಬ ವಿಷಯಗಳ ಬಗ್ಗೆ ಅವನು ಯಾರನ್ನೂ ಕೇಳಬೇಕಾಗಿಲ್ಲ. ಇದರಿಂದ ಕೆಲವು ವೇಳೆ ಹಾನಿಯನ್ನು ತಪ್ಪಿಸಿ, ಲಾಭ ಹೆಚ್ಚು ಪಡೆಯಬಹುದು. ವೈಯಕ್ತಿಕ ಒಡೆತನದ ವ್ಯವಹಾರದಲ್ಲಿ ಅಧಿಕಾರವೆಲ್ಲ ಒಬ್ಬನಲ್ಲಿ ಕೇಂದ್ರೀಕೃತವಾಗಿದ್ದು ಶೀಘ್ರ ನಿರ್ಧಾರ ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ವ್ಯವಹಾರದಲ್ಲುಂಟಾಗುವ

ಬದಲಾವಣೆಗಳಿಗೆ ಈ ಪದ್ಧತಿಯಲ್ಲಿ ಹೊಂದಿಕೊಳ್ಳುವುದು ಸುಲಭ. ವಿಶೇಷವಾದ ಕಠಿಣ ಸಮಸ್ಯೆಗಳು ಇಲ್ಲಿ ಕಂಡುಬರುವುದಿಲ್ಲ.

(iv) **ಬಳಕೆದಾರರಲ್ಲಿ ನೇರಸಂಪರ್ಕ :** ಗಿರಾಕಿಗಳನ್ನು ತೃಪ್ತಿಪಡಿಸಲು ವೈಯಕ್ತಿಕ ಒಡೆತನದ ಪದ್ಧತಿಯೇ ಒಳ್ಳೆಯದು. ಸಾಮಾನ್ಯವಾಗಿ ಇಂತಹ ಪದ್ಧತಿಯಲ್ಲಿ ಮಾಲೀಕ ಹಾಗೂ ಬಳಕೆದಾರರಲ್ಲಿ ನೇರಸಂಪರ್ಕ ಬರುತ್ತದೆ. ಉದ್ದಿಮೆಯ ಮಾಲೀಕನು ಗಿರಾಕಿಗಳಿಗೆ ಸಾಮಾನುಗಳನ್ನು ಒದಗಿಸಿ, ಅವರ ತೃಪ್ತಿಯು ತನ್ನ ತೃಪ್ತಿ ಎಂದು ತಿಳಿದುಕೊಳ್ಳುತ್ತಾನೆ. ಅವರ ಇಷ್ಟಕ್ಕನುಗುಣವಾಗಿ ವಸ್ತುಗಳನ್ನು ಉತ್ಪಾದಿಸಲಾಗುವುದು. ಇದರಿಂದ ವ್ಯಾಪಾರವು ಹೆಚ್ಚುವುದಲ್ಲದೆ, ಲಾಭವೂ ಹೆಚ್ಚು ಸಿಗುತ್ತದೆ. ಗಿರಾಕಿಗಳ ತೃಪ್ತಿಯನ್ನು ಪಾಲುಗಾರಿಕೆಯ ಸಂಸ್ಥೆಯಾಗಲೀ, ಕೂಡುಬಂಡವಾಳ ಸಂಸ್ಥೆಯಾಗಲೀ ಸಾಧಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಈ ಸಂಸ್ಥೆಗಳಲ್ಲಿ ಬಳಕೆದಾರರೊಂದಿಗೆ ಮಾಲೀಕರ ನಿಕಟ ಸಂಪರ್ಕವಿರುವುದಿಲ್ಲ. ಈ ಪದ್ಧತಿಯಲ್ಲಿ ಉತ್ಪಾದಿಸಿದ ವಸ್ತುಗಳಿಗೆ ಬೇಡಿಕೆಯು ಸ್ಥಿರವಾಗಿದ್ದು, ಲಾಭಪಡೆಯಲು ಅನುಕೂಲವಾಗುತ್ತದೆ.

(v) **ಶ್ರೇಷ್ಠಮಟ್ಟದ ಮೇಲ್ವಿಚಾರಣೆ :** ಈ ಪದ್ಧತಿಯಲ್ಲಿ ಕೆಲಸಗಾರರು ಕೆಲವರು ಮಾತ್ರ ಇರುವುದರಿಂದ ಮೇಲ್ವಿಚಾರಣೆಯ ಅವಶ್ಯಕತೆ ಅಷ್ಟೇನೂ ಕಂಡುಬರುವುದಿಲ್ಲ. ಮಾಲೀಕನು ತನ್ನ ಕೈಕೆಳಗೆ ದುಡಿಯುವ ನೌಕರರ ಮೇಲ್ವಿಚಾರಣೆಯನ್ನು ನಡೆಸುವನು. ಕೆಲಸಗಾರರ ಕುಂದುಕೊರತೆಗಳನ್ನು ಸ್ವತಃ ಬಗೆಹರಿಸುವನು. ಈ ರೀತಿಯ ನಿಕಟಸಂಪರ್ಕದಿಂದ ಸುಮಧುರ ಬಾಂಧವ್ಯವೇರ್ಪಡಲು ಸಾಧ್ಯವಾಗುತ್ತದೆ. ಇದರಿಂದ ಭಿನ್ನಾಭಿಪ್ರಾಯಗಳು ತಲೆದೋರುವುದಿಲ್ಲ ಹಾಗೂ ಸಂಪುಗಳು ಸಂಭವಿಸುವ ಸಾಧ್ಯತೆಯೂ ಕಡಮೆ. ಇದರಿಂದ ಉದ್ದಿಮೆಯು ಸುಸೂತ್ರವಾಗಿ ನಡೆಯುವುದಲ್ಲದೆ ವೇಳೆಯ ಅಪವ್ಯಯವಾಗುವುದಿಲ್ಲ.

(vi) **ಕಡಮೆ ಖರ್ಚು :** ವೈಯಕ್ತಿಕ ಒಡೆತನ ಪದ್ಧತಿಯಲ್ಲಿ ಮಾಲೀಕನು ಸ್ವತಃ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದರಿಂದ ಆಡಳಿತ ಖರ್ಚು ಕಡಮೆಯಾಗುತ್ತದೆ. ಮಾಲೀಕನೇ ಲೆಕ್ಕಪತ್ರಗಳ ವಿಚಾರಣೆ ಮಾಡುತ್ತಾನೆ. ಹಣವನ್ನು ವಸೂಲಿ ಮಾಡುತ್ತಾನೆ. ಇವುಗಳೆಲ್ಲವನ್ನು ಮಾಲೀಕನೇ ಸ್ವತಃ ಮಾಡುವುದರಿಂದ ಇಂತಹ ಕೆಲಸಗಳಿಗೆ ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕಾದ ಅವಶ್ಯಕತೆ ಇರುವುದಿಲ್ಲ. ಇದರಿಂದ ಖರ್ಚು ಕಡಮೆಯಾಗುತ್ತದೆ. ವೈಯಕ್ತಿಕ ಒಡೆತನದ ಕಾರ್ಯಗಳನ್ನು ನಿರ್ವಹಿಸಲು ವಿಶೇಷ ಶಿಕ್ಷಣಕುಶಲತೆಗಳು ಬೇಕಾಗಿಲ್ಲ.

ಅನಾನುಕೂಲಗಳು : ವೈಯಕ್ತಿಕ ಒಡೆತನ ಪದ್ಧತಿಯಲ್ಲಿ ಅನೇಕ ಅನಾನುಕೂಲತೆಗಳೂ ಇವೆ.

(i) **ಹಣದ ಕೊರತೆ :** ಈಗಿನ ಕಾಲದಲ್ಲಿ ಪ್ರತಿಯೊಂದು ಉದ್ದಿಮೆಯನ್ನು ಸ್ಥಾಪಿಸಲು ಸಾಕಷ್ಟು ಬಂಡವಾಳವಿರಬೇಕು. ಆದರೆ ವೈಯಕ್ತಿಕ ಒಡೆತನದ ಪದ್ಧತಿಯಲ್ಲಿ ಒಬ್ಬನೇ ಮಾಲೀಕ ಉದ್ದಿಮೆಯಲ್ಲಿ ತೊಡಗಿಸುವ ಬಂಡವಾಳ ಬಹಳ ಕಡಮೆ ಇದ್ದು ಸಂಸ್ಥೆಯನ್ನು ಅಭಿವೃದ್ಧಿಗೊಳಿಸುವುದಿಲ್ಲ. ಉದ್ದಿಮೆಯು ಬೆಳೆದಂತೆ ಹೆಚ್ಚಿನ ಹಣದ ಆವಶ್ಯಕತೆ ಕಂಡುಬರುತ್ತದೆ. ಆದ್ದರಿಂದ ಈ ಪದ್ಧತಿಯಲ್ಲಿ ಕೊನೆಯವರೆಗೆ ಸಣ್ಣ ಪ್ರಮಾಣದ ಉದ್ದಿಮೆಯಾಗಿಯೇ ಮುಂದುವರಿಯಬೇಕು. ಸಣ್ಣ ಪ್ರಮಾಣದಲ್ಲಿ ನಡೆಸಿದರೆ ವಸ್ತುಗಳ ಉತ್ಪಾದನೆ ಕಡಮೆಯಾಗಿ, ಬೆಲೆ ಹೆಚ್ಚಿ ಜನರು ಹೆಚ್ಚು ವಸ್ತುಗಳನ್ನು ಕೊಳ್ಳುವುದಿಲ್ಲ. ಲಾಭ ಕಡಮೆಯಾಗುತ್ತದೆ. ಈಗಿನ ಯುಗದಲ್ಲಿ ಉದ್ದಿಮೆಗಳಿಗೆ ಬೃಹತ್‌ಪ್ರಮಾಣದ ಬಂಡವಾಳಬೇಕು.

(ii) **ಶ್ರಮವಿಭಜನೆ ಇಲ್ಲ :** ವೈಯಕ್ತಿಕ ಒಡೆತನ ಪದ್ಧತಿ ಒಂದು ಸಣ್ಣ ಪ್ರಮಾಣದ ಸಂಸ್ಥೆ ಮತ್ತು ಇದು ಕಡಮೆ ಬಂಡವಾಳದಿಂದ ಕೂಡಿದ ಸಂಸ್ಥೆ. ಇಂತಹ ಸಂಸ್ಥೆಗಳಲ್ಲಿ ನವೀನ ರೀತಿಯ ದೊಡ್ಡ ಯಂತ್ರಗಳನ್ನು ಬಳಸಲು ಅವಕಾಶ ಬಹಳ ಕಡಮೆ ಇರುತ್ತದೆ. ನವೀನ ಯಂತ್ರಗಳನ್ನು ಬಳಸದಿದ್ದರೆ ಶ್ರಮ ವಿಭಜನೆಗೆ ಎಡೆಯೇ ಇಲ್ಲ. ಶ್ರಮ ವಿಭಜನೆ ಇಲ್ಲದಿರುವುದರಿಂದ ವಸ್ತುಗಳನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಿಸಲು ಸಾಧ್ಯವಾಗುವುದಿಲ್ಲ. ಮೇಲಾಗಿ ಉತ್ಪಾದನೆಯ ವೆಚ್ಚ ಬಹಳ ಬರುತ್ತದೆ.

(iii) **ವ್ಯವಹಾರ ಕುಶಲತೆ :** ವ್ಯವಹಾರವು ಸಂಘಟಕನ ವ್ಯವಹಾರ ಕುಶಲತೆಯನ್ನವಲಂಬಿಸಿರುತ್ತದೆ. ವಸ್ತುಗಳನ್ನು ಕೊಳ್ಳುವುದು, ಮಾರಾಟಮಾಡುವುದು, ಲೆಕ್ಕಪತ್ರಗಳನ್ನಿಡುವುದು ಮುಂತಾದುವುಗಳನ್ನು ಮಾಲೀಕನೇ ನಿರ್ವಹಿಸಬೇಕು. ಈ ಎಲ್ಲ ವಿಭಾಗಗಳಲ್ಲಿ ಒಬ್ಬ ವ್ಯಕ್ತಿ ನುರಿತಿರುವುದು ಬಹಳ ಅಪರೂಪ. ಮಾಲೀಕನಿಗೆ ವಯಸ್ಸಾದಂತೆಲ್ಲ ಅವನ ಶಕ್ತಿ, ವ್ಯವಹಾರ ಕುಶಲತೆ ಕಡಮೆಯಾಗುತ್ತದೆ. ಇದರಿಂದ ಲಾಭ ಕಡಮೆಯಾಗುತ್ತದೆ. ಇದನ್ನು ತಪ್ಪಿಸುವುದಕ್ಕಾಗಿ ನುರಿತ ಕೆಲಸಗಾರರನ್ನು ಅಂದರೆ ಕಚ್ಚಾ ಪದಾರ್ಥಗಳನ್ನು ಕೊಂಡುಕೊಳ್ಳಲು, ತಯಾರಿಸಿದ ವಸ್ತುಗಳನ್ನು ಮಾರಾಟಮಾಡಲು ನೇಮಕ ಮಾಡಿಕೊಳ್ಳಲು ಮಾಲೀಕನ ಬಳಿ ಸಾಕಷ್ಟು ಹಣವಿರುವುದಿಲ್ಲ. ದೊಡ್ಡಸಂಸ್ಥೆಗಳಲ್ಲಿ ಅದೂ ಕೂಡುಬಂಡವಾಳ ಸಂಸ್ಥೆಗಳಲ್ಲಿ ಪ್ರತಿಯೊಂದು ವಿಭಾಗಕ್ಕೂ ನಿಷ್ಣಾತರನ್ನು (ತಜ್ಞರು) ನೇಮಕಮಾಡಿರುತ್ತಾರೆ. ಖರೀದಿ ವಿಭಾಗ, ಉತ್ಪಾದನಾ ವಿಭಾಗ, ಮಾರಾಟವಿಭಾಗ, ಲೆಕ್ಕಪತ್ರಗಳ ವಿಭಾಗ ಇತ್ಯಾದಿ ಇದರಿಂದ ದಕ್ಷತೆ ಹೆಚ್ಚಾಗುತ್ತದೆ.

(iv) **ತಾತ್ಕಾಲಿಕವಾದ ಸಂಸ್ಥೆ :** ವೈಯಕ್ತಿಕ ಒಡೆತನ ಪದ್ಧತಿಯು ಬಹಳ ಕಾಲ ನಿಲ್ಲಲಾರದು. ಏಕೆಂದರೆ ಸಂಸ್ಥೆಯು ಯಜಮಾನ ಮೃತನಾದ ಕೂಡಲೇ

ಉದ್ದಿಮೆಯನ್ನು ಮುಚ್ಚಬೇಕಾಗುತ್ತದೆ. ಒಂದುವೇಳೆ ಉದ್ದಿಮೆಯನ್ನು ಮುಚ್ಚದೆ ಅವನ ಮಕ್ಕಳು ಮುಂದೆ ಬಂದು ಅದನ್ನು ನಡೆಸಿದರೂ ಸಹ ಅವನಷ್ಟೇ ಕಷ್ಟಪಟ್ಟು ಅವರು ಕೆಲಸಮಾಡದಿರಬಹುದು. ಇದರಿಂದ ಉದ್ದಿಮೆಯು ನಷ್ಟಕ್ಕೆ ಒಳಗಾಗುತ್ತದೆ.

ಈಗಿನ ಪ್ರಪಂಚದಲ್ಲಿ ವೈಯಕ್ತಿಕ ಒಡೆತನ ಪದ್ಧತಿ ಹೊಸ ಉದ್ದಿಮೆಗಳ ಸ್ಥಾಪನೆಗೆ ಹೊಂದಿಕೊಳ್ಳುವುದಿಲ್ಲ. ಆದಾಗ್ಯೂ ಸಣ್ಣ ಉದ್ದಿಮೆಗಳಿಗೆ ಮಾತ್ರ ಈ ಪದ್ಧತಿ ಯೋಗ್ಯವಾಗಿರುತ್ತದೆ. ಈಗಲೂ ಸಹ ವೈಯಕ್ತಿಕ ಪದ್ಧತಿಯು ಕಂಡು ಬರುತ್ತದೆ.

ಪಾಲುಗಾರಿಕೆ

ವೈಯಕ್ತಿಕ ಒಡೆತನ ಪದ್ಧತಿಯಲ್ಲಿ ಕಂಡುಬಂದ ನಾನಾ ಅನುಕೂಲಗಳಾದ ಕಡಮೆ ಬಂಡವಾಳ, ಶ್ರಮ ವಿಭಜನೆ ಇಲ್ಲದಿರುವುದು, ವ್ಯವಹಾರ ಕುಶಲತೆಯ ಕೊರತೆ, ತತ್ಕಾಲಿಕತೆ ಮುಂತಾದವುಗಳಿಂದ ವಿಮುಕ್ತರಾಗಲು ಪಾಲುಗಾರಿಕೆಯ ಸಂಸ್ಥೆಯನ್ನು ಅನುಷ್ಠಾನಕ್ಕೆ ತರಲಾಯಿತು. ಪಾಲುಗಾರಿಕೆ, ವೈಯಕ್ತಿಕ ಒಡೆತನ ಪದ್ಧತಿಯ ಕೊರತೆಗಳನ್ನು ನಿವಾರಿಸಲು ರೂಪುಗೊಂಡಿರುವ ಸಂಸ್ಥೆ. ಪಾಲುಗಾರಿಕೆಯ ಪದ್ಧತಿಯಲ್ಲಿ ಕಾನೂನು ರೀತಿ ಒಪ್ಪಂದ ಮಾಡಿಕೊಂಡು ಅತಿನಿಕಟವರ್ತಿಗಳಾದ ಕೆಲವು ಜನರು ಒಟ್ಟುಗೂಡಿ ತಮ್ಮಲ್ಲಿದ್ದ ಬಂಡವಾಳವನ್ನು ಒಟ್ಟುಗೂಡಿಸಿ ಪಾಲುಗಾರಿಕೆಯ ಸಂಸ್ಥೆಯನ್ನು ಸ್ಥಾಪಿಸಬಹುದು. ಮೂರು ಅಥವಾ ನಾಲ್ಕು ಜನ ಪಾಲುಗಾರರು ಸೇರಿ ಒಂದು ವಾಣಿಜ್ಯ ಸಂಸ್ಥೆಯನ್ನು ಪ್ರಾರಂಭಿಸಿದರೆ ಅದು 'ಪಾಲುಗಾರಿಕೆಯ ಸಂಸ್ಥೆ', ಎನಿಸಿಕೊಳ್ಳುತ್ತದೆ. ಇಬ್ಬರಿಗಿಂತಲೂ ಹೆಚ್ಚು ಮಂದಿ ಒಂದುಗೂಡಿದರೆ ಒಬ್ಬ ಪಾಲುಗಾರ ಬಂಡವಾಳವನ್ನು, ಮತ್ತೊಬ್ಬ ಭೂಮಿಯನ್ನು, ಮೂರನೆಯವ ಕಚ್ಚಾ ಪದಾರ್ಥಗಳನ್ನು, ಉಳಿದವನು ತನ್ನ ಆಡಳಿತ ಸಾಮರ್ಥ್ಯವನ್ನು ಒಂದೆಡೆ ಕೂಡುಹಾಕಿ ಸಂಯುಕ್ತವಾಗಿ ಪಾಲುಗಾರಿಕೆಯ ಸಂಸ್ಥೆಗಳನ್ನು ನಡೆಸಬಹುದು. ಅಂದರೆ ಈ ಪದ್ಧತಿಯಲ್ಲಿ ಎಲ್ಲರೂ ಬಂಡವಾಳವನ್ನು ಉದ್ದಿಮೆಯಲ್ಲಿ ತೊಡಗಿಸಬೇಕೆಂಬ ನಿಯಮ ವಿಲ್ಲ. ಲಾಭದ ಹಂಚಿಕೆ, ಬಂಡವಾಳದ ಮೊತ್ತ ಹಾಗೂ ಪ್ರತಿಯೊಬ್ಬ ಪಾಲುದಾರನ ಕರ್ತವ್ಯಗಳನ್ನು ಚರ್ಚಿಸಿ ಕರಡುಪ್ರತಿಯನ್ನು ತಯಾರಿಸುತ್ತಾರೆ. ಈ ಪ್ರತಿಗೆ ಎಲ್ಲ ಸದಸ್ಯರು ಸಹಿ ಹಾಕಿದನಂತರ ಕರಾರುಪತ್ರವಾಗಿ ಪಾಲುಗಾರಿಕೆಯ ಸಂಸ್ಥೆ ಅಸ್ತಿತ್ವಕ್ಕೆ ಬರುತ್ತದೆ. ಎಲ್ಲ ಪಾಲುದಾರರೂ ಲಾಭವನ್ನು ಕರಾರಿನಂತೆ ಹಂಚಿಕೊಳ್ಳುತ್ತಾರೆ. ಅಕಸ್ಮಾತ್ ಉದ್ದಿಮೆಯು ನಷ್ಟಕ್ಕೆ ಗುರಿಯಾದರೆ ಅದನ್ನು ಎಲ್ಲರೂ ಹೊರುವಂತಿರಬೇಕು. ಕರಾರಿನಲ್ಲಿ ನಮೂದಿಸಿದಂತೆ ನಡೆದುಕೊಳ್ಳಬೇಕಾದುದು ಷೇರುದಾರರ ಕರ್ತವ್ಯ.

ಪಾಲುಗಾರಿಕೆಯ ಲಕ್ಷಣಗಳು : ಪಾಲುಗಾರಿಕೆಸಂಸ್ಥೆ ನಿಜವಾಗಿಯೂ ಸಹ ಜೀವನದ ಫಲ. ಅದರ ಸದಸ್ಯರ ಸಂಖ್ಯೆ ಪರಿಮಿತಿಯಲ್ಲಿರುತ್ತದೆ. ಅವರೆಲ್ಲರೂ

ಒಟ್ಟುಗೂಡಿ ಸ್ವಯಂಪ್ರೇರಣೆಯಿಂದ ಮುಂದೆ ಬಂದು ವ್ಯವಹಾರವನ್ನು ಅಸ್ತಿತ್ವಕ್ಕೆ ತಂದಿರುತ್ತಾರೆ, ಇದರಲ್ಲಿ ಸಂಸ್ಥೆಯ ಬಗ್ಗೆ ವೈಯಕ್ತಿಕ ಹೊಣೆ ಇರುವುದಿಲ್ಲ. ಆದಾಗ್ಯೂ ಸಂಸ್ಥೆಗಳಿಸಿದ ಲಾಭ ಅಥವಾ ನಷ್ಟವನ್ನು ಕರಾರಿನಲ್ಲಿ ಗೊತ್ತುಪಡಿಸಿದ ಪ್ರಮಾಣದಲ್ಲಿ ಎಲ್ಲ ಸದಸ್ಯರು ಹಂಚಿಕೊಳ್ಳುತ್ತಾರೆ.

ಅನುಕೂಲಗಳು : ಪಾಲುಗಾರಿಕೆ ಸಂಸ್ಥೆಯನ್ನು ರೂಪಿಸುವಿಕೆಯಲ್ಲಿ ಕೆಲವು ಅನುಕೂಲತೆಗಳಿವೆ.

(i) **ಅಧಿಕ ಬಂಡವಾಳ :** ವೈಯಕ್ತಿಕ ಒಡೆತನದ ಪದ್ಧತಿಗಿಂತಲೂ ಪಾಲುಗಾರಿಕೆಯ ಸಂಸ್ಥೆ ಹೆಚ್ಚು ಬಂಡವಾಳವನ್ನು ಪಡೆಯುತ್ತದೆ. ವೈಯಕ್ತಿಕ ಒಡೆತನದ ಪದ್ಧತಿಯಲ್ಲಿ ಒಬ್ಬನೇ ಮಾಲೀಕ ಬಂಡವಾಳವನ್ನು ಪೂರೈಸಬೇಕು. ಪಾಲುಗಾರಿಕೆ ಸಂಸ್ಥೆಯಲ್ಲಿ ಅನೇಕ ಜನ ಪಾಲುಗಾರರಿರುವುದರಿಂದ ಅವರೆಲ್ಲರೂ ತಮ್ಮಲ್ಲಿರುವ ಬಂಡವಾಳವನ್ನು ಸಂಸ್ಥೆಯ ಉದ್ದಿಮೆಯಲ್ಲಿ ತೊಡಗಿಸುತ್ತಾರೆ. ಉದ್ದಿಮೆಯನ್ನು ಬೃಹತ್ ಪ್ರಮಾಣದಲ್ಲಿ ಸ್ಥಾಪಿಸಬಹುದು. ಮೇಲಾಗಿ ಅಧಿಕ ಸಾಲವನ್ನು ಸಹ ಪಡೆಯಬಹುದು. ಬ್ಯಾಂಕುಗಳು ಒಬ್ಬ ವ್ಯಕ್ತಿಗೆ ಸಾಲನೀಡಲು ಹಿಂಜರಿಯುತ್ತವೆ. ಬ್ಯಾಂಕಿನಲ್ಲಿಡಲು ಅವನ ಬಳಿ ಭದ್ರತೆಗಳು ಇರುವುದಿಲ್ಲ. ಆದರೆ ಪಾಲುಗಾರಿಕೆಯ ಸಂಸ್ಥೆಯು ಈ ಅನುಕೂಲಗಳನ್ನು ಹೊಂದಿರುವುದರಿಂದ ಉದ್ದಿಮೆಯನ್ನು ದೊಡ್ಡ ಪ್ರಮಾಣದಲ್ಲಿ ಸ್ಥಾಪಿಸಿ ಹೆಚ್ಚು ಲಾಭ ಪಡೆಯಬಹುದು.

(ii) **ಕುಶಲತೆಗಳ ಸಂಗಮ :** ಪಾಲುಗಾರಿಕೆ ಸಂಸ್ಥೆ ಅನೇಕ ಗುಣಗಳನ್ನೊಳಗೊಂಡ ವ್ಯಕ್ತಿಗಳಿಂದ ಕೂಡಿರುತ್ತದೆ. ಒಬ್ಬ ವ್ಯಕ್ತಿಯಲ್ಲಿ ಬಂಡವಾಳವಿರಬಹುದು. ಆದರೆ ಆಡಳಿತ ನಿರ್ವಹಿಸುವ ಯೋಗ್ಯತೆ ಇಲ್ಲದಿರಬಹುದು. ಆಡಳಿತ ನಿರ್ವಹಣೆಯ ಯೋಗ್ಯತೆಯನ್ನು ಹೊಂದಿರುವವನ ಬಳಿ ಬಂಡವಾಳದ ಕೊರತೆ ಇರಬಹುದು. ಪಾಲುಗಾರಿಕೆಯಲ್ಲಿ ಈ ಬಗೆಯ ವ್ಯಕ್ತಿಗಳು ಒಟ್ಟುಗೂಡುವುದರಿಂದ ಬಂಡವಾಳ ದೊರೆಯುವುದಲ್ಲದೆ ಆಡಳಿತ ನಿರ್ವಹಿಸಲು ಯೋಗ್ಯವಾದ ಕುಶಲತೆಯುಳ್ಳ ಜನರೂ ಸಹ ದೊರೆಯುತ್ತಾರೆ. ವೈಯಕ್ತಿಕ ಒಡೆತನ ಪದ್ಧತಿಯಲ್ಲಿ ಎಲ್ಲ ಕಾರ್ಯಗಳನ್ನು ಒಬ್ಬನೇ ನಿರ್ವಹಿಸಬೇಕಾಗುತ್ತದೆ.

(iii) **ಅಪವ್ಯಯದ ನಿವಾರಣೆ :** ಪಾಲುಗಾರಿಕೆ ಸಂಸ್ಥೆಯಲ್ಲಿ ಅನೇಕರು ಸದಸ್ಯರಾಗಿರುವುದರಿಂದ ಒಬ್ಬನು ಒಂದೊಂದು ವಿಭಾಗದಲ್ಲಿ ನುರಿತಿರುತ್ತಾನೆ. ಇದರಿಂದ ಅಪವ್ಯಯವನ್ನು ಕಡಮೆ ಮಾಡಬಹುದು. ಮಾರಾಟ ವಿಭಾಗದಲ್ಲಿ ಒಬ್ಬ ವ್ಯಕ್ತಿ ನೈಪುಣ್ಯತೆ ಪಡೆದಿದ್ದರೆ, ಮತ್ತೊಬ್ಬ ಉತ್ಪಾದನಾತಂತ್ರದಲ್ಲಿ ನುರಿತಿರಬಹುದು ; ಇನ್ನೊಬ್ಬನು ಲೆಕ್ಕಪತ್ರಗಳನ್ನಿಡುವುದರಲ್ಲಿ ಜಾಣನಿರಬಹುದು. ಇದರಿಂದ ಪ್ರತಿಯೊಂದು ವಿಭಾಗವು ತಜ್ಞರಿಂದ ಕೂಡಿದ್ದು ದಕ್ಷತೆಯಿಂದ ಕಾರ್ಯಗಳನ್ನು ನಿರ್ವಹಿಸಲಾಗುತ್ತದೆ. ಅಪವ್ಯಯ ಕಡಮೆಯಾಗಿ ಹೆಚ್ಚಿನ ಲಾಭದೊರೆಯುತ್ತದೆ.

(iv) **ಲಗುಬಗೆಯ ತೀರ್ಪುಗಳು :** ಪಾಲುಗಾರಿಕೆಯಲ್ಲಿ ಕೆಲವೇ ಜನ ಶೇರುದಾರರಿರುವುದರಿಂದ ಶೀಘ್ರ ತೀರ್ಪುಗಳನ್ನು ಕೈಗೊಳ್ಳಬಹುದು. ಅದರಂತೆ ಉದ್ದಿಮೆಯಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಬಹುದು. ತೀರ್ಮಾನಗಳನ್ನು ತಡವಾಗಿ ತೆಗೆದುಕೊಂಡರೆ ನಷ್ಟ ಒದಗುವ ಸಂಭವ ಹೆಚ್ಚು. ಕೂಡುಬಂಡವಾಳ ಸಂಸ್ಥೆಗಳಲ್ಲಿ ತೀರ್ಮಾನಗಳನ್ನು ಕೂಡಲೇ ತೆಗೆದುಕೊಳ್ಳಲಾಗುವುದಿಲ್ಲ.

(v) **ವಿಶೇಷ ಆಸಕ್ತಿ :** ಎಲ್ಲ ಪಾಲುಗಾರರು ಲಾಭವನ್ನು ಸಮನಾಗಿ ಹಂಚಿಕೊಳ್ಳುವುದರಿಂದ ಪ್ರತಿಯೊಬ್ಬನೂ ಆಸಕ್ತಿಯಿಂದ ದುಡಿಯುತ್ತಾನೆ. ಆಕಸ್ಮಾತ್ ಯಾವುದೇ ಒಬ್ಬ ಸದಸ್ಯ ನಿವೃತ್ತಿಯಾದರೆ ಉದ್ದಿಮೆ ನಿಲ್ಲುವುದಿಲ್ಲ. ಉಳಿದ ಪಾಲುಗಾರರು ಉದ್ದಿಮೆಯ ಆಡಳಿತವನ್ನು ನಿರ್ವಹಿಸುತ್ತಾರೆ. ಆದ್ದರಿಂದ ಪಾಲುಗಾರಿಕೆ ಸಂಸ್ಥೆ 'ವೈಯಕ್ತಿಕ ವ್ಯವಹಾರ' ಪದ್ಧತಿಗಿಂತಲೂ ಹೆಚ್ಚು ಕಾಲ ಜೀವಂತವಾಗಿರಬಲ್ಲುದು. ಸಂಸ್ಥೆಯು ಯಾವುದೇ ಒಬ್ಬ ಪಾಲುದಾರನ ಜೀವಮಾನವನ್ನ ಲಂಬಿಸಿರುವುದಿಲ್ಲ.

(vi) **ನಿಕಟ ಸಂಪರ್ಕ :** ಪಾಲುಗಾರಿಕೆಸಂಸ್ಥೆಯಲ್ಲಿ ಪಾಲುದಾರರ ಮಧ್ಯೆ ನಿಕಟಸಂಪರ್ಕವಿರುತ್ತದೆ. ನಿಕಟಸಂಪರ್ಕವಿರುವುದರಿಂದ ವೈಮನಸ್ಸುಗಳು ಕಡಮೆಯಾಗುತ್ತವೆ. ಅಂದರೆ ನಿಕಟಸಂಪರ್ಕದಿಂದ ಅನುಮಾನಗಳನ್ನು ತೊಡೆದುಹಾಕಬಹುದು ಹಾಗೂ ಸಂಸ್ಥೆಯನ್ನು ಸುಸೂತ್ರವಾಗಿ ನಡೆಸಲು ಸಾಧ್ಯವಾಗಬಹುದು. ದೀರ್ಘಾವಧಿ ಪಾಲುಗಾರಿಕೆ ಸಂಸ್ಥೆ ಬಹಳ ಕಾಲ ಜೀವಿಸಬಲ್ಲದು.

ಕೊರತೆಗಳು : ಪಾಲುಗಾರಿಕೆ ಸಂಸ್ಥೆಯಲ್ಲಿ ಕೆಲವು ನ್ಯೂನತೆಗಳು ಕಂಡುಬರುತ್ತವೆ.

(i) **ಅನಿಯಮಿತ ಹೊಣೆಗಾರಿಕೆ :** ಪಾಲುಗಾರಿಕೆಸಂಸ್ಥೆಯ ಮುಖ್ಯ ನ್ಯೂನತೆ ಅನಿಯಮಿತ ಹೊಣೆಗಾರಿಕೆ. ಪಾಲುಗಾರಿಕೆ ಸಂಸ್ಥೆಯಲ್ಲಿ ಯಾರಾದರೊಬ್ಬ ಸದಸ್ಯ ಸಂಸ್ಥೆಯ ಪರವಾಗಿ ಸಾಲ ಮಾಡಿದರೆ ಅದಕ್ಕೆ ಎಲ್ಲ ಪಾಲುದಾರರು ಹೊಣೆಗಾರರು. ಆಕಸ್ಮಾತ್ ಸಾಲಪಡೆದವನು ಸಂಸ್ಥೆಯನ್ನು ತ್ಯಜಿಸಿದರೆ ಅಥವಾ ಮರಣ ಹೊಂದಿದರೆ ಉಳಿದ ಪಾಲುದಾರರು ಆ ಸಾಲವನ್ನು ತೀರಿಸಬೇಕಾಗುತ್ತದೆ. ಆಕಸ್ಮಿಕವಾಗಿ ನಷ್ಟ ಸಂಭವಿಸಿದ ಪ್ರಸಂಗಗಳಲ್ಲಿ ಉಳಿದ ಪಾಲುದಾರರು ತಮ್ಮ ಖಾಸಗೀ ಆಸ್ತಿ, ಮನೆ, ಭೂಮಿ, ಆಭರಣಗಳನ್ನು ಮಾರಬೇಕಾಗುತ್ತದೆ. ಆದ್ದರಿಂದ ಶ್ರೀಮಂತರು ಪಾಲುಗಾರಿಕೆ ಸಂಸ್ಥೆಗೆ ಸೇರಬಯಸುವುದಿಲ್ಲ. 'ಅನಿಯಮಿತ ಹೊಣೆಗಾರಿಕೆ' ಪಾಲುಗಾರಿಕೆ ಸಂಸ್ಥೆಗಳ ಬೆಳವಣಿಗೆಗೆ ಕಂಟಕವಾಗಿದೆ. ಆದರೆ ಈ ಅಡಚಣೆಯನ್ನು ತಪ್ಪಿಸಲು ಇತ್ತೀಚೆಗೆ 'ಮಿತ ಹೊಣೆಗಾರಿಕೆ'ಯನ್ನು ಪಾಲುಗಾರಿಕೆ ಸಂಸ್ಥೆಗಳಲ್ಲಿ ಜಾರಿಗೆ ತರಲಾಗಿದೆ.

(ii) **ಶೀಘ್ರ ನಿರ್ಧಾರ ಕೈಕೊಳ್ಳುವಿಕೆಯಲ್ಲಿ ವಿಳಂಬ :** ಶೀಘ್ರ ನಿರ್ಣಯ ಗಳನ್ನು ತೆಗೆದುಕೊಳ್ಳುವಲ್ಲಿ ವಿಳಂಬ ಉಂಟಾಗುವುದು ಪಾಲುಗಾರಿಕೆ ಸಂಸ್ಥೆಯ ಎರಡನೆಯ ನ್ಯೂನತೆ. ಉದ್ದಿಮೆಯ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳಲು ಎಲ್ಲ ಪಾಲುದಾರರು ಒಂದೆಡೆ ಕೂಡಿ ವಿಷಯಗಳನ್ನು ಚರ್ಚಿಸಿ ಅನಂತರ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಒಮ್ಮತ ಬರದೇಹೋದಲ್ಲಿ, ನಿರ್ಣಯಗಳನ್ನು ಕಾರ್ಯ ರೂಪಕ್ಕೆ ತರಲಾಗುವುದಿಲ್ಲ. ವ್ಯವಹಾರದಲ್ಲಿ ಶೀಘ್ರನಿರ್ಣಯಗಳನ್ನು ತೆಗೆದುಕೊಳ್ಳ ದಿದ್ದರೆ ಅನೇಕ ತೊಂದರೆಗಳನ್ನೆದುರಿಸಬೇಕಾಗುತ್ತದೆ.

(iii) **ಕಡಮೆ ಬಂಡವಾಳ :** ಪಾಲುಗಾರಿಕೆ ಸಂಸ್ಥೆಯಲ್ಲಿಯೂ ಸಹ ಬೃಹತ್ ಪ್ರಮಾಣದ ಉದ್ದಿಮೆಗಳಿಗೆ ಬೇಕಾಗುವಷ್ಟು ಅಧಿಕ ಬಂಡವಾಳವನ್ನು ಒದಗಿಸಲಾಗು ವುದಿಲ್ಲ. ಬೃಹತ್ ಪ್ರಮಾಣದ ಉದ್ದಿಮೆಗಳನ್ನು ನವೀನ ರೀತಿಯಲ್ಲಿ ಪಾಲುಗಾರಿಕೆ ಸಂಸ್ಥೆಗಳು ಸಾಮಾನ್ಯವಾಗಿ ಸ್ಥಾಪಿಸಲಾರವು.

(iv) **ಅನನುಭವಿ ಕೆಲಸಗಾರರ ನೇಮಕ :** ಕೆಲಸಗಾರರನ್ನು ನೇಮಿಸಿ ಕೊಳ್ಳು ವಾಗ ಪಾಲುದಾರರು ತಮ್ಮ ಹಿತಚಿಂತಕರಿಗೆ, ಸಂಬಂಧೀಕರಿಗೆ ನೌಕರಿಗಳನ್ನು ಕೊಡಿಸಲು ಪ್ರಯತ್ನಿಸುತ್ತಾರೆ. ಕೆಲವು ವೇಳೆ ಅಭ್ಯರ್ಥಿಗಳು ಕೆಲಸ ಕಾರ್ಯಗಳಲ್ಲಿ ನುರಿತಿರುವುದಿಲ್ಲ. ಅವರೆಲ್ಲ ಶಿಫಾರಸ್ಸಿನಿಂದ ಬಂದಂತವರು. ಇಂತಹ ಪರಿಸ್ಥಿತಿಗಳಲ್ಲಿ ಸಂಸ್ಥೆಯ ದಕ್ಷತೆ ಕೆಡುವುದಲ್ಲದೆ, ದಕ್ಷ ಜನರ ನೇಮಕಕ್ಕೆ ಅಡ್ಡಿ ಬರುತ್ತದೆ.

(v) **ಸ್ವಾರ್ಥಪರತೆ :** ಪಾಲುಗಾರಿಕೆಯ ಸಂಸ್ಥೆಯಲ್ಲಿ ಎಲ್ಲ ಪಾಲುದಾರರು ಸಂಸ್ಥೆಯ ಹಿತದೃಷ್ಟಿಯಿಂದ ದುಡಿಯುವುದಿಲ್ಲ. ಕೆಲವರು ಸ್ವಾರ್ಥಬುದ್ಧಿಯನ್ನು ಪ್ರದರ್ಶಿಸುವುದರಿಂದ ಸಂಸ್ಥೆಯ ಅಸ್ತಿತ್ವಕ್ಕೆ ಧಕ್ಕೆ ಬರುತ್ತದೆ. ಕೆಲವು ವೇಳೆ ಒಳ ಜಗಳಗಳು ಉಂಟಾಗಿ ಪಾಲುಗಾರಿಕೆ ಸಂಸ್ಥೆಗಳು ಒಡೆದಿರುವ ಪ್ರಸಂಗಗಳು ಇವೆ.

ಇಂದಿನ ಯಾಂತ್ರಿಕಯುಗದಲ್ಲಿ ಪಾಲುಗಾರಿಕೆ ಸಂಸ್ಥೆಗಳಿಗೂ ಸಾಕಷ್ಟು ಪ್ರೋತ್ಸಾಹವಿಲ್ಲ. ಈ ಪದ್ಧತಿಯಲ್ಲಿರುವ ಬಂಡವಾಳದ ಕೊರತೆ, ಪಾಲುಗಾರರ ಸ್ವಾರ್ಥಪರತೆ, ಅನಿಯಮಿತ ಹೊಣೆಗಾರಿಕೆ, ಮುಂತಾದ ನ್ಯೂನತೆಗಳನ್ನು ನಿವಾರಿಸಲು ಕೂಡುಬಂಡವಾಳ ಸಂಸ್ಥೆಗಳು ತಮ್ಮ ಅಸ್ತಿತ್ವಕ್ಕೆ ಒಂದು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿವೆ.

ಕೂಡುಬಂಡವಾಳ ಸಂಸ್ಥೆ (ಸಂಯುಕ್ತ ಬಂಡವಾಳ)

ಕೂಡುಬಂಡವಾಳ ಸಂಸ್ಥೆಯನ್ನು 'ಸಂಯುಕ್ತ ಬಂಡವಾಳ ಪದ್ಧತಿ' ಎಂದು ಕರೆಯುವುದು ರೂಢಿ. ಈ ಪದ್ಧತಿ ಪಾಲುಗಾರಿಕೆಯಲ್ಲಿ ಕಂಡುಬಂದ ನ್ಯೂನತೆಗಳನ್ನು ಪರಿಹರಿಸಲು ರೂಪುಗೊಂಡಿದೆ. ಕೂಡುಬಂಡವಾಳದ ಕಂಪೆನಿಯು ಕಾನೂನಿನ

ಪ್ರಕಾರ ರಿಜಿಸ್ಟರ್ ಆಗಿ ರೂಪುಗೊಂಡಿರುವ ಒಂದು ಉದ್ಯಮ ಸಂಸ್ಥೆ. ಈ ಶತಮಾನದಲ್ಲಿ ಕೂಡುಬಂಡವಾಳ ಸಂಸ್ಥೆಯು ಬೃಹತ್ ಪ್ರಮಾಣದ ಉದ್ದಿಮೆಗಳಿಗೆ ಬಹಳ ಸಹಾಯಕವಾಗಿದೆ. ಸಂಯುಕ್ತ ಬಂಡವಾಳ ಪದ್ಧತಿ ರಚನೆಯಾಗಬೇಕಾದರೆ ಏಳು ಜನರು ಸೇರಿ ಒಂದು ಸಂಯುಕ್ತಬಂಡವಾಳ ಪದ್ಧತಿಯನ್ನು ಪ್ರಾರಂಭಿಸಬಹುದು. ಅವರು ಉತ್ಪಾದನೆಯ ವಸ್ತುಗಳು, ಸ್ಥಳಗಳನ್ನು ಪರಿಶೀಲಿಸಿದ ನಂತರ ಜಾಯಿಂಟ್ ಸ್ಟಾಕ್ ಕಂಪೆನಿಯ ರಿಜಿಸ್ಟ್ರಾರರಿಗೆ ಒಂದು ಅರ್ಜಿಯನ್ನು ಸಲ್ಲಿಸಬೇಕು. ಈ ಅರ್ಜಿಯನ್ನು ಸಲ್ಲಿಸುವವರಿಗೆ 'ಪ್ರಸ್ತಾಪಕರು' ಅಥವಾ 'ಪ್ರಮೋಟರ್ಸ್' ಎಂದು ಹೆಸರು. ಸಂಸ್ಥೆಯ ಸ್ಥಾಪನೆಯ ಘೋಷಣಾ ಪತ್ರ, ಸಂಸ್ಥೆಯ ಹೆಸರು, ಕಾರ್ಯಕ್ಷೇತ್ರ, ನಡೆಸುವ ವ್ಯವಹಾರದ ವಿವರಣೆ, ಆಫೀಸಿನ ಸ್ಥಳ ಮುಂತಾದ ವಿವರಗಳನ್ನೊಳಗೊಂಡಿರುತ್ತದೆ.

ಸಂಸ್ಥೆಯ ನಿಯಮಾವಳಿ ಪತ್ರ ಶೇರು, ಬಂಡವಾಳ, ಶೇರುದಾರರು, ಡೈರೆಕ್ಟರುಗಳು, ಆಡಿಟರುಗಳು ಮುಂತಾದ ವಿಷಯಗಳನ್ನೊಳಗೊಂಡಿರುತ್ತದೆ. ರಿಜಿಸ್ಟ್ರಾರರು ಪರಿಶೀಲನೆ ನಡೆಸಿ ಸ್ಥಾಪನೆಯ ಬಗ್ಗೆ ಒಂದು ಪ್ರಮಾಣಪತ್ರ ಕೊಡುತ್ತಾರೆ. ಈ ಪತ್ರ ದೊರೆತ ನಂತರ ಸಂಸ್ಥೆ ಕಾನೂನುಬದ್ಧವಾಗಿ ಅಸ್ತಿತ್ವಕ್ಕೆ ಬರುತ್ತದೆ. ಕೂಡು ಬಂಡವಾಳ ಸಂಸ್ಥೆಯು ಅಸ್ತಿತ್ವಕ್ಕೆ ಬಂದ ನಂತರ ಸಂಸ್ಥಾಪಕರು ಬಂಡವಾಳ ಶೇಖರಿಸಲು ಪ್ರಾರಂಭಿಸುತ್ತಾರೆ. ಜನರ ಗಮನ ಸೆಳೆಯಲು ಪತ್ರಿಕೆಗಳಲ್ಲಿ ಪ್ರಕಟಿಸುತ್ತಾರೆ. ಈ ಮಾಹಿತಿ ಪತ್ರವು ಸಂಸ್ಥೆಯ ಉದ್ದೇಶ, ಕೈಗೊಳ್ಳಬೇಕೆಂದಿರುವ ಉದ್ದಿಮೆಯ ಮಹತ್ವ, ಉದ್ದಿಮೆಯಿಂದ ಬರಬಹುದಾದ ಲಾಭ, ಆಡಳಿತ ವರ್ಗದ ದಕ್ಷತೆಯ ಬಗ್ಗೆ ಸ್ಥೂಲ ಪರಿಚಯ ಮಾಡಿಕೊಡುವುದು. ಈ ಕಂಪೆನಿ ಸಾರ್ವಜನಿಕರಿಂದ ಶೇರುಗಳನ್ನು ಮಾರಾಟಮಾಡಿ ಬಂಡವಾಳವನ್ನು ಶೇಖರಿಸುತ್ತದೆ. ಶೇರು ಹೊಂದಿರುವವರು ಸಂಯುಕ್ತ ಬಂಡವಾಳ ಪದ್ಧತಿಯಲ್ಲಿ ಪಡೆಯುವ ಲಾಭ, ನಷ್ಟಗಳನ್ನು ಹಂಚಿಕೊಳ್ಳಲು ಅರ್ಹತೆ ಹೊಂದಿರುತ್ತಾರೆ. ಶೇರುಗಳನ್ನು ಕೊಂಡುಕೊಂಡವರು ಕಂಪೆನಿಯ ಸದಸ್ಯರಾಗಿರುತ್ತಾರೆ. ಪ್ರತಿ ಸದಸ್ಯನಿಗೂ ಅವನು ಪಡೆದಿರುವ ಶೇರುಗಳಷ್ಟು ಓಟುಗಳಿರುತ್ತದೆ. ಅಲ್ಲದೆ, ಯಾವುದೇ ವ್ಯಕ್ತಿಯು ಅಧಿಕ ಶೇರುಗಳನ್ನು ಕೊಂಡುಕೊಳ್ಳುವ ಮೂಲಕ ಅತಿ ಹೆಚ್ಚಿನ ಓಟುಗಳ ಶಕ್ತಿಯನ್ನು ಪಡೆದಿರುತ್ತಾನೆ. ಬಂಡವಾಳಗಾರರು ಶೇಕಡಾ 51 ರಷ್ಟು ಅಥವಾ ಹೆಚ್ಚಿನ ಶೇರುಗಳನ್ನು ಕೊಂಡುಕೊಳ್ಳುವ ಮೂಲಕ, ಅವನು ಕಂಪೆನಿಯ ನಿರ್ಣಯಗಳನ್ನು ಅವನ ಇಷ್ಟಬಂದ ರೀತಿಯಲ್ಲಿ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಅವರೆಲ್ಲ ಒಂದೆಡೆ ಸೇರಿ ಡೈರೆಕ್ಟರುಗಳನ್ನು ಚುನಾಯಿಸುತ್ತಾರೆ. ಡೈರೆಕ್ಟರುಗಳು ಜನರಲ್ ಮ್ಯಾನೇಜರರನ್ನು ಚುನಾಯಿಸುತ್ತಾರೆ. ಮ್ಯಾನೇಜರು ಉದ್ದಿಮೆಯ ಎಲ್ಲ ಕಾರ್ಯಗಳಿಗೂ ಕಾರ್ಯಬದ್ಧನಾಗಿರುತ್ತಾನೆ. ಲಾಭವನ್ನು ಶೇರು ಮೊತ್ತಕ್ಕೆ ಅನುಸಾರವಾಗಿ ಹಂಚಲಾಗುತ್ತದೆ.

ಈ ಉದ್ದಿಮೆಯನ್ನು ನಡೆಸಲು ಬಂಡವಾಳವನ್ನು ಸಾಲ ಪತ್ರಗಳ ಮಾರಾಟ, ಶೇರುಗಳ ಮಾರಾಟ ಹಾಗೂ ಬ್ಯಾಂಕುಗಳಿಂದ ಸಾಲಗಳ ಮೂಲಕ ಸಂಗ್ರಹಿಸುತ್ತಾರೆ. ಶೇರುಗಳು ಉದ್ದಿಮೆಯ ಒಡೆತನವನ್ನು ದೊರಕಿಸಿಕೊಡುವ ಪ್ರಮಾಣ ಪತ್ರಗಳು. ಕಂಪೆನಿಗೆ ಲಾಭ ಬಂದರೆ ಶೇರಿನ ಪ್ರಮಾಣಕ್ಕನುಗುಣವಾಗಿ ಲಾಭ ಪಡೆಯಲು ಹಕ್ಕುದಾರನಾಗುತ್ತಾನೆ. ಉತ್ತಮ ಕಂಪೆನಿ ಎಂದು ಹೆಸರುಗಳಿಸಿದ ಕಂಪೆನಿ ಒಂದು ಶೇರು ಅದರ ಮುಖ ಬೆಲೆಗಿಂತಲೂ ಹೆಚ್ಚು ಬೆಲೆಗೆ ಮಾರಾಟವಾಗುವುದು. ಶೇರುಗಳ ಮಾರಾಟದಿಂದ ಸಾಕಷ್ಟು ಬಂಡವಾಳ ಶೇಖರಣೆಯಾಗದಿದ್ದರೆ ಬಾಂಡುಗಳ ಮಾರಾಟ ಮಾಡಬಹುದು. ಈ ಬಾಂಡುಗಳಿಗೆ ' ಡಿಬೆಂಚರ್ಸ್ ' ಎಂದು ಕರೆಯುತ್ತಾರೆ. ಬಾಂಡುಗಳೆಂದರೆ ಪ್ರಾಮಿಸರಿ ನೋಟುಗಳಿದ್ದಂತೆ. ಬಾಂಡುದಾರರು ಕಂಪೆನಿಯ ಸಾಲಗಾರರೇ ಹೊರತು ಕಂಪೆನಿಯ ಶೇರುದಾರರಂತೆ ಒಡೆಯರಾಗಲೂ ಸಾಧ್ಯವಿಲ್ಲ. ಇವರಿಗೆ ಎಷ್ಟು ಬಡ್ಡಿ ಕೊಡಬೇಕೆಂಬುದನ್ನು ಮೊದಲೇ ನಿರ್ಣಯಿಸಲಾಗಿರುತ್ತದೆ. ಕಂಪೆನಿ ನಷ್ಟದಲ್ಲಿಯೂ ಬಾಂಡುದಾರರಿಗೆ ಪ್ರತಿವರ್ಷ ಬಡ್ಡಿ ಸಂದಾಯವಾಗುವುದು.

ಕೂಡು ಬಂಡವಾಳ ಸಂಸ್ಥೆಗಳು ದೇಶದ ಉಳಿತಾಯವನ್ನು ಒಂದುಗೂಡಿಸಿ ಆ ಹಣವು ಉತ್ಪಾದನೆಯಲ್ಲಿ ಹೆಚ್ಚು ಫಲಕಾರಿಯಾಗುವಂತೆ ಮಾಡುವ ಸಂಸ್ಥೆಗಳಲ್ಲಿ ಅಗ್ರಸ್ಥಾನ ಹೊಂದಿವೆ. ಇಂದು ಭರದಿಂದ ಬೆಳೆಯುತ್ತಿರುವ ವ್ಯಾಪಾರ ಹಾಗೂ ಉದ್ದಿಮೆಗಳ ಅವಶ್ಯಕತೆಗಳನ್ನು ಪೂರೈಸಲು ಈ ಸಂಸ್ಥೆಗಳು ಸಮರ್ಥವಾಗಿವೆ.

ಅನುಕೂಲಗಳು : ಕೂಡು ಬಂಡವಾಳ ಸಂಸ್ಥೆಯಲ್ಲಿ ಹಲವು ಅನುಕೂಲಗಳಿವೆ.

(i) **ಅಧಿಕ ಬಂಡವಾಳ :** ಕೂಡು ಬಂಡವಾಳ ಪದ್ಧತಿಯಲ್ಲಿ ಅಧಿಕ ಬಂಡವಾಳವನ್ನು ಕೂಡಿಸಬಹುದು. ಸಂಸ್ಥಾಪಕರು ಕೆಲವರೇ ಇದ್ದಾಗ್ಯೂ ಶೇರು ಹಾಗೂ ಸಾಲ ಪತ್ರಗಳ ಮುಖಾಂತರ ಬಂಡವಾಳವನ್ನು ಶೇಖರಿಸಬಹುದು.

(ii) **ಬೃಹತ್ ಪ್ರಮಾಣದ ಉತ್ಪಾದನೆ :** ಕೂಡುಬಂಡವಾಳ ಪದ್ಧತಿ ಬೃಹತ್ ಪ್ರಮಾಣದಲ್ಲಿ ಉತ್ಪಾದನೆ ನಡೆಸುತ್ತದೆ. ಸಾಕಷ್ಟು ಬಂಡವಾಳವಿರುವುದರಿಂದ ಅಧಿಕ ಪ್ರಮಾಣದಲ್ಲಿ ಉತ್ಪಾದನೆ ಪ್ರಾರಂಭಿಸಲಾಗುತ್ತದೆ. ಇಲ್ಲಿ ಶ್ರಮ ವಿಭಜನೆಗೆ ಅವಕಾಶ ಉಂಟು. ನವೀನ ಯಂತ್ರಗಳನ್ನು ಉಪಯೋಗಿಸಬಹುದು. ನುರಿತ ಕೆಲಸಗಾರರನ್ನು ನೇಮಿಸಿಕೊಳ್ಳಬಹುದು. ಇವುಗಳಿಂದ ಉತ್ಪಾದನೆಯ ಖರ್ಚು ಕಡಮೆಯಾಗಿ ಬಳಕೆದಾರರಿಗೆ ವಸ್ತುಗಳನ್ನು ಕಡಮೆ ಬೆಲೆಗೆ ಪೂರೈಸಲು ಸಹಾಯವಾಗುತ್ತದೆ.

(iii) ನಿಯಮಿತ **ಹೊಣೆಗಾರಿಕೆ ಅಥವಾ ಮಿತಜವಾಬ್ದಾರಿ :** ಪಾಲುಗಾರಿಕೆ ಪದ್ಧತಿಯಲ್ಲಿ ಅನಿಯಮಿತ ಜವಾಬ್ದಾರಿ ಇರುವುದರಿಂದ ಹೆಚ್ಚು ಹಣವನ್ನು ಉದ್ದಿಮೆಯಲ್ಲಿ ತೊಡಗಿಸುವುದು ಅಪಾಯಕರ. ಕೂಡುಬಂಡವಾಳ ಪದ್ಧತಿಯಲ್ಲಿ ಬಂಡವಾಳ

ತೊಡಗಿಸಿದ ಶೇರುದಾರರ ಹೊಣೆಗಾರಿಕೆ ಮಿತವಾಗಿರುತ್ತದೆ. ಒಬ್ಬ ಶೇರುದಾರ ಒಂದು ಶೇರನ್ನು ಕೊಂಡರೆ, ಆಕಸ್ಮಾತ್ ಕಂಪೆನಿಯು ದಿವಾಳಿಯಾದ ಸಂದರ್ಭದಲ್ಲಿ ತನ್ನ ಹಣವನ್ನು ಮಾತ್ರ ಕಳೆದುಕೊಳ್ಳುವನು. ಶೇರುದಾರನ ಹೊಣೆಗಾರಿಕೆ ಶೇರುಹಣಕ್ಕೆ ಮಾತ್ರ ಮಿತವಾಗಿರುತ್ತದೆ. ಇದರಿಂದ ಅವನ ಖಾಸಗೀ ಆಸ್ತಿಗೆ ಧಕ್ಕೆ ಬರುವುದಿಲ್ಲ. ಈ ವಿಧವಾದ ಹೊಣೆಗಾರಿಕೆಯು ತತ್ವದಿಂದ ಕಂಪೆನಿಯು ಶೇರುಬಂಡವಾಳಗಳ ಮೂಲಕ ಹೆಚ್ಚು ಹಣವನ್ನು ಕೂಡಿಸಲು ಅನುಕೂಲವಾಗುತ್ತದೆ.

(iv) **ಶೇರುಗಳ ವರ್ಗಾವಣೆ** : ಈ ಪದ್ಧತಿಯಲ್ಲಿ ತೊಡಗಿಸಿದ ಶೇರುಗಳನ್ನು ಒಬ್ಬರಿಂದ ಮತ್ತೊಬ್ಬರಿಗೆ ಸುಲಭವಾಗಿ ವರ್ಗಾಯಿಸಬಹುದು. ಶೇರುಪೇಟೆಯಲ್ಲಿ ಶೇರುಗಳನ್ನು ಮಾರಬಹುದು. ಇದರಿಂದ ಅವರು ಪುನಃ ಅವರ ಶೇರಿನ ಹಣವನ್ನು ಪಡೆಯಬಹುದು.

(v) **ಉಳಿತಾಯಕ್ಕೆ ಪ್ರೋತ್ಸಾಹ** : ಪಾಲುಗಾರಿಕೆ ಸಂಸ್ಥೆಯಲ್ಲಿ ಉದ್ದಿಮೆ ಸ್ಥಾಪಿಸಬೇಕಾದರೆ ಕೇವಲ ಹಣವಂತನಿಗೆ ಸಾಧ್ಯ. ಆದರೆ ಕೂಡುಬಂಡವಾಳ ಸಂಸ್ಥೆಯಲ್ಲಿ ಅಲ್ಪ ಹಣವನ್ನು ಉಳಿತಾಯ ಮಾಡುವ ಸಾಮಾನ್ಯ ವ್ಯಕ್ತಿಯೂ ಸಹ ಕಂಪೆನಿಯ ಒಡೆಯನಾಗಲು ಹಾಗೂ ಬಂದ ಲಾಭಾಂಶ ಪಡೆಯಲು ಅವಕಾಶವಿದೆ. ಇದರಿಂದ ಉದ್ದಿಮೆಗಳು ಉಳಿತಾಯಕ್ಕೆ ಪ್ರೋತ್ಸಾಹ ಕೊಟ್ಟಂತೆಯೂ ಆಗುತ್ತದೆ.

(vi) **ಪ್ರಜಾಸತ್ತಾತ್ಮಕ ಆಡಳಿತ** : ಸಂಯುಕ್ತ ಬಂಡವಾಳ ಸಂಸ್ಥೆಗಳು ಪ್ರಜಾಸತ್ತಾತ್ಮಕ ಆಡಳಿತವನ್ನು ಹೊಂದಿರುತ್ತವೆ. ಆಧುನಿಕ ಯುಗದಲ್ಲಿ ರಾಜಕೀಯದಲ್ಲಿ ಪ್ರಜಾಪ್ರಭುತ್ವ ಆಡಳಿತ ಸರ್ವೇಸಾಮಾನ್ಯವಾಗಿದೆ. ಪ್ರಜಾಪ್ರಭುತ್ವದಲ್ಲಿ ಜನರು ತಮ್ಮ ಮುಖಂಡರುಗಳನ್ನು ಚುನಾವಣೆಗಳ ಮೂಲಕ ಆರಿಸುತ್ತಾರೆ. ಅವರು ಜನರ ಹಿತದೃಷ್ಟಿಯಿಂದ ಆಡಳಿತ ನಡೆಸುತ್ತಾರೆ. ಹಾಗೆಯೇ ಸಂಯುಕ್ತ ಬಂಡವಾಳ ಸಂಸ್ಥೆಗಳಲ್ಲಿ ಡೈರೆಕ್ಟರುಗಳನ್ನು ಶೇರುದಾರರು ಚುನಾಯಿಸುತ್ತಾರೆ. ಚುನಾಯಿಸಲ್ಪಟ್ಟ ಡೈರೆಕ್ಟರುಗಳು ಶೇರುದಾರರ ಪರವಾಗಿ ಆಡಳಿತ ನಡೆಸುವರು. ಈ ಸಂಸ್ಥೆಗಳಲ್ಲಿ ಅನ್ಯಾಯ ಅಕ್ರಮಗಳು ಉಂಟಾದರೆ ಶೇರುದಾರರು ಕ್ರಮಕ್ಕೆಗೊಳ್ಳಬಹುದು.

(vii) **ದಕ್ಷ ಆಡಳಿತ** : ಕಂಪೆನಿಯ ಆಡಳಿತವನ್ನು ನೋಡಿಕೊಳ್ಳಲು ದಕ್ಷರಾದ ಸಿಬ್ಬಂದಿ ಅವಶ್ಯಕ. ವ್ಯವಹಾರ ಕುಶಲತೆ ಹಾಗೂ ಅನುಭವ ಹೊಂದಿರುವವರನ್ನು ಡೈರೆಕ್ಟರುಗಳಾಗಿ ಆರಿಸುವುದರಿಂದ ಆಡಳಿತ ದಕ್ಷ ರೀತಿಯಲ್ಲಿ ನಡೆಯುತ್ತದೆ. ಡೈರೆಕ್ಟರುಗಳಿಗೆ ಅವರ ಸೇವೆಗೆ ಗೌರವಧನ ಕೊಡುವ ಪದ್ಧತಿ ಇದೆ. ಬಹುಕಡಮೆ ಖರ್ಚಿನಲ್ಲಿ ಯೋಗ್ಯಸಲಹೆ ದೊರೆಯುತ್ತದೆ. ಉಳಿದ ವ್ಯವಸ್ಥೆಗಳಲ್ಲಿ ಈ ರೀತಿಯ ಸಲಹೆಗಳು ಸಿಗುವುದು ಕಷ್ಟ.

(viii) **ಸ್ಥಿರತೆ :** ಕೂಡುಬಂಡವಾಳ ಪದ್ಧತಿಯಲ್ಲಿ ಸಂಸ್ಥೆಯ ಜೀವಮಾನವು ವ್ಯಕ್ತಿಗಳ ಜೀವಮಾನವನ್ನವಲಂಬಿಸಿರುವುದಿಲ್ಲ. ಒಂದೊಂದು ಸಂಸ್ಥೆ ಬಹುಕಾಲ ಕಾರ್ಯನಿರ್ವಹಿಸಬಲ್ಲುದು. ಹೊಸ ಹೊಸ ಶೇರುದಾರರಿಗೆ ಪ್ರವೇಶವುಂಟು. ಹೊಸ ಡೈರೆಕ್ಟರುಗಳು ಆರಿಸಿಬರಬಹುದು. ಸಂಸ್ಥೆಯು ಮಾತ್ರ ಮುಂದುವರಿಯುತ್ತದೆ.

ಅನಾನುಕೂಲಗಳು : ಕೂಡುಬಂಡವಾಳ ಸಂಸ್ಥೆಯು ಅನುಕೂಲದ ಜೊತೆಗೆ ಕೆಲವು ಅನಾನುಕೂಲಗಳಿವೆ.

(i) **ದುಂದುಗಾರಿಕೆ :** ಕೂಡುಬಂಡವಾಳ ಸಂಸ್ಥೆಯು ದೊಡ್ಡದಾಗಿರುವುದರಿಂದ ದಕ್ಷ ಆಡಳಿತ ನಡೆಸುವುದು ಕಷ್ಟ. ಕಂಪೆನಿಯ ಲಾಭ ನಷ್ಟಗಳು ಶೇರುದಾರರಿಗೆ ಸಂದಾಯವಾಗುತ್ತಿದ್ದರೂ ಅವರು ದೈನಂದಿನ ಕಾರ್ಯಗಳನ್ನು ನೋಡಿಕೊಳ್ಳುವುದಿಲ್ಲ. ಶೇರುದಾರರ ಅಪಾರ ಧನ ಸಂಗ್ರಹದ ವ್ಯವಸ್ಥೆಯನ್ನು ನೋಡಿಕೊಳ್ಳಲು ಡೈರೆಕ್ಟರುಗಳು ನೇಮಕಗೊಂಡಿರುವರು. ಕೆಲವು ವೇಳೆ ಡೈರೆಕ್ಟರುಗಳು ದುಂದುಗಾರರಾಗುವ ಸಂಭವವೂ ಇಲ್ಲದಿಲ್ಲ. ವಸ್ತುಗಳ ಗುಣಮಟ್ಟದ ಬಗ್ಗೆ ಯಾರೂ ಆಸಕ್ತಿ ತೆಗೆದುಕೊಳ್ಳುವುದಿಲ್ಲ.

(ii) **ಶೇರುದಾರರ ಅನಾಸಕ್ತಿ :** ಕಂಪೆನಿಯ ಶೇರುದಾರರು ಕಂಪೆನಿಯ ಪ್ರಗತಿಯ ಬಗ್ಗೆ ಆಸಕ್ತಿತೋರಿಸುವುದಿಲ್ಲ. ಶೇರುದಾರರು ದೇಶದ ಹಲವು ಭಾಗಗಳಲ್ಲಿರುವುದರಿಂದ ಮೀಟಿಂಗ್‌ಗಳಿಗೆ ಬರಲಾಗುವುದಿಲ್ಲ. ಹೀಗಾಗಿ ಉದ್ದಿಮೆಯ ಸ್ಥಿತಿಗಳು ಅವರಿಗೆ ತಿಳಿಯುವುದಿಲ್ಲ. ಅಸಮರ್ಥ ಆಡಳಿತವರ್ಗ ಅಧಿಕಾರಕ್ಕೆ ಬಂದು ಕಂಪೆನಿ ದಿವಾಳಿಯಾಗುವ ಸಂಭವವೂ ಉಂಟು. ಶೇರುದಾರರು ಶೇರುಗಳನ್ನು ಮಾರಿ ಹಣ ಪಡೆಯುವ ಸೌಲಭ್ಯವಿರುವುದರಿಂದ ಕಂಪೆನಿಯ ಆಗುಹೋಗುಗಳ ಬಗ್ಗೆ ಆಸಕ್ತಿ ವಹಿಸುವುದಿಲ್ಲ. ಕಂಪೆನಿಯಿಂದ ಬರುವ ಲಾಭ ಕಡಮೆಯಾದರೆ ಶೇರುಗಳನ್ನು ಮಾರುತ್ತಾರೆ. ಇಂತಹ ಪರಿಸ್ಥಿತಿಗಳಲ್ಲಿ ಶೇರುದಾರರಿಗೆ ಹಣದ ಆಸೆ ತೋರಿಸಿ ಆಡಳಿತವರ್ಗ ಪದೇ ಪದೇ ಚುನಾಯಿಸಲ್ಪಡುತ್ತಾರೆ. ಇವರನ್ನು ಅಧಿಕಾರದಿಂದ ತೆಗೆದುಹಾಕುವುದೂ ಕಷ್ಟ. ನೌಕರರಿಗೆ ವೇತನ ಮುಖ್ಯವಾದ್ದರಿಂದ ದಕ್ಷವ್ಯವಸ್ಥೆ ಬಗ್ಗೆ ಅವರೂ ಆಸಕ್ತಿ ತೋರಿಸುವುದಿಲ್ಲ. ಹೀಗಾಗಿ ವಸ್ತುಗಳ ಉತ್ಪಾದನೆ ಕಡಮೆಯಾಗಿ ಉತ್ಪಾದನೆಯ ವೆಚ್ಚ ಏರುತ್ತದೆ.

(iii) **ಹೊಣೆಗಾರಿಕೆಯ ಅಭಾವ :** ಈ ಬಗೆಯ ಕಂಪೆನಿಗಳಲ್ಲಿ ಡೈರೆಕ್ಟರುಗಳು ಪುನಃ ಪುನಃ ಚುನಾಯಿಸಿ ಬರಲು ಅನೇಕ ಪದ್ಧತಿಗಳನ್ನು ಬಳಸುತ್ತಾರೆ. ಅವರುಗಳು ಆರಿಸಿ ಬಂದನಂತರ ಶೇರುದಾರರ ಹಿತವನ್ನು ಕಡೆಗಣಿಸುತ್ತಾರೆ. ಅನೇಕ ರೀತಿಯ ಲೆಕ್ಕಪತ್ರಗಳನ್ನಿಟ್ಟು ಶೇರುದಾರರು ಮತ್ತು ಕಾರ್ಮಿಕರನ್ನು ಮೋಸಗೊಳಿಸುವರು ಕಂಪೆನಿ ಗಳಿಸಿದ ಲಾಭದಲ್ಲಿ ಹೆಚ್ಚು ಭಾಗವನ್ನು ಡೈರೆಕ್ಟರುಗಳೇ ಪಡೆಯುತ್ತಾರೆ.

(vi) **ಬಳಕೆದಾರರ ಅತೃಪ್ತಿ :** ಈ ಬಗೆಯ ಸಂಸ್ಥೆಗಳಲ್ಲಿ ಬಳಕೆದಾರರ ಇಷ್ಟಗಳಿಗೆ ತಕ್ಕಂತೆ ವಸ್ತುಗಳನ್ನು ಉತ್ಪಾದಿಸಲಾಗುವುದಿಲ್ಲ. ಏಕೆಂದರೆ ವಸ್ತುಗಳನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸುವುದರಿಂದ ಪ್ರತಿಯೊಬ್ಬ ಬಳಕೆದಾರನ ಇಷ್ಟದಂತೆ ವಸ್ತುಗಳನ್ನು ಉತ್ಪಾದಿಸಲಾಗುವುದಿಲ್ಲ. ವೈಯಕ್ತಿಕ ಒಡೆತನದ ಪದ್ಧತಿಯಲ್ಲಿ ಬಳಕೆದಾರರಿಗೆ ತೃಪ್ತಿಯಾಗುವ ವಸ್ತುಗಳನ್ನು ತಯಾರಿಸಬಹುದು.

(v) **ಮುಷ್ಕರಗಳ ಆಗರ :** ಕೂಡುಬಂಡವಾಳ ಸಂಸ್ಥೆಯಲ್ಲಿ ಕೆಲಸಗಾರರ ತಂಟೆಗಳು ನಾನಾ ಬಗೆಯಾಗಿರುತ್ತವೆ. ಏಕೆಂದರೆ ಮಾಲೀಕರ ಹಾಗೂ ಕೆಲಸಗಾರರ ನಡುವೆ ಸುಮಧುರ ಬಾಂಧವ್ಯ ಇಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣ. ಕೆಲಸಗಾರರು ಒಂದಲ್ಲ ಒಂದು ಕಾರಣಕ್ಕಾಗಿ ತಗಾದೆ ಹೂಡುತ್ತಾರೆ. ಅದರಿಂದ ಉತ್ಪಾದನೆಗೆ ಹಾನಿ ಉಂಟಾಗಿ, ಕಂಪೆನಿಯ ಲಾಭ ಕಡಮೆಯಾಗುತ್ತದೆ. ಮುಷ್ಕರಗಳು ಉಂಟಾಗಿ ಔದ್ಯೋಗಿಕ ಶಾಂತಿ ಕೆಡುತ್ತದೆ. ಇಂತಹ ಕಾರಣಗಳಿಂದ ಕಂಪೆನಿಗಳನ್ನು ಮುಚ್ಚ ಬೇಕಾಗುತ್ತದೆ.

(vi) **ಶೀಘ್ರ ನಿರ್ಣಯ ಅಸಾಧ್ಯ :** ಕೂಡುಬಂಡವಾಳ ಸಂಸ್ಥೆಗಳಲ್ಲಿ ಶೀಘ್ರ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಎಲ್ಲ ವಿಷಯಗಳನ್ನು ಡೈರೆಕ್ಟರ್‌ಗಳ ಮಂಡಲಿಯಲ್ಲಿ ಚರ್ಚಿಸಿ ಅನಂತರ ನಿರ್ಧಾರಗಳನ್ನು ತೆಗೆದುಕೊಳ್ಳ ಬೇಕಾಗುತ್ತದೆ. ಇವು ನಿಧಾನವಾಗಿ ಕಾರ್ಯಗತಗೊಳ್ಳುತ್ತವೆ.

ಈ ನ್ಯೂನತೆಗಳು ಕಂಡುಬಂದಾಗ್ಯೂ, ಅನೇಕ ಅನುಕೂಲಗಳನ್ನು ಕೂಡು ಬಂಡವಾಳ ಸಂಸ್ಥೆಯು ಹೊಂದಿರುವುದರಿಂದ ಈ ಕಂಪೆನಿಗಳು ಇಂದು ನಮ್ಮಲ್ಲಿ ಕಾರ್ಯ ನಿರ್ವಹಿಸುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ, ಬೃಹದುದ್ಯಮಗಳಿಂದ ಕೂಡಿರುವ ಈ ಯುಗದಲ್ಲಿ ಕೂಡುಬಂಡವಾಳ ವ್ಯವಸ್ಥೆಯು ಯೋಗ್ಯವ್ಯವಸ್ಥೆ ಎನ್ನುವುದರಲ್ಲಿ ಸಂಶಯವೇ ಇಲ್ಲ.

ಸರಕಾರಿ ಉದ್ಯಮ ಅಥವಾ ಸರಕಾರಿ ವ್ಯವಹಾರ ಪದ್ಧತಿ

ಸರಕಾರಿ ಉದ್ಯಮವನ್ನು 'ಸರಕಾರಿ ವ್ಯವಹಾರ ಪದ್ಧತಿ' ಅಥವಾ 'ಸಮಾಜವಾದಿ ಪದ್ಧತಿ' ಎಂದು ಕರೆಯುವುದು ರೂಢಿ. ಈ ಪದ್ಧತಿಯು ಬಂಡವಾಳಶಾಹಿ ಅಥವಾ ಖಾಸಗೀ ಒಡೆತನ ಪದ್ಧತಿಯ ದೋಷಗಳನ್ನು ಪರಿಹರಿಸಲು ರೂಪುಗೊಂಡಿದೆ ಎನ್ನ ಬಹುದು. ಬಂಡವಾಳಶಾಹಿ ಆರ್ಥಿಕ ಪದ್ಧತಿಯಲ್ಲಿ ಖಾಸಗೀ ಆಸ್ತಿಯು ಪ್ರಮುಖ ಪಾತ್ರ ವಹಿಸುತ್ತದೆ. ಪ್ರಾಚೀನಕಾಲದಿಂದಲೂ ಉತ್ಪಾದನಾ ಸಾಧನಗಳಾದ ಭೂಮಿ, ಗಣಿಗಳು ಖಾಸಗೀ ಸ್ವಾಮ್ಯಕ್ಕೆ ಸೇರಿವೆ. ಸ್ವಾಮ್ಯವಿಲ್ಲದವರೂ ದುಡಿಮೆಯನ್ನೇ ಅವಲಂಬಿಸಿ ಸ್ವಾಮ್ಯವನ್ನು ಹೊಂದಿರುವವರ ಅಧೀನದಲ್ಲೇ ದುಡಿದು ಜೀವಶವಗಳಂತೆ ಬದುಕಿದ್ದಾರೆ. ಖಾಸಗೀ ಸ್ವಾಮ್ಯವಿರುವ ವ್ಯವಸ್ಥೆಯಲ್ಲಿ ಮೇಲ್ನೋಟಕ್ಕೆ ಯಾವ

ಶೋಷಣೆಯೂ ಕಂಡುಬರುವುದಿಲ್ಲ. ಉತ್ಪಾದನಾವಸ್ತುಗಳು ಖಾಸಗೀವ್ಯಕ್ತಿಗಳ ಕೈಯಲ್ಲಿದ್ದು ದುಡಿಮೆ ಮಾಡುವವರು ವೇತನ ಪಡೆಯುತ್ತಾರೆ. ಉತ್ಪಾದನಾವಸ್ತುಗಳನ್ನು ಹೊಂದಿರುವವರು ದುಡಿಯದೆಯೇ ಮತ್ತೊಬ್ಬರಿಂದ ದುಡಿಸಿಕೊಂಡು ಜೀವಿಸುತ್ತಾರೆ. ಖಾಸಗೀಸಂಪತ್ತು ವೃದ್ಧಿಯಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಆಸ್ತಿಯನ್ನು ಸಂಪಾದಿಸುತ್ತಾನೆ. ಅವನ ಮರಣಾನಂತರ ಆಸ್ತಿಯನ್ನು ಮಕ್ಕಳಿಗೆ ಅಥವಾ ಹತ್ತಿರದ ಸಂಬಂಧೀಕರಿಗೆ ಬಿಟ್ಟು ಹೋಗುತ್ತಾನೆ. ಆದರೆ ದುಡಿಮೆಗಾರರು ಎಷ್ಟು ದುಡಿದರೂ ಅವರ ಸಂಪತ್ತು ಮಾತ್ರ ಅಧಿಕಗೊಳ್ಳುವುದಿಲ್ಲ. ಮಾಲೀಕನ ಅಭಿವೃದ್ಧಿಗಾಗಿ, ಅವನ ಮನೆಯ ಕಣಜವನ್ನು ತುಂಬಿಸಲು ಬೆವರುಸುರಿಸಿ ದುಡಿಯಬೇಕು. ಕೃಷಿರಂಗದಲ್ಲಿ ದುಡಿಮೆಗಾರರ ಪಾಡು ಹೇಳತೀರದು. ಮಳೆಬರಲಿ, ಬರದಿರಲಿ, ಫಸಲಿಗೆ ರೋಗತಗಲಲಿ, ನಿಗದಿಯಾದ ಮೊತ್ತವನ್ನು ಸಲ್ಲಿಸಲೇಬೇಕು. ಈ ರೀತಿ ದುಡಿಮೆಗಾರರ ಪರಿಸ್ಥಿತಿ ಅಷ್ಟೇನು ಉತ್ತಮವಾಗಿರುವುದಿಲ್ಲ. ಹೊಟ್ಟೆಗೆ ತಿನ್ನಲು ಇರುವುದಿಲ್ಲ. ಸಾಲ ತೀರುವುದಿಲ್ಲ. ಸಾಲ ತೀರಿಸಲು ಹೊರಟರೆ ಹೊಟ್ಟೆ ತುಂಬುವುದಿಲ್ಲ. ಇವುಗಳನ್ನೆಲ್ಲ ಪರಿಹರಿಸಲು ಸಮಾಜವಾದ ಪದ್ಧತಿ ರೂಪುಗೊಂಡಿದೆ. ಫ್ರಾನ್ಸ್ ದೇಶವು ಸಮಾಜವಾದತತ್ವಕ್ಕೆ ತೌರುಮನೆಯಾಯಿತು. ಏಕೆಂದರೆ 1789 ರಲ್ಲಿ ಫ್ರಾನ್ಸ್‌ನಲ್ಲಿ ಮಹಾಕ್ರಾಂತಿಯು ರೂಪುಗೊಂಡು ಆರ್ಥಿಕ ಸಮಾನತೆಯನ್ನು ಹೊಂದಲು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳು ರೂಪತಾಳಿದವು. ಸರಕಾರವು ಮುಂದೆ ಬಂದು ಖಾಸಗೀ ಆಸ್ತಿಯ ಹಕ್ಕನ್ನು ಮನ್ನಿಸಿತು. ಇಂದು ಸರಕಾರ ಎಲ್ಲ ಉತ್ಪಾದನಾಂಶಗಳ ಒಡೆತನವನ್ನು ಹೊಂದಿದ್ದು ಸೇವೆಯನ್ನೇ ಮುಖ್ಯಗುರಿಯಾಗಿಟ್ಟುಕೊಂಡು ದೀನದಲಿತರ ಯೋಗಕ್ಷೇಮಕ್ಕಾಗಿ ಶ್ರಮಿಸುತ್ತಿದೆ.

(i) ಬಂಡವಾಳಶಾಹಿ ಪದ್ಧತಿಯಲ್ಲಿ ಉತ್ಪಾದನೆಗೆ ನೆರವಾಗುವ ಎಲ್ಲ ಉತ್ಪಾದನಾ ಸಾಧನಗಳ ಒಡೆತನ ಖಾಸಗೀ ವ್ಯಕ್ತಿಗಳ ಕೈಯಲ್ಲಿದ್ದು, ಯಾವಯಾವ ವಸ್ತುಗಳನ್ನು ಉತ್ಪಾದಿಸಿದರೆ ಹೆಚ್ಚು ಲಾಭ ಸಿಗುವುದೋ ಆ ವಸ್ತುಗಳನ್ನು ಮಾತ್ರ ಉತ್ಪಾದಿಸುತ್ತಾರೆ. ಆದರೆ ಸಮಾಜವಾದದಲ್ಲಿ ಎಲ್ಲ ಉತ್ಪಾದನಾ ಸಾಧನಗಳ ಒಡೆತನ ಸರಕಾರಕ್ಕೆ ಸೇರಿರುತ್ತದೆ. ಆಧುನಿಕ ಜಗತ್ತಿನಲ್ಲಿ ಪ್ರತಿಯೊಂದು ರಾಷ್ಟ್ರವೂ ಜನತೆಯ ಕಲ್ಯಾಣಕ್ಕಾಗಿ ಶ್ರಮಿಸುತ್ತದೆ.

(ii) ಬಂಡವಾಳಶಾಹಿಯಲ್ಲಿ ಲಾಭವನ್ನು ಗಳಿಸುವುದೇ ಅವರ ಮುಖ್ಯಗುರಿ. ಈ ವ್ಯವಸ್ಥೆಯಲ್ಲಿ ಎಲ್ಲ ವ್ಯಕ್ತಿಗಳು ಲಾಭಪಡೆಯಲು ದುಡಿಯುತ್ತಾರೆ. ಲಾಭದ ವೃದ್ಧಿಯ ಸಂಭ್ರಮದಲ್ಲಿ ದಯೆ, ಕರುಣೆ, ಮನುಷ್ಯತ್ವಗಳನ್ನು ಈ ವರ್ಗವು ಮರೆಯುತ್ತದೆ. ವಸ್ತುಗಳ ಉತ್ಪಾದನೆಯು ಲಾಭದಾಯಕವಾಗಿಲ್ಲದಿದ್ದರೆ ಅಂತಹ ಲಾಭಾಂಶವೇ ಎಲ್ಲ ಆರ್ಥಿಕ ಚಟುವಟಿಕೆಗಳಿಗೆ ಬುನಾದಿ. ಆದರೆ ಸಮಾಜವಾದದಲ್ಲಿ ಖಾಸಗೀ ಆಸ್ತಿಗೆ ಎಡೆ ಇಲ್ಲ. ಉತ್ಪಾದನಾ ಸಾಧನಗಳು ಸರಕಾರದ ಆಡಳಿತದಲ್ಲಿರುತ್ತವೆ.

(iii) ಬಂಡವಾಳಶಾಹಿ ಪದ್ಧತಿಯಲ್ಲಿ ಮುಖ್ಯವಾಗಿ ಎರಡು ವರ್ಗಗಳು ಕಂಡು ಬರುತ್ತವೆ. ಕೂಲಿಕಾರರವರ್ಗ ಮತ್ತು ಬಂಡವಾಳವರ್ಗ. ಬಂಡವಾಳವರ್ಗವು ಸ್ವಾಮ್ಯವುಳ್ಳವರ್ಗ, ಕೂಲಿಕಾರವರ್ಗ ಸ್ವಾಮ್ಯವಿಲ್ಲದ ದುಡಿಮೆಯ ವರ್ಗ. ಈ ವರ್ಗವನ್ನು ಶೋಷಿತವರ್ಗವೆನ್ನಬಹುದು. ಈ ವರ್ಗದ ಬೇಡಿಕೆಗಳು ಹೆಚ್ಚು ಕೂಲಿ ಹಾಗೂ ಕಡಮೆ ವೇಳೆಯ ಕೆಲಸ. ಕೂಲಿಯನ್ನು ಹೆಚ್ಚು ಕೊಟ್ಟರೆ ಬಂಡವಾಳಗಾರರ ಲಾಭಾಂಶವು ಕಡಮೆಯಾಗುತ್ತದೆ. ಬಂಡವಾಳಗಾರರು ಹೆಚ್ಚುಕೂಲಿಯನ್ನು ನೀಡಲು ಒಪ್ಪುವುದಿಲ್ಲ. ಆದಕಾರಣ ಶೋಷಕ ಹಾಗೂ ಶೋಷಿತವರ್ಗಗಳ ಮಧ್ಯೆ ಜಗಳಗಳುಂಟಾಗಿ ಕೊನೆಗೆ ಶೋಷಕವರ್ಗದವರು ತಮ್ಮ ಅಸ್ತ್ರವಾದ ಮುಷ್ಕರವನ್ನು ಕಾರ್ಯರೂಪಕ್ಕೆ ತರುತ್ತಾರೆ. ಇದರಿಂದ ಕಾರ್ಖಾನೆ ಮುಚ್ಚಿ ಉತ್ಪಾದನೆ ಕುಂಠಿತಗೊಳ್ಳುತ್ತದೆ. ಈ ಬಗೆಯ ಔದ್ಯೋಗಿಕ ಅಶಾಂತಿಯು ಬಂಡವಾಳಶಾಹಿ ವ್ಯವಸ್ಥೆಯ ಚಿಹ್ನೆ ಎನ್ನಬಹುದು. ಈ ಬಗೆಯ ಅಶಾಂತಿ ಸಮಾಜವಾದ ಪದ್ಧತಿಯಲ್ಲಿ ಕಂಡುಬರುವುದಿಲ್ಲ. ಸಮಾಜವಾದ ಪದ್ಧತಿಯಲ್ಲಿ ಬಂಡವಾಳಗಾರ ಹಾಗೂ ಕೂಲಿಕಾರ ಎಂಬ ವರ್ಗಗಳಿರುವುದಿಲ್ಲ.

(iv) ಬಂಡವಾಳಶಾಹಿ ಪದ್ಧತಿಯಲ್ಲಿ ಏಕಸ್ವಾಮ್ಯ ಸಂಸ್ಥೆಯನ್ನು ಸ್ಥಾಪಿಸುವ ಸಂಭವ ಉಂಟು. ಇದರಿಂದ ಬಳಕೆದಾರರಿಗೆ ತೊಂದರೆಯಾಗುತ್ತದೆ. ಏಕೆಂದರೆ ಏಕಸ್ವಾಮ್ಯ ಪದ್ಧತಿಯು ವಸ್ತುಗಳ ಬೆಲೆಯನ್ನು ಏರಿಸುತ್ತದೆ. ಸಾಮಾನ್ಯ ಜನರಿಗೆ ಹೆಚ್ಚು ಬೆಲೆಗಳನ್ನು ಕೊಡಲು ತೊಂದರೆಯಾಗುತ್ತದೆ. ಆದರೆ ಸಮಾಜವಾದ ಪದ್ಧತಿಯಲ್ಲಿ ಸರಕಾರವು ಧಾರಣೆಗಳನ್ನು ನಿಯಂತ್ರಿಸುತ್ತದೆ. ಇದರಿಂದ ಸಾಮಾನ್ಯ ಮನುಷ್ಯನಿಗೆ ವಸ್ತುಗಳು ಕಡಮೆ ಬೆಲೆಗೆ ಸಿಗುತ್ತವೆ.

ಸಾರ್ವಜನಿಕ ಕ್ಷೇತ್ರವು ದೇಶದ ಹಾಗೂ ಸಾಮಾನ್ಯ ಜನರ ಕಲ್ಯಾಣವನ್ನು ಬಯಸುತ್ತದೆ. ಎಷ್ಟೋ ಉದ್ದಿಮೆಗಳನ್ನು ಸರಕಾರವೇ ಸ್ವತಃ ನಡೆಸುತ್ತದೆ. ಈ ಉದ್ದಿಮೆಗಳಿಂದ ದೊರೆಯುವ ಲಾಭವನ್ನು ಜನಸಾಮಾನ್ಯರ ಕಲ್ಯಾಣಕ್ಕಾಗಿ ಉಪಯೋಗಿಸಲಾಗುತ್ತದೆ. ಸಾಮಾನ್ಯವಾಗಿ ಎಲ್ಲ ರಾಷ್ಟ್ರಗಳಲ್ಲಿ ಸರಕಾರ ಸಾರ್ವಜನಿಕರ ಹಿತದೃಷ್ಟಿಯಿಂದ ಉಪಯುಕ್ತ ಉದ್ದಿಮೆಗಳಾದ ವಿದ್ಯುತ್ ಪೂರೈಕೆ, ನೀರಿನ ಪೂರೈಕೆ, ಅಂಚೆ ಮತ್ತು ತಂತಿ ಇಲಾಖೆ, ಸಾರಿಗೆ, ರೈಲುಗಳನ್ನು ಖಾಸಗೀ ವ್ಯವಹಾರದಲ್ಲಿಡದೆ ತಾನೇ ನಡೆಸಿಕೊಂಡು ಹೋಗುತ್ತದೆ. ಇವು ಖಾಸಗೀ ಒಡೆತನದಲ್ಲಿದ್ದರೆ ಬಳಕೆದಾರರು ಹೆಚ್ಚು ಬೆಲೆ ತೆರಬೇಕಾಗುತ್ತದೆ. ಖಾಸಗೀ ವ್ಯಕ್ತಿಗಳು ಲಾಭ ಪಡೆಯುತ್ತಾರೆ.

ಸಮಾಜವಾದ ಪದ್ಧತಿಯಲ್ಲಿ ಸರಕಾರ ನಿರುದ್ಯೋಗದ ನಿರ್ಮೂಲನಕ್ಕಾಗಿ ಶ್ರಮಿಸುತ್ತದೆ. ಎಲ್ಲ ಕಾರ್ಯಗಳು ಯೋಜನೆಗಳ ಅನುಸಾರವಾಗಿ ಕಾರ್ಯಗತಗೊಳ್ಳುತ್ತವೆ. ಉದ್ಯೋಗವನ್ನು ಬಯಸುವ ಎಲ್ಲ ದೃಢಕಾಯರಿಗೂ ಉದ್ಯೋಗಗಳನ್ನು ಒದಗಿಸಲಾಗುತ್ತದೆ. ಉದ್ದಿಮೆಗಳಲ್ಲಿ ತೊಡಗಿರುವ ಎಲ್ಲ ಕೆಲಸಗಾರರಿಗೂ ಸಾಮಾಜಿಕ ಭದ್ರತೆಯನ್ನು ಸರಕಾರ ಒದಗಿಸುತ್ತದೆ.

ಸರಕಾರಿ ಉದ್ದಿಮೆಗಳಿಂದ ಅನೇಕ ಉಪಯೋಗಗಳನ್ನು ಪಡೆಯಬಹುದು. ಈ ಪದ್ಧತಿಯಲ್ಲಿ ಎಲ್ಲರಿಗೂ ಆರ್ಥಿಕ ಸಮಾನತೆ ಸಿಗುತ್ತದೆ. ರಾಷ್ಟ್ರದ ಸಂಪತ್ತನ್ನು ಎಲ್ಲರಿಗೂ ಸಮನಾಗಿ ಹಂಚಲ್ಪಟ್ಟಿರುತ್ತದೆ. ಇದರ ಮುಖ್ಯಗುರಿ ಬಡವ ಹಾಗೂ ಬಲ್ಲಿದ ಎಂಬ ಭೇದಭಾವವನ್ನು ತೊಡೆದು ಆರ್ಥಿಕ ಸಮಾನತೆಯನ್ನುಂಟುಮಾಡುವುದು. ಈ ವ್ಯವಸ್ಥೆಯಲ್ಲಿ ಕೆಲಸಗಳನ್ನು ಲಾಭದ ದೃಷ್ಟಿಯಿಂದ ಮಾಡುವುದಿಲ್ಲ. ಜನತೆಯ ಹಿತದೃಷ್ಟಿಯಿಂದ ಪ್ರತಿಯೊಂದು ಕೆಲಸ ನಡೆಯುತ್ತದೆ.

(i) **ಅಪಾರ ಬಂಡವಾಳ :** ಸರಕಾರವು ಬಂಡವಾಳವನ್ನು ತೊಡಗಿಸುವುದರಿಂದ ಸಾಕಷ್ಟು ಹಣ ಸಂದಾಯವಾಗುತ್ತದೆ. ಸರಕಾರದಲ್ಲಿ ಪ್ರತಿಯೊಬ್ಬರಿಗೂ ವಿಶ್ವಾಸವಿರುತ್ತದೆ. ಇದರಿಂದ ಹಣ ತೊಡಗಿಸಲು ಜನ ಹಿಂಜರಿಯುವುದಿಲ್ಲ.

(ii) **ದಕ್ಷ ಆಡಳಿತ :** ಹೆಚ್ಚು ಬಂಡವಾಳವನ್ನು ಹೊಂದಿರುವುದರಿಂದ ನುರಿತ ಮತ್ತು ದಕ್ಷ ಅಧಿಕಾರಿಗಳನ್ನು ನೇಮಕಮಾಡಿಕೊಳ್ಳಲು ಅವಕಾಶ ಉಂಟು. ಆಡಳಿತವನ್ನು ದಕ್ಷ ಅಧಿಕಾರಿಗಳು ನಿರ್ವಹಿಸುವುದರಿಂದ ಉತ್ಪಾದನೆ ಹೆಚ್ಚುತ್ತದೆ. ಉತ್ಪಾದನೆ ಹೆಚ್ಚುವುದರಿಂದ ವಸ್ತುಗಳನ್ನು ಕಡಮೆ ಬೆಲೆಗೆ ಮಾರಾಟ ಮಾಡಬಹುದು. ಇದರಿಂದ ಕಡಮೆ ವರಮಾನವನ್ನು ಪಡೆಯುವ ಸಾಮಾನ್ಯ ಜನರಿಗೆ ಅನುಕೂಲವಾಗುತ್ತದೆ.

(iii) **ಸಾಮಾಜಿಕ ಭದ್ರತೆ :** ಈ ಉದ್ದಿಮೆಗಳಲ್ಲಿ ಕೆಲಸಮಾಡುವ ನೌಕರರು ಸರಕಾರದ ಸೇವಾನಿಯಮಗಳಿಂದ ಭದ್ರತೆಯನ್ನು ಪಡೆಯುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯ ಕೆಲಸ, ವೇತನ, ರಜೆ, ಬಡ್ತಿಗಳು ನಿಯಮಗಳ ಮೂಲಕ ನಿರ್ಧರಿಸಲ್ಪಟ್ಟಿರುತ್ತವೆ. ಕಾರ್ಮಿಕರು ನಿಶ್ಚಿಂತರಾಗಿರುತ್ತಾರೆ. ಖಾಸಗೀ ವ್ಯವಸ್ಥೆಯಲ್ಲಿ ಕೆಲಸದ ಭದ್ರತೆ ಇರುವುದಿಲ್ಲ. ಈ ಉದ್ದಿಮೆಗಳಲ್ಲಿ ಮಾಲೀಕನು ನೌಕರರನ್ನು ಯಾವಾಗ ಬೇಕಾದರೂ ಹೊರಹಾಕಬಹುದು. ಸರಕಾರಿ ಉದ್ದಿಮೆಗಳಲ್ಲಿ ತೊಡಗಿರುವ ಕೆಲಸಗಾರರಿಗೆ ಜೀವವಿಮೆ, ನಿವೃತ್ತಿವೇತನ, ಪ್ರಾವಿಡೆಂಟ್ ನಿಧಿಗಳನ್ನು ಒದಗಿಸಲಾಗುವುದು. ಇದರಿಂದ ಕೆಲಸಗಾರರು ನಿಶ್ಚಿಂತೆಯಿಂದ ದುಡಿದು, ಉತ್ಪಾದನೆಯನ್ನು ಅಧಿಕಗೊಳಿಸಿ ರಾಷ್ಟ್ರದ ಏಳಿಗೆಗೆ ನೆರವಾಗುತ್ತಾರೆ. ಈ ಸೌಲಭ್ಯಗಳು ಬಂಡವಾಳಶಾಹಿ ಪದ್ಧತಿಯಲ್ಲಿ ಕಂಡುಬರುವುದಿಲ್ಲ.

(iv) **ಜನತೆಯ ಕಲ್ಯಾಣ :** ಸರಕಾರಿ ಉದ್ದಿಮೆಗಳು 'ಲಾಭವೂ ಇಲ್ಲ ನಷ್ಟವೂ ಇಲ್ಲ' ಎಂಬ ತತ್ವದ ಮೇಲೆ ನಡೆಯುತ್ತವೆ. ಲಾಭ ಗಳಿಸಿದರೂ ಸಹ ಆ ಲಾಭವನ್ನು ಶೇರುದಾರರಿಗೆ ಹಂಚುವ ಪ್ರಮೇಯವಿಲ್ಲ. ಎಲ್ಲ ಲಾಭವೂ ಸರಕಾರಕ್ಕೇ ಸೇರುತ್ತದೆ. ಇದರಿಂದ ಸರಕಾರದ ಆರ್ಥಿಕ ಪರಿಸ್ಥಿತಿ ಸುಧಾರಿಸಿ ಜನರ ಮೇಲಿನ ತೆರಿಗೆಯನ್ನು ಕಡಮೆಮಾಡಲು ಸಹಾಯವಾಗುತ್ತದೆ. ಆ ಹಣದಿಂದ ಉದ್ದಿಮೆಗಳನ್ನು ಸ್ಥಾಪಿಸಿ

ಜನರ ಕಲ್ಯಾಣ ಪಡೆಯಲು ಉಪಯೋಗವಾಗುತ್ತದೆ. ಜನತೆಯ ಕಲ್ಯಾಣವೇ ಸರಕಾರದ ಮುಖ್ಯಗುರಿ.

(v) **ಆರ್ಥಿಕ ಸಮಾನತೆ :** ಪ್ರತಿಯೊಬ್ಬನಿಗೂ ಆರ್ಥಿಕ ಸಮಾನತೆಯನ್ನು ಒದಗಿಸುವುದು ಸರಕಾರದ ಮುಖ್ಯ ಧ್ಯೇಯವಾಗಿದೆ. ರಾಷ್ಟ್ರದ ಸಂಪತ್ತು ಕೆಲವೇ ಜನರಲ್ಲಿ ಕೇಂದ್ರೀಕೃತವಾಗುವುದನ್ನು ತಪ್ಪಿಸಿ ಸರಕಾರವು ಅದನ್ನು ಜನರಲ್ಲಿ ಸಮಾನವಾಗಿ ಹಂಚುತ್ತದೆ.

(iv) **ಉತ್ಪಾದನಾ ಸಾಧನಗಳ ಮೇಲೆ ಸರಕಾರದ ಹತೋಟಿ :** ಸರಕಾರವು ಭೂಮಿ, ಯಂತ್ರೋಪಕರಣ, ಕಾರ್ಖಾನೆ ಮೊದಲಾದ ಉತ್ಪಾದನಾ ಸಾಧನಗಳ ಮೇಲೆ ಹತೋಟಿಯನ್ನು ಹೊಂದಿರುತ್ತದೆ. ಇದರಿಂದ ಸಮಾಜದ ಹಿತವನ್ನು ಸಾಧಿಸುವುದು ಸಾಧ್ಯವಾಗುತ್ತದೆ. ಉತ್ಪಾದನಾ ಸಾಧನಗಳು ಖಾಸಗಿ ಒಡೆತನದಲ್ಲಿದ್ದರೆ ಸಮಾಜದ ಹಿತವಾಗುವುದರ ಬದಲು ಬಡವರ ಸುಲಿಗೆಯಾಗುತ್ತದೆ.

ಲೋಪಗಳು : ಸಮಾಜವಾದ ಪದ್ಧತಿಯಲ್ಲಿಯೂ ಸಹ ಕೊರತೆಗಳು ಕಂಡು ಬರುತ್ತವೆ.

(i) **ಕಡಮೆ ಆಡಳಿತದ ದಕ್ಷತೆ :** ಸಮಾಜವಾದ ಪದ್ಧತಿಯಲ್ಲಿ ಎಲ್ಲ ಉದ್ದಿಮೆ ಗಳನ್ನು ಸರಕಾರವೇ ನಡೆಸುತ್ತದೆ. ಉದ್ದಿಮೆಗಳನ್ನು ನೋಡಿಕೊಳ್ಳಲು ಸರಕಾರ ಅಧಿಕಾರಿಗಳನ್ನು ನೇಮಕಮಾಡುತ್ತದೆ. ನೇಮಕಗೊಂಡ ಅಧಿಕಾರಿಗಳು ಉದ್ದಿಮೆಗಳ ಕಾರ್ಯಕಲಾಪಗಳನ್ನು ನಿರ್ವಹಿಸುವರು. ಇವರ ನೇಮಕವು ಅನೇಕ ಸಲ ಶಿಫಾರಸ್ಸನ್ನು ಅವಲಂಬಿಸಿರುವ ಸಾಧ್ಯತೆ ಇದೆ. ಉದ್ದಿಮೆಗಳಿಂದ ಬರುವ ಲಾಭ ಸರಕಾರಕ್ಕೆ ಸೇರುವುದರಿಂದ ಇವರು ಅದರ ಪ್ರಗತಿಯ ಬಗ್ಗೆ ಹೆಚ್ಚು ಆಸಕ್ತಿವಹಿಸುವುದಿಲ್ಲ. ಉದ್ದಿಮೆಯು ಲಾಭಗಳಿಸಲಿ, ನಷ್ಟಹೊಂದಲಿ, ಅದರ ನೇರ ಹೊಣೆ ಹೊರುವುದಿಲ್ಲ. ನಿಯಮಿತ ವೇತನ ಹಾಗೂ ಉದ್ಯೋಗದ ಭದ್ರತೆಯಿಂದ ಅವರು ಲವಲವಿಕೆ ಹಾಗೂ ಹೆಚ್ಚು ದಕ್ಷತೆಯಿಂದ ಹಾಗೂ ಹೆಚ್ಚು ಕಷ್ಟಪಟ್ಟು ಕೆಲಸಮಾಡದಿರಬಹುದು. ಇದರಿಂದ ವೆಚ್ಚ ಅಧಿಕವಾಗಿ, ನಿಧಾನವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಅನೇಕ ಸಲ ಕಂಡುಬರುತ್ತದೆ. ಈ ಉದ್ದಿಮೆಗಳಲ್ಲಿ ನೌಕರರ ಬಡ್ತಿಯು ಅವರ ದಕ್ಷತೆಯನ್ನು ಅವಲಂಬಿಸಿರುವುದು ಅವಶ್ಯಕ.

(ii) **ಕೆಲಸಗಾರರ ದಕ್ಷತೆಯಲ್ಲಿ ಕುಂದು :** ಸರಕಾರಿ ಉದ್ದಿಮೆಗಳಲ್ಲಿ ನೌಕರರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಆಗಾಗ ವರ್ಗಾಯಿಸುವುದರಿಂದ ನೌಕರರು ಆಸಕ್ತಿಯಿಂದ ಕೆಲಸ ಮಾಡುವುದಿಲ್ಲ. ಅವರ ದಕ್ಷತೆಯೂ ಸಹ ಕುಗ್ಗುತ್ತದೆ. ಹೇಗೆಂದರೆ ಅವರನ್ನು ಒಂದು ಕಡೆಯಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಿದಾಗ ಕೆಲವರಿಗೆ

ಬೇಕಾದ ಸೌಲಭ್ಯಗಳು ಸಿಗದೆ ಅವರು ಉತ್ಸಾಹಹೀನರಾಗಿ ದುಡಿದಾಗ ಕೆಲಸವು ಸರಿಯಾಗಿ ಸಾಗುವುದಿಲ್ಲ. ಉತ್ಪಾದನೆ ಕಡಮೆಯಾಗಿ ಸರಕಾರಕ್ಕೆ ಹಾಗೂ ಜನತೆಗೆ ತೊಂದರೆಯಾಗುವುದು.

ಈ ರೀತಿ ಸರಕಾರಿ ಉದ್ಯಮವು ಕೆಲವು ದೋಷಗಳನ್ನು ಹೊಂದಿದ್ದರೂ ಅದು ಅಧಿಕ ಪ್ರಮಾಣದಲ್ಲಿ ಜನರನ್ನು ಆಕರ್ಷಿಸುವ ಆರ್ಥಿಕ ವ್ಯವಸ್ಥೆಯಾಗಿದೆ.

ಸಾರ್ವಜನಿಕ ರಂಗದಲ್ಲಿರುವ ಉದ್ದಿಮೆಗಳು ಲಾಭಗಳಿಸುವ ಉದ್ದೇಶದಿಂದ ಸ್ಥಾಪಿಸುವ ಉದ್ದಿಮೆಗಳಲ್ಲ. ಸಾರ್ವಜನಿಕ ಕಲ್ಯಾಣ, ದೇಶದ ಪ್ರಗತಿಯೇ ಸರಕಾರದ ಮುಖ್ಯ ಉದ್ದೇಶ. ರಾಜ್ಯದ ಬೊಕ್ಕಸಕ್ಕೆ ನಷ್ಟವಾದರೂ ಕಾರ್ಮಿಕರ ಕಲ್ಯಾಣ, ಹೆಚ್ಚು ಜನರಿಗೆ ಉದ್ಯೋಗಾವಕಾಶಗಳು, ಪ್ರಾವಿಡೆಂಟ್ ನಿಧಿ, ವೃದ್ಧಾಪ್ಯವೇತನ, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದು ಸರಕಾರದ ಕರ್ತವ್ಯ. ಸಮಾಜದ ದೃಷ್ಟಿಯಲ್ಲಿ ಉಪಯುಕ್ತವಾದ ಎಲ್ಲ ಉದ್ದಿಮೆಗಳು ಸಾರ್ವಜನಿಕ ರಂಗದಲ್ಲಿರುತ್ತವೆ. ಇತ್ತೀಚೆಗೆ ಮತ್ತೊಂದು ಆರ್ಥಿಕಪದ್ಧತಿ ರೂಪುಗೊಂಡು ಸಮಾಜವಾದಪದ್ಧತಿ ಹಾಗೂ ಬಂಡವಾಳಶಾಹಿಪದ್ಧತಿಯಲ್ಲಿ ಕಂಡುಬರುವ ಕುಂದುಕೊರತೆಗಳನ್ನು ನಿವಾರಿಸಲು ಪ್ರಯತ್ನಿಸುತ್ತಿದೆ. ಅದೇ ಸಹಕಾರಿ ವ್ಯವಹಾರಪದ್ಧತಿ.

ಸಹಕಾರಿ ಉದ್ಯಮ

ಸಹಕಾರಿ ಉದ್ಯಮವನ್ನು 'ಸಹಕಾರಿ ವ್ಯವಹಾರಪದ್ಧತಿ' ಎಂಬುದಾಗಿ ಕರೆಯು ವುದು ರೂಢಿ. ಸಹಕಾರವು ಉದ್ದಿಮೆ ಸಂಘಟನೆಯ ಒಂದುರೂಪ. ಸಹಕಾರವು ಸ್ವಯಂಪ್ರೇರಣೆಯಿಂದ ಕೂಡಿದ ಒಂದು ಸಂಘ. ದೀನದಲಿತರಿಗೆ ಆಸೆಯನ್ನು ತೋರಿ ಸುವ ಒಂದು ಕೈದೀವಿಗೆ. ಸಾಮಾನ್ಯ ಅರ್ಥದಲ್ಲಿ 'ಸಹಕಾರ' ಎಂದರೆ ಒಟ್ಟುಗೂಡಿ ಕೆಲಸ ಮಾಡುವುದು ಅಥವಾ ಜೀವನ ನಡೆಸುವುದು ಎಂದರ್ಥ. ಆರ್ಥಿಕ ರಚನೆಯಲ್ಲಿ 'ಸಹಕಾರ' ಎಂಬ ಪದಕ್ಕೆ ವಿಶೇಷ ಅರ್ಥವಿದೆ. ಸಹಕಾರವು ಆರ್ಥಿಕ ಪ್ರಜಾಪ್ರಭುತ್ವದ ಒಂದು ರೂಪವಾಗಿ ಪರಿಣಮಿಸಿದೆ. ಇದು ಒಂದು ವಿಶೇಷರೀತಿಯ ಆರ್ಥಿಕಜೀವನ ಕ್ರಮ. ಇದನ್ನೇ 'ಸಹಕಾರಪದ್ಧತಿ' ಎಂದು ಕರೆಯುತ್ತಾರೆ. ಇದು ಒಂದು ಸ್ವಯಂ ಸಾಧಕ ಚಳುವಳಿ. ಈ ಸಂಸ್ಥೆಗಳಲ್ಲಿ ಮೇಲುಕೀಳೆಂಬ ಭಿನ್ನಾಭಿಪ್ರಾಯಗಳಿರುವುದಿಲ್ಲ. ಬಡವ ಬಲ್ಲಿದನೆಂಬ ತಾರತಮ್ಯವಿರುವುದಿಲ್ಲ. ಸ್ವಯಂಪ್ರೇರಣೆ ಮತ್ತು ಸ್ವಯಂ ಆಡಳಿತವು ಸಹಕಾರಿ ಚಳುವಳಿಯ ಅಸ್ತಿತ್ವಕ್ಕೆ ಮತ್ತು ಬೆಳವಣಿಗೆಗೆ ಮೂಲಾಧಾರ ವೆಂದು ಹೇಳಬಹುದು. ರಾಬರ್ಟ್ ಓವನ್ ಸಹಕಾರದ ಮೂಲಪುರುಷ. ಆತ ಅಂದು ನೆಟ್ಟ ಸಹಕಾರವೆಂಬ ಬೀಜ ಇಂದು ದೊಡ್ಡ ಹೆಮ್ಮರವಾಗಿ ಬೆಳೆದು ವಿವಿಧ ಮುಖ ಗಳಲ್ಲಿ ಹಬ್ಬಿಕೊಂಡು ಕೋಟ್ಯಾಂತರ ಜನರಿಗೆ ನೆರಳು ನೀಡುತ್ತಿದೆ. ಸಹಕಾರದ ಮೂಲ ಮಂತ್ರ '**ಒಬ್ಬನಿಗಾಗಿ ಎಲ್ಲರೂ ; ಎಲ್ಲರಿಗಾಗಿ ಒಬ್ಬನು**'. ಆರ್ಥಿಕವಾಗಿ ಹಿಂದುಳಿದ ಸಮಾಜಗಳಿಗೆ ಸಹಕಾರ ಕ್ಷೇತ್ರ ಒಂದು ವಜ್ರಕವಚವಾಗಿದೆ.

ಸಹಕಾರ ಪದ್ಧತಿಯು ರೂಪುಗೊಳ್ಳಲು ಮುಖ್ಯಕಾರಣ ಬಂಡವಾಳಶಾಹಿ ಪದ್ಧತಿಯಲ್ಲಿ ಕಂಡುಬಂದ ಅನಾನುಕೂಲಗಳು. ಬಂಡವಾಳಶಾಹಿ ಪದ್ಧತಿಯಲ್ಲಿ ಕಾರ್ಮಿಕವರ್ಗದವರ ಮತ್ತು ಬಳಕೆದಾರರ ಶೋಷಣೆಗೆ ಅವಕಾಶ ಉಂಟು. ಇಂಗ್ಲೆಂಡ್‌ದಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಯಿಂದ ಕೈಗಾರಿಕಾ ರಂಗದಲ್ಲಿ ಶೋಷಣೆ ಪ್ರಾರಂಭವಾಯಿತು. ಕೈಗಾರಿಕಾ ಕ್ರಾಂತಿ ಜನಸಮುದಾಯಕ್ಕೆ ನಿರ್ಗತಿಕ ಬಾಳನ್ನು ತಂದೊಡ್ಡಿತು. ಇದನ್ನು ತಡೆಗಟ್ಟಲು ಮುಂದೆ ಬಂದ ಉದಾರಿಗಳಲ್ಲಿ ರಾಬರ್ಟ್ ಓವನ್ ಚಿರಸ್ಮರಣೀಯನು. ಪರಸ್ಪರ ಸಹಕಾರ ನೀತಿಯ ಮೇಲೆ ಕೈಗಾರಿಕಾ ಉದ್ಯಮವನ್ನು 'ನ್ಯೂಲಾನಾರ್ಕ್' ಎಂಬಲ್ಲಿ ಸ್ಥಾಪಿಸಿ ದುಡಿಮೆಗಾರರಿಂದ ಮೆಚ್ಚುಗೆ ಪಡೆದನು.

ಮೊಟ್ಟಮೊದಲು ಸಹಕಾರ ಸಂಘಗಳು ಇಂಗ್ಲೆಂಡ್‌ನಲ್ಲಿ ರೂಪುಗೊಂಡವು. ಕೈಗಾರಿಕಾ ಕ್ರಾಂತಿಯಿಂದ ಬೇಸತ್ತ 28 ಜನ ನೇಯ್ಗೆಯವರು ಒಂದೊಂದು ಪೌಂಡ್ ಬಂಡವಾಳ ತೊಡಗಿಸಿ ಸಹಕಾರ ಸಂಘವನ್ನು ಸ್ಥಾಪಿಸಿದರು. ವರ್ತಕರಿಂದ ವಂಚಿತರಾಗಿ ಪ್ರಾರಂಭಿಸಿದ ಸಂಸ್ಥೆಗೆ **'ಸಹಕಾರ ಸಂಘ'** ವೆಂಬುದಾಗಿ ನಾಮಕರಣ ಮಾಡಿದರು. ಇಂಗ್ಲೆಂಡ್‌ನಲ್ಲಿ ಸಹಕಾರ ಚಳುವಳಿ ಅದ್ಭುತ ಪ್ರಗತಿಕಂಡಿತು. ಇಲ್ಲಿ ಸಹಕಾರದ ಮುಖ್ಯ ಗುರಿ ಮಧ್ಯವರ್ತಿಗಳ ನೆರವಿಲ್ಲದೆ ಉತ್ಪಾದಕರಿಗೆ ಮತ್ತು ಬಳಕೆದಾರರಿಗೆ ಸಂಪರ್ಕ ಉಂಟುಮಾಡಿ ವಸ್ತುಗಳನ್ನು ಕಡಮೆಬೆಲೆಗೆ ಒದಗಿಸುವುದು. ಈ ಸಂಘಗಳಲ್ಲಿ ಎಲ್ಲ ವ್ಯವಹಾರವು ಸದಸ್ಯರದೇ ಆಗಿರುತ್ತದೆ. ಈ ಪದ್ಧತಿಯಲ್ಲಿ ಧಣಿಗಳೂ ಸದಸ್ಯರೇ, ದುಡಿಯುವ ನೌಕರರೂ ಸದಸ್ಯರೇ, ಸೇವೆಯೇ ಮುಖ್ಯಗುರಿ. ಈ ಪದ್ಧತಿಯಲ್ಲೂ ಕೆಲವು ನ್ಯೂನತೆಗಳು ಕಂಡುಬರುತ್ತವೆ.

ಸಹಕಾರಿಪದ್ಧತಿಯಲ್ಲಿ ಕಂಡುಬರುವ ನ್ಯೂನತೆಗಳು

(i) **ಬಂಡವಾಳದ ಕೊರತೆ :** ಸಹಕಾರ ಪದ್ಧತಿಯಲ್ಲಿ ಕಂಡುಬರುವ ಮುಖ್ಯವಾದ ಕೊರತೆ ಎಂದರೆ ಬಂಡವಾಳದ ಅಭಾವ. ಕೇವಲ ಸದಸ್ಯರು ಉದ್ದಿಮೆಯಲ್ಲಿ ಬಂಡವಾಳ ತೊಡಗಿರುವರು. ಇಲ್ಲಿ ಶೇರುಗಳನ್ನು ಮಾರಾಟ ಮಾಡುವ ವ್ಯವಸ್ಥೆ ಇಲ್ಲ. ಕಾರ್ಮಿಕರು, ಬಳಕೆದಾರರು ಬಂಡವಾಳಗಾರರಲ್ಲ. ಅವರು ಶೇರುಗಳ ಮೂಲಕ ತೊಡಗಿಸುವ ಹಣವೂ ಬಹಳ ಅಲ್ಪ. ಕಡಮೆ ಹಣದಿಂದ ಉದ್ದಿಮೆಯನ್ನು ನವೀನ ರೀತಿಯಲ್ಲಿ ನಡೆಸಲು ಸಾಧ್ಯವಾಗುವುದಿಲ್ಲ.

(ii) **ಸಹಕಾರ ಭಾವನೆಯಕೊರತೆ :** ಸಹಕಾರ ಭಾವನೆಯು ಜನರಲ್ಲಿ ತನ್ನಷ್ಟಕ್ಕೆ ತಾನೇ ಚಿಮ್ಮಿ ಬರಬೇಕು. ಭಾರತದಲ್ಲಿ ಏಳು ದಶಕ ವರ್ಷಗಳ ಹಿಂದೆ 1904 ರಲ್ಲಿಯೇ ಸಹಕಾರ ಚಳುವಳಿ ಜಾರಿಗೆ ತಂದಿದೆ. ಭಾರತ ನಿರಕ್ಷರ ಕುಕ್ಷಿಗಳಿಂದ ಕೂಡಿದ ದೇಶ. ನಿರಕ್ಷರತೆ ಹೊಂದಿರುವ ನಮ್ಮ ಜನರಲ್ಲಿ ಸಹಕಾರಿ ತತ್ವಗಳು ಸರಿಯಾಗಿ ಬೇರೂರಿಲ್ಲ.

ಆದ್ದರಿಂದ ಜನರಿಗೆ ಯೋಗ್ಯ ಶಿಕ್ಷಣವಿರಬೇಕು. ಜನರಲ್ಲಿ ಶಿಕ್ಷಣವು ಬೆಳೆದಂತೆಲ್ಲ ಜನರು ಸಹಕಾರಿ ತತ್ವಗಳನ್ನು ಮನವಿ ಮಾಡಿಕೊಂಡು ಸಹಕಾರದ ಬಗ್ಗೆ ಒಳ್ಳೆಯ ಅಭಿಪ್ರಾಯ ವನ್ನು ಹೊಂದುತ್ತಾರೆ. ರಾಷ್ಟ್ರದ ಆರ್ಥಿಕ ಪುನರ್ವ್ಯವಸ್ಥೆಗೆ ಇರುವ ಏಕೈಕ ಮಾರ್ಗ ವೆಂದರೆ ಸಹಕಾರ. ಸಹಕಾರ ಕಾಮಧೇನುವಿದ್ದಂತೆ ಎಂಬುದನ್ನು ಪ್ರತಿಯೊಬ್ಬರೂ ಮನಗಾಣಬೇಕು. ಇದರ ಜೊತೆಗೆ ಸಹಕಾರಿ ಸದಸ್ಯರು ವಿಧೇಯರಾಗಿರುವುದಿಲ್ಲ. ಅವರ ಅವಿಧೇಯತೆಯಿಂದಾಗಿ ಸಂಘದ ಪ್ರಗತಿಯು ಕುಂಠಿತಗೊಳ್ಳುತ್ತದೆ. ಅನೇಕ ಬಾರಿ ಸಂಘದ ಆಡಳಿತವನ್ನು ಅದಕ್ಷ ವ್ಯಕ್ತಿಗಳು ನಿರ್ವಹಿಸುವುದರಿಂದ ಸಂಘವು ನಷ್ಟಕ್ಕೀಡಾಗುತ್ತದೆ. ಸಂಘದ ಸದಸ್ಯರಲ್ಲಿ ಆಗಾಗ್ಗೆ ಒಳಜಗಳಗಳು, ಮನಸ್ತಾಪ ಗಳುಂಟಾಗುವುದರಿಂದ ಸಂಘದ ವ್ಯವಹಾರವು ಸುಗಮವಾಗಿ ನಡೆಯುವುದಿಲ್ಲ. ಸ್ವಜನ ಪಕ್ಷಪಾತ, ದುಂಡುಗಾರಿಕೆ ಮೊದಲಾದವು ಈ ಸಂಘಗಳಲ್ಲೂ ಕಂಡುಬರುವುದುಂಟು.

ಇತರ ಕ್ಷೇತ್ರಗಳಲ್ಲಿ ಸಹಕಾರ : ಬಡರೈತರು, ಸಣ್ಣ ಉದ್ಯಮಗಳನ್ನೊಳ ಗೊಂಡಿರುವ ಭಾರತದಲ್ಲಿ ಸಹಕಾರಿ ವ್ಯವಸ್ಥೆಯು ಅತ್ಯಂತ ಪರಿಣಾಮಕಾರಿಯಾದುದು. ಇದು ರೈತರಿಗೆ ಅತ್ಯಾವಶ್ಯಕವಾದ ಸಾಲವನ್ನು ಒದಗಿಸಿ ಹೆಚ್ಚು ಬೆಳೆ ಬೆಳೆಯಲು ನೆರವಾಗುತ್ತದೆ. ಈ ಕ್ಷೇತ್ರದ ಮುಖ್ಯ ಉದ್ದೇಶ ಸೇವೆ. ಆದ್ದರಿಂದ ಸಹಕಾರಿ ಸಂಘಗಳು ಹೆಚ್ಚು ಹೆಚ್ಚಾಗಿ ಸ್ಥಾಪಿತಗೊಂಡು ರೈತರನ್ನು ಹಳ್ಳಿಯ ಸಾಹುಕಾರರ ಹಿಡಿತದಿಂದ ತಪ್ಪಿಸಿ ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಲು ಮುಂದೆ ಬಂದಿವೆ. ರೈತರಿಗೆ ಅಲ್ಪಾವಧಿ ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ಒದಗಿಸಿ ಹೆಚ್ಚು ಧಾನ್ಯಗಳನ್ನು ಬೆಳೆದು ಸ್ವಯಂಪೂರ್ಣತೆ ಹೊಂದಲು ಯತ್ನಿಸಲಾಗುತ್ತದೆ. ಸರಕಾರಿ ನೌಕರರು ತಾವಿರುವ ಪ್ರದೇಶಗಳಲ್ಲಿ ಸಂಘಗಳನ್ನು ಸ್ಥಾಪಿಸಿಕೊಂಡು, ಆ ಸಂಘಗಳ ಮೂಲಕ ವಸ್ತುಗಳನ್ನು ಪಡೆದು, ಕಡಮೆ ಬೆಲೆಗೆ ಬಳಕೆದಾರರಿಗೆ ಪೂರೈಸು ವರು. ಸಹಕಾರಿ ಸಂಘಗಳನ್ನು ಇತ್ತೀಚೆಗೆ ಕೈಗಾರಿಕಾ ರಂಗದಲ್ಲೂ ಸ್ಥಾಪಿಸಲಾಗಿದೆ. ಮನೆಗಳ ನಿರ್ಮಾಣ, ಹಾಲುಪೂರೈಕೆ, ಸಹಕಾರಿಸಾಗುವಳಿ ಮುಂತಾದುವುಗಳು ರೂಪು ಗೊಂಡಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಾಲ ಹಾಗೂ ಉದ್ಯೋಗಗಳನ್ನು ನೀಡುವ ಏಕಮೇವ ವ್ಯವಸ್ಥೆಯೇ ಸಹಕಾರ. ಇಂದು ಜನತೆಯ ಆರ್ಥಿಕ ಹಾಗೂ ಸಾಮಾಜಿಕ ಜೀವನದಲ್ಲಿ ಸಹಕಾರಿ ಸಂಘಗಳು ಹಾಸು ಹೊಕ್ಕಾಗಿದ್ದು ರಕ್ತಗತವಾಗಿವೆ. ಒಟ್ಟಿನಲ್ಲಿ ಹೇಳುವುದಾದರೆ ಎಲ್ಲ ರೀತಿಯ ಅಭಾವಗಳನ್ನೂ, ಅನಿಷ್ಟಗಳನ್ನೂ ತೊಲಗಿಸುವ ಪರಮೌಷಧವೆಂದರೆ ಸಹಕಾರಿಕ್ಷೇತ್ರ. ಇಂದು ಸಹಕಾರಿ ಕ್ಷೇತ್ರ ವಿಪುಲವಾಗಿ ಬೆಳೆದಿದೆ. ಈ ಕ್ಷೇತ್ರ ಕಲ್ಪವೃಕ್ಷ ಹಾಗೂ ಕಾಮಧೇನುವಾಗಬೇಕಾದರೆ ಅಲ್ಲಿ ಪ್ರಾಮಾಣಿಕತೆ ಮತ್ತು ದಕ್ಷತೆಯನ್ನು ಹೆಚ್ಚಿಸಬೇಕು. ಈ ರಂಗದ ಮುಖ್ಯಗುರಿ ಎಂದರೆ ಸಾರ್ವಜನಿಕ ಸೇವೆ. ಆದ್ದರಿಂದ ಸಹಕಾರವು ನಮ್ಮ ಆರ್ಥಿಕ ಅನಿಷ್ಟಗಳನ್ನು ತೊಲಗಿಸಲು ದಿವ್ಯೌಷಧಿ ಯಾಗಿದೆ.

ಸಹಕಾರವು ಖಾಸಗೀಕ್ಷೇತ್ರ ಮತ್ತು ಸರಕಾರೀಕ್ಷೇತ್ರಗಳೆರಡರ ಮಧ್ಯವರ್ತಿ ಮತ್ತು ಸುವರ್ಣಮಾಧ್ಯಮವಾಗಿದೆ. ಹೇಗೆಂದರೆ ಖಾಸಗೀ ಕ್ಷೇತ್ರದ ಮುಖ್ಯ ಉದ್ದೇಶ ಲಾಭಗಳಿಕೆ. ಬಂಡವಾಳವನ್ನು ಶೇಖರಿಸುವುದೇ ಬಂಡವಾಳಗಾರನ ಜೀವನದ ಉಸಿರು ಹಾಗೂ ಹೆಗ್ಗುರಿ. ಸರಕಾರೀಕ್ಷೇತ್ರದ ಮುಖ್ಯಗುರಿ ಸಮಾಜ ಕಲ್ಯಾಣ. ಆದರೆ ಸಹಕಾರಿ ಕ್ಷೇತ್ರದ ಮುಖ್ಯಗುರಿ ಸೇವೆ. ಸಹಕಾರಿ ಪದ್ಧತಿಯು 'ಸಹಕಾರವೇ ಜೀವನ, ಜೀವನವೇ ಸಹಕಾರ' ಎಂಬ ತಾರಕ ಮಂತ್ರವನ್ನು ಪಾಲಿಸುತ್ತದೆ.

ಅಧ್ಯಾಯ 7

ಸಾರ್ವಜನಿಕ ಹಣಕಾಸು

ಸಾರ್ವಜನಿಕ ಹಣಕಾಸು ಸರಕಾರದ ಆದಾಯ ಮತ್ತು ವೆಚ್ಚಗಳ ಅಧ್ಯಯನ; ಜೊತೆಗೆ ಅವೆರಡರ ಹೊಂದಾಣಿಕೆ. ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳ ನಡುವಣ ಕೊಂಡಿ ಸಾರ್ವಜನಿಕ ಹಣಕಾಸು. ಹಣಕಾಸನ್ನು ಪ್ರಧಾನವಾಗಿ ಖಾಸಗಿ ಹಣಕಾಸು ಹಾಗೂ ಸಾರ್ವಜನಿಕ ಹಣಕಾಸೆಂದು ವಿಂಗಡಿಸಬಹುದು. ಖಾಸಗೀ ವ್ಯವಹಾರಕ್ಕೆ ಸಂಬಂಧಪಟ್ಟ ವ್ಯವಹಾರಗಳಲ್ಲಿ ವೆಚ್ಚ ಖಾಸಗೀ ಹಣಕಾಸು. ಇಲ್ಲಿ ವ್ಯಕ್ತಿ ಇಲ್ಲವೇ ವ್ಯಕ್ತಿಗಳ ಸ್ವಾರ್ಥ ಮುಖ್ಯ ಗುರಿ. ಸಾರ್ವಜನಿಕ ಸಂಸ್ಥೆಗಳಾದ ಕೇಂದ್ರ ಸರಕಾರ, ರಾಜ್ಯ ಸರಕಾರಗಳು ವೆಚ್ಚಮಾಡುವ ಹಾಗೂ ಆದಾಯವನ್ನು ಪಡೆಯುವ ವ್ಯವಹಾರ ಸಾರ್ವಜನಿಕ ಹಣಕಾಸು. ಇಲ್ಲಿಯ ಮುಖ್ಯ ಗುರಿ ಪ್ರಜೆಗಳ ಕಲ್ಯಾಣ.

ಪ್ರಾರಂಭದಲ್ಲಿ ಸಾರ್ವಜನಿಕ ಹಣಕಾಸನ್ನು ಮುಖ್ಯವಾಗಿ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ: 1) ಸಾರ್ವಜನಿಕ ಆದಾಯ ಮತ್ತು 2) ಸಾರ್ವಜನಿಕ ವೆಚ್ಚ. ಇತ್ತೀಚೆಗೆ ಮತ್ತೆರಡು ವಿಭಾಗಗಳನ್ನು ಇದಕ್ಕೆ ಸೇರಿಸಲಾಗಿದೆ: 3) ಸಾರ್ವಜನಿಕ ಸಾಲ ಮತ್ತು 4) ಹಣಕಾಸಿನ ಆಡಳಿತ. ಇಂದು ಸಾರ್ವಜನಿಕ ಹಣಕಾಸಿನ ಅಭ್ಯಾಸಕ್ಕೆ ಅಧಿಕ ಮಹತ್ವವಿದೆ. ರಾಷ್ಟ್ರದ ಆರ್ಥಿಕ ಜೀವನದಲ್ಲಿ ಸಾರ್ವಜನಿಕ ಹಣಕಾಸು ಮಹತ್ವದ ಪಾತ್ರ ವಹಿಸಿದೆ. ಹತ್ತೊಂಬತ್ತನೆಯ ಶತಮಾನದ ಆದಿ ಭಾಗದಲ್ಲಿ ಸರಕಾರದ ಮುಖ್ಯ ಕರ್ತವ್ಯ ದೇಶವನ್ನು ಆಂತರಿಕ ಗಲಭೆಗಳಿಂದ ರಕ್ಷಿಸುವುದು ಮಾತ್ರ ವಾಗಿತ್ತು. ಅದಕ್ಕಾಗಿ ಪೋಲೀಸ್ ಪಡೆಯನ್ನು ಹೊಂದಿರುತ್ತಿತ್ತು. ಅಂತಹ ರಾಷ್ಟ್ರ ಗಳನ್ನು ಪೋಲೀಸ್ ರಾಷ್ಟ್ರಗಳೆಂದು ಕರೆಯುತ್ತಿದ್ದರು. ಸರಕಾರದ ವ್ಯವಹಾರಗಳನ್ನು ಒಂದು ಮಿತಿಯಲ್ಲಿಡುವ ದೃಷ್ಟಿಯಿಂದ ಈ ರಾಷ್ಟ್ರಗಳು ವ್ಯಾಪಾರದಲ್ಲಿ ತಟಸ್ಥ ನೀತಿ ಯನ್ನು ಅನುಸರಿಸುತ್ತಿದ್ದವು. ರಾಜ್ಯ ಸರಕಾರಗಳು ತಮ್ಮ ಕರ್ತವ್ಯ ನಿರ್ವಹಣೆ ವೆಚ್ಚಕ್ಕೆ ಎಷ್ಟು ಹಣಬೇಕೋ ಅಷ್ಟು ತೆರಿಗೆಯನ್ನು ಮಾತ್ರ ವಿಧಿಸುತ್ತಿದ್ದವು. ಇದರಿಂದ ವ್ಯಕ್ತಿಗಳಿಗೆ ಹೆಚ್ಚು ಲಾಭ ಪಡೆಯುವ ಅವಕಾಶವಿರುತ್ತಿತ್ತು. ಆದ್ದರಿಂದ ಹಿಂದೆ ಸಾರ್ವಜನಿಕ ಹಣಕಾಸಿನ ಅಭ್ಯಾಸಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿರಲಿಲ್ಲ. ಕೈಗಾರಿಕಾ ಕ್ರಾಂತಿಯಿಂದ ಮಾನವ ಜೀವನದಲ್ಲಿ ಬದಲಾವಣೆಗಳು ತಲೆದೋರಿವೆ. ಕಾಲ ಕ್ರಮದಲ್ಲಿ ರಾಜ್ಯ ಸರಕಾರದ ಆಡಳಿತ ಮತ್ತು ಹಣಕಾಸಿನ ವ್ಯವಹಾರಗಳು ವಿಸ್ತಾರ ಗೊಂಡವು. ಜನರ ಕಲ್ಯಾಣ ಇಂದು ರಾಷ್ಟ್ರಗಳು ಕೈಕೊಳ್ಳುವ ನಿರ್ವಹಣೆಯಲ್ಲಿ ಸೇರಿವೆ. ಹಿಂದೆ ಸಾರ್ವಜನಿಕ ಹಣಕಾಸಿನ ತತ್ವವೆಂದರೆ ಸರ್ಕಾರಿ ಕೆಲಸಕ್ಕೆ ಅಗತ್ಯವಾದ

ಹಣವನ್ನು ವಸೂಲು ಮಾಡುವುದು ; ಯುದ್ಧದ ವೆಚ್ಚಗಳಿಗೆ ಹಣ ಒದಗಿಸುವುದು ಆಗಿದ್ದಿತು. ಆದರೆ ಇಂದು ಸರ್ಕಾರದ ಕಾರ್ಯಕ್ಷೇತ್ರ ವ್ಯಾಪಕವಾಗಿ ಬೆಳೆದಿದೆ. ಇದರ ಫಲವಾಗಿ ಸಾರ್ವಜನಿಕ ಹಣಕಾಸಿನ ತತ್ವವು ಸುಖೀರಾಜ್ಯ ನಿರ್ಮಾಣದ ಒಂದು ಸಾಧನವಾಗಿದೆ. ಈ ಸಾಧನವು ಸಾಮಾಜಿಕ ಅನ್ಯಾಯಗಳನ್ನು ತಡೆಗಟ್ಟುವುದಲ್ಲದೆ, ಪೂರ್ಣ ಉದ್ಯೋಗದ ಗುರಿಯನ್ನು ಸಾಧಿಸುತ್ತದೆ. ಇದಕ್ಕಾಗಿ ರಾಷ್ಟ್ರವು ಆರ್ಥಿಕ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಗಮನ ನೀಡಬೇಕಾಗುವುದು. ಜನರ ಆರ್ಥಿಕ ಕಲ್ಯಾಣ ಉಂಟಾಗಬೇಕಾದರೆ ರಾಷ್ಟ್ರವು ಆರ್ಥಿಕಾಭಿವೃದ್ಧಿಯನ್ನು ಹೊಂದಬೇಕು. ತ್ವರಿತ ವೇಗದಲ್ಲಿ ರಾಷ್ಟ್ರವು ಅಭಿವೃದ್ಧಿ ಹೊಂದಬೇಕಾದರೆ ಲಭ್ಯವಿರುವ ಸಾಧನಸಂಪತ್ತುಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು. ದುಡಿಯಲಿಚ್ಛಿಸುವವರಿಗೆಲ್ಲ ಉದ್ಯೋಗಾವಕಾಶಗಳು ದೊರೆಯಬೇಕು. ಕಲ್ಯಾಣರಾಜ್ಯವನ್ನು ಕಟ್ಟುವ ಸರಕಾರ ನಾನಾ ಕಾರ್ಯಗಳನ್ನು ಕೈಗೊಳ್ಳಬೇಕಾಗುತ್ತದೆ. ಅವುಗಳಿಗೆಲ್ಲ ಹೆಚ್ಚಿನ ಹಣವನ್ನು ವೆಚ್ಚ ಮಾಡಬೇಕಾಗುತ್ತದೆ. ಆರ್ಥಿಕಾಭಿವೃದ್ಧಿಗಾಗಿ ಉದ್ಯೋಗಗಳನ್ನು ಕಲ್ಪಿಸಲು, ವೈದ್ಯಕೀಯ ಸೌಲಭ್ಯ, ಸಾರಿಗೆ ಸಂಪರ್ಕ ಹೀಗೆ ಹಲವಾರು ಸಾರ್ವಜನಿಕ ಕಲ್ಯಾಣ ಕಾರ್ಯಗಳಿಗೆ ಸರಕಾರ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಹಣ ಹೆಚ್ಚು ದೊರೆತಷ್ಟೂ ಹೆಚ್ಚು ಯಶಸ್ವಿಯಾಗಿ ಸರಕಾರ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯ. ಈ ಹಲವಾರು ವೆಚ್ಚ ನಿರ್ವಹಣೆಗೆ ಸರಕಾರಕ್ಕೆ ಅಧಿಕ ಆದಾಯ ಅಥವಾ ವರಮಾನ ಅವಶ್ಯಕ. ಆ ವರಮಾನವನ್ನು ನಾನಾ ಮೂಲಗಳಿಂದ ಸರಕಾರ ಪಡೆಯುವುದು.

ಸಾರ್ವಜನಿಕ ಹಣಕಾಸಿನ ಮೂಲಗಳು : ಮಾನವನು ಸುಖಸಂತೋಷಗಳಿಂದ ಜೀವನ ನಡೆಸಬೇಕಾದರೆ ಅವನಿಗೆ ಅನೇಕ ಸೌಲಭ್ಯಗಳು ಅತ್ಯವಶ್ಯಕ. ಅವು ಯಾವುವೆಂದರೆ ಆಸ್ಪತ್ರೆಗಳು, ಶಾಲಾ ಕಾಲೇಜು, ಪುಸ್ತಕ ಭಂಡಾರ, ನ್ಯಾಯಾಲಯ, ಉದ್ಯಾನವನ ಇತ್ಯಾದಿ. ಈ ಸೌಕರ್ಯಗಳು ಮಾನವನ ಜೀವನಕ್ಕೆ ಅಗತ್ಯ. ಈ ಸೌಕರ್ಯಗಳನ್ನು ಒದಗಿಸುವ ಕಾರ್ಯಗಳನ್ನು ಸರ್ಕಾರ ನಿರ್ವಹಿಸುತ್ತದೆ. ಸರಕಾರ ಜನತೆಯ ಹಿತ ಸಾಧನೆಗಾಗಿ ದುಡಿಯುವ ಒಂದು ಸಂಸ್ಥೆ. ಈ ಸೌಲಭ್ಯಗಳ ಜೊತೆಗೆ ಸುವ್ಯವಸ್ಥಿತ ರಸ್ತೆ, ಪ್ರವಾಹ, ಬೆಂಕಿ, ಕ್ಷಾಮಡಾಮರು ಹಾಗೂ ಶತ್ರುಗಳಿಂದ ಜನತೆಯನ್ನು ರಕ್ಷಿಸುವಿಕೆ ಮುಂತಾದ ಕಾರ್ಯಗಳನ್ನೂ ಸಹ ಸರಕಾರ ಕೈಗೊಳ್ಳುತ್ತದೆ. ಇದಕ್ಕಾಗಿ ಸರಕಾರ ಅಪಾರವಾದ ಹಣವನ್ನು ವೆಚ್ಚ ಮಾಡುತ್ತದೆ. ಸರಕಾರ ಈ ಹಣವನ್ನು 1) ತೆರಿಗೆ (ಕರ), 2) ಶುಲ್ಕ(ಫೀ), 3) ಸೇವಾ ಬೆಲೆಗಳು ಹಾಗೂ 4) ವಿಶಿಷ್ಟ ತೆರಿಗೆಗಳಿಂದ ಪಡೆಯುತ್ತದೆ.

ಸರಕಾರಗಳು ತಾವು ನಿರ್ವಹಿಸುವ ನಾನಾ ಕಾರ್ಯಗಳಿಗೆ ವೆಚ್ಚ ಮಾಡಲು ಆ ಹಣವನ್ನು ಸಾರ್ವಜನಿಕ ಆದಾಯ ತೆರಿಗೆ ವಿಧಿಸಿ ಪಡೆಯುತ್ತದೆ. ಇಂತಹ ತೆರಿಗೆಯನ್ನು ಎಲ್ಲ ದೇಶಗಳಲ್ಲೂ ವಸೂಲು ಮಾಡಲಾಗುತ್ತದೆ. ಆದರೆ ಇಂತಹ ಆದಾಯದ

ಉತ್ಪತ್ತಿ ಮೂಲ ಎಲ್ಲ ರಾಷ್ಟ್ರಗಳಲ್ಲೂ ಒಂದೇ ಆಗಿರುವುದಿಲ್ಲ. ಕೆಲವು ರಾಷ್ಟ್ರಗಳಲ್ಲಿ ಭೂಆಸ್ತಿಯಿಂದ ಹೆಚ್ಚು ಆದಾಯ ಬರಬಹುದು, ಇನ್ನು ಕೆಲವು ಕಡೆಗಳಲ್ಲಿ ರೈಲು, ಅಂಚೆ ಮತ್ತು ತಂತಿ ಇಲಾಖೆಗಳಿಂದ ಹೆಚ್ಚು ಆದಾಯ ಗಳಿಸಬಹುದು. ಆರ್ಥಿಕ ಪ್ರಗತಿಯನ್ನು ಹೊಂದಿರುವ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ತೆರಿಗೆಗಳ ಮೂಲಕ ಆದಾಯವನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಲಾಗುತ್ತದೆ. ಇವಲ್ಲದೆ ನೈಸರ್ಗಿಕ ಸಂಪತ್ತು, ಯುದ್ಧಕ್ಕಾಗಿ ಎತ್ತುವ ಚಂದಾಹಣ, ಸರಕಾರ ನಿತ್ಯವ್ಯವಹಾರದಲ್ಲಿ ವಿಧಿಸುವ ದಂಡಗಳಿಂದಲೂ ಸರಕಾರಕ್ಕೆ ಆದಾಯ ಬರುತ್ತದೆ. ಇವೆಲ್ಲವೂ ಸಾರ್ವಜನಿಕ ಹಣ ಕಾಸು. ಈ ಆದಾಯದಲ್ಲಿ ಸ್ಥಳೀಯ ಸಂಸ್ಥೆಗಳ ಆದಾಯವೂ ಸೇರಿದೆ.

ಆದಾಯವನ್ನು ಮುಖ್ಯವಾಗಿ ತೆರಿಗೆಯ ಆದಾಯ ಹಾಗೂ ತೆರಿಗೆಯೇತರ ಆದಾಯ ಮೂಲಗಳಿಂದ ಪಡೆಯಬಹುದು. ತೆರಿಗೆಗಳಲ್ಲಿ ಕೆಲವು ಪ್ರತ್ಯಕ್ಷ ತೆರಿಗೆಗಳು, ಮತ್ತೆ ಕೆಲವು ಪರೋಕ್ಷ ತೆರಿಗೆಗಳು. ಸರಕಾರ ಉದ್ದಿಮೆಗಳಿಂದಲೂ ಹಣಪಡೆಯುತ್ತದೆ. ಉದಾಹರಣೆಗೆ ರೈಲು, ಅಂಚೆ ಮತ್ತು ತಂತಿ, ಬ್ಯಾಂಕುಗಳು, ವಿಮಾಸಂಸ್ಥೆಗಳು. ಈ ಮೂಲಗಳಲ್ಲೆಲ್ಲ ತೆರಿಗೆಗಳು ಮುಖ್ಯ ಮೂಲಗಳು. ತೆರಿಗೆಗಳನ್ನು ವಿಧಿಸುವುದು ಹೊಸದೇನಲ್ಲ. ಎಲ್ಲ ದೇಶಗಳಲ್ಲಿಯೂ ನೂರಾರು ವರ್ಷಗಳಿಂದ ತೆರಿಗೆ ವಸೂಲಿ ಬಳಕೆಯಲ್ಲಿದೆ,

(1) **ತೆರಿಗೆ :** ತೆರಿಗೆಯನ್ನು 'ಕರ' ಎಂಬುದಾಗಿ ಕರೆಯುವುದು ರೂಢಿ. ತೆರಿಗೆ ಅಂದರೆ ಸರಕಾರ ಜನತೆಯ ಸೌಕರ್ಯಗಳಿಗಾಗಿ ವೆಚ್ಚ ಮಾಡಿದ ಹಣದ ಖರ್ಚಿಗಾಗಿ ವಸೂಲು ಮಾಡುವ ಹಣ ಅಥವಾ ವ್ಯಕ್ತಿಗಳ ಹಾಗೂ ಸಂಸ್ಥೆಗಳ ಆಸ್ತಿ ಪಾಸ್ತಿಗಳ ಮತ್ತು ವರಮಾನಗಳ ಮೇಲೆ ಸರಕಾರ ಕಡ್ಡಾಯವಾಗಿ ವಿಧಿಸುವ ಹಣ. ಅಂದರೆ ತೆರಿಗೆಯು ಸರಕಾರ ತನ್ನ ಆಡಳಿತಕ್ಕೆ ಒಳಪಟ್ಟ ಪ್ರಜೆಗಳಿಂದ ಕಡ್ಡಾಯವಾಗಿ ಸಂಗ್ರಹಿಸುವ ಹಣ. ಸರ್ಕಾರದಿಂದ ವಿಧಿಸಲ್ಪಟ್ಟು ಕಡ್ಡಾಯವಾಗಿ ಕೊಡಲೇ ಬೇಕಾದ, ಆ ರೀತಿ ಕೊಟ್ಟ ಹಣಕ್ಕೆ ನೇರ ಉಪಯೋಗವಿಲ್ಲದ ಹಣವೇ ತೆರಿಗೆ. ತೆರಿಗೆಗಳನ್ನು ವಿಧಿಸುವ ಹಕ್ಕು ಸರ್ಕಾರಕ್ಕೆ ಮಾತ್ರ ಇರುತ್ತದೆ. ತಾನು ವಿಧಿಸಿದ ತೆರಿಗೆಯನ್ನು ಕೊಡದಿದ್ದವರ ಮೇಲೆ ಕ್ರಮ ಕೈಗೊಳ್ಳುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ. ತೆರಿಗೆಯನ್ನು ಕೊಟ್ಟವರು ಸರ್ಕಾರದಿಂದ ಯಾವುದೇ ಬಗೆಯ ಪ್ರತಿಫಲವನ್ನು ಅಪೇಕ್ಷಿಸ ಬಾರದು. ಸರ್ಕಾರ ಈ ರೀತಿ ಪಡೆದ ಹಣವನ್ನು ಎಲ್ಲರ ಹಿತಕ್ಕಾಗಿ ವೆಚ್ಚ ಮಾಡುತ್ತದೆ. ಆದರೆ ತೆರಿಗೆ ಕೊಟ್ಟವರಿಗೆ ಯಾವ ಬಗೆಯ ನೇರವಾದ ವಿಶೇಷ ಪ್ರತಿ ಫಲವೂ ಸರ್ಕಾರದಿಂದ ಸಿಗುವುದಿಲ್ಲ. ಟಾಸಿಗ್ ಪ್ರಕಾರ ತೆರಿಗೆ ಕೊಡುವವನಿಗೆ ಮತ್ತು ಸಾರ್ವಜನಿಕ ಅಧಿಕಾರಿಗೆ ಯಾವ ನೇರವಾದ ಪ್ರತಿಫಲವಿಲ್ಲದಿರುವುದೇ ತೆರಿಗೆಯನ್ನು ಇತರ ಶುಲ್ಕಗಳಿಂದ ಬೇರೆ ಮಾಡುವ ಮುಖ್ಯ ಅಂಶ. ಸರಕಾರ ತನ್ನ ಸಾರ್ವಜನಿಕ ವೆಚ್ಚ ಗಳಿಗೆ ಎಲ್ಲರ ಹಿತಕ್ಕಾಗಿ ಕೈಗೊಳ್ಳುವ ಕಾರ್ಯಗಳಿಗೆ ಬೇಕಾದಷ್ಟು ಹಣವನ್ನು 'ತೆರಿಗೆ'ಯ

ರೂಪದಲ್ಲಿ ಪಡೆಯುತ್ತದೆ. ತೆರಿಗೆ ಹಣದ ಪ್ರಮಾಣಕ್ಕೆ ಅನುಗುಣವಾಗಿ ಸರ್ಕಾರವು ಜನರಿಗೆ ಅನುಕೂಲವನ್ನು ಕಲ್ಪಿಸಿ ಕೊಡಬೇಕೆಂಬ ನಿಯಮವೇನೂ ಇಲ್ಲ. ಸರ್ಕಾರವು ಪ್ರಜೆಗಳಿಗೆ ಸೌಲಭ್ಯಗಳನ್ನು ಒದಗಿಸುವ ಒಂದೇ ದೃಷ್ಟಿಯಿಂದ ತೆರಿಗೆಗಳನ್ನು ಹೇರುವುದಿಲ್ಲ. ಜನರ ರೀತಿ ನೀತಿಗಳನ್ನು ಬದಲಾಯಿಸಲೂ ತೆರಿಗೆಗಳನ್ನು ಹೇರುತ್ತದೆ. ಕೆಲವು ಪದಾರ್ಥಗಳು ಮಾನಸಿಕ ಹಾಗೂ ಆರೋಗ್ಯ ದೃಷ್ಟಿಯಿಂದ ಕೇಡೆಂಬುದಾಗಿ ಕಂಡುಬಂದಲ್ಲಿ ಅಂತಹ ಪದಾರ್ಥಗಳ ಮೇಲೆ ಹತೋಟಿಯನ್ನಿಡಲು ತೆರಿಗೆಗಳನ್ನು ವಿಧಿಸುವುದುಂಟು. ಉದಾಹರಣೆಗೆ ಮಾದಕದ್ರವ್ಯಗಳನ್ನು ಹೆಚ್ಚಾಗಿ ಸೇವಿಸುವುದು ಅಪಾಯಂಕರ. ಸರ್ಕಾರ ಇವುಗಳ ಮಾರಾಟವನ್ನು ಹತೋಟಿಯಲ್ಲಿಡಲು ಹೆಚ್ಚು ತೆರಿಗೆ ಗಳನ್ನು ವಿಧಿಸುತ್ತದೆ. ವಿದೇಶಿ ವಸ್ತುಗಳ ಮೇಲೆ ತೆರಿಗೆ ಹಾಕಿ ಸ್ವದೇಶಿ ವಸ್ತುಗಳಿಗೆ ಪ್ರೋತ್ಸಾಹ ನೀಡುತ್ತದೆ. ಶ್ರೀಮಂತರಿಂದ ಹೆಚ್ಚಿನ ತೆರಿಗೆಗಳನ್ನು ವಸೂಲಿ ಮಾಡಿ ಆ ಹಣವನ್ನು ಬಡ ಜನರ ಕಲ್ಯಾಣಕ್ಕೆ ವೆಚ್ಚ ಮಾಡುತ್ತದೆ. ತೆರಿಗೆ ಹಾಕಿ ಆದಾಯದಲ್ಲಿ ಕಂಡುಬರುವ ಅಂತರವನ್ನು ಕಡಮೆ ಮಾಡಲಾಗುತ್ತದೆ. ಅಂದರೆ ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆಯನ್ನು ಹೇರಿ ಬಡವರ ಮೇಲೆ ಕಡಮೆ ತೆರಿಗೆಯನ್ನು ಹಾಕಿದರೆ ಕೆಲವೇ ಜನರ ಬಳಿ ಹಣ ಕೇಂದ್ರೀಕೃತವಾಗುವುದು ತಪ್ಪುತ್ತದೆ. ಈ ರೀತಿ ಧನಿಕರಿಗೆ ಮತ್ತು ಬಡವರಿಗೆ ಇರುವ ಅಂತರವನ್ನು ತೊಡೆದುಹಾಕಿ ಸಮಾಜ ಸುಧಾರಣೆಯ ಪ್ರಯತ್ನ ವನ್ನು ಸಾಧಿಸುವುದು ತೆರಿಗೆಯ ಒಂದು ಉದ್ದೇಶ. ತೆರಿಗೆಯನ್ನು ಸಲ್ಲಿಸುವುದು ಪ್ರಜೆಗಳ ಕರ್ತವ್ಯ. ವಿಧಿಸಿದ ತೆರಿಗೆಯನ್ನು ಕೊಡದೆ ತಪ್ಪಿಸಿಕೊಂಡವರನ್ನು ಶಿಕ್ಷಿಸುವ ಅಧಿಕಾರವನ್ನು ಸರ್ಕಾರ ಪಡೆದಿದೆ.

ತೆರಿಗೆಗಳ ಬಗೆಗಳು : ತೆರಿಗೆಗಳನ್ನು ಮುಖ್ಯವಾಗಿ (i) ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳು, (ii) ಸಮ ಪ್ರಮಾಣದ ಹಾಗೂ ಪ್ರಗತಿಪರ ತೆರಿಗೆಗಳು ಹಾಗೂ (iii) ಪ್ರತಿಗಾಮಿ ತೆರಿಗೆ ಮತ್ತು ಅವನತಿ ತೆರಿಗೆಗಳೆಂದು ಮೂರು ಭಾಗಗಳಾಗಿ ವಿಂಗಡಿಸಬಹುದು.

(i) **ಪ್ರತ್ಯಕ್ಷ ತೆರಿಗೆ :** ಪ್ರತ್ಯಕ್ಷ ತೆರಿಗೆಯಲ್ಲಿ ತೆರಿಗೆ ಕೊಡುವವನು ತನ್ನ ಹೊರೆಯನ್ನು ಇತರರಿಗೆ ವರ್ಗಾಯಿಸದೆ ತಾನೇ ತೆತ್ತರೆ ಅಂತಹ ತೆರಿಗೆ ಪ್ರತ್ಯಕ್ಷ ತೆರಿಗೆ. ಅಂದರೆ ತೆರಿಗೆಯನ್ನು ಯಾರ ಮೇಲೆ ವಿಧಿಸಲಾಗಿದೆಯೋ ಅವರೇ ಆ ಭಾರವನ್ನು ಹೊರುತ್ತಾರೆ. ಉದಾಹರಣೆಗೆ ವರಮಾನ ತೆರಿಗೆ, ಆಸ್ತಿ ಮೇಲಿನ ತೆರಿಗೆ ಇತ್ಯಾದಿ. ಈ ತೆರಿಗೆಯ ಭಾರವನ್ನು ಇತರರಿಗೆ ವರ್ಗಾಯಿಸಲು ಆಗುವುದಿಲ್ಲ.

(ii) **ಪರೋಕ್ಷ ತೆರಿಗೆ :** ತೆರಿಗೆಯ ಭಾರವನ್ನು ಇತರರಿಗೆ ವರ್ಗಾಯಿಸು ವಂತಿದ್ದರೆ ಅಂತಹ ತೆರಿಗೆ ಪರೋಕ್ಷ ತೆರಿಗೆಯಾಗುತ್ತದೆ. ಅಂದರೆ ಒಬ್ಬನ ಮೇಲೆ ತೆರಿಗೆಯನ್ನು ವಿಧಿಸಿದಾಗ ಅದನ್ನು ಕೊಡುವ ಜವಾಬ್ದಾರಿ ಅವನದಾದರೂ ಆ

ತೆರಿಗೆಯ ಹಣವನ್ನು ಮತ್ತೊಬ್ಬರಿಂದ ತೆಗೆದುಕೊಳ್ಳುವ ಸಾಧ್ಯತೆಯಿರುತ್ತದೆ. ತೆರಿಗೆಯ ಭಾರವನ್ನು ಮತ್ತೊಬ್ಬರಿಗೆ ವರ್ಗಾಯಿಸಿ ಅವರಿಂದ ಹಣ ಪಡೆದು ಸರಕಾರಕ್ಕೆ ಸಂದಾಯವಾಗುವುದು ಪರೋಕ್ಷ ಅಥವಾ ಅಪ್ರತ್ಯಕ್ಷ ತೆರಿಗೆ. ಉದಾಹರಣೆಗೆ ಮಾರಾಟ ತೆರಿಗೆ, ಮನರಂಜನೆ ತೆರಿಗೆ, ವಸ್ತುಗಳ ಮೇಲಿನ ಎಕ್ಸೈಜ್ ತೆರಿಗೆ ಇತ್ಯಾದಿ. ವಸ್ತುವಿನ ಮೇಲಿನ ಮಾರಾಟ ತೆರಿಗೆಗೆ ಆ ವಸ್ತುವನ್ನು ಮಾರಾಟ ಮಾಡುವವರ ಮೇಲೆ ತೆರಿಗೆಯನ್ನು ಹೇರಲಾಗುತ್ತದೆ. ಆದರೆ ಅವರು ಅದನ್ನು ಸ್ವತಃ ಕೊಡುವುದಿಲ್ಲ. ವಸ್ತುಗಳನ್ನು ಕೊಳ್ಳುವವರಿಂದ ವಸೂಲು ಮಾಡುತ್ತಾರೆ. ಮನೋರಂಜನ ತೆರಿಗೆಯನ್ನು ಚಿತ್ರಮಂದಿರದ ಮಾಲೀಕರ ಮೇಲೆ ಹಾಕಲಾಗಿರುತ್ತದೆ. ಆದರೆ ಚಿತ್ರಮಂದಿರದ ಯಜಮಾನ ಈ ತೆರಿಗೆಯ ಹೊರೆಯನ್ನು ಚಿತ್ರ ಪ್ರದರ್ಶನವನ್ನು ವೀಕ್ಷಿಸುವ ಜನರಿಂದ ವಸೂಲು ಮಾಡುತ್ತಾನೆ. ಅಂದರೆ ಟಿಕೇಟಿನ ಬೆಲೆಯಲ್ಲಿ ಮನರಂಜನಾ ತೆರಿಗೆಯನ್ನು ಸೇರಿಸಿ ಮಾರಾಟ ಮಾಡುತ್ತಾನೆ.

ಪ್ರತಿಯೊಂದು ದೇಶದ ತೆರಿಗೆ ಪದ್ಧತಿಯಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷ ತೆರಿಗೆಗಳು ಇದ್ದೇ ಇರುತ್ತವೆ. ಪ್ರತ್ಯಕ್ಷ ತೆರಿಗೆಗಳ ಭಾರವು ಧನಿಕರ ಮೇಲೆ ಬೀಳುತ್ತದೆ. ಪರೋಕ್ಷ ತೆರಿಗೆಗಳು ಪ್ರತ್ಯಕ್ಷ ತೆರಿಗೆಗಳಿಗೆ ಪೂರಕವಾಗಿವೆ.

ಸಮಪ್ರಮಾಣ (ಪ್ರಮಾಣಾನುಗುಣ) ತೆರಿಗೆ : ಎಲ್ಲ ವ್ಯಕ್ತಿಗಳ ಆದಾಯದ ಮೇಲೆ ಒಂದೇ ಪ್ರಮಾಣದ ತೆರಿಗೆಯನ್ನು ವಿಧಿಸಿದರೆ ಅಂತಹ ತೆರಿಗೆಗಳನ್ನು ಸಮಪ್ರಮಾಣ ಅಥವಾ ಪ್ರಮಾಣಾನುಗುಣ ತೆರಿಗೆಗಳು ಎಂದು ಕರೆಯುತ್ತಾರೆ. ಅಂದರೆ ವರಮಾನದ ಪ್ರಮಾಣ ಎಷ್ಟೇ ಇದ್ದರೂ ತೆರಿಗೆಯ ದರ ಮಾತ್ರ ಒಂದೇ ಸಮವಾಗಿರುತ್ತದೆ. ಈ ತೆರಿಗೆಗಳು ಬಹಳ ಸರಳವಾಗಿರುತ್ತವೆ. ಈ ಪದ್ಧತಿಯಲ್ಲಿ ಶ್ರೀಮಂತರು ಬಡವರಿಗಿಂತಲೂ ಹೆಚ್ಚಿನ ತೆರಿಗೆಯನ್ನು ಕೊಡುತ್ತಾರೆ. ಆದಾಯ ತೆರಿಗೆಯನ್ನು ಶೇಕಡಾ 1 ಎಂದು ನಿಗದಿ ಮಾಡಿದಲ್ಲಿ 500 ರೂಪಾಯಿ ಸಂಬಳ ಬರುವವನು ವರ್ಷಕ್ಕೆ 60 ರೂಪಾಯಿಗಳ ತೆರಿಗೆ ಕೊಡಬೇಕಾಗುತ್ತದೆ. ತಿಂಗಳಿಗೆ 100 ರೂಪಾಯಿ ಸಂಬಳ ಬರುವವನು ವರ್ಷಕ್ಕೆ 12 ರೂಪಾಯಿಗಳ ತೆರಿಗೆ ಕೊಡಬೇಕಾಗುತ್ತದೆ. ಇದರಿಂದ ಹೆಚ್ಚು ಸಂಬಳ ಪಡೆಯುವವನು ಹೆಚ್ಚು ತೆರಿಗೆಯನ್ನೂ, ಕಡಮೆ ಸಂಬಳ ಪಡೆಯುವವನು ಕಡಮೆ ತೆರಿಗೆಯನ್ನೂ ಕೊಡುತ್ತಾನೆ. ಆದಾಗ್ಯೂ ಇಂತಹ ತೆರಿಗೆಗಳು ಬಡವರ ಮೇಲೆ ಹೆಚ್ಚಿನ ಭಾರ ಹೇರುತ್ತವೆ. ಸಂಪತ್ತಿನ ನ್ಯಾಯವಾದ ಹಂಚಿಕೆಗೆ ಇಂತಹ ತೆರಿಗೆಗಳು ಭಂಗ ತರುತ್ತವೆ. ವೆಚ್ಚ ಬಾಬುಗಳು ಬೆಳೆಯುತ್ತಿರುವ ದಿನಗಳಲ್ಲಿ ಸರ್ಕಾರಕ್ಕೆ ಬೃಹತ್ ಪ್ರಮಾಣದಲ್ಲಿ ಹಣದ ಅವಶ್ಯಕತೆ ಇದೆ. ಸಮಪ್ರಮಾಣದ ತೆರಿಗೆಗಳಿಂದ ಸಾಕಷ್ಟು ಆದಾಯ ಸರ್ಕಾರಕ್ಕೆ ದೊರೆಯುವುದಿಲ್ಲ. ಅದ್ದರಿಂದ ಆಧುನಿಕ ತೆರಿಗೆಯ ಪದ್ಧತಿಯಲ್ಲಿ ಸಮಪ್ರಮಾಣ ತೆರಿಗೆಗಳಿಗೆ ಅಧಿಕ ಮಹತ್ವ ನೀಡಿಲ್ಲ.

ಪ್ರಗತಿಪರ ತೆರಿಗೆಗಳು : ಆದಾಯ ಹೆಚ್ಚಿದಂತೆ ತೆರಿಗೆಯ ದರ ಪ್ರತಿಶತ, ಹೆಚ್ಚುತ್ತ ಹೋದರೆ ಅಂತಹ ತೆರಿಗೆಗಳು 'ಪ್ರಗತಿಪರ ತೆರಿಗೆ'ಗಳು. ಈ ಬಗೆಯ ತೆರಿಗೆಯನ್ನು ಶ್ರೀಮಂತರು ಹೆಚ್ಚಿನ ಪ್ರಮಾಣದಲ್ಲಿಯೂ, ಸಾಮಾನ್ಯರು ಕಡಮೆ ಪ್ರಮಾಣದಲ್ಲಿಯೂ ಸರ್ಕಾರಕ್ಕೆ ಸಲ್ಲಿಸುತ್ತಾರೆ. ನಿರ್ದಿಷ್ಟ ಆದಾಯದ ಮಟ್ಟಕ್ಕಿಂತ ಕಡಮೆ ವರಮಾನವುಳ್ಳ ವ್ಯಕ್ತಿಗಳಿಗೆ ಪ್ರಗತಿಪರ ತೆರಿಗೆಗಳಿಂದ ರಿಯಾಯಿತಿ ಕೊಡಲಾಗಿದೆ. ಪ್ರಗತಿಪರ ತೆರಿಗೆಗಳ ಹೊರೆ ಸಾಮಾನ್ಯಜನರ ಮೇಲೆ ಕಡಮೆ ಬಿದ್ದು ಶ್ರೀಮಂತರ ಮೇಲೆ ಹೆಚ್ಚು ಬೀಳುತ್ತದೆ. ಹೆಚ್ಚು ಆಸ್ತಿ ಹೊಂದಿರುವ ಶ್ರೀಮಂತರು ಹೆಚ್ಚಿನ ತೆರಿಗೆಯನ್ನು ಕೊಡುವ ಶಕ್ತಿ ಪಡೆದಿರುತ್ತಾರೆ. ಉದಾಹರಣೆಗಾಗಿ ವರಮಾನ ತೆರಿಗೆಯಲ್ಲಿ ಮೊದಲನೆಯ 8000 ರೂಪಾಯಿಗಳಿಗೆ ವಿನಾಯಿತಿ ಕೊಡಲಾಗಿರುತ್ತದೆ. 8000 ರೂಪಾಯಿಗಳಿಗಿಂತ ಕಡಮೆ ವರಮಾನ ಪಡೆದವರು ತೆರಿಗೆಯನ್ನು ಕೊಡಬೇಕಾಗಿಲ್ಲ. ನಂತರ ತೆರಿಗೆ ದರವು ಆದಾಯ ಏರಿದಂತೆ ಏರುತ್ತ ಹೋಗುತ್ತದೆ. ಇದು ಪ್ರಗತಿಪರ ತೆರಿಗೆ. ಈ ತೆರಿಗೆ ಸಂಪತ್ತಿನ ಸಮ ಹಂಚಿಕೆಯನ್ನು ಸಾಧಿಸುವಲ್ಲಿ ಒಂದು ಮುಖ್ಯ ಸಾಧನ. ಐಶ್ವರ್ಯ ಹೊಂದಿರುವವರಿಂದ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಪಡೆದು ಆ ಹಣವನ್ನು ಜನಸಾಮಾನ್ಯರ ದೀನದಲಿತರ ಹಿತಕ್ಕಾಗಿ ಬಳಸುವುದು ಈ ತೆರಿಗೆಯಿಂದ ಸಾಧ್ಯ. ಈ ತೆರಿಗೆಯಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ದೊರೆಯುತ್ತದೆ. ಅಲ್ಲದೆ ದೊಡ್ಡ ಪ್ರಮಾಣದಲ್ಲಿ ಹಾಕಿದ ತೆರಿಗೆಯನ್ನು ವಸೂಲು ಮಾಡುವಾಗ ಹೆಚ್ಚು ಹಣ ವೆಚ್ಚ ಮಾಡಬೇಕಾಗುವುದಿಲ್ಲ. ಏಕೆಂದರೆ ಅವುಗಳನ್ನು ಕಡಮೆ ಸಂಖ್ಯೆ ಮೂಲಗಳಿಂದ ವಸೂಲು ಮಾಡಲಾಗುವುದು. ಆದ್ದರಿಂದ ಪ್ರಗತಿದಾಯಕ ತೆರಿಗೆಗಳನ್ನು ಒಳ್ಳೆಯ ತೆರಿಗೆಗಳೆಂದು ಭಾವಿಸಲಾಗಿದೆ. ಭಾರತದಲ್ಲಿ ಆದಾಯ ತೆರಿಗೆ ಪ್ರಗತಿದಾಯಕ ತೆರಿಗೆಯಾಗಿದ್ದು ಒಳ್ಳೆಯ ತೆರಿಗೆ ಎಂಬುದಕ್ಕೆ ಒಂದು ನಿದರ್ಶನವಾಗಿದೆ. ಆದರೆ ಈ ಪದ್ಧತಿಯೂ ಸಹ ನ್ಯೂನತೆಗಳಿಂದ ವಿಮುಕ್ತವಾಗಿಲ್ಲ. ಈ ಪದ್ಧತಿಯು ನಿರಂಕುಶ ಪ್ರಾಯವಾದುದು ಎಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಸಮಾಜದ ಕಲ್ಯಾಣ ಅಥವಾ ಹಿತವನ್ನು ನಿರ್ದಿಷ್ಟವಾಗಿ ಅಳೆಯಲು ಆಗುವುದಿಲ್ಲ. ಆದ್ದರಿಂದ ಈ ಪದ್ಧತಿಯು ಸಮಾಜದ ಕಲ್ಯಾಣವನ್ನು ಹೆಚ್ಚಿಸುತ್ತದೆ ಎನ್ನುವುದು ಸರಿಯಲ್ಲ. ಈ ಪದ್ಧತಿಯಲ್ಲಿ ಜನರು ತೆರಿಗೆಯನ್ನು ಕೊಡದೆ ತಪ್ಪಿಸಿಕೊಳ್ಳುವುದಕ್ಕೆ ಬಹಳ ಅವಕಾಶವಿದೆ. ಆದರೆ ಎಷ್ಟೇ ನ್ಯೂನತೆಗಳಿದ್ದರೂ ಈ ಪದ್ಧತಿಯೂ ಸರಳ ಮತ್ತು ಮಿತವ್ಯಯದಿಂದ ಕೂಡಿದುದು ಎನ್ನುವುದನ್ನು ಅಲ್ಲಗಳೆಯಲಾಗದು. ಆದ್ದರಿಂದ ಎಲ್ಲ ದೃಷ್ಟಿಗಳಿಂದಲೂ ಇದು ಇತರ ತೆರಿಗೆ ಪದ್ಧತಿಗಳಿಗಿಂತ ಉತ್ತಮವಾದುದು.

ಪ್ರತಿಗಾಮಿ ತೆರಿಗೆ : ಈ ಪದ್ಧತಿ ಪ್ರಗತಿಪರ ತೆರಿಗೆಗೆ ವಿರುದ್ಧವಾಗಿದೆ. ತೆರಿಗೆಯ ಭಾರವು ಶ್ರೀಮಂತರಿಗಿಂತ ಬಡವರ ಮೇಲೆ ಹೆಚ್ಚು ಬೀಳುತ್ತಿದ್ದರೆ ಅಂತಹ ತೆರಿಗೆ ಪ್ರತಿಗಾಮಿತೆರಿಗೆ. ಈ ಪದ್ಧತಿಯಲ್ಲಿ ಜನರ ವರಮಾನದ ಪ್ರಮಾಣವು

ಅಧಿಕಗೊಂಡಂತೆಲ್ಲ ತೆರಿಗೆದರ ಕಡಮೆಯಾಗುತ್ತ ಹೋಗುತ್ತದೆ. ಅನೇಕ ರಾಷ್ಟ್ರಗಳಲ್ಲಿ ಬಡವರ ಸಂಖ್ಯೆ ಹೆಚ್ಚಿರುವುದರಿಂದ ಪ್ರತಿಗಾಮಿ ತೆರಿಗೆ ವಿಧಿಸುವುದರಿಂದ ಅವರಿಗೆ ತೊಂದರೆಯಾಗುತ್ತದೆ. ಆದರೆ ಸರಕಾರಕ್ಕೆ ಹೆಚ್ಚಿನ ಆದಾಯ ಬರುವುದುಂಟು. ಆಧುನಿಕ ಯುಗದಲ್ಲಿ ಯಾವ ರಾಷ್ಟ್ರವೂ ಸಹ ಇಂತಹ ತೆರಿಗೆಯನ್ನು ವಿಧಿಸಲು ಬಯಸುವುದಿಲ್ಲ. ಏಕೆಂದರೆ ಇದು ನ್ಯಾಯವಾದ ತೆರಿಗೆ ಪದ್ಧತಿಯಲ್ಲ. ಕಡಮೆ ಆದಾಯವನ್ನು ಹೊಂದಿರುವವರು ಹೆಚ್ಚಿನ ದರದ ತೆರಿಗೆಯನ್ನು ಹೆಚ್ಚು ಆದಾಯ ಉಳ್ಳವರು ಕಡಮೆ ದರದಲ್ಲಿ ತೆರಿಗೆಗಳನ್ನು ಕೊಟ್ಟರೆ ಅದು ಪ್ರತಿಗಾಮಿ ತೆರಿಗೆ. ತೆರಿಗೆಯು ಹೆಚ್ಚಳವು ಆದಾಯ ಹೆಚ್ಚಳದ ಪ್ರಮಾಣಕ್ಕ ನುಗಣವಾಗಿಲ್ಲದಾಗ ಅದು ಪ್ರತಿಗಾಮಿ ತೆರಿಗೆ.

ಅವನತಿ ತೆರಿಗೆ : ಶ್ರೀಮಂತರ ಮೇಲೆ ವಿಧಿಸುವ ತೆರಿಗೆಯು ಭಾರ ಅವರ ತೆರಿಗೆ ಕೊಡುವ ಶಕ್ತಿಗಿಂತಲೂ ಕಡಮೆ ಪ್ರಮಾಣದಲ್ಲಿದ್ದರೆ ಅದು ಅವನತಿ ತೆರಿಗೆ. ಈ ಪದ್ಧತಿಯಲ್ಲಿ ವರಮಾನದ ಪ್ರಮಾಣ ಅಧಿಕಗೊಂಡಂತೆ ತೆರಿಗೆಯ ದರ ವರಮಾನದ ಪ್ರಮಾಣಕ್ಕನುಗುಣವಾಗಿ ಏರುವುದಿಲ್ಲ. ಅಂದರೆ ಒಂದು ಮಟ್ಟದವರಿಗೆ ತೆರಿಗೆ ದರವು ಹೆಚ್ಚುತ್ತ ಹೋಗಿ ಮತ್ತೆ ಅದೇ ಮಟ್ಟದಲ್ಲಿ ಉಳಿಯುತ್ತದೆ.

ಸರಕಾರ ತೆರಿಗೆಯಲ್ಲದೆ ಮತ್ತೆ ಕೆಲವು ಮೂಲಗಳಿಂದಲೂ ಆದಾಯವನ್ನು ಪಡೆಯುತ್ತದೆ.

1. **ಶುಲ್ಕ :** ಕೆಲವು ವ್ಯಕ್ತಿಗಳ ಅನುಕೂಲಕ್ಕಾಗಿ ಸರ್ಕಾರವು ಕೈಗೊಳ್ಳುವ ವಿಶೇಷ ಸೇವೆಗೆಂದು ಜನರು ಹಣ ಕೊಡಬೇಕಾಗುತ್ತದೆ. ಅಂದರೆ ಸರ್ಕಾರದಿಂದ ಸೇವೆಯನ್ನು ನೇರವಾಗಿ ಪಡೆಯುವವರು ತಾವು ಪಡೆದ ಸೇವೆಗಾಗಿ ಸರ್ಕಾರಕ್ಕೆ ಸಂಭಾವನೆಯನ್ನು ನೀಡುತ್ತಾರೆ. ಇಂತಹ ಸಂಭಾವನೆಗೆ ಫೀ ಅಥವಾ ಶುಲ್ಕ ಎಂಬುದಾಗಿ ಕರೆಯುತ್ತಾರೆ. ಉದಾಹರಣೆಗೆ ವಿದ್ಯಾಸಂಸ್ಥೆಗಳಾದ ಸ್ಕೂಲು, ಕಾಲೇಜುಗಳಲ್ಲಿ ವಿದ್ಯಾಭ್ಯಾಸವನ್ನು ಪಡೆಯುತಕ್ಕಂತಹವರು ಫೀಯನ್ನು ಸಲ್ಲಿಸಬೇಕಾಗುತ್ತದೆ. ಇದ ರಂತೆಯೇ ನ್ಯಾಯಾಲಯಗಳಲ್ಲಿ ನ್ಯಾಯವನ್ನು ಪಡೆಯಬಯಸುವವರು ಕೋರ್ಟ್ ಫೀ ಕೊಡಬೇಕಾಗುತ್ತದೆ. ಸರ್ಕಾರದಿಂದ ಲೈಸೆನ್ಸ್ ಪಡೆಯಲು ಲೈಸೆನ್ಸ್ ಫೀಯನ್ನು ಕೊಡಬೇಕಾಗುತ್ತದೆ. ಶುಲ್ಕಕ್ಕೆ ಮತ್ತು ತೆರಿಗೆಗೆ ವ್ಯತ್ಯಾಸವಿದೆ. ಶುಲ್ಕ ಕೊಡುವವರು ಸರ್ಕಾರದಿಂದ ವಿಶೇಷ ಸೌಲಭ್ಯಗಳನ್ನು ಪಡೆಯುತ್ತಾರೆ. ಆದರೆ ತೆರಿಗೆ ಕೊಡುವವರು ಸರ್ಕಾರದಿಂದ ಸಾಧಾರಣ ಸೌಲಭ್ಯಗಳನ್ನು ಪಡೆಯುತ್ತಾರೆ. ಅಲ್ಲದೆ, ಫೀನಲ್ಲಿ ನಾವು ಕೊಡುವ ಸಂಭಾವನೆಗೆ ನೇರವಾದ ಪ್ರತಿಫಲ ಉಂಟು. ಆದರೆ ತೆರಿಗೆಯಲ್ಲಿ ನೇರವಾದ ಪ್ರತಿಫಲವಿಲ್ಲ.

2. **ಸೇವಾ ಬೆಲೆಗಳು :** ಸರಕುಗಳು ಸೇವೆಗಳನ್ನು ಮಾರುವುದರ ಮೂಲಕ ಸರ್ಕಾರವು ಪಡೆಯುವ ಆದಾಯವೇ ಬೆಲೆ. ಸರಕಾರ ಒದಗಿಸುವ ಸೇವೆಯನ್ನು

ಪಡೆಯಲು ಇಚ್ಛಿಸುವವರು ಆ ಸೇವೆಗೆ ಬೆಲೆಯನ್ನು ಸಲ್ಲಿಸಬೇಕಾಗುತ್ತದೆ. ಸರಕಾರ ರೈಲು ಉದ್ಯಮವನ್ನು ನಡೆಸುತ್ತದೆ. ರೈಲುಗಳಲ್ಲಿ ಪ್ರಯಾಣಮಾಡುವವರು ಟಿಕೆಟ್ ಕೊಂಡು ಹಣವನ್ನು ಪಾವತಿ ಮಾಡಬೇಕು. ತೆರಿಗೆಯಂತೆ ಬೆಲೆಗಳು ಕಡ್ಡಾಯವಾದ ವಸೂಲಿಗಳಲ್ಲ. ಅಂದರೆ ಈ ಬೆಲೆಯನ್ನು ಎಲ್ಲರೂ ಕೊಡಬೇಕಾಗಿಲ್ಲ. ರೈಲುಗಳಲ್ಲಿ ಪ್ರಯಾಣಮಾಡುವವರು ಟಿಕೆಟ್ ಕೊಂಡು ಹಣವನ್ನು ಪಾವತಿಮಾಡಬೇಕು. ತೆರಿಗೆಯಂತೆ ಬೆಲೆಗಳು ಕಡ್ಡಾಯವಾದ ವಸೂಲಿಗಳಲ್ಲ. ಅಂದರೆ ಈ ಬೆಲೆಯನ್ನು ಎಲ್ಲರೂ ಕೊಡಬೇಕಾಗಿಲ್ಲ. ರೈಲುಗಳಲ್ಲಿ ಪ್ರಯಾಣಮಾಡಿ ಅದರ ಸೇವೆಯನ್ನು ಪಡೆಯುವವರು ಮಾತ್ರ ಬೆಲೆಯನ್ನು ಸಲ್ಲಿಸುತ್ತಾರೆ. ಇಲ್ಲಿಯೂ ಸಹ ನೀಡುವ ಬೆಲೆಗೆ ನೇರವಾದ ಪ್ರತಿಫಲ ಉಂಟು. ಇಲ್ಲಿ ವಸೂಲಿ ಮಾಡುವ ಬೆಲೆಗಳಿಗಿಂತ ನೀಡಲಾಗುವ ಸೇವೆಯು ಮಹತ್ವದ್ದು.

3. **ವಿಶಿಷ್ಟ ತೆರಿಗೆಗಳು :** ಸರ್ಕಾರವು ಕೆಲವು ವೇಳೆ ಒಂದು ಪ್ರದೇಶದ ಜನರಿಗೆ ವಿಶಿಷ್ಟ ಸೌಲಭ್ಯಗಳನ್ನು ಒದಗಿಸುವುದು. ಉದಾ, ನೀರಾವರಿ ಕಾಲುವೆಗಳನ್ನು, ರಸ್ತೆಗಳನ್ನು ನಿರ್ಮಿಸುವುದು. ಇದಕ್ಕಾಗಿ ಹಣವನ್ನು ಸರ್ಕಾರ ವೆಚ್ಚಮಾಡುವುದು. ಈ ಹಣದ ಸ್ವಲ್ಪಭಾಗವನ್ನು ಆಯಾ ಪ್ರದೇಶದ ಜನಗಳಿಂದ ವಸೂಲು ಮಾಡುತ್ತದೆ. ಅಂದರೆ ಈ ಸೌಲಭ್ಯಗಳನ್ನು ಪಡೆಯುವ ಜನರು ವಿಶಿಷ್ಟ ತೆರಿಗೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗುತ್ತದೆ. ಅಲ್ಲಿ ವಾಸಿಸುವರೆಲ್ಲರೂ ಈ ಬಗೆಯ ತೆರಿಗೆಗಳನ್ನು ಕಡ್ಡಾಯವಾಗಿ ಕೊಡಬೇಕು.

ತೆರಿಗೆ ಹಾಗೂ ವಿಶಿಷ್ಟ ತೆರಿಗೆಗಳನ್ನು ಪ್ರತಿಯೊಬ್ಬರೂ ಕೊಡಬೇಕೆಂಬ ಕಡ್ಡಾಯವಿದ್ದರೆ, ಫೀ ಮತ್ತು ಬೆಲೆಗಳನ್ನು ಎಲ್ಲರೂ ಕೊಡಲೇಬೇಕೆಂಬ ಕಡ್ಡಾಯವಿಲ್ಲ. ಫೀ ಮತ್ತು ಬೆಲೆಗಳಿಂದ ನೇರವಾಗಿ ಪ್ರತಿಫಲ ಪಡೆದಂತವರು ಮಾತ್ರ ಕೊಡಬೇಕು.

ತೆರಿಗೆಯ ನಿಯಮಗಳು

ತೆರಿಗೆಯು ಸಾರ್ವಜನಿಕ ಆದಾಯದ ಅತ್ಯಂತ ಮಹತ್ವದ ಮೂಲಾಧಾರ. ಅನೇಕ ರಾಷ್ಟ್ರಗಳಲ್ಲಿ ಸಾರ್ವಜನಿಕ ಆದಾಯವು ತೆರಿಗೆಯನ್ನು ಬಹುವಾಗಿ ಅವಲಂಬಿಸಿದೆ. ತೆರಿಗೆಗಳ ಗುಣಾವಗುಣಗಳನ್ನು ಸ್ಥೂಲವಾಗಿ ತಿಳಿಯಲು ಅರ್ಥಶಾಸ್ತ್ರದ ಪಿತಾಮಹರಾದ ಆಡಂಸ್ಮಿತ್‌ರವರು (i) ಸಾಮರ್ಥ್ಯ ನಿಯಮ ಅಥವಾ ಸಮಾನತೆಯ ನಿಯಮ (ii) ನಿಶ್ಚಿತತೆಯ ನಿಯಮ (iii) ಅನುಕೂಲತೆಯ ನಿಯಮ ಮತ್ತು (iv) ಮಿತವ್ಯಯ ನಿಯಮ ಈ ನಾಲ್ಕು ಸುಪ್ರಸಿದ್ಧ ನಿಯಮಗಳನ್ನು ಪ್ರತಿಪಾದಿಸಿದ್ದಾರೆ. ಆ ನಿಯಮಗಳೇ ತೆರಿಗೆಗಳು ವಿಧಿಸಲು ಮುಖ್ಯ ಆಧಾರವಾಗಿ ಇಂದಿಗೂ ರೂಢಿಯಲ್ಲಿವೆ.

(i) **ಸಾಮರ್ಥ್ಯ ನಿಯಮ :** ಪ್ರತಿಯೊಬ್ಬ ನಾಗರಿಕನೂ ತನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ, ಸರ್ಕಾರಕ್ಕೆ ಕೊಡುಗೆಯನ್ನು ಸಲ್ಲಿಸಬೇಕು. ಈ ರೀತಿ ನೀಡಿದ

ಕೊಡುಗೆಯು ಪ್ರತಿಯೊಬ್ಬನು ಪಡೆಯುವ ಉತ್ಪನ್ನಕ್ಕನುಗುಣವಾಗಿರಬೇಕು. ತೆರಿಗೆಗಳು ಎಲ್ಲರಿಗೂ ಸಮನಾಗಿರಬೇಕು ಮತ್ತು ತೆರಿಗೆಯನ್ನು ಕೊಡುವುದರಿಂದ ಜನರು ಅನುಭವಿಸುವ ತ್ಯಾಗದ ಪ್ರಮಾಣವು ಎಲ್ಲರಿಗೂ ಒಂದೇ ಪ್ರಮಾಣದಲ್ಲಿರಬೇಕು. ಈ ನಿಯಮದ ಪ್ರಕಾರ ಹೆಚ್ಚಿನ ಸಾಮರ್ಥ್ಯವುಳ್ಳ ವ್ಯಕ್ತಿಗಳು ಕಡಮೆ ಸಾಮರ್ಥ್ಯದ ವ್ಯಕ್ತಿಗಳಿಗಿಂತ ಹೆಚ್ಚು ತೆರಿಗೆಯನ್ನು ಸಲ್ಲಿಸಲೇಬೇಕಾಗುತ್ತದೆ. ಯಾವುದೇ ಒಬ್ಬ ವ್ಯಕ್ತಿಯು ತೆರಿಗೆಕೊಡುವ ಸಾಮರ್ಥ್ಯ ಅವನ ಆದಾಯವನ್ನು ಅವಲಂಬಿಸಿರುತ್ತದೆ. ಅಂದರೆ ಎಲ್ಲ ಪ್ರಜೆಗಳ ಮೇಲೂ ಅವರ ಶಕ್ತಿಗನುಗುಣವಾಗಿ ತೆರಿಗೆಯ ಹೊರೆ ಬೀಳಬೇಕೆಂಬುದೇ ಈ ನಿಯಮದ ಅರ್ಥ. ಈ ನಿಯಮದ ಪ್ರಕಾರ ತೆರಿಗೆಯ ಹೊರೆ ಶ್ರೀಮಂತರ ಮೇಲೆ ಹೆಚ್ಚಾಗಿ ಮತ್ತು ಬಡವರ ಮೇಲೆ ಕಡಮೆಯಾಗಿ ಬೀಳುವುದು. ಶ್ರೀಮಂತರು ಹೆಚ್ಚು ತೆರಿಗೆಯನ್ನು ಕೊಡುವ ಶಕ್ತಿ ಪಡೆದಿರುತ್ತಾರೆ. ಬಡವರಿಗೆ ತೆರಿಗೆ ಕೊಡುವ ಶಕ್ತಿ ಕಡಮೆ. ಆದ್ದರಿಂದ ಈ ನಿಯಮದ ಪ್ರಕಾರ ಕಡಮೆ ವರಮಾನವುಳ್ಳವರು ಅಲ್ಪ ಪ್ರಮಾಣದಲ್ಲಿ, ಹೆಚ್ಚು ವರಮಾನವುಳ್ಳವರು ಅಧಿಕ ಪ್ರಮಾಣದಲ್ಲಿ ತಮ್ಮ ಆದಾಯದಲ್ಲಿ ತೆರಿಗೆಯನ್ನು ಸಲ್ಲಿಸಬೇಕು.

(ii) **ನಿಶ್ಚಿತತೆಯ ನಿಯಮ :** ತೆರಿಗೆಗಳು ನಿಶ್ಚಿತವಾಗಿರಬೇಕು. ಅಂದರೆ ಪ್ರತಿಯೊಬ್ಬ ವ್ಯಕ್ತಿ ಕೊಡಬೇಕಾದ ತೆರಿಗೆಯ ಮೊಬಲಗು ಸ್ಪಷ್ಟವಾಗಿರಬೇಕು. ಇದು ಒಳ್ಳೆಯ ತೆರಿಗೆ ಹೊಂದಿರಬೇಕಾದ ಎರಡನೆಯ ಗುಣ. ತೆರಿಗೆಯು ನಿರಂಕುಶವಾಗಿರದೆ ನಿಶ್ಚಿತವಾಗಿರಬೇಕು. ಸರಕಾರ ವಿಧಿಸಿದ ತೆರಿಗೆಯ ಬಗ್ಗೆ, ತೆರಿಗೆಯನ್ನು ಕೊಡುವವನಿಗೆ ಎಷ್ಟು ಕೊಡಬೇಕೆಂಬುದು ಗೊತ್ತಿರಬೇಕು. ಮುಂದೆ ತೆರಿಗೆಯನ್ನು ಯಾವಾಗ ಸಲ್ಲಿಸಬೇಕು, ಯಾರಿಗೆ ಸಲ್ಲಿಸಬೇಕು ಎಂಬ ವಿಷಯಗಳ ಬಗ್ಗೆ ಮೊದಲೇ ಮಾಹಿತಿಯನ್ನು ಒದಗಿಸಿರಬೇಕು. ತೆರಿಗೆಯ ಬಗ್ಗೆ ನಿಶ್ಚಿತತೆ ಇಲ್ಲದಿದ್ದರೆ ತೆರಿಗೆಯನ್ನು ವಸೂಲಿಮಾಡುವ ಅಧಿಕಾರಿಗಳು ತೆರಿಗೆದಾರರ ಮೇಲೆ ದರ್ಪತೋರಿಸುವ ಅವಕಾಶ ಇರುವುದು ಮಾತ್ರವಲ್ಲದೆ ಭ್ರಷ್ಟಾಚಾರಕ್ಕೆ ಅಸ್ಪದವಾಗುತ್ತದೆ. ಇದರಿಂದ ಅಧಿಕಾರಿಗಳ ದಬ್ಬಾಳಿಕೆಗೆ ತೆರಿಗೆದಾರರು ಒಳಗಾಗುವುದರಿಂದ ತೊಂದರೆಗೆ ಈಡಾಗುತ್ತಾರೆ. ನಿಶ್ಚಿತತೆ ನಿಯಮದಿಂದ, ತೆರಿಗೆಯನ್ನು ಕೊಡುವವರಿಗಲ್ಲದೆ ಸರ್ಕಾರಕ್ಕೂ ಸಹ ಪ್ರಯೋಜನ ಉಂಟು. ತೆರಿಗೆಗಳಿಂದ ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತದೆ, ಯಾವಾಗ ಬರುತ್ತದೆ ಎಂಬುದು ತಿಳಿಯುತ್ತದೆ.

(iii) **ಅನುಕೂಲತೆಯ ನಿಯಮ :** ತೆರಿಗೆಗಳು ಸರಳವಾಗಿರಬೇಕು. ಕೊಡಲು ಅನುಕೂಲತೆಗಳಿರಬೇಕು. ತೆರಿಗೆಗಳು ಜನರಲ್ಲಿ ಹಣವಿರುವಾಗ ಅದನ್ನು ವಸೂಲು ಮಾಡುವಂತಿರಬೇಕು. ಉದಾಹರಣೆಗೆ, ಭೂಕಂದಾಯವನ್ನು ರೈತರಿಂದ ಸುಗ್ಗಿಯ ನಂತರ ವಸೂಲಿ ಮಾಡುವುದರಿಂದ ರೈತರಿಗೆ ತೊಂದರೆಯಾಗುವುದಿಲ್ಲ. ವೇತನ ಪಡೆಯುವ ನೌಕರರಿಂದ ಸಂಬಳದಲ್ಲಿ ಮುರಿದು ತೆರಿಗೆ ವಸೂಲಿಮಾಡಿದರೆ ಅವರಿಗೆ

ತೊಂದರೆಯಾಗುವುದಿಲ್ಲ. ಅಪ್ರತ್ಯಕ್ಷ ತೆರಿಗೆ ಈ ನಿಯಮವನ್ನು ತೃಪ್ತಿಪಡಿಸುತ್ತದೆ. ಬಳಕೆದಾರರು ವಸ್ತುಗಳನ್ನು ಮಾರುಕಟ್ಟೆಗಳಲ್ಲಿ ಕೊಳ್ಳುವಾಗ ತೆರಿಗೆ ಸಲ್ಲಿಸುತ್ತಾರೆ. ತೆರಿಗೆ ವಸ್ತುವಿನ ಬೆಲೆಯಲ್ಲಿ ಸೇರುವುದರಿಂದ ತೆರಿಗೆ ಕೊಡುತ್ತಿದ್ದೇವೆಂದು ಬಳಕೆದಾರರಿಗೆ ತಿಳಿಯುವುದಿಲ್ಲ. ಉದಾಹರಣೆಗೆ ಮನರಂಜನಾ ತೆರಿಗೆ, ಸಿನಿಮಾ ನೋಡುವವರು ಕೆಲವೊಂದು ವೇಳೆ ತಮಗೆ ಅರಿಯದಂತೆ ಈ ತೆರಿಗೆಯನ್ನು ಕೊಡುತ್ತಾರೆ. ಅದರ ಹೊರೆಯೂ ಸಹ ಅವರಿಗೆ ತಿಳಿದಿರುವುದಿಲ್ಲ. ಏಕೆಂದರೆ ಟಿಕೆಟ್‌ನ ಬೆಲೆಯಲ್ಲಿ ಅದನ್ನು ಸೇರಿಸಲಾಗಿರುತ್ತದೆ.

(iv) **ಮಿತವ್ಯಯ ನಿಯಮ :** ಸರ್ಕಾರ ವಿಧಿಸಿ ವಸೂಲು ಮಾಡುವ ತೆರಿಗೆ ಹಣ ಸರ್ಕಾರಕ್ಕೆ ಆದಾಯ ಒದಗಿಸುವಂಥದಾಗಿರಬೇಕು. ಮಿತವ್ಯಯನಿಯಮ ತೆರಿಗೆಯನ್ನು ವಸೂಲಿಮಾಡುವ ವೆಚ್ಚಕ್ಕೆ ಸಂಬಂಧಿಸಿರುತ್ತದೆ. ತೆರಿಗೆಯನ್ನು ವಸೂಲಿ ಮಾಡಲು ಸರ್ಕಾರ ಅವಷ್ಟು ಕಡಮೆ ಹಣವನ್ನು ವೆಚ್ಚಮಾಡಬೇಕು. ತೆರಿಗೆಯ ವಸೂಲಿಗೆ ವೆಚ್ಚ ಮಾಡುವಹಣ ತೆರಿಗೆಯಿಂದ ಬರುವ ಆದಾಯದ ಅತ್ಯಲ್ಪಭಾಗವಾಗಿರಬೇಕು. ಸಾರ್ವಜನಿಕರಿಂದ ಪಡೆದ ಹಣದಹೆಚ್ಚು ಭಾಗವು ಸರ್ಕಾರದ ಬೊಕ್ಕಸಕ್ಕೆ ಸೇರಬೇಕು. ತೆರಿಗೆಯನ್ನು ಸಾರ್ವಜನಿಕರಿಂದ ವಸೂಲಿ ಮಾಡಲು ದೊಡ್ಡ ಸಿಬ್ಬಂದಿ, ಆಫೀಸುಗಳು ಬೇಕಾದಲ್ಲಿ ಈ ನಿಯಮವನ್ನು ಪಾಲಿಸಲಾಗುವುದಿಲ್ಲ. ಅಂದರೆ ತೆರಿಗೆಯಿಂದ ಪಡೆದ ಹೆಚ್ಚು ಹಣವನ್ನು, ಆ ತೆರಿಗೆಯನ್ನು ವಸೂಲಿ ಮಾಡುವ ಸಿಬ್ಬಂದಿಯ ವೇತನ ಹಾಗು ಆಫೀಸುಗಳ ಬಾಡಿಗೆಗಳಿಗಾಗಿ ವೆಚ್ಚಮಾಡಿದ್ದಾದರೆ ತೆರಿಗೆ ಸಂಗ್ರಹಿಸುವ ಉದ್ದೇಶ ವಿಫಲಗೊಳ್ಳುತ್ತದೆ. ಉದಾಹರಣೆಗೆ ಭೂಕಂದಾಯವನ್ನು ವಸೂಲಿಮಾಡಲು ಸರ್ಕಾರಕ್ಕೆ 5 ಕೋಟಿರೂಪಾಯಿಗಳು ವೆಚ್ಚವಾಗಿ, ಅದರಿಂದ 3 ಕೋಟಿ ರೂಪಾಯಿ ಸಂದಾಯವಾದರೆ ತೆರಿಗೆಯನ್ನು ವಿಧಿಸದಿರುವುದೇ ಲೇಸು. ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಿಂದ ಹಣವನ್ನು ವೆಚ್ಚಮಾಡಲು ತೆರಿಗೆಗಳನ್ನು ವಿಧಿಸುತ್ತದೆ. ಆದ್ದರಿಂದ ತೆರಿಗೆಯನ್ನು ವಸೂಲು ಮಾಡಲು ಆಗುವ ವೆಚ್ಚವು ಆದಷ್ಟು ಕಡಮೆ ಇರಬೇಕು. ಸರ್ಕಾರ ಆದಷ್ಟು ಕಡಮೆಹಣ ವೆಚ್ಚಮಾಡಿ ಹೆಚ್ಚು ಹಣಪಡೆಯುವ ತೆರಿಗೆಗಳು ಮಿತವ್ಯಯದ ನಿಯಮವನ್ನು ಪೂರೈಸುತ್ತವೆ,

ಆಡಂಸ್ಮಿತ್‌ರವರು ನೀಡಿದ ಈ ನಾಲ್ಕು ನಿಯಮಗಳು ಅತ್ಯಂತ ಮಹತ್ವದ ನಿಯಮಗಳೆಂದು ಪರಿಗಣಿಸಲ್ಪಟ್ಟಿವೆ. ತೆರಿಗೆಯು ಒಳ್ಳೆಯ ತೆರಿಗೆಯಾಗಬೇಕಾದರೆ ಈ ನಾಲ್ಕು ನಿಯಮಗಳನ್ನು ಹೊಂದಿರಬೇಕು. ಈ ನಾಲ್ಕು ನಿಯಮಗಳನ್ನು ಪರಿಶೀಲಿಸಿದಾಗ ಒಂದನೇ ನಿಯಮ ತೆರಿಗೆ ತತ್ವಗಳಿಗೆ ಮತ್ತು ಉಳಿದ ಮೂರು ನಿಯಮಗಳು ಆಡಳಿತೆಗೆ ಸಂಬಂಧಪಟ್ಟಿರುವುದು ತಿಳಿದುಬರುತ್ತದೆ. ಇಂದು ನಾಲ್ಕನೆಯ ನಿಯಮವು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆ.

ನವೀನ ಅರ್ಥಶಾಸ್ತ್ರಜ್ಞರು ಮತ್ತೆ ಕೆಲವು ನಿಯಮಗಳನ್ನು ಸೇರಿಸಿದ್ದಾರೆ. ಸರಳತೆ, ಉತ್ಪಾದಕತೆ ಹಾಗೂ ಸ್ಥಿತಿಸ್ಥಾಪಕತ್ವ ಎತ್ತಿತೋರಿಸುವುದೇ ಈ ನಿಯಮಗಳ ತಿರುಳು.

(i) **ಸರಳತೆಯ ನಿಯಮ :** ತೆರಿಗೆಯು ಸರಳವಾಗಿರಬೇಕು. ತೆರಿಗೆ ಕೊಡುವ ಪ್ರತಿಯೊಬ್ಬ ನಾಗರಿಕನಿಗೆ ತೆರಿಗೆಯ ಬಗ್ಗೆ ಸಹಜವಾದ ತಿಳಿವಳಿಕೆ ಇರಬೇಕು. ತೆರಿಗೆಯ ದರ, ಸಲ್ಲಿಸುವ ರೀತಿಗಳು ಎಲ್ಲರಿಗೂ ಸುಲಭವಾಗಿ ತಿಳಿಯುವಂತಿರಬೇಕು. ಇಲ್ಲದಿದ್ದರೆ ಅಧಿಕಾರಿಗಳು ಅವರನ್ನು ಮೋಸ ಮಾಡುವ ಸಂಭವ ಉಂಟು. ಉದಾಹರಣೆಗೆ ಆದಾಯ ತೆರಿಗೆ. ಪರಿಣತರಿಗೆ ಮಾತ್ರ ಈ ತೆರಿಗೆಯ ನಿಯಮಗಳು, ದರಗಳು ತಿಳಿದಿರುತ್ತವೆ. ಸಾಮಾನ್ಯ ಜನರಿಗೆ ತಿಳಿಯುವುದಿಲ್ಲ.

(ii) **ಉತ್ಪಾದಕತೆಯ ನಿಯಮ :** ಈ ನಿಯಮದ ಪ್ರಕಾರ ವಿಧಿಸಿದ ತೆರಿಗೆ ಸರ್ಕಾರಕ್ಕೆ ಹೆಚ್ಚು ಹಣವನ್ನು ತರುವಂತಿರಬೇಕು. ಅಂದರೆ ತೆರಿಗೆಯಿಂದ ಬರುವ ಉತ್ಪನ್ನ ಹೆಚ್ಚಿನದಾಗಿರಬೇಕು. ತೆರಿಗೆಯನ್ನು ವಿಧಿಸುವ ಮುಖ್ಯೋದ್ಧೇಯ ಸರ್ಕಾರದ ಬೊಕ್ಕಸ ತುಂಬಿಕೊಳ್ಳುವುದು. ಸರ್ಕಾರದ ಬೊಕ್ಕಸ ತುಂಬದಿದ್ದರೆ ಅಂತಹ ತೆರಿಗೆಯನ್ನು ವಿಧಿಸುವುದು ನಿಷ್ಪ್ರಯೋಜಕ. ಆದ್ದರಿಂದ ಈ ನಿಯಮದ ಪ್ರಕಾರ ಸರ್ಕಾರಕ್ಕೆ ಹೆಚ್ಚು ಆದಾಯ ಬರುವಂತೆ ತೆರಿಗೆಯನ್ನು ರೂಪಿಸಬೇಕು.

(iii) **ಸ್ಥಿತಿಸ್ಥಾಪಕತ್ವದ ನಿಯಮ :** ಸರ್ಕಾರದ ಕಾರ್ಯಗಳು ದಿನೇ ದಿನೇ ಬೆಳೆಯುವುದರಿಂದ ಇಲಾಖೆಗಳು, ನೌಕರರು ಬೆಳೆಯುವುದರಿಂದ ಅದರ ವೆಚ್ಚ ಸಹ ಹೆಚ್ಚಾಗುತ್ತದೆ. ಹೆಚ್ಚಿನ ವೆಚ್ಚವನ್ನು ಸರಿದೂಗಿಸಲು ಅದರ ಆದಾಯವೂ ಅಧಿಕಗೊಳ್ಳಬೇಕು. ಸರ್ಕಾರದ ಕಾರ್ಯಬಾಹುಳ್ಯ ಅಧಿಕಗೊಂಡಂತೆಲ್ಲ ತೆರಿಗೆಯಿಂದ ಎತ್ತುವ ಆದಾಯ ಹೆಚ್ಚುವಂತಿರಬೇಕು. ತೆರಿಗೆಗಳ ದರಗಳನ್ನು ಬದಲಾಯಿಸುವಂತಿರಬೇಕು. ವಿಧಿಸುವ ತೆರಿಗೆಗಳು ಜಡರೂಪ ಹೊಂದಿರಬಾರದು. ಕೆಲವು ಅವಸರದ ಸಮಯಗಳಲ್ಲಿ ತೆರಿಗೆಗಳ ದರಗಳನ್ನು ಹೆಚ್ಚಿಸಿ ಅಧಿಕ ಸಹಾಯ ಪಡೆಯಬಹುದು. ಆದಾಯ ತೆರಿಗೆ, ರೈಲು ಹಾಗೂ ಅಂಚೆ ಇಲಾಖೆ, ತಂತಿಯ ದರಗಳು, ಆಸ್ತಿಯ ತೆರಿಗೆ ಇವುಗಳ ದರವನ್ನು ಸ್ವಲ್ಪ ಏರಿಸುವುದರಿಂದ ಹೆಚ್ಚು ವರಮಾನ ಸರ್ಕಾರಕ್ಕೆ ಸಂದಾಯವಾಗುತ್ತದೆ.

ಈ ರೀತಿ ತೆರಿಗೆಯು ಅನೇಕ ನಿಯಮಗಳನ್ನು ಪಾಲಿಸಲೇ ಬೇಕು. ಈ ನಿಯಮಗಳನ್ನು ಪಾಲಿಸದಿದ್ದ ತೆರಿಗೆಯು ಒಳ್ಳೆಯ ತೆರಿಗೆಯಾಗಲಾರದು.

ಸಾರ್ವಜನಿಕ ವೆಚ್ಚ

ಸಮಾಜದ ಹಿತ ಸಾಧನೆಗಾಗಿ, ಜನ ಸಾಮಾನ್ಯರ ಅಭಿವೃದ್ಧಿಗಾಗಿ ದುಡಿಯುವ ಸಂಸ್ಥೆಯೇ ಸರ್ಕಾರ. ಸರ್ಕಾರ ಪ್ರಜೆಗಳ ಸುಸ್ಥಿ; ಮಾನವ ನಿರ್ಮಿಸಿದ ಮಹಾಸಂಸ್ಥೆ.

ಪ್ರಜಾಹಿತವೇ ಸರ್ಕಾರದ ಹಿತ, ಸರ್ಕಾರದ ಮುಖ್ಯ ಗುರಿ ಸೇವೆ. ಪ್ರಜೆಗಳ ಹಿತ, ಸಾರ್ವಜನಿಕ ಕಲ್ಯಾಣ. ಒಂದು ದೇಶದ ಸರ್ಕಾರ ಆ ದೇಶದ ಒಂದು ಸುವ್ಯವಸ್ಥಿತ ಅಂಗ. ಅಲ್ಲಿನ ಸಮಾಜದ ವ್ಯಕ್ತಿಗಳೆಲ್ಲರೂ ಈ ಸಂಸ್ಥೆಯ ಸದಸ್ಯರು. ಸರ್ಕಾರ ಸಮಾಜದ ಕೈ, ರಾಷ್ಟ್ರದ ಕಣ್ಣು, ಪ್ರಜೆಗಳ ಪ್ರತಿನಿಧಿ, ಪ್ರಜಾಸೇವೆಗಾಗಿ ಪ್ರಜೆಗಳಿಂದ ಏರ್ಪಟ್ಟಿರುವ ಅಧಿಕಾರ ಮಂಡಲ. ಪ್ರಜೆಗಳ ರಕ್ಷಣೆ ಮತ್ತು ಅಭ್ಯುದಯಕ್ಕಾಗಿ ದುಡಿಯುವ ಸಂಸ್ಥೆಗಳೆಲ್ಲವೂ ಸಾರ್ವಜನಿಕ ಸಂಸ್ಥೆಗಳು. ಇಂತಹ ಸಂಸ್ಥೆಗಳಲ್ಲಿ ಮುಖ್ಯವಾದುದು ಸರ್ಕಾರ. ಸ್ಥಳೀಯ ಸರ್ಕಾರ ಇತ್ಯಾದಿಗಳು ಸರ್ಕಾರದ ಬಗೆಗಳು. ಇವು ಒಂದು ಸಮಾಜದ ಅಥವಾ ರಾಷ್ಟ್ರದ ಸ್ವಾತಂತ್ರ್ಯವನ್ನು ಕಾಪಾಡಿ ಅಲ್ಲಿಯ ಜನರ ಸುಖಸಂಪತ್ತುಗಳನ್ನು ಹೆಚ್ಚಿಸಲು ವೆಚ್ಚ ಮಾಡುವ ಹಣವೇ ಸಾರ್ವಜನಿಕ ವೆಚ್ಚ. ಪ್ರಜಾರಕ್ಷಣೆ ಮತ್ತು ಪ್ರಜಾ ಸೌಖ್ಯಕ್ಕಾಗಿ ಸರ್ಕಾರವೆಂಬ ಪ್ರಧಾನ ಸಾರ್ವಜನಿಕ ಸಂಸ್ಥೆಯನ್ನು ಬಿಟ್ಟರೆ ಉಳಿದ ಯಾವ ಸಂಸ್ಥೆಯೂ, ವ್ಯಕ್ತಿಯೂ ಹೆಚ್ಚು ಹಣವನ್ನು ವೆಚ್ಚ ಮಾಡುವುದಿಲ್ಲ.

ಹಿಂದಿನ ಕಾಲದಲ್ಲಿ ಸರ್ಕಾರದ ಆರ್ಥಿಕ ವ್ಯವಹಾರಗಳು ಮಿತವಾಗಿದ್ದುದರಿಂದ ಸರ್ಕಾರ ಹೆಚ್ಚು ಹಣವನ್ನು ವೆಚ್ಚ ಮಾಡಬೇಕಾದ ಅವಶ್ಯಕತೆಯೂ ಇರಲಿಲ್ಲ. ಇಂದು ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ ಅನೇಕ ಕಾರ್ಯಗಳನ್ನು ಕೈಗೊಳ್ಳುತ್ತದೆ. ಹೊರಗಣ ಶತ್ರುಗಳು ಪ್ರಜೆಗಳನ್ನು ಹಿಂಸಿಸದಂತೆ ನೋಡಿಕೊಳ್ಳಲು ಪ್ರಬಲವಾದ ಸೈನ್ಯ, ದೇಶದಲ್ಲಿ ಕಳ್ಳಕಾಕರ ಹಾವಳಿಯನ್ನು ತಪ್ಪಿಸಿ ಶಾಂತಿಯನ್ನು ಕಾಪಾಡಲು ಪೋಲಿಸ್‌ಪಡೆ, ವ್ಯಾಜ್ಯ ವ್ಯವಹಾರಗಳನ್ನು ಬಗೆ ಹರಿಸಲು ನ್ಯಾಯಾಲಯಗಳು, ಕಚೇರಿಗಳು, ರೋಗಗಳ ಪರಿಹಾರಕ್ಕಾಗಿ ಸಾರ್ವಜನಿಕ ಆಸ್ಪತ್ರೆಗಳು, ಸಾರಿಗೆ ಸಂಪರ್ಕಗಳು ಇತ್ಯಾದಿಗಳನ್ನು ನಿರ್ವಹಿಸಲು ಸಾಕಷ್ಟು ಹಣವನ್ನು ವೆಚ್ಚ ಮಾಡುತ್ತದೆ. ಇವೆಲ್ಲ ಪ್ರಜೆಗಳ ಹಿತಕ್ಕಾಗಿ ಹಾಗೂ ರಾಷ್ಟ್ರದ ಅಭಿವೃದ್ಧಿಯನ್ನು ಹೊಂದುವುದಕ್ಕಾಗಿ ಕೈಗೊಳ್ಳುವ ವೆಚ್ಚಗಳು.

ಸಾರ್ವಜನಿಕ ವೆಚ್ಚವು ಹೆಚ್ಚಲು ಕಾರಣಗಳು : ಇತ್ತೀಚೆಗೆ ವಿಶ್ವದ ಎಲ್ಲ ರಾಷ್ಟ್ರಗಳಲ್ಲೂ ಸಾರ್ವಜನಿಕ ವೆಚ್ಚವು ಮಿತಿಮೀರಿ ಹೆಚ್ಚುತ್ತಿದೆ. ಇಂತಹ ಹೆಚ್ಚಳವು ಇಪ್ಪತ್ತನೆಯ ಶತಮಾನದಲ್ಲಿ ಹೆಚ್ಚಾಗಿ ಕಂಡು ಬರುತ್ತಿದೆ. ಇದಕ್ಕೆ ಕಾರಣಗಳು ಹಲವಾರು.

(i) **ಪ್ರದೇಶ ಮತ್ತು ಜನಸಂಖ್ಯೆಯಲ್ಲಿ ಹೆಚ್ಚಳ :** ಸಾರ್ವಜನಿಕ ವೆಚ್ಚವು ಹೆಚ್ಚಾಗಲು ಪ್ರದೇಶ ಮತ್ತು ಜನಸಂಖ್ಯೆಯ ಹೆಚ್ಚಳವು ಒಂದು ಮುಖ್ಯ ಕಾರಣವಾಗಿ ಪರಿಣಮಿಸಿದೆ. ಒಂದು ದೇಶ ಬೆಳೆದು ತನ್ನ ಸರಹದ್ದನ್ನು ಹೆಚ್ಚು ಮಾಡಿಕೊಂಡಿದ್ದ ಪಕ್ಷದಲ್ಲಿ ಅಲ್ಲಿಯ ಸರ್ಕಾರದ ವ್ಯಾಪ್ತಿಯು ಮೊದಲಿಗಿಂತ ಹೆಚ್ಚಾಗುವುದು. ರಾಷ್ಟ್ರದ ವಿಸ್ತೀರ್ಣ ಹೆಚ್ಚಿದಂತೆ ಸರ್ಕಾರದ ವೆಚ್ಚವೂ ಹೆಚ್ಚಾಗುತ್ತದೆ.

ರಾಷ್ಟ್ರಗಳ ವಿಸ್ತೀರ್ಣ ಹೆಚ್ಚದಿದ್ದರೂ ಆ ರಾಷ್ಟ್ರಗಳಲ್ಲಿ ಕಾಲಕ್ರಮೇಣ ಜನ ಸಂಖ್ಯೆಯೂ ಹೆಚ್ಚಾಗುತ್ತದೆ. ಜನಸಂಖ್ಯೆ ಹೆಚ್ಚುವುದರಿಂದ ಸರ್ಕಾರದ ವೆಚ್ಚ ಏರುತ್ತದೆ. ಸಂಸಾರದಲ್ಲಿ ಜನಗಳು ಹೆಚ್ಚಿದಂತೆಲ್ಲ ಸಂಸಾರದ ಖರ್ಚುಗಳು ಹೆಚ್ಚುವಂತೆ, ದೇಶದಲ್ಲಿ ಪ್ರಜೆಗಳ ಸಂಖ್ಯೆ ಹೆಚ್ಚಿದಂತೆ ಸರ್ಕಾರದ ವೆಚ್ಚಗಳೂ ಹೆಚ್ಚಾಗುವುದು ಸಹಜ. ಹೇಗೆಂದರೆ, ಶಿಕ್ಷಣವನ್ನು ಪಡೆಯಬೇಕಾದ ಮಕ್ಕಳ ಸಂಖ್ಯೆ, ಚಿಕಿತ್ಸೆಯನ್ನು ಪಡೆಯುವ ರೋಗಿಗಳ ಸಂಖ್ಯೆ ಹೆಚ್ಚುವುದರಿಂದ ಸರ್ಕಾರ ಹೆಚ್ಚು ವೆಚ್ಚ ಮಾಡಬೇಕಾಗುತ್ತದೆ. ಇವರೊಂದಿಗೆ ಪೋಲಿಸ್‌ಪಡೆ, ಹೆಚ್ಚು ನ್ಯಾಯಂಲಯಗಳು ಇತ್ಯಾದಿ ಬೇಡಿಕೆಗಳನ್ನು ಪೂರೈಸಲು ಸರ್ಕಾರ ಹೆಚ್ಚು ಹಣ ವೆಚ್ಚ ಮಾಡಬೇಕಾಗುತ್ತದೆ. ಇದರಿಂದಾಗಿ ಸರ್ಕಾರದ ಜವಾಬ್ದಾರಿ ದಿನೇ ದಿನೇ ಹೆಚ್ಚುತ್ತದೆ.

(ii) **ಬೆಲೆಗಳ ಮಟ್ಟದಲ್ಲಿ ಏರಿಕೆ :** ಸಾರ್ವಜನಿಕ ವೆಚ್ಚವು ಹೆಚ್ಚಲು ಮತ್ತೊಂದು ಕಾರಣವೆಂದರೆ ಬೆಲೆಗಳ ಏರಿಕೆ. ವಸ್ತುಗಳ ಬೆಲೆಗಳು ಹೆಚ್ಚುವುದರಿಂದ ಸರ್ಕಾರ ತನಗೆ ಬೇಕಾದ ವಸ್ತುಗಳನ್ನು ಕೊಳ್ಳಲು ಹೆಚ್ಚಿನ ಹಣವನ್ನು ವೆಚ್ಚಮಾಡಬೇಕಾಗುತ್ತದೆ.

(iii) **ಸಂಪತ್ತಿನ ಹೆಚ್ಚಳ :** ಹಿಂದುಳಿದ ರಾಷ್ಟ್ರಗಳಲ್ಲಿ ಸಂಪತ್ತನ್ನು ಹೆಚ್ಚಿಸಲು ಸರ್ಕಾರ ಹೊಸ ಆರ್ಥಿಕ ಕಾರ್ಯಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದೆ. ಸಂಪತ್ತನ್ನು ಅಧಿಕಗೊಳಿಸಲು ಕೃಷಿ, ಕೈಗಾರಿಕಾ ರಂಗಗಳ ಅಭಿವೃದ್ಧಿಯಾಗಬೇಕು. ಸಾರಿಗೆ ಸಂಪರ್ಕ, ವಿದ್ಯುತ್ ಪೂರೈಕೆ, ನೀರಾವರಿಗಳ ಮೇಲೆ ಸಾಕಷ್ಟು ಹಣವನ್ನು ವೆಚ್ಚಮಾಡ ಬೇಕಾಗುತ್ತದೆ. ಇದರಿಂದ ರಾಷ್ಟ್ರದ ಸಂಪತ್ತು ಹೆಚ್ಚುವುದಲ್ಲದೆ ಜನರ ಜೀವನ ಮಟ್ಟವೂ ಏರುತ್ತದೆ. ಅಂದರೆ, ಹೊಸ ಆರ್ಥಿಕ ಕಾರ್ಯಗಳು ಹಾಗೂ ಆರ್ಥಿಕ ಅಭಿವೃದ್ಧಿಯು ಸರಕಾರದ ವೆಚ್ಚವನ್ನು ಹೆಚ್ಚಿಸುವುದು. ಇದರಿಂದ ಸರ್ಕಾರದ ಆದಾಯವೂ ಸಹ ಅಧಿಕಗೊಂಡಿದೆ.

(iv) **ಯುದ್ಧ ಮತ್ತು ಯುದ್ಧವನ್ನು ತಡೆಗಟ್ಟುವಿಕೆ :** ಸಾರ್ವಜನಿಕ ವೆಚ್ಚದ ಹೆಚ್ಚಳಕ್ಕೆ ಮತ್ತೊಂದು ಕಾರಣ ರಾಷ್ಟ್ರದ ರಕ್ಷಣೆಯ ದೃಷ್ಟಿಯಿಂದ ಯುದ್ಧಗಳನ್ನು ತಡೆಗಟ್ಟಲು ಹಣ ವೆಚ್ಚಮಾಡುವುದು. ಎಲ್ಲ ರಾಷ್ಟ್ರಗಳಲ್ಲೂ ರಾಷ್ಟ್ರದ ರಕ್ಷಣೆಗೆ ಹೆಚ್ಚು ಹಣವನ್ನು ವೆಚ್ಚಮಾಡಲಾಗುವುದು. ಯುದ್ಧ ಸಂಭವಿಸಿದಾಗ ರಕ್ಷಣೆಯ ವೆಚ್ಚ ಗಗನಕ್ಕೇರುತ್ತದೆ. ಪ್ರತಿದಿನವೂ ಕೋಟಿಗಟ್ಟಲೆ ಹಣವನ್ನು ವೆಚ್ಚ ಮಾಡಬೇಕಾಗು ವುದು. ಯುದ್ಧಕ್ಕೆ ಬಳಸುವ ಶಸ್ತ್ರಾಸ್ತ್ರಗಳ ಬೆಲೆ ಏರಿರುವುದರಿಂದ ರಕ್ಷಣಾ ವೆಚ್ಚವೂ ಹೆಚ್ಚಾಗಿದೆ. ನಾಶಕಾರಕ ಶಸ್ತ್ರಾಸ್ತ್ರಗಳನ್ನು ವಿಶೇಷವಾಗಿ ನಿರ್ಮಿಸಲು ತೊಡಗಿರುವುದೇ ಹೆಚ್ಚು ವೆಚ್ಚಕ್ಕೆ ಕಾರಣ. ಯುದ್ಧಕಾಲದಲ್ಲಿ ಅಪಾರ ಹಣವನ್ನು ಸಾಲವಾಗಿ ಪಡೆಯ ಬೇಕಾಗುತ್ತದೆ. ಆ ಹಣಕ್ಕೆ ಬಡ್ಡಿಯನ್ನು ಕೊಡುತ್ತಾ ಹೋಗಬೇಕು. ಇದರ ಜೊತೆಗೆ ಯುದ್ಧದಲ್ಲಿ ಮಡಿದ ಯೋಧರ ಆಶ್ರಿತರಿಗೆ, ನಿವೃತ್ತಿ ಪಡೆದ ಸೈನಿಕರಿಗೆ,

ನೌಕರರಿಗೆ ವೃದ್ಧಾಪ್ಯವೇತನವನ್ನು ನೀಡಬೇಕು. ಇದರಿಂದ ಸಾರ್ವಜನಿಕ ವೆಚ್ಚ ಹೆಚ್ಚುತ್ತದೆ.

(v) **ಪ್ರಜಾಪ್ರಭುತ್ವ :** ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕ ವೆಚ್ಚವೂ ಏರುತ್ತದೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಅನೇಕ ರಾಜಕೀಯ ಪಕ್ಷಗಳಿದ್ದು, ಪ್ರತಿಯೊಂದು ಪಕ್ಷವೂ ಜನರ ವಿಶ್ವಾಸಗಳಿಸಲು, ಬೆಂಬಲ ಪಡೆಯಲು ಆಸೆ ಪಟ್ಟು ಸಾರ್ವಜನಿಕ ಹಣಕಾಸಿನ ಪ್ರಯೋಜನ ಪಡೆಯಲು ಇಷ್ಟಪಡುತ್ತದೆ. ಇದರ ಫಲವಾಗಿ ಶಾಲಾ ಕಾಲೇಜುಗಳು, ರಸ್ತೆಗಳು, ಆಸ್ಪತ್ರೆಗಳು ಮುಂತಾದುವುಗಳ ನಿರ್ಮಾಣಕ್ಕೆ ಹೆಚ್ಚಿನ ಬೇಡಿಕೆ ಬರುತ್ತದೆ. ಸರ್ಕಾರ ಇಂತಹ ಕೆಲಸಗಳನ್ನು ಪ್ರಜೆಗಳ ಒತ್ತಾಯಕ್ಕೆ ಮಣಿದು ಕೈಗೊಳ್ಳಬೇಕಾಗುತ್ತದೆ. ಪ್ರಜಾಪ್ರಭುತ್ವವನ್ನು ಹೊಂದಿರುವ ರಾಷ್ಟ್ರಗಳಲ್ಲಿ ಚುನಾವಣೆಗಳು ನಡೆಯಬೇಕಾಗುತ್ತದೆ. ಶಾಸಕಾಂಗ ಸಭೆಗಳನ್ನು ಹೊಂದಿರಬೇಕಾಗುತ್ತದೆ. ದೊಡ್ಡ ಮಂತ್ರಿ ಮಂಡಲಗಳು ರಚಿತವಾಗಿರುತ್ತವೆ. ಚುನಾಯಿಸಿ ಬಂದ ಮಂತ್ರಿಗಳು ಚುನಾವಣಾ ಸಮಯದಲ್ಲಿ ಮಾಡಿದ ಘೋಷಣೆಗಳನ್ನು ಕಾರ್ಯಗತಗೊಳಿಸಲು, ಜನಹಿತದ ಹಲವಾರು ಕಾರ್ಯಗಳನ್ನು ಕೈಗೊಳ್ಳುತ್ತಾರೆ. ಇದರಿಂದ ಸಾರ್ವಜನಿಕ ವೆಚ್ಚ ಹೆಚ್ಚುತ್ತದೆ.

(vi) **ಸಾಮಾಜಿಕ ಭದ್ರತೆ :** ಆಧುನಿಕ ಸರ್ಕಾರಗಳು ಕೆಲವು ಸಾಮಾಜಿಕ ಭದ್ರತೆಗಳನ್ನು ತನ್ನ ನೌಕರರಿಗೆ ಹಾಗೂ ಪ್ರಜೆಗಳಿಗೆ ಒದಗಿಸುವುದು. ಅವುಗಳಲ್ಲಿ ಮುಖ್ಯವಾದುವು ಬಡವರಿಗಾಗಿ ವಸತಿಗೃಹಗಳ ನಿರ್ಮಾಣ, ವಿಧವೆಯರಿಗೂ, ನಿರ್ಗತಿಕರಿಗೂ ಸಹಾಯದ್ರವ್ಯ, ವೃದ್ಧಾಪ್ಯವೇತನ, ನಿರುದ್ಯೋಗಿಗಳಿಗಾಗಿ ವಿಮೆ, ವೈದ್ಯಕೀಯ ಸಹಾಯ, ಹೆರಿಗೆ ಸಮಯದಲ್ಲಿ ನೆರವು ನೀಡುವುದು ಮುಂತಾದ ಸೇವೆಗಳನ್ನು ಆಧುನಿಕ ರಾಷ್ಟ್ರಗಳು ಅಥವಾ ಕಲ್ಯಾಣ ರಾಷ್ಟ್ರಗಳು ಒದಗಿಸುತ್ತವೆ. ಸಾರ್ವಜನಿಕ ವೆಚ್ಚ ಏರಲು ಇದೂ ಒಂದು ಕಾರಣ.

(vii) **ಆರ್ಥಿಕ ಬೆಳವಣಿಗೆ :** ಆರ್ಥಿಕಾಭಿವೃದ್ಧಿಯನ್ನು ಸಾಧಿಸುವುದು ಸರ್ಕಾರದ ಒಂದು ಮುಖ್ಯ ಕರ್ತವ್ಯ ಹಾಗೂ ಧ್ಯೇಯ. ಆರ್ಥಿಕಾಭಿವೃದ್ಧಿ ಎಂದರೆ ಉತ್ಪನ್ನದಲ್ಲಿ ಹೆಚ್ಚಳ. ವಿತರಣೆಯಲ್ಲಿ ಸುಧಾರಣೆ ಹಾಗೂ ಪೂರ್ಣ ಉದ್ಯೋಗ ದೊರಕಿಸಿಕೊಡುವಿಕೆ. ಆರ್ಥಿಕ ಅಭಿವೃದ್ಧಿ ಹೆಚ್ಚಿದಂತೆ ಸರ್ಕಾರ ಹಲವಾರು ಸಂಪದಭಿವೃದ್ಧಿಯ ಕಾರ್ಯಗಳನ್ನು ಕೈಕೊಳ್ಳಬೇಕಾಗುತ್ತದೆ. ಜನರಿಗೆ ಬೇಕಾದ ಕ್ರೀಡಾಕ್ಷೇತ್ರಗಳು, ವಿಶ್ರಾಂತಿ ಮಂದಿರಗಳು, ಕೈಗಾರಿಕೆಗಳ ಸ್ಥಾಪನೆ, ರೈಲುರಸ್ತೆಗಳ ನಿರ್ಮಾಣ, ಉದ್ದಿಮೆಗಳ ಸ್ಥಾಪನೆ ಇತ್ಯಾದಿ. ಸಾರ್ವಜನಿಕ ವೆಚ್ಚದ ಹೆಚ್ಚಳಕ್ಕೆ ಆರ್ಥಿಕ ಬೆಳವಣಿಗೆಯೂ ಕಾರಣ.

(viii) **ಆಡಳಿತ ವೆಚ್ಚದಲ್ಲಿ ಹೆಚ್ಚಳ :** ಸರ್ಕಾರದ ಕರ್ತವ್ಯಗಳು ಹೆಚ್ಚಾದಂತೆ, ಅವುಗಳನ್ನು ಸರಿಯಾಗಿ ನೋಡಿಕೊಳ್ಳಲು ಹೆಚ್ಚು ಅಧಿಕಾರಿಗಳನ್ನು ನೇಮಿಸಬೇಕಾಗು

ತ್ತದೆ. ಸರ್ಕಾರದ ಸಿಬ್ಬಂದಿಯ ವೇತನ, ತುಟ್ಟಿಭತ್ಯಗಳು ಹೆಚ್ಚುವುದರಿಂದ ನೌಕರರಿಗೆ ಹೆಚ್ಚು ವೇತನ ನೀಡಬೇಕಾಗುತ್ತದೆ. ಆಡಳಿತ ವೆಚ್ಚವೇ ಸಾರ್ವಜನಿಕ ವೆಚ್ಚದಲ್ಲಿ ಸಿಂಹ ಪಾಲಾಗಿದೆ.

ಮುಂಗಡಪತ್ರ

ಮುಂಗಡ ಪತ್ರವನ್ನು ಆಯವ್ಯಯ ಪಟ್ಟಿ ಎಂಬುದಾಗಿ ಕರೆಯುವುದು ರೂಢಿ. ಒಂದು ದೇಶದ ಆರ್ಥಿಕ ಪರಿಸ್ಥಿತಿಯನ್ನು ಈ ಪಟ್ಟಿಯು ತೋರಿಸುತ್ತದೆ. ಸಾಮಾನ್ಯವಾಗಿ ಮುಂಗಡ ಪತ್ರವನ್ನು ಒಂದು ವರ್ಷದ ಅವಧಿಗಾಗಿ ತಯಾರಿಸಲಾಗಿರುತ್ತದೆ. ಪ್ರತಿವರ್ಷವೂ ಹಣಕಾಸಿದ ವರ್ಷ ಪ್ರಾರಂಭವಾಗುವ ಮೊದಲು (ಸಾಮಾನ್ಯವಾಗಿ ಏಪ್ರಿಲ್ ಒಂದರಿಂದ) ಆ ವರ್ಷದ ಆದಾಯ ಮತ್ತು ವೆಚ್ಚಗಳನ್ನು ಲೆಕ್ಕಾಚಾರ ಮಾಡಿ ಮುಂಗಡ ಪತ್ರ ಸಿದ್ಧವಾಗುತ್ತದೆ. ಮುಂಗಡ ಪತ್ರವನ್ನು ತಯಾರಿಸುವ ಹೊಣೆ ಆರ್ಥಿಕ ಮಂತ್ರಿಯದಾಗಿರುತ್ತದೆ. ಕೇಂದ್ರ ಸರ್ಕಾರದಲ್ಲಿ ಕೇಂದ್ರ ಹಣಕಾಸಿನ ಮಂತ್ರಿ, ರಾಜ್ಯ ಸರ್ಕಾರಗಳಲ್ಲಿ ಆಯಾಯ ರಾಜ್ಯಸರ್ಕಾರಗಳ ಹಣಕಾಸಿನ ಮಂತ್ರಿಗಳು ಮುಂಗಡ ಪತ್ರವನ್ನು ತಯಾರಿಸುತ್ತಾರೆ. ಮುಂಗಡ ಪತ್ರವನ್ನು ಸಿದ್ಧಪಡಿಸುವ ಮುನ್ನ ಹಣಕಾಸಿನ ಮಂತ್ರಿ ಪ್ರತಿಯೊಂದು ಮಂತ್ರಿಶಾಖೆಯಿಂದ ಮುಂಬರುವ ವರ್ಷದಲ್ಲಿ ಪರಿಶೀಲಿಸಿ ಒಟ್ಟು ವೆಚ್ಚದ ಪಟ್ಟಿಯನ್ನು ಸಿದ್ಧಪಡಿಸುವನು. ಅನಂತರ ಯಾವ ಯಾವ ಮೂಲಗಳಿಂದ ಎಷ್ಟೆಷ್ಟು ಆದಾಯ ಬರಬಹುದೆಂಬುದನ್ನೂ ಸಹ ಸಂಗ್ರಹಿಸಿ ಮುಂಗಡ ಪತ್ರವನ್ನು ಸಿದ್ಧಗೊಳಿಸುತ್ತಾನೆ. ಈ ಪಟ್ಟಿಯನ್ನು ಪ್ರಕಟಪಡಿಸುವ ಮುನ್ನ ಅದನ್ನು ಶಾಸಕಾಂಗದ ಮುಂದೆ ಮಂಡಿಸಿ, ಅದರ ಒಪ್ಪಿಗೆಯನ್ನು ಪಡೆಯಬೇಕು, ಶಾಸಕಾಂಗ ತಿದ್ದುಪಡಿಗಳನ್ನು ಮಾಡಬಹುದು. ಮುಂಗಡ ಪತ್ರದ ಮೇಲೆ ಶಾಸಕಾಂಗದಲ್ಲಿ ಚರ್ಚೆ ನಡೆದು, ಅಂಗೀಕರಿಸಿದ ನಂತರ ಮುಂಗಡ ಪತ್ರ ಅಧಿಕೃತವಾಗುತ್ತದೆ. ಆಗ ಸರ್ಕಾರಕ್ಕೆ ಆದಾಯ ಪಡೆಯುವ ಹಾಗೂ ವೆಚ್ಚಮಾಡುವ ಅಧಿಕಾರ ಬರುತ್ತದೆ.

ಮುಂಗಡ ಪತ್ರದ ಬಗೆಗಳು : ಮುಂಗಡ ಪತ್ರವನ್ನು (i) ಸಮತೋಲನ ಮುಂಗಡಪತ್ರ, (ii) ಉಳಿತಾಯದ ಮುಂಗಡಪತ್ರ (iii) ಕೊರತೆಯ ಮುಂಗಡಪತ್ರಗಳೆಂದು ಮೂರು ಬಗೆಗಳಾಗಿ ವಿಂಗಡಿಸಬಹುದು.

(i) **ಸಮತೋಲನ ಮುಂಗಡಪತ್ರ :** ನಿರ್ದಿಷ್ಟವೆಚ್ಚವು, ವಿವಿಧ ಮೂಲಗಳಿಂದ ಪಡೆಯುವ ಆದಾಯಕ್ಕೆ ಸಮನಾಗಿದ್ದರೆ ಅದು ಸಮತೋಲನ ಮುಂಗಡಪತ್ರ. ಹಿಂದಿನ ಕಾಲದಲ್ಲಿ ಸಮತೋಲನ ಮುಂಗಡಪತ್ರ ಹೆಚ್ಚು ಪ್ರಚಾರದಲ್ಲಿತ್ತು.

(ii) **ಉಳಿತಾಯ ಮುಂಗಡಪತ್ರ :** ವೆಚ್ಚವು ನಿರ್ದಿಷ್ಟ ಆದಾಯಕ್ಕಿಂತ ಕಡಮೆ ಇದ್ದರೆ ಅದು ಉಳಿತಾಯ ಮುಂಗಡಪತ್ರ. ಸರ್ಕಾರ ತಟಸ್ಥ ಧೋರಣೆಯನ್ನು

ಹೊಂದಿದ್ದರೆ ಅದರ ಕರ್ತವ್ಯಗಳು ಕೆಲವೇ ಕಾರ್ಯಗಳಿಗೆ ಸೀಮಿತವಾಗಿದ್ದು, ಹೆಚ್ಚು ವೆಚ್ಚಮಾಡುವ ಪ್ರಮೇಯವಿರುವುದಿಲ್ಲ. ಕಡಮೆ ವೆಚ್ಚಮಾಡುವ ಸರ್ಕಾರಗಳೇ ಒಳ್ಳೆಯ ಸರ್ಕಾರಗಳೆಂದು ಪ್ರಾಚೀನ ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದರು.

(iii) **ಕೊರತೆಯ ಮುಂಗಡಪತ್ರ** : ವೆಚ್ಚವು ಆದಾಯಕ್ಕಿಂತ ಹೆಚ್ಚಾಗಿರುವುದು ಕೊರತೆಯ ಮುಂಗಡಪತ್ರ. ಅನಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೊರತೆಯ ಮುಂಗಡ ಪತ್ರಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಈ ರಾಷ್ಟ್ರಗಳ ಮುಖ್ಯಗುರಿ ಸಾರ್ವಜನಿಕ ಸರ್ವತೋಮುಖ ಅಭಿವೃದ್ಧಿ. ಆದ್ದರಿಂದ ಆದಾಯದ ಮಿತಿಯನ್ನು ಮೀರಿ ವೆಚ್ಚಮಾಡುತ್ತವೆ. ಖರ್ಚು ಆದಾಯಕ್ಕಿಂತ ಹೆಚ್ಚಾಗುತ್ತದೆ. ಇದನ್ನು ತುಂಬಲು ತೆರಿಗೆಗಳು, ಸಾರ್ವಜನಿಕ ಸಾಲ ಹಾಗೂ ಕೊರತೆಯ ಧನದ ಮೊರೆ ಹೋಗಬೇಕಾಗುತ್ತದೆ. ಕೊರತೆಯ ಹಣವು ಒಳ್ಳೆಯದಲ್ಲ. ಏಕೆಂದರೆ ಅದು ಅತಿಪ್ರಸರಣಕ್ಕೆ ಎಡೆಮಾಡಿಕೊಡುತ್ತದೆ. ರಾಷ್ಟ್ರದ ಆರ್ಥಿಕಾಭಿವೃದ್ಧಿಯನ್ನು ಹೊಂದಲು ಕೊರತೆಯ ಮುಂಗಡಪತ್ರ ಮಹತ್ತರ ಪಾತ್ರವಹಿಸುತ್ತದೆ. ಆದ್ದರಿಂದ ಅಭಿವೃದ್ಧಿಶೀಲ ರಾಷ್ಟ್ರಗಳು ಸಾಮಾನ್ಯವಾಗಿ ಕೊರತೆಯ ಮುಂಗಡಪತ್ರವನ್ನು ಸಿದ್ಧಪಡಿಸುತ್ತವೆ.

ವಾಸ್ತವವಾಗಿ ವಿಚಾರಮಾಡಿದರೆ ಒಂದು ರಾಷ್ಟ್ರದ ಭವಿಷ್ಯದ ದೃಷ್ಟಿಯಿಂದ ಉಳಿತಾಯದ ಮುಂಗಡ ಪತ್ರವಾಗಲೀ, ಕೊರತೆಯ ಮುಂಗಡ ಪತ್ರವಾಗಲೀ ಸರಿಯಲ್ಲ. ಸರ್ಕಾರದ ಆದಾಯ ಹಾಗೂ ವೆಚ್ಚಗಳು ಸಮತೋಲನವಾಗುವುದು ಸಮಂಜಸ ಹಾಗೂ ಅತ್ಯಾವಶ್ಯಕ.

ಆದರೆ ಕೀನ್ಸ್ ಮುಂತಾದ ಆಧುನಿಕ ಅರ್ಥಶಾಸ್ತ್ರಜ್ಞರು ಇದನ್ನು ಒಪ್ಪುವುದಿಲ್ಲ. ಕೀನ್ಸ್‌ನ ದೃಷ್ಟಿಯಲ್ಲಿ ಸಾರ್ವಜನಿಕ ಹಾಗೂ ಖಾಸಗೀ ಸಂಸ್ಥೆಗಳ ಒಟ್ಟು ವೆಚ್ಚ ಎಲ್ಲ ಆಧುನಿಕ ಸಮಾಜಗಳಲ್ಲೂ ಪೂರ್ಣ ಉದ್ಯೋಗ ಕಲ್ಪಿಸುವುದಕ್ಕೆ ಬೇಕಾದ ವೆಚ್ಚಕ್ಕಿಂತಲೂ ಕಡಮೆಯಾಗಿದೆ. ಆದ್ದರಿಂದ ಇಂತಹ ಸ್ಥಿತಿಯಲ್ಲಿ ಮುಂಗಡ ಪತ್ರವನ್ನು ಸಮನಾಗಿಟ್ಟಲ್ಲಿ ನಿರುದ್ಯೋಗದ ಪ್ರಮಾಣವು ಹೆಚ್ಚುತ್ತದೆ. ಇದರಿಂದಾಗಿ ಆದಾಯ ತಗ್ಗಿ, ಆರ್ಥಿಕ ಮುಗ್ಗಟ್ಟು ತಲೆದೋರುತ್ತದೆ. ಈ ಸ್ಥಿತಿಯಲ್ಲಿ ಸರ್ಕಾರವು ವೆಚ್ಚದ ಪ್ರಮಾಣವನ್ನು ಹೆಚ್ಚಿಸಿದಲ್ಲಿ ನಿರುದ್ಯೋಗದ ಪ್ರಮಾಣವನ್ನು ತಗ್ಗಿಸಿ ಪೂರ್ಣ ಉದ್ಯೋಗವನ್ನು ಸ್ಥಾಪಿಸಬಹುದು. ದೇಶದಲ್ಲಿ ಆರ್ಥಿಕಸ್ಥಿತಿ ಉತ್ತಮವಾಗಿದ್ದಾಗ, ಮುಂಗಡ ಪತ್ರವನ್ನು ಸಮನಾಗಿಡುವುದು ಒಳ್ಳೆಯದು.

ಕೊರತೆಯ ಹಣ

ಅನಭಿವೃದ್ಧಿ ಹೊಂದಿದ ರಾಷ್ಟ್ರದಲ್ಲಿ ಸಾಧನ ಸಂಪತ್ತುಗಳನ್ನು ವ್ಯವಸ್ಥಿತ ರೀತಿಯಲ್ಲಿ ಬಳಸಿಕೊಂಡು ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಸಾಕಷ್ಟು ಹಣಬೇಕು.

ಇದಕ್ಕಾಗಿ ಉಳಿತಾಯಕ್ಕೆ ಉತ್ತೇಜನ ನೀಡಬೇಕು, ಹಣದುಬ್ಬರವನ್ನು ತಡೆಗಟ್ಟಬೇಕು. ಸಾರ್ವಜನಿಕರಿಂದ ಸಾಲ ಪಡೆಯಬೇಕು ಹಾಗೂ ಕೊರತೆಯ ಹಣವನ್ನು ಬಳಸಬೇಕು. ಅಭಿವೃದ್ಧಿ ರಾಷ್ಟ್ರಗಳಲ್ಲಿ ಹಣವನ್ನು ಉತ್ಪಾದನಾ ಕಾರ್ಯಗಳಲ್ಲಿ ಬಳಸುವಾಗ ಖಾಸಗಿ ಮತ್ತು ಸಾರ್ವಜನಿಕ ವಲಯಗಳ ಬೆಳವಣಿಗೆ, ಆರ್ಥಿಕ ಅಭಿವೃದ್ಧಿ ಮತ್ತು ಸ್ಥಿರತೆ, ವರಮಾನದ ಹಂಚಿಕೆಯಲ್ಲಿನ ಅಸಮಾನತೆಯನ್ನು ತೊಡೆದು ಹಾಕುವುದು, ಅಧಿಕ ಉತ್ಪಾದನೆಗಾಗಿ ಶ್ರಮಗಳನ್ನು ಕೈಗೊಳ್ಳುವುದು ಮುಂತಾದ ಉದ್ದೇಶಗಳನ್ನು ಸಾಧಿಸಬೇಕಾಗುವುದು. ಈ ರಾಷ್ಟ್ರಗಳಲ್ಲಿ ಸರ್ಕಾರವು ಮುಖ್ಯವಾಗಿ ಸಾಧನ ಸಂಪತ್ತುಗಳನ್ನು ತೆರಿಗೆಗಳು ಹಾಗೂ ಸಾರ್ವಜನಿಕ ಸಾಲದ ಮೂಲಕ ಮತ್ತು ಕೊರತೆಯ ಹಣದ ಮೂಲಕ ಸಂಗ್ರಹಿಸುತ್ತದೆ. ಕೊರತೆ ತುಂಬುವ ಹಣಕಾಸಿನ ಕ್ರಮವು ಸರ್ಕಾರದ ವೆಚ್ಚದ ಒಂದು ಮುಖ್ಯ ಸಾಧನ.

ಸರ್ಕಾರದ ವೆಚ್ಚಗಳಿಗೆ ಸಾರ್ವಜನಿಕ ಸಾಲಗಳಿಂದ ಬರುವ ಹಣವೂ ಸಾಲದಾದಾಗ ಸರ್ಕಾರವು ಕೊರತೆ ತುಂಬುವ ಹಣಕಾಸಿನ ಕ್ರಮವನ್ನು ಕೈಗೊಳ್ಳುತ್ತದೆ. ಸರ್ಕಾರವು ಟ್ರೆಜರಿಗಳಲ್ಲಿಟ್ಟಿರುವ ಹಣದ ಉಳಿತಾಯವನ್ನು ಸರ್ಕಾರ ಉಪಯೋಗಿಸಿಕೊಳ್ಳುತ್ತದೆ ಮತ್ತು ಕೇಂದ್ರ ಬ್ಯಾಂಕಿನಿಂದ ಸಾಲ ಪಡೆಯುತ್ತದೆ. ಈ ರೀತಿಯ ಹಣ ಪಡೆಯುವ ಕ್ರಮವನ್ನು 'ಕೊರತೆ ತುಂಬುವ ಹಣಕಾಸಿನ ಕ್ರಮ' ಎಂದು ಕರೆಯಬಹುದು.

ಕೊರತೆಯ ಹಣವನ್ನು 'ವ್ಯಯಾಧಿಕ್ಯದ ಹಣ' ಎನ್ನುವರು. ಸರ್ಕಾರದ ವೆಚ್ಚವು ಆದಾಯಕ್ಕಿಂತ ಹೆಚ್ಚಾಗಿದ್ದರೆ ಕೊರತೆಯ ಹಣದಿಂದ ಅದನ್ನು ತುಂಬಬಹುದು. ಆದಾಯ ಹಾಗೂ ವೆಚ್ಚದ ಮಧ್ಯೆ ಕೊರತೆ ಉಂಟಾದಾಗ ಆ ಅಂತರವನ್ನು ತುಂಬಲು ಸರ್ಕಾರ 'ಕೊರತೆ ಹಣ'ದ ಮೊರೆ ಹೋಗಬೇಕಾಗುತ್ತದೆ. ಅಂದರೆ ಕಾಗದದ ನೋಟುಗಳನ್ನು ಮುದ್ರಿಸಬೇಕಾಗುತ್ತದೆ. ಯೋಜನಾ ಆಯೋಗದ ಪ್ರಕಾರ ಕೊರತೆ ತುಂಬುವ ಹಣಕಾಸಿನ ಕ್ರಮವು ಆರ್ಥಿಕ ವ್ಯವಸ್ಥೆಯ ಕೊಳ್ಳುವ ಶಕ್ತಿಯ ನಿವ್ವಳ ಆಧಿಕ್ಯಕ್ಕೆ ಸಮನಾಗಿದ್ದು, ಸರ್ಕಾರದ ಆಯವ್ಯಯ ಕ್ರಿಯೆಗಳಿಂದ ಅದು ಉದಯಿಸುತ್ತದೆ. ಸರ್ಕಾರದ ವೆಚ್ಚ ಆದಾಯಕ್ಕಿಂತ ಹೆಚ್ಚಾದಾಗ ಸರ್ಕಾರವು (i) ಸಾರ್ವಜನಿಕ ಸಾಲಗಳ ಮೂಲಕ ಹಣ ಪಡೆಯಲು ಪ್ರಯತ್ನಿಸುವುದು (ii) ನಗದು ಹಣವನ್ನು ಬಳಸುವುದು ಹಾಗೂ (iii) ರಿಸರ್ವ್ ಬ್ಯಾಂಕಿನಿಂದ ಅಥವಾ ಕೇಂದ್ರಬ್ಯಾಂಕಿನಿಂದ ಸಾಲವನ್ನು ಪಡೆದು ಹಾಗೂ ಸರ್ಕಾರದ ಸಾಲಪತ್ರಗಳನ್ನು ರಿಸರ್ವ್ ಬ್ಯಾಂಕಿಗೆ ಒಪ್ಪಿಸಿ ಅದರ ಆಧಾರದ ಮೇಲೆ ಹೊಸ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರಲು ಯತ್ನಿಸುತ್ತದೆ. ಈ ಮೂರೂ ಆಧಾರಗಳಿಂದ ಸಾಕಷ್ಟು ಸಾಲ ದೊರೆಯದಿದ್ದರೆ ಕೊರತೆಯ ಹಣವನ್ನು ಸರ್ಕಾರ ಅವಲಂಬಿಸಬೇಕಾಗುತ್ತದೆ. ಕೊರತೆಯ ಹಣವನ್ನು ಚಲಾವಣೆಗೆ ತಂದಾಗ ಹಣದ ಚಲಾವಣೆ ಹೆಚ್ಚಾಗುತ್ತದೆ. ಕೊರತೆಯ ಹಣ ಎಂದರೆ ಕೇಂದ್ರ ಬ್ಯಾಂಕಿನಿಂದ ಸರ್ಕಾರವು ಪಡೆಯುವ ಹಣ, ಸರ್ಕಾರ ಕೇಂದ್ರ ಬ್ಯಾಂಕಿನಿಂದ ಸಾಲವನ್ನು

ಪಡೆಯುವಾಗ ಕೇಂದ್ರ ಬ್ಯಾಂಕು ಹೆಚ್ಚಿನ ಪ್ರಮಾಣದಲ್ಲಿ ನೋಟುಗಳನ್ನು ಮುದ್ರಿಸಿ ಸರ್ಕಾರಕ್ಕೆ ಸಾಲವಾಗಿ ನೀಡುತ್ತದೆ. ಈ ರೀತಿ ಕೊರತೆ ಹಣವು ಹೆಚ್ಚು ನೋಟುಗಳನ್ನು ಚಲಾವಣೆಗೆ ತಂದಾಗ ಚಲಾವಣೆಯಲ್ಲಿನ ಹಣ ಹೆಚ್ಚುತ್ತದೆ. ಇದರಿಂದ ಹಣದುಬ್ಬರ ಉಂಟಾಗಿ ಬೆಲೆಗಳು ವಿಪರೀತವಾಗಿ ಏರುತ್ತವೆ. ಏಕೆಂದರೆ, ಚಲಾವಣೆಯಲ್ಲಿನ ಹಣ ಹೆಚ್ಚಿದಂತೆಲ್ಲ ಜನರ ಆದಾಯವೂ ಅಧಿಕಗೊಂಡು ವಸ್ತುಗಳಿಗೆ ಹೆಚ್ಚು ಬೇಡಿಕೆ ಉಂಟಾಗುತ್ತದೆ. ಆದರೆ ವಸ್ತುಗಳ ಉತ್ಪಾದನೆಯು ಬೇಡಿಕೆಗಿಂತ ಕಡಮೆ ಪ್ರಮಾಣದಲ್ಲಿರುವುದರಿಂದ ಬೆಲೆಗಳು ಏರುತ್ತವೆ. ಇದರಿಂದ ಸರ್ಕಾರದ ವೆಚ್ಚ ಹೆಚ್ಚಾಗುತ್ತದೆ. ಇದನ್ನು ತಪ್ಪಿಸಲು ಕೊರತೆ ಹಣದ ಪ್ರಮಾಣದಲ್ಲೇ ವಸ್ತುಗಳ ಉತ್ಪಾದನೆಯೂ ಅಧಿಕಗೊಳ್ಳಬೇಕು.

ಸಾಮಾನ್ಯವಾಗಿ ಕೊರತೆಯ ಹಣವನ್ನು ಯುದ್ಧದ ಪ್ರಸಂಗಗಳಲ್ಲಿ ಬಳಸಲಾಗುತ್ತದೆ. ಆರ್ಥಿಕ ಆವರ್ತಗಳು ಉಂಟಾದಾಗ, ಆರ್ಥಿಕ ಹಿನ್ನಡೆಯ ಪರಿಸ್ಥಿತಿಯನ್ನು ಎದುರಿಸಲು ಹೆಚ್ಚಿನ ನೋಟುಗಳನ್ನು ಚಲಾವಣೆಗೆ ತಂದು ವ್ಯಾಪಾರಸ್ಥರಿಗೆ ಬಂಡವಾಳ ಹೂಡಲು ಉತ್ತೇಜನಕೊಡಲು ಈ ಕ್ರಮವನ್ನು ಕೈಗೊಳ್ಳಲಾಗುವುದು. ಇತ್ತೀಚೆಗೆ ಅಭಿವೃದ್ಧಿಯ ಕಾರ್ಯಕ್ರಮಗಳಿಗೆ ಹೆಚ್ಚು ಹಣವನ್ನು ಬಳಸಲು ಕೊರತೆ ಹಣದ ಅಸ್ತ್ರವನ್ನು ಬಳಸಲಾಗುವುದು. ಕೊರತೆ ಹಣದಿಂದ ಬಂಡವಾಳ ಹೂಡುವಿಕೆ ಹೆಚ್ಚಾಗುವುದು. ಬಂಡವಾಳವನ್ನು ಉದ್ದಿಮೆಗಳಲ್ಲಿ ಹೆಚ್ಚಾಗಿ ತೊಡಗಿಸಿದಂತೆಲ್ಲ ಆರ್ಥಿಕಾಭಿವೃದ್ಧಿಯನ್ನು ಹೊಂದುವುದು ಸುಲಭ. ಅಂದರೆ, ಕೊರತೆಯ ಹಣಕಾಸನ್ನು ಅಭಿವೃದ್ಧಿ ವೆಚ್ಚಕ್ಕಾಗಿ ಬಳಸಲಾಗುತ್ತದೆ.

ಭಾರತದಲ್ಲಿ ಕೊರತೆ ಹಣದ ಅವಶ್ಯಕತೆ : ಸಾಮಾನ್ಯವಾಗಿ ಎಲ್ಲ ಹಿಂದುಳಿದ ರಾಷ್ಟ್ರಗಳು ಬಂಡವಾಳದ ಕೊರತೆಯ ಸಮಸ್ಯೆಯನ್ನು ಎದುರಿಸುತ್ತಿರುತ್ತವೆ. ಭಾರತ ಇದಕ್ಕೆ ಹೊರತಲ್ಲ, ಭಾರತ ಬಡಜನರು ವಾಸಿಸುವ ರಾಷ್ಟ್ರ. ಈ ದೇಶದಲ್ಲಿ ಉಳಿತಾಯ ಕಡಮೆ. ಇದಕ್ಕೆ ಕಾರಣ ಭಾರತದಲ್ಲಿ ಗ್ರಾಮೀಣ ಪ್ರದೇಶಗಳು ಹೆಚ್ಚಾಗಿದ್ದು, ಅಲ್ಲಿ ಬ್ಯಾಂಕಿಂಗ್ ಸೌಲಭ್ಯಗಳು ಕಡಮೆ ಇರುವುದು. ಅಲ್ಲದೆ ಭಾರತ ಕೃಷಿಪ್ರಧಾನ ದೇಶವಾದ್ದರಿಂದ ಜನರ ವರಮಾನವೂ ಬಹಳ ಕಡಮೆ. ಇದರಿಂದ ಸರ್ಕಾರ ತನ್ನ ಅಧಿಕ ವೆಚ್ಚವನ್ನು ಸರಿದೂಗಿಸಲು ಹೆಚ್ಚು ತೆರಿಗೆಗಳನ್ನು ಹೇರುವಂತಿಲ್ಲ. ಆದ್ದರಿಂದ ಸರ್ಕಾರ ಅಭಿವೃದ್ಧಿಯ ಕಾರ್ಯಕ್ರಮಗಳಿಗೆ ಕೊರತೆಯ ಹಣದ ಮೊರೆ ಹೊಕ್ಕು, ಬಂಡವಾಳ ಹೂಡುವಿಕೆಯ ಪ್ರಮಾಣವನ್ನು ಹೆಚ್ಚಿಸಿ ಆರ್ಥಿಕಾಭಿವೃದ್ಧಿಯನ್ನು ಹೊಂದಬೇಕಾಗುತ್ತದೆ. ಕೊರತೆಯ ಹಣವನ್ನು ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿದರೆ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಉತ್ಪಾದನೆ ಅಧಿಕಗೊಳ್ಳುತ್ತವೆ. ಉತ್ಪಾದನೆ ಹೆಚ್ಚಿದಂತೆ ಹಣದುಬ್ಬರವೂ ಕಡಮೆಯಾಗುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಯೋಜನಾ ಧುರೀಣರು ಯೋಜನೆಗಳಲ್ಲಿ ಹಣದ ಕೊರತೆ

ನೀಗುವ ಉದ್ದೇಶದಿಂದ ಕೊರತೆಯ ಹಣಕ್ಕೆ ಸಮ್ಮತಿ ನೀಡಿದ್ದಾರೆ. ಭಾರತದಲ್ಲಿ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಕೊರತೆಯ ಹಣವು ಬೇಕಾಗುತ್ತದೆ.

ಭಾರತದ ಪಂಚವಾರ್ಷಿಕ ಯೋಜನೆಗಳಲ್ಲಿ ಕೊರತೆ ಹಣ : ಯೋಜನಾ ಆಯೋಗವು ಕೊರತೆ ಹಣಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿದೆ. ಏಕೆಂದರೆ ಅಭಿವೃದ್ಧಿಯ ಕಾರ್ಯಗಳಿಗೆ ಅತ್ಯಾವಶ್ಯಕವಾದ ಹಣವನ್ನು ಒದಗಿಸಿ ಅದರ ಮೂಲಕ ತ್ವರಿತ ಆರ್ಥಿಕಾಭಿವೃದ್ಧಿಯನ್ನು ಹೊಂದುವುದು ಅದರ ಉದ್ದೇಶ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ (1951–56) ಸಾರ್ವಜನಿಕ ರಂಗದಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ 1960 ಕೋಟಿ ರೂಪಾಯಿ ವೆಚ್ಚ ಮಾಡಿದ್ದು, ಅದರಲ್ಲಿ 420 ಕೋಟಿ ರೂಪಾಯಿ ಕೊರತೆಯ ಹಣವಾಗಿತ್ತು. ದ್ವಿತೀಯ ಯೋಜನೆಯಲ್ಲಿ (1956–61) 4600 ಕೋಟಿ ರೂಪಾಯಿ ವೆಚ್ಚ ಮಾಡಿದ್ದು, ಅದರಲ್ಲಿ 1200 ಕೋಟಿ ರೂಪಾಯಿಯನ್ನು ಕೊರತೆ ಹಣದ ಮೂಲಕ ಪಡೆಯಲು ನಿರ್ಧರಿಸಲಾಗಿತ್ತು. ಆದರೆ ವಾಸ್ತವವಾಗಿ 950 ಕೋಟಿ ರೂಪಾಯಿಗಳನ್ನು ಕೊರತೆ ಹಣದ ಮೂಲಕ ಒದಗಿಸಲಾಯಿತು. ತೃತೀಯ ಯೋಜನೆಯಲ್ಲಿ 350 ಕೋಟಿ ರೂಪಾಯಿಗಳನ್ನು ಕೊರತೆ ಹಣದ ಮೂಲಕ ಪಡೆಯಲು ನಿರ್ಧರಿಸಿದ್ದು, ಯೋಜನೆಯ ಅಂತ್ಯದ ವೇಳೆಗೆ (1966) 1130 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿತ್ತು. ನಾಲ್ಕನೆ ಯೋಜನೆಯಲ್ಲಿ (1969–74) 850 ಕೋಟಿ ರೂಪಾಯಿಗಳನ್ನು ಕೊರತೆ ಹಣದ ಮೂಲಕ ವೆಚ್ಚ ಮಾಡಲು ನಿರ್ಧರಿಸಲಾಗಿತ್ತು. ಈ ರೀತಿ ಸರ್ಕಾರ ಕೊರತೆ ಹಣದಿಂದ ಯೋಜನೆಗಳಿಗೆ ಅವಶ್ಯವಾದ ಹಣದ ಸ್ವಲ್ಪ ಭಾಗವನ್ನು ಪಡೆಯುತ್ತದೆ. ಪ್ರಥಮ ಯೋಜನೆಯಿಂದ ಚತುರ್ಥ ಯೋಜನೆಯ ವರೆಗೆ ಕೊರತೆಯ ಹಣದಿಂದ ಸರ್ಕಾರ ಒಟ್ಟು 3350 ಕೋಟಿ ರೂಪಾಯಿಗಳನ್ನು ಚಲಾವಣೆಯಲ್ಲಿ ತಂದಿತು. ಆದರೆ ಇದರಿಂದ ಹಣದ ಪೂರೈಕೆಯು ಹೆಚ್ಚಿತು. ಇದು ಹಣದುಬ್ಬರಕ್ಕೆ ಎಡೆಮಾಡಿಕೊಟ್ಟಿತು.

ಪ್ರಯೋಜನಗಳು : ಕೊರತೆಯ ಹಣದಿಂದ ಕೆಲವು ಪ್ರಯೋಜನಗಳು ಕಂಡು ಬರುತ್ತವೆ. ರಾಷ್ಟ್ರವು ಆರ್ಥಿಕಾಭಿವೃದ್ಧಿಯ ಕಾರ್ಯಕ್ರಮಗಳನ್ನು ಕೈಗೊಂಡು ರಾಷ್ಟ್ರವನ್ನು ತ್ವರಿತ ವೇಗದಲ್ಲಿ ಪ್ರಗತಿಪಥದತ್ತ ಕೊಂಡೊಯ್ಯಲು ನೆರವಾಗುತ್ತದೆ. ಯೋಜನೆಯ ಗುರಿಗಳನ್ನು ನಿಶ್ಚಿತ ಅವಧಿಯಲ್ಲಿ ಮುಟ್ಟಲು ಅನುಕೂಲವಾಗುತ್ತದೆ. ಪೂರ್ಣ ಉದ್ಯೋಗವನ್ನು ಸ್ಥಾಪಿಸಲು ಒಟ್ಟು ವೆಚ್ಚವನ್ನು ಅಧಿಕ ಪ್ರಮಾಣದಲ್ಲಿ ಸರಿದೂಗಿಸಲು ಇದೊಂದೇ ಸಾಧನವಾಗಿದೆ. ಹಿಂದುಳಿದ ರಾಷ್ಟ್ರಗಳಲ್ಲಿ ತೆರಿಗೆಗಳಿಂದ, ಸಾಲಗಳಿಂದ ಬರುವ ಹಣ ಅಭಿವೃದ್ಧಿ ಕಾರ್ಯಗಳಿಗೆ ಸಾಕಾಗುವುದಿಲ್ಲ. ಇದರಿಂದಾಗಿ ಈ ರಾಷ್ಟ್ರಗಳ ಆದಾಯ ಕಡಮೆ ಇರುತ್ತದೆ. ಈ ಸಂದರ್ಭದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಕೊರತೆ ಹಣವೊಂದೇ ಮಾರ್ಗವಾಗಿದೆ.

ಸರ್ಕಾರವು ತೆರಿಗೆಗಳ ದರಗಳನ್ನು ಏರಿಸಿದಾಗ ಸಾರ್ವಜನಿಕರಿಗೆ ತೊಂದರೆಯಾಗುವುದರಿಂದ ಅವರು ವಿರೋಧ ವ್ಯಕ್ತಪಡಿಸುತ್ತಾರೆ. ಆದರೆ ಕೊರತೆ ಹಣವನ್ನು ಸರ್ಕಾರ ಕಾರ್ಯರೂಪಕ್ಕೆ ತಂದಾಗ ವಿರೋಧಗಳು ಕಂಡು ಬರುವುದಿಲ್ಲ. ಸರ್ಕಾರವು ಕೂಡಲೇ ಹಣವನ್ನು ಪಡೆಯಬಹುದು. ಕೊರತೆಯ ಹಣವನ್ನು ಉತ್ಪಾದನಾ ಕಾರ್ಯಗಳಲ್ಲಿ ತೊಡಗಿಸುವುದರಿಂದ ಉತ್ಪಾದನೆ ಅಧಿಕಗೊಳ್ಳುತ್ತದೆ. ಉತ್ಪಾದನೆ ಹೆಚ್ಚಿದಂತೆ ಹಣದುಬ್ಬರ ಕಡಮೆಯಾಗುತ್ತದೆ. ಈ ರೀತಿ ಅನೇಕ ಲಾಭಗಳು ಕೊರತೆ ಹಣದಿಂದ ಲಭಿಸುತ್ತವೆ. ಕೀನ್ಸ್‌ನ ಪ್ರಕಾರ ಆರ್ಥಿಕ ಮುಗ್ಗಟ್ಟನ್ನು ನಿವಾರಿಸಲು ಕೊರತೆ ಹಣಕಾಸಿನ ನೀತಿಯನ್ನು ನ್ಯಾಯಯುತ ನೀತಿಯಾಗಿ ಅನುಸರಿಸಬೇಕು.

ದುಷ್ಪರಿಣಾಮಗಳು : ಕೊರತೆಯ ಹಣವು ಕೆಲವು ದುಷ್ಪರಿಣಾಮಗಳನ್ನುಂಟು ಮಾಡುವುದು. ಹಣದುಬ್ಬರ ಅಥವಾ ಅತಿಪ್ರಸರಣ, ಉಳಿತಾಯ ಹಾಗೂ ಬ್ಯಾಂಕುಗಳ ಅಧಿಕ ಠೇವಣಿಗಳು ಮುಖ್ಯ.

(i) **ಹಣದುಬ್ಬರ ಅಥವಾ ಅತಿಪ್ರಸರಣ :** ಕೊರತೆಯ ಹಣವು ಹಣದುಬ್ಬರಕ್ಕೆ ಎಡೆಮಾಡಿಕೊಡುತ್ತದೆ. ಹಣದ ಸರಬರಾಜು ಹೆಚ್ಚಿದಂತೆಲ್ಲ ಜನರ ಬಳಿ ಸಾಕಷ್ಟು ಹಣ ಸಂಗ್ರಹವಾಗಿ, ಅವರ ಕೊಳ್ಳುವ ಶಕ್ತಿಯು ಅಧಿಕಗೊಳ್ಳುತ್ತದೆ. ಇದರಿಂದ ಬೆಲೆಗಳ ಮಟ್ಟ ಏರುತ್ತದೆ. ಅಂದರೆ, ಎಲ್ಲ ಪದಾರ್ಥಗಳ ಬೆಲೆಗಳು ಏರತೊಡಗುತ್ತವೆ. ಸರ್ಕಾರ ಹೆಚ್ಚು ಹಣವನ್ನು ವೆಚ್ಚ ಮಾಡುವುದರಿಂದ ವಸ್ತುಗಳಿಗೆ ಬೇಡಿಕೆ ಹೆಚ್ಚಾಗಿ ಬೆಲೆಗಳು ಏರುತ್ತವೆ. ಆದರೆ ನಿಶ್ಚಿತ ಅವಧಿಯಲ್ಲಿ ಉತ್ಪಾದನೆ ಹೆಚ್ಚಿದಾಗ ಬೆಲೆಗಳು ಇಳಿಯುತ್ತವೆ. ಆದ್ದರಿಂದ ಕೊರತೆ ಹಣದಿಂದ ಉಂಟಾಗುವ ಹಣದುಬ್ಬರ ಅಲ್ಪಾವಧಿಯದಾಗಿರುತ್ತದೆ.

(ii) **ಉಳಿತಾಯ :** ಕೊರತೆಯ ಹಣವು ಒತ್ತಾಯದ ಉಳಿತಾಯಕ್ಕೆ ಎಡೆ ಮಾಡಿಕೊಡುತ್ತದೆ. ಜನರು ಸಾಮಾನ್ಯವಾಗಿ ತಾವಾಗಿಯೇ ಉಳಿತಾಯ ಮಾಡುವುದಿಲ್ಲ. ಕೊರತೆ ಹಣದಲ್ಲಿ ಉಳಿತಾಯಕ್ಕಿಂತ ಮುನ್ನ ಬಂಡವಾಳವನ್ನು ಉದ್ದಿಮೆಗಳಲ್ಲಿ ತೊಡಗಿಸಲಾಗಿರುತ್ತದೆ. ಇದರಿಂದ ಹಣದುಬ್ಬರ ಉಂಟಾಗುತ್ತದೆ. ಬೆಲೆಗಳು ಏರುತ್ತವೆ. ಜನರು ಒತ್ತಾಯಪೂರ್ವಕವಾಗಿ ಉಳಿತಾಯ ಮಾಡಬೇಕಾಗುತ್ತದೆ.

(iii) **ಬ್ಯಾಂಕುಗಳ ಅಧಿಕ ಠೇವಣಿಗಳು :** ಕೊರತೆಯ ಹಣದಿಂದ ಜನರ ಬಳಿ ಹೆಚ್ಚು ಹಣವಿರುತ್ತದೆ. ಆದ್ದರಿಂದ ಸ್ವಲ್ಪ ಭಾಗವನ್ನು ಬ್ಯಾಂಕುಗಳಲ್ಲಿ ಠೇವಣಿಯಾಗಿಡುವರು. ಬ್ಯಾಂಕುಗಳಲ್ಲಿ ಠೇವಣಿಗಳು ಹೆಚ್ಚಾದಾಗ ಅವು ಹೆಚ್ಚು ಸಾಲ ನೀಡುತ್ತವೆ. ಇದರಿಂದ ಬೆಲೆಗಳು ಮತ್ತಷ್ಟು ಏರಲಾರಂಭಿಸುತ್ತವೆ.

ಈ ರೀತಿ ಕೊರತೆಯ ಹಣದಿಂದ ಅನೇಕ ದುಷ್ಪರಿಣಾಮಗಳು ಉಂಟಾಗುವುದರಿಂದ, ಕೊರತೆ ತುಂಬುವ ಹಣಕಾಸಿನ ಕ್ರಮವನ್ನು ರದ್ದುಪಡಿಸಬೇಕೆಂದು ಅನೇಕರು

ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದು ಸರಿಯಲ್ಲ. ಏಕೆಂದರೆ, ಪದಾರ್ಥಗಳ ಬೆಲೆಗಳು ಏರಲು ಹಣದ ಸರಬರಾಜು ಒಂದೇ ಕಾರಣವಲ್ಲ. ವಸ್ತುಗಳ ಪೂರೈಕೆ ಅಧಿಕಗೊಳ್ಳುತ್ತಿದ್ದರೆ, ಹಣದುಬ್ಬರದ ದುಷ್ಪರಿಣಾಮಗಳನ್ನು ತಡೆಗಟ್ಟಬಹುದು. ಇದರ ಜೊತೆಗೆ ಕೆಲವು ವರ್ತಕರು ಕಾಳಸಂತೆಯಲ್ಲಿ ವಸ್ತುಗಳನ್ನು ಮಾರುವ ಉದ್ದೇಶದಿಂದ ಅವುಗಳ ಕೊರತೆಯನ್ನು ತಂದೊಡ್ಡುವರು. ಇದು ಅಲ್ಪಕಾಲಾವಧಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಸಾಮಾನ್ಯ. ಮುಂದುವರಿದ ಅಥವಾ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಕೆಲವು ವೇಳೆ ಆರ್ಥಿಕ ಮುಗ್ಗಟ್ಟು ಉಂಟಾಗುವುದು. ಅಂತಹ ಪರಿಸ್ಥಿತಿಯಲ್ಲಿ ಕೊರತೆ ಹಣವನ್ನು ಬಳಸಿ ಅಧಿಕ ಉತ್ಪಾದನೆಯನ್ನು ಹೊಂದಿ ಹೆಚ್ಚು ಉದ್ಯೋಗಗಳನ್ನು ಪಡೆಯಲಾಗುತ್ತದೆ. ಈ ರಾಷ್ಟ್ರಗಳಲ್ಲಿ ಉತ್ಪಾದನಾ ಮಟ್ಟವೂ ಹೆಚ್ಚಿರುವುದರಿಂದ ಅಧಿಕ ಮಟ್ಟದ ಹಣದ ಸರಬರಾಜನ್ನು ತಡೆದುಕೊಳ್ಳುವ ಸಾಮರ್ಥ್ಯವನ್ನು ಈ ರಾಷ್ಟ್ರಗಳು ಪಡೆದಿರುತ್ತವೆ. ಆದ್ದರಿಂದಲೇ ಇಲ್ಲಿ ಕೊರತೆ ತುಂಬುವ ಹಣಕಾಸಿನ ಕ್ರಮದಿಂದ ಬೆಲೆಗಳು ವಿಪರೀತವಾಗಿ ಏರುವುದಿಲ್ಲ. ಆದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕೊರತೆಯ ಹಣವು ಬಹುಬೇಗ ಹಣದುಬ್ಬರಕ್ಕೆ ಅವಕಾಶ ಮಾಡಿಕೊಡುತ್ತದೆ. ಇದಕ್ಕೆ ಕಾರಣ ಇಂತಹ ರಾಷ್ಟ್ರಗಳಲ್ಲಿ ಉತ್ಪಾದನಾ ಮಟ್ಟ ಕಡಮೆ ಇದ್ದು ಸರಕುಗಳ ಸರಬರಾಜಿನಲ್ಲಿ ಕೊರತೆ ಇರುತ್ತದೆ. ಆದ್ದರಿಂದ ಈ ರಾಷ್ಟ್ರಗಳು ಕೊರತೆ ಹಣವನ್ನು ಮಿತಿಯಾಗಿ ಬಳಸಿಕೊಂಡು ಅಭಿವೃದ್ಧಿ ಹೊಂದಲು ಪ್ರಯತ್ನಿಸಬೇಕು. ಆದರೆ ಅಭಿವೃದ್ಧಿ ಕಾರ್ಯಗಳ ವ್ಯವಸ್ಥೆಗೆ ಅಗತ್ಯವಾದಷ್ಟು ಹಣವನ್ನು ಮಾತ್ರ ಬಳಸಿಕೊಳ್ಳಬೇಕು.

ಆಧಾರ ಗ್ರಂಥಗಳ ಪಟ್ಟಿ

ADAM SMITH, *The wealth of Nations.* London: J. M. Dent and Sons Ltd., New York, 1958.

DEWETT, K. K., *Modern Economic Theory.* New Delhi: Shymlal Charitable Trust, Ram Nagar, 1966.

HUGH DALTON, *Principles of Public Finance.* Allied Publishers (Pvt) Limited, 1970.

JATHAR, G. B. AND BERI, S. G., Elementary Economics (8th edition). London: Oxford University Press, 1967.

ಪಾರಿಭಾಷಿಕ ಶಬ್ದಕೋಶ

ಅ

ಅಗ್ರಾಹ್ಯ	Insignificant
ಅತ್ಯಾವಶ್ಯಕ ವಸ್ತುಗಳು	Necessaries
ಅತಿ ಪ್ರಸರಣ, ಹಣದುಬ್ಬರ	Inflation
ಅರ್ಥಶಾಸ್ತ್ರ	Economics
ಅದಲುಬದಲು	Substitution
ಅದಲು ಬದಲು ಪದ್ಧತಿ	Barter System
ಅಧಿಕೃತ ಬಂಡವಾಳ	Authorised capital
ಅನಿಯಮಿತ	Unlimited
ಅನುತ್ಪಾದಕ	Unproductive
ಅಪಮೌಲ್ಯ	Devaluation
ಅಪರಿಮಿತ	Unlimited
ಅಪ್ರಸರಣ, ಕುಗ್ಗು ಪ್ರಸರಣ	Deflation
ಅಭಾವ	Scarcity
ಅಂಚು, ಸೀಮಾಂತ	Margin

ಆ

ಆದರ್ಶ ಜನಸಂಖ್ಯೆ	Optimum population
ಆದಾಯ, ವರಮಾನ	Income, revenue
ಆಧುನಿಕ ಅರ್ಥಶಾಸ್ತ್ರ	Modern economic science
ಆಯವ್ಯಯ ಪಟ್ಟಿ, ಮುಂಗಡ ಪತ್ರ	Budget
ಆಸೆ, ಬಯಕೆ	Desire

ಇ

ಇಳಿಕೆಯ ಪ್ರತಿಫಲ	Diminishing return
ಇಳಿಮುಖ ಅಂಚಿನ (ಸೀಮಾಂತ) ತುಷ್ಟಿಗುಣ	Diminishing marginal utility

ಉ

ಉಚಿತ ವಸ್ತು, ದೈವದತ್ತ ಸರಕು	Free good
ಉತ್ಪಾದಕತೆ	Production
ಉತ್ಪಾದಕ	Producer
ಉತ್ಪಾದಕವಲ್ಲದ	Unproductive
ಉಪಭೋಗ, ಅನುಭೋಗ, ಬಳಕೆ	Consumption
ಉಪಯುಕ್ತತೆ, ತುಷ್ಟಿಗುಣ	Utility
ಉಪಯುಕ್ತತಾ ಮೌಲ್ಯ	Value in use

ಏ

ಏಕಸ್ವಾಮ್ಯ	Monopoly
ಏಕಸ್ವಾಮ್ಯವಾದ	Monopolist

ಒ

ಒಡೆತನ	Ownership

ಕ

ಕಲ್ಪನೆ	Assumption
ಕಲ್ಯಾಣ	Welfare
ಕಾರ್ಮಿಕ	Labourer
ಕಾರ್ಯ	Function
ಕಾರ್ಯದಕ್ಷತೆ	Efficiency
ಕೂಲಿ	Wage, labour
ಕೊರತೆ ಹಣ	Dificit finance
ಕೊಳ್ಳು ಶಕ್ತಿ	Purchasing power

ಗ

ಗ್ರಾಹಕ, ಬಳಕೆದಾರ	Consumer

ಚ

ಚರ ಬಂಡವಾಳ	Circulary capita

ಛ

ಛೇದನ ಬಿಂದು	Point of intersection

ಜ

ಜನಸಂಖ್ಯೆ	Population
ಜ್ಯಾಮಿತಿಯ ಪ್ರಮಾಣ	Geometric ratio
ಜೀವನ ವೆಚ್ಚ	Cost of living

ಟ

ಟೀಕೆ	Criticism

ಠ

ಠೇವಣಿ	Deposit

ತ

ತತ್ವ (ನಿಯಮ)	Principle
ತಾಂತ್ರಿಕ ಜ್ಞಾನ	Technical know-how
ತುಷ್ಟಿ ಗುಣ	Utility
ತೆರಿಗೆ	Tax

ನ

ನಗದು	Cash
ನಗದು ಹಣದ ಒಲವು	Liquidity preference
ನಾಮ ಮಾತ್ರ	Nominal
ನಿಧಿ	Fund
ನಿವ್ವಳ	Net
ನಿರುದ್ಯೋಗ	Unemployment

ಪ

ಪಾಲುಗಾರಿಕೆ	Partnership
ಪ್ರತ್ಯಕ್ಷ ತೆರಿಗೆ	Direct tax
ಪ್ರಮಾಣ ಮಿತವ್ಯಯ	Economics of scale
ಪೂರಕ	Complementary
ಪೂರೈಕೆ, ನೀಡಿಕೆ	Supply
ಪೇಟೆ, ಮಾರುಕಟ್ಟೆ	Market
ಪೈಪೋಟಿ	Competition

ಬ

ಬಡ್ಡಿ	Interest
ಬದಲಾಗುವ ವೆಚ್ಚ	Variable cost
ಬಯಕೆ, ಇಚ್ಛೆ, ಅಪೇಕ್ಷೆ	Want
ಬಾಡಿಗೆ, ಗೇಣಿ	Rent
ಬೆಲೆ	Price
ಬೇಡಿಕೆ	Demand
ಬಂಡವಾಳ	Capital
ಬಿಂದು	Point

ಭ

ಭದ್ರತೆ	Security

ಮ

ಮಾನವ ಕ್ಷೇಮ (ಕಲ್ಯಾಣ)	Human welfare
ಮಿತವ್ಯಯ	Economy
ಮೂಲ ಅರ್ಥಶಾಸ್ತ್ರ	Basic economics
ಮೌಲ್ಯ	Value

ವ

ವರಮಾನ	Income
ವಸ್ತುಗಳು	Goods
ವಾಸ್ತವಿಕ ಕೂಲಿ	Real wage
ವಿತರಣೆ, ಹಂಚಿಕೆ	Distribution
ವಿನಿಮಯ	Exchange
ವಿನಿಮಯ ಮೌಲ್ಯ	Value in exchange
ವಿಪತ್ತುಗಳನ್ನೆದುರಿಸುವ	Risk bearing
ವಿಭಜನೆ	Division
ವಿರಳತೆ, ಅಭಾವ	Scarcity
ವಿಲಾಸ (ಭೋಗ)	Luxury
ವೆಚ್ಚ	Expenditure
ವೈಯಕ್ತಿಕ ಒಡೆತನ	Individual proprietorship

ಶ

ಶ್ರಮ	Labour
ಶ್ರಮ ವಿಭಜನೆ	Division of labour

ಸ

ಸಮತೂಕದ ಮುಂಗಡ ಪತ್ರ	Balanced budget
ಸಮತೋಲನ	Equilibrium
ಸಮಪ್ರಮಾಣತೆರಿಗೆ	Proportion at taxation
ಸಮಸೀಮಾಂತ ತುಷ್ಟಿಗುಣ	Equimarginal utility
ಸಮಾಜವಾದ	Socialism
ಸಾಮಾಜಿಕ ಭದ್ರತೆ	Social scarcity
ಸಾಮಾಜಿಕ ಸಂಪತ್ತು	Social wealth
ಸಮಾನತೆ	Equality
ಸಮೀಕರಣ	Equation
ಸಹಕಾರ	Cooperation
ಸಹಕಾರೀ ಉದ್ಯಮ	Cooperation enterprise
ಸ್ಪರ್ಧೆ, ಪೈಪೋಟಿ	Competition
ಸ್ವಯಂಪೂರ್ಣತೆ	Self sufficiency
ಸಾಟಿ ಪದ್ಧತಿ	Barter system
ಸಾಮಾನುಗಳು, ಸರಕುಗಳು	Goods
ಸಾಲ, ಉದ್ರಿ, ಪತ್ತು	Credit
ಸಾಧನಸಂಪತ್ತು	Resource
ಸ್ಥಿತಿಸ್ಥಾಪಕತ್ವ	Elasticity
ಸ್ಥಿರತೆ	Stability
ಸ್ಥಿರಬಂಡವಾಳ	Fixed capital
ಸಿದ್ಧಾಂತ, ನಿಯಮ	Principle, theory
ಸೇವೆಗಳು	Services
ಸಂಘಟನೆ	Organisation
ಸಂಘಟನಾಕಾರ, ಸಂಘಟಕ	Organiser, entrepreneur
ಸಂಪತ್ತು, ಐಶ್ವರ್ಯ	Wealth
ಸಂಪನ್ಮೂಲಗಳ ಕ್ರೋಢೀಕರಣ	Resource mobilisation
ಸಂಬಳ, ವೇತನ, ಪಗಾರ	Salary
ಸಂಯುಕ್ತ ಬಂಡವಾಳ ಸಂಸ್ಥೆ	Joint stock company

ಹ

ಹಣಕಾಸು	Finance
ಹಣತೊಡಗಿಸುವಿಕೆ	Investment
ಹಣದಮೌಲ್ಯ	Value of money

ಕೃಷಿ ವಿಶ್ವವಿದ್ಯಾನಿಲಯದ ಪ್ರಕಟಣೆಗಳು

1.	ಸುಭಿಕ್ಷತೆಗೆ ತೆರೆದ ಬಾಗಿಲು	(ಪ್ರತಿಗಳು ತೀರಿವೆ)	1–50
2.	ಪೀಡೆ ನಿರ್ವಹಣೆ	,,	3–75
3.	ಕೀಟ ವಿಂಗಡಣೆ	,,	12–00
4.	ಕೀಟ ಹತೋಟಿ	(ದ್ವಿತೀಯ ಮುದ್ರಣ)	10–00
5.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ—ಭಾಗ 1		5–00
6.	ತರಕಾರಿ ಬೇಸಾಯ	(ಪ್ರತಿಗಳು ತೀರಿವೆ)	10–00
7.	ಕೃಷಿ ರಸಾಯನಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ	(ಸಾದಾಪ್ರತಿ)	3–75
		(ಕ್ಯಾಲಿಕೊ ಪ್ರತಿ)	5–00
8.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	(ಸಾದಾಪ್ರತಿ)	12–00
		(ಕ್ಯಾಲಿಕೊ ಪ್ರತಿ)	15–00
9.	ರೈತರ ನೆಚ್ಚುಮೆಚ್ಚಿನ ಮರಗಳು	(ಸಾದಾಪ್ರತಿ)	12–00
		(ಕ್ಯಾಲಿಕೊ ಪ್ರತಿ)	15–00
10.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ–ಭಾಗ 2	(ಸಾದಾಪ್ರತಿ)	9–00
11.	ಮೈಸೂರು ರಾಜ್ಯದಲ್ಲಿ ಕೃಷಿ	(ಪ್ರತಿಗಳು ತೀರಿವೆ)	10–00
12.	ಮಣ್ಣು ಮತ್ತು ನೀರು ನಿರ್ವಹಣೆ	(ಸಾದಾಪ್ರತಿ)	12–00
		(ಕ್ಯಾಲಿಕೊ ಪ್ರತಿ)	15–00
13.	ಮಣ್ಣು	(ಸಾದಾಪ್ರತಿ)	9–00
		(ಕ್ಯಾಲಿಕೊ ಪ್ರತಿ)	12–00
14.	ಕೃಷಿ ಸಹಕಾರ	(ಸಾದಾಪ್ರತಿ)	5–00
		(ಕ್ಯಾಲಿಕೊ ಪ್ರತಿ)	8–00
15.	ಕಳೆಗಳು ಮತ್ತು ಕಳೆಗಳ ನಿಯಂತ್ರಣ	(ಸಾದಾಪ್ರತಿ)	12–00
		(ಕ್ಯಾಲಿಕೊ ಪ್ರತಿ)	15–00
16.	ಗೋಸಂಪತ್ತು	(ಸಾದಾಪ್ರತಿ)	5–00
		(ಕ್ಯಾಲಿಕೊ ಪ್ರತಿ)	8–00
17.	ಧಾನ್ಯದಾಸ್ತಾನು ತತ್ವ ಮತ್ತು ಪದ್ಧತಿಗಳು	(ಸಾದಾಪ್ರತಿ)	6–00
		(ಕ್ಯಾಲಿಕೊ ಪ್ರತಿ)	9–00
18.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	(ಸಾದಾಪ್ರತಿ)	14–00
		(ಕ್ಯಾಲಿಕೊ ಪ್ರತಿ)	17–00
19.	ಪಶುವೈದ್ಯಕೀಯ ವಿಜ್ಞಾನ	(ಸಾದಾಪ್ರತಿ)	6–00
		(ಕ್ಯಾಲಿಕೊ ಪ್ರತಿ)	9–00
20.	ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು	(ಸಾದಾಪ್ರತಿ)	6–50
		(ಕ್ಯಾಲಿಕೊ ಪ್ರತಿ)	9–50
21.	ಟ್ರ್ಯಾಕ್ಟರುಗಳು ಹಾಗೂ ಅವುಗಳನ್ನು	(ಸಾದಾಪ್ರತಿ)	6–00
	ಸುಸ್ಥಿತಿಯಲ್ಲಿಡುವ ಕ್ರಮಗಳು	(ಕ್ಯಾಲಿಕೊ ಪ್ರತಿ)	10–00

22.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ–ಭಾಗ 3	(ಸಾದಾ ಪ್ರತಿ)	8–00
		(ಕ್ಯಾಲಿಕೊ ಪ್ರತಿ)	12–00
23.	ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	(ಸಾದಾ ಪ್ರತಿ)	9–00
		(ಕ್ಯಾಲಿಕೊ ಪ್ರತಿ)	13–00
24.	ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ	(ಸಾದಾ ಪ್ರತಿ)	12–00
		(ಕ್ಯಾಲಿಕೊ ಪ್ರತಿ)	15–00
25.	ಸಸ್ಯವರ್ಗೀಕರಣಶಾಸ್ತ್ರ	(ಸಾದಾ ಪ್ರತಿ)	12–00
		(ಕ್ಯಾಲಿಕೊ ಪ್ರತಿ)	16–00
26.	ಪೌಷ್ಟಿಕ ಆಹಾರ	(ಸಾದಾ ಪ್ರತಿ)	7–00
		(ಕ್ಯಾಲಿಕೊ ಪ್ರತಿ)	11–00
27.	ಕಡಲ ಮೀನುಗಾರಿಕೆ	(ಸಾದಾ ಪ್ರತಿ)	4–00
		(ಕ್ಯಾಲಿಕೊ ಪ್ರತಿ)	8–00
28.	ಧಾನ್ಯದ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		8–50
29.	ಕಬ್ಬಿನ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		3–50
30.	ಶಿಶುವಿಹಾರ	(ಸಾದಾ ಪ್ರತಿ)	7–50
		(ಕ್ಯಾಲಿಕೊ ಪ್ರತಿ)	10–50
31.	ಬೇಳೆಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳಹತೋಟಿ		6–00
32.	ಕೃಷಿ ಎಂಜಿನಿಯರಿಂಗ್ ಪತ್ರ ಪುಸ್ತಕ ಸಮೀಕ್ಷಣೆ	(ಸಾದಾ ಪ್ರತಿ)	7–50
		(ಕ್ಯಾಲಿಕೊ ಪ್ರತಿ)	11–00
33.	ಇಲಿಗಳು ಹಾಗೂ ಅವುಗಳ ನಿಯಂತ್ರಣ	(ಸಾದಾ ಪ್ರತಿ)	7–50
		(ಕ್ಯಾಲಿಕೊ ಪ್ರತಿ)	11–50
34.	ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10–00
35.	ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		13–00
36.	'ಕ್ಯಾನಿಂಗ್'–ಆಹಾರ ಜೋಪಾಸನೆಯು ಒಂದು ಆಧುನಿಕ ವಿಧಾನ	(ಸಾದಾ ಪ್ರತಿ)	13–00
		(ಕ್ಯಾಲಿಕೊ ಪ್ರತಿ)	17–00
37.	ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		8–50
38.	ಜೀವಕೋಶ ಕ್ರಿಯಾಶಾಸ್ತ್ರ ಮತ್ತು ಜೀವ–ರಸಾಯನಶಾಸ್ತ್ರ	(ಸಾದಾಪ್ರತಿ)	16–00
		(ಕ್ಯಾಲಿಕೊ ಪ್ರತಿ)	20–00
39.	ಎಲುಬುಶಾಸ್ತ್ರ	(ಸಾದಾಪ್ರತಿ)	9–00
		(ಕ್ಯಾಲಿಕೊ ಪ್ರತಿ)	13–00
40.	ಕಡಲೆಕಾಯಿ (ಶೇಂಗಾ)	(ಸಾದಾಪ್ರತಿ)	8–00
		(ಕ್ಯಾಲಿಕೊ ಪ್ರತಿ)	12–00
41.	ಗಣಿತಶಾಸ್ತ್ರ ಪ್ರವೇಶಿಕೆ ಭಾಗ–1	(ಸಾದಾಪ್ರತಿ)	20–00
		(ಕ್ಯಾಲಿಕೊ ಪ್ರತಿ)	24–00
42.	ತೆಂಗು, ಅಡಿಕೆ, ಇತರ ಗರಿಮರಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		7–00

43. ಪ್ಲಾಂಟೇಶನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		9–50
44. ಗಣಿತಶಾಸ್ತ್ರ ಪ್ರವೇಶಿಕೆ ಭಾಗ–2	(ಸಾದಾಪ್ರತಿ)	18–00
	(ಕ್ಯಾಲಿಕೊ ಪ್ರತಿ)	22–00
45. ಭಾರತದಲ್ಲಿ ಕೋಳಿಸಾಕಣೆ	(ಸಾದಾ ಪ್ರತಿ)	18–00
	(ಕ್ಯಾಲಿಕೊ ಪ್ರತಿ)	22–00
46. ಎಣ್ಣೆ ಬೀಜ(ಕಾಳು)ಗಳ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		6–00
47. ಕಲ್ಲುನಾರು(ಭೂತಾಳಿ)ಗಿಡಗಳು	(ಸಾದಾಪ್ರತಿ)	4–00
48. ಭಾರತೀಯ ಗ್ರಾಮೀಣ ಯುವಕ ರೈತ	(ಸಾದಾಪ್ರತಿ)	6–50
ಸಂಘಗಳ ಸಂಘಟನೆ	(ಕ್ಯಾಲಿಕೊ ಪ್ರತಿ)	10–50
49. ಹತ್ತಿ (ನೂಲು) ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	(ಸಾದಾಪ್ರತಿ)	18–00
50. ಪಶುರೋಗಗಳು ಮತ್ತು ಸಾರ್ವಜನಿಕ ಆರೋಗ್ಯ	(ಸಾದಾಪ್ರತಿ)	10–00
	(ಕ್ಯಾಲಿಕೊ ಪ್ರತಿ)	14–00
51. ಮೀನುಗಾರಿಕೆ	(ಸಾದಾಪ್ರತಿ)	8–00
	(ಕ್ಯಾಲಿಕೊ ಪ್ರತಿ)	12–00
52. ಹಸುರೆಲೆ ಗೊಬ್ಬರ, ಮೇವು ಹಾಗೂ ಉಪ್ಪುನೇರಳೆ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	(ಸಾದಾಪ್ರತಿ)	4–00
53. ಸಾಕುಪ್ರಾಣಿ ಮೂಲದ ಸೋಂಕುರೋಗಗಳು	(ಸಾದಾಪ್ರತಿ)	6–00
	(ಕ್ಯಾಲಿಕೊ ಪ್ರತಿ)	10–00
54. ಮಾದಕ (ಹೊಗೆಸೊಪ್ಪು, ಗಾಂಜ) ಮತ್ತು ಸಾಂಬಾರ (ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	(ಸಾದಾಪ್ರತಿ)	3–00
55. ಕೃಷಿ ಉಪಯೋಗಿ ಕೆಲವು ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	(ಸಾದಾಪ್ರತಿ)	3–50
56. ಸಸ್ಯ ಸಾಮ್ರಾಜ್ಯ	(ಸಾದಾಪ್ರತಿ)	20–00
	(ಕ್ಯಾಲಿಕೊ ಪ್ರತಿ)	24–00
57. ಬೆಳೆ ಕೀಟಗಳು ಮತ್ತು ಅವುಗಳ ಹತೋಟಿ	(ಕ್ಯಾಲಿಕೊ ಪ್ರತಿ)	100–00
58. ಜೇನುಸಾಕಣೆ	(ಸಾದಾಪ್ರತಿ)	14–00
	(ಕ್ಯಾಲಿಕೊ ಪ್ರತಿ)	18–00

59. ತರಕಾರಿ ಬೆಳೆಗಳ ಕೀಟಗಳು (ಅಚ್ಚಿನಲ್ಲಿದೆ)

60. ಭಾರತದಲ್ಲಿ ಜೇನುಸಾಕಣೆ

61. ದೊಡ್ಡರೋಗ

62. ಮೂಲ ಅರ್ಥಶಾಸ್ತ್ರ

63. ಬೀಜಗಣಿತ ಪರಿಚಯ	(ಅಚ್ಚಿನಲ್ಲಿದೆ)
64. ಕೃಷಿ ರಸಾಯನಶಾಸ್ತ್ರ ಪಾರಿಭಾಷಿಕ ಶಬ್ದಕೋಶ	,,
65. ರೇಖಾತ್ಮಕಬೀಜಗಣಿತ	,,
66. ಸಂಸ್ಕೃತಿಯ ರೂಪಿಕೆಗಳು	,,
67. ಹುಲಿ – ರಾಷ್ಟ್ರೀಯ ಮೃಗ	,,
68. ಸಹಕಾರಿ ಬೇಸಾಯ	,,
69. ಕೋಶ	,,
70. ಮಣ್ಣು ಶಿಲೀಂಧ್ರಗಳ ಕೈಪಿಡಿ	,,
71. ನೀರಾವರಿ ತತ್ವ ಹಾಗೂ ಪದ್ಧತಿಗಳು	,,
72. ಪ್ರಾಣಿಗಳ ವರ್ತನೆ	,,
73. ಸಾಕುಪ್ರಾಣಿಗಳ ಭ್ರೂಣಶಾಸ್ತ್ರ	,,
74. ಸಾವಯವ ರಸಾಯನಶಾಸ್ತ್ರ	,,
75. ಕೃಷಿ ಅನಿಲ ಯಂತ್ರಗಳು ಹಾಗೂ ಟ್ರ್ಯಾಕ್ಟರುಗಳು	,,
76. ಮಣ್ಣು - ನಿರ್ವಹಣೆ, ಸಂರಕ್ಷಣೆ ಹಾಗೂ ಬೆಳೆಉತ್ಪಾದಕತೆ	,,